
# ವೇದಾಂತ ಸಂದೇಶಗಳು

## ಸಂಪುಟ 2

# ಉಪನಿಷತ್ ಸಿರಿ



ಸಂಸ್ಥಾಪಕರು

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**

**ಹೊಳೆನರಸೀಪುರ - 573 211**

**ದೂರವಾಣಿ : 08175 - 273820**

**www.adhyatmaprakasha.org**

**e-mail: secretary@adhyatmaprakasha.org**

# ಶ್ರೀಶ್ರೀಗಳವರ ಕೃತಿಗಳು

## (ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ ಆಯ್ದ ಲೇಖನಗಳ ಸಂಗ್ರಹ)

1923ರಲ್ಲಿ ಪ್ರಾರಂಭವಾದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 1975ರವರೆಗೂ ಶ್ರೀ ಶ್ರೀಗಳವರೇ ಭಕ್ತಿ ಜ್ಞಾನ, ವೈರಾಗ್ಯ ಮತ್ತು ವೇದಾಂತದಲ್ಲಿ ಅಭಿರುಚಿಯನ್ನುಂಟು ಮಾಡುವಂತಹ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು ಈಗ ಹಳೆಯ ಸಂಪುಟಗಳು ದೊರಕುತ್ತಿಲ್ಲ. ಈ ಲೇಖನಗಳು ಈಗಿನ ಸನ್ನಿವೇಶಕ್ಕೂ ಸಹ ಉಪಯುಕ್ತವಾಗುತ್ತವೆ ಎಂದು ಅನೇಕ ಭಕ್ತರ ಅಪೇಕ್ಷೆಯಂತೆ ಗ್ರಂಥ ರೂಪದಲ್ಲಿ ಹೊರತಂದಿರುವ ಕೆಲವು ಪುಸ್ತಕಗಳ ಕಿರುಪರಿಚಯ.

**1. ಋಗ್ವೇದೀಯ ಪುರುಷಸೂಕ್ತ (ಮಂತ್ರಾರ್ಥ ವಿವೇಚನೆ)**

ಅ.ಪ್ರ. ಪತ್ರಿಕೆಯ 24ನೆ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ಪೂಜೆ ಮಾಡುವ ಪ್ರತಿಯೊಬ್ಬ ಆಸ್ತಿಕನಿಗೂ ತುಂಬ ಉಪಕಾರಿಯಾಗಿದೆ. ನಿಜವಾದ ಅರ್ಥವು ತಾತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ ಉಪಾಸನೆ, ಜ್ಞಾನಪರವಾಗಿದೆಯೆಂಬುದನ್ನು ಮಾರ್ಮಿಕವಾಗಿ ಹೃದಯಕ್ಕೆ ತಾಕುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲ ವೇದದವರಿಗೂ ಮತ್ತು ಆಸ್ತಿಕ ಮಹಾಶಯರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2011, ಪು. 115, ಬೆಲೆ. 30 ರೂ.)

**2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ)**

1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ ''ಈ ತಿಂಗಳ ಸಂದೇಶ'' ಎಂಬ ಶೀರ್ಷಿಕೆಯಲ್ಲಿ ಶ್ರೀಶ್ರೀಗಳವರು ಬರೆದು ಅ.ಪ್ರ. ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. ''ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ, ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು'' ಎಂಬಿವೇ ಮುಂತಾದ ಮಹತ್ಪೂರ್ಣವಾದ ವಿಚಾರಗಳಿಂದ ತುಂಬಿ, ತತ್ತ್ವಜಿಜ್ಞಾಸುಗಳಿಗೆ ದಾರಿದೀಪದಂತಿದೆ. ಸಂಸ್ಕೃತ ಬಾರದವರಿಗೂ, ಸರಿಯಾದ ಗುರುಗಳು ದೊರಕದವರಿಗೂ ಈ ಗ್ರಂಥವು ಮಾರ್ಗದರ್ಶನವಾಗಿದೆ.

(ಎರಡನೆಯ ಮುದ್ರಣ, 2011, ಪು. 218, ಬೆಲೆ. 50 ರೂ.)

**3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ ಸಿರಿ)**

ಬೇರೆ ಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 8, 9, 21, 26, 27ರಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇರಿವಿನ ಅರಿವು (2) ಆನಂದ ಸ್ವರೂಪವಾದ ಆತ್ಮನ ವಿಚಾರ (3) ಅಧ್ಯಾತ್ಮ ಸಾಧನಗಳು (4) ಜ್ಞಾನಸಾಧನೆಗಳು ಮತ್ತು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು ಮತ್ತು ಉಪಾಸನಾ ಕ್ರಮವನ್ನೂ ಶಾಸ್ತ್ರೀಯ ರೀತಿಯಲ್ಲಿ ತಿಳಿಸಿದೆ.

(ಎರಡನೆಯ ಮುದ್ರಣ, 2012, ಪು. 247, ಬೆಲೆ. 60 ರೂ.)

(ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.)

ಅಧ್ಯಾತ್ಮ ಗ್ರಂಥಾವಳಿ :

# ವೇದಾಂತ ಸಂದೇಶಗಳು : ಸಂಪುಟ-2

## (ಉಪನಿಷತ್ ಸಿರಿ)

ಲೇಖಕರು
ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು
ಪೂರ್ವಾಶ್ರಮದ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ,
(ವೈ. ಸುಬ್ಬರಾವ್)

ಕ್ರಮಾಂಕ : 244

ಪ್ರಕಾಶಕರು :
ಅಧ್ಯಾತ್ಮ ಪ್ರಕಾಶಕಾರ್ಯಾಲಯ
ಪಬ್ಲಿಕ್ ಛಾರಿಟಬಲ್ ಟ್ರಸ್ಟ್
ಹೊಳೆನರಸೀಪುರ - 573211
ದೂರವಾಣಿ : 08175 - 273820
www.adhyatmaprakasha.org
Email: Secretary@adhyatmaprakasha.org

2012

**Vedanta Sandeshagalu Part II** - Collection of Articles published in Adhyatma Prakasha Magazines, written by Sri Sri Satchidanandendra Saraswathi Swamiji ; Now Published by Adhyatma Prakasha Karyalaya, Holenarasipura 573211, Karnataka. Ph. : 08175-273820

**www.adhyatmaprakasha.org**

**Email: Secretary@adhyatmaprakasha.org**

| | | |
|---|---|---|
| First Edition | : | 2010 (1000 Copies) |
| Second Edition | : | 2012 (1000 Copies) |
| Paper Used | : | 70 G.S.M. Maplitho |
| Size | : | 1/8th Demi |
| Pages | : | 10+237 = 247 |
| Price | : | **Rs.60.00** |
| Copyright | : | all rights reserved by Adhyatma Prakasha Karyalaya |
**Composed at :**
**Prashanth Enterprises**
No. 45, 3rd Main, Nethaji Road
T.R. Nagar, Bangalore-28
Ph. 26761529

**Printed at :**
**Sri Rama Printers**
No. 25, 15th Cross, 5th Main
Srinidhi Extn. Bangalore - 62
Ph. 9845346197

# ಮುನ್ನುಡಿ

ಮಾನವ ಜೀವನವು ಮೂರು ಮುಖ್ಯ ಅಂಶಗಳನ್ನು ಅವಲಂಬಿಸಿರುತ್ತದೆ; ಸತ್ಯ, ಜ್ಞಾನ ಮತ್ತು ಸುಖ. ಸತ್ಯದ ಆಧಾರದ ಮೇಲೆಯೇ ನಮ್ಮ ಜೀವನ ನಿಂತಿರುವುದು. ನಾವು ದಿನನಿತ್ಯ ಬಳಸುವ ವಸ್ತುಗಳು, ವ್ಯಕ್ತಿಗಳು ಹಾಗೂ ನಮ್ಮ ಮುಂದಿರುವ ಜಗತ್ತು ನಮ್ಮ ಪಾಲಿಗೆ ಸತ್ಯವಾಗಿರುವುದರಿಂದ ಅವುಗಳನ್ನು ನೆಚ್ಚಿಕೊಂಡು ನಾವು ಬಾಳುತ್ತಿದ್ದೇವೆ. ನಮ್ಮಲ್ಲಿ ಅನೇಕ ಭ್ರಮೆಗಳಿದ್ದಾಗ್ಯೂ, ಅನೇಕರ ಮೋಸಕ್ಕೆ ನಾವು ಒಳಗಾದರೂ ಸತ್ಯದ ಭರವಸೆಯೇ ನಮ್ಮನ್ನು ಮುನ್ನಡೆಸಿಕೊಂಡು ಹೋಗುತ್ತಿರುವುದು. ಸೂರ್ಯಚಂದ್ರರ ಉದಯಾಸ್ತಗಳು, ಅಗ್ನಿ ವಾಯು ಮುಂತಾದ ವಸ್ತುಗಳ ಸ್ವಭಾವಗಳು, ಜನರ ನಡೆನುಡಿಗಳು ಎಷ್ಟೇ ಅನಿರ್ದಿಷ್ಟವಾದರೂ ಇವುಗಳ ಮೇಲಿನ ಭರವಸೆಯಿಂದಲೇ ನಾವು ಇಲ್ಲಿ ಬದುಕುವುದಕ್ಕೆ ಸಾಧ್ಯವಾಗಿರುವುದು. ಯಾವುದರ ಸತ್ಯತೆಯಲ್ಲಿಯೂ ನಮಗೆ ಭರವಸೆಯೇ ಇಲ್ಲದಿದ್ದರೆ ನಮ್ಮ ಬದುಕು ಅದೆಷ್ಟು ದುರ್ಭರವಾಗಬಹುದು ಎಂಬುದು ಊಹೆಗೂ ನಿಲುಕುವುದಿಲ್ಲ. ಇಂದು ರಾತ್ರಿ ಮಲಗಿದವನು ನಾಳೆ ಬೆಳಗ್ಗೆ ಏಳುತ್ತೇನೆ ಎಂಬ ಸತ್ಯವನ್ನು ಆಧರಿಸಿಯೇ ನಮಗೆ ಸುಖ ನಿದ್ರೆ ಸಾಧ್ಯವಾಗಿರುವುದು. ನಿತ್ಯ ಉಣ್ಣುವ ಅನ್ನ ಹಸಿವನ್ನು ನೀಗಿಸುತ್ತದೆ, ವಿಷಪ್ರಾಯವಾಗುವುದಿಲ್ಲ ಎಂಬ ಸತ್ಯವನ್ನು ಆಧರಿಸಿಯೇ ಆಹಾರಸೇವನೆ ಸಾಧ್ಯವಾಗುತ್ತಿರುವುದು. ಎಷ್ಟೇ ಕಟ್ಟಡಗಳು ಉರುಳಿದರೂ ನಮ್ಮ ಮನೆ ಬೀಳುವುದಿಲ್ಲ ಎಂಬ ಭರವಸೆಯಿಂದಲೇ ನಾವು ನಿಶ್ಚಿಂತೆಯಿಂದ ಆ ಮನೆಯಲ್ಲಿ ವಾಸಿಸುತ್ತೇವೆ. ಎಷ್ಟೇ ಪ್ರಕೃತಿ ವಿಕೋಪಕ್ಕೆ ಬಲಿಯಾದರೂ ಪ್ರಾಕೃತಿಕ ನಿಯಮಗಳ ಮೇಲಿನ ನಂಬಿಕೆಯಿಂದಲೇ ನಾವು ನೆಮ್ಮದಿಯಿಂದ ಬದುಕುತ್ತೇವೆ. ಸಾವು ನಿಶ್ಚಿತವಾದರೂ ಈಗಲೇ ಸಾಯುವುದಿಲ್ಲ ಎಂಬ ಭರವಸೆಯಿಂದಲೇ ನಮ್ಮ ಎಲ್ಲ ಆಗುಹೋಗುಗಳೂ ನಡೆಯುತ್ತಿದೆ. ಹೀಗೆ ಸತ್ಯದ ಕಲ್ಪನೆಯೇ ನಮ್ಮ ಬದುಕಿಗೆ ಆಧಾರ. ಎಲ್ಲದರ ಹಿಂದಿರುವ ಸತ್ಯವನ್ನೇ ನಾವು ಆತ್ಮನೆಂದು ಕರೆಯುವುದು. ಎಲ್ಲವನ್ನೂ ನಾನು ಇಲ್ಲವೆಂದರೂ ನಾನಿದ್ದೇನೆಂಬ ಸತ್ಯಭರವಸೆಯಾದರೂ ಇರಲೇಬೇಕು. ಈ ಸತ್ಯವೇ ಆತ್ಮ.

ಹಾಗೆಯೇ ಜ್ಞಾನವೂ ಒಂದು ಮೂಲಭೂತ ಆವಶ್ಯಕತೆ. ನಮಗೆ ಇಂದ್ರಿಯಗಳಿರುವುದೇ ಹೊರಜಗತ್ತಿನ ಜ್ಞಾನವನ್ನು ಪಡೆಯುವುದಕ್ಕಾಗಿ, ವಿಷಯಭೋಗಕ್ಕಾಗಿ ಅಲ್ಲ. ಅದಕ್ಕಾಗಿಯೇ ಅವುಗಳನ್ನು ಜ್ಞಾನೇಂದ್ರಿಯಗಳೆಂದು ಕರೆದಿರುವುದು. ವ್ಯಕ್ತಿಯು ಅವಿದ್ಯಾವಂತನಾಗಿರಬಹುದು, ಅನಕ್ಷರಸ್ಥನಾಗಿರಬಹುದು, ಅಥವಾ ಅವನಿಗೆ ಯಾವುದೇ ಜ್ಞಾನದ ಹಂಬಲವಿಲ್ಲದೆ

ಇರಬಹುದು. ಆದರೆ ವಸ್ತುಗಳ ಮೂಲಭೂತ ಜ್ಞಾನವಿಲ್ಲದಿದ್ದರೆ, ವಸ್ತುಗಳನ್ನು ಗುರುತಿಸುವುದಕ್ಕೇ ಅವನಿಗೆ ಆಗದಿದ್ದರೆ ಜೀವನ ಅಸಾಧ್ಯವಾಗುತ್ತದೆ. ವಸ್ತುಗಳನ್ನು ಗುರುತಿಸುವುದು ಆತ್ಮದ ಬೆಳಕಿನಿಂದ. ಒಂದು ಜಡವಸ್ತು ಇನ್ನೊಂದು ಜಡವನ್ನು ಗುರುತಿಸಲಾರದು. ವಸ್ತುಗಳ ಇಂದ್ರಿಯ ಸಂವೇದನೆಗಳು ಮೆದುಳಿಗೆ ಹೋಗಿ ಅಲ್ಲಿ ವಸ್ತುವಿನ ರೂಪ ಸೃಷ್ಟಿಯಾಗುತ್ತದೆ. ಅದನ್ನು ನೋಡುವವನು ಆತ್ಮಚೈತನ್ಯ. ಆದ್ದರಿಂದ ನಿಜವಾಗಿ ನೋಡುವವನು, ಕೇಳುವವನು ಆತ್ಮನು. ಆದ್ದರಿಂದ ಎಲ್ಲ ಜ್ಞಾನವೂ ಆತ್ಮನಿಗೆ ಸಂಬಂಧಿಸಿದುದು. ಜ್ಞಾನವಿಲ್ಲದೆ ಬದುಕೇ ಅಸಾಧ್ಯವಾದುದರಿಂದ ನಮ್ಮ ಬದುಕಿಗೆ ಮೂಲಭೂತ ಆಶ್ರಯ ಆತ್ಮ ಎಂದಂತಾಯಿತು.

ಇನ್ನೊಂದು ಮೂಲಭೂತ ಆವಶ್ಯಕತೆ ಸುಖ. ಎಲ್ಲರೂ ಸುಖವನ್ನು ಬಯಸುತ್ತಾರೆ, ಮತ್ತು ಈ ಸುಖವನ್ನು ಹೊರಗಡೆ ಅರಸುತ್ತಾರೆ. ಆದರೆ ಹೊರಗಿನ ವಿಷಯಗಳಾವುವೂ ನಮಗೆ ಸುಖವನ್ನು ನೀಡುವುದಿಲ್ಲ. ಸುಖ ಅಂತರಂಗದಲ್ಲಿ ದೊರೆಯುವಂತಹುದು. ಹೊರಗೆ ಸುಖವನ್ನು ಅರಸುತ್ತ ಹೋದಷ್ಟೂ ಸುಖ ನಮ್ಮಿಂದ ದೂರವಾಗುತ್ತದೆ. ವಿಷಯವಸ್ತುವಿನಿಂದ ನಮಗೆ ದೊರೆಯುವ ಸುಖವೂ ಆತ್ಮಾನಂದದ ಅಭಿವ್ಯಕ್ತಿಯೆ. ನಮ್ಮಲ್ಲಿ ಯಾವುದೊ ವಸ್ತುವಿನ ಆಸೆ ಇರುತ್ತದೆ. ಆ ಆಸೆಯು ಒಂದು ರೀತಿಯ ಮಾನಸಿಕ ಬಿಗಿತ, ಅದು ಅಸಂತೋಷವನ್ನು ಉಂಟುಮಾಡುತ್ತದೆ. ಆ ವಸ್ತು ದೊರೆತಾಗ ಮಾನಸಿಕ ಬಿಗಿತ ನಿವಾರಣೆಯಾಗುತ್ತದೆ, ಆಗ ಆ ಕ್ಷಣದ ಮಟ್ಟಿಗೆ ಮನಸ್ಸು ತಿಳಿಯಾಗುತ್ತದೆ. ಇದರ ಪರಿಣಾಮವಾಗಿ ಆತ್ಮಾನಂದವು ವ್ಯಕ್ತವಾಗುತ್ತದೆ. ಇದನ್ನೇ ನಾವು ವಿಷಯ ವಸ್ತುವಿನಿಂದ ದೊರೆತ ಸುಖವೆಂದು ಭ್ರಮಿಸುತ್ತೇವೆ. ಜಡವಸ್ತು ನಮಗೆ ಯಾವ ಸುಖವನ್ನೂ ನೀಡಲಾರದು. ಆದ್ದರಿಂದ ಎಲ್ಲ ಸುಖವೂ ಆತ್ಮಾನಂದದ ಅಭಿವ್ಯಕ್ತಿಯೇ.

ಹೀಗೆ ಸತ್ಯ, ಜ್ಞಾನ ಮತ್ತು ಆನಂದ ಇವು ನಮ್ಮ ಜೀವನದ ಮೂಲಭೂತ ಆವಶ್ಯಕತೆಗಳು, ಹಾಗೂ ಈ ಮೂರೂ ಆತ್ಮನಿಗೆ ಸೇರಿದವು. ಆದ್ದರಿಂದ ಆತ್ಮತತ್ತ್ವವೇ ನಮ್ಮ ಜೀವನದ ಆಧಾರ ಎಂದು ಹೇಳಬಹುದು. ಇದು ವೇದಾಂತದ ನಿಲವು. ಇದು ಕೇವಲ ಸಿದ್ಧಾಂತವಾಗಿ ಉಳಿಯದೆ ನಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನರೂಪದಲ್ಲಿ ಪ್ರತಿಬಿಂಬಿತವಾಗಬೇಕು. ವೇದಾಂತದ ಅನುಷ್ಠಾನಪರ ಅಂಶಗಳನ್ನು ಎತ್ತಿ ತೋರಿಸುವ ಅಪೂರ್ವ ಪ್ರಯತ್ನವೇ ಈ ಪ್ರಸ್ತುತ ಕೃತಿ. ಇದೊಂದು ಸಂಗ್ರಹ ಗ್ರಂಥ. ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳ ಉಪನ್ಯಾಸಗಳು ಹಾಗೂ "ಅಧ್ಯಾತ್ಮ ಪ್ರಕಾಶ" ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ "ತಿಂಗಳ ಸಂದೇಶಗಳು" ಇವುಗಳನ್ನು ಸಂಗ್ರಹಿಸಿ ಈ ಕೃತಿಯನ್ನು ಸಿದ್ಧಪಡಿಸಲಾಗಿದೆ. ಈ ಕೃತಿಯು ಪೂಜ್ಯ ಸ್ವಾಮೀಜೀಯವರ ಮೇಲೆ ಅವರ ಭಕ್ತರಿಗೆ ಇರುವ ಶ್ರದ್ಧಾಭಕ್ತಿಯ ದ್ಯೋತಕವಾಗಿದೆ.

ಪೂಜ್ಯ ಸ್ವಾಮೀಜೀಯವರು ಕನ್ನಡ ಸಾರಸ್ವತಲೋಕಕ್ಕೆ ನೀಡಿರುವ ಕೊಡುಗೆ ಅಪೂರ್ವವಾದುದು. ಅವರ ಅಚ್ಚರಿಯ ವಿದ್ವತ್ತು, ಅನನ್ಯ ತಪಸ್ಸು, ಅಗಾಧವಾದ ತಾತ್ತ್ವಿಕ ಪ್ರತಿಭೆ, ಅಸಾಧ್ಯ ಬರವಣಿಗೆಯ ಸಾಮರ್ಥ್ಯ ಮತ್ತು ಅಪಾರ ಜ್ಞಾನಸಂಪತ್ತು–ಇವುಗಳೆಲ್ಲ ಸೇರಿ ಎಣಿಕೆಗೆಟುಕದ ಸಾಹಿತ್ಯರಾಶಿಯೇ ಅವರಿಂದ ಹೊರಬರುವಂತಾಯಿತು. ಶಂಕರಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳ ಟಿಪ್ಪಣಿಸಮೇತ ಕನ್ನಡಾನುವಾದ ಅವರು ಸಾಧಿಸಿದ ಮಹತ್ಕಾರ್ಯಗಳಲ್ಲಿ ಒಂದು. ಇಂದಿಗೂ ಕನ್ನಡದಲ್ಲಿ ವೇದಾಂತಾಧ್ಯಾಯಿಗಳಿಗೆ ಅದು ಪ್ರಭುತ್ವಪೂರ್ಣ ಆಕರ ಗ್ರಂಥವಾಗಿದೆ. ಕನ್ನಡದಲ್ಲಿ ತತ್ತ್ವಸಾಹಿತ್ಯಕ್ಕೆ ಇಷ್ಟೊಂದು ಕೊಡುಗೆಯನ್ನು ನೀಡಿದವರು ಇನ್ನೊಬ್ಬರು ಇರಲಾರರು. ಸರಳ ಜೀವನ ಮತ್ತು ಅಸಾಮಾನ್ಯ ಚಿಂತನೆಗೆ ಅವರ ಜೀವನ ಅತ್ಯುತ್ತಮ ನಿದರ್ಶನವಾಗಿದೆ. ಆ ಮಹಾನುಭಾವರ ದೇಹಾವಸಾನವಾದನಂತರವೂ ಅವರ ಹೊಸ ಹೊಸ ಕೃತಿಗಳು ಹೊರಬರುತ್ತಿರುವುದು ಅವರ ಅಸಾಧಾರಣ ಸಾಹಿತ್ಯಕೃಷಿಗೆ ಅನ್ಯಾದೃಶ ನಿದರ್ಶನವಾಗಿದೆ.

ಪ್ರಸ್ತುತ ಗ್ರಂಥವು ವೇದಾಂತಪ್ರೇಮಿಗಳ ಮೆಚ್ಚುಗೆಗೆ ಪಾತ್ರವಾದರೆ ಅದರ ಹಿಂದಿರುವ ಶ್ರದ್ಧಾಭಕ್ತಿಯ ಪರಿಶ್ರಮವು ಸಾರ್ಥಕವಾಗುತ್ತದೆ.

ಸ್ವಾಮಿ ನಿತ್ಯಸ್ಥಾನಂದ
ಅಧ್ಯಕ್ಷರು
ಶ್ರೀರಾಮಕೃಷ್ಣ ಆಶ್ರಮ
ಮೈಸೂರು

# ಪ್ರಕಾಶಕರ ಅರಿಕೆ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ಅಧ್ಯಾತ್ಮ ಪ್ರಕಾಶ ಕಾರ್ಯದಲ್ಲಿ ಅತಿಶಯ ಉತ್ಸಾಹವಿದ್ದು, ಅದಕ್ಕಾಗೇ ತಮ್ಮ ಸಂಪೂರ್ಣ ಜೀವನ ಕಾಲವನ್ನು ಮುಡುಪಿಟ್ಟವರು. ಇದಕ್ಕೆ ಪ್ರಧಾನ ಉದ್ದೇಶ, ಸಂಸ್ಕೃತ ಭಾಷೆಯಲ್ಲಿ ಮಾತ್ರವೇ ಇದ್ದು, ಬೇಗ ಕನ್ನಡದ ಜನತೆಗೆ ತಿಳಿಯದ, ಭಾರತೀಯ ಸಂಸ್ಕೃತಿಯ ಮೂಲವಾದ ವೇದಾಂತ ವಿಚಾರವನ್ನು ವಿಸ್ತಾರವಾಗಿ ಹರಡಬೇಕೆಂಬುದಾಗಿತ್ತು. ಜ್ಞಾನ ತಪೋನಿಧಿಗಳಾದ ಅವರು ಮಹಾಮಹಿಮ ಶ್ರೀಶಂಕರರ ಅಮೋಘವಾದ ಭಾಷ್ಯಗಳು, ವಿಸ್ತಾರ ಸಾಹಿತ್ಯಗಳಿಂದ ಆಕರ್ಷಿತರಾಗಿ, ಈ ಎಲ್ಲ ಜೀವನೋದ್ಧಾರ ಸಾಹಿತ್ಯ ಎಲ್ಲ ಸ್ತರದ ಕನ್ನಡ ಜನತೆಗೂ ತಲುಪುವಂತಿರಲಿ, ಹೆಚ್ಚಿನ ಜನರು ಅಧ್ಯಾತ್ಮದಲ್ಲಿ ಏಳಿಗೆಯನ್ನು ಪಡೆಯಲಿ ಎಂಬ ಮಹೋನ್ನತ ಉಪಕಾರಾರ್ಥವಾಗಿ ಇಂತಹ ಕಾರ್ಯವನ್ನು ಕೈಗೊಂಡರು.

ಮೊದಲು ಉಪನಿಷತ್ತುಗಳು, ಅವುಗಳ ಶಂಕರ ಭಾಷ್ಯಗಳನ್ನು ಸಂಸ್ಕೃತ ಮೂಲ, ಟಿಪ್ಪಣಿ, ಸಾರಗಳೊಡನೆ ಕನ್ನಡದಲ್ಲಿ ಸಿದ್ಧಪಡಿಸಿದರು. ಶ್ರೀಶ್ರೀಗಳವರ ಎಲ್ಲ ಬರೆವಣಿಗೆಗಳಲ್ಲಿ ಸಾರಭರಿತವಾದುದೆಂದರೆ ಅವರು ಬರೆಯುತ್ತಿದ್ದ ಪೀಠಿಕೆ ಮತ್ತು ಟಿಪ್ಪಣಿಗಳು. ಅದರಿಂದಾಗಿ ಓದುಗರ ಹೆಚ್ಚಿನ ಉಪಯೋಗ, ತಿಳಿವಳಿಕೆಗಾಗಿ, ವಿಸ್ತಾರವಾದ ಭಾಷ್ಯಗಳ ಕೇವಲ ವಿಮರ್ಶಾತ್ಮಕ ಪೀಠಿಕೆ ಮತ್ತು ತಿರುಳನ್ನು ಸೇರಿಸಿ "ದಶೋಪನಿಷತ್ತುಗಳ ಸಾರ"ವನ್ನು ಹೊರತಂದರು. ಇದಾದನಂತರ ಉಪನಿಷತ್ತಿನ ಮಂತ್ರಾರ್ಥವನ್ನು ಪ್ರಧಾನವಾಗಿಟ್ಟು ತಿಳಿಯಾದ ಉಪಯುಕ್ತ ರೀತಿಯಲ್ಲಿ ಅವರು ಬರೆದ ಲೇಖನಗಳು "ಉಪನ್ಯಾಸ ಮಂಜರಿ"ಗಳಾಗಿ ಬಂದುವು.

ಅದರ ಜೊತೆ ಜೊತೆಗೇ ಆಗಾಗ ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಅಥವಾ ಅದಕ್ಕೆ ಹೊಂದುಗೆಯಾದಂತೆ ಇರುವ, ಬೇರೆ ಬೇರೆಯ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ, ಅಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಮೂಡಿಸಿದರು. ಇಂತಹ ಲೇಖನಗಳು ಐದು ಸಂಪುಟಗಳಲ್ಲಿ ಬಂದವು. (ಸಂಪುಟ 8, 9, 21, 26, 27ರ ಮೊದಲರ್ಧ) ಇವುಗಳನ್ನಾಧರಿಸಿದ ವಸ್ತುವೇ ಈ ಪುಸ್ತಕದ ಭಾಗ. ಇದಕ್ಕೆ ಪೂರಕವಾಗುವಂತೆ ಸಂಪ್ರದಾಯಕ್ರಮದಲ್ಲಿ ಮೊದಲು ಪಠಿಸುವ 10 ಶಾಂತಿಮಂತ್ರಗಳು ಮತ್ತು ಗುರುನಮಸ್ಕಾರವನ್ನೂ, ಸಂಪುಟ 8, 20, 13ರಲ್ಲಿರುವ ಮೂರು ಲೇಖನಗಳನ್ನು ಕಿರುಪರಿಚಯವಾಗಿಯೂ, ಆರಿಸಿ ಇಲ್ಲಿ ಸೇರಿಸಿದೆ.

ಪಂಡಿತಮಾನ್ಯರು, ಹೆಚ್ಚಿನ ಜ್ಞಾನಾಪೇಕ್ಷಿಗಳಿಗಾಗಿ ಭಾಷ್ಯಗಳು, ಅವುಗಳ ತಿರುಳನ್ನು ನೀಡುವ ಭಾಷ್ಯಸಾರ ಒಂದು ಮೆಟ್ಟಲು ಕೆಳಗೆ, ತಿಳಿಯಾದ ವಿಸ್ತಾರಕ್ಕೆ ಮಂಜರಿಗಳು ಮತ್ತು ಒಂದೇ ವಿಷಯದ ಉಪನಿಷದ್ವಾಕ್ಯಗಳು– ಈ ಕ್ರಮದಲ್ಲಿ ವೇದಾಂತ ಝರಿ ಮೇಲಿನಿಂದ ಕೆಳಗೆ ಹರಿದು ಬಂದಿದೆ. ಇನ್ನೂ ಕೆಳಗೆ ಬಹಳ ಹಿಂದೆಯೇ ಶ್ರೀಶ್ರೀಗಳು ಬರೆದ ಪರಿಚಯಾತ್ಮಕ ಸಣ್ಣ ಹೊತ್ತಿಗೆ ಇದೆ. ಇಷ್ಟು ಮಹದುಪಕಾರವನ್ನು ಕರುಣಿಸಿರುವ

ಅನುಪಮ ಯತಿವರ್ಯರಾದ ಶ್ರೀಶ್ರೀಗಳವರಿಗೆ ಸಾಷ್ಟಾಂಗ ನಮಸ್ಕಾರಗಳು. ಈ ಸಂಗ್ರಹವನ್ನು ತರಲು ಅವರ ಆಶೀರ್ವಾದವೇ ಕಾರಣ, ಅದಕ್ಕಾಗಿ ಅವರಿಗೆ ಕೃತಜ್ಞತೆಗಳು.

ಇಂತಹ ಸೊಗಸಾದ ಪುಸ್ತಕಕ್ಕೆ, ಅಷ್ಟೇ ಉತ್ತಮವಾದ ಮೆರಗನ್ನು ತಮ್ಮ ಶ್ರೇಷ್ಠ "ಸತ್ಯಂ ಶಿವಂ ಸುಂದರಂ" ಆದ ಮುನ್ನುಡಿಯಿಂದ ನೀಡಿರುವ ಶ್ರೀ ಸ್ವಾಮಿ ನಿತ್ಯಸ್ಥಾನಂದಜಿ, ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಮೈಸೂರು ಅವರಿಗೆ ಕೃತಜ್ಞತಾಪೂರ್ವಕ ಪ್ರಣಾಮಗಳು.

ಪ್ರತಿ ಸಲದಂತೆ ಸುಂದರವಾದ ಅಕ್ಷರ ಜೋಡಣೆ ಮತ್ತು ಆಕರ್ಷಣೀಯ ರಕ್ಷಾಕವಚವನ್ನು ಹೊದಿಸಿರುವ ಶ್ರೀ ಸುರೇಶ್ ದಂಪತಿಗಳು ಮತ್ತು ಅಂದವಾದ ಮುದ್ರಣದಿಂದ ಪುಸ್ತಕದ ಸೊಗಸನ್ನು ಹೆಚ್ಚಿಸಿರುವ ಸ್ಟಾಂಡರ್ಡ್ ಪ್ರಿಂಟರ್ಸ್‌ನ ಶ್ರೀ ನಾಗರಾಜ್ ಇವರುಗಳಿಗೆ ವಿಶ್ವಾಸಪೂರ್ವಕ ಧನ್ಯವಾದಗಳು.

ಈ ಪುಸ್ತಕದ ಸದುಪಯೋಗ ತಮ್ಮ ಕೈಯಲ್ಲಿದೆ. ಪುಸ್ತಕಗಳನ್ನು ಕೊಂಡು ಓದಿರಿ. ತಮ್ಮ ಬಳಗದಲ್ಲಿ ಹಂಚಿರಿ, ಮುಂಜಿ ಮದುವೆಗಳಲ್ಲಿ ಶುಭಾಶಯದ ಕೊಡುಗೆಯಾಗಿ, ಅರುವತ್ತು ಎಪ್ಪತ್ತು ವರ್ಷದ ಶಾಂತಿಗಳಲ್ಲಿ ಹಿರಿಯರಿಗೆ ಗೌರವಾರ್ಥ ಅರ್ಪಣೆಯಾಗಿ, ಇಷ್ಟ ಮಿತ್ರರಿಗೆ ನೆನಪಿನ ಕಾಣಿಕೆಯಾಗಿ ಕೊಡಿರಿ. ಇದರಿಂದ ಕೇವಲ ನಾಲ್ಕು ದಿನದ ನವನಾಗರಿಕತೆಯ ಪೊಳ್ಳು, ಅನ್ಯ ವಸ್ತುಗಳ ಬದಲಾಗಿ ಮನಸ್ಸು ಬುದ್ಧಿ ಹೃದಯಗಳನ್ನು ಹಸನುಗೊಳಿಸಿ ವ್ಯಕ್ತಿತ್ವವನ್ನೇ ಔನ್ನತ್ಯಕ್ಕೇರಿಸುವ ಶಾಶ್ವತ ಮೌಲ್ಯದ ಪರಂಪರಾಗತ ಅತ್ಯುತ್ತಮ ಅಧ್ಯಾತ್ಮ ಸಾಹಿತ್ಯವನ್ನು ನೀಡಿರಿ. ಇದು ನಿಮ್ಮ ಅಧ್ಯಾತ್ಮ ಉನ್ನತಿಗೆ ಕಾರಣ, ಶ್ರೀಶ್ರೀಗಳ ಉದ್ದೇಶಕ್ಕೆ, ಅನುಗುಣ, ಕಾರ್ಯಾಲಯದ ಶ್ರಮಕ್ಕೆ ಹೂರಣ. ಒಟ್ಟಾಗಿ 5 ಅಥವಾ ಹೆಚ್ಚಿನ ಪುಸ್ತಕಗಳನ್ನು ಕೊಳ್ಳುವವರಿಗ ಶೇ. 15 ರಿಂದ 25ರ ವರೆಗೆ ರಿಯಾಯಿತಿ ಇದೆ.

ವಿಕೃತಿ ಸಂವತ್ಸರ ಅಧಿಕ ವೈಶಾಖ ಶುದ್ಧ ದ್ವಾದಶಿ **ಪ್ರಕಾಶಕರು**
ಭಾನುವಾರ ; 25–04–2010

## ಪ್ರಕಾಶಕರ ಬಿನ್ನಹ (ಎರಡನೆಯ ಮುದ್ರಣಕ್ಕೆ)

2010ರಲ್ಲಿ ಮೊದಲನೆಯ ಬಾರಿಗೆ ಮುದ್ರಣವಾದ ಈ ಗ್ರಂಥವು ಭಕ್ತಾದಿಗಳ ಜನಪ್ರಿಯತೆ ಮತ್ತು ಘನಸರ್ಕಾರದವರು ಸಾರ್ವಜನಿಕ ಗ್ರಂಥಾಲಯದ ಮೂಲಕ ಸುಮಾರು 500 ಪುಸ್ತಕಗಳನ್ನು ಕೊಂಡು ಎಲ್ಲಾ ಪುಸ್ತಕ ಭಂಡಾರಗಳಿಗೂ ಸರಬರಾಜು ಮಾಡಿದ್ದರಿಂದ, ಕೇವಲ 2 ವರ್ಷಗಳಲ್ಲಿ ಮಾರಾಟವಾಗಿಬಿಟ್ಟವು. ಗ್ರಂಥ ಶರೀರದಲ್ಲಿ ಬದಲಾವಣೆಯಿಲ್ಲದೆ ಪುನಃ ಎರಡನೆಯ ಬಾರಿಗೆ ಮುದ್ರಿಸಿ ಈಗ ಹೊರತರಲಾಗಿದೆ.

ಎಂದಿನಂತೆ ಈ ಪುಸ್ತಕವನ್ನು ಬರಮಾಡಿಕೊಂಡು ಕಾರ್ಯಾಲಯದಿಂದ ಸತತವಾಗಿ ನಡೆಯುತ್ತಿರುವ ಗ್ರಂಥ ಪ್ರಕಟನೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

**15–8–2012** **ಪ್ರಕಾಶಕರು**

# ವೇದಾಂತ ಸಂದೇಶಗಳು– ಸಂಪುಟ 2 :

# ಉಪನಿಷತ್ ಸಿರಿ

## ವಿಷಯಸೂಚಿ


ಅ. ಶಾಂತಿ ಮಂತ್ರಗಳು 1

ಆ. ಉಪನಿಷತ್ತುಗಳು– ಕಿರುಪರಿಚಯ 14

ಇ. ಉಪನಿಷತ್ ಸಂದೇಶಗಳು

1. ಇರವಿನ ಅರಿವು

1.1. ಅಧ್ಯಾರೋಹ 25

1.2. ಉಪನಿಷತ್ತುಗಳ ಮುಖ್ಯೋಪದೇಶ 26

1.3 ನಮ್ಮ ಇರವಿನ ತಿರುಳು 27

1.4 ಸದ್ರೂಪವನ್ನು ಅರಿಯುವದು 29

1.5 ಸದ್ಗುರುವಿನ ಅದ್ಭುತ ಮಹಿಮೆ 30

1.6 ಅಧ್ಯಾತ್ಮ ಯೋಗ 32

1.7 ಆನಂದದ ಮಡು 33

1.8 ಅವಸ್ಥಾತ್ರಯ 35

1.9. ನಮ್ಮಗಳ ನಿಜವಾದ ಆತ್ಮನು 36

1.10 ಜ್ಞಾನಿಯ ದೃಷ್ಟಿ 38

1.11 ಪರಮಾನಂದ ಸ್ವರೂಪನು 39

1.12 ವಿಶ್ವದ ಸ್ಥೂಲ ಸೂಕ್ಷ್ಮವೆಲ್ಲಾ ಆತ್ಮನೇ 41

2. ಆನಂದ ಸ್ವರೂಪನು

2.1 ಎರಡು ಬಗೆಯ ಜನರು 43

2.2 ಪರಮಾತ್ಮನೊಬ್ಬನೇ ಸತ್ಯನು 44

2.3 ಮನಸ್ಸಿಗೂ ಅಗೋಚರವಾದ ತತ್ತ್ವ 45

2.4 ಅಲ್ಪಾತ್ಮನು, ಮಹಾತ್ಮನು 46
2.5 ಪ್ರಜ್ಞಾನ 47
2.6 ನಿಜವಾದ ಸ್ವರೂಪ ಚಿಂತನೆ 48
2.7 ಸಚ್ಚಿದಾನಂದ ಪರಮಾತ್ಮನು 49
2.8 ಬ್ರಹ್ಮಾನಂದ 50
2.9 ಆನಂದ ನಿಧಿ 51
2.10 ಸರ್ವವೂ ಆನಂದಮಯವೇ 52

## 3. ಅಧ್ಯಾತ್ಮ ಸಾಧನಗಳು

3.1 ಅನನ್ಯ ಪ್ರೇಮದ ಉಪಾಸನೆ 54
3.2 ಶ್ರದ್ಧಾ ಭಕ್ತಿಯ ಪಾರಾಯಣ 60
3.3 ಆತ್ಮಜ್ಞಾನದ ಪಥ 67
3.4 ಸಂಪೂರ್ಣ ಶರಣಾಗತಿಯಿಂದಲೇ ಮುಕ್ತಿ 73
3.5 ಪರಮಾರ್ಥದ ಅರಿವಿನಿಂದಲೇ ಪರಮ ಪುರುಷಾರ್ಥವು 80
3.6 ಮನಸ್ಸಿನ ಹಿಡಿತವೇ ಅಧ್ಯಾತ್ಮ ಸಾಧನವು 85
3.7 ನಿಜವಾದ ಚಿದಂಬರನು ನಮ್ಮ ಆತ್ಮನೇ 90
3.8 ಪರಮಾತ್ಮನ ಸಾಂನಿಧ್ಯಕ್ಕೆ ಸಾಧನೆಗಳು 98
3.9 ಪರಮೇಶ್ವರನ ಪಾದಾರವಿಂದ ಸೇವೆಯೇ ಸಾರವು 103
3.10 ತ್ಯಾಗವೊಂದೇ ಅಮೃತತ್ವಕ್ಕೇ ಸಾಧನವು 110
3.11 ಪ್ರಜ್ಞಾನವೆಂಬ ಪ್ರತಿಷ್ಠೆ 116
3.12 ನೈಷ್ಕರ್ಮ್ಯ ಸಿದ್ಧಿಯಿಂದ ಕೃತಕೃತ್ಯತೆ 121

## 4. ಜ್ಞಾನ ಸಾಧನಗಳು

4.1 ಇಕ್ಕಟ್ಟಿನ ಹಾದಿ 128
4.2 ಜ್ಞಾನಕ್ಕೆ ಹೊರಗಿನ ಸಾಧನಗಳು 136
4.3 ಜ್ಞಾನಕ್ಕೆ ಒಳಗಿನ ಸಾಧನಗಳು 142

4.4 ಜ್ಞಾನಕ್ಕೆ ನೇರಾದ ಸಾಧನಗಳು 148
4.5 ಆತ್ಮನ ಅಮೃತಸ್ವರೂಪ 156
4.6 ಆತ್ಮಾಜ್ಞಾನ 161
4.7 ಆಚಾರ್ಯೋಪದೇಶ 167
4.8 ವೇದಾಂತೋಪದಿಷ್ಟತತ್ತ್ವಜ್ಞಾನ 173
4.9 ಏಕಮೇವಾದ್ವಿತೀಯಮ್ 178
4.10 ಆತ್ಮನು ಆಗಮಗಮ್ಯನು 183
4.11 ಸ್ಥಿತಪ್ರಜ್ಞ 189
4.12 ಪರಮಾತ್ಮನೊಬ್ಬನೇ ಪರಮಾರ್ಥವು 197

## 5. ಸಾಧನ ಕ್ರಮ

5.1 ಧ್ಯಾನಯೋಗ 203
5.2 ವಿಭೂತಿಯೋಗ 208
5.3 ಭಗವಂತನ ಕರುಣೆ 213
5.4 ಆತ್ಮನಿಗೂ ಜಗತ್ತಿಗೂ ಸಂಬಂಧ 219
5.5 ಆತ್ಮದರ್ಶನ ಉಪಾಯಗಳು 225
5.6 ಭಗವಚ್ಚಿಂತನೆ 231

# ಅ. ಶಾಂತಿಮಂತ್ರಗಳು

(ಉಪನಿಷತ್ತುಗಳನ್ನೂ ಸೂತ್ರಭಾಷ್ಯವನ್ನೂ ಪಠಿಸುವಾಗ ಹೇಳಿಕೊಳ್ಳುವ ಕೆಲವು ಶಾಂತಿಮಂತ್ರಗಳ ಅರ್ಥವನ್ನು ಒಂದೊಂದಾಗಿ ಕೊಡುವೆವು. ಅರ್ಥಾನುಸಂಧಾನ ಪೂರ್ವಕವಾಗಿ ಇವುಗಳನ್ನು ಹೇಳಿಕೊಳ್ಳುವದರಿಂದ ಪಾಠಕರಿಗೆ ಹೆಚ್ಚು ಪ್ರಯೋಜನವಾಗುವದೆಂಬುದು ಸ್ಪಷ್ಟ)

## 1. ಪ್ರಾರ್ಥನೆ :

**ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ । ಶಂ ನ ಇನ್ದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಅವತು ಮಾಮ್ । ಅವತು ವಕ್ತಾರಮ್ । ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥1॥**

1. (ಹಗಲಿಗೂ ಪ್ರಾಣವೃತ್ತಿಗೂ ಅಭಿಮಾನಿಯಾದ) ಮಿತ್ರನು ನಮಗೆ ಸುಖಕಾರಕನಾಗಲಿ! (ಅಪಾನವೃತ್ತಿಗೂ ರಾತ್ರಿಗೂ ಅಭಿಮಾನಿಯಾಗಿರುವ) ವರುಣನು (ನಮಗೆ) ಸುಖಕಾರಕನಾಗಲಿ! ಅರ್ಯಮನು ಸುಖಕಾರಕನಾಗಲಿ! ಚಕ್ಷುರಿಂದ್ರಿಯಕ್ಕೂ ಆದಿತ್ಯನಿಗೂ ಅಭಿಮಾನಿಯಾಗಿರುವ (ಬಾಹುವಿಗೂ ಬಲಕ್ಕೂ ಒಡೆಯನಾದ) ಇಂದ್ರನೂ (ವಾಕ್ಕಿಗೂ ಬುದ್ಧಿಗೂ ಒಡೆಯನಾದ) ಬೃಹಸ್ಪತಿಯೂ ಸುಖಕಾರಕನಾಗಲಿ! (ಪಾದಗಳಿಗಭಿಮಾನಿಯಾದ) ದೊಡ್ಡ ಹೆಜ್ಜೆಯ ವಿಷ್ಣುವು ಸುಖಕಾರಕನಾಗಲಿ!

ಬ್ರಹ್ಮನಿಗೆ ನಮಸ್ಕಾರ! ಎಲೈ ವಾಯುವೆ, ನಿನಗೆ ನಮಸ್ಕಾರ! ನೀನೇ ಪ್ರತ್ಯಕ್ಷವಾದ ಬ್ರಹ್ಮವು; ನೀನೇ ಪ್ರತ್ಯಕ್ಷಬ್ರಹ್ಮವೆಂದು ಹೇಳುವೆನು. ಋತವೆಂದು ಹೇಳುವೆನು, ಸತ್ಯವೆಂದು ಹೇಳುವೆನು. ಆ (ಬ್ರಹ್ಮವು) ನನ್ನನ್ನು ಕಾಪಾಡಲಿ! ಆಚಾರ್ಯನನ್ನು ಕಾಪಾಡಲಿ! ಓಂ ಶಾಂತಿ! ಶಾಂತಿ! ಶಾಂತಿ!

[ಇಲ್ಲಿ ಮೊದಲು ಪ್ರಾರ್ಥನೆಮಾಡಿರುವದು, ನಮ್ಮ ಶರೀರೇಂದ್ರಿಯಗಳಿಗೆ ಅಧಿಷ್ಠಾತೃಗಳಾಗಿರುವ ದೇವತೆಗಳನ್ನು; ಅವರು ಪ್ರಸನ್ನರಾದರೆ ವಿದ್ಯೆಯನ್ನು ಗುರುವಿನಿಂದ ನಿರ್ವಿಘ್ನವಾಗಿ ಕೇಳಿ, ನೆನಪಿನಲ್ಲಿಟ್ಟುಕೊಂಡು, ಮತ್ತೊಬ್ಬರಿಗೆ ಹೇಳಿಕೊಡುವದು ಸುಲಭವಾಗುತ್ತದೆಯೆಂದು ನಂಬಿಕೆ.

ಎರಡನೆಯ ಪ್ರಾರ್ಥನೆಯು ಅಂತರ್ಯಾಮಿಯಾಗಿರುವ ಪರಮೇಶ್ವರನದು. ಅಂತರ್ಯಾಮಿಯು ಹೊರಗಿನ ಇಂದ್ರಿಯಾದಿಗಳಿಗಿಂತಲೂ ನಮ್ಮ ಒಳಗೇ ಇದ್ದುಕೊಂಡಿರುವ ಪ್ರತ್ಯಕ್ಷಬ್ರಹ್ಮವು. ಆತನ ಪ್ರೇರಣೆಯಿಂದಲೇ ನಾವು ಸತ್ಯವನ್ನು ಸಂಕಲ್ಪಿಸುವದು, ನುಡಿಯುವದು.]

## 2. ಶಿಷ್ಯನ ಪ್ರಾರ್ಥನೆ

**ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ ।**
**ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ । ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ॥2॥**

ಅರ್ಥ : ನಮ್ಮಿಬ್ಬರನ್ನೂ ಕಾಪಾಡಲಿ! ನಮ್ಮಿಬ್ಬರನ್ನೂ ಪಾಲಿಸಲಿ ! ನಾವಿಬ್ಬರೂ ಜೊತೆಯಲ್ಲಿಯೇ ಸಾಮರ್ಥ್ಯವನ್ನುಂಟುಮಾಡುವಂತಾಗಲಿ! ನಾವು ಅಧ್ಯಯನಮಾಡಿದ್ದು ತೇಜಸ್ವಿಯಾಗಲಿ! ನಾವು ಒಬ್ಬರನ್ನೊಬ್ಬರು ದ್ವೇಷಿಸದಂತಾಗಲಿ! ಓಂ ಶಾಂತಿಃ! ಶಾಂತಿಃ! ಶಾಂತಿಃ!

ಇಲ್ಲಿ ಶಿಷ್ಯನು ಗುರುಶಿಷ್ಯರಿಬ್ಬರ ಪರವಾಗಿಯೂ ಪ್ರಾರ್ಥನೆಮಾಡಿರುತ್ತಾನೆ. ಗುರುವು ಕೃತಾರ್ಥನಾಗಿರುವದರಿಂದ ಅವನು ಪ್ರಾರ್ಥಿಸಬೇಕಾದದ್ದಿರುವದಿಲ್ಲವಾಗಿ ಇದು ಶಿಷ್ಯನ ಪ್ರಾರ್ಥನೆಯೆಂದು ನಿಶ್ಚಯಿಸಬಹುದಾಗಿದೆ.

ಪರಮೇಶ್ವರನು ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ, ಇಬ್ಬರೂ ಜೊತೆಯಲ್ಲಿದ್ದು ಕ್ಷೇಮದಿಂದಿರುವದರಿಂದ ನನಗೆ ಬ್ರಹ್ಮವಿದ್ಯೆಯು ಬರುವಂತಾಗಲಿ; ಆ ಪರಮೇಶ್ವರನೇ ನಮ್ಮಿಬ್ಬರಿಗೂ ಆ ವಿದ್ಯೆಯ ಫಲವನ್ನು ಕೊಟ್ಟು ಆನಂದಪಡಲಿ ಎಂದು ಶಿಷ್ಯನು ಪ್ರಾರ್ಥಿಸುತ್ತಾನೆ. ನಾವಿಬ್ಬರೂ ಜೊತೆಯಲ್ಲಿದ್ದು ವಿದ್ಯೆಯಿಂದಾಗುವ ಸಾಮರ್ಥ್ಯವನ್ನುಂಟು ಮಾಡಬೇಕು; ಗುರುವು ಉಪದೇಶಮಾಡುವದರಿಂದಲೂ ನಾನು ಶ್ರವಣಮನನಾದಿ ಗಳಿಂದಲೂ ವಿದ್ಯೆಯನ್ನು ಯಥಾವಿಧಿಯಾಗಿ ಉಂಟುಮಾಡಿದರೆ ಆ ವಿದ್ಯೆಗೆ ಸರಿಯಾದ ವೀರ್ಯವುಂಟಾಗಿ ಸಂಸಾರಕ್ಕೆ ಕಾರಣವಾಗಿರುವ ಅವಿದ್ಯೆಯ ನಾಶವೂ ಆನಂದರೂಪವಾದ ಫಲದ ಪ್ರಾಪ್ತಿಯೂ ಆಗುತ್ತದೆ. ಅದು ಉಂಟಾಗುವಂತೆ ಪರಮೇಶ್ವರನು ಅನುಗ್ರಹಿಸಲಿ ಎಂಬುದು ಮೂರನೆಯ ಪ್ರಾರ್ಥನೆ. ತಮಗೆ ಗೊತ್ತಿಲ್ಲದಂತೆಯೇ ಗುರುವು ಕ್ರಮವಾಗಿ ಹೇಳಿಕೊಡದಿರುವದು, ಅಥವಾ ಶಿಷ್ಯನು ಕ್ರಮವಾಗಿ ಕಲಿಯದಿರುವದು. ಹೀಗಾಗಬಹುದು; ಅದರಿಂದ ಈ ಶಿಷ್ಯನು ಶುಶ್ರೂಷಾಪರನಲ್ಲವೆಂದು ಗುರುವೂ ಆಚಾರ್ಯನು ಸರಿಯಾಗಿ ತಿಳಿಯಹೇಳಲಿಲ್ಲವೆಂದು ಶಿಷ್ಯನೂ ಭಾವಿಸಬಹುದು. ಇಂಥ ಪ್ರವಾದವು ಉಂಟಾಗಬಾರದೆಂದು ಶಿಷ್ಯನ ನಾಲ್ಕನೆಯ ಪ್ರಾರ್ಥನೆ.

ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ–ಎಂಬ ಒಂದು ಬಗೆಯ ರೂಪಗಳನ್ನು ನಿವಾರಿಸುವದಕ್ಕೆಂದು ಮೂರು ಸಲ ಶಾಂತಿಯನ್ನು ಹೇಳಿರುತ್ತದೆ.

****

## 3. ಓಂಕಾರ ಧ್ಯಾನ

**ಯಶ್ಛನ್ದಸಾಮೃಷಭೋ ವಿಶ್ವರೂಪಃ । ಛನ್ದೋಭ್ಯೋಽಧ್ಯಮೃತಾತ್ ಸಂಬಭೂವ। ಸ ಮೇನ್ದ್ರೋಮೇಧಯಾ ಸ್ಪೃಣೋತು । ಅಮೃತಸ್ಯ ದೇವ ಧಾರಣೋ ಭೂಯಾಸಮ್। ಶರೀರಂ ಮೇ ವಿಚರ್ಷಣಮ್ । ಜಿಹ್ವಾ ಮೇ ಮಧುಮತ್ತಮಾ । ಕರ್ಣಾಭ್ಯಾಂ ಭೂರಿ ವಿಶ್ರುವಮ್ । ಬ್ರಹ್ಮಣಃ ಕೋಶೋಽಸಿ ಮೇಧಯಾಪಿಹಿತಃ । ಶ್ರುತಂ ಮೇ ಗೋಪಾಯ ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥3॥**

"ಯಾವ (ಓಂಕಾರವು) ವೇದಗಳಲ್ಲಿ ಶ್ರೇಷ್ಠವಾಗಿರುವದೋ, ಯಾವದು ವೇದಗಳೆಂಬ ಅಮೃತದಿಂದ ಉಂಟಾಯಿತೋ, ಆ ಪರಮೇಶ್ವರಸ್ವರೂಪನಾದ ಓಂಕಾರವು ನನಗೆ ಮೇಧಾಶಕ್ತಿಯನ್ನು ಕೊಟ್ಟು ಬಲಪಡಿಸಲಿ! ಎಲೈ ದೇವನೆ, ನಾನು ಅಮೃತವನ್ನು ಧರಿಸುವಂತಾಗಲಿ! ನನ್ನ ಶರೀರವೂ ಯೋಗ್ಯವಾಗಲಿ! ನಾಲಗೆಯು ಮಧುರವಾಕ್ಕನ್ನಾಡುವದಾಗಲಿ! ಕಿವಿಗಳಿಂದ ಬಹಳವಾಗಿ ನಾನು ಶ್ರವಣಮಾಡುವಂತಾಗಲಿ! ನೀನು ಬ್ರಹ್ಮದ ಒರೆಯಾಗಿರುತ್ತೀಯೆ, (ಸಾಮಾನ್ಯರ) ಅರಿವಿನಿಂದ ಮುಚ್ಚಿಹೋಗಿರುತ್ತೀಯೆ ನಾನು ಶ್ರವಣಮಾಡಿದ್ದನ್ನು ಕಾಪಾಡು. ಓಂ ಶಾಂತಿಃ! ಶಾಂತಿಃ! ಶಾಂತಿಃ!"

ಇಲ್ಲಿ ಓಂಕಾರದ ಧ್ಯಾನವನ್ನು ಹೇಳಿರುತ್ತದೆ. ವೇದವು ಅಮೃತತ್ವಕ್ಕೆ– ಮರಣವಿಲ್ಲದ್ದೆಂಬ ಮೋಕ್ಷಕ್ಕೆ– ಕಾರಣವಾಗಿರುವದರಿಂದ ಅಮೃತವೆನಿಸುತ್ತದೆ; ಅಂಥ ವೇದದಲ್ಲಿ ಓಂಕಾರವೇ ಸಾರವಾದದ್ದು. ಓಂಕಾರವೊಂದೇ ಸರ್ವವಾಕ್ಕುಗಳ ರೂಪವಾಗಿ ಕಾಣಿಸಿಕೊಳ್ಳುತ್ತಿರುವದೆಂದೂ ಅದು ನಿತ್ಯವಾದದ್ದೆಂದೂ ವೇದಗಳು ಸಾರುತ್ತಿರುವವು. ಸಾಲಗ್ರಾಮಶಿಲೆಯಲ್ಲಿ ವಿಷ್ಣುಬುದ್ಧಿಯನ್ನು ಮಾಡುವಂತೆ ಓಂಕಾರದಲ್ಲಿ ಈಶ್ವರಬುದ್ಧಿಯನ್ನು ಇಟ್ಟು ಚಿಂತನೆ ಮಾಡಿದರೆ ಪರಮೇಶ್ವರನ ಅನುಗ್ರಹದಿಂದ ನಮ್ಮ ಶರೀರವೂ ಸಕಲೇಂದ್ರಿಯಗಳೂ ಬ್ರಹ್ಮಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಹೊಂದುವವು; ವೇದಾಂತಶ್ರವಣವನ್ನು ಮತ್ತೆ ಮತ್ತೆ ಮಾಡಿ ಶ್ರವಣಮಾಡಿದ್ದನ್ನು ನೆನಪಿನಲ್ಲಿಟ್ಟುಕೊಂಡು ಮನನನಿಧಿಧ್ಯಾಸನಗಳಿಂದ ಪರಮಾತ್ಮಸ್ವರೂಪವನ್ನೇ ಅರಿತುಕೊಳ್ಳುವದಕ್ಕೆ ಸಹಾಯವಾಗುವದು.

ಓಂಕಾರವು ವಾಕ್ಪ್ರಪಂಚದ ಕಾರಣವಾಗಿ ತನ್ನ ರೂಪದಿಂದ ಪರಮಾತ್ಮನ ಪ್ರತೀಕವಾಗಿರುತ್ತದೆ; ಎಂದರೆ ವಿಷ್ಣುವಿಗೆ ಸಾಲಗ್ರಾಮದಂತೆ ಉಪಾಸನಾಸ್ಥಾನವಾಗಿರುತ್ತದೆ. ಅದರ ಪರಮಾರ್ಥಸ್ವರೂಪವು ಪರಮಾತ್ಮನೇ ಆಗಿರುತ್ತದೆ. ಆದ್ದರಿಂದ ಈ ಮಂತ್ರವನ್ನು ಮುಮುಕ್ಷುವು ಆದರದಿಂದ ಜಪಿಸಬೇಕು.

## 4. ಬ್ರಹ್ಮಯಜ್ಞಜಪ

**ಅಹಂ ವೃಕ್ಷಸ್ಯ ರೇರಿವಾ । ಕೀರ್ತಿಃ ಪೃಷ್ಠಂ ಗಿರೇರಿವ । ಊರ್ಧ್ವಪವಿತ್ರೋ ವಾಜಿನೀವ ಸ್ವಮೃತಮಸ್ಮಿ । ದ್ರವಿಣಗ್ಂ ಸವರ್ಚಸಮ್ ಸುಮೇಧಾ ಅಮೃತೋಕ್ಷಿತಃ । ಇತಿ ತ್ರಿಶಙ್ಕೋರ್ವೇದಾನುವಚನಮ್ ॥**
**ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥4॥**

ನಾನು ವೃಕ್ಷವನ್ನು ಪ್ರೇರಿಸುವಾತನು. (ನನ್ನ) ಕೀರ್ತಿಯು ಪರ್ವತದ ಮೇಲುಗಡೆಯಂತೆ ಇದೆ. ಸೂರ್ಯನಲ್ಲಿರುವ ಅಮೃತದಂತೆ ಮೇಲಿನ ಪವಿತ್ರವಾದ ಅಮೃತತತ್ತ್ವವಾಗಿರುತ್ತೇನೆ. ಕಾಂತಿಯುಕ್ತವಾದ ಧನವಾಗಿರುತ್ತೇನೆ. ಉತ್ಕೃಷ್ಟವಾದ ಜ್ಞಾನವುಳ್ಳವನು, ಅಮೃತದಿಂದ ಪ್ರೋಕ್ಷಿತನಾಗಿರುವವನು. ಇದು ತ್ರಿಶಂಕುವಿನ ವೇದಾನುವಚನವು.

ಇದು ತ್ರಿಶಂಕುವೆಂಬ ಋಷಿಯು ಬ್ರಹ್ಮಜ್ಞಾನದಿಂದ ಬ್ರಹ್ಮಸ್ವರೂಪವನ್ನು ಪಡೆದಾಗ ಹೇಳಿದ ಮಾತೆಂದು ಮಂತ್ರದಿಂದಲೇ ಗೊತ್ತಾಗುತ್ತದೆ. ಶರೀರವೇ ಮುಂತಾದವುಗಳ ಅಭಿಮಾನವನ್ನು ಬಿಟ್ಟು ಸಾಕ್ಷಾತ್ಪರಮಾತ್ಮನಲ್ಲಿಯೇ ನಿಂತ ಸ್ಥಿತಿಯು ಹೇಗಿರುವದೆಂದರೆ ಆಗ ನಾನೆಂದರೆ ಪರಮಾತ್ಮನೇ. ಪರಮಾತ್ಮನಿಗಿಂತ ಬೇರೆ ಏನೊಂದೂ ಇಲ್ಲವೇ ಇಲ್ಲ. ಆ ದೃಷ್ಟಿಯಿಂದ ತ್ರಿಶಂಕುವು ಆಡಿದ ವಚನವಿದು.

"ನಾನು ವೃಕ್ಷವನ್ನು ಪ್ರೇರಿಸುವಾತನು." ಈ ಸಂಸಾರವೆಂಬ ವೃಕ್ಷವು ಬೇಗನೆ ಕತ್ತರಿಸಿಹೋಗತಕ್ಕದ್ದಾಗಿದೆ, ಇದು ನಿತ್ಯವಲ್ಲ. ಆದರೂ ಇದು ಇರುವಾಗ ಇದರಲ್ಲಿ ಅಂತರ್ಯಾಮಿಯಾಗಿದ್ದು ಪರಮಾತ್ಮನು ಇದರ ಕಾರ್ಯಗಳೆಲ್ಲ ಸಾಗುವಂತೆ ಪ್ರೇರಿಸುತ್ತಿರುತ್ತಾನೆ.

"ನನ್ನ ಕೀರ್ತಿಯು ಪರ್ವತದ ಮೇಲುಗಡೆಯಂತೆ ಉನ್ನತವಾಗಿರುತ್ತದೆ., ಪರಮಾತ್ಮನ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿ, ಎಲ್ಲವನ್ನೂ ಮೀರಿಸಿರುತ್ತದೆ. ಆತನಿಗೆ ಸಮರಾದವರಾಗಲಿ ಹೆಚ್ಚಿನವರಾಗಲಿ ಇಲ್ಲವೇ ಇಲ್ಲ.

"ಸೂರ್ಯನಲ್ಲಿ ಆತ್ಮತತ್ತ್ವವು ಅತ್ಯಂತಪರಿಶುದ್ಧವಾಗಿ, ಅಮೃತರೂಪವಾಗಿರುವಂತೆಯೇ ನಾನೂ ಊರ್ಧ್ವಪವಿತ್ರನು." ಎಲ್ಲದಕ್ಕೂ ಪರಮಾತ್ಮನೇ ಮೂಲಕಾರಣನು, ಆದರೂ ಆತನು ಶುದ್ಧನಾಗಿಯೇ ಇರುತ್ತಾನೆ, ಸಂಸಾರ ವೃಕ್ಷಕ್ಕೆ ಕಾರಣನೆಂಬುದರಿಂದ ಆತ್ಮನಲ್ಲಿ ಯಾವ ಅಶುದ್ಧಿಯೂ ಇಲ್ಲ.

"ನಾನು ಕಾಂತಿಯುಕ್ತವಾದ ಧನವು." ಹೇಗೆ ಹಣವು ಇಹಸುಖಕ್ಕೆ ಕಾರಣ ವಾಗಿರುವದೋ ಅದರಂತೆ ಪರಮಾತ್ಮನು ನಿತ್ಯಾನಂದರೂಪವಾದ ಮೋಕ್ಷಸುಖಕ್ಕೆ

ಕಾರಣನಾಗಿರುತ್ತಾನೆ. ಆತನ ಕಾಂತಿಯು ಎಂದೆಂದಿಗೂ ಅಚ್ಚಳಿಯದೆ ಇರುತ್ತದೆ, ಲೌಕಿಕಧನಕ್ಕೆ ತುಕ್ಕುಹಿಡಿಯುವಂತೆ ಅದಕ್ಕೆ ಯಾವ ಕಲಂಕವೂ ಹತ್ತುವಹಾಗಿಲ್ಲ.

"ನಾನು ಉತ್ಕೃಷ್ಟವಾದ ಜ್ಞಾನವುಳ್ಳವನು." ಪರಮಾತ್ಮನೇ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಏರ್ಪಡಿಸುವ ಜ್ಞಾನಕೌಶಲವುಳ್ಳಾತನು, ಮತ್ತೆ ಯಾರಿಗೂ ಈ ಸರ್ವಜ್ಞತೆಯಿಲ್ಲ.

"ನಾನು ಅಮೃತಪ್ರೋಕ್ಷಿತನಾಗಿರುತ್ತೇನೆ." ಅಮೃತತ್ವವೆಂಬುದು ಪರಮಾತ್ಮನ ಸ್ವರೂಪವೇ ಆಗಿರುತ್ತದೆ, ಎಲ್ಲೆಲ್ಲಿಯೂ ಅಮೃತಸ್ವರೂಪನೇ; ಮರಣರಹಿತವಾದ ನಿತ್ಯಶುದ್ಧಸ್ವರೂಪವೇ ಆತನದು.

ಈವರೆಗೆ ಹೇಳಿದ್ದು ಮಂತ್ರದ ಭಾವಾರ್ಥವು. ಈ ಮಂತ್ರವನ್ನು ನಿತ್ಯವೂ ದ್ವಿಜನಾದವನು ಬ್ರಹ್ಮಯಜ್ಞರೂಪವಾಗಿ ಜಪಮಾಡತಕ್ಕದ್ದು. ಇದನ್ನು ಜಪಮಾಡುವದು ಅವನಿಗೆ ಚಿತ್ತ ಶುದ್ಧಿಯಾಗಿ ಉತ್ತಮವಾದ ಅರಿವು ಉಂಟಾಗುವದಕ್ಕೆ ಕಾರಣವಾಗುತ್ತದೆ. ಯಾವ ಕಾಮವೂ ಇಲ್ಲದೆ ವೇದೋಕ್ತಕರ್ಮಗಳನ್ನು ಮಾಡುತ್ತಾ, ಪರಬ್ರಹ್ಮವನ್ನೇ ತಿಳಿಯಬೇಕೆಂದು ಹಗಲೂ ಇರುಳೂ ಮನಸ್ಸಿನಲ್ಲಿ ಹಾತುವರಿಯುತ್ತಿರುವವನಿಗೆ ತ್ರಿಶಂಕುವಿಗೆ ತೋರಿ ಕೊಂಡಂತೆ ಉತ್ತಮವಾದ ಆರ್ಷದರ್ಶನವುಂಟಾಗುತ್ತದೆ. ಅಂಥ ಉತ್ತಮಾಧಿಕಾರಿಗೇ ಆತ್ಮಜ್ಞಾನವುಂಟಾಗಿ ಆತ್ಮನಿಷ್ಠೆಯಿಂದ ಮೇಲೆ ಹೇಳಿದ ಅಭಿಪ್ರಾಯದ ಸ್ವರೂಪವು ಪ್ರಾಪ್ತವಾಗುವದು.

## 5. ದೇವತೆಗಳಲ್ಲಿ ಪ್ರಾರ್ಥನೆ

**ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ । ಭದ್ರಂ**
**ಪಶ್ಯೇಮಾಕ್ಷಭಿರ್ಯಜತ್ರಾಃ ॥ ಸ್ಥಿರೈರಙ್ಗೈಸ್ತುಷ್ಟುವಾಂಸಸ್ತನೂಭಿಃ । ವ್ಯಶೇಮ**
**ದೇವಹಿತಂ ಯದಾಯುಃ । ಸ್ವಸ್ತಿ ನ ಇನ್ದ್ರೋ ವೃದ್ಧಶ್ರವಾಃ । ಸ್ವಸ್ತಿ ನಃ ಪೂಷಾ**
**ವಿಶ್ವವೇದಾಃ । ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ। ಸ್ವಸ್ತಿ ನೋ**
**ಬೃಹಸ್ಪತಿರ್ದಧಾತು ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥5॥**

ದೇವತೆಗಳಿರ, ನಾವು ಕಲ್ಯಾಣವನ್ನೇ ಕಿವಿಗಳಿಂದ ಕೇಳುವಂತಾಗಲಿ! ಯಾಗಮಾಡುತ್ತಿರುವ ನಾವು ಕಣ್ಣುಗಳಿಂದ ಕಲ್ಯಾಣವನ್ನೇ ನೋಡುವಂತಾಗಲಿ! ಸ್ಥಿರವಾದ ಅವಯವಗಳಿಂದೊಡಗೂಡಿದ ಶರೀರಗಳುಳ್ಳವರಾಗಿ ನಿಮ್ಮನ್ನು ಸ್ತುತಿಸುತ್ತಾ ದೇವನು ಕೊಟ್ಟ ಆಯುಸ್ಸನ್ನು ಪಡೆಯುವಂತಾಗಲಿ! ಹಿರಿಯರು ಕೇಳುತ್ತಿರುವ ಇಂದ್ರನು ನಮಗೆ ಸ್ವಸ್ತಿಯನ್ನುಂಟುಮಾಡಲಿ! ಎಲ್ಲವನ್ನೂ ಬಲ್ಲ ಪೂಷನು ನಮಗೆ ಸ್ವಸ್ತಿಯನ್ನುಂಟುಮಾಡಲಿ! ಅಹಿಂಸೆಯನ್ನು ಕಾಪಾಡುವ ಹಳಿಯಂತಿರುವ ತಾರ್ಕ್ಷ್ಯನು ನಮಗೆ ಸ್ವಸ್ತಿಯನ್ನುಂಟು ಮಾಡಲಿ! ಬೃಹಸ್ಪತಿಯು ನಮಗೆ ಸ್ವಸ್ತಿಯನ್ನುಂಟುಮಾಡಲಿ!

ಮುಮುಕ್ಷುವಾದವನು ದೇವತೆಗಳಿಂದ ಅನುಗ್ರಹವನ್ನು ಪಡೆದು ನಿರ್ವಿಘ್ನವಾಗಿ ತತ್ತ್ವವಿಚಾರವನ್ನು ಸಾಧಿಸಿಕೊಳ್ಳಬೇಕಾಗಿರುತ್ತದೆ. ಏಕೆಂದರೆ ದೇವತೆಗಳು ಮಹಾಮಹಿಮ ರಾದ್ದರಿಂದ ತಮ್ಮ ಭಕ್ತರಾದವರಿಗೆ ಒಳ್ಳೆಯ ದಾರಿಯಲ್ಲಿ ಹೋಗುವ ಬುದ್ಧಿಯನ್ನು ಕೊಡುವದಕ್ಕಾಗಲಿ ಇಲ್ಲದವರನ್ನು ಕಾಮಾದಿಗಳಿಂದ ತಪ್ಪುಹಾದಿಗೆ ಒಯ್ಯುವದಕ್ಕಾಗಲಿ ಸಮರ್ಥರಾಗಿರುತ್ತಾರೆ. ನಿಜವಾಗಿ ನೋಡಿದರೆ ದೇವತೆಗಳೆಂಬವರೂ ಪರಮೇಶ್ವರನ ವಿಭೂತಿಯೇ ಆಗಿದ್ದರೂ ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆಯುವವರೆಗೆ ಅವರೆಲ್ಲರೂ ಬೇರೆಬೇರೆಯಾಗಿಯೇ ಇರುತ್ತಾರೆ, ಅವರಿಂದ ಬೇರೆಬೇರೆಯ ಅನುಗ್ರಹವೂ ಆಗಬೇಕಾಗಿರುತ್ತದೆ.

ಮಂತ್ರದಲ್ಲಿ ದೇವತೆಗಳ ಸಾಮಾನ್ಯಪ್ರಾರ್ಥನೆ, ವಿಶೇಷಪ್ರಾರ್ಥನೆ–ಎಂದು ಎರಡು ಭಾಗಗಳಿವೆ. ಸಾಮಾನ್ಯಪ್ರಾರ್ಥನೆಯ ಭಾವವೇನೆಂದರೆ: "ಎಲೈ ದೇವತೆಗಳಿರ, ನಾವು ಒಳ್ಳೆಯದನ್ನೇ ಕೇಳಬೇಕು, ಒಳ್ಳೆಯದನ್ನೇ ಕಾಣಬೇಕು–ಹಾಗೆ ಅನುಗ್ರಹಿಸಿರಿ. ನಾವು ಯಾವಾಗಲೂ ದೃಢಕಾಯರಾಗಿದ್ದುಕೊಂಡು ನಿಮ್ಮನ್ನು ಬಹುಕಾಲ ಸ್ತೋತ್ರಮಾಡುತ್ತಾ ಬಾಳಬೇಕು, ನೀವು ನಮಗೆ ಬ್ರಹ್ಮನು ಕೊಟ್ಟಿರುವ ಆಯುಸ್ಸನ್ನು ಪೂರ್ತಿಯಾಗಿ ಪಡೆದುಬಾಳುವಂತೆ ಅನುಗ್ರಹಿಸಬೇಕು. ಹೀಗೆ ನೀವು ದಯವಿಟ್ಟು ನಡೆಯಿಸಿಕೊಡಿರಿ".

ಮನುಷ್ಯನಿಗೆ ಶರೀರವು ಆರೋಗ್ಯದಿಂದಲೂ ಬಲದಿಂದಲೂ ಕೂಡಿದ್ದರೆ ಮಾತ್ರ ಧರ್ಮವನ್ನು ಮಾಡಬಹುದು, ಪುಣ್ಯವನ್ನು ಗಳಿಸಬಹುದು, ಇಹಪರಸುಖವನ್ನು ಪಡೆಯಬಹುದು. ಇದು ಕರ್ಮಕಾಂಡಪ್ರತಿಪಾದ್ಯವಾದ ಫಲವನ್ನು ಪಡೆಯಬೇಕೆನ್ನು ವವರಿಗೇ ಅಲ್ಲದೆ ಮುಮುಕ್ಷುಗಳಿಗೂ ಅನ್ವಯಿಸುತ್ತದೆ. ಏಕೆಂದರೆ ಮುಮುಕ್ಷುಗಳಿಗೆ ತತ್ತ್ವವಿಚಾರವೇ ಕಿವಿಗೆ ಬೀಳುತ್ತಿರುವದು, ಸಾಧುಗಳಾದವರ ಮತ್ತು ಪುಣ್ಯಕ್ಷೇತ್ರಗಳ ದರ್ಶನವಾಗುತ್ತಿರುವದು, ದೇವತಾರಾಧನೆಯನ್ನು ಮಾಡಿ ಚಿರಕಾಲ ಬಾಳಿ ತತ್ತ್ವವಿಚಾರದಿಂದ ಕೃತಾರ್ಥರಾಗುವದು–ಇದೆಲ್ಲವೂ ಅವರಿಗೆ ದೇವತೆಗಳ ಅನುಗ್ರಹದಿಂದಲೇ ಆಗಬೇಕಾಗಿರುತ್ತದೆ. ಆದ್ದರಿಂದ ಮಂಗಳಕರವಾಕ್ಯಗಳ ಶ್ರವಣ, ಮಂಗಳಕರವಸ್ತುಗಳ ಮತ್ತು ಜನರ ದರ್ಶನ, ಚಿರಾಯುಸ್ಸು, ದೇವತಾರಾಧನೆಯಿಂದ ಚಿತ್ತಶುದ್ಧಿ–ಇವೆಲ್ಲವನ್ನೂ ಅನುಗ್ರಹಿಸಬೇಕೆಂದು ದೇವತೆಗಳನ್ನು ಇಲ್ಲಿ ಪ್ರಾರ್ಥಿಸಿರುತ್ತದೆ.

ಎರಡನೆಯ ಭಾಗವಾದ ವಿಶೇಷಪ್ರಾರ್ಥನೆಯಲ್ಲಿ ಇಂದ್ರ, ಪೂಷ, ತಾರ್ಕ್ಷ್ಯ, ಬೃಹಸ್ಪತಿ– ಈ ನಾಲ್ಕು ದೇವತೆಗಳ ಪ್ರಾರ್ಥನೆಯಿದೆ. ಇಂದ್ರನು ಶಾಸ್ತ್ರಾಧ್ಯಯನ, ಶಾಸ್ತ್ರಶ್ರವಣ, ಶ್ರವಣದಂತೆ ಅನುಷ್ಠಾನ–ಇವೆಲ್ಲಕ್ಕೂ ಅನುಕೂಲವಾಗುವಂತೆ ಬಲವನ್ನು ಕೊಟ್ಟು ಕಾಪಾಡಲಿ!– ಎಂದು ಪ್ರಾರ್ಥಿಸಿರುತ್ತದೆ. ಸಮಸ್ತವನ್ನೂ ಬಲ್ಲ ಪೂಷನು ನಮ್ಮ ಬುದ್ಧಿಸ್ವರೂಪವನ್ನೂ ಬಲ್ಲವನಾದ್ದರಿಂದ ತತ್ತ್ವವು ಹೊಳೆಯುವದಕ್ಕೆ ಚಿತ್ತ ಸಂಸ್ಕಾರವನ್ನು

ಕೊಡಲಿ!-ಎಂದು ಪ್ರಾರ್ಥಿಸಿರುತ್ತದೆ. ತಾರ್ಕ್ಷ್ಯನು, ಗರುಡನು, ಆಧಿಭೌತಿಕವಾಗಿ ಉಂಟಾಗುವ ಹಿಂಸೆಯನ್ನೆಲ್ಲ ತಪ್ಪಿಸಿ ನಮ್ಮನ್ನು ತತ್ತ್ವನಿರತರನ್ನಾಗಿ ಮಾಡಲಿ!-ಎಂದು ಪ್ರಾರ್ಥಿಸಿದೆ. ಬೃಹಸ್ಪತಿಯು ಬ್ರಹ್ಮವರ್ಚಸ್ಸನ್ನು ಕೊಟ್ಟು ಕಾಪಾಡಿ ಅನುಗ್ರಹಿಸಿ ಕಾಪಾಡಲಿ!-ಎಂದು ಪ್ರಾರ್ಥಿಸಿರುತ್ತದೆ.

ದೇವತೆಗಳು ನಮ್ಮ ದೇಹವನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ಸರಿಯಾದ ಸ್ಥಿತಿಯಲ್ಲಿಟ್ಟು ಸಾತ್ತ್ವಿಕವಾದ ಮಾರ್ಗದಲ್ಲಿಯೇ ನಡೆಯುವಂತೆಯೂ ಸಾಧುಸೇವನ, ಸಚ್ಛಾಸ್ತ್ರಶ್ರವಣ, ತತ್ತ್ವಮನನ, ನಿದಿಧ್ಯಾಸನಾದಿಗಳೂ ದೈವಭಕ್ತಿಯೂ ಸತತವಾಗಿರುವಂತೆ ಅನುಗ್ರಹಿಸಿದರೆ ತತ್ತ್ವಜ್ಞಾನವು ವಶವಾಗುವದರಲ್ಲಿ ಸಂದೇಹವೇನು? ಆದ್ದರಿಂದ ಸರ್ವದೇವಮಯನಾಗಿರುವ ಪರಮೇಶ್ವರನನ್ನು ನಾವು ನಿತ್ಯವೂ ಅನನ್ಯಭಕ್ತಿಯಿಂದ ಸೇವಿಸತಕ್ಕದ್ದು ಕಲ್ಯಾಣಪ್ರದವಾಗಿರುತ್ತದೆ.

## 6. "ಪೂರ್ಣ" ಸ್ವರೂಪ

**ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥6॥**

ಅದು ಪೂರ್ಣವು, ಇದು ಪೂರ್ಣವು, ಪೂರ್ಣದಿಂದ ಪೂರ್ಣವು ಎದ್ದುಬರುತ್ತದೆ. ಪೂರ್ಣದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿದುಕೊಳ್ಳುತ್ತದೆ.

ಪರಮಾರ್ಥವೆಂಬುದು ಯಾವಾಗಲೂ ತನ್ನ ಸ್ವರೂಪವನ್ನು ಬಿಟ್ಟು ಕದಲುವದಿಲ್ಲ. ಅದು ಯಾವಾಗಲೂ ಪರಿಪೂರ್ಣವಾಗಿ ತನ್ನ ಸ್ವರೂಪದಿಂದಲೇ ಇರುತ್ತದೆ. ಅದು ಹೆಚ್ಚುವದಿಲ್ಲ, ಕುಂದುವದಿಲ್ಲ, ಹಿಗ್ಗುವದಿಲ್ಲ, ಕುಗ್ಗುವದಿಲ್ಲ.

ಪೂರ್ಣವೆಂದರೆ ವ್ಯಾಪಕವಾದದ್ದು, ಯಾವದೊಂದಕ್ಕಿಂತಲೂ ಬೇರೆಯಾಗಿ ತಾನೇ ಇರುವದಿಲ್ಲ, ಸರ್ವಾತ್ಮಕವಾದದ್ದು. ಪರಬ್ರಹ್ಮವು ತನ್ನ ಸ್ವರೂಪದಿಂದ ಪೂರ್ಣವಾಗಿರುತ್ತದೆ. ಅದು ನಾಮರೂಪಗಳ ವ್ಯವಹಾರಕ್ಕೆ ವಿಷಯವಾಗಿರುವಾಗಲೂ ಪೂರ್ಣವಾಗಿಯೇ ಇರುತ್ತದೆ. ಉಪಾಧಿಗಳಿಲ್ಲದಾಗಲೂ ಉಪಾಧಿಗಳಿರುವಾಗಲೂ ಅದು ಪೂರ್ಣವೇ, ಅದರ ಪೂರ್ಣತ್ವಕ್ಕೆ ಯಾವ ಹಾನಿಯೂ ಇರುವದಿಲ್ಲ. ಕಾರಣರೂಪದಲ್ಲಿರುವಾಗಲೂ ಅದು ಪೂರ್ಣವೇ, ಕಾರ್ಯರೂಪವಾಗಿ ತೋರುವಾಗಲೂ ಪೂರ್ಣವೇ; ಕಾರ್ಯರೂಪವಾಗಿರುವಾಗ ನಾಮರೂಪಗಳ ಕಟ್ಟಿಗೆ ಸಿಕ್ಕದಂತೆ ತೋರುತ್ತಿದ್ದರೂ ನಿಜವಾಗಿ ಅದು ತನ್ನ ಸ್ವರೂಪದಿಂದ ಪೂರ್ಣವಾಗಿಯೇ ಇರುತ್ತದೆ.

ಯಾರು ಈಗ ನಾಮರೂಪಗಳೆಂಬ ಉಪಾಧಿಯ ಸಂಪರ್ಕದಿಂದ ಅಪೂರ್ಣವಾಗಿ ತೋರುತ್ತಿದ್ದರೂ ನಿಜವಾಗಿ ಇದು ಪೂರ್ಣವೇ ಎಂದು ಸರಿಯಾಗಿ ಅರಿತುಕೊಳ್ಳುವರೋ ಅವರು ತಮ್ಮ ಅವಿದ್ಯಾಕೃತವಾದ ಅಪೂರ್ಣರೂಪವನ್ನು ಆ ಅರಿವಿನಿಂದ ತೊಲಗಿಸಿಕೊಂಡು ಕಾರ್ಯವಲ್ಲದ, ಕಾರಣವಲ್ಲದ, ಒಳಗಿಲ್ಲದ, ಹೊರಗಿಲ್ಲದ, ಸಚ್ಚಿದಾನಂದಘನವಾದ ಪೂರ್ಣಬ್ರಹ್ಮರೂಪವಾಗಿಯೇ ಇದ್ದುಬಿಡುತ್ತಾರೆ. ಆದ್ದರಿಂದ ತಪ್ಪುತಿಳಿವಳಿಕೆಯಿಂದಲೇ ಅಪೂರ್ಣತೆಯೇ ಹೊರತು ನಿಜವಾಗಿಯುಲ್ಲ, ಪರಮಾರ್ಥವಾಗಿ ಪೂರ್ಣಬ್ರಹ್ಮವೊಂದೇ ಇದ್ದುಕೊಂಡಿರುತ್ತದೆ.

## 7. ಸಾಧನ ಸಂಪತ್ತು

**ಆಪ್ಯಾಯನ್ತು ಮಮಾಙ್ಗಾನಿ ವಾಕ್ಪ್ರಾಣಶ್ಚಕ್ಷುಃ ಶ್ರೋತ್ರಮಥೋ ಬಲಮಿನ್ದ್ರಿಯಾಣಿ ಚ ಸರ್ವಾಣಿ । ಸರ್ವಂ ಬ್ರಹ್ಮೋಪನಿಷದಂ । ಮಾಹಂ ಬ್ರಹ್ಮ ನಿರಾಕುರ್ಯಾಂ ಮಾಮಾ ಬ್ರಹ್ಮ ನಿರಾಕರೋದನಿರಾಕರಣಮಸ್ತ್ವನಿರಾಕರಣಂ ಮೇ ಅಸ್ತು । ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ ಮಯಿ ಸನ್ತು ತೇ ಮಯಿ ಸನ್ತು ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ॥7॥**

ವಾಕ್ಕು, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಬಲ, (ಮುಂತಾದ) ಎಲ್ಲಾ ಇಂದ್ರಿಯಗಳೂ ಬಲಿತುಕೊಳ್ಳಲಿ! ಎಲ್ಲವೂ ಉಪನಿಷತ್ತಿನ ಬ್ರಹ್ಮವು. ನಾನು ಬ್ರಹ್ಮವನ್ನು ನಿರಾಕರಣ ಮಾಡದಂತಿರಲಿ! ತನ್ನನ್ನು ಬ್ರಹ್ಮವು ನಿರಾಕರಿಸದಿರಲಿ! ಅನಿರಾಕರಣವಿರಲಿ, ನನಗೆ ಅನಿರಾಕರಣವಿರಲಿ! ಆ ಆತ್ಮನಲ್ಲಿ ನಿರತನಾದವನಲ್ಲಿ ಉಪನಿಷತ್ತುಗಳಲ್ಲಿ ಹೇಳಿದ ಧರ್ಮಗಳು ಯಾವವಿರುವವೋ ಅವು ನನ್ನಲ್ಲಿರಲಿ, ಅವು ನನ್ನಲ್ಲಿರಲಿ!

ಮುಮುಕ್ಷುವಾದವನಿಗೆ ಬೇಕಾದದ್ದು ಮುಖ್ಯವಾಗಿ ಸಾಧನಸಂಪತ್ತು. ಅದೊಂದಿದ್ದರೆ ಜ್ಞಾನವು ತಾನೇ ಸಿದ್ಧವಾಗುತ್ತದೆ; ಅದರಿಂದ ಅಜ್ಞಾನವು ತೊಲಗಿ ಮುಕ್ತಿಯು ಮತ್ತೆ ಯಾವ ಯತ್ನವೂ ಇಲ್ಲದೆಯೇ ಕೈವಶವಾಗುತ್ತದೆ. ಆದ್ದರಿಂದ ನಮಗೆ ಮುಕ್ತಿಯು ಬೇಕಾದರೆ ನಾವು ಬಯಸಬೇಕಾದದ್ದೇನು? ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧಾ, ಸಮಾಧಾನ–ಈ ಬಗೆಯ ಸಾಧನಗಳಿದ್ದ ಹೊರತು ಆತ್ಮನ ಕಡೆಗೆ ಮನಸ್ಸು ತಿರುಗುವಂತಿಲ್ಲ; ಆತ್ಮನ ಕಡೆಗೆ ಮನಸ್ಸು ತಿರುಗಿದ ಹೊರತು ಆತ್ಮಜ್ಞಾನವುಂಟಾಗುವಹಾಗಿಲ್ಲ. ಆದ್ದರಿಂದ ನಮಗೆ ಈ ಉಪನಿಷತ್ತಿನಲ್ಲಿ ಹೇಳಿದ ಸಾಧನಗಳು ಮೊದಲು ಉಂಟಾಗಲಿ! ಎಂದು ನಾವು ಬಯಸಬೇಕು. ಈ ಧರ್ಮಗಳು ನಮ್ಮಲ್ಲಿ ಮೊಳೆಯುವದಕ್ಕೆ ಮೂಲವಾಗಿರುವ ಪರಮಾತ್ಮಭಕ್ತಿಯು ಯಾವಾಗಲೂ ಇರಲಿ, ಪರಮಾತ್ಮನ ಅನುಗ್ರಹವು ನನ್ನ ಮೇಲೆ ಯಾವಾಗಲೂ ಇದ್ದುಕೊಂಡಿರಲಿ!–ಎಂದು ಯಾವಾಗಲೂ ಪ್ರಾರ್ಥಿಸುತ್ತಿರಬೇಕು.

ಈ ಶಮಾದಿಸಾಧನಗಳು ಸಾತ್ತ್ವಿಕನಾದ ಸಾಧಕನಲ್ಲಿ ಮಾತ್ರವೇ ಮೊಳಕೆಯಾಗುತ್ತವೆ. ಆದ್ದರಿಂದ ಸಾತ್ತ್ವಿಕವಾದ ಆಹಾರ, ವಿಹಾರ- ಮುಂತಾದವುಗಳಿಂದಲೇ ಇಂದ್ರಿಯಗಳನ್ನೂ ಮನಸ್ಸನ್ನೂ ಬೆಳೆಯಿಸಿಕೊಳ್ಳುತ್ತಿರಬೇಕು.

## 8. ಮನೋವಾಕ್ಕುಗಳ ಒಕ್ಕೂಟ

**ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಮಾವಿರಾವೀರ್ಮ ಏಧಿ । ವೇದಸ್ಯ ಮ ಆಣೀಸ್ಥಃ । ಶ್ರುತಂ ಮೇ ಮಾ ಪ್ರಹಾಸೀರನೇನಾಧೀತೇನಾಹೋರಾತ್ರಾನ್ಸಂದಧಾಮಿ । ಋತಂ ವದಿಷ್ಯಾಮಿ। ಸತ್ಯಂ ವದಿಷ್ಯಾಮಿ । ತನ್ಮಾಮವತು ತದ್ವಕ್ತಾರಮವತ್ವವತು ಮಾಮವತು ವಕ್ತಾರಮವತು ವಕ್ತಾರಮ್ ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥8॥**

ನನ್ನ ವಾಕ್ಕು ಮನಸ್ಸಿನಲ್ಲಿ ನಿಂತಿರಲಿ, ನನ್ನ ಮನಸ್ಸು ವಾಕ್ಕಿನಲ್ಲಿ ನಿಂತಿರಲಿ! ಪ್ರಕಟಸ್ವರೂಪನೆ, ನನಗೆ ಪ್ರಕಟನಾಗು! ಎಲೈ ವಾಙ್ಮನಸ್ಸುಗಳೇ, ವೇದವನ್ನು ನನ್ನಲ್ಲಿಗೆ ತರುವರಾಗಿರಿ! ನಾನು ಶ್ರವಣಮಾಡಿದ್ದು ಬಿಟ್ಟುಹೋಗದಿರಲಿ! ಈ ಅಧ್ಯಯನಮಾಡಿದ್ದನ್ನು ಹಗಲನ್ನೂ ಇರುಳನ್ನು ನಾನು ಕೂಡಿಸುವಂತಾಗಲಿ! ಋತವನ್ನು ಹೇಳುವಂತಾಗಲಿ, ಸತ್ಯವನ್ನೇ ನುಡಿಯುವಂತಾಗಲಿ! ಅದು ನನ್ನನ್ನು ಕಾಪಾಡಲಿ, ಅದು ಆಚಾರ್ಯನನ್ನು ಕಾಪಾಡಲಿ! ನನ್ನನ್ನು ಕಾಪಾಡಲಿ, ಆಚಾರ್ಯನನ್ನು ಕಾಪಾಡಲಿ, ಆಚಾರ್ಯನನ್ನು ಕಾಪಾಡಲಿ!

ತತ್ತ್ವವಿದ್ಯೆಯನ್ನು ಹೇಳುವ ವೇದವನ್ನು ಅಧ್ಯಯನ ಮಾಡುವಾಗ ವಾಕ್ಕೂ ಮನಸ್ಸೂ ಒಂದುಗೂಡಿರಬೇಕು; ಮನಸ್ಸೊಂದು ಕಡೆ, ಮಾತೊಂದು ಕಡೆ ಹೀಗೆ ಆಗದೆ ಇರಬೇಕು. ಯಾವ ಇಂದ್ರಿಯವೂ ನಮ್ಮನ್ನು ಹೊರಮುಖವಾಗಿ ಮಾಡಿ ವಾಗಿಂದ್ರಿಯಕ್ಕೂ ಮನಸ್ಸಿಗೂ ಇರಬೇಕಾದ ಈ ಸಂಬಂಧವನ್ನು ತಪ್ಪಿಸದಂತೆ ನಾವು ಎಚ್ಚರಿಕೆಯಿಂದಿರಬೇಕು. ಈ ವಿಷಯದಲ್ಲಿ ಪರಮೇಶ್ವರನು ನಮಗೆ ಅನುಗ್ರಹವನ್ನು ಮಾಡಲಿ!- ಎಂಬುದೇ ಇಲ್ಲಿ ಮಾಡಿರುವ ಪ್ರಾರ್ಥನೆ.

ಪರಮಾತ್ಮತತ್ತ್ವವು ತಾನು ತನ್ನ ರೂಪದಿಂದ ಸ್ವಯಂಪ್ರಕಾಶವಾಗಿರುವದರಿಂದ ಅದಕ್ಕೆ ಪ್ರಕಟ, ಅಪ್ರಕಟ-ಎಂಬ ರೂಪಭೇದಗಳಿರುವದಿಲ್ಲ. ಆದರೂ ನಾವು ವಿಷಯತೃಷ್ಣೆಯ ಪ್ರಮಾದದಿಂದ ಅಜ್ಞಾನವಶರಾಗಿರುತ್ತೇವೆ. ಈ ಅಜ್ಞಾನವು ತೊಲಗಿ ಪರಮಾತ್ಮನ ಸ್ವರೂಪವು ನಮಗೆ ತೋರಿಕೊಳ್ಳಲಿ!- ಎಂಬುದು ಇಲ್ಲಿರುವ ಇನ್ನೊಂದು ಪ್ರಾರ್ಥನೆ.

ಮನೋವಾಕ್ಕುಗಳ ಹೊಂದುಗೆಯಿಂದ ಮನಸ್ಸಿನಲ್ಲಿ ನಮಗೆ ತೋರುವ ಋತವೆಂಬ ಪರಮಾರ್ಥಸ್ವರೂಪವೇ ವಾಕ್ಕಿನಮೂಲಕ ಸತ್ಯವನ್ನು ಹೊರಗೆಡವಲಿ, ಇದ್ದದ್ದು ಇದ್ದಂತೆ ಮಾತಿನಿಂದ ನಾವು ನುಡಿಯುವಂತಾಗಲಿ!- ಎಂಬುದು ಇಲ್ಲಿರುವ ಮೂರನೆಯ ಪ್ರಾರ್ಥನೆ.

ಹೀಗೆ ಮನೋವಾಕ್ಕುಗಳ ಹೊಂದುಗೆಯಿಂದ ಆಚಾರ್ಯರು ಉಪದೇಶಮಾಡಿ, ಶಿಷ್ಯನು ಗ್ರಹಿಸುವಂತೆ ಆದರೆ ಇಬ್ಬರೂ ಪರಮಾತ್ಮನ ಕೃಪೆಗೆ ಪಾತ್ರವಾದಂತೆ. ಹಾಗೆ ನಮ್ಮಿಬ್ಬರನ್ನೂ ಅನುಗ್ರಹಿಸಿ ಪರಮೇಶ್ವರನು ರಕ್ಷಿಸಲಿ!– ಎಂದು ಕೊನೆಯಲ್ಲಿ ಪ್ರಾರ್ಥಿಸಿದೆ.

## 9. ಸದ್ವಾಸನೆಗಳು

**ಓಂ ಭದ್ರಂ ನೋ ಅಪಿ ವಾತಯ ಮನಃ ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ॥9॥**

"ಮನವೆ, ನಮ್ಮಗಳ ಕಡೆಗೆ ಮಂಗಲವನ್ನೇ ಬೀಸಿಕೊಂಡು ಬಾ!"

ಮನಸ್ಸೆಂಬುದು ಒಂದು ಬಲುಸೂಕ್ಷ್ಮವಾದ ವಾಯುವಿದ್ದಂತೆ. ಗಾಳಿಯು ಎತ್ತ ಬೀಸಿದರೆ ಅತ್ತಲಿನ ವಾಸನೆಯನ್ನು ತನ್ನೊಡನೆ ಒಯ್ಯುತ್ತದೆಯಲ್ಲವೆ? ಇದರಂತೆ ಮನಸ್ಸೆಂಬುದೂ ಯಾವ ಕಡೆಗೆ ಚಲಿಸಿದರೆ ಆ ವಿಷಯದ ವಾಸನೆಯನ್ನು ಬೀಸಿಕೊಂಡುಬರುತ್ತದೆ.

ಮುಮುಕ್ಷುವಾದವನು ತನ್ನ ಮನಸ್ಸಿಗೆ ಆಗಿಂದಾಗ್ಗೆ ಎಚ್ಚರಿಕೆಕೊಡುತ್ತಲಿರಬೇಕು. ಸಾತ್ತ್ವಿಕರ ಸೇವೆ, ಕ್ಷೇತ್ರಗಳ ವಾಸ, ಸದ್ವಿಚಾರ, ಭಗವಂತನ ಧ್ಯಾನ–ಮುಂತಾದವುಗಳಿಗೇ ಒಲಿಯುವಂತೆ ಮನಸ್ಸನ್ನು ಸಜ್ಜುಗೊಳಿಸುತ್ತಿರಬೇಕು. ಹೀಗಾದರೆ ಮಾತ್ರ ಸದ್ಗುರುಗಳು ಬೋಧಿಸುವ ತತ್ತ್ವವು ಮನದಲ್ಲಿ ಮೂಡುತ್ತದೆ.

ಯಾವ ಮನಸ್ಸಿನಲ್ಲಿ ಸದ್ವಾಸನೆಗಳು ಮನೆಮಾಡಿಕೊಂಡಿರುವವೋ ಆ ಮನಸ್ಸಿನಲ್ಲಿ ವಿಷಯಗಳ ಕಾಮವು ಎದ್ದುಕೊಳ್ಳುವದಿಲ್ಲ; ಆ ಮನಸ್ಸಿರುವಾತನಿಗೆ ಅಸತ್ಸಂಕಲ್ಪಗಳು ಉಂಟಾಗುವದಿಲ್ಲ, ಆ ಮನಸ್ಸು **ಶುದ್ಧ**ವಾಗಿರುತ್ತದೆ ಎನ್ನುವರು. ಯಾವ ಮನಸ್ಸಿನಲ್ಲಿ ಅಸದ್ವಾಸನೆಗಳು ಮನೆಮಾಇಡಕೊಂಡಿರುವವೋ ಆ ಮನಸ್ಸಿನಲ್ಲಿ ವಿಷಯಗಳ ಕಾಮವು ಆಗಾಗ್ಗೆ ಎದ್ದುಕೊಳ್ಳುತ್ತಿರುತ್ತದೆ; ಆ ಮನಸ್ಸಿರುವಾತನಿಗೆ ಅಸತ್ಸಂಕಲ್ಪಗಳು ಉಂಟಾಗುತ್ತಲೇ ಇರುತ್ತವೆ. ಅದನ್ನು **ಅಶುದ್ಧ** ಮನಸ್ಸು ಎನ್ನುತ್ತಾರೆ.

ಅಶುದ್ಧ ಮನಸ್ಸಿಗೆ ಕಲ್ಯಾಣವು ಎಂದಿಗೂ ರುಚಿಸದು, ಅದು ನಮಗೆ ಎಂದಿಗೂ ಕಲ್ಯಾಣವನ್ನುಂಟುಮಾಡದು. ಅಶುಚಿಯಾದ ಪ್ರದೇಶದಲ್ಲಿ ಮನೆಯುನ್ನು ಮಾಡಿಕೊಂಡಿರುವವರು ಮನೆಗಳಿಗೆ ಎಷ್ಟು ಕಿಟಕಿಗಳನ್ನಿಟ್ಟುಕೊಂಡಿದ್ದರೆ ತಾನೆ ಏನು ಪ್ರಯೋಜನ? ಕಿಟಕಿಗಳನ್ನು ಮುಚ್ಚಿಕೊಂಡರೆ ಒಳಗಿನ ವಾಯು ವಿಷಪೂರಿತವಾಗುತ್ತದೆ, ಅವುಗಳನ್ನು ತೆರೆದರೆ ಹೊರಗಿನ ವಾಯು ಕೆಟ್ಟವಾಸನೆಯನ್ನೇ ಒಳಕ್ಕೆ ತರುತ್ತದೆ.

ಪರಮಾತ್ಮನ ವಿಚಾರವು ಭದ್ರವಾದದ್ದು, ಮಂಗಲವಾದದ್ದು. ಆ ಕಲ್ಯಾಣ ತತ್ತ್ವದ ವಾಸನೆಯನ್ನೇ ಕೋರುವಂತೆ ಮುಮುಕ್ಷುವಾದವನು ಮನಸ್ಸನ್ನು ಸಜ್ಜುಗೊಳಿಸುತ್ತಿರಬೇಕು.

## 10. ಪರಮಾತ್ಮನಿಗೆ ಶರಣು

**ಓಂ ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ॥ ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ॥10॥**

"ಯಾವಾತನು ಮೊದಲು ಬ್ರಹ್ಮನನ್ನು ಸೃಷ್ಟಿಸುವನೋ ಯಾವಾತನು ಅವನಿಗೆ ವೇದಗಳನ್ನು ಕಳುಹಿಸಿಕೊಡುವನೋ, ಆತ್ಮಬುದ್ಧಿಪ್ರಕಾಶನಾದ ಆ ದೇವನನ್ನೇ ನಾನು ಶರಣುಹೊಂದಿರುತ್ತೇನೆ."

ಪರಮಾತ್ಮನು ಸೃಷ್ಟಿಯನ್ನು ಮಾಡುವಾಗ ಮೊದಲು ಹಿರಣ್ಯಗರ್ಭವನ್ನು ಸೃಷ್ಟಿಸುತ್ತಾನೆ. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ- ಇವುಗಳಲ್ಲಿ ಮಿಕ್ಕವರೆಲ್ಲರಿಗಿಂತಲೂ ಮಿಗಿಲಾದವನು ಹಿರಣ್ಯಗರ್ಭ. ಆತನನ್ನು ಸೃಷ್ಟಿಸಿದ ಬಳಿಕ ಪರಮಾತ್ಮನು ಅವನಿಗೆ ವೇದಗಳನ್ನು ಕಳುಹಿಸಿಕೊಡುತ್ತಾನೆ. ಆ ವೇದಗಳ ಬಲದಿಂದಲೇ ಹಿರಣ್ಯಗರ್ಭನು ಈ ಜಗತ್ತೆಲ್ಲವನ್ನೂ ಸೃಷ್ಟಿಸಿರುತ್ತಾನೆ. ಇದೇ ವೇದವಾದವು.

ಹಿರಣ್ಯಗರ್ಭನು ಸೃಷ್ಟಿಸಿದ ಈ ಜಗತ್ತಿನಲ್ಲಿರುವ ಜೀವರಿಗೆಲ್ಲ ಆ ಪರಮಾತ್ಮನು ಮೊದಲು ಕೊಟ್ಟಿರುವ ಜ್ಞಾನವೇ ಬಂಡವಾಳವು. ಹಿರಣ್ಯಗರ್ಭನು ಆ ಬಂಡವಾಳದಿಂದಲೇ ಮಿಕ್ಕವರಿಗೆಲ್ಲ ಧರ್ಮಜ್ಞಾನಾದಿಗಳನ್ನು ತಾರತಮ್ಯದಿಂದ ಕೊಟ್ಟಿರುತ್ತಾನೆ.

ಪರಮಾತ್ಮನು ಸ್ವಯಂದೇವನು, ಎಂದರೆ ಅವನಿಗೆ ಮತ್ತೊಬ್ಬರಿಂದ ಅರಿವಿನ ಪ್ರಕಾಶವು ಬಂದಿರುವದಿಲ್ಲ. ಆತ್ಮನು ಆತ್ಮಬುದ್ಧಿಪ್ರಕಾಶನು, ಎಂದರೆ ಹಿರಣ್ಯಗರ್ಭನ ಮತ್ತು ಅವನ ಮೂಲಕವಾಗಿ ಮಿಕ್ಕೆಲ್ಲ ಜೀವರುಗಳೆಲ್ಲರ, ಮನೋಬುದ್ಧಿಗಳನ್ನು ಬೆಳಗುತ್ತಿರುವವನು. ಆತನು ಅನುಗ್ರಹಿಸುವ ಆತ್ಮಬುದ್ಧಿಗಳ ಬೆಳಕಿನಿಂದಲೇ ನಾವು ಯಾವದನ್ನಾದರೂ ಅರಿಯುವದು. ಆದ್ದರಿಂದ ಆತನಿತ್ತ ಬುದ್ಧಿಯ ಬೆಳಕಿನಿಂದಲೇ ನಾವು ಆತನನ್ನು ಅರಿತುಕೊಳ್ಳಬೇಕಾಗಿದೆ.

ಪರಮಾರ್ಥವಾಗಿ ನೋಡಿದರೆ ಹಿರಣ್ಯಗರ್ಭನು ಪರಮಾತ್ಮನಿಗಿಂತ ಬೇರೆ ಅಲ್ಲವೇ ಅಲ್ಲ. ಪರಮಾತ್ಮನೇ ಪರಿಶುದ್ಧವಾದ ಉಪಾಧಿವಿಶೇಷದ ಕಣ್ಣಿನಿಂದ ನೋಡಿದಾಗ ಹಿರಣ್ಯಗರ್ಭನೆನಿಸಿಕೊಳ್ಳುತ್ತಾನೆ. ಆತನೇ ಅಶುದ್ಧವಾದ ಉಪಾಧಿಗಳಿಂದ ಮೇಲುಕೀಳೆಂಬ ತಾರತಮ್ಯವನ್ನು ಪಡೆದಂತಾಗಿ ಜೀವರುಗಳೆನಿಸಿಕೊಂಡಿರುತ್ತಾನೆ. ಇದೇ ಶಾಸ್ತ್ರದೃಷ್ಟಿ.

ಈ ದೃಷ್ಟಿಯಲ್ಲಿ ಪರಮಾತ್ಮನೇ ಹಿರಣ್ಯಗರ್ಭನಾಗಿ ತೋರುತ್ತಾನೆ. ಅವನಿಗೆ ತಿಳಿವಳಿಕೆಯನ್ನು ಕೊಡುವ ವೇದಗಳಾಗಿಯೂ ತೋರಿಕೊಳ್ಳುತ್ತಾನೆ-ಎಂದು ಮೇಲಿನ ಮಂತ್ರಾರ್ಥವನ್ನು ಮಾಡಿಕೊಳ್ಳಬೇಕಾಗುವದು. ಆಗ ಆತ್ಮನೇ ನಮ್ಮ ಆತ್ಮನಾಗಿಯೂ

ಇರುತ್ತಾನೆಂದೂ ಆತನಿಗಿಂತ ಬೇರೆಯಾಗಿ ವಿಶ್ವದಲ್ಲಿ ಯಾವದೊಂದೂ ಇಲ್ಲವೇ ಇಲ್ಲವೆಂದೂ ಹೇಳಿದಂತೆ ಆಗುತ್ತದೆ.

ಆ ಪರಮಾತ್ಮನು ಸ್ವಯಂಪ್ರಕಾಶನಾದ್ದರಿಂದ ಈಗಲೂ ಆತನ ಸ್ವರೂಪವನ್ನು ಅರಿಯುವದಕ್ಕೆ ಮತ್ತೊಂದು ಬೇಕಿರುವದೇ ಇಲ್ಲ. ಆದರೂ ನಾವು ಈಗಿನ ಅವಿವೇಕದ ಸ್ಥಿತಿಯಲ್ಲಿ ಉಪಯೋಗಿಸುತ್ತಿರುವ "ಅನಾತ್ಮದೃಷ್ಟಿ", "ಪರಾಗ್ದೃಷ್ಟಿ"– ಎಂಬ ಹೊರನೋಟವನ್ನು ಬಿಟ್ಟು ಆತ್ಮನನ್ನು ಅರಿಯುವದಕ್ಕೆ ಪ್ರಯತ್ನಮಾಡುವದು ಅತ್ಯಂತ ಅವಶ್ಯವು.

ವಿಷಯಗಳನ್ನೇ ನೋಡುವ ಈ ಅನಾತ್ಮದೃಷ್ಟಿಯು ಅಥವಾ ಪರಾಗ್ದೃಷ್ಟಿಯು, ಲೋಕದಲ್ಲಿರುವ ಜೀವರುಗಳಿಗೆಲ್ಲ ಸ್ವಾಭಾವಿಕವಾಗಿ ಅನಾದಿಯಾಗಿದ್ದುಕೊಂಡು ಬಿಟ್ಟಿರುವದರಿಂದ ಇದನ್ನು ಲೌಕಿಕದೃಷ್ಟಿಯೆಂದೂ ನಾನು ನನ್ನದೆಂಬ ವ್ಯವಹಾರಕ್ಕೆ ಬಳಸಬೇಕಾದದ್ದಾದ್ದರಿಂದ ಇದನ್ನು ವ್ಯಾವಹಾರಿಕದೃಷ್ಟಿಯೆಂದೂ ಕರೆಯುತ್ತಾರೆ. ಇದನ್ನು ಬಿಟ್ಟು ಆತ್ಮಬುದ್ಧಿಯ ದೃಷ್ಟಿಯಿಂದಲೇ ಪ್ರತ್ಯಗ್ದೃಷ್ಟಿಯೆಂಬ ಒಳನೋಟದಿಂದಲೇ, ನೋಡಿದರೆ ಪರಮಾತ್ಮನು ಕೂಡಲೆ ಪ್ರಕಾಶವಾಗುತ್ತಾನೆ. ಈ ದೃಷ್ಟಿಯೇ ಶಾಸ್ತ್ರದೃಷ್ಟಿಯು, ಇದೇ ಪರಮಾರ್ಥ ದೃಷ್ಟಿಯು. ಈ ಆತ್ಮಬುದ್ಧಿಯ ದೃಷ್ಟಿಯಿಂದ ನೋಡಿದಾಗ ತನ್ನ ಸ್ವರೂಪದಿಂದ ಕಾಣಿಸಿಕೊಳ್ಳುವದರಿಂದಲೂ ಪರಮಾತ್ಮನು ಆತ್ಮಬುದ್ಧಿಪ್ರಕಾಶನೆಂದೆನಿಸಿಕೊಂಡಿರುತ್ತಾನೆ.

ಯಾರಿಗೆ ವ್ಯವಹಾರದ ಬಂಧವನ್ನು ಕಳಚಿಕೊಳ್ಳಬೇಕೆಂದು ಇಚ್ಛೆಯಿರುವದೋ ಅವರು ಮುಮುಕ್ಷುಗಳು. ಮುಮುಕ್ಷುವಾದವರು ಮೊದಲು ಆತ್ಮಬುದ್ಧಿಯನ್ನು ಸಂಪಾದಿಸಿಕೊಳ್ಳಬೇಕು. ಇದಕ್ಕಾಗಿ ಪರಮಾತ್ಮನಿಗೇ ಶರಣುಹೋಗಬೇಕು. "ನನಗೆ ಪರಮಾತ್ಮಸ್ವರೂಪದ ಅರಿವೇ ಬೇಕು, ಆತನ ಸಾಯುಜ್ಯವೇ ಬೇಕು; ಹೊರಗಿನ ವಿಷಯಗಳ ಗೊಡವೆಯೇ ಬೇಡ" ಎಂದು ಯಾವ ತತ್ತ್ವದಲ್ಲಿ ಭಕ್ತಿಯಿಂದ ವಿಷಯಗಳಿಂದ ಹಿಮ್ಮೆಟ್ಟುವರೋ ಅಂಥ ವಿರಕ್ತರಾದ ಅನನ್ಯಭಕ್ತರುಗಳಿಗೆ ಆ ಪರಮಾತ್ಮನೇ ಹೃದಯದಲ್ಲಿದ್ದುಕೊಂಡು ಅಜ್ಞಾನದ ಕತ್ತಲೆಯನ್ನೆಲ್ಲ ತೊಲಗಿಸುತ್ತಾನೆ. ಆತ್ಮಬುದ್ಧಿಯೆಂಬ ದೀಪದ ಪ್ರಕಾಶದಿಂದ ತನ್ನ ಸ್ವರೂಪವನ್ನು ಅರಿತುಕೊಂಡಮಾತ್ರದಿಂದ ಅದರಲ್ಲಿಯೇ ಬೆರೆತುಹೋಗುವ ಪರಮಪುರುಷಾರ್ಥವನ್ನೂ ಅನುಗ್ರಹಿಸುತ್ತಾನೆ,

****

# 11. ಗುರು ನಮಸ್ಕಾರ

**ಓನ್ನಮೋ ಬ್ರಹ್ಮಾದಿಭ್ಯೋ ಬ್ರಹ್ಮವಿದ್ಯಾಸಂಪ್ರದಾಯಕರ್ತೃಭ್ಯೋ**
**ವಂಶರ್ಷಿಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ**

"ಬ್ರಹ್ಮನೇ ಮೊದಲಾದ ಬ್ರಹ್ಮವಿದ್ಯಾಸಂಪ್ರದಾಯಕರ್ತೃಗಳಾದ ವಂಶರ್ಷಿಗಳಿಗೆ ನಮಸ್ಕಾರ! ದೊಡ್ಡವರಿಗೆ ನಮಸ್ಕಾರ! ಗುರುಗಳಿಗೆ ನಮಸ್ಕಾರ!"

ಈ ವಾಕ್ಯವನ್ನು ವೇದಾಂತಪಾಠವನ್ನು ಮಾಡುವ ಮೊದಲೂ ಕೊನೆಯಲ್ಲಿಯೂ ಹೇಳುವ ಪದ್ಧತಿಯು ವೇದಾಂತಿಗಳಲ್ಲಿರುತ್ತದೆ.

ವಂಶರ್ಷಿಗಳೆಂದರೆ ಬ್ರಹ್ಮವಿದ್ಯೆಯನ್ನು ಗುರುಶಿಷ್ಯಪರಂಪರೆಯಿಂದ ಒಬ್ಬರಿಗೊಬ್ಬರು ಹೇಳಿಕೊಡುತ್ತಾಬಂದಿರುವ ಋಷಿಗಳು. ವಂಶವೆಂದರೆ ಬಿದಿರು. ಬಿದಿರುಗಳುವಿನಲ್ಲಿ ಗೆಣ್ಣುಗೆಣ್ಣುಗಳಾಗಿರುವಂತೆ ಈ ಪರಂಪರೆಯಲ್ಲಿ ಋಷಿಗಳು ಕೊನೆಯಿಂದ ಎಲ್ಲರಿಗೂ ಮೊದಲನೆಯವನಾದ ಹಿರಣ್ಯಗರ್ಭನವರೆಗಿನ ಒಂದು ವಂಶಕ್ಕೆ ಸೇರಿದವರಾಗಿರುತ್ತಾರೆ. ಬೃಹದಾರಣ್ಯಕದ ಎರಡನೆಯ ಅಧ್ಯಾಯ, ನಾಲ್ಕನೆಯ ಅಧ್ಯಾಯ, ಮತ್ತು ಆರನೆಯ ಅಧ್ಯಾಯಗಳ ಕೊನೆಯಲ್ಲಿ ಇಂಥ ವಂಶರ್ಷಿಗಳ ಪಟ್ಟಿಯನ್ನು ಕಾಣಬಹುದು.

ಈ ಋಷಿಗಳು ದೊಡ್ಡವರು; ಏಕೆಂದರೆ ಇವರು ಎಲ್ಲರಿಗೂ ದೊಡ್ಡದೆನಿಸಿಕೊಂಡಿರುವ, ಅಪರಿಚ್ಛಿನ್ನವಾದ, ಬ್ರಹ್ಮದ ವಿದ್ಯೆಯನ್ನು ತಾವೂ ಧಾರಣೆಮಾಡಿಕೊಂಡಿದ್ದು ಶಿಷ್ಯರ ಮೂಲಕವಾಗಿ ಲೋಕಕ್ಕೂ ಅನುಗ್ರಹಿಸಿರುತ್ತಾರೆ.

ಆದರೆ ಬ್ರಹ್ಮನಿಂದ ಹಿಡಿದು ನಮ್ಮನಮ್ಮ ನೇರಾದ ಗುರುಗಳವರೆಗೂ ದೊಡ್ಡವರೆನಿಸಿಕೊಂಡು ನಮಗೆ ಪೂಜ್ಯರಾಗಿರುವವರೆಲ್ಲ ಮಾಡಿದ ಮಹತ್ಕಾರ್ಯವೆಂದರೆ ವೇದಾಂತವಿದ್ಯೆಯನ್ನು ತಾವೂ ಸಂಪಾದಿಸಿ ನಮಗೂ ಅನುಗ್ರಹಿಸಿದ್ದೇ ಹೊರತು ಇವರಲ್ಲಿ ಯಾರೊಬ್ಬರೂ ವೇದಾಂತಕ್ಕೆ ಕರ್ತೃಗಳಲ್ಲ. ವೇದಾಂತವೆಂಬುದು ಯಾವನೋ ಒಬ್ಬ ಚತುರನು ತನ್ನ ಬುದ್ಧಿಯಿಂದ ಕಂಡುಹಿಡಿದ ತರ್ಕದ ದರ್ಶನವಲ್ಲ. ಈ ದರ್ಶನವು ಯಾವನೊಬ್ಬ ಗುರುವಿನ ಬೆಂಬಲವನ್ನೂ ಅಪೇಕ್ಷಿಸಿಕೊಂಡಿರುವದಿಲ್ಲ. ಸ್ವತಃ ಸಿದ್ಧವಾದ ಪರಬ್ರಹ್ಮವು ಯುಕ್ತ್ಯನುಭವಗಳ ಮೂಲಕವಾಗಿ ನಮಗೆ ಗೋಚರವಾಗಬೇಕಾಗಿದೆ; ಅದಕ್ಕೆ ಗುರುಗಳು ದ್ವಾರವಾಗಿರುತ್ತಾರೆ. ಅದಕ್ಕೆ ನಿಜವಾಗಿ ಯಾರೊಬ್ಬರ ಹಂಗೂ ಇರುವದಿಲ್ಲ, ಅದು ಸ್ವಯಂಪ್ರಕಾಶವಾಗಿರುತ್ತದೆ.

****

# ಆ. ಉಪನಿಷತ್ತುಗಳು-ಕಿರುಪರಿಚಯ

(ಶಿವಮೊಗ್ಗದ ಕರ್ಣಾಟಕಸಂಘದಲ್ಲಿ ತಾ॥ 12-5-37ರಲ್ಲಿ ಶ್ರೀ ಶ್ರೀ ಗಳವರು ಮಾಡಿದ ಒಂದು ಉಪನ್ಯಾಸದ ಸಾರ)

**ಉಪನಿಷತ್ತುಗಳು** ವೇದದ ಒಂದು ಭಾಗವಾದ ಆರಣ್ಯಕಗಳಲ್ಲಿವೆ. ಸಂಹಿತೆಯನ್ನೂ ಬ್ರಾಹ್ಮಣವನ್ನೂ ಮುಖ್ಯವಾಗಿ ಕರ್ಮಕ್ಕೆ ಉಪಯೋಗಿಸುತ್ತಾರೆ; ಆರಣ್ಯಕವು ವಿದ್ಯಾಪ್ರಧಾನವಾಗಿದೆ. ವಿದ್ಯೆಯಲ್ಲಿ ಮಾನಸಿಕಕ್ರಿಯಾರೂಪವಾದ ಉಪಾಸನೆಯೂ ವಸ್ತುತಂತ್ರವಾಗಿರುವ ಆತ್ಮಜ್ಞಾನವೂ ಅಡಕವಾಗಿರುತ್ತವೆ.

ಆರಣ್ಯಕವೆಂದರೆ ಅರಣ್ಯದಲ್ಲಿ ಅಧ್ಯಯನಮಾಡತಕ್ಕ ಭಾಗವೆಂದು ಅಕ್ಷರಾರ್ಥವಾಗುತ್ತದೆ. ಆದರೆ ಈ ಅರಣ್ಯವೆಂಬ ಶಬ್ದಕ್ಕೆ ಈಗ ನಮಗೆ ಆಗುವ "ಕಾಡು" ಎಂಬ ಅರ್ಥವನ್ನು ಮಾತ್ರ ಮನಸ್ಸಿಗೆ ತಂದುಕೊಳ್ಳಬಾರದು. ಹೇಗೆ ಧನಸಂಪಾದನೆ, ಅಧಿಕಾರಸಂಪಾದನೆ, ರಾಜ್ಯಸಂಪಾದನೆ- ಮುಂತಾದ ಇಹಲೋಕದ ಸಂಪತ್ತಿಗಾಗಿ ನಗರದ ಜನಗಳು ಹೊಡೆದಾಡುತ್ತಿದ್ದರೋ ಹಾಗೆಯೇ ಅರಣ್ಯದ ಪವಿತ್ರವಾದ ಆಶ್ರಮಗಳಲ್ಲಿ ಶಾಂತರಾಗಿ ಇದ್ದುಕೊಂಡು ಸತ್ಯಾನ್ವೇಷಣೆಯಲ್ಲಿಯೇ ಕೆಲವರು ಮಹನೀಯರು ಸತ್ಕಾಲಕ್ಷೇಪವನ್ನು ಮಾಡುತ್ತಿದ್ದರು. ಅವರ ವಿಚಾರ ಪರಂಪರೆಗಳು ಆರಣ್ಯಕವೆಂಬ ವೇದಭಾಗದಲ್ಲಿರುತ್ತವೆ.

ಈ ಆರಣ್ಯಕದಲ್ಲಿ ಅತ್ಯಂತಸಾರವತ್ತಾದ ಭಾಗಗಳು ಉಪನಿಷತ್ತುಗಳಾಗಿರುತ್ತವೆ. ಉಪಾಸನೆಯೂ ಅದಕ್ಕಿಂತಲೂ ಮಿಗಿಲೆನಿಸಿದ ಬ್ರಹ್ಮಜ್ಞಾನವೂ ಈ ಉಪನಿಷತ್ತು ಗಳಲ್ಲಿವೆ. **ಉಪನಿಷತ್ತು** ಎಂದರೆ ರಹಸ್ಯವು; ರಹಸ್ಯವೆಂದರೆ ಒಳತಿರುಳು, ಸಾಮಾನ್ಯವಾಗಿ ಸ್ಥೂಲವಿಚಾರಕ್ಕೆ ದಕ್ಕದೆ ಇರುವ ತತ್ತ್ವವು. ವಿದ್ಯುಚ್ಛಕ್ತಿಯು ವಾಯುಮಂಡಲದಲ್ಲಿ ಎಲ್ಲೆಲ್ಲಿಯೂ ಇದ್ದರೂ ಅದನ್ನು ವ್ಯಕ್ತರೂಪಕ್ಕೆ ತರುವವರೆಗೆ ಹೇಗೆ ಸಾಮಾನ್ಯಜನರಿಗೆ ಅದರ ಇರುವಿಕೆಯು ಮನಸ್ಸಿಗೆ ಹತ್ತದೆ ಇರುವದೋ ಹಾಗೆಯೇ ಈ ಉಪನಿಷತ್ತುಗಳು ಹೇಳುವ ತತ್ತ್ವವು ಅತ್ಯಂತವಾಗಿ ಸರ್ವವ್ಯಾಪಿಯಾಗಿರುತ್ತಿದ್ದರೂ ಉಪನಿಷತ್ತಿನ ಋಷಿಗಳೂ ಅವರ ಪರಂಪರೆಯಿಂದ ಬ್ರಹ್ಮವಿದ್ಯೆಯನ್ನು ಸಂಪಾದಿಸಿದ ಮಹನೀಯರೂ ತಿಳಿಸಿಕೊಡುವವರೆಗೆ ಅದು ನಮಗೆ ಪರಮರಹಸ್ಯವಾಗಿಬಿಟ್ಟಿರುತ್ತದೆ. ಈ ರಹಸ್ಯವು ವಿದ್ಯುಚ್ಛಕ್ತಿಯೇ ಮುಂತಾದವುಗಳಂತೆ ಪ್ರತ್ಯಕ್ಷಪ್ರಮಾಣಕ್ಕೆ ಗೋಚರವಾಗುವದಿಲ್ಲ. ಅನುಮಾನಪ್ರಮಾಣದಿಂದ ಸಿದ್ಧಪಡಿಸುವದಕ್ಕೆ ಬರುವಂಥದ್ದಲ್ಲ; ಆದ್ದರಿಂದ ಅತೀಂದ್ರಿಯವಾದ ಈ ತತ್ತ್ವವು ರಹಸ್ಯಗಳಲ್ಲೆಲ್ಲ ರಹಸ್ಯವಾಗಿರುತ್ತದೆ. ಅದನ್ನು ತಿಳಿಸಿಕೊಡುವದರಿಂದಲೇ ಈ ವೇದಭಾಗಕ್ಕೆ **ಉಪನಿಷತ್ತು** ಎಂಬ ಅನ್ವರ್ಥನಾಮವು ಬಂದಿರುತ್ತದೆ.

ಉಪನಿಷತ್ತು ಈ ಪರಮಾರ್ಥತತ್ತ್ವವನ್ನು ತಿಳಿಸುವದಕ್ಕಾಗಿ ಹಾಕಿಕೊಂಡಿರುವ ಕಥಾಸಂವಿಧಾನಗಳನ್ನೇ ಲಕ್ಷ್ಯದಲ್ಲಿಟ್ಟುನೋಡಿದರೆ ಆ ಪ್ರಾಚೀನಕಾಲದಲ್ಲಿ ಜನರಿಗೆ ಬ್ರಹ್ಮವಿದ್ಯೆಯಲ್ಲಿ ಅತ್ಯಂತವಾಗಿ ಮಿಗಿಲಿಲ್ಲದಷ್ಟು ಗೌರವವೂ ಅದನ್ನು ಸಂಪಾದಿಸುವದರಲ್ಲಿ ಆದರವೂ ಇತ್ತೆಂದು ಸ್ಪಷ್ಟವಾಗುತ್ತದೆ. ಆಗ ಹುಡುಗರು, ದೊಡ್ಡವರು, ಹೆಂಗಸರು ಗಂಡಸರು, ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು, ಧನವಂತರು ದರಿದ್ರರು, ರಾಜರು ಪ್ರಜೆಗಳು– ಎಲ್ಲರೂ ಈ ವಿಚಾರದಲ್ಲಿಯೇ ಮುಳುಗಿರುತ್ತಿದ್ದರು. ಕೇವಲ ಉಪಾಸನೆಯ ವಿಚಾರದಲ್ಲಿಯೇ ಕಾಲವನ್ನು ಕಳೆಯುತ್ತಿದ್ದ ಅರಣ್ಯ ನಿವಾಸಿಗಳಾದ ಋಷಿಗಳ ಸ್ಥಾನದಲ್ಲಿಯೇ ಅಲ್ಲದೆ, ಪ್ರಜಾಪಾಲನತತ್ಪರರಾದ ರಾಜರುಗಳ ಸಭೆಯಲ್ಲಿಯೂ, ಕರ್ಮಾನುಷ್ಠಾನಪರರಾದ ವೈದಿಕರ ಯಜ್ಞದ ಸದಸ್ಸುಗಳಲ್ಲಿಯೂ, ಸಾತ್ತ್ವಿಕರಾದ ದಂಪತಿಗಳ ವಿವಿಕ್ತಸಂಭಾಷಣೆಯಲ್ಲಿಯೂ ಈ ಬ್ರಹ್ಮವಿಚಾರವು ನಡೆಯುತ್ತಿತ್ತು– ಎಂದು ಉಪನಿಷತ್ತುಗಳಲ್ಲಿರುವ ಸಂಭಾಷಣೆಗಳಿಂದಲೇ ನಾವು ತಿಳಿದುಕೊಳ್ಳಬಹುದಾಗಿರುತ್ತದೆ.

ಆದರೂ ಉಪನಿಷತ್ತೆಂದರೆ ಇತಿಹಾಸದಂತೆ ಪೂರ್ವಕಾಲಕ್ಕೆ ಸೇರಿದ್ದಲ್ಲ; ಅದು ಪ್ರತಿಪಾದನೆಮಾಡುವ ವಿಷಯವು ಈಗಲೂ ನಮ್ಮೆಲ್ಲರಿಗೂ ಸಂಬಂಧಪಟ್ಟದ್ದಾಗಿರುತ್ತದೆ. ಇದೂ ಅಲ್ಲದೆ ಉಪನಿಷತ್ತೆಂಬ ಗ್ರಂಥಭಾಗವೇನೂ ಬಹುದೊಡ್ಡದಲ್ಲ, ಅವನ್ನೆಲ್ಲ ಕೆಲವು ತಿಂಗಳಲ್ಲಿಯೇ ಅಧ್ಯಯನಮಾಡಿಬಿಡಬಹುದು, ಅದರಲ್ಲಿರುವ ತತ್ತ್ವವು ಎಲ್ಲರಿಗೂ ತಿಳಿದಿರುವದಲ್ಲ, ಅನಾದರಣೀಯವಿಷಯವೂ ಅಲ್ಲ; ಅದು ಜಗತ್ತಿನ ಸಾರವೇ ಆಗಿರುವ, ನಮಗೆಲ್ಲರಿಗೂ ಬೇಕಾಗಿರುವ ಬ್ರಹ್ಮವಸ್ತುವಾಗಿರುತ್ತದೆ.

ಉಪನಿಷತ್ತುಗಳಲ್ಲಿ ಉಪದೇಶಮಾಡಿರುವ ಘನವಾದ ತತ್ತ್ವವೇನೆಂದರೆ, ಪರಮಾರ್ಥದೃಷ್ಟಿಯಿಂದ ನೋಡಿದಾಗ ಬ್ರಹ್ಮವೆಂಬ ಹೆಸರಿನ ಒಂದೇ ಒಂದು ವಸ್ತುವಿದೆ. ಅದು ಎಲ್ಲಾ ದೇಶಕಾಲಗಳಲ್ಲಿರುವ ಭೂತಗಳಲ್ಲಿಯೂ ಪ್ರಾಣಿಗಳಲ್ಲಿಯೂ ವ್ಯಾಪ್ತವಾಗಿರುತ್ತದೆ; ಇಷ್ಟೇ ಅಲ್ಲ, ಯಾವದೊಂದು ಪದಾರ್ಥವೇ ಆಗಲಿ, ಈ ಬ್ರಹ್ಮವಸ್ತುವನ್ನು ಬಿಟ್ಟು ಬೇರೆಯಾಗಿರುವದೇ ಇಲ್ಲ. ಸಕಲವೂ ಈ ಬ್ರಹ್ಮದಿಂದಲೇ ಬಂದಿರುತ್ತದೆ, ಅದರಲ್ಲಿಯೇ ಇರುತ್ತದೆ, ಅದರಲ್ಲಿಯೇ ಅಡಗತಕ್ಕದ್ದಾಗಿರುತ್ತದೆ. ಅದು ಪರಮಾರ್ಥಸತ್ಯವಾಗಿರುತ್ತದೆ, ವಿಶುದ್ಧಚೈತನ್ಯರೂಪವಾಗಿರುತ್ತದೆ, ಪರಿಪೂರ್ಣನಿತ್ಯಾನಂದಸ್ವರೂಪವಾಗಿರುತ್ತದೆ. ನಾವುಗಳೆಲ್ಲರೂ ಈ ಸಚ್ಚಿದಾನಂದ ರೂಪವಾದ ಬ್ರಹ್ಮಸ್ವರೂಪವೇ ಆಗಿರುವದರಿಂದ ಈ ಪರಮಾರ್ಥದ ಜ್ಞಾನವನ್ನು ಸಂಪಾದನೆಮಾಡಿಕೊಂಡಮಾತ್ರದಿಂದ "ನಾವು ಬೇರೆಬೇರೆಯ ವ್ಯಕ್ತಿಗಳು, ಅಜ್ಞಾನಿಗಳು, ದುಃಖಿಗಳು"– ಎಂಬ ತುಚ್ಛಬುದ್ಧಿಯು ಹೋಗಿಬಿಡುತ್ತದೆ.

ನಮ್ಮಗಳ ಆತ್ಮನು ಆನಂದಸ್ವರೂಪವಾಗಿರುವನೆಂಬುದು ಸುಮ್ಮನೆ ಒಣಜಂಭದಿಂದ ಹೇಳುವ ಮಾತಲ್ಲ, ಉಪಚಾರಕ್ಕೆ ಹೇಳುವ ಮಾತೂ ಅಲ್ಲ; ಅದು ನಿತ್ಯಸಿದ್ಧವಾದದ್ದನ್ನೇ

ಹೇಳುವ ವಾಕ್ಯವಾಗಿರುತ್ತದೆ. ಹೀಗಿದ್ದರೂ ನಮಗೇಕೆ ಇದು ತಿಳಿಯುವದಿಲ್ಲ?- ಎಂದರೆ ಇದಕ್ಕೆ ಕಾರಣವಿದೆ. ಕನ್ನಡಿಯನ್ನು ಬೆನ್ನಹಿಂದೆ ಗೋಡೆಗೆ ತಗಲುಹಾಕಿ ಮುಂದುಗಡೆ ನೋಡಿ "ನನ್ನ ಪ್ರತಿಬಿಂಬವೇನೂ ಬೀಳಲಿಲ್ಲವಲ್ಲ!" ಎಂಬ ಮೂಢರಂತೆಯೂ ಚೊಕ್ಕಚಿನ್ನದ ಪಾತ್ರೆಯನ್ನೇ ಮಸಿಯಿಂದ ಕಪ್ಪುಮಾಡಿ ಅದು ಯಾವದೋ ಒಂದು ಚಿಪ್ಪೆಂದು ಭ್ರಮಿಸಿ ಅದನ್ನು ತೆಗೆದುಕೊಂಡು ತಿರುಪೆಗೆ ಹೊರಡುವ ಅವಿವೇಕಿಗಳಂತೆಯೂ ನಾವು ವರ್ತಿಸುತ್ತಿದ್ದೇವೆ. "ಆಹಾರಶುದ್ಧಿಯಾದರೆ ಸತ್ತ್ವಶುದ್ಧಿಯಾಗುವದು, ಸತ್ತ್ವಶುದ್ಧಿಯಾದರೆ ಪರಮಾತ್ಮಸ್ವರೂಪದ ನೆನಪು ಆಗುತ್ತದೆ" (ಛಾಂ.) ಎಂದು ಶ್ರುತಿಯು ಸಾರುತ್ತಿದೆ. ಇಲ್ಲಿ ಆಹಾರವೆಂದರೆ ಮನಸ್ಸಿನಿಂದ ನಾವು ಗ್ರಹಿಸುವ ವಿಷಯಗಳು; ಯಾವನ ಮನಸ್ಸು ರಾಜಸತಾಮಸವಿಷಯಗಳನ್ನು ಬಿಟ್ಟು ಸಾತ್ತ್ವಿಕವಿಷಯಗಳನ್ನೇ ಸೇವನೆಮಾಡುತ್ತಿರುವದೋ ಅವನಿಗೆ ಆ ಬ್ರಹ್ಮಚರ್ಯದ ಫಲವಾಗಿ ಅಂತಃಕರಣವು ಶುದ್ಧವಾಗುವದು; ಅತ್ಯಂತ ಪರಿಶುದ್ಧವಾದ ಕನ್ನಡಿಯಲ್ಲಿ ಮುಖವು ಇದ್ದದ್ದು ಇದ್ದಹಾಗೆಯೇ ಪ್ರತಿಬಿಂಬಿಸುವಂತೆ ಅಂಥ ಶುದ್ಧಚಿತ್ತದಲ್ಲಿ ಪರಮಾತ್ಮನ ಯಥಾರ್ಥಸ್ವರೂಪವು ಮೂಡುತ್ತದೆ. ಆದ್ದರಿಂದ ನಾವು ವಿಷಯವಾಸಿತವಾದ ನಮ್ಮ ಅಂತಃಕರಣದ ಕೊಳೆಯನ್ನು ಕಳೆದುಕೊಳ್ಳಬೇಕು; ತತ್ತ್ವವೇತ್ತರ ಪಾದಮೂಲವನ್ನು ಸೇರಿ ಅವರಿಂದ ಉಪದಿಷ್ಟವಾದ ದೃಷ್ಟಿಯನ್ನು ಅನುಸರಿಸಿ ಉಪನಿಷತ್ತುಗಳಿಗೆ ಅರ್ಥಮಾಡಬೇಕು. ಆಗಲೇ ನಮಗೆ ಪರಮಾರ್ಥವು ಗೋಚರವಾಗುತ್ತದೆ.

ತತ್ತ್ವವೇತ್ತರ ದೃಷ್ಟಿ ಹೇಗಿರುವದು?- ಎಂದರೆ ಅವರಿಗೆ ಹೊರಗಿನ ನೋಟಗಳು ಹೇಗೋ ಹಾಗೆಯೇ ಶರೀರಾದಿಗಳೂ ದೃಶ್ಯವಾಗಿಯೇ ಇರುತ್ತವೆ. ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳೆಲ್ಲವೂ ಅರಿಯಲ್ಪಡತಕ್ಕವು, ಮಾರ್ಪಡುತ್ತಿರುವ ಸ್ವಭಾವದವುಗಳು, ಅವುಗಳೆಲ್ಲ ವಿಷಯವಾಗಿರುತ್ತವೆ; ಅವುಗಳನ್ನು ನೋಡುತ್ತಿರುವ ವಿಷಯಿಯಾಗಿರುವ ನಮ್ಮ ಆತ್ಮನು ಅವುಗಳಿಗಿಂತ ಭಿನ್ನನಾಗಿರುತ್ತಾನೆ. ಯಾವ ಬೆಳಕಿನಿಂದ ಮನಸ್ಸಿನವರೆಗಿನ ವಿಷಯಗಳನ್ನು ಕೂಡ ನಾವು ಬೇರ್ಪಡಿಸಿಕೊಂಡು ಅರಿಯುವೆವೋ ಆ ಚೈತನ್ಯವೇ ನಮ್ಮ ಸ್ವರೂಪವು. ಅದು ದೇಶಕಾಲಾದಿಗಳಲ್ಲಿಲ್ಲ. ಶರೀರಾದಿಗಲ ಸಂಬಂಧದಿಂದ ನಾನು, ನೀನು- ಎಂಬ ಭೇದವೂ ಆ ಭೇದದಿಂದ ಉಂಟಾದ ತಾರತಮ್ಯಗಳೂ ಇರುತ್ತವೆ; ಆದರೆ ಅವನ್ನು ಅರಿಯುವ ಚೈತನ್ಯರೂಪನಾದ ಆತ್ಮನು ಇಬ್ಬರಲ್ಲ. "ಅವನು ನನಗೆ ಮಾತ್ರ ಆತ್ಮನು, ನಿನಗಲ್ಲ"- ಎಂದು ಹೇಳುವದಕ್ಕೆ ಯಾರಿಗೂ ಹಕ್ಕಿಲ್ಲ. ಹೊರಗಿನ ವಸ್ತುಗಳು ದೇಹಾದಿಗಳ ಸಂಬಂಧದಿಂದ ನಮಗೆ ಬೇಕಾದವುಗಳೋ ಬೇಡವಾದವುಗಳೋ ಆಗಿರುತ್ತವೆ. ಆದ್ದರಿಂದ ಬೇಕಾದದ್ದು ಇಲ್ಲದೆ, ಬೇಡವಾದದ್ದು ಹೋಗದೆ, ನಮಗೆ ದುಃಖವಾಗುತ್ತಿರುವದು. ಆದರೆ ದೇಹಾದಿಗಳ ಸಂಬಂಧವೇ ಇಲ್ಲದ ನಮ್ಮ ಶುದ್ಧಚೈತನ್ಯದಲ್ಲಿ ಯಾವ ದುಃಖವೂ ಇಲ್ಲ, ಅದು ಎಂದಿಗೂ ಮುಕ್ತಾಗುವದಿಲ್ಲ; ಅದಕ್ಕೆ ಪ್ರಿಯಾಪ್ರಿಯಗಳಿಲ್ಲ. ಹಾಗೆ ಬೀದಿಯ ತಿರುಕನಿಗೂ

ಅದೇ ಆತ್ಮನಾಗಿರುವದರಿಂದ ಎಲ್ಲರೂ ಆನಂದಸ್ವರೂಪರೇ ಎಂಬುದು ಈ ದೃಷ್ಟಿಯಿಂದ ಅಲುಗಾಡಿಸದಷ್ಟು ಭದ್ರವಾದ ಸಿದ್ಧಾಂತವಾಗಿರುತ್ತದೆ.

ಈ ತತ್ತ್ವವನ್ನು ತಿಳಿದುಕೊಂಡರೆ ಯಾರಿಗೂ ಯಾರ ಮೇಲೂ ರಾಗದ್ವೇಷಗಳು ಉಂಟಾಗುವದಕ್ಕೆ ಕಾರಣವಿರುವದಿಲ್ಲ. ಈ ಜ್ಞಾನವನ್ನು ಪಡೆದವನು ವ್ಯವಹಾರದಲ್ಲಿ ಕೂಡ ಆನಂದವನ್ನು ತಪ್ಪದೆ ಪಡೆಯಬಹುದು. ಎಲ್ಲರ ರೂಪದಿಂದಲೂ ತಾನೇ ಸುಖಪಡುತ್ತಿರುವೆನೆಂಬ ಸಮಾಧಾನವು ಅವನಿಗೆ ಬರುತ್ತದೆ. ಈ ಆನಂದವನ್ನು ಪಡೆಯುವದಕ್ಕೆ ದೃಷ್ಟಿಯ ಯೋಗ್ಯತೆಯನ್ನು ಪಡೆಯುವದೊಂದೇ ಮಾರ್ಗವೇ ಹೊರತು ಮಿಕ್ಕ ಜಾತಿ, ಕುಲ, ಧನಸಂಪತ್ತಿಯೇ ಮುಂತಾದವುಗಳಿಂದ ಇದನ್ನು ಯಾರೂ ಪಡೆಯುವದಕ್ಕೆ ಆಗುವದಿಲ್ಲ. ಇದನ್ನು ಮತ್ತೊಬ್ಬನು ಪಡೆಯದಂತೆ ಅಡ್ಡಿಮಾಡುವದಕ್ಕೂ ಯಾರೊಬ್ಬರಿಂದಲೂ ಆಗುವದಿಲ್ಲ. ಇದನ್ನು ಮತ್ತೊಬ್ಬರು ಪಡೆದುಕೊಂಡದ್ದರಿಂದ ನಮಗೆ ಯಾವ ನಷ್ಟವೂ ಆಗುವದಿಲ್ಲ; ಅದಕ್ಕೆ ಬದಲು ತತ್ತ್ವವನ್ನು ತಿಳಿದುಕೊಂಡವರ ಸಂಖ್ಯೆಯು ಹೆಚ್ಚಿದಂತೆ ವ್ಯವಹಾರವೆಲ್ಲವೂ ಆನಂದಮಯವಾಗುವದು.

ಈ ಪರಮರಹಸ್ಯವು ಹೀಗೆ ಅತ್ಯಂತವಾಗಿ ಅನುಭವಸಿದ್ಧವಾಗಿದ್ದರೂ ಇಂದ್ರಿಯಗೋಚರ ವಲ್ಲವಾದ್ದರಿಂದಲೂ ಅನುಮಾನಪ್ರಮಾಣದಿಂದೂಹಿಸುವದಕ್ಕೆ ಬರುವಹಾಗಿಲ್ಲವಾದ್ದರಿಂದಲೂ ಇದನ್ನು ಆಪ್ತವಾಕ್ಯದಿಂದಲೇ ಅರಿತುಕೊಳ್ಳಬೇಕಾಗಿರುತ್ತದೆ. ಇದನ್ನು ತಿಳಿಸಿಕೊಡುವದೇ ಉಪನಿಷತ್ತುಗಳ ಹೆಚ್ಚುಗಾರಿಕೆಯು.

ಉಪನಿಷತ್ತುಗಳು ತಿಳಿಸುವ ನಮ್ಮ ಸ್ವರೂಪಕ್ಕೆ "ಅಕ್ಷರವು" (ಕಾಲದೇಶಗಳನ್ನು ಕೂಡ ಬೆಳಗುತ್ತಿರುವದರಿಂದ ನಾಶರಹಿತವಾದದ್ದು), "ಮಹತ್ತು" (ಅತ್ಯಂತ ಮಹಾಪರಿಮಾಣವಾದ ಸರ್ವವ್ಯಾಪಕವಸ್ತುಗಳಾದ ಆಕಾಶಾದಿಗಳನ್ನೂ ವ್ಯಾಪಿಸಿರುವ ಚೈತನ್ಯವಾದ್ದರಿಂದ ಪರಿಚ್ಛೇದ ವಿಲ್ಲದ್ದು), ಸತ್ಯ (ಎಲ್ಲಕ್ಕೂ ತನ್ನ ಇರವನ್ನು ಸಾಲವಾಗಿ ಕೊಟ್ಟು ಇದೆಯೆನ್ನಿಸುವಂಥ ಪರಮಾರ್ಥಸತ್ಯವು), ಜ್ಞಾನವು (ಮನಸ್ಸಿನಲ್ಲಿ ಉಂಟಾಗುವ ಎಲ್ಲಾ ಬಗೆಯ ಅರಿವುಗಳಿಗೂ ತಿರುಳಾಗಿರುವ ಬರಿಯರಿವು), ಆನಂದ (ಯಾವ ಏರುಪೇರೂ ಇಲ್ಲದೆ ಸುಖದುಃಖಗಳನ್ನು ಕೂಡ ಹೊರಚ್ಚುಮಾಡಿಕೊಂಡಿರುವಂಥ ಮಿಗಿಲಿಲ್ಲದ ಸುಖವು)– ಎಂದು ಮುಂತಾಗಿ ಬಗೆಬಗೆಯ ಹೆಸರುಗಳಿವೆ. ಈ ಹೆಸರುಗಳನ್ನು ಸಹಸ್ರನಾಮ ದಂತೆ ಗಟ್ಟಿಮಾಡತಕ್ಕದ್ದಲ್ಲ. ಅವುಗಳನ್ನು ಕೇಳಿ, ಅರ್ಥವನ್ನು ಮನಸ್ಸಿನಲ್ಲಿ ವಿಚಾರಮಾಡಿಕೊಂಡು, ತನ್ನ ಸ್ವರೂಪಕ್ಕೆ ಹೊಂದುವದೆ, ಇಲ್ಲವೆ? ಎಂಬುದನ್ನು ನಿರ್ಧರಿಸಿಕೊಳ್ಳಬೇಕಾದದ್ದು. ಯಾರಿಗೆ ಇಂಥ ಜ್ಞಾನವನ್ನು ಸಂಪಾದಿಸಿಕೊಳ್ಳುವ ಯೋಗ್ಯತೆ ಇಲ್ಲವೋ ಅಂಥವರು ಮನಸ್ಸಿನಲ್ಲಿ ಇದೇ ತತ್ತ್ವವನ್ನು ಉಪಾಸನೆಮಾಡಬೇಕು, ಎಂದರೆ ಚಿಂತಿಸುತ್ತಿರಬೇಕು. ಆಗಲೇ ನಮಗೆ ಉಪನಿಷತ್ತುಗಳ ಮಹತ್ತ್ವವು ಮನದಟ್ಟಾಗುವದು.

ಉಪನಿಷತ್ತುಗಳಲ್ಲಿ ಹೇಳಿರುವ ವಿಷಯವು ಯಾವದಾದರೊಂದು ಕಾಲಕ್ಕೆ ಅಥವಾ ಯಾವದಾದರೊಂದು ದೇಶಕ್ಕೆ ಸಂಬಂಧಪಟ್ಟದ್ದಲ್ಲ. ಇವುಗಳಲ್ಲಿರುವ ತತ್ತ್ವೋಪದೇಶವನ್ನು ಸ್ಕೂಲುಪಾಠಗಳಲ್ಲಿ "ಐಚ್ಛಿಕವಿಷಯ" ಗಳೆಂದು ಇಟ್ಟಿರುವವುಗಳ ಗುಂಪಿಗೆ ಸೇರಿಸುವದಕ್ಕೆ ಬರುವದಿಲ್ಲ; ಏಕೆಂದರೆ ದುಃಖಮಿಶ್ರವಿಲ್ಲದ ಸುಖವು ಎಲ್ಲಾ ವಯಸ್ಸಿನವರಿಗೂ ಎಲ್ಲಾ ವರ್ಣದವರಿಗೂ ಎಲ್ಲಾ ಆಶ್ರಮದವರಿಗೂ ಎಲ್ಲಾ ಸ್ಥಿತಿಯವರಿಗೂ ಉಸಿರಿನಂತೆ ಅತ್ಯವಶ್ಯಕವಾಗಿ ಬೇಕಾಗಿರುತ್ತದೆ. ಯಾವ ನಿತ್ಯಾನಂದವನ್ನು ಪಡೆಯದಿದ್ದರೆ ಎಲ್ಲವೂ ನಿಸ್ಸಾರವೆನಿಸುವದೋ ಆ ಆನಂದವೇ ಉಪನಿಷತ್ತುಗಳ ವಿಷಯವಾಗಿರುತ್ತದೆ. ಆದ್ದರಿಂದ ಈ ವಿಷಯವನ್ನು ವಿಚಾರಮಾಡಿ ನಿತ್ಯಾನಂದವನ್ನು ಪಡೆಯುವಂತೆಯೂ ನಮ್ಮ ಮಕ್ಕಳವಿದ್ಯಾಭ್ಯಾಸದಲ್ಲಿ ಈ ಅತ್ಯವಶ್ಯವಿಷಯದ ಯಥಾಯೋಗ್ಯಸಮಾವೇಶವನ್ನು ಮಾಡುವಂತೆಯೂ ನಮ್ಮೆಲ್ಲರಿಗೂ ಬುದ್ಧಿಯನ್ನು ಪ್ರೇರಿಸಲೆಂದು ಆ ಸರ್ವಾತ್ಮನಾದ ಪರಮೇಶ್ವರನನ್ನು ಪ್ರಾರ್ಥಿಸೋಣ.

## ವೇದಾಂತದ ಅಭ್ಯಾಸಕ್ರಮಗಳು

ವೇದಾತಸಿದ್ಧಾಂತಕ್ಕೆ ಮೂಲವು ಉಪನಿಷತ್ತುಗಳು. ಉಪನಿಷತ್ತುಗಳಿಗೆ "ವೇದಾಂತಗಳು" ಎಂಬ ಹೆಸರೂ ಇದೆ. ಆದ್ದರಿಂದ ಉಪನಿಷತ್ತುಗಳಿಂದ ಹೊರಟಿರುವ ಸಿದ್ಧಾಂತವನ್ನು **ವೇದಾಂತ** ಎಂದು ಕರೆಯುವ ವಾಡಿಕೆಯಾಗಿದೆ.

ಆದರೆ ವೇದಾಂತವನ್ನು ಉಪನಿಷತ್ತುಗಳ ಮೂಲಕವೇ ಅಭ್ಯಾಸಮಾಡಬೇಕೆಂಬ ನಿಯಮವಿಲ್ಲ; ಅದು ಎಲ್ಲರಿಗೂ ಸಾಧ್ಯವೂ ಅಲ್ಲ. ವೇದಾಂತ ಸಿದ್ಧಾಂತದ ಬೀಜವು ಉಪನಿಷತ್ತುಗಳಲ್ಲಿದ್ದರೂ ಆ ಉಪನಿಷತ್ತುಗಳಲ್ಲಿ ನಂಬಿಕೆಯಿಟ್ಟವರಿಗೇ ವೇದಾಂತವು ತಿಳಿಯುವದೆಂಬ ಭರವಸೆಯೂ ಇಲ್ಲ. ಎಷ್ಟೋ ಜನರು ಉಪನಿಷತ್ತುಗಳನ್ನು ಬಾಯಿಗೆ ಕಲಿತುಕೊಂಡಿರುತ್ತಾರೆ; ಅವುಗಳ ವಾಕ್ಯಗಳ ಅರ್ಥವನ್ನು ತಿಳಿದು ಕೊಂಡಿರುತ್ತಾರೆ. ಆದಮಾತ್ರದಿಂದ ಅವರಿಗೆ ವೇದಾಂತವು ಮನದಟ್ಟಾಯಿತೆನ್ನುವದಕ್ಕೆ ಬರುವದಿಲ್ಲ. ಉಪನಿಷತ್ತುಗಳು ವೇದಭಾಗಗಳು; ಅವನ್ನು ಅಭ್ಯಾಸಮಾಡುವದಕ್ಕೆ ಎಲ್ಲರಿಗೂ ಅಧಿಕಾರವಿಲ್ಲ– ಎಂದುಮುಂತಾಗಿ ಒಣಜಗಳಗಳನ್ನು ಮಾಡುತ್ತಾ ಕಾಲಹರಣ ಮಾಡುತ್ತಿರುವ ಉಪನಿಷದ್ಗ್ರಂಥದ ಆರಾಧಕರಾದ ಪುಸ್ತಕವೇದಾಂತಿಗಳು ಅಲ್ಲಲ್ಲಿ ಕಂಡುಬರುತ್ತಾರೆ. ಅವರು ನಿಜವಾದ ವೇದಾಂತಿಗಳಲ್ಲ.

ವೇದಾಂತವನ್ನು ತಿಳಿಸುವದಕ್ಕೆ ಹಲವು ಭಾಷ್ಯಗಳು ಈಗ ಹೊರಕ್ಕೆ ಬಂದಿರುತ್ತವೆ. ಚೆನ್ನಾಗಿ ಓದುವದಕ್ಕೆ ಬರುವವರಿಗೆ ಅವು ಅರ್ಥವಾಗಲೂಬಹುದು. ಆದರೂ ಪೂರ್ವಪಕ್ಷ,

ಸಿದ್ಧಾಂತ, ಮತಾಂತರಖಂಡನೆ– ಎಂದು ಭಾಷ್ಯಗಳ ಆಧಾರದಮೇಲೆ ಹೊಡೆದಾಡುತ್ತಾ ಇರುವ ಭಾಷ್ಯವೇದಾಂತಿಗಳೂ ಕಾಣಬರುತ್ತಿದ್ದಾರೆ. ಅವರೂ ನಿಜವಾದ ವೇದಾಂತಿಗಳಲ್ಲ.

ಇನ್ನು ಕೆಲವರು ವೇದಾಂತದ ಯಾವದಾದರೊಂದು ಸಂಸ್ಕೃತ ಅಥವಾ ದೇಶಭಾಷೆಯ ಪ್ರಕರಣವನ್ನು ಹಲವು ಬಾರಿ ಓದಿ ಅದರಲ್ಲಿರುವ ವಿಚಾರಸರಣಿಯನ್ನು ಗಟ್ಟಿಮಾಡಿಕೊಂಡಿರುತ್ತಾರೆ. ಆ ಗ್ರಂಥದಲ್ಲಿರುವ ಅಧ್ಯಾಯಗಳು, ಅವುಗಳಲ್ಲಿರುವ ಮುಖ್ಯಮುಖ್ಯಶ್ಲೋಕಗಳು, ಅಲ್ಲಿರುವ ಕೆಲವು ವಾದಗಳು– ಇವನ್ನು ಗಟ್ಟಿಮಾಡಿಕೊಂಡಿರುತ್ತಾರೆ. ಅವರು ಎಷ್ಟೋ ಸಲ ಆ ಗ್ರಂಥಗಳನ್ನು ಜನರಿಗೆ ಓದಿಹೇಳಿ ಜನರ ಮೆಚ್ಚಿಗೆಗೆ ಪಾತ್ರರಾಗಿರುತ್ತಾರೆ. ಆದರೆ ಅವರಿಗೆ ಬೇರೊಂದು ಪ್ರಕರಣದಲ್ಲಿ ನಿರೂಪಿಸಿರುವ ವಿಚಾರಕ್ರಮವು ಒಗ್ಗುವದಿಲ್ಲ. ತಮ್ಮಲ್ಲಿರುವ ಪ್ರಕರಣವು ಅಸಮಾನವೆಂದು ವಾದಿಸುವದರಲ್ಲಿಯೇ ಅವರ ಕಾಲವು ಕಳೆದುಹೋಗುತ್ತಿರುತ್ತದೆ. ಅವರೂ ನಿಜವಾದ ವೇದಾಂತಿಗಳಲ್ಲ.

ಇನ್ನು ಕೆಲವರು ಪ್ರಾಣಾಯಾಮ, ಮಂತ್ರ ತಂತ್ರ, ಕೆಲವು ಕೀರ್ತನಗಳು– ಇವುಗಳ ಪ್ರದರ್ಶನಮಾಡುತ್ತಿರುತ್ತಾರೆ. ಅವರಲ್ಲಿ ಕೆಲವರು ಸಮಾಧಿಯನ್ನು ಅನುಭವಿಸಿದ್ದೇವೆಂದೂ ಅನುಭವವಿಲ್ಲದ ಬಾಯಿವೇದಾಂತವು ಯಾವ ಪ್ರಯೋಜನಕ್ಕೂ ಬಾರದೆಂದೂ ಹೇಳುತ್ತಿರುತ್ತಾರೆ. ಅಂಥವರಿಗೆ ಹೆಚ್ಚಾಗಿ ಶಿಷ್ಯಸಂಗ್ರಹವೂ ಆಗುತ್ತಿರುತ್ತದೆ. ಆದರೆ ಅದೇನೂ ವೇದಾಂತವಲ್ಲ.

ವೇದಾಂತವನ್ನು ಹಲವು ತರ್ಕಗಳಿಂದ ಸಿದ್ಧಮಾಡುವವರು ಕೆಲವರು ಇರುತ್ತಾರೆ. ಅವರಿಗೆ ತರ್ಕಶಾಸ್ತ್ರದ ಬಲವು ಚೆನ್ನಾಗಿರುತ್ತದೆ; ಅಥವಾ ತರ್ಕದ ಪ್ರಮಾಣ, ಪ್ರಮೇಯ, ಲಕ್ಷಣ, ಲಕ್ಷ್ಯ, ಅನುಮಾನ, ವ್ಯಾಪ್ತಿ– ಮುಂತಾದ ಪಾರಿಭಾಷಿಕಶಬ್ದಗಳ ಪರಿಚಯವಿರುತ್ತದೆ. ಜನರನ್ನು ವಾದದಲ್ಲಿ ಬಾಯಿಮುಚ್ಚಿಸುವದರಲ್ಲಿ ಅವರು ಗಟ್ಟಿಗರು. ಆದರೆ ಅವರೂ ವೇದಾಂತಿಗಳಲ್ಲ.

ವೇದಾಂತವನ್ನು ಅಭ್ಯಾಸಮಾಡಬೇಕೆನ್ನುವವರಿಗೆ ಇಂದ್ರಿಯಾರ್ಥಗಳ ಆಶೆಯು ಕಡಿಮೆಯಾಗಿರಬೇಕು, ಮನೋವಾಕ್ಕುಗಳು ಹಿಡಿತದಲ್ಲಿರಬೇಕು, ಪರಮಾರ್ಥವನ್ನು ಈ ಜನ್ಮದಲ್ಲಿಯೇ ಕಂಡು ಕೃತಾರ್ಥನಾಗಬೇಕೆಂಬ ಹಂಬಲು ಇರಬೇಕು. ಅವರಿಗೆ ಇಂದ್ರಿಯಜ್ಞಾನ, ಅಂತಃಕರಣದಿಂದ ಆಗುವ ವಿಚಾರಾತ್ಮಕವಾದ ಜ್ಞಾನ–ಇವೆರಡೇ ಅಲ್ಲದೆ ಇವೆರಡಕ್ಕಿಂತಲೂ ಬೇರೆಯಾದ ಸಾಕ್ಷ್ಯನುಭವದ ಬೆಲೆಯು ತಿಳಿದಿರಬೇಕು, ತತ್ತ್ವವನ್ನು ಸಾರ್ವತ್ರಿಕಾನುಭವದ ಆಧಾರದಿಂದ ಬೋಧಿಸಬಲ್ಲ ಗುರುವಿನಲ್ಲಿ ಶ್ರದ್ಧಾಭಕ್ತಿಗಳಿರಬೇಕು. ಮಂತ್ರ, ತಪಸ್ಸು, ಹಠಯೋಗ, ಸಮಾಧಿ– ಮುಂತಾದ ವ್ಯಕ್ತಿಪ್ರಧಾನವಾದ ಅನುಭವಗಳಲ್ಲಿ ಶ್ರದ್ಧಾತಿರೇಕವಿರಬಾರದು. ತತ್ತ್ವವನ್ನು ನೇರಾಗಿ ಅರಿತುಕೊಳ್ಳಬೇಕೆಂಬ ತಹತಹವಿರಬೇಕು. ಇಂಥವರೇ ವೇದಾಂತವಿಚಾರಕ್ಕೆ ಅರ್ಹರು.

ವೇದಾಂತವಿಚಾರಕ್ಕೆ ಗ್ರಂಥಗಳಾಗಲಿ ಸಾಧನಗಳಾಗಲಿ ಅವಶ್ಯವಿಲ್ಲವೆಂದು ತಿಳಿಯಬಾರದು. ಅವಶ್ಯವಾಗಿ ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ಆದರೆ ತತ್ತ್ವವಿಚಾರವನ್ನು ಮೇಲೆ ಹೇಳಿದ ಇಂದ್ರಿಯಾನುಭವ ಮತ್ತು ತರ್ಕ ಪ್ರಧಾನವಾದ ವಿಚಾರ– ಇವೆರಡನ್ನೂ ಮೀರಿರುವ ಸಾರ್ವತ್ರಿಕಾನುಭವಕ್ಕೆ ಹೆಚ್ಚಿಗೆಯ ಬೆಲೆಯನ್ನು ಕೊಟ್ಟೇ ಮಾಡಬೇಕು.

ಸ್ವವರ್ಣಾಶ್ರಮಧರ್ಮಗಳ ಆಚರಣೆಯನ್ನು ಮಾಡುತ್ತಾ ಪರಮೇಶ್ವರನಿಗೆ ಅದನ್ನು ಆರಾಧನೆಯಾಗಿ ಮಾಡಿಕೊಳ್ಳುವದು, ಸದ್ಗುರುವಿನ ಸೇವೆಯನ್ನು ಮಾಡಿ ತತ್ತ್ವವನ್ನು ಶ್ರವಣಮಾಡುವದು, ಆತನ ಉಪದೇಶಗಳನ್ನು ಕಿವಿಗೊಟ್ಟುಕೇಳಿ ಮನನಮಾಡಿ ಅನುಭವಕ್ಕೆ ತಂದುಕೊಳ್ಳುವದಕ್ಕೆ ಯತ್ನಿಸುವದು– ಇವೇ ವೇದಾಂತವಿಚಾರಕ್ಕೆ ಬೇಕಾದ ಮುಖ್ಯಸಾಧನಸಾಮಗ್ರಿಗಳು.

## ಉಪನಿಷತ್ತುಗಳಿಗೆ ತಾತ್ಪರ್ಯವನ್ನು ಕಲ್ಪಿಸುವ ರೀತಿ

(ನಂಜನಗೂಡಿನ ಅದ್ವೈತಸಭೆಯ ಪರವಾಗಿ ಶಂಕರಮಠದಲ್ಲಿ
ತಾ॥ 3–10–40ರಲ್ಲಿ ಶ್ರೀ ಶ್ರೀಗಳವರು ಮಾಡಿದ ಒಂದು ಉಪನ್ಯಾಸದ ಸಾರ)

ಉಪನಿಷತ್ತುಗಳಲ್ಲಿ ಇಂಥದ್ದೇ ಸಿದ್ಧಾಂತವೆಂದೇನೂ ಬಾಯಿಬಿಟ್ಟು ಹೇಳಿರುವದಿಲ್ಲ. ಜನರು ತಮ್ಮ ತಮ್ಮ ಅಧಿಕಾರಭೂಮಿಕೆಯ ವಾಸನೆಯಿಂದ ಅವಕ್ಕೆ ಬೇರೆಬೇರೆಯ ಅರ್ಥವನ್ನು ಮಾಡಿ ಅದ್ವೈತವನ್ನು ಅದಕ್ಕೆ ಹೊಂದಿಸುತ್ತಾರೆಂಬುದನ್ನು ಈದಿನ ನಾನು ಸ್ವಲ್ಪಮಟ್ಟಿಗೆ ತಿಳಿಸುತ್ತೇನೆ. ಇದಕ್ಕಾಗಿ ತೈತ್ತಿರೀಯೋಪನಿಷತ್ತನ್ನು ಉದಾಹರಣೆಗಾಗಿ ತೆಗೆದುಕೊಳ್ಳುವೆನು.

ಈ ಉಪನಿಷತ್ತಿನಲ್ಲಿ ಮೊದಲು ಸಾಧನಭಾಗವಾದ ಕರ್ಮೋಪಾಸನೆಗಳಿಗೂ ಜ್ಞಾನಕ್ಕೂ ಇರುವ ಸಂಬಂಧವನ್ನು ತಿಳಿಸಿರುತ್ತದೆ; ಆಮೇಲೆ ಬ್ರಹ್ಮಜ್ಞಾನವನ್ನು ಹೇಳಿರುತ್ತದೆ. ಜ್ಞಾನವು ಉಪಾಸನೆಯಂತೆ ಕರ್ತೃತಂತ್ರವಾಗಿರದೆ ವಸ್ತುತಂತ್ರವಾಗಿರುತ್ತದೆಯೆಂದೂ ಈ ಜ್ಞಾನವನ್ನು ಪ್ರಧಾನವಾಗಿ ಹೇಳುವದಕ್ಕೇ ಉಪನಿಷತ್ತುಗಳು ಹೊರಟಿವೆಯೆಂದೂ ಅದ್ವೈತಿಗಳು ಹೇಳುತ್ತಾರಾದ್ದರಿಂದ ಜ್ಞಾನಭಾಗವನ್ನೇ ಇಲ್ಲಿ ನಾವು ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿದೆ.

ಈ ಜ್ಞಾನಭಾಗವೆಂಬ ಉಪನಿಷತ್ತಿನ ಎರಡನೆಯ ಭಾಗದಲ್ಲಿ : "ಬ್ರಹ್ಮವನ್ನರಿತವನು ಮಿಗಿಲಾದ ಗತಿಯನ್ನು ಪಡೆಯುತ್ತಾನೆ. ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ ಆಗಿರುತ್ತದೆ. ಅದು ಗುಹೆಯಲ್ಲಿ ಪರಮಾಕಾಶದಲ್ಲಿರುವದೆಂಬುದನ್ನು ಯಾವನು ಅರಿತುಕೊಳ್ಳುವನೋ ಅವನಿಗೆ ಎಲ್ಲಾ ಕಾಮಗಳೂ ಒಟ್ಟಿಗೆ ದೊರೆಯುವವು. ಆ ಈ ಆತ್ಮನಿಂದ ಆಕಾಶವುಂಟಾಯಿತು, ಆಮೇಲೆ ವಾಯು, ಅಗ್ನಿ, ಅಪ್ಪು, ಪೃಥ್ವಿ, ಔಷಧಿಗಳು,

ಅನ್ನ, ಪುರುಷ- ಹೀಗೆ ಒಂದಾಗುತ್ತಲೊಂದು ಉಂಟಾಗಿರುತ್ತವೆ" ಎಂದು ಹೇಳಿದ ಬಳಿಕ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಒಳ ಒಳಗಿನ ಐದು ಆತ್ಮರನ್ನು ಹೇಳಿರುತ್ತದೆ. ಆಮೇಲೆ ಬ್ರಹ್ಮವೇ ಆನಂದಮಯನಿಗೆ ಪುಚ್ಛವೆಂದು ಹೇಳಿ ಬ್ರಹ್ಮವು ಎಲ್ಲವು ಆಗಿರುವ ರೀತಿಯನ್ನು ವರ್ಣಿಸಿ, ಅದೇ ಎಲ್ಲರಿಗೂ ಆನಂದದಾಯಕವೆಂದೂ ಅದನ್ನರಿಯದೆ ಭೇದಬುದ್ಧಿಯನ್ನು ಮಾಡಿದವನಿಗೆ ಭಯವುಂಟಾಗುವದೆಂದೂ ಅದರಲ್ಲಿಯೇ ನೆಲೆನಿಂತವನಿಗೆ ಅಭಯಾನಂದಗಳು ದೊರೆಯುವವೆಂದೂ ಉಪಸಂಹಾರ ಮಾಡಿರುತ್ತದೆ.

ಅದ್ವೈತಿಗಳು ಉಪನಿಷತ್ತಿಗೆ ಹೇಗೆ ಅರ್ಥವನ್ನು ಮಾಡುತ್ತಾರೆಂಬುದನ್ನು ಈಗ ಸ್ವಲ್ಪ ವಿವರಿಸುವೆನು. ಶ್ರೀಶಂಕರಾಚಾರ್ಯರವರ ಮತದಂತೆ ಜ್ಞಾನಭಾಗದಲ್ಲಿರುವ ವೇದಾಂತವಾಕ್ಯಗಳನ್ನು ಬರಿಯ ಶ್ರುತಿ ಎಂಬಿಷ್ಟರಿಂದಲೇ ಪ್ರಮಾಣವೆಂದು ಗ್ರಹಿಸತಕ್ಕದ್ದಲ್ಲ; ಆ ವಾಕ್ಯಗಳಿಗೆ ಅರ್ಥವನ್ನು ಮಾಡುವಾಗ ಶ್ರುತಿಲಿಂಗಾದಿಗಳಂತೆ ಯುಕ್ತ್ಯನುಭವಗಳೂ ಹೊಂದುಗೆಯಾಗುವದು ಅತ್ಯಂತ ಅವಶ್ಯವಾಗಿರುತ್ತದೆ. ಈ ಉಪನಿಷತ್ತಿನಲ್ಲಿ ಬ್ರಹ್ಮವು ನಿತ್ಯವಾಗಿದೆ, ಜ್ಞಾನಸ್ವರೂಪವಾಗಿದೆ, ಅನಂತವಾಗಿದೆ- ಎಂದು ಹೇಳಿರುವದಲ್ಲದೆ ಅದು ಗುಹೆಯಲ್ಲಿರುವದೆಂದೂ ಅದನ್ನರಿತವನಿಗೆ ಒಂದೇ ಕಾಲದಲ್ಲಿ ಎಲ್ಲಾ ಕಾಮಗಳೂ ಫಲಿಸುವವೆಂದೂ ಹೇಳಿರುತ್ತದೆಯಷ್ಟೆ. ಆದರೆ ಎಲ್ಲಾ ಕಾಮಗಳನ್ನೂ ಒಂದೇ ಕಾಲದಲ್ಲಿ ಅನುಭವಿಸುವದು ಹೇಗೆ ಸಾಧ್ಯ? ಬ್ರಹ್ಮವು ಅನಂತವೂ ಆಗಿದ್ದು ಒಂದು ಗುಹೆಯಲ್ಲಿಯೇ ಅಡಕವಾಗಿರುವದೆಂಬುದು ಹೇಗೆ ಯುಕ್ತಿಯುಕ್ತವಾದೀತು?- ಎಂಬ ಶಂಕೆಗಳು ಸಹಜವಾಗಿ ಮೂಡುತ್ತವೆ. ಇನ್ನು ಬ್ರಹ್ಮವು ಆತ್ಮನು, ಎಂದರೆ ನಮ್ಮ ಸ್ವರೂಪವೇ- ಎಂದು ಶ್ರುತಿಯಲ್ಲಿದೆ; ನಮ್ಮ ಆತ್ಮನು ಸತ್ಯಜ್ಞಾನಾನಂತನೆಂಬುದನ್ನು ಹೇಗೆ ಮನಗಾಣಬೇಕು? ಈ ಬ್ರಹ್ಮದಿಂದ ಆಕಾಶವುಂಟಾಯಿತು- ಎಂದೂ ಇಲ್ಲಿ ಹೇಳಿರುತ್ತದೆ. ಆಕಾಶದಲ್ಲಿ ಎಲ್ಲವೂ ಉಂಟಾಗುತ್ತದೆಯೇ ಹೊರತು ಆಕಾಶವು ಉಂಟಾಗುವದು ಎಲ್ಲಿ? ಹೇಗೆ?- ಎಂಬುದನ್ನು ನಾವು ಮನಸ್ಸಿನಲ್ಲಿಯೂ ಕಲ್ಪಿಸುವದಕ್ಕೆ ಬರುವಂತಿಲ್ಲ. ಹೀಗಿರುವಲ್ಲಿ ನಮ್ಮ ಆತ್ಮನೇ ಬ್ರಹ್ಮನೆಂಬುದೂ ಇವನಿಂದಲೇ ಆಕಾಶವೂ ಉಂಟಾಯಿತೆಂಬುದೂ ತೀರ ದಪ್ಪನಾದ ಸುಳ್ಳೇ ಎಂದು ತೋರುವದಿಲ್ಲವೆ? ಇವೇ ಮುಂತಾದ ಶಂಕೆಗಳು ಒಂದರ ಹಿಂದೊಂದು ಜಿಜ್ಞಾಸುಗಳಲ್ಲಿ ಮೂಡಿಕೊಳ್ಳುತ್ತವೆ. ಶ್ರುತಿಯು ಪ್ರಮಾಣವಾದ್ದರಿಂದ ಇದನ್ನೆಲ್ಲ ನಂಬಬೇಕು- ಎಂದು ಹೇಳುವವರಿಗೆ ಇಲ್ಲಿ ಯಾವ ತೊಂದರೆಯೂ ಇಲ್ಲ; ಆದರೆ ಇದೆಲ್ಲವನ್ನೂ ಅನುಭವಕ್ಕೆ ಹೊಂದಿಸಿ ಅರಿತುಕೊಳ್ಳಬೇಕೆನ್ನುವ ಅದ್ವೈತಿಗಳ ದೃಷ್ಟಿಯಿಂದ ಇದಕ್ಕೆ ಹೇಗೆ ಅರ್ಥವನ್ನು ಮಾಡಿಕೊಳ್ಳಬೇಕೆಂಬುದೇ ಪ್ರಕೃತಪ್ರಶ್ನೆಯಾಗಿರುತ್ತದೆ. ಈ ಪ್ರಶ್ನೆಗೆ ನಾನು ಈಗ ಮೆಟ್ಟಿಲುಮೆಟ್ಟಿಲಾಗಿ ಉತ್ತರವನ್ನು ಹೇಳುವದಕ್ಕೆ ಪ್ರಯತ್ನಿಸುವೆನು.

ಅದ್ವೈತಿಗಳ ಅಭಿಪ್ರಾಯದಂತೆ ನಮ್ಮ ಆತ್ಮನು ಬ್ರಹ್ಮವೇ ಆಗಿರುತ್ತಾನೆ; ಸತ್ಯಜ್ಞಾನಾನಂದ ಸ್ವರೂಪನೂ ಅನಂತನೂ ಆಗಿರುತ್ತಾನೆ. ಇದನ್ನು ತಾತ್ಪರ್ಯದಿಂದ ತಿಳಿಸಿಕೊಡುವದಕ್ಕೇ ಶ್ರುತಿಗಳು ಬಂದಿರುತ್ತವೆ. ಆದ್ದರಿಂದಲೇ ಬ್ರಹ್ಮವನ್ನು ತಿಳಿದುಕೊಂಡರೆ ಮಿಗಿಲಿಲ್ಲದ ಫಲವುಂಟಾಗುತ್ತದೆಯೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಬ್ರಹ್ಮವು ಕಾಲ, ಆಕಾಶ- ಮುಂತಾದವುಗಳೆಲ್ಲವನ್ನೂ ಮೀರಿರುವದರಿಂದಲೂ ಅದು ಆನಂದಸ್ವರೂಪವೇ ಆಗಿರುವದರಿಂದಲೂ ಅದು ಪಡೆಯದೆ ಇರುವ ಭೋಗವಿಲ್ಲ, ಅದು ನಮ್ಮಂತೆ ಕ್ರಮಕ್ರಮವಾಗಿ ಕಾಮಗಳನ್ನು ಭೋಗಿಸುವ ಆವಶ್ಯಕತೆಯೂ ಇಲ್ಲ. ಇದು ಸರಿ, ಆದರೆ ನಮ್ಮ ಆತ್ಮನು ಬ್ರಹ್ಮಸ್ವರೂಪವೆಂಬುದಕ್ಕೆ ಪ್ರಮಾಣವೇನಿದೆ? ಅದು ಕಾಲಾಕಾಶಾದಿಗಳಿಂದ ಪರಿಚ್ಛಿನ್ನವಾಗಿರುವುದೆಂದೇ ನಮ್ಮ ಅನುಭವದಲ್ಲಿದೆಯಲ್ಲ!- ಎಂಬ ಶಂಕೆಗೆ ಉತ್ತರವಾಗಿ ಈ ಆತ್ಮನಿಂದಲೇ ಕಾಲಾಕಾಶಾದಿಗಳೂ ಉಂಟಾಗಿರುತ್ತವೆ- ಎಂದು ಶ್ರುತಿ ಹೇಳುತ್ತದೆ. ಆತ್ಮನು ನಿಜವಾಗಿ ಪರಿಚ್ಛಿನ್ನನಲ್ಲವೆಂದು ಹೇಳುವದು ಶ್ರುತಿಯ ಉದ್ದೇಶವೇ ಹೊರತು ಅವನಿಂದ ಕಾಲಾಕಾಶಾದಿಗಳು ಸೃಷ್ಟಿಯಾಗಿವೆಯೆಂದು ತಿಳಿಸುವದೇನೂ ಅದರ ಉದ್ದೇಶವಲ್ಲ. ಆದ್ದರಿಂದಲೇ ಸೃಷ್ಟಿಯನ್ನರಿತವನಿಗೆ ಇಂಥ ಫಲವೆಂದು ಯಾವ ಶ್ರುತಿಯಲ್ಲಿಯೂ ಹೇಳಿಲ್ಲ. ನಾವು ತಪ್ಪುತಿಳಿವಳಿಕೆಯಿಂದ ಕಾಣುವ ಸೃಷ್ಟಿಯೆಲ್ಲವೂ ಬ್ರಹ್ಮದಿಂದಲೇ ಬಂದಿರುತ್ತೆಯಾದ್ದರಿಂದ ಇದೆಲ್ಲವೂ ಬ್ರಹ್ಮವೇ ಎಂದು ತಿಳಿಸುವದು ಶ್ರುತಿಯ ಪರಮೋದ್ದೇಶವು. ಶ್ರುತಿಯ ಈ ಕ್ರಮಕ್ಕೆ ಅಧ್ಯಾರೋಪಾಪವಾದವೆಂದು ಹೆಸರು. ಜನರು ತಪ್ಪಾಗಿ ತಿಳಿದುಕೊಂಡಿರುವ ಸೃಷ್ಟಿಯನ್ನು ಅನುವಾದಮಾಡುವದು ಅಧ್ಯಾರೋಪವು; ಅದನ್ನು ಅಲ್ಲಗಳೆದು ಆತ್ಮಸ್ವರೂಪವನ್ನು ತಿಳಿಯಪಡಿಸುವದು ಅಪವಾದವು.

ಒಳ್ಳೆಯದು, ಆತ್ಮನಿಂದ ಕಾಲವೂ ಆಕಾಶವೂ ಉಂಟಾಗುವವೆಂಬುದಕ್ಕೆ ಯಾವ ಅನುಭವವಿದೆ?- ಎಂದು ಯಾರಾದರೂ ಕೇಳಬಹುದು. ಸುಷುಪ್ತಿ, ಮರಣ, ಪ್ರಲಯ- ಈ ಮೂರು ಅವಸ್ಥೆಗಳಲ್ಲಿಯೂ ಜಗತ್ತೆಲ್ಲವೂ ಬ್ರಹ್ಮದಲ್ಲಿ ಸೇರಿಹೋಗಿರುವದೆಂದೂ ಆಮೇಲೆ ಅದರಿಂದಲೇ ಹಿಂದಕ್ಕೆ ಬರುವದೆಂದೂ ಶ್ರುತಿಯು ಪ್ರತಿಪಾದಿಸುತ್ತದೆ. ಈ ಮೂರು ಸ್ಥಿತಿಗಳಲ್ಲಿ ಎಲ್ಲವೂ ಬ್ರಹ್ಮದಲ್ಲಿಯೇ ಒಂದಾಗಿದ್ದರೂ ಸ್ಥಿತಿಕಾಲದಲ್ಲಿ ಅದು ಬೇರೆಯಾಗಿರುವಂತೆ ತೋರುವದೇ ಪರಮೇಶ್ವರನ ಮಾಯೆ ಎಂದು ಭಾಗವತದಲ್ಲಿ ವರ್ಣಿಸಿರುತ್ತದೆ. ಮರಣಪ್ರಲಯವಿಚಾರಗಳು ನಮ್ಮ ಅನುಭವಕ್ಕೆ ಗೋಚರವಾಗುವದಿಲ್ಲವಾದ್ದರಿಂದ ಸುಷುಪ್ತಿಯ ವಿಚಾರವನ್ನೇ ನಾವು ಇಲ್ಲಿ ಮನದಂದುಕೊಳ್ಳಬೇಕಾಗಿದೆ. ನಮ್ಮ ಸುಷುಪ್ತಿಯಲ್ಲಿ ನಾವಿರುವದಂತೂ ಖಂಡಿತ. ಆದರೆ ನಾವು ಆಗ ಎಲ್ಲಿರುತ್ತೇವೆ? ಯಾವಕಾಲದಲ್ಲಿರುತ್ತೇವೆ?- ಎಂಬುದನ್ನಿಷ್ಟು ವಿಚಾರಮಾಡಿರಿ. ಆಗ ಅಲ್ಲಿ, ಇಲ್ಲಿ- ಎಂದಾಗಲಿ ಆಗ, ಈಗ- ಎಂದಾಗಲಿ ನಮಗೆ ತೋರುವದೇ ಇಲ್ಲ. ಆದ್ದರಿಂದ ಅಲ್ಲಿ ಕಾಲಾಕಾಶಗಳಿರುವದಿಲ್ಲ. ನಾವು ಮಾತ್ರ ಇರುತ್ತೇವೆ.

ಆದ್ದರಿಂದಲೇ ಆಗ ನಾವು ನಮ್ಮ ಸ್ವರೂಪವಾದ ಸದ್ರೂಪಬ್ರಹ್ಮದಲ್ಲಿ ಬೆರೆತಿರುತ್ತೇವೆ ಎಂದು **ಛಾಂದೋಗ್ಯವು** ಹೇಳುತ್ತಿದೆ. ಆಗ ನಾವು ಮತ್ತೇನನ್ನೂ ಏತರಿಂದಲೂ ಅರಿಯುವದಿಲ್ಲ; ಸುಷುಪ್ತಿಯೆಂದರೆ ಮತ್ತೇನನ್ನೂ ಹೇಗೂ ಅರಿಯದ ಅವಸ್ಥೆಯೆಂಬುದನ್ನು ಅರಿತುಕೊಳ್ಳುವದಕ್ಕೆ ಬೇಕಾದ ಚೈತನ್ಯಸ್ವರೂಪವು ಮಾತ್ರ ನಮಗೆ ಆಗಲೂ ಇದ್ದುಕೊಂಡಿರುತ್ತದೆ. ಆ ಚೈತನ್ಯದ ಬಲದಿಂದಲೇ ನಾವು ಸುಷುಪ್ತಿಯ ವಿಚಾರವನ್ನು ಈಗಲೂ ಮನಸ್ಸಿಗೆ ತಂದುಕೊಳ್ಳುವದಕ್ಕೂ ಮತ್ತೊಬ್ಬರಿಗೆ ಹೇಳುವದಕ್ಕೂ ಶಕ್ತರಾಗಿರುತ್ತೇವೆ. ಅಲ್ಲವೆ? ಆದ್ದರಿಂದಲೇ ಸುಷುಪ್ತಿಯಲ್ಲಿ ನಾವು ಪ್ರಾಜ್ಞ(ಚೈತನ್ಯಸ್ವರೂಪವಾದ) ಬ್ರಹ್ಮದೊಡನೆ ಒಂದಾಗಿರುವೆವೆಂದು ಬೃಹದಾರಣ್ಯಕವು ಹೇಳುತ್ತಿದೆ. ಹೀಗೆ ಆಗ ನಾವು ಕಾಲದೇಶವಸ್ತು ಪರಿಚ್ಛೇದವಿಲ್ಲದೆ ಇರುವದರಿಂದ ಅನಂತಸ್ವರೂಪರೂ ಆಗಿರುವೆವೆಂಬುದೂ ಅನುಭವಸಿದ್ಧವೇ ಆದಂತಾಯಿತು. ಆದ್ದರಿಂದ ನಮ್ಮ ಆತ್ಮನು ಬ್ರಹ್ಮಸ್ವರೂಪನೇ ಎಂದು ಅನುಭವದಲ್ಲಿದ್ದಂತೆ ಆಯಿತು.

ಹಾಗಾದರೆ ನಾವು ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳ ಸುತ್ತುವಳಯದಲ್ಲಿದ್ದು ಪರಿಚ್ಛಿನ್ನರಾಗಿರುವೆವೆಂಬ ಬುದ್ಧಿ ನಮಗೆ ಇರುವದಿಲ್ಲ! ಇದೇಕೆ?- ಎಂಬ ಪ್ರಶ್ನೆಯು ಎದ್ದುಕೊಳ್ಳುತ್ತದೆಯಷ್ಟೆ. ಈ ಬುದ್ಧಿಯು ನಮಗೆ ತಪ್ಪುತಿಳಿವಳಿಕೆಯಿಂದಾಗಿರುತ್ತದೆಯೆಂದು ತಿಳಿಸುವದಕ್ಕೇ ಶ್ರುತಿಯು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಐದು ಮಿಥ್ಯಾತ್ಮರನ್ನು ವರ್ಣಿಸುತ್ತದೆ. ಪಿಶಾಚಿಹಿಡಿದವನಲ್ಲಿ ಮತ್ತೊಂದು ಭೂತವೂ ಸೇರಿಕೊಂಡಿರುವಂತೆ ನಮ್ಮೊಳಗೆ ಐವರು ಆತ್ಮರುಗಳು ಸೇರಿಕೊಂಡಿರುವರೆಂದೇನೂ ಶ್ರುತಿಯ ಅಭಿಪ್ರಾಯವಲ್ಲ. ಕನಸಿನಲ್ಲಿ ಕಾಣುವ ತೋರಿಕೆಯ ದೇಹವನ್ನೇ ಜನರು ತಾವೆಂದು ಗಟ್ಟಿಯಾಗಿ ನಂಬಿರುವಂತೆ ನಾವು ಈ ಶರೀರಾದಿಗಳನ್ನೇ ನಾವೆಂದು ಗಟ್ಟಿಯಾಗಿ ನೆರೆನಂಬಿ ವ್ಯವಹರಿಸುತ್ತಿದ್ದೇವೆ. ಇದೇ ಅಧ್ಯಾಸವು, ಅಧ್ಯಾರೋಪವು. ಒಮ್ಮೆ ಇಂದ್ರನು ಶಾಪದಿಂದ ಹಂದಿಯಾಗಿ ಸಂಸಾರವನ್ನು ಮಾಡಿಕೊಂಡು ಹಂದಿಯ ಶರೀರದಲ್ಲಿಯೇ ಅಭಿಮಾನವನ್ನಿಟ್ಟುಕೊಂಡಿದ್ದನಂತೆ! ಬೃಹಸ್ಪತ್ಯಾಚಾರ್ಯರ ಉಪದೇಶದಿಂದ ದೇವತೆಗಳು ಆ ಶರೀರವನ್ನು ಕೊಂದುಹಾಕಿದ ಬಳಿಕವೇ ಅವನಿಗೆ ತನ್ನ ನಿಜವಾದ ಶರೀರದಲ್ಲಿ ಅಭಿಮಾನವು ಬಂದಿತಂತೆ! ಇದರಂತೆ ಶರೀರಾದಿಗಳಲ್ಲಿ ನೆಟ್ಟ ಅಭಿಮಾನದಿಂದ ನಾವು ಅನ್ನಮಯಾದಿಯಾದ ಆತ್ಮರೆಂದುಕೊಳ್ಳುತ್ತೇವೆ. ಆದರೆ ಶ್ರುತ್ಯಾಚಾರ್ಯರ ಉಪದೇಶದಿಂದ ಈ ಐದು ಆತ್ಮರೂ ಐದು ಕೋಶಗಳೇ, ಇವು ನಮ್ಮ ಸ್ವರೂಪವಲ್ಲ- ಎಂದು ಯಾವಾಗ ತಿಳಿದುಕೊಳ್ಳುವೆವೋ ಆಗ ಪಂಚಕೋಶ ವಿಲಕ್ಷಣವಾದ, ಇವೆಲ್ಲಕ್ಕೂ ಕಾರಣವಾದ, ಆತ್ಮನೇ ನಮ್ಮ ಸ್ವರೂಪವೆಂದು ತಿಳಿಯುತ್ತದೆ. ಸುಷುಪ್ತಿಯಲ್ಲಿ ಕಾಲಾಕಾಶಾದಿಗಳು ಇಲ್ಲದಿದ್ದರೂ ಎಚ್ಚತ್ತಕೂಡಲೆ ಇವುಗಳು ತೋರಿಕೊಳ್ಳುವದರಿಂದ ಅದ್ವಿತೀಯನಾದ ನಮ್ಮ ಆತ್ಮನೇ ಇವುಗಳಿಗೂ ಕಾರಣ- ಎಂದು

ಅಧ್ಯಾರೋಪದೃಷ್ಟಿಯಿಂದ ಹೇಳಬಹುದಾಗಿರುತ್ತದೆ. ಆದರೆ ನಮ್ಮ ನಿಜವಾದ ಆತ್ಮಸ್ವರೂಪವನ್ನು ಶ್ರುತಿಯ ಉಪದೇಶದಂತೆ ಅರಿತುಕೊಂಡಾಗ ಇವೆಲ್ಲವೂ ಅದ್ವಿತೀಯಾತ್ಮನೇ, ಆತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲವೇ ಇಲ್ಲ– ಎಂಬ ಜ್ಞಾನವುಂಟಾಗುತ್ತದೆ. ಇದೇ ಅಪವಾದದೃಷ್ಟಿಯೆಂದು ನಾನು ಮೇಲೆ ಹೇಳಿರುವದು.

ಶ್ರುತಿಯ ತಾತ್ಪರ್ಯವನ್ನು ಗೊತ್ತುಮಾಡಿಕೊಳ್ಳುವದು ಶ್ರವಣವು; ಗುರುಗಳೊಡನೆ ಮಾತನಾಡಿ ಇದನ್ನು ಯುಕ್ತಿಗೂ ಹೊಂದಿಸಿಕೊಳ್ಳುವದು ಮನನವು. ಆದರೆ ಮತ್ತೊಬ್ಬರ ಹಂಗಿಲ್ಲದೆ ತನ್ನ ಅನುಭವಕ್ಕೇ ಅದನ್ನು ಅಳವಡಿಸಿಕೊಳ್ಳುವದು ನಿದಿಧ್ಯಾಸನವು. ಇದನ್ನೇ "ಅಪರಾಯತ್ತಬೋಧವು" ಎಂದು ಸುರೇಶ್ವರಾಚಾರ್ಯರು ಕರೆದಿರುತ್ತಾರೆ. ಯಾರುಯಾರಿಗೆ ಈ ಬೋಧವು ಉಂಟಾಗುವದೋ ಅವರೆಲ್ಲರೂ ಪರಬ್ರಹ್ಮಸ್ವರೂಪರೇ ಆಗಿಬಿಡುತ್ತಾರೆ. ಅವರಿಗಿಂತ ಬೇರೆಯಾಗಿ ಮತ್ತೊಂದು ಯಾವದೂ ಇರುವದಿಲ್ಲವಾದ್ದರಿಂದ ಅವರಿಗೆ ಮತ್ತೆ ಯಾವದರ ಅಂಜಿಕೆಯೂ ಇರುವದಿಲ್ಲ. ಅವರು ಪಡೆದುಕೊಳ್ಳಬೇಕಾದ ಭೋಗವು ಮತ್ತೆ ಯಾವದೊಂದೂ ಉಳಿಯುವದಿಲ್ಲವಾದ್ದರಿಂದ ಅವರಿಗೆ ಸಕಲ ಸುಖಗಳೂ ಉಂಟಾದಂತೆ ಆಗುವದು. ಬ್ರಹ್ಮವು ನಿತ್ಯಾನಂದಸ್ವರೂಪವೇ ಆಗಿರುವದರಿಂದ ಅವರಿಗೆ ಉಂಟಾಗದೆ ಇರುವ ಸುಖವೇ ಇಲ್ಲ; ಅದಕ್ಕೆ ಕಾಲದ ಪರಿಚ್ಛೇದವೇ ಇಲ್ಲದ್ದರಿಂದ ಒಂದೇ ಕಾಲದಲ್ಲಿ ಅವರಿಗೆ ಎಲ್ಲಾ ಕಾಮಗಳೂ ದೊರಕುವವು ಎಂದು ಶ್ರುತಿಯು ಈ ಜ್ಞಾನವನ್ನು ಹೊಗಳಿರುತ್ತದೆ.

ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೊಂದೂ ಇಲ್ಲವೆಂದು ಮೇಲೆ ಹೇಳಿದ್ದಾಗಿದೆ. "ದೇವದತ್ತನು ಹುಲಿಯಾದನು" ಎಂಬಂತೆ ಬ್ರಹ್ಮವೇ ಕಾಲ, ಆಕಾರ, ಪಂಚಭೂತಗಳು, ಶರೀರಾದಿಗಳು– ಈ ಎಲ್ಲಾ ರೂಪವನ್ನೂ ತಳೆದಿರುತ್ತದೆ. ಈ ಅರ್ಥದಲ್ಲಿ ನೋಡಿದರೆ ಅದು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ– ಎಂಬ ಒಂದರೊಳಗೊಂದಿರುವ ಆರೋಪಿತವಾಗಿರುವ ಆತ್ಮರೆಲ್ಲರಿಗೂ ತೀರ ಒಳಗೆ ಇರುವ ನಿಜವಾದ ಆತ್ಮನಾಗಿದೆ. ಈ ದೃಷ್ಟಿಯಿಂದ ಶ್ರುತಿಯು ಅದನ್ನು ಗುಹೆಯಲ್ಲಿದೆ ಎಂದು ಹೇಳುತ್ತಿದೆ. ಗುಹೆಯನ್ನು ಮಾಡಿಕೊಂಡು ಒಳಗೆ ಕುಳಿತಿರುವ ತಾಪಸಿಯಂತೆ ಆತ್ಮನು ಈ ಪಂಚಕೋಶದ ಗುಹೆಯೊಳಗೆ ಸಾಕ್ಷಿಯಾಗಿರುತ್ತಾನೆ. ಈ ಸಾಕ್ಷಿಯ ಸ್ವರೂಪವನ್ನು ತಿಳಿದರೆ ಅವನೇ ಎಲ್ಲವೂ ಆಗಿರುವ ಸಚ್ಚಿದಾನಂದಬ್ರಹ್ಮವೆಂದು ಗೊತ್ತಾಗಿ ಅಮಿತವಾದ ಆನಂದವುಂಟಾಗುತ್ತದೆ. ಇದೇ ಶ್ರುತಿಯ ತಾತ್ಪರ್ಯವು ಎಂದು ಅದ್ವೈತಿಗಳು ಹೇಳುತ್ತಾರೆ.

x - x

# ಇ. ಉಪನಿಷತ್ ಸಂದೇಶಗಳು

## 1. ಇರವಿನ ಅರಿವು

### 1.1 ಅಭ್ಯಾರೋಹ

**ಅಸತೋಮಾ ಸದ್ಗಮಯ ತಮಸೋ ಮಾ**

**ಜ್ಯೋತಿರ್ಗಮಯ ಮೃತ್ಯೋರ್ಮಾಮೃತಂ ಗಮಯ ॥** (ಬೃ. 1-3-28)

"ಅಸತ್ತಿನಿಂದ ನನ್ನನ್ನು ಸತ್ತಿನ ಬಳಿಗೆ ಕರೆದುಕೊಂಡು ಹೋಗು; ಕತ್ತಲೆಯಿಂದ ನನ್ನನ್ನು ಬೆಳಕಿನ ಬಳಿಗೆ ಕರೆದುಕೊಂಡು ಹೋಗು; ಮೃತುವಿನಿಂದ ನನ್ನನ್ನು ಅಮೃತದ ಬಳಿಗೆ ಕರೆದುಕೊಂಡು ಹೋಗು."

ಈ ಮಂತ್ರಗಳು ಪ್ರಾಣೋಪಾಸಕನಿಗೆ ಜಪಕ್ಕಾಗಿ ವಿಹಿತವಾಗಿವೆ. ಈ ಜಪಕ್ಕೆ "ಅಭ್ಯಾರೋಹ" (ಮೇಲಕ್ಕೇರುವದು) ಎಂಬ ಹೆಸರಿದೆ. ಯಜ್ಞದಲ್ಲಿ ಪ್ರಸ್ತೋತೃವಾದವನು ಇವುಗಳನ್ನು ಜಪಿಸಿದರೆ ಅವನಿಗೆ ಉನ್ನತವಾದ ಗತಿಯು ಆಗುವದೆಂಬ ನಂಬಿಕೆಯು ಈ ಹೆಸರಿನಲ್ಲಿ ಅಡಗಿರುತ್ತದೆ. ಈಗ ನಾವುಗಳು ಯಜ್ಞದಲ್ಲಿ ಪ್ರಸ್ತೋತೃಗಳಾಗುವ ಸಂಭವವು ತೀರ ಕಡಿಮೆಯಾದರೂ ಈ ಮಂತ್ರಗಳ ಅರ್ಥವನ್ನು ಮನಸ್ಸಿಗೆ ತಂದುಕೊಳ್ಳುವದು ನಮ್ಮ ಅಭ್ಯಾರೋಹಕ್ಕೆ, ಎಂದರೆ ನಮ್ಮ ಉನ್ನತಿಗೆ, ಕಾರಣವಾಗಿರುವದೆನ್ನುವದಕ್ಕೆ ಸಂಶಯವಿಲ್ಲ.

ಅಸತ್ತೆಂದರೆ ಏನು? ಇಲ್ಲದಿರುವದು, ಕೆಟ್ಟದು. ನಮ್ಮ ಸ್ವೇಚ್ಛೆಯಿಂದ ನಾವು ಮಾಡುವ ಕೆಲಸಗಳೂ ಆ ಕೆಲಸಗಳಿಗೆ ಅಡಿಗಟ್ಟಾಗಿರುವ ಅಜ್ಞಾನವೂ ನಮ್ಮ ಜೀವನವನ್ನು ಅಸತ್ತಾಗಿ ಮಾಡಿಬಿಡುತ್ತವೆ, ಈ ನಮ್ಮ ಜೀವನವು ನಿಸ್ಸಾರವಾಗಿ ದುಃಖಮಯವಾಗಿರುತ್ತದೆ. ಈ ಜೀವನಕ್ರಮವನ್ನು ಬಿಟ್ಟು ನಾವು ಸದ್ರೂಪವಾದ ಜೀವನವನ್ನು ಹೊಂದಬೇಕು; ಶಾಸ್ತ್ರದಲ್ಲಿ ಹೇಳಿರುವ ಉತ್ತಮರೀತಿಯ ತಿಳಿವಳಿಕೆಯನ್ನೂ ಆ ತಿಳಿವಳಿಕೆಗೆ ಅನುಗುಣವಾದ ವ್ಯವಹಾರವನ್ನೂ ಸಂಪಾದಿಸಿಕೊಳ್ಳಬೇಕು. ಆದ್ದರಿಂದ ನಾವುಗಳೆಲ್ಲರೂ "ಅಸತ್ತಿನಿಂದ ನನ್ನನ್ನು ಸತ್ತಿನ ಬಳಿಗೆ ಕರೆದುಕೊಂಡು ಹೋಗು" ಎಂದು ಪ್ರಾರ್ಥಿಸಬಹುದಾಗಿದೆ.

ಈಗಿನ ನಮ್ಮ ಜೀವನಕ್ರಮದಲ್ಲಿ ಎಲ್ಲೆಲ್ಲಿಯೂ ಕತ್ತಲೆ ಕವಿದಿರುವದು, ಏನುಮಾಡಬೇಕೆಂಬ ತಿಳಿವಳಿಕೆಯ ಬೆಳಕೇ ಇರುವದಿಲ್ಲ. ಆದ್ದರಿಂದ ನಾವು "ಕತ್ತಲೆಯಿಂದ ನನ್ನನ್ನು ಬೆಳಕಿನ ಬಳಿಗೆ ಕರೆದುಕೊಂಡು ಹೋಗು" ಎಂದು ಪ್ರಾರ್ಥಿಸಬಹುದಾಗಿದೆ.

ನಮ್ಮ ಜೀವನವು ಮೃತ್ಯುವಿನ ಬಾಯಿಗೆ ತುತ್ತಾಗಿರುತ್ತದೆ. ಇದರಲ್ಲಿ ಎಲ್ಲಿ ನೋಡಿದರೂ

ಅಲ್ಲಿ ಮೃತ್ಯುವು ಬಾಯಿಯನ್ನು ತೆರೆದುಕೊಂಡು ನಿಂತಿರುವಂತೆ ವಿವೇಕಿಯಾದವನಿಗೆ ಭಾಸವಾಗುತ್ತದೆ. ದೇಹೇಂದ್ರಿಯಗಳನ್ನು ವಿಷಯಭೋಗಕ್ಕೆಂದು ಮನಬಂದಂತೆ ಹರಿಯಬಿಡುವವನು ವಿಷಯಗಳನ್ನು ತಾನು ಪೂರ ಭೋಗಿಸುವದರೊಳಗಾಗಿ ಅವುಗಳೇ ತನ್ನನ್ನು ಭೋಗಿಸಿರುವದೆಂದೂ ತನ್ನನ್ನು ರೋಗವೂ ಸಂಕಟವೂ ಮುಪ್ಪೂ ಮರಣವೂ ಮುತ್ತಿಕೊಂಡಿರುವವೆಂದೂ ಬಹುಬೇಗನೆ ಕಂಡುಕೊಳ್ಳುವನು. ನಮ್ಮಲ್ಲಿ ಯಾರಿಗೂ ಮೃತ್ಯುವು ಬೇಡ, ನಾವು ಅಮೃತರಾಗಬೇಕೆಂದೇ ಆಸೆಯಿದೆ. ಆದ್ದರಿಂದ ನಾವು "ಮೃತ್ಯುವಿನಿಂದ ನನ್ನನ್ನು ಅಮೃತದ ಬಳಿಗೆ ಕರೆದುಕೊಂಡುಹೋಗು" ಎಂದು ಪ್ರಾರ್ಥಿಸಬಹುದಾಗಿದೆ.

ಯಾರಿಗೆ ಸದ್ರೂಪವಾದ ಜ್ಯೋತೀರೂಪವಾದ ಅಮೃತರೂಪವಾದ ಜೀವನವು ಬೇಕೋ ಅವರು ಸಚ್ಚಿದಾನಂದರೂಪನಾದ ಪರಮಾತ್ಮನನ್ನು ಕಂಡುಕೊಳ್ಳಬೇಕು. ಈ ಸಾಕ್ಷಾತ್ಕಾರವು ಹೇಗಾಗಬೇಕೆಂದು ಹಂಬಲಿಸುವವರಿಗೆ ವೇದಾಂತದಲ್ಲಿ ಮಾರ್ಗೋಪದೇಶವು ದೊರೆಯುತ್ತದೆ.

## 1.2. ಉಪನಿಷತ್ತುಗಳ ಮುಖ್ಯೋಪದೇಶ

**ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್ ।**
**ಅಸ್ತಿ ಬ್ರಹ್ಮೇತಿ ಚೇದ್ವೇದ । ಸನ್ತಮೇನಂ ತತೋ ವಿದುರಿತಿ ॥ (ತೈ. 2-6)**

"ಬ್ರಹ್ಮವು ಅಸತ್ತೆಂದು ತಿಳಿದರೆ, ಅವನು ಅಸತ್ತೇ ಆಗುವನು; ಬ್ರಹ್ಮವು ಇದೆಯೆಂದು ತಿಳಿದನಾದರೆ, ಅದರಿಂದ ಅವನನ್ನು ಸತ್ತೆಂದು ಎಣಿಸುವರು."

ಪರಮಾತ್ಮನೇ ಎಲ್ಲಕ್ಕೂ ಮಿಗಿಲಾದವನಾದ್ದರಿಂದ ಬ್ರಹ್ಮವೆನಿಸಿರುವನು, ಅವನಿಗಿಂತ ಹೆಚ್ಚಿನ ತತ್ತ್ವವು ಮತ್ತೊಂದಿಲ್ಲ; ಪರಮಾತ್ಮನನ್ನು ಅರಿತುಕೊಂಡರೆ ಪರಮಪುರುಷಾರ್ಥವನ್ನು ಪಡೆದಂತಾಗುವದು-ಎಂಬುದು ಉಪನಿಷತ್ತುಗಳ ಮುಖ್ಯೋಪದೇಶವು.

ಆದರೆ ಆ ಪರಮಾತ್ಮನು ಇದಾನೆಂಬುದಕ್ಕೆ ಪ್ರಮಾಣವೇನು? ಯಾವದು ಇದೆಯೋ ಅದು ವ್ಯವಹಾರಕ್ಕೆ ಸಿಕ್ಕಬೇಕು; ಎಂದರೆ ಕಣ್ಣಿನಿಂದ ನೋಡುವದಕ್ಕಾಗಲಿ, ಕಿವಿಯಿಂದ ಕೇಳುವದಕ್ಕಾಗಲಿ, ಮೂಗಿನಿಂದ ಮೂಸುವದಕ್ಕಾಗಲಿ, ನಾಲಗೆಯಿಂದ ಸವಿ ನೋಡುವದಕ್ಕಾಗಲಿ, ಮೈಕೈಗಳಿಂದ ಮುಟ್ಟುವದಕ್ಕಾಗಲಿ ಬರುವಂತಿರಬೇಕು, ಕೊನೆಗೆ ಮನಸ್ಸಿನಿಂದ ಯೋಚಿಸಿ ಅರಿಯುವದಕ್ಕಾದರೂ ಬರುವಂತಿರಬೇಕು; ಯಾವದು ಹೀಗೆ ವ್ಯವಹಾರಕ್ಕೆ ಸಿಕ್ಕುವದೇ ಇಲ್ಲವೋ ಅದನ್ನು ಇದೆಯೆಂದು ಹೇಗೆ ಕರೆಯುವದು?

ಈ ಶಂಕೆಗೆ ಮೇಲಿನ ಮಂತ್ರದಲ್ಲಿ ಉತ್ತರವಿದೆ. ಯಾವನು ಪರಮಾತ್ಮನನ್ನು ಇಲ್ಲವೆಂದು ತಿಳಿಯುವನೋ ಅವನು ಅಸತ್ತೇ ಆಗುವನು. ಪರಮಾತ್ಮನ ಇರವೇ ನಮ್ಮಗಳಲ್ಲಿ

ತೋರುವ ಇರವು; ಆ ಬ್ರಹ್ಮವೇ ಇಲ್ಲವಾದರೆ ನಮ್ಮಗಳ ಇರವೇ ಇಲ್ಲವೆಂದಾಗುವದು. ನಮ್ಮ ಜೀವನವು ಸತ್ತೆನಿಸಬೇಕಾದರೆ ಆ ಪರಮಾತ್ಮನ ಇರವನ್ನು ನಾವು ಕಂಡುಕೊಳ್ಳಬೇಕು. ಪರಮಾತ್ಮನ ಇರವನ್ನು ಒಪ್ಪದವನು ಸನ್ಮಾರ್ಗವನ್ನೇ ಕೈಬಿಡುವ ಸಂಭವವುಂಟು; "ಲೋಕಾಂತರದಲ್ಲಾಗಲಿ ಜನ್ಮಾಂತರದಲ್ಲಾಗಲಿ ನಾವು ಈಗ ಮಾಡುವ ಸತ್ಕರ್ಮಗಳಿಗೆ ಫಲವನ್ನು ಸದ್ರೂಪನಾದ ಪರಮಾತ್ಮನು ಕೊಟ್ಟೇ ತೀರುತ್ತಾನೆ" ಎಂದು ನಂಬಿಕೆಯಿರುವವನು ಹಾಗಲ್ಲ, ಸರಿಯಾದ ಮಾರ್ಗಕ್ಕೆ ಬೇಕಾದ ನಡೆನುಡಿಯನ್ನೇ ಅನುಸರಿಸಿ ಸತ್ಪುರುಷನೇ ಆಗಿರುತ್ತಾನೆ.

ನಮ್ಮ ಅಸತ್ತಾಗಿರುವ, ಎಂದರೆ ಇದ್ದರೂ ಇಲ್ಲದಂತಾಗಿರುವ, ಈ ಜೀವನವು ಸತ್ತಾಗಿ ಸಾರವತ್ತಾಗಿರುವ ಉತ್ತಮಜೀವನವಾಗಬೇಕಾದರೆ ನಾವು ಪರಮಾತ್ಮನ ಇರವನ್ನು ಕಂಡುಕೊಳ್ಳಬೇಕು, ನಾವು ಮಾಡುವ ಸಕಲಕರ್ಮಗಳನ್ನೂ ಆತನಿಗೆ ಅರ್ಪಣೆಮಾಡಬೇಕು, ಆತನು ನಮ್ಮ ಯಾವ ವ್ಯವಹಾರಕ್ಕೂ ಗೋಚರನಾಗದಿದ್ದರೂ ನಮ್ಮ ವ್ಯವಹಾರಗಳಿಗೆಲ್ಲ ಮೂಲವಾಗಿ ನಮ್ಮ ಇರವಿನ ಜೀವಾಳವೇ ಆಗಿರುವನೆಂಬ ಅರಿವಿನ ಆನಂದವನ್ನು ಪಡೆದುಕೊಳ್ಳಬೇಕು.

## 1.3. ನಮ್ಮ ಇರವಿನ ತಿರುಳು

**ಇಮಾಃ ಸೋಮ್ಯ ನದ್ಯಃ ಪುರಸ್ತಾತ್ಪ್ರಾಚ್ಯಃ ಸ್ಯನ್ದನ್ತೇ ಪಶ್ಚಾತ್ಪ್ರತೀಚ್ಯಸ್ತಾಃ ಸಮುದ್ರಾತ್ ಸಮುದ್ರಮೇವಾಪಿಯನ್ತಿ ಸ ಸಮುದ್ರ ಏವ ಭವತಿ ತಾ ಯಥಾ ತತ್ರ ನ ವಿದುರಿಯಮಹಮಸ್ಮೀಯಮಹಮಸ್ಮೀತಿ ॥**
**ಏವಮೇವ ಖಲು ಸೋಮ್ಯೇಮಾಃ ಸರ್ವಾಃ ಪ್ರಜಾಃ ಸತ ಆಗಮ್ಯ ನ ವಿದುಃ ಸತ ಆಗಚ್ಛಾಮಃ ಇತಿ....॥ (ಛಾಂದೋಗ್ಯ 6-10-1,2)**

"ಅಪ್ಪ, ಹೇಗೆ ಈ ನದಿಗಳಲ್ಲಿ ಮೂಡಲ ಕಡೆಗೆ ಹರಿಯುವವು ಮೂಡಲ ದಿಕ್ಕಿಗೇ ಹೋಗುತ್ತಿರುವವೋ ಪಡುವಲಕಡೆಗೆ ಹರಿಯುವವು ಪಡುವಲದಿಕ್ಕಿಗೇ ಹೋಗುತ್ತಿರುವವೋ, ಅವು ಸಮುದ್ರದಿಂದ ಬಂದು ಸಮುದ್ರದಲ್ಲಿಯೇ ಹೇಗೆ ಸೇರಿಕೊಳ್ಳುವವೋ, ಆಮೇಲೆ ಅದೆಲ್ಲವೂ ಸಮುದ್ರವೇ ಆಗಿಬಿಡುವದೋ, ಇದರಂತೆಯೇ, ಏನಯ್ಯ, ಈ ಸಕಲ ಪ್ರಾಣಿಗಳೂ ಸತ್ತಿನಿಂದಲೇ ಬಂದಿದ್ದರೂ ಸತ್ತಿನಿಂದ ಬಂದಿರುವೆವೆಂದು ತಿಳಿದುಕೊಳ್ಳದೆ ಇರುವವು."

ಸದ್ರೂಪವಾದ ಪರಮಾತ್ಮನೇ ನಮ್ಮ ಇರವಿನ ತಿರುಳು, ನಾವು ಆತನನ್ನು ಬಿಟ್ಟು ಬೇರೆಯಾಗಿ ಇರಲೇ ಆರೆವು-ಎಂಬುದು ವೇದಾಂತದ ಉಪದೇಶವು. ನಾವು ಸತ್ತಿನಲ್ಲಿಯೇ

ಇರುವದಾದರೆ, ಅದರಲ್ಲಿರುವೆವೆಂದು ನಮಗೇಕೆ ತಿಳಿಯುವದಿಲ್ಲ? ಅದರಿಂದ ಬಂದಿದ್ದರೆ ನಮಗೇಕೆ ನಾವು ಸದ್ರೂಪನಾದ ಪರಮಾತ್ಮನಿಂದ ಬಂದಿರುವೆವೆಂದು ತಿಳಿಯುವದಿಲ್ಲ?– ಎಂಬ ಶಂಕೆಗೆ ಮೇಲಿನ ವಾಕ್ಯದಲ್ಲಿ ಉತ್ತರವನ್ನು ಕೊಟ್ಟಿರುತ್ತದೆ.

ಸ್ಥೂಲವಾಗಿ ನೋಡಿದರೆ ನಾವು ಸ್ವತಂತ್ರರಾಗಿಯೇ ಇರುವಂತೆ ಥಟ್ಟನೆ ತೋರಿದರೂ ಚೆನ್ನಾಗಿ ಒಳಹೊಕ್ಕು ನೋಡಿದರೆ ನಾವು ಸದ್ರೂಪನಾದ ಪರಮಾತ್ಮನಿಂದಲೇ ಬಂದಿರುವೆವೆಂದೂ ಕೊನೆಗೆ ಪರಮಾತ್ಮನಲ್ಲಿಯೇ ಸೇರಿಕೊಳ್ಳುವೆವೆಂದೂ ಮನದಟ್ಟಾಗುತ್ತದೆ. ಈಗಲೂ ನಾವು ಆ ಪರಮಾತ್ಮನಲ್ಲಿಯೇ ಇದ್ದುಕೊಂಡಿರುವೆವೆಂಬುದು ಆಗ ನೆಲೆಗೆ ನಿಲ್ಲುತ್ತದೆ. ಇದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು. ನದಿಗಳನ್ನು ನೋಡಿರಿ, ಇವುಗಳಲ್ಲಿ ಕೆಲವು ಪಶ್ಚಿಮಕ್ಕೆ ಹರಿಯುತ್ತವೆ, ಕೆಲವು ಪೂರ್ವಕ್ಕೆ ಹರಿಯುತ್ತವೆ. ಈ ದೃಷ್ಟಿಯಿಂದ ನೋಡಿದರೆ ಈ ಎರಡು ಬಗೆಯ ನದಿಗಳೂ ಸ್ವತಂತ್ರವಾಗಿ ಬೇರೆಬೇರೆಯಾಗಿಯೇ ಹುಟ್ಟಿ ಬೇರೆಬೇರೆಯ ಸಮುದ್ರಕ್ಕೇ ಹೋಗಿ ಸೇರುವವೆಂದು ತೋರುತ್ತದೆಯಲ್ಲವೆ? ಆದರೆ ಸ್ವಲ್ಪ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಏನು ಕಾಣುವದು? ನದಿಗಳ ನೀರೆಲ್ಲ ಸಮುದ್ರದಿಂದಲೇ ಬಂದಿರುತ್ತದೆ; ಸಮುದ್ರವೆಂಬುದೆಲ್ಲ ಒಂದೇ ಒಂದು ಜಲರಾಶಿಯು. ಸಮುದ್ರದ ನೀರು ಸೂರ್ಯನ ಕಿರಣದಿಂದ ಕಾದು ಆವಿಯಾಗಿ ಮೋಡವಾಗುತ್ತದೆ; ಆಮೇಲೆ ತಣ್ಣಗಾಗಿ ಮಳೆಯಾಗಿ ನೆಲದ ಮೇಲಕ್ಕೆ ಸುರಿಯುತ್ತದೆ; ಹೀಗೆ ಸುರಿದ ನೀರೇ ಬೇರೆಬೇರೆ ಹೆಸರಿನ ನದಿಗಳಾಗಿ ಬೇರೆಬೇರೆಯ ಕಡೆಯಿಂದ ಬೇರೆಬೇರೆಯ ಕಡೆಗೆ ಹರಿದು ಬೇರೆಬೇರೆಯ ಸಮುದ್ರಭಾಗಕ್ಕೆ ಹೋಗಿ ಸೇರುತ್ತದೆ. ಅಲ್ಲವೆ? ಇದರಂತೆಯೇ ಬೇರೆಬೇರೆಯ ಜೀವರುಗಳಾದ ನಾವೆಲ್ಲರೂ ನಮ್ಮ ಜೀವನಪ್ರವಾಹಕ್ಕೆ ಮೂಲವಾಗಿ ಸಾಗರದಂತಿರುವ ಪರಮಾತ್ಮನಿಂದ ಎದ್ದ ಮೋಡಗಳ ಮಳೆಯ ಫಲವಾಗಿರುತ್ತೇವೆ; ಬೇರೆಬೇರೆಯ ಪ್ರವೃತ್ತಿಗಳಿಂದ ಬಾಳಿಬದುಕಿ ಕೊನೆಗೆ ಆ ಸಾಗರದಲ್ಲಿಯೇ ಸೇರುತ್ತೇವೆ.

ಹೀಗೆ ನೋಡಿದರೆ, ಸಮುದ್ರದ ನೀರಿಗಿಂತ ಬೇರೆಯಾಗಿ ನದಿಗಳ ನೀರೆಂಬುದೇ ಹೇಗೆ ಬೇರೆಯಿಲ್ಲವೋ, ಅದರಂತೆಯೇ ಆ ಪರಮಾತ್ಮನ ಚೈತನ್ಯ ಸಲಿಲಕ್ಕಿಂತ ಬೇರೆಯಾಗಿ ನಮ್ಮ ಚೈತನ್ಯವೆಂಬುದೊಂದು ಇಲ್ಲವೇ ಇಲ್ಲ. ಆತನೇ ನಮ್ಮ ಜೀವನದ ಜೀವನವು; ಆತನೇ ನಮಗೆ ಪರಮಗತಿಯು.

****

## 1.4. ಸದ್ರೂಪನನ್ನು ಅರಿಯುವದು

"ಏತತ್‌ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್" (ಶ್ವೇತಾಶ್ವತರ 1-12)

"ತನ್ನೊಳಗೇ ಇದ್ದುಕೊಂಡಿರುವ ಈತನನ್ನು ನಿಯಮದಿಂದ ಅರಿಯಬೇಕು. ಇದಕ್ಕಿಂತ ಬೇರೆಯಾಗಿ ತಿಳಿಯತಕ್ಕದ್ದು ಮತ್ತೊಂದು ಯಾವದೂ ಇರುವದಿಲ್ಲ."

ಸದ್ರೂಪನಾಗಿರುವ-ಎಂದರೆ ಇರವಿನ ರೂಪನಾಗಿರುವ ಪರಮಾತ್ಮನ್ನು ಎಲ್ಲಿ ಹೇಗೆ ತಿಳಿದುಕೊಳ್ಳಬೇಕು? ಲೋಕದಲ್ಲಿ ನಾವು ತಿಳಿದುಕೊಳ್ಳಬೇಕಾಗಿರುವ ಎಷ್ಟೋ ವಿಷಯಗಳಿರುವಲ್ಲಿ ಮೊದಲು ಪರಮಾತ್ಮನನ್ನೇ ಅರಿಯುವದಕ್ಕೆ ಏತಕ್ಕೆ ಪ್ರಯತ್ನಿಸಬೇಕು?-ಎಂದು ಕೆಲವರಿಗೆ ಶಂಕೆ ಬರಬಹುದು. ಇದಕ್ಕೆ ಈ ಮಂತ್ರ ಭಾಗದಲ್ಲಿ ಪರಿಹಾರವಿದೆ.

ಪರಮಾತ್ಮನು ಇರವಿನ ಸ್ವರೂಪದವನೆನ್ನುವದರಿಂದಲೇ ಆತನನ್ನು ಇರವಿನ ರೂಪದಲ್ಲಿ ಅರಿತುಕೊಳ್ಳಬೇಕೆಂದು ಏರ್ಪಡುತ್ತದೆ. ಯಾವದರ ಇರವಿನ ವಿಷಯಕ್ಕೆ ಒಂದಿಷ್ಟೂ ಸಂಶಯವುಂಟಾಗುವಂತಿಲ್ಲವೋ, ಯಾವದರ ಇರವು ಒಂದಿಷ್ಟೂ ಮುಕ್ಕಾಗುವಂತಿಲ್ಲವೋ, ಅದೇ ನಿಜವಾದ ಇರವುಳ್ಳ ವಸ್ತುವು. ಆ ವಸ್ತುವನ್ನೇ ಪರಮಾತ್ಮನೆಂದು ಅರಿತುಕೊಳ್ಳಬೇಕು-ಎಂದು ಇದರಿಂದ ಏರ್ಪಡುತ್ತದೆ.

ಲೋಕದಲ್ಲಿ ಯಾವದೊಂದು ಹೊರಗಿನ ಪದಾರ್ಥವನ್ನು ಮನಸ್ಸಿಗೆ ತಂದುಕೊಂಡರೂ ಅದು ಇದ್ದಂತೆ ಇರುವದಿಲ್ಲ. ಕ್ಷಣಕ್ಷಣಕ್ಕೂ ಅದು ಮಾರ್ಪಡುತ್ತಲೇ ಇರುತ್ತದೆ. ಇದೂ ಅಲ್ಲದೆ, ಯಾವ ಹೊರಗಿನ ಪದಾರ್ಥವನ್ನು ನೋಡಿದರೂ ಅದರ ಇರವು ಸ್ವತಂತ್ರವಾದ ಇರವಾಗಿರುವದಿಲ್ಲ; ಹೊರಗಿನ ವಿಷಯಗಳೆಲ್ಲ ನಮ್ಮ ಇಂದ್ರಿಯಗಳ ಸಂಬಂಧವನ್ನು ಬಯಸುವ ಇರವನ್ನುಳ್ಳವುಗಳಾಗಿವೆ, ಇಂದ್ರಿಯಗಳು ಮನಸ್ಸನ್ನವಲಂಬಿಸಿರುತ್ತವೆ, ಈ ಮನಸ್ಸೂ ನಮ್ಮನ್ನು ಆಶ್ರಯಿಸಿದೆ. ಆದರೆ ದೇಹ, ಇಂದ್ರಿಯ, ಪ್ರಾಣ, ಮನಸ್ಸು ಇವುಗಳೆಲ್ಲಕ್ಕೂ ಒಳಗಡೆ ಇರುವ ಚೈತನ್ಯವಾದ ನಮ್ಮ ಆತ್ಮನು ಮಾತ್ರ ತನ್ನ ಇರವನ್ನು ಯಾರಿಂದಲೂ ಸಾಲವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಅವನ ಇರವು ಸಹಜವಾಗಿ ಸ್ವತಂತ್ರವಾಗಿರುತ್ತದೆ. ಆದಕಾರಣ ಪರಮಾತ್ಮನ ಇರವು ಎಲ್ಲಿ ಸ್ಪಷ್ಟವಾಗಿ ತೋರುತ್ತಿದೆ?-ಎಂಬ ಪ್ರಶ್ನೆಗೆ ನಮ್ಮ ಆತ್ಮನಲ್ಲಿಯೇ ತೋರುತ್ತಿದೆ ಎಂಬುದು ಉತ್ತರವಾಯಿತು. ಆದ್ದರಿಂದ ಹೀಗೆ ಆತ್ಮನಲ್ಲಿ ತೋರುವ ಚೈತನ್ಯದ ಇರವನ್ನೇ ಕುರುಹಿಟ್ಟು ಅರಿತುಕೊಳ್ಳಬೇಕು. ಅಲ್ಲಿಯೇ ಪರಮಾತ್ಮನು ನಮಗೆ ಗೋಚರನಾಗುವನು.

ಪರಮಾತ್ಮನು ಅನಾತ್ಮವಸ್ತುಗಳಂತೆ ಅಲ್ಲಿ, ಇಲ್ಲಿ-ಎಂದು ಬೆಟ್ಟಿಟ್ಟು ತೋರಿಸುವದಕ್ಕೆ ಬರುವಂಥ ಸ್ವರೂಪದವನಲ್ಲ; ಏಕೆಂದರೆ "ಅಲ್ಲಿ" "ಇಲ್ಲಿ"-ಎಂದು ವಿಭಾಗವು

ಆಕಾಶದಿಗ್ದೇಶಗಳಿಗೆ ಸಂಬಂಧಪಟ್ಟದ್ದು, ಈ ಆಕಾಶಾದಿಗಳು ಕೂಡ ಆತ್ಮಚೈತನ್ಯದ ಬಲದಿಂದಲೇ ಇರವುಳ್ಳವುಗಳಾಗಿಯೇ ಹೊರತು ಅವಕ್ಕೆ ಸ್ವಂತವಾದ ಇರವು ಯಾವದೂ ಇಲ್ಲ. ಆದ್ದರಿಂದ ಮಿಕ್ಕದ್ದೆಲ್ಲವೂ ಪರಮಾತ್ಮನಲ್ಲಿದೆ, ಪರಮಾತ್ಮನು ಏತರಲ್ಲಿಯೂ ಇಲ್ಲ; ಆತನು ತನ್ನಲ್ಲಿಯೇ ತಾನು ಇದ್ದುಕೊಂಡಿರುವ ಮಹಿಮೆಯುಳ್ಳವನು.

ಪರಮಾತ್ಮನನ್ನು ಅರಿತುಕೊಂಡರೆ–ಎಂದರೆ ವಿಷಯವಾಗಿ ಅರಿತುಕೊಳ್ಳಬಹುದಾದ ಶಬ್ದಾದಿಗಳು, ಇಂದ್ರಿಯಗಳು, ಮನಸ್ಸು–ಇವುಗಳನ್ನೆಲ್ಲ ಹೊರಕ್ಕೆ ತಳ್ಳಿ ಒಳಕ್ಕೆ ಸರಿದುಕೊಂಡು ನಮ್ಮ ಆತ್ಮಚೈತನ್ಯದಲ್ಲಿ ನಾವು ನಿಂತುಬಿಟ್ಟರೆ–ಈ ಕಣ್ಣಿನಿಂದ ನೋಡಿದಾಗ ಪರಮಾತ್ಮನಿಗಿಂತ ಆಚೆಗಾಗಲಿ ಈಚೆಗಾಗಲಿ ಯಾವ ಪದಾರ್ಥವೂ ನಿಜವಾಗಿ ಇರುವದೇ ಇಲ್ಲವೆಂದು ತಿಳಿಯುವದು. ಪರಮಾತ್ಮನ ಇರವೇ ಮಿಕ್ಕೆಲ್ಲದ್ದರಲ್ಲಿಯೂ ಮಾರುಹೋಳೆಯುತ್ತಿರುವದೆಂದೂ ಆ ಇರವಿನಿಂದ ಬೇರ್ಪಡಿಸಿದರೆ ಯಾವದೆಂದೂ ಉಳಿಯುವದೇ ಇಲ್ಲವೆಂದೂ ಆಗ ಸ್ಪಷ್ಟವಾಗಿಬಿಡುತ್ತದೆ. ಹೀಗೆ ನೋಡಿದರೆ ಇರುವದೆಲ್ಲ ಪರಮಾತ್ಮನೇ, ಆತನನ್ನು ಅರಿತುಕೊಂಡುಬಿಟ್ಟರೆ ಮತ್ತೇನೂ ಅರಿತುಕೊಳ್ಳಬೇಕಾದದ್ದೇ ಉಳಿಯುವದಿಲ್ಲ. ಆದ್ದರಿಂದ ಈ ಪರಮಾತ್ಮನನ್ನೇ ಮೊದಲು ನಾವು ಅರಿತುಕೊಳ್ಳುವದಕ್ಕೆ ಪ್ರಯತ್ನಿಸಬೇಕು.

## 1.5. ಸದ್ಗುರುವಿನ ಅದ್ಭುತ ಮಹಿಮೆ

**ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವಂತೋऽಪಿ ಬಹವೋ ಯಂ ನ ವಿದ್ಯುಃ। ಆಶ್ಚರ್ಯೋ ವಕ್ತಾ ಕುಶಲೋऽಸ್ಯ ಲಬ್ಧಾಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ॥** **(ಕಠ. 2–7)**

"ಈ ಆತ್ಮನು ಬಹುಜನರಿಗೆ ಶ್ರವಣಕ್ಕೂ ದೊರೆಯುವಹಾಗಿಲ್ಲ, ಬಹುಜನರು ಶ್ರವಣಮಾಡಿದ ಮೇಲೂ ಆತನನ್ನು ಅರಿಯದಿರುವರು. ಹೇಳುವವನು ಆಶ್ಚರ್ಯರೂಪನು, ಪಡೆಯುವವನು ಜಾಣನು; ಜಾಣನಿಂದ ಕೇಳಿತಿಳಿದುಕೊಳ್ಳುವವನು ಆಶ್ಚರ್ಯರೂಪನು."

ಪರಮಾತ್ಮನು ನಮ್ಮೊಳಗೇ ಇರುವನು. ಆದರೆ ನಮ್ಮ ದೌರ್ಭಾಗ್ಯವನ್ನು ಏನೆಂದು ಹೇಳಬೇಕು? ಅವನು ನಮ್ಮೊಳಗೇ ಇದಾನೆಂದೂ ಅವನನ್ನು ಅರಿತರೆ ಸಕಲವನ್ನೂ ಅರಿತಂತಾಗುವದೆಂದೂ ಅದೇ ಪರಮಪುರುಷಾರ್ಥವೆಂದೂ ಹೇಳುವವರ ಮಾತು ಕೂಡ ನಮ್ಮ ಕಿವಿಗೆ ಬೀಳದೆ ಇರುವದಲ್ಲ!

ಆತ್ಮನ ಶ್ರವಣವು ನಮಗೇಕೆ ದೊರೆಯುವದಿಲ್ಲ?–ಎಂದರೆ ಇದಕ್ಕೆ ಎರಡು ಕಾರಣಗಳಿವೆ. ಮೊಟ್ಟಮೊದಲನೆಯದಾಗಿ ನಮಗೆ ಕೇಳುವ ಕಿವಿಯೇ ಇರುವದಿಲ್ಲ. ಅನಾತ್ಮವಸ್ತುಗಳ ಹೊರಗಿನ ಶಬ್ದಸ್ಪರ್ಶರೂಪರಸಗಂಧಗಳೆಂದರೆ ಸರಿ, ನಮ್ಮ ಕಿವಿಯು ನಿಮಿರಿ ನೆಟ್ಟಗಾಗುವದು;

ಆದರೆ ಆತ್ಮವಿಷಯವಾದ ಮಾತುಗಳನ್ನು ಕೇಳಬೇಕೆಂಬ ಕುತೂಹಲವೇ ನಮ್ಮಲ್ಲಿರುವದಿಲ್ಲ ವಾದ್ದರಿಂದ ನಮ್ಮ ಕಿವಿಗೆ ಅಂಥ ಮಾತುಗಳು ಬೀಳುವದೇ ಕಷ್ಟವಾಗಿರುತ್ತದೆ. ಇದು ನಮ್ಮಲ್ಲಿ ಬಹುಮಂದಿಯ ಹಾಡು.

ಇನ್ನು ಕೆಲವರಿಗೆ ಶ್ರವಣವೇನೋ ಆಗುತ್ತದೆ. ಅವರಿಗೆ ತತ್ತ್ವವಿಚಾರವನ್ನು ಮಾಡುವ ಕುತೂಹಲವಿರುತ್ತದೆ, ವಿಚಾರಮಾಡಿಯೂ ಮಾಡುತ್ತಾರೆ. ಆದರೆ ಅವರಿಗೆ ಆತ್ಮನ ಸ್ವರೂಪವು ಯಾವದೆಂಬುದು ಮಾತ್ರ ತಿಳಿಯುವದಿಲ್ಲ, ಅದೇಕೆ?–ಎಂದರೆ ಅವರ ವಿಚಾರಸರಣಿಯು ಸರಿಯಾಗಿರುವದಿಲ್ಲ. ಅನಾತ್ಮಕ್ಕೆ ಹೊಂದುವ ತರ್ಕವನ್ನು ಆತ್ಮನಿಗೂ ಹೊಂದಿಸಿಕೊಳ್ಳುತ್ತಾ ಕೂತರೆ ಎಷ್ಟು ಯುಗಕ್ಕೆ ತಾನೆ ಆತ್ಮಸ್ವರೂಪದ ನಿರ್ಧಾರವಾದೀತು?

ಹೀಗಿರುವಲ್ಲಿ ಆತ್ಮಸ್ವರೂಪವನ್ನು ತಾನೂ ಅರಿತುಕೊಂಡು ಮತ್ತೊಬ್ಬರಿಗೂ ಹೇಳಬಲ್ಲ ಗುರುವು ಸಿಕ್ಕುವದು ಎಷ್ಟು ಆಶ್ಚರ್ಯದ ಮಾತಾಯಿತು. ಸದ್ಗುರುವೆಂದರೆ ಅವನೇ ಒಂದು ಆಶ್ಚರ್ಯವು; ಸಾವಿರಾರು ಜನರಲ್ಲಿ ಎಲ್ಲಿಯೋ ಒಬ್ಬನು ಪರಮಾತ್ಮ ಸ್ವರೂಪವನ್ನು ತಿಳಿದುಕೊಳ್ಳಬೇಕೆಂದು ನಿಜವಾಗಿ ಪ್ರಯತ್ನಿಸುತ್ತಾನೆ, ಹಾಗೆ ಪ್ರಯತ್ನಿಸುವವರಲ್ಲಿಯೂ ಎಲ್ಲಿಯೋ ಸಾವಿರಕ್ಕೆ ಒಬ್ಬನು ಸರಿಯಾದ ಮಾರ್ಗದಿಂದ ತತ್ತ್ವವಿಚಾರವನ್ನು ಮಾಡಿ ಅರಿತುಕೊಳ್ಳುತ್ತಾನೆ. ಹೀಗಿರುವಲ್ಲಿ ತಾನೂ ನಿಸ್ಸಂದೇಹವಾಗಿ ಅರಿತುಕೊಂಡು ಶಿಷ್ಯರ ಸಂದೇಹಗಳನ್ನೆಲ್ಲ ಪರಿಹರಿಸಬಲ್ಲ ಮಹಾನುಭಾವನು ದೊರೆಯುವದೆಂದರೆ ಎಂಥ ಅದ್ಭುತಘಟನೆಯೆನ್ನಬೇಕಾಯಿತು!

ಸದ್ಗುರುವೆಂದರೆ ಅದ್ಭುತಮಹಿಮೆಯವನೇ ಸರಿ. ಏಕೆಂದರೆ ಅವನು ಶಾಸ್ತ್ರದ ಮರ್ಮವನ್ನು ಅರಿತಿರಬೇಕು, ಪಾಪರಹಿತನಾಗಿ ನಿಷ್ಕಾಮನಾಗಿರಬೇಕು; ತತ್ತ್ವದ ಆನಂದದಲ್ಲಿ ತಾನೂ ಮುಳುಗಿದ್ದು ಮತ್ತೊಬ್ಬರನ್ನೂ ಮುಳುಗಿಸಬಲ್ಲವನಾಗಿರಬೇಕು. ಆದರೆ ಇಂಥ ಮಹಾಮಹಿಮನಾದ ಗುರುವು ಹೇಳಿಕೊಟ್ಟರೂ ಅದನ್ನು ತಿಳಿದುಕೊಳ್ಳಬಲ್ಲ ಶಿಷ್ಯನು ಇನ್ನೂ ಜಾಣನಾಗಿರಬೇಕು; ಅವನು ಆ ತತ್ತ್ವವನ್ನು ಮನಗಾಣುವವರೆಗೂ ಎಡೆಬಿಡದೆ ಸಾಧನಮಾಡಬಲ್ಲ ಕುಶಲಮತಿಯಾಗಿರಬೇಕು, ಸದ್ಗುರುವು ಹೇಳುವ ಆತ್ಮಸ್ವರೂಪವು ತನ್ನೊಳಗೇ ಇರುವದೆಂಬ ಮರ್ಮವನ್ನು ಅರಿತುಕೊಂಡು ಹೊರಗೆ ಕೇಳಿದ್ದನ್ನು ತನ್ನೊಳಗೇ ಕಂಡುಕೊಳ್ಳುವ ನಿಪುಣಮತಿಯಾಗಬೇಕು. ಈ ದೃಷ್ಟಿಯಿಂದ ಸದ್ಗುರುವು ಆಶ್ಚರ್ಯರೂಪನೆನ್ನುವದಕ್ಕಿಂತಲೂ ಸಚ್ಛಿಷ್ಯನು ಆಶ್ಚರ್ಯರೂಪನೆನ್ನುವದೇ ಹೆಚ್ಚು ಒಪ್ಪುತ್ತದೆ.

ಆತ್ಮನ ವಿಚಾರದ ಶ್ರವಣವೆಂದರೆ ಸುಮ್ಮನೆ ಯಾರಾದರೂ ಮಾತನಾಡಿಕೊಂಡದ್ದನ್ನು ಕಿವಿಗೆ ಹಾಕಿಕೊಳ್ಳುವದಲ್ಲ, ಸದ್ಗುರುವು ಹೇಳಿದ್ದನ್ನು ಮನಮುಟ್ಟಿ ಕೇಳುವದು, ಅದರ ತಾತ್ಪರ್ಯವು ಇಷ್ಟೇ ಎಂದು ನಿಶ್ಚಯಿಸುವದು, ಇದೇ ಶ್ರವಣವು. ಅದನ್ನು ಮನಸ್ಸಿನಲ್ಲಿ

ತಿರಿವಿಹಾಕಿ ಹೊಂದುಗಡೆಮಾಡಿಕೊಳ್ಳುವದು ಮನನವು, ಸುಮ್ಮನೆ ಕುಯುಕ್ತಿಗಳನ್ನು ಮಾಡುವದಲ್ಲ. ಇವೆರಡೂ ಆದಮೇಲೆ ತನ್ನ ಅನುಭವಕ್ಕೆ ಹೊಂದುಗಡೆಮಾಡಿಕೊಳ್ಳುವದು ನಿದಿಧ್ಯಾಸನವು. ಇಷ್ಟನ್ನೂ ಮಾಡಿಕೊಳ್ಳಬಲ್ಲ ತಾಳ್ಮೆಯೂ ಜಾಣ್ಮೆಯೂ ಇರುವ ಮಹಾನುಭಾವನು ಆಶ್ಚರ್ಯರೂಪನಲ್ಲದೆ ಮತ್ತೇನು?

## 1.6. ಅಧ್ಯಾತ್ಮ ಯೋಗ

**ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾ ಹಿತಂ ಗಹ್ವರೇಷ್ಠಂ ಪುರಾಣಮ್ । ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ ಧೀರೋ ಹರ್ಷಶೋಕೌ ಜಹಾತಿ ॥ (ಕಠ 2–12)**

"ಗುಟ್ಟಾಗಿರುವ ಸ್ಥಾನವನ್ನು ಹೊಕ್ಕು ಗುಹೆಯಲ್ಲಿದ್ದು ಗಹ್ವರದಲ್ಲಿರುವದರಿಂದ ನೋಡುವದು ಬಲುಕಷ್ಟವಾಗಿರುವ ಪುರಾಣನಾದ ಆ ದೇವನನ್ನು ಅಧ್ಯಾತ್ಮಯೋಗದ ಪ್ರಾಪ್ತಿಯಿಂದ ತಿಳಿದುಕೊಂಡ ಧೀರನು ಹರ್ಷಶೋಕಗಳೆರಡನ್ನೂ ಬಿಡುತ್ತಾನೆ."

ಪರಮಾತ್ಮನನ್ನು ನೋಡುವದಕ್ಕೆ ನಮ್ಮಗಳಿಗೆ ಅಷ್ಟೇಕೆ ಕಷ್ಟವಾಗಿದೆ?–ಎಂಬುದಕ್ಕೆ ಎರಡು ರೀತಿಯಿಂದ ಉತ್ತರವನ್ನು ಹೇಳಬಹುದು. ಪರಮಾತ್ಮನು ಅತ್ಯಂತ ಸೂಕ್ಷ್ಮರೂಪನಾಗಿದ್ದು ನಮಗೆ ತೀರ ಹತ್ತಿರವಿದ್ದುಕೊಂಡಿರುವದು ಒಂದು ಕಾರಣ, ನಾವು ನಮ್ಮ ಕಡೆಗೆ ತಿರುಗಿಕೊಳ್ಳದೆ ಹೊರಕ್ಕೇ ದೃಷ್ಟಿಯನ್ನು ಚಾಚಿರುವದು, ಅಥವಾ ನಮ್ಮೊಳಗೆ ನೋಡಿದರೂ ಸೂಕ್ಷ್ಮದೃಷ್ಟಿಯಿಂದ ನೋಡದೆ ಇರುವದು, ಮತ್ತೊಂದು ಕಾರಣ.

ಸ್ಥೂಲವಾದ ವಸ್ತುಗಳನ್ನು, ಎಂದರೆ ಇಂದ್ರಿಯಗಳಿಗೆ ಗೋಚರವಾಗಬಲ್ಲ ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಇವುಗಳಿಂದ ಕೂಡಿರುವ ವಸ್ತುಗಳನ್ನು, ನಮ್ಮ ಸ್ಥೂಲವಾದ ಇಂದ್ರಿಯಗಳಿಂದಲೇ ನೋಡಬಹುದು. ಆದರೆ ನಮ್ಮ ಇಂದ್ರಿಯ ಗಳಿಗಿಂತಲೂ ಸೂಕ್ಷ್ಮನಾಗಿರುವ ಪರಮಾತ್ಮನನ್ನು ಅವುಗಳಿಂದ ನೋಡುವದು ಹೇಗಾದೀತು? ಆಗದು. ಮನಸ್ಸೇನೋ ಹೊರಗಿನ ಇಂದ್ರಿಯ ವಿಷಯಗಳ ವಿಚಾರಗಳೇ ತುಂಬಿಕೊಂಡಿರುತ್ತವೆ. ಅಲ್ಲಿರುವ ವಿಚಾರಗಳಲ್ಲಿ ಒಂದೊಂದೂ ಹೊರಗಿನ ಒಂದೊಂದು ವಿಷಯದಿಂದ ಏರ್ಪಟ್ಟದ್ದು, ಆ ವಿಷಯವನ್ನು ಕುರಿತು ಸಂಕಲ್ಪಿಸುವದಕ್ಕೆ ಅನುಕೂಲವಾದ ವಾಸನೆಯ ರೂಪದಿಂದ ನಮ್ಮ ಮನಸ್ಸನ್ನು ಕಲಂಕಿತವಾಗಿ ಮಾಡುವಂಥದ್ದು. ಇಂಥ ಹೇರಳವಾದ ವಾಸನೆಗಳಿಂದ ತುಂಬಿದ ಮನಸ್ಸಿನಲ್ಲಿ ಅತ್ಯಂತ ಸ್ವಚ್ಛವಾದ ಆತ್ಮಸ್ವರೂಪವು ಹೇಗೆ ಪ್ರತಿಬಿಂಬಿಸೀತು? ಸೂರ್ಯಬಿಂಬವು ತಿಳಿನೀರಿನಲ್ಲಾಗಲಿ ಕನ್ನಡಿಯಲ್ಲಾಗಲಿ ಪ್ರತಿಬಿಂಬಿಸುವಂತೆ ದಪ್ಪವಾದ ಕಲ್ಲಿನಲ್ಲಿ ಮೂಡಲಾರದು; ಅಂಥ ಕಲ್ಲಿನ ಮೇಲೆ ಮಸಿಯನ್ನು ಬೆರೆಸಿದ ಮಣ್ಣುಕೆಣ್ಣೆಯನ್ನು ಬಳಿದ ಮೇಲೆ ಅದು ಮೂಡೀತೆಂದು ನಿರೀಕ್ಷಿಸಬಹುದೆ?

ಈಗಿನ ಸ್ಥಿತಿಯಲ್ಲಿ ನಮಗೆ ಕಾಣಿಸುವ ಆತ್ಮನು ಅತ್ಯಂತ ಅನರ್ಥಗಳ ನಡುವೆ ಸಿಕ್ಕಿಬಿದ್ದಿರುತ್ತಾನೆ. ಶತ್ರುಭೀತಿಯಿಂದ ರಾಜ್ಯವನ್ನು ಬಿಟ್ಟು ಸೇನೆಯನ್ನೂ ಮಂತ್ರಿವರ್ಗವನ್ನೂ ಅಗಲಿ ಕಾಡಿನೊಳಕ್ಕೆ ಹೊಕ್ಕು ಯಾವದೋ ಒಂದು ಗವಿಯಲ್ಲಿ ಅಡಗಿಕೊಂಡಿರುವ ಅರಸನಂತೆ ಆಗಿರುತ್ತಾನೆ. ಹೊಸ ರಾಜರ ಆಳ್ವಿಕೆಯು ನಡೆಯುತ್ತಿರುವಾಗ ಈ ಹಳೆಯ ರಾಜನನ್ನು ಕೇಳುವವರಾರು? ಅವನು ಇಂಥ ಕಡೆಯಲ್ಲಿದಾನೆಂಬುದೇ ತಿಳಿಯದೆ ಯಾರಿಗೂ ಅವನ ಪತ್ತೆ ಸಿಕ್ಕದಂತೆ ಆಗಿಬಿಟ್ಟಿರುತ್ತದೆ.

ಆದರೂ ಈ ಆತ್ಮನನ್ನು ಕಾಣುವದಕ್ಕೆ ಮಾರ್ಗವಿಲ್ಲದೆ ಇಲ್ಲ. ಅದಕ್ಕೆ ಒಂದು ಉಪಾಯವಿದೆ. ಬಲ್ಲವರು ಅದನ್ನು **ಅಧ್ಯಾತ್ಮಯೋಗವೆಂದು** ಕರೆಯುತ್ತಾರೆ. ಮೊಟ್ಟಮೊದಲು ವಿಷಯಗಳಿಂದ ಇಂದ್ರಿಯಗಳನ್ನು ಹಿಂತಿರುಗಿಸಿಕೊಂಡು ಮನಸ್ಸಿನಲ್ಲಿ ಲಯಮಾಡಿ ಕೊಳ್ಳಬೇಕು. ಆಮೇಲೆ ಎಚ್ಚರಿಕೆಯಿಂದ ಅದನ್ನು ನಾಜೂಕಾಗಿ ಮಾರ್ಪಡಿಸಿಕೊಂಡು ಆತ್ಮನ ಕಡೆಗೇ ಬಿಡುವದಕ್ಕೆ ಪ್ರಯತ್ನಿಸಬೇಕು. ಬಹುಕಾಲದವರೆಗೆ ಮಾಡಿದ ಅಭ್ಯಾಸದಿಂದ ಅದು ಕೊನೆಗೆ ಆತ್ಮನಲ್ಲಿಯೇ ಲಯವಾಗಿಬಿಡುವದು. ಆಗ ಸ್ವಯಂಪ್ರಕಾಶನಾದ ಆ ದೇವನು ತಾನೇ ಬೆಳಗುವನು.

ಅಧ್ಯಾತ್ಮಯೋಗವನ್ನು ಸಾಧಿಸುವದಕ್ಕೆ ಬಲು ಜಾಣತನವು ಬೇಕು, ಹೊರಗಿನ ವಿಷಯಗಳನ್ನು ಕಡೆಗಣಿಸಿ ಅವುಗಳಿಂದ ಮನಸ್ಸನ್ನು ಹಿಂಜಗ್ಗಿಸುವ ಧೈರ್ಯವೂ, ಆಮೇಲೆ ಅದನ್ನು ಆತ್ಮನ ಚಿಂತೆಯಲ್ಲಿಯೇ ವ್ಯಾಪೃತವಾಗುವಂತೆ ಮಾಡುವ ನೈಶ್ಚಲ್ಯವೂ, ನಿತ್ಯನಿರಂತರಪ್ರಯತ್ನವೂ, ಬೇಕು. ಇಷ್ಟಾದರೆ ಆತ್ಮದೇವನ ಸಾಕ್ಷಾತ್ಕಾರವಾಗುತ್ತದೆ; ಈಗ ನಮ್ಮನ್ನು ಸಂಕಟಪಡಿಸುತ್ತಿರುವ ಹರ್ಷಶೋಕಗಳೆಂಬ ಸಂಸಾರದ ಕೋಟಲೆಯು ತಪ್ಪುತ್ತದೆ.

## 1.7. ಆನಂದದ ಮಡು

**ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾ ಭೂತಾನಿ ಸಂಪ್ರತಿಷ್ಠಂತಿ ಯತ್ರ ।**
**ತದಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವಮೇವಾವಿವೇ**
**ಶೇತಿ ॥** **(ಪ್ರಶ್ನ 4–11)**

"ದೇವತೆಗಳೆಲ್ಲರೊಡಗೂಡಿದ ವಿಜ್ಞಾನಾತ್ಮನು, ಪ್ರಾಣಗಳು, ಭೂತಗಳು–ಇವೆಲ್ಲವೂ ಯಾವದರಲ್ಲಿ ಪ್ರವೇಶಮಾಡುವವೋ ಅದನ್ನು, ಎಲೈ ಪ್ರಿಯದರ್ಶನನೆ, ಯಾವನು ಅರಿತುಕೊಳ್ಳುವನೋ, ಆ ಸರ್ವಜ್ಞನು ಎಲ್ಲವನ್ನೂ ವ್ಯಾಪಿಸಿಕೊಳ್ಳುವನು."

ಅಧ್ಯಾತ್ಮಯೋಗವನ್ನು ತಿಳಿದುಕೊಳ್ಳುವದಕ್ಕೆ ಸರಿಯಾದ ಗುರುವಿನ ಉಪದೇಶವು ಬೇಕು, ಸ್ವಪ್ರಯತ್ನವೂ ಬೇಕು. ಆದ್ದರಿಂದ ಅದು ಎಲ್ಲರಿಗೂ ಸುಲಭವಾಗಿ ದಕ್ಕತಕ್ಕದ್ದಲ್ಲ. ಆದರೆ ಈಶ್ವರನ ಅನುಗ್ರಹದಿಂದ ನಮ್ಮೆಲ್ಲರಿಗೂ ಈ ಯೋಗದ ಕ್ರಮವನ್ನು ತಿಳಿಸಿಕೊಡುವ

ಒಂದಾನೊಂದು ಸಹಜಸ್ಥಿತಿಯಿರುತ್ತದೆ. ಅದು ನಮಗೆ ಹೇಗೆ ಬಂದೊದಗುವದೆಂಬುದನ್ನೂ ಅದರ ಸ್ವರೂಪವೇನೆಂಬುದನ್ನೂ ಚಿತ್ತವಿಟ್ಟು ನೋಡಿಕೊಂಡರೆ ನಮಗೆ ಪರಮಲಾಭವುಂಟಾಗುವದು.

ಈ ಸ್ಥಿತಿಗೆ **ಸುಷುಪ್ತಿ** (ತನಿನಿದ್ರೆ) ಎಂದು ಹೆಸರು. ಸುಷುಪ್ತಿಯಲ್ಲಿ ನಮಗೆ ಯಾವದೊಂದರ ಅರಿವೂ ಇರುವದಿಲ್ಲ. ಯಾವದೊಂದರ ಬಯಕೆಯೂ ಇರುವದಿಲ್ಲ; ಆದ್ದರಿಂದಲೇ ಅಲ್ಲಿ ಯಾವದಾದರೊಂದಕ್ಕಾಗಿ ನಾವು ಮನಸ್ಸನ್ನು ಹರಿಯಬಿಟ್ಟು ಇಂದ್ರಿಯವ್ಯಾಪಾರಗಳನ್ನು ಬಲಪಡಿಸಿಕೊಳ್ಳಬೇಕಾದ ಶ್ರಮವೂ ಇರುವದಿಲ್ಲ, ಆದರೂ ಎಚ್ಚರದಲ್ಲಿಯಾಗಲಿ ಕನಸಿನಲ್ಲಿಯಾಗಲಿ ಎಂದೆಂದಿಗೂ ದೊರಕದ ಅಮಿತಾನಂದವು ನಮಗೆ ತನಿನಿದ್ರೆಯಲ್ಲಿ ಅನಾಯಾಸವಾಗಿ ದೊರಕಿರುತ್ತದೆ. ಇದರ ರಹಸ್ಯವೇನು?

ನಮಗೆ ಈ ಗಾಢನಿದ್ರೆಯು ಬರುವಾಗ ಏನೇನಾಗುವದೆಂಬುದನ್ನು ಯೋಚನೆಗೆ ತೆಗೆದುಕೊಳ್ಳೋಣ. ಮೊಟ್ಟಮೊದಲು ಕೈಕಾಲು ಮುಂತಾದವುಗಳು ಅಲುಗಾಡದೆ ಇದ್ದಲ್ಲಿಯೇ ಇರುವದಕ್ಕೆ ಪ್ರಾರಂಭಿಸುತ್ತವೆ, ಆಮೇಲೆ ನೇತ್ರಾದಿಜ್ಞಾನೇಂದ್ರಿಯಗಳು ಸೋತು ತಮ್ಮ ವ್ಯಾಪಾರವನ್ನು ನಿಲ್ಲಿಸುತ್ತವೆ; ಇದರ ಫಲವಾಗಿ ಹೊರಗಿನ ರೂಪವೇ ಮುಂತಾದವುಗಳ ಅರಿವು ನಮಗೆ ಇಲ್ಲವಾಗುತ್ತದೆ. ನೋಟವಿಲ್ಲದೆ ರೂಪವಿಲ್ಲ. ಕೇಳುವಿಕೆಯಿಲ್ಲದೆ ಶಬ್ದವಿಲ್ಲ, ಸವಿನೋಡದೆ ಇರುವಾಗ ರುಚಿಯಿಲ್ಲ, ಮೂಸುವಿಕೆ ಯಿಲ್ಲದೆ ವಾಸನೆಯಿಲ್ಲ, ಮುಟ್ಟದೆ ಸ್ಪರ್ಶವಿಲ್ಲ. ಆದ್ದರಿಂದ ಜ್ಞಾನೇಂದ್ರಿಯಗಳ ವ್ಯಾಪಾರವು ಅಡಗುತ್ತವೆಂದರೂ ಒಂದೇ, ಶಬ್ದಸ್ಪರ್ಶಾದಿವಿಷಯಗಳು ಲಯವಾಗುತ್ತವೆಯೆಂದರೂ ಒಂದೇ ಎಂದಾಯಿತು.

ಹೀಗೆ ಪಂಚಭೂತಗಳೊಡನೆ ಇಂದ್ರಿಯಗಳು ಲಯವಾದ ಬಳಿಕ ಈ ಅವಸ್ಥೆಯಲ್ಲಿ ಮನಸ್ಸೂ ಕೆಲಸಮಾಡುವದನ್ನು ನಿಲ್ಲಿಸಿಬಿಡುತ್ತದೆ. ಸಂಶಯಪಡುವದು, ವಿಕಲ್ಪಿಸುವದು, ನಿಶ್ಚಯಿಸುವದು–ಮುಂತಾದ ವ್ಯಾಪಾರಗಳು ಒಂದೂ ಇಲ್ಲವಾದರೆ ಮನಸ್ಸು ಇದೆಯೆಂದು ಹೇಗೆ ಹೇಳುವದು? ಅದೂ ಇಲ್ಲವಾಗಿಬಿಡುತ್ತದೆ.

ಇಷ್ಟೇ ಅಲ್ಲ; ಮನಸ್ಸು, ಇಂದ್ರಿಯ–ಇವುಗಳನ್ನು ಉಪಯೋಗಿಸಿಕೊಂಡು ಸುಖದುಃಖಗಳನ್ನು ಅನುಭವಿಸುತ್ತಿರುವ "ನಾನು", "ನಾನು,"–ಎಂಬ ರೂಪವನ್ನೇ ವಿಜ್ಞಾನಾತ್ಮನೆಂದು ಕರೆಯುತ್ತಾರೆ; ಸುಷುಪ್ತಿಯಲ್ಲಿ ಮನಸ್ಸೂ ಇಲ್ಲ, ಇಂದ್ರಿಯಗಳೂ ಇಲ್ಲ–ಆದ್ದರಿಂದ ಆಗ ವಿಜ್ಞಾನಾತ್ಮನೂ ಲಯವಾಗಿಬಿಡುತ್ತಾನೆ.

ಈಗ ಸ್ವಲ್ಪ ಆಲೋಚನೆಮಾಡೋಣ. ಸುಷುಪ್ತಿಯಲ್ಲಿ ವಿಜ್ಞಾನಾತ್ಮ, ಮನಸ್ಸು, ಇಂದ್ರಿಯಗಳು, ವಿಷಯಗಳ–ಯಾವದೊಂದರ ಅರಿವೂ ನಮಗೆ ಇರುವದಿಲ್ಲ, ಏತರ ಸಂಬಂಧವೂ ನಮಗೆ ಇರುವದಿಲ್ಲ. ಆಗ "ನಾನು" ಎಂಬ ವ್ಯಕ್ತಿಯ ರೂಪವನ್ನು ಕೂಡ ನಾವು ಇಟ್ಟುಕೊಂಡಿರುವದಿಲ್ಲ. ಆಗ ನಮಗೆ ಪರಮಾನಂದವಾಗುತ್ತದೆಯಲ್ಲ! ಆ ಸ್ವರೂಪವು

ಯಾವದು? ವಿಜ್ಞಾನಾತ್ಮನೇ ಮುಂತಾದವರೆಲ್ಲರೂ ಸುಷುಪ್ತಿಯಲ್ಲಿ ಹೊಕ್ಕಿರುವ ಆ ಆನಂದದ ಮಡು ಯಾವದು?

ಈ ಮಡುವಿಗೆ ವೇದಾಂತಿಗಳು ಅಕ್ಷರ-ಎಂದರೆ ನಾಶವಿಲ್ಲದ ಪರಮಾತ್ಮ ಎಂಬ ಹೆಸರನ್ನು ಕೊಟ್ಟಿರುತ್ತಾರೆ. ನಮ್ಮಲ್ಲಿ ಪ್ರತಿಯೊಬ್ಬನೂ ಸುಷುಪ್ತಿಯಲ್ಲಿ ಆನಂದಸ್ವರೂಪನಾದ ಪರಮಾತ್ಮನಲ್ಲಿ ಐಕ್ಯವಾಗಿಬಿಡುವದರಿಂದಲೇ ಈ ವಿಲಕ್ಷಣವಾದ ಆನಂದದ ನೆನಪು ನಮಗೆ ಎಚ್ಚರವಾದ ಮೇಲೂ ಇದ್ದುಕೊಂಡಿರುತ್ತದೆ. ಯಾವನು ಈ ಅಕ್ಷರಸ್ವರೂಪವನ್ನು ಚೆನ್ನಾಗಿ ಅರಿತುಕೊಳ್ಳುವನೋ, ಅವನೇ ಸರ್ವಜ್ಞನು, ಅವನು ಸರ್ವರ ಆತ್ಮನಾಗಿ ನಲಿಯುವನು-ಎಂದು ಅನುಭವಿಗಳು ಹೇಳುತ್ತಾರೆ.

## 1.8. ಅವಸ್ಥಾತ್ರಯ

**ತಸ್ಯ ತ್ರಯ ಆವಸಥಾಸ್ತ್ರಯಃ ಸ್ವಪ್ನಾಃ ಅಯಮಾವಸಥೋಽ-**
**ಯಮಾವಸಥೋಽಯಮಾವಸಥೋಽ ಇತಿ॥ (ಐತರೇಯ 1-3-12)**

"ಆತನಿಗೆ ಮೂರು ವಸತಿಗಳು, ಮೂರು ಕನಸುಗಳು: ಇದೊಂದು ವಸತಿ, ಇದೊಂದು ವಸತಿ, ಇದೊಂದು ವಸತಿ."

ಪರಮಾತ್ಮನು ಎಲ್ಲದಕ್ಕೂ ಆತ್ಮನಾಗಿರುವದರಿಂದ ಯಾವದೊಂದರ ತಿರುಳನ್ನು ತಿಳಿದುಕೊಂಡರೂ ಆತನನ್ನೇ ತಿಳಿದುಕೊಂಡಂತೆ ಆಗುವದು. ಅವನು ನಮ್ಮ ಮುಂದೆ ಕಾಣುವ ಬ್ರಹ್ಮಾಂಡದಲ್ಲಿ ಎಲ್ಲಾ ರೂಪದಿಂದಲೂ ಕಾಣಿಸಿಕೊಳ್ಳುತ್ತಾ ಎಲ್ಲಕ್ಕೂ ಆತ್ಮನಾಗಿ ಎಲ್ಲದರೊಳಗೂ ವಾಸವಾಗಿರುತ್ತಾನೆ. ಹೀಗಿದ್ದರೂ ಜಿಜ್ಞಾಸುವಾದವನು ಆ ಪರಮೇಶ್ವರನನ್ನು ತನ್ನೊಳಗಿರುವ ತನ್ನ ಆತ್ಮನನ್ನಾಗಿ ಅಪರೋಕ್ಷವಾಗಿ ಕಂಡುಕೊಂಡಮೇಲೆಯೇ ಈ ತತ್ತ್ವವನ್ನು ಮನಗಾಣಬಹುದು, ಅಂದರೆ ಆಮೇಲೆಯೇ ಪರಮಾತ್ಮನಲ್ಲಿ ಸಕಲಭೂತಗಳೂ ಸಕಲಭೂತಗಳಲ್ಲಿ ಪರಮಾತ್ಮನೂ ಇರುವ ಬಗೆಯು ಮನಸ್ಸಿಗೆ ಸ್ಪಷ್ಟವಾಗುವದು.

ನಮ್ಮೊಳಗೇ ಇರುವ ಈ ಪರಮಾತ್ಮನು ಮೂರು ವಸತಿಗಳನ್ನು ಕಲ್ಪಿಸಿಕೊಂಡಿರುತ್ತಾನೆ. ರಾಜನಿಗೆ ವ್ಯವಹಾರವನ್ನು ನೋಡುವ ಸಭಾಗೃಹವೊಂದು, ತನ್ನ ಸ್ವಂತಭೋಗಕ್ಕಾಗಿರುವ ಅರಮನೆಯೊಂದು, ತನ್ನ ಏಕಾಂತ ವಾಸಕ್ಕೆ ಏರ್ಪಡಿಸಿಕೊಂಡಿರುವ ವಿವಿಕ್ತಗೃಹವೊಂದು- ಹೀಗೆ ಮೂರು ವಸತಿಗಳು ಇರುವಂತೆಯೇ ಈ ಪರಮಾತ್ಮನಿಗೂ ಮೂರು ವಸತಿಗಳುಂಟು. ಇವುಗಳನ್ನು ಕ್ರಮವಾಗಿ ಜಾಗ್ರತ್ತು (ಎಚ್ಚರ), ಸ್ವಪ್ನ, ಸುಷುಪ್ತಿ-ಎಂಬ ಹೆಸರಿನಿಂದ ಕರೆಯುತ್ತಾರೆ.

ಈ ವಸತಿಗಳಲ್ಲಿ ಪರಮಾತ್ಮನಿರುವ ಬಗೆಯು ಬಲು ವಿಚಿತ್ರವಾಗಿರುವದು. ಏಕೆಂದರೆ ಎಲ್ಲೆಲ್ಲಿಯೂ ಹರಡುವ ಈ ಪ್ರಪಂಚವನ್ನು ತನಗೆರಡನೆಯ ಸಾಮಗ್ರಿಯೊಂದೂ

ಇಲ್ಲದೆಯೇ ಸೃಷ್ಟಿಸಿರುವದರಿಂದ, ಇದಕ್ಕಿಂತಲೂ ವ್ಯಾಪಕವಾದ ತನ್ನ ಸ್ವಚ್ಛಸ್ವರೂಪದಿಂದ ಹಾಗೆಯೇ ಇದ್ದುಕೊಂಡೇ, ಜೀವರೂಪದಿಂದಲೂ ಈ ಪ್ರಪಂಚದಲ್ಲಿ ಪ್ರವೇಶಿಸಿರುತ್ತಾನೆ. ಈ ಜೀವರೂಪದಿಂದ ಮೇಲೆ ಹೇಳಿದ ವಸತಿಗಳಲ್ಲಿ ಆತನು ಅನುಭವಿಸುತ್ತಿರುವ ಭೋಗದ ಅಂಟು ಅವನಿಗೆ ಪರಮಾರ್ಥವಾಗಿ ಒಂದಿಷ್ಟೂ ಹತ್ತಿಕೊಂಡೇ ಇರುವದಿಲ್ಲ!

ಒಬ್ಬಾನೊಬ್ಬ ಮನುಷ್ಯನಿಗೆ ಸ್ವಲ್ಪಹೊತ್ತು ಗಾಢನಿದ್ರೆಯನ್ನನುಭವಿಸುತ್ತಿದ್ದು, (ಆಮೇಲೆ) ಕೆಲವು ಕನಸುಗಳನ್ನು ಕಂಡು, ಬಳಿಕ ಎಚ್ಚತ್ತು ಹಾಸಿಗೆಯ ಮೇಲೆಯೇ ಕುಳಿತಿದ್ದು ತನ್ನ ಗೆಳೆಯನೊಬ್ಬನಿಗೆ ತನ್ನ ಕನಸನ್ನು ವಿವರಿಸುತ್ತಿದ್ದಂತೆ ಒಂದು ಕನಸಾಯಿತೆಂದು ಇಟ್ಟುಕೊಳ್ಳಿರಿ. ಅವನು ಎಚ್ಚತ್ತಾಗ ಆ ವಿಚಿತ್ರವಾದ ಅವಸ್ಥಾತ್ರಯದ ಕನಸನ್ನು ಏನೆಂದು ತಿಳಿಯುವನು? ಇದೆಲ್ಲವೂ ಬರಿಯ ತೋರಿಕೆಯು, ನಿಜವಲ್ಲ–ಎಂದೇ ನಿಶ್ಚಯಿಸಿಬಿಡುವನಲ್ಲವೆ! ಎಡೆಬಿಡದೆ ಎಚ್ಚರ, ಕನಸು, ತನಿನಿದ್ರೆ–ಎಂಬ ಅವಸ್ಥೆಗಳನ್ನು ಎಷ್ಟೋ ಕಾಲದಿಂದ ಅನುಭವಿಸುತ್ತಿರುವೆವೆಂಬ ನಮ್ಮಗಳ ನಿಶ್ಚಯವೂ ಹಾಗೆಯೇ ನಿಜವಾಗಿ ಒಂದು ದೀರ್ಘಸ್ವಪ್ನವು. ಶಾಸ್ತ್ರಾಚಾರ್ಯರ ಅನುಗ್ರಹದಿಂದ ನಮಗೆ ನಮ್ಮ ಪರಮಾರ್ಥಸ್ವರೂಪದ ಅರಿವಾಗಿಬಿಟ್ಟರೆ ಕೂಡಲೆ "ಓಹೋ! ಈ ಅವಸ್ಥಾತ್ರಯವೆಂಬುದೆಲ್ಲ ಕನಸೇ, ಎಚ್ಚರದಲ್ಲಿ ಇಂದ್ರಿಯವ್ಯವಹಾರವನ್ನು ಕನಸಿನಲ್ಲಿ ಮಾನಸವ್ಯವಹಾರವನ್ನು ನಿದ್ರೆಯಲ್ಲಿ ವಿಶ್ರಾಂತಿಯನ್ನು ಮರುವೆಯನ್ನು ನಾನು ಅನುಭವಿಸುತ್ತಿದ್ದೆನೆಂಬುದೆಲ್ಲ ಕನಸೇ ಹೊರತು ನಿಜವಲ್ಲ. ಪರಮಾರ್ಥವಾಗಿರುವದೆಲ್ಲ ನಿತ್ಯನಿರವಸ್ಥನಾದ ಸಚ್ಚಿದಾನಂದಘನನಾದ ಪರಮಾತ್ಮನೇ, ಆತನೇ ನಾನು!" ಎಂಬ ಮಂಗಳಕರವಾದ ಪ್ರಬೋಧವಾಗಿಬಿಡುತ್ತದೆ.

## 1.9. ನಮ್ಮಗಳ ನಿಜವಾದ ಆತ್ಮನು

**ತದ್ಯೋ ಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದಭವತ್ತಥರ್ಷೀಣಾಂ ತಥಾ ಮನುಷ್ಯಾಣಾಂ ತದ್ಧೈತತ್ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇऽಹಂ ಮನುರಭವಂ ಸೂರ್ಯಶ್ಚೇತಿ । ತದಿದಮಪ್ಯೇತರ್ಹಿ ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ ತಸ್ಯ ಹ ನ ದೇವಾಶ್ಚನಾಭೂತ್ಯಾ ಈಶತೇ ಆತ್ಮಾ ಹ್ಯೇಷಾಂ ಸ ಭವತಿ ॥** (ಬೃಹದಾರಣ್ಯಕ 1–4–10)

"ಅಲ್ಲಿ ದೇವತೆಗಳಲ್ಲಿ–ಹಾಗೂ ಋಷಿಗಳಲ್ಲಿ, ಹಾಗೂ ಮನುಷ್ಯರಲ್ಲಿ–ಯಾವಯಾವನು ಅರಿತುಕೊಂಡನೋ ಅವನೇ ಅದಾದನು. ಆ ಇದನ್ನು ಕಂಡೇ ವಾಮದೇವಋಷಿಯು 'ನಾನು ಮನುವೂ ಸೂರ್ಯನೂ ಆಗಿರುವೆ'ನೆಂದು ಅರಿತುಕೊಂಡನು. ಆ ಈ ಬ್ರಹ್ಮವನ್ನು ಈಗಲೂ ಯಾವನು "ನಾನು ಬ್ರಹ್ಮವಾಗಿರುವೆನು" ಎಂದೀ ರೀತಿಯಾಗಿ ಅರಿತುಕೊಳ್ಳುವನೋ ಅವನು ಇದೆಲ್ಲವೂ ಆಗುವನು. ಅವನು ಹಾಗಾಗದಿರುವಂತೆ ಮಾಡುವದಕ್ಕೆ ದೇವತೆಗಳು ಕೂಡ ಸಮರ್ಥರಲ್ಲ. ಏಕೆಂದರೆ ಅವರಿಗೂ ಅವನು ಆತ್ಮನಾಗಿರುತ್ತಾನೆ.

**ಪರಮಾತ್ಮನು, ಎಂದರೆ ನಮ್ಮಗಳ ನಿಜವಾದ ಆತ್ಮನು, ಬ್ರಹ್ಮವಾಗಿರುತ್ತಾನೆ. ಬ್ರಹ್ಮವೆಂದರೆ ಮಿಗಿಲಿಲ್ಲದಷ್ಟು ದೊಡ್ಡದು.** ದೇಶವನ್ನೂ ಕಾಲವನ್ನೂ ನಿಮಿತ್ತವನ್ನೂ ಮೀರಿ, ದೇಶಕಾಲನಿಮಿತ್ತಗಳ ಅಳತೆಗೆ ಸಿಕ್ಕಿರುವದೆಲ್ಲದರ ಪರಮಾರ್ಥವೂ ತಾನೇ ಆಗಿರುವದರಿಂದ ಪರಮಾತ್ಮನಿಗೆ ಬ್ರಹ್ಮವೆಂಬ ಹೆಸರು ಎಲ್ಲಾ ಬಗೆಯಿಂದಲೂ ಒಪ್ಪುವದು.

ನಾವು ನಮ್ಮ ನಿಜವಾದ ಸ್ವರೂಪವನ್ನು ಅರಿಯದಿರುವಾಗಲೂ ನಮ್ಮ ಆತ್ಮನು ಬ್ರಹ್ಮವೇ ಆಗಿರುವನು; ಆದರೆ ನಾವು ಹಾಗೆಂದು ಅರಿತುಕೊಳ್ಳದೆ ಇರುವದರಿಂದ ವಿವಿಧಜನ್ಮಗಳಲಿ ಮೈದಳೆದು ಮೇಲುಕೀಳೆಂಬ ಅಂತಸ್ತುಗಳಲ್ಲಿ ನೆಲಸಿರುವೆವು. ಆದರೂ ದೇವತೆಗಳು, ಋಷಿಗಳು, ಮನುಷ್ಯರು, ಮೃಗಪಕ್ಷಿಗಳು, ಮರಗಿಡಗಳು-ಮುಂತಾದ ಯಾವ ಬಗೆಯ ಜನ್ಮವನ್ನು ಪಡೆದಿರಲಿ, ನಾವೆಲ್ಲರೂ ಪರಮಾರ್ಥವಾಗಿ ಬ್ರಹ್ಮವೇ; ಈ ಮಾತಿಗೆ ಎರಡಿಲ್ಲ.

ಆದ್ದರಿಂದ ಯಾವ ಜೀವನು ಯಾವ ಬಗೆಯ ಜನ್ಮವನ್ನು ತಳೆದಿರಲಿ, ತಾನು ನಿಜವಾಗಿ ಬ್ರಹ್ಮವಾಗಿರುವೆನೆಂಬ ನಿಜವನ್ನು ಮನಸ್ಸಿಗೆ ತಂದುಕೊಂಡರೆ ಸಾಕು, ಕೂಡಲೆ ಬ್ರಹ್ಮವೇ ಆಗಿಬಿಡುತ್ತಾನೆ. ಇಂದ್ರನೇ ಮೊದಲಾದ ದೇವತೆಗಳು, ವಾಮದೇವನೇ ಮೊದಲಾದ ಋಷಿಗಳು, ಜನಕನೇ ಮೊದಲಾದ ಮನುಷ್ಯರು-**ಎಲ್ಲರೂ ತಾವು ಬ್ರಹ್ಮವೆಂಬ ನಿಜವನ್ನು ಅರಿತಮಾತ್ರದಿಂದ ಮರವೆಯ ಫಲವಾದ ಸಂಸಾರದ ಕನಸನ್ನು ಮೀರಿ ಸರ್ವಾತ್ಮ ಸ್ವರೂಪವನ್ನು ಪಡೆದಿರುತ್ತಾರೆ.** ಏಕೆಂದರೆ ಸರ್ವಾತ್ಮಭಾವವು ಹೊಸದಾಗಿ ಸಾಧನದಿಂದ ಪಡೆಯತಕ್ಕ ಅನಿತ್ಯಫಲವಲ್ಲ, ಎಂದೆಂದಿಗೂ ಸಹಜವಾಗಿದ್ದುಕೊಂಡಿರುವ ನಿತ್ಯಸಿದ್ಧಿಯಾಗಿರುತ್ತದೆ.

"ಸರ್ವವೂ ಬ್ರಹ್ಮವೇ, ಆ ಬ್ರಹ್ಮವೇ ನಾನು" ಎಂಬ ಜ್ಞಾನವು ಮಹಾಕಷ್ಟಸಾಧ್ಯವಾದ್ದರಿಂದ ಈಗಿನ ಕಾಲದ ಅಲ್ಪವೀರ್ಯರಾದ ನಮ್ಮಂಥವರಿಗೆ ದಕ್ಕಲಾರದು-ಎಂದೂ ಯಾರೂ ಭಾವಿಸಿಕೊಳ್ಳಬಾರದು. ಹಿಂದಿನ ಕಾಲವಾಗಲಿ, ಈಗಿನ ಕಾಲವಾಗಲಿ, ಮಹಾವೀರ್ಯ ರಾಗಲಿ, ಅಲ್ಪವೀರ್ಯರಾಗಲಿ-ಬ್ರಹ್ಮವು ಯಾವಾಗಲೂ, ಎಲ್ಲರಿಗೂ ಆತ್ಮನಾಗಿಯೇ ಇರುವದು. ಪರಮಾತ್ಮನಿಗೆ ಯಾರಲ್ಲಿಯೂ ಪಕ್ಷಪಾತವಿಲ್ಲ. ಆತನ ಸ್ವರೂಪವನ್ನು ಅರಿತುಕೊಳ್ಳಬೇಕೆಂಬ ದೃಢವ್ರತವು ಯಾರು ಯಾರಿಗೆ ಇರುವದೋ ಅವರಿಗೆಲ್ಲ ತನ್ನ ಸ್ವರೂಪವನ್ನು ಕಂಡುಕೊಳ್ಳುವ ಶಕ್ತಿಯನ್ನು ಅನುಗ್ರಹಿಸುತ್ತಾನೆ, ಆದರೆ ತಮ್ಮ ಈಗಿನ ಅವಿದ್ಯಾ ಸಂಸಾರದ ಕೆಸರಿನಲ್ಲಿಯೇ ಹೊರಳಾಡುತ್ತಿರಬೇಕೆಂದು ಯಾರಿಗೆ ಅಭಿಲಾಷೆಯಿರುವದೋ ಅವರು ಮಾತ್ರ ಎಂಥ ಉತ್ಕೃಷ್ಟಯೋನಿಯಲ್ಲಿ ಜನಿಸಿದ್ದರೂ ಈ ಜ್ಞಾನವನ್ನು ಹೊಂದಲಾರದೆ ಇರುತ್ತಾರೆ.

ಅಲ್ಪರಾದ ನಮಗೂ ಈ ಬ್ರಹ್ಮಜ್ಞಾನವು ಬರುವದೆಂಬುದಿಷ್ಟೇ ಅಲ್ಲ, ಸರ್ವಾತ್ಮ ಭಾವವನ್ನು ನೆನಪಿಗೆ ತಂದುಕೊಂಡರೆ ಸಾಕು, ಕೂಡಲೆ ನಮ್ಮ ಅಲ್ಪತ್ವವೇ ಇಲ್ಲದಂತಾಗಿಬಿಡುವದು. ಮಹಾರಾಜನು ತಿರುಕನೆಂದು ಕನಸುಕಾಣುತ್ತಿರುವಾಗಲೂ ಮಹಾರಾಜನೇ; ಹೀಗಿರುವಲ್ಲಿ ಎಚ್ಚರಾದರೆ ಹೇಳುವದೇನು? ಅದರಂತೆ ನಾವು

ಮರವೆಯಲ್ಲಿರುವಾಗಲೂ ಬ್ರಹ್ಮವೇ; ಹೀಗಿರುವಲ್ಲಿ ಬ್ರಹ್ಮಭಾವನೆಯನ್ನೇ ತಂದುಕೊಂಡರೆ ಹೇಳುವದೇನು? ಜ್ಞಾನದಿಂದ ನಾವು ಬ್ರಹ್ಮವಾಗುವದಕ್ಕೆ ಎಂಥ ಮಹಾಮಹಿಮರಾದ ದೇವಾದಿಗಳು ಕೂಡ ಅಡ್ಡಿಮಾಡಲಾರರು; ಏಕೆಂದರೆ ಆದ್ದರಿಂದ ಈ ಪರಮಾರ್ಥಸ್ವರೂಪವನ್ನು ಕಂಡುಕೊಳ್ಳಬೇಕೆಂಬ ನಿಜವಾದ ಅಭಿಲಾಷೆಯೂ ಸಂತತಯತ್ನವೂ ಇದ್ದರೆ ನಾವೆಲ್ಲರೂ ಅದನ್ನು ಸಾಕ್ಷಾತ್ಕರಿಸಿಕೊಂಡು ಆನಂದಿಸಬಹುದು.

## 1.10. ಜ್ಞಾನಿಯ ದೃಷ್ಟಿ

**ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ ।**
**ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ ॥** (ಈಶಾವಾಸ್ಯ 7)

"ಯಾವಾಗ ಜ್ಞಾನಿಗೆ ಸರ್ವಭೂತಗಳೂ ಆತ್ಮನೇ ಆಯಿತೋ ಆಗ ಏಕತ್ವವನ್ನು ಕಂಡುಕೊಂಡವನಿಗೆ ಯಾವ ಮೋಹ? ಯಾವ ಶೋಕ?"

ತತ್ತ್ವವನ್ನರಿತವನದೃಷ್ಟಿ ಹೇಗಿರುವದು? ಆ ದೃಷ್ಟಿಯಿಂದ ಈ ಬ್ರಹ್ಮಾಂಡವು ಅವನಿಗೆ ಹೇಗೆ ಕಾಣಿಸುವದು? ಅದರಿಂದ ಅವನಿಗೆ ಆಗುವ ಪ್ರಯೋಜನವೇನು?–ಎಂಬ ಪ್ರಶ್ನೆಗೆ ಈ ಮಂತ್ರದಲ್ಲಿ ಉತ್ತರವನ್ನು ಕೊಟ್ಟಿರುತ್ತದೆ.

ಅಜ್ಞಾನಿಗಳ ದೃಷ್ಟಿಯಲ್ಲಿ ಆಕಾಶಾದಿಭೂತಗಳು ನೆಲ, ಬೆಟ್ಟ, ವನ, ನಗರ, ಹಳ್ಳಿ–ಎಂಬ ಭೇದಗಳನ್ನೂ ಅಂತರಿಕ್ಷ, ಸೂರ್ಯ, ಚಂದ್ರ, ನಕ್ಷತ್ರ–ಮುಂತಾದ ಭೇದಗಳನ್ನೂ ತಳೆದಿರುತ್ತವೆ; ಚೇತನವಸ್ತುಗಳೋ ಎಂದರೆ ಮರಗಿಡಗಳು, ಪಶುಪಕ್ಷಿಮೃಗಾದಿಗಳು, ಮನುಷ್ಯರು, ದೇವತೆಗಳು–ಮುಂತಾದ ಭೇದಗಳನ್ನು ತಳೆದಿರುತ್ತವೆ. ಆದರೆ ಜ್ಞಾನಿಯ ದೃಷ್ಟಿಯಲ್ಲಿ ಹಾಗಲ್ಲ; ಎಲ್ಲೆಲ್ಲಿಯೂ ತನ್ನ ಇರವಿನಿಂದಲೇ ವ್ಯಾಪ್ತನಾಗಿರುವ ಪರಮಾತ್ಮನೊಬ್ಬನೇ ಎಲ್ಲವೂ ಆಗಿರುತ್ತಾನೆ. ಆ ಪರಮಾತ್ಮನಿಗಿಂತ ಬೇರೆಯಾಗಿ ಆಕಾಶಾದಿಭೂತಗಳಾಗಲಿ ಬ್ರಹ್ಮಾದಿಸ್ಥಾವರಾಂತಪ್ರಾಣಿಗಳಾಗಲಿ ಇರುವದೇ ಇಲ್ಲ.

ಈ ದೃಷ್ಟಿಯಿಂದ ಬ್ರಹ್ಮಾಂಡವೆಲ್ಲ ಪರಮಾತ್ಮಮಯವಾಗಿಯೇ ಜ್ಞಾನಿಗೆ ಕಾಣಿಸುವದು. ಆ ಪರಮಾತ್ಮನು ತನ್ನ ಆತ್ಮನಾಗಿರುವಂತೆ ಸಕಲಪ್ರಾಣಿಗಳ ಆತ್ಮನೂ ಆಗಿರುತ್ತಾನೆಂದೂ ಪುಣ್ಯ, ಪಾಪ, ಪುಣ್ಯಪಾಪಗಳ ಮಿಶ್ರ–ಇವುಗಳ ಫಲವಾಗಿ ಪ್ರಾಣಿಗಳು ದೇವಮನುಷ್ಯತಿರ್ಯಗಾದಿಯಾಗಿ ಯಾವ ಶರೀರವನ್ನೇ ಧರಿಸಿರಲಿ, ಎಲ್ಲರೂ ನಿಜವಾಗಿ ಪರಮಾತ್ಮನೇ ಎಂದೂ ಅವನಿಗೆ ನಿಶ್ಚಯವಾಗಿರುತ್ತದೆ. ಯಾವದೊಂದು ಉಪಾಧಿಯ ಮೇಲುಕೀಳುಗಳಿಂದ ಅದರಲ್ಲಿರುವ ಆತ್ಮನಿಗೆ ಯಾವ ಮೇಲುಕೀಳುಗಳೂ ಆಗಿರುವದಿಲ್ಲವೆಂಬುದು ಅವನ ಮನಸ್ಸಿನಲ್ಲಿ ಗಟ್ಟಿಯಾಗಿಬಿಟ್ಟಿರುತ್ತದೆ. ಕನಸಿನಲ್ಲಿ ಕಂಡ ಕಲ್ಪನಾಶರೀರಗಳೆಲ್ಲವೂ ಕನಸುಕಂಡಾತನಲ್ಲಿಯೇ ಕಲ್ಪಿತವಾಗಿರುವಂತೆಯೇ

ಸಕಲಶರೀರಗಳೂ ತನ್ನ ಪರಮಾರ್ಥರೂಪವಾದ ಆತ್ಮನಲ್ಲಿಯೇ ಕಲ್ಪಿತವಾಗಿ ತೋರುತ್ತಿರುವದರಿಂದ ತನಗಿಂತ ಬೇರೆಯವರಾಗಿ ತನ್ನವರು, ಹೆರರು, ಹಗೆಗಳು, ಗೆಳೆಯರು-ಮುಂತಾದ ತಾರತಮ್ಯವುಳ್ಳವರು ಯಾರೂ ಇರುವದೇ ಇಲ್ಲವೆಂಬುದು ಜ್ಞಾನಿಯ ನಿಸ್ಸಂಶಯವಾದ ತಿಳಿವಳಿಕೆಯಾಗಿರುತ್ತದೆ.

ಈ ಜ್ಞಾನದ ಫಲವೇನೆಂದರೆ, ಕನಸಿನ ಸುಖದುಃಖಗಳು ಕನಸುಕಾಣುವವರೆಗೂ ತೋರುತ್ತಿದ್ದು ಎಚ್ಚರವಾದಕೂಡಲೆ ಸ್ವಲ್ಪವೂ ಉಳಿಯದಂತೆ ಹೇಗೆ ಮರೆಯಾಗುವವೋ ಹಾಗೆ ಅನಾದಿಕಾಲದಿಂದಲೂ ಅಜ್ಞಾನದ ದೆಶೆಯಲ್ಲಿ ತಾನು ಅನುಭವಿಸುತ್ತಿದ್ದ ಸುಖದುಃಖಗಳು ಈಗ ಒಂದಿಷ್ಟೂ ಉಳಿಯದಂತೆ ಹೋಗಿಬಿಡುವವು. ಅವೂ ಆತ್ಮನಿಗಿಂತ, ಎಂದರೆ ತನ್ನ ಪರಮಾರ್ಥರೂಪಕ್ಕಿಂತ, ಬೇರೆಯಾಗಿ ಇರುವದೇ ಇಲ್ಲ. ಆದ್ದರಿಂದ ಮೊದಲು ಹೇಗೆ ಕೆಲವು ವಸ್ತುಗಳಲ್ಲಿ ರಾಗ, ಕೆಲವು ವಸ್ತುಗಳಲ್ಲಿ ದ್ವೇಷ, ಮತ್ತೆ ಕೆಲವು ವಸ್ತುಗಳಲ್ಲಿ ಔದಾಸೀನ್ಯ-ಇವು ಮೊಳೆಯುತ್ತಿದ್ದವೋ ಹಾಗೆ ಈಗ ಮೊಳೆತುಕೊಳ್ಳುವದಿಲ್ಲ. ಇಂಥದೊಂದು ವಸ್ತುವು ತನ್ನ ಕೈಗೆ ಸಿಕ್ಕಿದಾಗ ತಾನು ನಿರೀಕ್ಷಿಸಿದ್ದಂತೆ ಸುಖಕ್ಕೆ ಬದಲಾಗಿ ದುಃಖವನ್ನೇ ಕೊಟ್ಟಿತಲ್ಲ! ಎಂಬ ಶೋಕವು ಅವನಿಗಿರುವದಿಲ್ಲ, ತನಗಿಂತ ಹೊರಚ್ಚಾಗಿ ತನಗೆ ಸುಖವನ್ನಾಗಲಿ ದುಃಖವನ್ನಾಗಲಿ ಕೊಡಬಲ್ಲ ಪರಮಾರ್ಥವಸ್ತುವೊಂದು ಇದೆಯೆಂಬ ಮೋಹವೂ ಅವನಿಗಿರುವದಿಲ್ಲ.

## 1.11. ಪರಮಾನಂದ ಸ್ವರೂಪನು

**ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾನನ್ದೀಭವತಿ ।**
**ಕೋ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್ । ಯದೇಶ ಆಕಾಶ ಆನನ್ದೋ ನ ಸ್ಯಾತ್ ।**
**ಏಷ ಹ್ಯೇವಾನನ್ದಯಾತಿ ॥** (ತೈತ್ತಿರೀಯ 2-7)

"ಆತನು ರಸವೇ, ರಸವನ್ನು ಹೊಂದಿಯೇ ಈತನು ಆನಂದಿಯಾಗುತ್ತಾನೆ. ಆಕಾಶದಲ್ಲಿ ಆನಂದವಿಲ್ಲದಿದ್ದರೆ ಯಾರುತಾನೆ ಪ್ರಾಣಾಪಾನಗಳ ವ್ಯಾಪಾರವನ್ನು ಮಾಡಿಯಾರು? ಈತನೇ ಅಲ್ಲವೆ, ಆನಂದವನ್ನುಂಟುಮಾಡುವಾತನು?"

ಪರಮಾತ್ಮನು ಇದಾನೆಂಬ ಜ್ಞಾನವಿಷ್ಟೇ ಪ್ರಯೋಜನಕಾರಿಯಾಗಲಾರದು, ಅವನು ಅರಿವಿನ ರೂಪವಾಗಿರುವನೆಂದರೂ ಸಾಲದು. ಏಕೆಂದರೆ ನಮ್ಮೆಲ್ಲರಿಗೂ ಇರುವ ಆತ್ಮನು ನಿತ್ಯವಿಕಾರಿಯಾಗಿ ನಿತ್ಯದುಃಖಸ್ವರೂಪನಾಗಿದ್ದಿದ್ದರೆ ಅವನನ್ನು ನಮ್ಮ ಆತ್ಮನೆಂದು ತಿಳಿದುಕೊಂಡಮಾತ್ರದಿಂದ ಏನು ಪ್ರಯೋಜನವಾಗುತ್ತಿತ್ತು? ನಮ್ಮ ನಮ್ಮ ದುಃಖದ ಜೊತೆಗೆ ಮಿಕ್ಕವರೆಲ್ಲರ ದುಃಖವೂ ಗಂಟುಬೀಳುತ್ತಿತ್ತು. ಅಷ್ಟೆ.

ಆದರೆ ನಮ್ಮಗಳ ಪರಮಭಾಗ್ಯದಿಂದ ನಿಜಸ್ಥಿತಿಯು ಹೀಗಿರುವದಿಲ್ಲ. ನಮ್ಮ ಆತ್ಮನು

ರಸಸ್ವರೂಪನಾಗಿರುತ್ತಾನೆ. "ಇದು ಸಿಹಿಯಾಗಿದೆ", "ಇದು ಹುಳ್ಳಗೆ ಇದೆ"–ಎಂದು ವಸ್ತುಗಳನ್ನು ಸವಿಸವಿದು ಚಪ್ಪರಿಸಿ ಹಿಗ್ಗುವೆವಲ್ಲ, ಅಂಥ ಬಗೆಬಗೆಯ ರುಚಿಗಳ ಮೂಲವಾಗಿರುವ ರುಚಿಯೇ ಆತನ ಸ್ವರೂಪವು. ವಸ್ತುಗಳಿಂದ ನಾವು ರುಚಿಯನ್ನು ಗ್ರಹಿಸಿದೆವು–ಎಂದು ವ್ಯವಹಾರದಲ್ಲಿ ನಮಗೆ ತೋರುತ್ತಿದ್ದರೂ ನಿಜವಾಗಿ ರುಚಿಯೆಂಬುದು ಆಯಾ ವಸ್ತುಗಳಲ್ಲಿಲ್ಲ; ವಸ್ತುಗಳು ರುಚಿಗೆ ನಿಮಿತ್ತಮಾತ್ರವಾಗಿರುತ್ತವೆ. ರುಚಿಯು ನಮ್ಮ ಆತ್ಮಸ್ವರೂಪದಲ್ಲಿಯೇ ಇದ್ದುಕೊಂಡು ನಮ್ಮಗಳ ಸಾತ್ತ್ವಿಕ ಅಂತಃಕರಣಕ್ಕೆ ತಕ್ಕಂತೆ ವ್ಯಕ್ತವಾಗಿರುತ್ತದೆ.

ಈ ರುಚಿಯನ್ನು ನಾವು ಎಷ್ಟೆಷ್ಟು ಪಡೆದುಕೊಳ್ಳಬಲ್ಲೆವೋ ಅಷ್ಟಷ್ಟು ನಮ್ಮ ಆನಂದವೂ ಹೆಚ್ಚುತ್ತದೆ. ಇದನ್ನು ಪಡೆದುಕೊಳ್ಳುವ ಯೋಗ್ಯತೆಯು ಒಬ್ಬೊಬ್ಬರಲ್ಲಿ ಒಂದೊಂದು ಮಟ್ಟಕ್ಕೆ ಬಂದಿರುವದರಿಂದಲೇ ಜನರು ಬೇರೆಬೇರೆ ವಸ್ತುಗಳಿಂದ ಆನಂದವನ್ನು ಪಡೆಯುವದಕ್ಕೆ ಹವಣಿಸುತ್ತಿರುವರು. ಎಲ್ಲರಿಗಿಂತಲೂ ಹೆಚ್ಚಿನ ಯೋಗ್ಯತೆಯುಳ್ಳ ಮಹಾತ್ಮರು ಹೊರಗಿನ ಸಾಧನಗಳನ್ನು ಬಯಸದೆಯೇ ತಮ್ಮ ಸ್ವರೂಪದಲ್ಲಿರುವ ರಸವನ್ನು ಪಡೆದು ಆನಂದದಿಂದ ಜೀವಿಸುತ್ತಿರುವರು. ಈ ಆನಂದವನ್ನೇ "ಬ್ರಹ್ಮಾನಂದ" ಎಂದು ಕರೆಯುತ್ತಾರೆ.

ಪ್ರಪಂಚದಲ್ಲಿರುವ ಪ್ರಾಣಿಗಳ ಪ್ರವೃತ್ತಿಗಳಿಗೆಲ್ಲ ಒಂದೇ ಒಂದು ಗುರಿಯಿರುವದು. ಅದು ಯಾವದೆಂದರೆ ಆನಂದವು. ಈ ಆನಂದವನ್ನು ಪಡೆಯಬೇಕೆಂದೇ ನಾವೆಲ್ಲರೂ ಹಾತುವರಿಯುತ್ತಿರುವೆವು; ಇದನ್ನು ಹೇಗೆ ಪಡೆದುಕೊಳ್ಳಬೇಕೆಂಬುದನ್ನು ತಿಳಿಯದೆಯೆ ಚಡಪಡಿಸುತ್ತಾ ಕರೆಡಕಡೆಗೆ ಹರಿಯುತ್ತಿರುವೆವು. ನಾವು ಮಾಡುವ ಕೆಲಸದಿಂದ ನಮಗೆ ಸುಖವುಂಟಾಗಲಾರದೆಂದು ನಿಶ್ಚಿತವಾಗಿದ್ದರೆ ಯಾರು ತಾನೆ ಆಯಾಸಪಡುತ್ತಿದ್ದರು? ಪಾಪ! ಕೆಲವರ ಪ್ರಯತ್ನಗಳಿಗೆ ಫಲವಾಗಿ ದುಃಖ ವುಂಟಾಗುವುದೂ ಉಂಟು. ಆದರೆ ಅವರೂ ತಮ್ಮ ಆ ಪ್ರಯತ್ನಗಳಿಂದ ಸುಖವು ಸಿಕ್ಕುವುದೆಂದೇ ಅಲ್ಲವೆ, ಹೊಡೆದಾಡುವುದು? ಇಷ್ಟೇ ಅಲ್ಲ. ಲೋಕದಲ್ಲಿ ಪ್ರಾಣಿಗಳು ಜೀವಿಸಿರುವದಕ್ಕೆ ಈ ಆನಂದವೇ ನಿಮಿತ್ತ ವಾಗಿರುತ್ತದೆ. ಒಂದಲ್ಲದಿದ್ದರೆ ಒಂದು ದಿನ, ಇಂದಲ್ಲದಿದ್ದರೆ ಇನ್ನು ಕೆಲವು ವರ್ಷಗಳ ಮೇಲಾದರೂ, ನಮಗೆ ಸುಖವು ಸಿಕ್ಕೀತೆಂದಲ್ಲವೆ, ಜನರು ಕಾದುಕೊಂಡಿರುತ್ತಾರೆ? ಲೋಕದಲ್ಲಿ ಎಂದಿಗೂ ಸುಖವೇ ಇಲ್ಲವೆಂದಾಗಿದ್ದರೆ, ನಮ್ಮ ಜೀವನದಲ್ಲಿ ಸುಖದ ಪ್ರತ್ಯಾಶೆಯೇ ಇಲ್ಲವೆಂದಾಗಿದ್ದರೆ, ಯಾರುತಾನೆ ಬದುಕಿದ್ದಾರು? ಆಗ ಜೀವನವೇ ನರಕವಾಗಿಬಿಡುವದು, ಮರಣವೇ ಪುರುಷಾರ್ಥವಾಗಿಬಿಡುವದು!

ಆದ್ದರಿಂದ ಆತ್ಮನು ಎಲ್ಲರ ಆತ್ಮನಾಗಿರುವದಲ್ಲದೆ, ಕೇವಲ ಸಚ್ಚಿದ್ರೂಪನಾಗಿರುವದೂ ಅಲ್ಲದೆ, ಪರಮಾನಂದಸ್ವೂಪನಾಗಿಯೂ ಇರುತ್ತಾನೆಂಬುದು ಒಂದು ಸೌಭಾಗ್ಯದ ವಿಷಯವು. ಲೋಕದಲ್ಲಿ ನಮಗೆ ಸಿಕ್ಕುತ್ತಿರುವ ಸುಖದ ತುಂತುರುಗಳು ಕೂಡ ಆ ಆನಂದದ

ಮಡುವಿನಿಂದಲೇ ಸಿಡಿದುಬಂದಿರುವವೆಂಬುದು ಒಂದು ಸೌಭಾಗ್ಯದ ಸುದ್ದಿಯು; ಆತನೇ ನಮಗೆ ವಿಷಯಾನಂದರೂಪದಿಂದಲೂ ಸುಖಜೀವನ ವನ್ನಿತ್ತಿರುವವನು. ಆತನೇ ಕೊನೆಗೆ ನಮ್ಮ ಪರಮಾತ್ಮನೆಂಬ ಸಾಕ್ಷಾತ್ಕಾರವನ್ನು ಕೊಟ್ಟು ಸುಖದುಃಖಗಳ ಏರಿಳಿತಗಳಿಲ್ಲದ ತನ್ನ ಆನಂದಾಮೃತವೆಲ್ಲವನ್ನೂ ಸಂಪೂರ್ಣವಾಗಿ ನಮಗೆ ಸೂರೆಗೊಡುವಾತನು; ಇಂಥ ಪರಮಾನಂದಕ್ಕೆ ಹಕ್ಕುದಾರರು ನಾವೆಲ್ಲ!

## 1.12. ವಿಶ್ವದ ಸ್ಥೂಲ ಸೂಕ್ಷ್ಮವೆಲ್ಲಾ ಆತ್ಮನೇ

**ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।**
**ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್‌ದೃಷ್ಟೇ ಪರಾವರೇ ॥** –ಮುಂ.2–2–9

"ಆ ಪರಾವರನಾದ ಪರಮಾತ್ಮನನ್ನು ಕಂಡುಕೊಂಡರೆ ಹೃದಯಗ್ರಂಥಿಯು ಬಿಚ್ಚಿಕೊಳ್ಳುವದು, ಸರ್ವಸಂಶಯಗಳೂ ಕತ್ತರಿಸಿಹೋಗುವವು, ಅಂಥವನ ಕರ್ಮಗಳೂ ಕ್ಷಯವಾಗುವವು."

"ಇರುವದೆಲ್ಲದರ ತಿರುಳೂ ಪರಮಾತ್ಮನೇ, ಆ ಪರಮಾತ್ಮನೇ ನನ್ನ ಆತ್ಮನು" ಎಂದು ಯಾವಾತನು ತಿಳಿದುಕೊಳ್ಳುವನೋ ಅವನಿಗಾಗುವ ಫಲವೇನು?–ಎಂಬ ಪ್ರಶ್ನೆಗೆ ಈ ಮಂತ್ರದಲ್ಲಿ ಉತ್ತರವಿದೆ.

ಚರಾಚರೂಪವಾಗಿರುವ ಈ ಜಗತ್ತು ಈಗ ಕಾರ್ಯರೂಪವಾಗಿ ಕಾಣುತ್ತಿದೆ. ಇದರಲ್ಲಿ ಬಗೆಬಗೆಯ ನಾಮರೂಪಗಳಿವೆ, ಅನೇಕಕರ್ತೃಭೋಕ್ತೃಗಳಿರುತ್ತಾರೆ. ಅವರು ಮಾಡುವ ಕ್ರಿಯೆಗಳು ಇಂಥಿಂಥ ದೇಶಕಾಲನಿಮಿತ್ತಗಳಿಂದ ಇಂಥಿಂಥ ಫಲಗಳನ್ನು ಕೊಡಬೇಕೆಂದು ನಿಯಮವಿದೆ. ಇಂಥ ಕಾರ್ಯರೂಪವಾಗಿರುವ ಇರವಿನ ರಾಶಿಯ ತಿರುಳು ಪರಮಾತ್ಮನೇ– ಪರಮಾತ್ಮನನ್ನು ಬಿಟ್ಟರೆ ಈ ಅಪಾರವಾಗಿ ತೋರುತ್ತಿರುವ ಜಗತ್ತಿಗೆ ಇರವೇ ಇಲ್ಲ– ಎಂಬುದನ್ನು ತಿಳಿದುಕೊಂಡರೆ, ಇದರಲ್ಲಿ ತೋರುವ ಯಾವದೊಂದು ದೃಶ್ಯದ ನಿಮಿತ್ತವಾಗಿಯೂ ನಮಗೆ ರಾಗದ್ವೇಷಮೋಹಗಳು ಆಗುವದಿಲ್ಲ. ಏಕೆಂದರೆ ರಾಗದ್ವೇಷಾದಿಗಳು ಹೊರಗಿನ ವಸ್ತುಗಳ ವಿಷಯವಾದ ಮೋಹದಿಂದ ನಮ್ಮ ಹೃದಯಕ್ಕೆ ಗಂಟುಬಿದ್ದಿರುತ್ತವೆ. ಹೊರಗಿನ ವಸ್ತುಗಳಲ್ಲಿ ಕೆಲವು ಪ್ರಿಯವಾಗಿಯೂ ಕೆಲವು ಅಪ್ರಿಯವಾಗಿಯೂ ತೋರುತ್ತಿರುವದರಿಂದ ನಮ್ಮ ಮನಸ್ಸಿನಲ್ಲಿ ಅವುಗಳ ಬಗ್ಗೆ ರಾಗದ್ವೇಷಗಳುಂಟಾಗಿ ತಳಮಳವುಂಟಾಗುತ್ತಿರುವದು. ಆದರೆ "ಇದೆಲ್ಲವೂ ಪರಮಾತ್ಮನೇ" ಎಂಬ ಅರಿವು ಉಂಟಾದಮೇಲೆ ಮೋಹವು ಹೇಗಾದೀತು? ಮೋಹವಿಲ್ಲದಿದ್ದರೆ ರಾಗಾದಿಗಳು ಹೇಗೆ ಉಂಟಾದಾವು?

ಕಾರ್ಯರೂಪವಾಗಿರುವದೆಲ್ಲವೂ ಪರಮಾತ್ಮನೇ ಎಂಬುದಿಷ್ಟೇ ಅಲ್ಲ, ಇದು ಪ್ರಳಯವಾಗಿ ಮತ್ತೆ ಸೃಷ್ಟಿಯಾಗುವವರೆಗೆ ಯಾವದೋ ಒಂದು ಸೂಕ್ಷ್ಮವಾದ ಕಾರಣರೂಪದಿಂದ ಇರಬೇಕಷ್ಟೆ; ಆ ಅವ್ಯಾಕೃತವಾದ ಜಗತ್ತಿನ ಸೂಕ್ಷ್ಮರೂಪವೂ ಪರಮಾರ್ಥವಾಗಿ ಪರಮಾತ್ಮನೇ, ಆ ನಮ್ಮ ಆತ್ಮನಿಗಿಂತ ಬೇರೆಯಾಗಿ ವಿಶ್ವದ ಸ್ಥೂಲರೂಪವಾಗಲಿ ಸೂಕ್ಷ್ಮರೂಪವಾಗಲಿ ಇಲ್ಲವೇ ಇಲ್ಲ-ಎಂಬ ತಿಳಿವು ಉಂಟಾದರೆ, ಪರಾವರನಾದ ಅಂಥ ಆತ್ಮನ ಸ್ವರೂಪವನ್ನು ನಾವು ಕಂಡುಕೊಂಡರೆ, ನಮ್ಮ ಸಕಲಸಂಶಯಗಳೂ ಕತ್ತರಿಸಿಹೋಗುವವು. ಆತ್ಮನು ಒಬ್ಬನೋ ಇಬ್ಬರೋ, ಒಬ್ಬನಾದರೆ ಈ ಜಗತ್ತು ಅವನಿಗಿಂತ ಭಿನ್ನವೋ ಅಲ್ಲವೋ, ಆತನು ಇದಕ್ಕೆ ನಿಮಿತ್ತಕಾರಣನೋ ಉಪಾದಾನಕಾರಣನೋ, ನಮ್ಮ ಆತ್ಮನಿಗಿಂತ ಬೇರೆಯೋ ಅಲ್ಲವೋ-ಎಂದು ಮುಂತಾಗಿ ಈಗ ನಮ್ಮನ್ನು ಸಾವಿರಾರು ಸಂಶಯಗಳು ಬಾಧಿಸುತ್ತಿರುವವಷ್ಟೆ; ಇವುಗಳು ಒಂದೂ ಆಮೇಲೆ ತಲೆಹಾಕುವದಿಲ್ಲ. ಇದೂ ಒಂದು ಪ್ರಯೋಜನ.

ಹೃದಯದ ಸಂಶಯಗಳು ತೊಲಗುವದು, ರಾಗದ್ವೇಷಾದಿಗಳ ಕಾಟವು ತಪ್ಪುವದು-ಇವೆರಡೇ ಆತ್ಮದರ್ಶನದ ಪ್ರಯೋಜನಗಳೆಂದು ತಿಳಿಯಬಾರದು. ಈ ದರ್ಶನದಿಂದ ನಮಗೆ ಮತ್ತೂ ಒಂದು ಪರಮಪ್ರಯೋಜನವಾಗುತ್ತದೆ. ಈಗ ನಾವುಗಳು ಕರ್ಮಕ್ಕೆ ದಾಸರಾಗಿರುತ್ತೇವೆ, ಕರ್ಮಫಲಕ್ಕೆ ಬಾಯಿನೀರುಕರೆಯುತ್ತಿದೇವೆ; ಆದ್ದರಿಂದ ನಾವು ಒಂದೊಂದು ಕರ್ಮವನ್ನು ಮಾಡಿ ಅದರ ಫಲವನ್ನು ಈ ಜನ್ಮದಲ್ಲಿಯೋ ಮತ್ತೊಂದು ಜನ್ಮದಲ್ಲಿಯೋ ಅನುಭವಿಸಲೇಬೇಕಾಗಿದೆ. ಹಾಗೆ ಕರ್ಮಫಲವನ್ನು ಅನುಭವಿಸಿದಮೇಲೂ ಅದರ ವಾಸನೆಯು ಮನಸ್ಸಿನಲ್ಲಿ ನಿಂತುಕೊಂಡು ಮತ್ತೆ ಅದೇ ಬಗೆಯ ಕರ್ಮಗಳಲ್ಲಿ ತೊಡಗುವಂತೆ ನಮ್ಮನ್ನು ತಳ್ಳುತ್ತಿರುತ್ತದೆ. ಈ ಕರ್ಮದ ಸಂಕೋಲೆಯಿಂದ ತಪ್ಪಿಸಿಕೊಳ್ಳುವದಕ್ಕೆ ಅಜ್ಞರಿಗೆ ಮಾರ್ಗವೇ ಇಲ್ಲ. ಆದರೆ "ನಾವು ಕರ್ತೃವಲ್ಲ, ಭೋಕ್ತೃವಲ್ಲ; ಕ್ರಿಯಾಕಾರಕಫಲಗಳು ಅವಿದ್ಯೆಯಿಂದ ನನ್ನಲ್ಲಿ ಆರೋಪಿತವಾಗಿರುತ್ತವೆ. ಪರಮಾರ್ಥವಾಗಿ ಅವಕ್ಕೆ ನನ್ನ ಆತ್ಮನಿಗಿಂತ ಬೇರೆಯಾದ ಇರವಿಲ್ಲ" ಎಂಬ ಜ್ಞಾನವು ಸ್ಪಷ್ಟವಾಗಿ ಆದಾಗ, ಅಂಥ ಅಕರ್ತೃಸ್ವರೂಪವನ್ನು ನಾವು ಕಂಡುಕೊಂಡಾಗ, ನಮ್ಮ ಕರ್ಮವೆಲ್ಲವೂ ಸವೆದುಹೋಗಿಬಿಡುತ್ತದೆ. ಆಗ ಕರ್ಮವು ಫಲವನ್ನು ಕೊಟ್ಟು ಸವೆಯುತ್ತದೆಯೆಂದು ತಿಳಿಯಬಾರದು, ಕನಸಿನಲ್ಲಿ ಕಾಣುತ್ತಿದ್ದ ಕ್ರಿಯಾಕಾರಕಗಳು ಎಚ್ಚರವಾಗುತ್ತಲೂ ಅತ್ಯಂತವಾಗಿ ಬಾಧಿತವಾಗುವ ಹಾಗೆ ಅಜ್ಞಾನದ ಸ್ಥಿತಿಯಲ್ಲಿ ನಮ್ಮನ್ನು ಕಾಡಿಸುತ್ತಿರುವ ಕ್ರಿಯಾಕಾರಕ ಫಲರೂಪವಾದ ಪ್ರಪಂಚವು ಸಂಪೂರ್ಣವಾಗಿ ಹಾರಿಹೋಗುವದು, ಅದರ ಸತ್ತ್ವವೇ ಇನ್ನುಮೇಲೆ ಉಳಿದು ಕೊಳ್ಳುವದಿಲ್ಲ. ಅಂಥ ಆನಂದಸ್ವರೂಪವನ್ನು ನಾವು ಆಗ ಹೊಂದಿರುತ್ತೇವೆ!

****

# 2. ಆನಂದ ಸ್ವರೂಪನು

## 2.1. ಎರಡು ಬಗೆಯ ಜನರು

**ಬ್ರಹ್ಮ ವಾದಿನೋ ವದಂತಿ :**

**ಕಿಂಕಾರಣಂ ಬ್ರಹ್ಮ ಕುತಃ ಸ್ಮ ಜಾತಾ ಜೀವಾಮ ಕೇನ ಕ್ವ ಚ ಸಂಪ್ರತಿಷ್ಠಃ ।**
**ಅಧಿಷ್ಠಿತಾಃ ಕೇನ ಸುಖೇತರೇಷು ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್॥**
(ಶ್ವೇತ 1-1)

"ಬ್ರಹ್ಮವಾದಿಗಳು ಹೇಳುತ್ತಾರೆ: ಕಾರಣವಾದ ಬ್ರಹ್ಮವು ಯಾವದು? ಏತರಿಂದ ಹುಟ್ಟಿರುವೆವು? ಏತರಿಂದ ಬದುಕಿರುವೆವು? ಮತ್ತು ಎಲ್ಲಿಗೆ ಹೋಗಿ ಸೇರುವೆವು? ಎಲೈ ಬ್ರಹ್ಮವಿದರೆ, ಯಾವನ ನಿಯಮಕ್ಕೊಳಪಟ್ಟು ನಾವು ಸುಖದುಃಖಗಳಲ್ಲಿ ವ್ಯವಸ್ಥೆಯನ್ನು ಅನುಸರಿಸಿಕೊಂಡಿರುತ್ತೇವೆ?"

ಈ ಪ್ರಪಂಚದಲ್ಲಿ ಬ್ರಹ್ಮವಾದಿಗಳು, ಜಗದ್ವಾದಿಗಳು-ಎಂದು ಜನರು ಎರಡು ಬಗೆ. ನಮಗೆ ಕಾಣುತ್ತಿರುವ ದೃಶ್ಯಗಳಿಗೆಲ್ಲ ಪ್ರಕೃತಿಯೊಳಗೇ ಅಡಕವಾಗಿರುವ ಕಾಲ, ಸ್ವಭಾವ, ನಿಯತಿ, ಯದೃಚ್ಛಾ, ಭೂತಗಳು-ಮುಂತಾದವುಗಳನ್ನೇ ಕಾರಣವಾಗಿ ಅಂಗೀಕರಿಸುವವರು **ಜಗದ್ವಾದಿಗಳು**. "ಕಾಲಕ್ರಮದಲ್ಲಿ ಎಲ್ಲವೂ ಮಾರ್ಪಡುತ್ತದೆ, ಹಾಗೆ ಮಾರ್ಪಡುವದೇ ಅದರ ಸ್ವಭಾವವು. ಅದು ಯಾವ ರೂಪವನ್ನು ಮುಟ್ಟಬೇಕೆಂದು ನಿಯತವಾಗಿದೆಯೋ ಆ ರೂಪಕ್ಕೆ ಮುಟ್ಟುತ್ತದೆ. ಅಕಸ್ಮಾತ್ತಾಗಿ ಆಗುವ ಮಾರ್ಪಾಡುಗಳಿಗೆ ಇಂಥದ್ದೊಂದು ಕಾರಣವೆಂದು ಹೇಳುವದು ಹೇಗೆ? ಇದು ಭೌತಿಕ ಪ್ರಪಂಚವಾದ್ದರಿಂದ ಎಲ್ಲಕ್ಕೂ ಭೂತಗಳೇ ಕಾರಣವು" ಎಂದು ಅವರು ಹೇಳುತ್ತಿರುವರು.

ಕಾಣುವ ಸಕಲದೃಶ್ಯಗಳಿಗೂ ಆಧಾರವಾಗಿರುವ ಯಾವದೋ ಒಂದು ಸರ್ವಾತೀತತತ್ತ್ವವಿದೆ. ನಾವು ಅದರಿಂದಲೇ ಬಂದಿರುವೆವು. ಅದರ ಬಲದಿಂದಲೇ ಜೀವಿಸಿರುತ್ತೇವೆ, ಕೊನೆಗೆ ಅದರಲ್ಲಿಯೇ ಸೇರುವೆವು. "ಇದರಲ್ಲಿ ಸುಖವಿದೆ, ಇದರಲ್ಲಿ ದುಃಖವಿದೆ" ಎಂಬ ವ್ಯವಸ್ಥೆಯನ್ನನುಸರಿಸಿಕೊಂಡು ನಾವು ಮಾಡುತ್ತಿರುವ ವ್ಯವಹಾರಕ್ಕೆಲ್ಲ ಆ ಮಹಾತತ್ತ್ವವೇ ಕಾರಣ-ಎಂಬ ದೃಢವಾದ ನಂಬಿಕೆಯು ಯಾರಿಗೆ ಇರುವದೋ ಅವರೇ **ಬ್ರಹ್ಮವಾದಿಗಳು**.

ಬ್ರಹ್ಮವಿರುವದೆಂಬ ನಂಬಿಕೆಯಿರುವದಲ್ಲದೆ ಅದೇ ಜಗತ್ತಿನ ಸರ್ವಸ್ವವು, ಅದೇ ನಮ್ಮ ಆತ್ಮನು-ಎಂದು ಮನಗಂಡಿರುವ ಮಹನೀಯರು ಕೆಲವರುಂಟು. ಅವರು **ಬ್ರಹ್ಮವಿದರು**. ಬ್ರಹ್ಮವನ್ನು ಅರಿತುಕೊಳ್ಳಬೇಕೆನ್ನುವವರು ಅಂಥ ಬ್ರಹ್ಮಜ್ಞಾನಿಗಳ ಬಳಿಯಲ್ಲಿ ಮಾಡುವ ಸುವಿಚಾರದ ಪ್ರಶ್ನೆಗಳ ಸರಣಿಯನ್ನು ಮೇಲಿನ ಮಂತ್ರದಲ್ಲಿ ತಿಳಿಸಿರುತ್ತದೆ.

## 2.2. ಪರಮಾತ್ಮನೊಬ್ಬನೇ ಸತ್ಯನು

**ತದೇತತ್ಸತ್ಯಂ ಯಥಾ ಸುದೀಪ್ತಾತ್ಪಾವಕಾದ್ವಿಸ್ಫುಲಿಙ್ಗಾಃ**
**ಸಹಸ್ರಶಃ ಪ್ರಭವನ್ತೇ ಸರೂಪಾಃ । ತಥಾಕ್ಷರಾದ್ವಿವಿಧಾಃ**
**ಸೋಮ್ಯ ಭಾವಾಃ ಪ್ರಜಾಯನ್ತೇ ತತ್ರ ಚೈವಾಪಿಯನ್ತಿ ॥** (ಮುಂಡಕ 2–1–1)

"ಆ ಇದು ಸತ್ಯವಾದದ್ದು. ಹೇಗೆ ಚೆನ್ನಾಗಿ ಹೊತ್ತಿಕೊಂಡು ಉರಿಯುತ್ತಿರುವ ಬೆಂಕಿಯಿಂದ ಅದೇ ರೂಪವಾದ ಸಾವಿರಾರು ಕಿಡಿಗಳು ಉಂಟಾಗುವವೋ, ಅದರಂತೆಯೇ, ಎಲೈ ಸೋಮ್ಯನೆ, ಅಕ್ಷರದಿಂದ ಬಗೆಬಗೆಯ ಭಾವಗಳು ಉಂಟಾಗುತ್ತವೆ, ಅಲ್ಲಿಯೇ ಲಯವಾಗುವವು."

ಪರಮಾತ್ಮನೊಬ್ಬನೇ ಸತ್ಯನು. ಮಿಕ್ಕದ್ದು ಯಾವದೂ ಆ ಅರ್ಥದಲ್ಲಿ ಸತ್ಯವಲ್ಲ. ಕೆಲಸಗಳು, ಅದಕ್ಕೆ ಬೇಕಾಗುವ ಸಾಮಗ್ರಿ, ಅವುಗಳ ಫಲ–ಈ ರೂಪದಲ್ಲಿರುವ ಪ್ರಪಂಚವು ನಿಜವಾಗಿ ಸತ್ಯವಲ್ಲದಿದ್ದರೂ ತೋರುವಷ್ಟು ಕಾಲ ಇರುವದರಿಂದಲೂ ಅದರಿಂದಲೇ ನಮ್ಮ ವ್ಯವಹಾರವು ಸಾಗಬೇಕಾಗಿರುವದರಿಂದಲೂ ಅದನ್ನು ಸತ್ಯವೆಂದು ಕರೆಯುತ್ತೇವೆ. ಪರಮಾತ್ಮನು ಹಾಗಲ್ಲ; ಆತನು ವ್ಯವಹಾರದಲ್ಲಿಯೂ ವ್ಯವಹಾರವು ಬಾಧಿತವಾದಮೇಲೂ ಸತ್ಯನಾಗಿರುವನು.

ಬೆಂಕಿಯಿಂದ ಛಟಛಟನೆ ಹಾರಿಬರುವ ಕಿಡಿಗಳು ಲೆಕ್ಕವಿಲ್ಲದಷ್ಟಿರುವವು, ಅವುಗಳ ಗಾತ್ರವೂ ಆಕಾರವೂ ಬೇರೆಬೇರೆಯಾಗಿರುವದು; ಆದರೆ ಅವೆಲ್ಲ ಬೆಂಕಿಯೇ. ಇದರಂತೆ ಬಗೆಬಗೆಯ ನಾಮರೂಪಗಳ ಶರೀರಗಳಲ್ಲಿ ತೋರಿಕೊಳ್ಳುವ ಜೀವರು ಅನಂತ ವಾಗಿರುತ್ತಾರೆ; ಆದರೂ ಇವರೆಲ್ಲರೂ ಸಾರದೃಷ್ಟಿಯಿಂದ ನೋಡಿದರೆ ಚೈತನ್ಯವೇ ಆಗಿರುತ್ತಾರೆ, ಆ ವಿಷಯದಲ್ಲಿ ಪರಮಾತ್ಮನಿಗೂ ಇವರಿಗೂ ಯಾವದೊಂದು ಭೇದವೂ ಇರುವದೇ ಇಲ್ಲ.

ಬೇರೆಬೇರೆ ದೇಹಗಳೆಂಬ ಉಪಾಧಿಗಳ ದೃಷ್ಟಿಯಿಂದ ನೋಡಿದಾಗ ಜೀವರು ಗಳೆನಿಸಿರುವ ನಾವೆಲ್ಲರೂ ಶುದ್ಧಚೈತನ್ಯಸ್ವರೂಪನಾದ ಪರಮಾರ್ಥಸತ್ಯವಾದ ಪರಮಾತ್ಮನಿಂದಲೇ ಬಂದಿರುತ್ತೇವೆ, ಕೊನೆಗೆ ಆತನಲ್ಲಿಯೇ ಅಡಗುತ್ತೇವೆ. ಪರಮಾರ್ಥವಾಗಿ ನೋಡಿದರೆ ಆತನ ಸಚ್ಚಿದಾನಂದಸ್ವರೂಪವೇ ನಮ್ಮದು.

****

## 2.3. ಮನಸ್ಸಿಗೂ ಅಗೋಚರವಾದ ತತ್ತ್ವ

**ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ।**
**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥** (ಕೇನ 1-1-5)

"ಯಾವದನ್ನು ಮನಸ್ಸಿನಿಂದ ಮನನಮಾಡುವದು ಆಗಲಾರದೋ, ಯಾವದರಿಂದ ಮನಸ್ಸು ಮನನವಾಗುತ್ತದೆಯೆಂದು ಬಲ್ಲವರು ಹೇಳುವರೋ, ಅದೇ ಬ್ರಹ್ಮವೆಂದು ನೀನು ತಿಳಿ; "ಇದು" ಎಂದು ಉಪಾಸನೆ ಮಾಡುವ ಸ್ವರೂಪವು ನಿಜವಾದ ಬ್ರಹ್ಮವಲ್ಲ."

ಮಾನವಜಾತಿಯಲ್ಲಿರುವ ಒಂದು ವಿಶೇಷವೆಂದರೆ ಮನಸ್ಸು. ಮನಸ್ಸಿನಿಂದ ಮನುಷ್ಯನು ಅರಿಯುವದಕ್ಕೆ ಆಗದೆ ಇರುವದೆಂಬುದೇ ಇಲ್ಲ. ಹದಿನಾಲ್ಕು ಲೋಕಗಳಲ್ಲಿ ಇರುವ ವಸ್ತುಗಳನ್ನೂ, ಇಲ್ಲದಿದ್ದರೂ ಕಲ್ಪಿಸಬಹುದಾದ ವಸ್ತುಗಳನ್ನು ಕೂಡ, ಇಂದ್ರಿಯಗಳ ಮೂಲಕವಾಗಿ ಅಥವಾ ತಾನೇ ಮನನಮಾಡಿಕೊಂಡು, ಮನಸ್ಸು ನಿರ್ಧರಿಸಿಬಿಡುತ್ತದೆ. ಮನುಷ್ಯನು ಮನಸ್ಸೆಂಬ ಬಲೆಯನ್ನು ಸರಿಯಾಗಿ ಬೀಸಿದರೆ ಆ ಬಲೆಯಲ್ಲಿ ಸಿಕ್ಕದೆ ಇರುವ ಪದಾರ್ಥವೇ ಈ ಜಗತ್ತಿನಲ್ಲಿಲ್ಲ.

ಆದರೆ ಇಂಥ ಅದ್ಭುತಶಕ್ತಿಯ ಮನಸ್ಸಿಗೂ ಎಂದೆಂದಿಗೂ ಗೋಚರವಾಗದೆ ಇರುವ ತತ್ತ್ವವೊಂದುಂಟು. ಅದೇ ಬ್ರಹ್ಮವು, ಅಥವಾ ಪರಮಾತ್ಮನು. ಪರಮಾತ್ಮನನ್ನು ಮನಸ್ಸಿನ ಯಾವ ವೃತ್ತಿಗೂ ಗೋಚರಪಡಿಸಿಕೊಳ್ಳುವದಕ್ಕೆ ಆಗಲಾರದು, ಇದಕ್ಕೆ ಬದಲು ಮನಸ್ಸೇ ಆತನ ಚೈತನ್ಯದ ಬೆಳಕಿಗೆ ಮೈಯೊಡ್ಡಿಕೊಂಡು ಜೀವಿಸಬೇಕಾಗಿರುತ್ತದೆ. ಮನಸ್ಸನ್ನು ಆತನು ಅರಿಯಬಲ್ಲನು, ಅದು ಆತನನ್ನು ಅರಿಯಲೇ ಆರದು.

ಭಕ್ತರು ಆದರದಿಂದ ಉಪಾಸನೆಮಾಡುವಾಗ ಅವರ ಉಪಾಸನೆಗೆ ವಿಷಯವಾಗಿ ಪರಮಾತ್ಮನು ಕಾಣಿಸಿಕೊಳ್ಳುವದುಂಟು; ಅನುಗ್ರಹವನ್ನು ಮಾಡುವದಕ್ಕೆಂದು ಆಯಾ ರೂಪದಿಂದ ಅವರಿಗೆ ದರ್ಶನವನ್ನು ಕೊಡುವದೂ ಉಂಟು. ಆದರೆ ಅದು ಆತನ ಕಲ್ಪಿತರೂಪವೇ ಹೊರತು ಪರಮಾರ್ಥರೂಪವಲ್ಲ. ಉಪಾಸಕನು ತನ್ನ ಚಿತ್ತವನ್ನು ಆತನ ಚಿಂತೆಯಲ್ಲಿಯೇ ಆದರಾತಿಶಯದಿಂದ ಮುಳುಗಿಸಿದ್ದರೆ ಕೊನೆಯಲ್ಲಿ ಪರಮಾತ್ಮನು ತನ್ನ ಆತ್ಮನೇ ಆಗಿರುವನೆಂಬ ಪರಮಾರ್ಥವು ಅವನಿಗೆ ಹೇಗೋ ಮನದಟ್ಟಾಗುವದು, ಆದರೆ ಆ ಸ್ವರೂಪವನ್ನು ವಿಷಯಮಾಡಿಕೊಳ್ಳುವದು ಎಂದಿಗೂ ಆಗದು. ಇಂಥ ಅಚಿಂತ್ಯ, ಅದ್ಭುತ ಮಹಿಮೆಯು ಆ ಪರಮೇಶ್ವರನದು!

## 2.4. ಅಲ್ಪಾತ್ಮನು, ಮಹಾತ್ಮನು

**ಸ್ವಪ್ನಾನ್ತಂ ಜಾಗರಿತಾನ್ತಂ ಚೋಭೌ ಯೇನಾನುಪಶ್ಯತಿ ।**
**ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥** (ಕಠ 2-1-4)

"ಸ್ವಪ್ನಾವಸ್ಥೆ, ಜಾಗರಿತಾವಸ್ಥೆ-ಈ ಎರಡನ್ನೂ ಯಾವದರಿಂದ ಅರಿಯುತ್ತಾರೋ ಆ ಮಹಾವಿಭುವಾದ ಆತ್ಮನನ್ನು ಕಂಡುಕೊಂಡ ಧೀರನು ಶೋಕಿಸುವದಿಲ್ಲ."

ನಮ್ಮಲ್ಲಿ ಮುಖ್ಯವಾಗಿ ಇಬ್ಬರು ಆತ್ಮರಿರುವರು. ಒಬ್ಬ ಆತ್ಮನು ನಾವು ಎಚ್ಚರದಲ್ಲಿ ಮಾತ್ರ "ನಾನು, ನಾನು" ಎಂದು ವ್ಯವಹರಿಸುವ ಆತ್ಮನು. ಅವನು ಆ ಅವಸ್ಥೆಯಲ್ಲಿರುವ ದೇಹ, ಪ್ರಾಣ, ಮನಸ್ಸು-ಇವುಗಳ ಅಭಿಮಾನವನ್ನು ಬಿಗಿಯಾಗಿ ಅಂಟಿಸಿಕೊಂಡಿರುವನು. ಅವನಿಗೆ ಇಂದ್ರಿಯಗಳಿಂದಾಗುವ ಅರಿವು, ಆ ಅರಿವಿನಿಂದ ಅವನು ಊಹಿಸಿಕೊಳ್ಳುವ ಅರಿವು-ಇವುಗಳೇ ಜೀವನಕ್ಕೆ ಬೇಕಾಗಿರುತ್ತವೆ; ಆ ಎರಡು ಅರಿವುಗಳಿಂದ ಅವನು ವಿಷಯಗಳನ್ನು ಪ್ರಿಯವೆಂದೋ ಅಪ್ರಿಯವೆಂದೋ ಅರಿತುಕೊಂಡವನಾಗಿ ಶೋಕಕ್ಕೀಡಾಗಿರುತ್ತಾನೆ. ಬಗೆಬಗೆಯ ಕರ್ಮಗಳನ್ನು ಮಾಡಿ ಅವುಗಳ ಫಲವಾಗಿ ದುಃಖದಲ್ಲಿ ಮುಳುಗಿರುತ್ತಾನೆ. ಇವನೇ ಅವಿದ್ಯೆಯಿಂದಾಗಿರುವ **ಅಲ್ಪಾತ್ಮನು.**

ಈ ನಮ್ಮಲ್ಲಿಯೇ ಮತ್ತೊಬ್ಬ ಆತ್ಮನಿರುವನು. ಅವನು ಎಚ್ಚರಕ್ಕಾಗಲಿ ಕನಸಿಗಾಗಲಿ ಕಟ್ಟುಬಿದ್ದಿರುವದಿಲ್ಲ; ಈ ಎರಡು ಅವಸ್ಥೆಗಳಲ್ಲಿಯೂ ಕಾಣಬರುವ ಹೊರಗಿನ ವಿಷಯಗಳು, ಒಳಗಿನ ಇಂದ್ರಿಯ, ಪ್ರಾಣ, ಮನಸ್ಸು ಇವುಗಳೆಲ್ಲದರ ಅಭಿಮಾನವುಳ್ಳವನಾಗಿ ತೋರುವ ಅಭಿಮಾನಿಯಾದ ಅಲ್ಪಾತ್ಮ-ಈ ಎಲ್ಲವನ್ನೂ ತನ್ನ ದಿವ್ಯವಾದ ಚೈತನ್ಯಪ್ರಕಾಶದಿಂದ ಬೆಳಗುತ್ತಿರುವನು. ಕನಸಿನ ಸ್ವಭಾವವನ್ನೂ ಎಚ್ಚರದ ಸ್ವಭಾವವನ್ನೂ ಹೋಲಿಸಿ ನೋಡುವಾಗ ನಮಗೆ ಗೊತ್ತಿಲ್ಲದೆಯೇ ನಾವು ಈ ಆತ್ಮನಲ್ಲಿ ನಿಂತುಬಿಟ್ಟಿರುತ್ತೇವೆ. ಈತನು **ಮಹಾತ್ಮನು,** ಎರಡವಸ್ಥೆಗಳನ್ನೂ ವ್ಯಾಪಿಸಿರುವ **ವಿಭುವಾದ** ಆತ್ಮನು; ಇವನೇ ನಿಜವಾಗಿ ನಮ್ಮಗಳೆಲ್ಲರ **ಪರಮಾರ್ಥವಾದ ಆತ್ಮನು.** ಆತನ ಸ್ವರೂಪವನ್ನು ಸರಿಯಾಗಿ ಕಂಡುಕೊಂಡರೆ ನಮಗೆ ಎಂದಿಗೂ ಶೋಕವಿರುವದಿಲ್ಲ; ಏಕೆಂದರೆ ಶೋಕಕ್ಕೆ ಕಾರಣವಾಗಿರುವ ದೇಶಕಾಲವಸ್ತುಗಳ ಕಟ್ಟು ಒಂದಿಷ್ಟೂ ಅವನಿಗಿರುವದಿಲ್ಲ.

****

## 2.5. ಪ್ರಜ್ಞಾನ

**ಯತ್ಕಿಂಚೇದಂ ಪ್ರಾಣಿ ಜಙ್ಗಮಂ ಚ ಪತತ್ರಿ ಚ ಯಚ್ಚ ಸ್ಥಾವರಂ ಸರ್ವಂ ತತ್ಪ್ರಜ್ಞಾನೇತ್ರಮ್। ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ ॥**
(ಐ. 3-3)

"ಇಲ್ಲಿರುವ ಪ್ರತಿಯೊಂದು ಪ್ರಾಣಿಯೂ-ಓಡಾಡುವ ಪಶ್ವಾದಿ ಪ್ರಾಣಿಗಳಾಗಲಿ, ಹಾರುವ ಹಕ್ಕಿಗಳಾಗಲಿ, ನಿಂತಿರುವ ಮರಗಿಡವಾಗಲಿ-ಪ್ರಜ್ಞೆಯ ನಾಯಕತ್ವದಲ್ಲಿರತಕ್ಕದ್ದು, ಪ್ರಜ್ಞಾನದಲ್ಲಿಯೇ ನಿಂತಿರತಕ್ಕದ್ದು. ಪ್ರಜ್ಞೆಯೇ ಎಲ್ಲಕ್ಕೂ ಆಶ್ರಯವು, ಪ್ರಜ್ಞಾನವೇ ಬ್ರಹ್ಮವು".

ಲೋಕದಲ್ಲಿ ಎಲ್ಲರನ್ನೂ ಸರಿಯಾದ ಮಾರ್ಗದಲ್ಲಿ ಕರೆದುಕೊಂಡುಹೋಗುವದಕ್ಕೆ ತಕ್ಕ ಒಂದಾನೊಂದು ಶಕ್ತಿಯುಂಟು; ಅಜ್ಞಾನದ ಕತ್ತಲೆಯಲ್ಲಿಯೂ ಹಾದಿಯನ್ನು ತೋರಿಸುವ ಒಂದಾನೊಂದು ಬೆಳಕುಂಟು. ಆ ಬೆಳಕು ಹುಟ್ಟಿದ ಪ್ರತಿಯೊಂದು ಪ್ರಾಣಿಯ ಹೃದಯದೊಳಗೂ ಬೆಳಗುತ್ತಿರುವದು. ಆಕಾಶದಲ್ಲಿ ಹಾರಾಡುವ ಹಕ್ಕಿಗಳು, ಭೂಮಿಯಲ್ಲಿ ಓಡಾಡುವ ಪ್ರಾಣಿಗಳು ಮನುಷ್ಯರು, ನೀರಿನಲ್ಲಿರುವ ಜಲಚರಗಳು. ಇವೆಲ್ಲಕ್ಕೂ ಇಷ್ಟೇ ಅಲ್ಲ, ಸ್ಥಾವರಗಳೆನಿಸಿರುವ ಗಿಡಮರಗಳಿಗೆ ಸಹ, ಬೆಳಕೇ ಒಳಗಣ್ಣು; ಈ ಒಳಗಣ್ಣಿನ ನೋಟದಿಂದಲೇ ಅವುಗಳ ಜೀವನಪಥವು ಸುಗಮವಾಗಿರುತ್ತದೆ. ಇದಕ್ಕೆ ವೇದಾಂತದಲ್ಲಿ "ಪ್ರಜ್ಞಾನ" (ಹೆಚ್ಚಿನರಿವು) ಎಂಬ ಹೆಸರನ್ನು ಕೊಟ್ಟಿರುತ್ತದೆ.

ಈ ಪ್ರಜ್ಞಾನವೆಂಬ ಅರಿವಿನ ಬೆಳಕಿನಲ್ಲಿಯೇ ನಾವುಗಳೆಲ್ಲರೂ ವ್ಯವಹಾರ ಮಾಡುತ್ತಿದೇವೆಂಬುದು ಹಾಗಿರಲಿ, ನಮಗೆಲ್ಲರಿಗೂ ಈ ಪ್ರಜ್ಞಾನವೇ ಆಸರೆಯಾಗಿರುತ್ತದೆ. ಪ್ರಜ್ಞಾನವೆಂಬುದೊಂದು ಅಮೃತಕಿರಣಗಳ ಬೆಳಕಿನ ಸಮುದ್ರವಾದರೆ ನಾವುಗಳೆಲ್ಲ ಆ ಸಮುದ್ರದಲ್ಲಿ ತೇಲುತ್ತಿರುವ ಥಾಲಿಗಳೂ ತಂಬಿಗೆಗಳೂ ಕೊಡಗಳೂ ಆಗಿರುತ್ತೇವೆ; ನಮ್ಮೊಳಗೂ ಹೊರಗೂ ಆ ಅಮೃತವೇ ತುಂಬಿ ತುಳುಕುತ್ತಲಿರುವದು. ಈ ಪ್ರಜ್ಞಾನವೇ ವೇದಾಂತಿಗಳು ಹೇಳುವ "ಬ್ರಹ್ಮ" ವೆಂಬ ಪರಮಾರ್ಥತತ್ತ್ವವು.

****

## 2.6. ನಿಜವಾದ ಸ್ವರೂಪ ಚಿಂತನೆ

**ಅಕೃತ್ಸ್ನೋ ಹಿ ಸ ಪ್ರಾಣನ್ನೇವ ಪ್ರಾಣೋ ನಾಮ ಭವತಿ। ವದನ್ವಾಕ್ಪಶ್ಯಂಶ್ಚಕ್ಷುಃ ಶೃಣ್ವನ್ ಶ್ರೋತ್ರಂ ಮನ್ವಾನೋ ಮನಸ್ತಾನ್ಯಸ್ಯೈತಾನಿ ಕರ್ಮನಾಮಾನ್ಯೇವ । ಸ ಯೋಽತ ಏಕೈಕಮುಪಾಸ್ತೇ ನ ಸ ವೇದಾಕೃತ್ಸ್ನೋ ಹ್ಯೇಷೋಽತ ಏಕೈಕೇನ ಭವತ್ಯಾತ್ಮೇತ್ಯೇವೋಪಾಸೀತಾತ್ರ ಹ್ಯೇತೇ ಸರ್ವ ಏಕಂ ಭವನ್ತಿ ॥**

(ಬೃ. 1–4–7)

ನಮ್ಮ ಸ್ವರೂಪವು ಈಗಲೇ ಇಲ್ಲಿಯೇ ಸರ್ವವ್ಯಾಪಕವಾಗಿ ಸರ್ವಸ್ವತಂತ್ರವಾಗಿ ಸರ್ವವನ್ನೂ ಮೀರಿ ಇರುತ್ತದೆ; ಆದರೂ ನಾವು ಒಂದು ದೇಶಕ್ಕೆ, ಒಂದು ಕಾಲಕ್ಕೆ, ಅಥವಾ ಒಂದು ವಸ್ತುವಿಗೆ ಕಟ್ಟುಬಿದ್ದಿರುವ ಅಲ್ಪಾತ್ಮರೆಂಬ ಭ್ರಾಂತಿಯಿಂದ ನರಳುತ್ತಿದೇವೆ. ನಾವೆಲ್ಲರೂ ಚಿದ್ರೂಪನಾದ ಸಂಪೂರ್ಣಪರಮಾತ್ಮನಲ್ಲಿ ಪರಮಾತ್ಮನ ರೂಪದಿಂದ ಒಂದಾಗಿರುತ್ತೇವೆ, ಆದರೂ ನಮ್ಮ ಅಜ್ಞಾನದಿಂದ ಕಲ್ಪಿತವಾದ ರೂಪದಿಂದ ನಾವು ಒಬ್ಬೊಬ್ಬರೂ ಬೇರೆಬೇರೆಯಾಗಿದ್ದುಕೊಂಡು ಅಸಂಪೂರ್ಣರಾಗಿರುತ್ತೇವೆ, ಇದರಿಂದಲೇ ನಮಗೆ ರಾಗದ್ವೇಷಗಳೂ ಸಂಸಾರವೂ ಗಂಟುಬಿದ್ದಿರುತ್ತವೆ.

ನಾವು ಅಲ್ಪಾತ್ಮರಾಗಿ ಅಸಂಪೂರ್ಣರಾಗಿರುವೆವೆಂಬ ತಪ್ಪುತಿಳಿವು ಹೇಗೆ ಉಂಟಾಗಿರುವದೆಂದರೆ, ನಾವು ಕರ್ಮನಾಮಗಳನ್ನೇ ನಮ್ಮ ಹೆಸರೆಂದು ತಿಳಿದುಕೊಂಡಿರುತ್ತೇವೆ. ಮಡಕೆಕುಡಿಕೆಗಳನ್ನು ಮಾಡುವವನು ಕುಂಬಾರನೆನಿಸುವನು, ಬಟ್ಟೆಯನ್ನು ನೇಯುವವನು ಜಾಡನೆನಿಸುವನು, ಮರಗೆಲಸವನ್ನು ಮಾಡುವವನು ಬಡಗಿಯೆನಿಸುವನು; ಆದರೆ ಕುಂಬಾರ, ಜಾಡ, ಬಡಗಿ–ಎಂಬುದು ಆಯಾ ಜನರ ಸ್ವರೂಪಕ್ಕೆ ಸೇರಿದ್ದಲ್ಲ, ಅವರವರ ಕಸಬಿನಿಂದ ಬಂದಿರುವ ಹೆಸರಾಗಿರುತ್ತದೆ. ಅಲ್ಲವೆ? ಇದರಂತೆ ನಮಗೆ ಉಸಿರಾಡುವದರಿಂದ ಪ್ರಾಣನೆಂದು ಹೆಸರು, ಮಾತನಾಡುವದರಿಂದ ವಾಕ್ಕು ಎಂದು ಹೆಸರು, ನೋಡುವದರಿಂದ ಚಕ್ಷುರಿಂದ್ರಿಯವೆಂದು ಹೆಸರು. ಕೇಳುವದರಿಂದ ಶ್ರೋತ್ರೇಂದ್ರಿಯವೆಂದು ಹೆಸರು, ಆಲೋಚಿಸುವದರಿಂದ ಮನಸ್ಸು ಎಂದು ಹೆಸರು; ಆದರೆ ಈ ಪ್ರಾಣನೇ ಮುಂತಾದ ಹೆಸರುಗಳಾಗಲಿ ಪ್ರಾಣಾದಿರೂಪವಾಗಲಿ ನಮ್ಮ ನಿಜವಾದ ಸ್ವರೂಪನಲ್ಲ. ಇವೆಲ್ಲ ಬರಿಯ ಕರ್ಮನಾಮಗಳು, ಕರ್ಮರೂಪಗಳು. ಆದರೂ ನಾನು ಉಸಿರಾಡುತ್ತೇನೆ, ಮಾತಾಡುತ್ತೇನೆ, ನೋಡುತ್ತೇನೆ, ಕೇಳುತ್ತೇನೆ, ಯೋಚಿಸುತ್ತೇನೆ" ಎಂದು ನಾವು ಆ ಅಸಂಪೂರ್ಣರೂಪವನ್ನೇ ನಾವೆಂದು ಎಣಿಸಿಕೊಂಡು ಈ ಅಲ್ಪಾತ್ಮರೂಪದಿಂದಲೇ ವ್ಯವಹರಿಸುತ್ತಿರುತ್ತೇವೆ. ಇದೇ ನಮ್ಮ ಸಂಸಾರದುಃಖಕ್ಕೆ ಕಾರಣವಾಗಿರುತ್ತದೆ.

ಈ ಅಸಂಪೂರ್ಣರೂಪವನ್ನು ಬಿಟ್ಟು, ಈ ರೂಪಗಳೆಲ್ಲ ಯಾವದರಲ್ಲಿ ಅಡಕವಾಗಿಬಿಟ್ಟಿರುವವೋ, ಯಾವ ರೂಪವೊಂದೇ ಈ ಪ್ರಾಣಾದಿಗಳ ರೂಪದಲ್ಲಿ

ತೋರಿಕೊಳ್ಳುತ್ತಿರುವದೋ ಆ ನಮ್ಮ ಸಂಪೂರ್ಣರೂಪವನ್ನು ಅರಿತುಕೊಂಡೆವೆಂದರೆ ಕೂಡಲೆ ನಾವು ಮಹಾತ್ಮರು-ಎಂಬ ಅರಿವಾಗಿಬಿಡುತ್ತದೆ. ಆ ರೂಪವೇ ನಮ್ಮ ನಿಜವಾದ ಸ್ವರೂಪವು. ಸೂರ್ಯನ ಬೆಳಕು ಕಿಟಕಿ, ಬಾಗಿಲು, ಮಾಳಿಗೆಯ ಕಂಡಿ-ಮುಂತಾದವುಗಳ ಮೂಲಕವಾಗಿ ಮನೆಯೊಳಕ್ಕೆ ಬಂದಾಗ ಆಯಾ ಆಕಾರವಾಗಿಯೇ ತೋರುತ್ತಿದ್ದರೂ ಹೇಗೆ ನಿಜವಾಗಿ ಯಾವ ಆಕಾರವೂ ಇಲ್ಲದೆ ಇರುವದೋ ಬೆಳಕು-ಎಂಬ ರೂಪವೊಂದೇ ಉಳ್ಳದ್ದಾಗಿರುವದೋ, ಅದರಂತೆ ನಮ್ಮ ಈ ಸ್ವರೂಪವು ಮೇಲೆ ಹೇಳಿದ ಎಲ್ಲಾ ದ್ವಾರಗಳಿಂದಲೂ ಹೊರಸೂಸುತ್ತಿರುವ ಚೈತನ್ಯದ ಬೆಳಕಾಗಿರುವದು. ಅದರ ಬೆಳಕಿನಿಂದಲೇ ಈ ದ್ವಾರಗಳೂ ಹೊರಗಿನ ಎಲ್ಲಾ ವಸ್ತುಗಳೂ ಬೆಳಗುತ್ತಿರುವವು. ಆ ನಮ್ಮ ಅಧ್ಯಾತ್ಮಪ್ರಕಾಶವನ್ನು ನಮ್ಮೊಳಗಿನ ಚೈತನ್ಯರೂಪವಾದ ಬೆಳಕನ್ನು-ಅದೇ ರೂಪಕ್ಕೆ ತಿರುಗಿ ಅದರಲ್ಲಿಯೇ ನಿಂತುಕೊಂಡು ಸಾಕ್ಷಾತ್ಕಾರಮಾಡಿಕೊಂಡರೆ ಆಗ ಒಬ್ಬ ಚಿದ್ರೂಪನಾದ ಪರಮಾತ್ಮನೇ ಎಲ್ಲೆಲ್ಲಿಯೂ ತನ್ನ ದಿವ್ಯಜ್ಯೋತಿಯಿಂದ ವ್ಯಾಪಿಸಿಕೊಂಡಿರುವನೆಂಬ ತತ್ತ್ವಾರ್ಥವು ಸ್ಪಷ್ಟವಾಗಿ ತಿಳಿದು ಆ ಆನಂದದಲ್ಲಿ ನಾವು ಮುಳುಗಿಬಿಡುವೆವು.

ಆ ಚೈತನ್ಯಪರಂಜ್ಯೋತಿಯ ಬೆಳಕಿನ ರಾಶಿಯಲ್ಲಿ ಸೇರಿಕೊಂಡು ನಮ್ಮ ಆನಂದವನ್ನು ನಾವು ಕಂಡುಕೊಳ್ಳುವದೇ ಮನುಷ್ಯತ್ವದ ಸಾರ್ಥಕ್ಯವು.

ಆದ್ದರಿಂದ, ವಾಚಕಮಹಾಶಯರೆ, ನೀವು ನಿಜವಾದ ಸ್ವರೂಪವನ್ನೇ ಚಿಂತಿಸಿಕೊಳ್ಳಿರಿ. "ನಾನು ದೇಹವಲ್ಲ, ನಾನು ಇಂದ್ರಿಯಗಳಲ್ಲ, ನಾನು ಪ್ರಾಣನಲ್ಲ, ನಾನು ಮನಸ್ಸಲ್ಲ, ನಾನು ಬುದ್ಧಿಯಲ್ಲ, ನಾನು ಚಿತ್ತವಲ್ಲ, ನಾನು ಅಹಂಕಾರವಲ್ಲ; ನಾನು ದೇಹಕ್ಕೆ ಇಂದ್ರಿಯಗಳಿಗೂ ಪ್ರಾಣಕ್ಕೂ ಅಂತಃಕರಣಕ್ಕೂ ಆಧಾರವಾಗಿರುವ ಅವುಗಳೆಲ್ಲವನ್ನೂ ಬೆಳಗುವ ಚೈತನ್ಯರೂಪನಾದ ಆತ್ಮನೇ" ಎಂದು ಯಾವಾಗಲೂ ಚಿಂತಿಸಿಕೊಳ್ಳಿರಿ. ಆಗ ಆ ಆತ್ಮರೂಪದಲ್ಲಿ ಎಲ್ಲಾ ಇಂದ್ರಿಯಗಳ, ಎಲ್ಲಾ ಮನೋವೃತ್ತಿಗಳ ಅರಿವುಗಳನ್ನೂ ಮುಳುಗಿಸಿಕೊಂಡು ಚೈತನ್ಯಸಾಗರವಾಗಿ ಆನಂದಪಡುವಿರಿ.

## 2.7. ಸಚ್ಚಿದಾನಂದ ಪರಮಾತ್ಮನು

**ವಿಜ್ಞಾನಮಾನಂದಂ ಬ್ರಹ್ಮ ರಾತಿರ್ದಾತುಃ ಪರಾಯಣಂ ತಿಷ್ಠಮಾನಸ್ಯ ತದ್ವಿದ ಇತಿ॥** (ಬೃ. 3-9-7)

"ವಿಜ್ಞಾನವೂ ಆನಂದವೂ ಬ್ರಹ್ಮವು. ಧನದಾನಗಳನ್ನು ಮಾಡುವಾತನಿಗೂ ತನ್ನಿಷ್ಠನಾಗುವ ಜ್ಞಾನಿಗೂ ಪರಮಗತಿಯು."

ಯಾವ ಪರಮಾತ್ಮನಿಂದ ನಾವು ಬೆಂಕಿಯ ಕಿಡಿಗಳಂತೆ ಬಂದಿರುವೆವೋ, ಯಾವನನ್ನು

ನಮ್ಮ ಮನಸ್ಸು ಕೂಡ ತಿಳಿಯಲಾರದೆ ತಾನೇ ಆತನ ಬೆಳಕಿನಿಂದ ಬೆಳಗುತ್ತಿರುವದೋ, ಯಾವನು ನಮ್ಮ ಎಚ್ಚರಕನಸುಗಳೆರಡನ್ನೂ ವ್ಯಾಪಿಸಿಕೊಂಡು ಆ ಎರಡು ಅವಸ್ಥೆಗಳನ್ನೂ ತಿಳಿಯಪಡಿಸುವ ಪರಮಾತ್ಮನಾಗಿರುವನೋ, ಯಾವ ಪರಮಾತ್ಮನ ಬೆಳಕಿನಲ್ಲಿಯೇ ನಾವುಗಳೆಲ್ಲರೂ ವ್ಯವಹರಿಸುತ್ತಿರುವೆವೋ, ಪರಮಾರ್ಥವಾಗಿ ಯಾವ ಚೈತನ್ಯಸಾಗರನೇ ನಮ್ಮ ಸ್ವರೂಪವಾಗಿರುವನೋ, ಆತನು ವಿಜ್ಞಾನವು, ಅರಿವಿನ ಗಟ್ಟಿಯು; ಅಷ್ಟೇ ಅಲ್ಲ, ಆತನು ಆನಂದವು, ಎಂದರೆ ಯಾವ ದುಃಖದ ಸಂಬಂಧವೂ ಎಳ್ಳಷ್ಟೂ ಇಲ್ಲದ ಪ್ರಸನ್ನವಾದ ನಿರುಪಮವಾದ ನಿರಾಯಾಸವಾದ ನಿತ್ಯತೃಪ್ತಸ್ವರೂಪವು.

ಯಜ್ಞದಾನತಪಸ್ಸುಗಳನ್ನು ಮಾಡಿರುವ ಕರ್ಮಿಗಳಿಗೂ ಈ ಆನಂದಸ್ವರೂಪನಾದ ಪರಮಾತ್ಮನೇ ಕರ್ಮಫಲವನ್ನು ಕೊಡುವಾತನು. ಹೆಂಡಿರು, ಮಕ್ಕಳು, ಹಣಕಾಸು-ಮುಂತಾದ ಎಲ್ಲಾ ಆಶೆಗಳನ್ನೂ ತೊರೆದು ಆತನೇ ತಮಗೆ ಬೇಕೆಂಬ ವಿರಕ್ತರಿಗೆ ತನ್ನ ಸ್ವರೂಪದ ಅರಿವನ್ನೂ ತನ್ನ ಆನಂದಸ್ವರೂಪದ ಸೂರೆಯನ್ನೂ ಕೊಡುವವನು ಆತನೇ. ಆತನು ಸರ್ವಜ್ಞನಾಗಿರುವದರಿಂದ ನಮ್ಮ ಕರ್ಮಗಳಿಗೆ ತಕ್ಕ ಫಲವನ್ನು ಅವುಗಳು ಪಕ್ವವಾಗುವ ಕಾಲಕ್ಕೆ ಸರಿಯಾಗಿ ಒದಗಿಸಬಲ್ಲವನಾಗಿರುತ್ತಾನೆ; ಆನಂದಸ್ವರೂಪನೇ ಆಗಿರುವದರಿಂದ ಬ್ರಹ್ಮನಿಷ್ಠರನ್ನು ಮಿಗಿಲಿಲ್ಲದ ಆನಂದ ಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾಗಿ ಮಾಡುವದಕ್ಕೂ ಸಮರ್ಥನಾಗಿರುತ್ತಾನೆ. ನಮ್ಮ ಇರವು, ನಮ್ಮ ಅರಿವು, ನಮ್ಮ ಸುಖ-ಎಲ್ಲವೂ ಆತನ ಅಧೀನವೇ, ಹೆಚ್ಚೇಕೆ? ಇವುಗಳೆಲ್ಲವೂ ಆ ಸಚ್ಚಿದಾನಂದಪರಮಾತ್ಮನೇ.

## 2.8. ಬ್ರಹ್ಮಾನಂದ

**ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ ।**
**ಆನಂದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕುತಶ್ಚನೇತಿ ॥ (ತೈ. 2-9)**

"ಯಾವದನ್ನು ಮುಟ್ಟಲಾರದೆ ವಾಕ್ಕುಗಳು ಮನಸ್ಸಿನೊಡನೆ ಹಿಂತಿರುಗುವವೋ ಆ ಬ್ರಹ್ಮಾನಂದವನ್ನು ಅರಿತುಕೊಂಡಾತನು ಏತಕ್ಕೂ ಹೆದರುವದಿಲ್ಲ."

ನಮಗೆ ವ್ಯವಹಾರದಲ್ಲಿ ಸಿಕ್ಕುವ ಸುಖವು ವಿಷಯಗಳ ಸಂಬಂಧದಿಂದ ಉಂಟಾಗತಕ್ಕದ್ದಾಗಿರುತ್ತದೆ. ಇಂದ್ರಿಯಗಳನ್ನು ವಿಷಯಗಳಿಗೆ ತಗಲಿಸಿಕೊಂಡರೆ ಆಗ ಮನಸ್ಸಿನಲ್ಲಿ ತೋರುವ ಈ ಸುಖದ ಸ್ವರೂಪವು ಹೊರಗಿನ ವಿಷಯದ ಯೋಗ್ಯತೆಗೆ ತಕ್ಕಂತೆ ಇರುವದೆಂದು ನಾವು ಭಾವಿಸಿರುವೆವು. ಆದ್ದರಿಂದಲೇ ವಿಷಯಗಳನ್ನು ಭೋಗಸಾಮಗ್ರಿಯೆಂದು ನಾವು ಕರೆಯುವದು. ಆ ಸಾಮಗ್ರಿಯು ಯಾವನಲ್ಲಿ ಹೆಚ್ಚಾಗಿ ರಾಶಿಯಾಗಿರುವದೋ ಅವನನ್ನು ಹೆಚ್ಚು ಸುಖಿಯೆಂದು ನಾವು ಭಾವಿಸುವದಕ್ಕೂ ಇದೇ ಕಾರಣ.

ಆದರೆ ನಮಗೆಲ್ಲರಿಗೂ ಆತ್ಮನಾಗಿರುವ ಪರಮೇಶ್ವರನ ಸ್ವರೂಪವಾಗಿರುವ ಆನಂದವು ಇಂಥದ್ದಲ್ಲ. ಅದನ್ನು ವಿಷಯಗಳಿಂದ ಹಿಂಡಿಕೊಳ್ಳುವದಕ್ಕೆ ಆಗುವದಿಲ್ಲ. ಇಂದ್ರಿಯಗಳಿಂದ ತೆಗೆದುಕೊಂಡು ಭೋಗಿಸಿ ಅಳತೆಮಾಡುವದಕ್ಕೂ ಆಗುವದಿಲ್ಲ. ಯಾವದನ್ನು ವಿಷಯಗಳಿಂದ ಇಂದ್ರಿಯಗಳ ಮೂಲಕ ಹೀರಿಕೊಂಡು ಅನುಭವಿಸುವೆವೋ ಆ ಸುಖವನ್ನು ಇಂಥದ್ದೆಂದು ಮನಸ್ಸಿನಿಂದ ಅರಿತುಕೊಳ್ಳಬಹುದು, ಮಾತುಗಳಿಂದ ಬಣ್ಣಿಸಿ ಮತ್ತೊಬ್ಬರಿಗೆ ತಿಳಿಸಕೊಡಲೂಬಹುದು. ಆದರೆ ನಮ್ಮಗಳ ಸ್ವರೂಪವೇ ಆಗಿರುವ ಆನಂದವು ಇಂಥದ್ದಲ್ಲ. ಅದನ್ನು ಯಾವ ಮಾತುಗಳಿಂದಲೂ ವರ್ಣಿಸುವದಕ್ಕೆ ಆಗುವದಿಲ್ಲ; ಯಾವ ಮನೋವೃತ್ತಿಯಿಂದಲೂ ಗ್ರಹಿಸುವದಕ್ಕೆ ಆಗುವದಿಲ್ಲ. ಅದು ಕೊರೆಯಾಗುವದಲ್ಲ, ಹಿರಿದಾಗಿ ಬೆಳೆಯುವದೂ ಅಲ್ಲ. ಅದನ್ನು ಹೆಚ್ಚಿಸುವದಕ್ಕೆ ಯಾವದೊಂದು ನಿಮಿತ್ತವೂ ಬೇಕಿರುವದಿಲ್ಲ; ಅದನ್ನು ಯಾವದಾದರೊಂದು ನಿಮಿತ್ತದಿಂದ ಕುಗ್ಗಿಸುವದಕ್ಕೂ ಆಗುವದಿಲ್ಲ. ಆದ್ದರಿಂದ ಅದಕ್ಕೆ ಬ್ರಹ್ಮಾನಂದವೆಂದು ಹೆಸರು.

ಈ ಬ್ರಹ್ಮಾನಂದವನ್ನು ಕಂಡುಕೊಂಡ ವಿವೇಕಿಗೆ ಏತರ ಹಂಗೂ ಇಲ್ಲ. ಏತರ ಅಂಜಿಕೆಯೂ ಇರುವದಿಲ್ಲ. ಏಕೆಂದರೆ ಅವನು ಏರಿಳಿತಗಳನ್ನು ಕಾಣದ ಸ್ವಲ್ಪವೂ ಅಲೆಯೇಳದ ಪರಿಶುದ್ಧವಾದ ಆನಂದಾಮೃತದ ಸಾಗರವಾಗಿರುತ್ತಾನೆ.

## 2.9. ಆನಂದ ನಿಧಿ

**ರಸೋವೈಸಃ । ರಸಂ ಹ್ಯೇವಾಯಂ ಲಬ್ಧ್ವಾನನ್ದೀ ಭವತಿ । ಕೋಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನಂದೋ ನ ಸ್ಯಾತ್ । ಏಷ ಹ್ಯೇವಾನನ್ದಯಾತಿ ॥** (ತೈ. 2-7)

"ಆತನು ರಸವೆಂಬುದು ಪ್ರಸಿದ್ಧವು. ರಸವನ್ನು ಹೊಂದಿಯಲ್ಲವೆ ಈತನು ಆನಂದಿಯಾಗುವನು? ಆಕಾಶದಲ್ಲಿ ಈ ಆನಂದವು ಇಲ್ಲದಿದ್ದರೆ ಯಾವನು ತಾನೆ ಉಸಿರಾಡಿಯಾನು, ಬದುಕಿದ್ದಾನು? ಈತನೇ ಅಲ್ಲವೆ, ಆನಂದವನ್ನುಂಟುಮಾಡುವವನು?"

ಬ್ರಹ್ಮಾನಂದವೆಂಬುದು ನಿಜವಾಗಿಯೂ ಇದೆಯೆ? ಅದು ಇದೆಯೆಂಬುದಕ್ಕೆ ಸಾಧಕಪ್ರಮಾಣವು ಯಾವದು?-ಎಂಬ ಶಂಕೆಯು ನಮ್ಮಲ್ಲಿ ಅನೇಕರಿಗೆ ಆಗಾಗ್ಗೆ ಬರುವದುಂಟು. ಆದರೆ ಜ್ಞಾನಿಗಳನ್ನು ನೋಡಿದರೆ ಈ ಶಂಕೆಯು ಕೂಡಲೆ ತೊಲಗಿ ಹೋಗುವದು. ಏಕೆಂದರೆ ಅವರು ಹೊರಗಿನ ಯಾವದೊಂದು ಸುಖಸಾಮಗ್ರಿಯನ್ನೂ ಕೂಡಿಹಾಕಿಕೊಂಡಿರುವದಿಲ್ಲ; ಆದರೂ ಯಾವದೋ ಮಧುರಪದಾರ್ಥವನ್ನು ಸವಿದು ಸುಖದಿಂದ ಬಾಯಿಚಪ್ಪರಿಸುತ್ತಿರುವವರಂತೆ ಅವರು ಯಾವಾಗಲೂ ಆನಂದದಿಂದಲೇ ಇರುತ್ತಾರೆ. ಅವರಿಗೆ ಅಂಥ ಆನಂದವನ್ನು ಕೊಡುವ ಯಾವದೋ ಒಂದು ಹೆಚ್ಚಿನ

ರಸಪದಾರ್ಥವು ಸಿಕ್ಕಿರಬೇಕಲ್ಲವೆ? ಅದೇ ಬ್ರಹ್ಮವು. ಆದ್ದರಿಂದ ಬ್ರಹ್ಮಾನಂದವೆಂಬುದು ನಿಜವಾಗಿ ಇರುತ್ತದೆ.

ಜ್ಞಾನಿಗಳ ಮಾತು ಹಾಗಿರಲಿ, ನಮ್ಮ ಶರೀರಾದಿಗಳ ವ್ಯಾಪಾರಗಳು ಇವೆಯಲ್ಲ, ಇವು ಏತಕ್ಕಾಗಿ ಹೀಗೆ ನಡೆಯುತ್ತಿರುವವು? ಇವುಗಳೆಲ್ಲದರಿಂದಲೂ ಸುಖವನ್ನು ಹೊಂದುವದಕ್ಕೆ ತಕ್ಕ ಇವುಗಳೆಲ್ಲಕ್ಕಿಂತಲೂ ಬೇರೆಯಾಗಿರುವ, ಒಬ್ಬ ಆತ್ಮನು ಇರುವದರಿಂದಲೇ ಅಲ್ಲವೆ? ನಮ್ಮೊಳಗೇ ಆನಂದವೊಂದು ಇದೆ, ಅದು ನಮಗೆ ದೊರಕಿಯೂ ದೊರಕುತ್ತದೆ–ಎಂಬುದು ನಿಜವಲ್ಲದಿದ್ದರೆ ಯಾರು ತಾನೆ ಬದುಕಿದ್ದಾರು? ನಮ್ಮಲ್ಲಿ ಒಬ್ಬೊಬ್ಬನೂ ಸುಖವನ್ನು ಬಯಸುತ್ತಿರುವದೂ ಅದು ಒಂದಲ್ಲ ಒಂದು ದಿನ ನಮಗೆ ದಕ್ಕುವದೆಂಬುದಕ್ಕೆ ಒಂದು ಪ್ರಬಲವಾದ ಆಧಾರವಾಗಿರುತ್ತದೆ.

ಮುಖ್ಯವಾಗಿ ನಾವು ತಿಳಿದುಕೊಳ್ಳಬೇಕಾದದ್ದು ಇಷ್ಟು : ನಮ್ಮಗಳೆಲ್ಲರ ಆತ್ಮನಾಗಿರುವ ಪರಮೇಶ್ವರನು ಆನಂದನಿಧಿಯಾಗಿರುತ್ತಾನೆ. ಆತನೇ ನಮಗೆ ವಿಷಯಭೋಗದಿಂದಾಗುವ ಸುಖವನ್ನೂ ಒಳಗೆ ವಿಚಾರಧ್ಯಾನಸಮಾಧಿಗಳಿಂದಾಗುವ ಸುಖವನ್ನೂ ನೀಡುವವನು. ಆ ಆನಂದಘನನ ಇರುವಿಕೆಯಿಂದಲೇ ನಮ್ಮ ಜೀವನವು ಸುಖಪ್ರದವಾಗಿದೆ.

## 2.10. ಸರ್ವವೂ ಆನಂದಮಯವೇ

**ಆನನ್ದೋ ಬ್ರಹ್ಮೇತಿ ವ್ಯಜಾನಾತ್ । ಆನನ್ದಾದ್ಧ್ಯೇವ ಖಲ್ವಿಮಾನಿಭೂತಾನಿ ಜಾಯನ್ತೇ। ಆನನ್ದೇನ ಜಾತಾನಿ ಜೀವನ್ತಿ । ಆನನ್ದಂ ಪ್ರಯಂತ್ಯಭಿ ಸಂವಿಶನ್ತೀತಿ॥**
**(ತೈ. 3–6)**

"ಆನಂದವೇ ಬ್ರಹ್ಮವೆಂದು ಆತನು ತಿಳಿದುಕೊಂಡನು : ಏಕೆಂದರೆ ಆನಂದದಿಂದಲೇ ಈ ಭೂತಗಳು ಹುಟ್ಟುತ್ತವೆ; ಹುಟ್ಟಿ ಆನಂದದಿಂದಲೇ ಜೀವಿಸುತ್ತವೆ; ಆನಂದದಲ್ಲಿಯೇ ಲಯವಾಗಿ ಆನಂದವೇ ಆಗಿಬಿಡುತ್ತದೆ."

ಉಪನಿಷತ್ತಿನ ಸಿದ್ಧಾಂತದಲ್ಲಿರುವ ಒಂದು ಸ್ವಾರಸ್ಯವೇನೆಂದರೆ ಈ ಸಂಸಾರವು ದುಃಖಮಯವೆಂದು ತೋರಿದರೂ ಪರಮಾರ್ಥವಾಗಿ ಅದು ಆನಂದಸ್ವರೂಪ ವಾಗಿಯೇ ಇರುವದೆಂಬ ಒಸಗೆಯನ್ನು ಜನರೆಲ್ಲರಿಗೂ ಸಾರಿರುವದು.

ಪ್ರತ್ಯಕ್ಷಾದಿಪ್ರಮಾಣಗಳಿಂದ ನಮಗೆ ತಿಳಿದುಬರುವ ಈ ಸಕಲ ಜಗತ್ತೂ ನಿಜವಾಗಿ ತನ್ನ ಪರಮಾರ್ಥರೂಪದಲ್ಲಿ ಅಖಂಡವಾದ ಆನಂದದ ಸಾಗರವಾಗಿರುವದು. ಈ ಪರಮಾರ್ಥರೂಪವೇ ಎಲ್ಲಕ್ಕೂ ಮಿಗಿಲಾದದ್ದಾದ್ದರಿಂದ ಅದಕ್ಕೆ ಬ್ರಹ್ಮವೆಂದು ಹೆಸರು. ನಾವೆಲ್ಲರೂ–ನಮ್ಮಲ್ಲಿ ಕೆಲವರು ನಾವು ಅತ್ಯಂತ ದುಃಖಿಗಳೆಂದ ತಿಳಿದುಕೊಂಡಿದ್ದರೂ– ನಿಜವಾಗಿ ಆನಂದದ ಸ್ವರೂಪರೇ ಆಗಿರುತ್ತೇವೆ. ಈ ಸಂಸಾರದಲ್ಲಿ ನಾವು ಹುಟ್ಟಿ

ಸಂಕಟಪಡುತ್ತಿರುವದೇಕೆಂದರೆ ಆ ಆನಂದಧಾಮವನ್ನು ಬಿಟ್ಟು ಬಹಿರ್ಮುಖರಾಗಿರುತ್ತೇವೆ. ಆದರೆ ನಿಜವಾಗಿ ನಾವೆಲ್ಲರೂ ಯಾವದೊಂದು ತಾರತಮ್ಯವೂ ಇಲ್ಲದೆ ಆ ಆನಂದಸಾಗರದಿಂದಲೇ ಹುಟ್ಟಿರುತ್ತೇವೆ. ನಮ್ಮಲ್ಲೆಲ್ಲ ಈ ಆನಂದವಿರುವದರಿಂದಲೇ ನಾವು ಜೀವಿಸಿಕೊಂಡಿರುತ್ತೇವೆ. ಸಾಗರದಿಂದ ಹುಟ್ಟಿದ ಅಲೆ, ಗುಳ್ಳೆ, ನೊರೆ, ನೀರುಹನಿ-ಮುಂತಾದವೆಲ್ಲವೂ ಪರಮಾರ್ಥವಾಗಿ ಸಾಗರದ ನೀರೇ ಆಗಿರುವಂತೆ ಬ್ರಹ್ಮಾದಿ ಸ್ಥಾವರದವರೆಗಿನ ಪ್ರಾಣಿಗಳೆಲ್ಲವೂ ಆ ಆನಂದದ ಅಂಶವನ್ನು ತನ್ನಲ್ಲಿಟ್ಟುಕೊಂಡೇ ಬದುಕಿರುತ್ತವೆ. ಇಷ್ಟೇ ಅಲ್ಲ, ಕೊನೆಗೆ ಈ ಬಾಳನ್ನು ಸಾಕುಮಾಡಿ ಕಣ್ಮರೆಯಾಗುವಾಗಲೂ ಈ ಪ್ರಾಣಿಗಳೆಲ್ಲವೂ ಅಲೆ, ಗುಳ್ಳೆ-ಮುಂತಾದವೆಲ್ಲ ನೀರಿನಲ್ಲಿ ಸೇರಿ ನೀರೇ ಆಗಿಬಿಡುವಂತೆ, ಆನಂದದಲ್ಲಿ ಅಡಗುತ್ತವೆ, ಆನಂದವೇ ಆಗಿಬಿಡುತ್ತವೆ.

ಹೀಗೆ ನಮಗೆ ತಿಳಿದಿರಲಿ, ತಿಳಿಯದೆ ಇರಲಿ, ನಾವೆಲ್ಲರೂ ಆನಂದಸ್ವರೂಪರೇ ಆಗಿರುತ್ತೇವೆ. ಆನಂದವನ್ನು ಬಿಟ್ಟು ಮತ್ತೆಲ್ಲಿಯೂ ನಮಗೆ ಇರವೇ ಇರುವದಿಲ್ಲ. ಈ ಗುಟ್ಟನ್ನು ಶಾಸ್ತ್ರಾಚಾರ್ಯರ ಮೂಲಕ ಶ್ರವಣಮನನಗಳನ್ನು ಮಾಡಿ ಅರಿತು ಅನುಭವಕ್ಕೆ ತಂದುಕೊಂಡವರಿಗೆ ಯಾವಾಗಲೂ ಆನಂದಸ್ವರೂಪವೇ ಹಕ್ಕಾಗಿರುವದು, ಅವರಿಗೆ ಆನಂದಸ್ವರೂಪವನ್ನು ಬಿಟ್ಟು ದುಃಖರೂಪವಾದ ಜನ್ಮರೋಗಜರಾಮೃತ್ಯುವೆಂಬ ಸಂಸಾರವು ಕನಸಿನ ತೋರಿಕೆಯಂತೆ ಸ್ವಲ್ಪವೂ ಹುರುಳಿಲ್ಲದ್ದಾಗಿರುವದು.

****

# 3. ಅಧ್ಯಾತ್ಮ ಸಾಧನಗಳು

## 3.1. ಅನನ್ಯ ಪ್ರೇಮದ ಉಪಾಸನೆ

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

**ಅನನ್ಯರಾಗಿ ನನ್ನನ್ನು ಚಿಂತಿಸುತ್ತಾ ಯಾವ ಜನರು ಉಪಾಸನೆಮಾಡುತ್ತಿರುವರೋ ಆ ನಿತ್ಯಾಭಿಯುಕ್ತರ ಯೋಗಕ್ಷೇಮವನ್ನು ನಾನು ವಹಿಸುವೆನು.** ಭಗವದ್ಗೀತೆ, 9–22

"ಅನನ್ಯಾಶ್ಚಿನ್ತಯಂತೋ ಮಾಂ" ಎಂದು ಪ್ರಾರಂಭವಾಗಿರುವ ಈ ಶ್ಲೋಕವನ್ನು ಕೇಳದವರೇ ನಮ್ಮಲ್ಲಿಲ್ಲ ಎನ್ನುವಷ್ಟು ನಮಗೆ ಪರಿಚಯವಾಗಿರುತ್ತದೆ, ಈ ಶ್ಲೋಕ. ಹರಿಕೀರ್ತನಕಾರರು ಭಗವಂತನಲ್ಲಿ ಅನನ್ಯಭಕ್ತಿಯಿರಬೇಕೆಂದು ತಿಳಿಸುವದಕ್ಕೆ ಆಗಾಗ್ಗೆ ಈ ಶ್ಲೋಕವನ್ನು ಉದಾಹರಿಸುತ್ತಲೇ ಇರುತ್ತಾರೆ. ಪರಮಾತ್ಮನನ್ನೇ ಶರಣುಹೊಕ್ಕಿರುವ ಜ್ಞಾನಿಗಳ ಯೋಗಕ್ಷೇಮವನ್ನು ಭಗವಂತನೇ ವಹಿಸುತ್ತಾನೆ, ಅವರು ತಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳುವದಕ್ಕಾಗಿ ಯಾವ ಕಷ್ಟವನ್ನೂ ಪಡಬೇಕಾಗಿಲ್ಲ–ಎಂಬುದು ಶ್ಲೋಕದ ಸರಳವಾದ ಅರ್ಥ. ಜ್ಞಾನವು ದೊರಕದ ಸಾಧಕರು ಕೂಡ ಭಾವನೆಯಿಂದ ಭಗವಂತನೇ ತಮಗೆ ಶರಣೆಂದು ತಿಳಿದು ನಿತ್ಯಯುಕ್ತರಾಗಿ ಉಪಾಸನೆಮಾಡುತ್ತಿದ್ದರೆ ಅಂಥವರ ಯೋಗಕ್ಷೇಮವನ್ನು ಭಗವಂತನೇ ನೋಡಿಕೊಳ್ಳುತ್ತಾನೆ; ಅವರಿಗೆ ಯಾವ ಆಯಾಸವೂ ಇಲ್ಲದೆಯೇ ಅವಶ್ಯಕವಾದ ಪ್ರಾಪಂಚಿಕಭೋಗ್ಯ ವಸ್ತುಗಳೂ ತಮಗೆ ತಾವೇ ಭಗವಂತನ ಅನುಗ್ರಹದಿಂದ ದೊರೆಯುತ್ತದೆ ಎಂಬರ್ಥವೂ ಇದರಲ್ಲಿ ಸೂಚಿತವಾಗಿರುತ್ತದೆ.

ಆದರೆ ಈ ಶ್ಲೋಕದ ಅಭಿಪ್ರಾಯವನ್ನು ಬಹುಜನರು ತಪ್ಪಾಗಿ ತಿಳಿದುಕೊಂಡಿರುತ್ತಾರೆ. ಎಷ್ಟೋ ಸೋಮಾರಿ ಜನರು "ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ?" ಎನ್ನುತ್ತಾ ಈ ಶ್ಲೋಕಕ್ಕೆ ತೀರ ವಿಪರೀತವಾದ ಅರ್ಥದಲ್ಲಿ ತಾತ್ಪರ್ಯವನ್ನು ಕಲ್ಪಿಸಿ ಕೊಂಡಿರುತ್ತಾರೆ. ದೇವರನ್ನು ನಂಬಿಕೊಂಡಿದ್ದರೆ ಸಾಕು, ಯಾವ ಕೆಲಸವನ್ನೂ ಮಾಡಬೇಕಾದದ್ದೇ ಇಲ್ಲದೆ ನಮಗೆ ಬೇಕಾದ ವಸ್ತುಗಳು ತಮಗೆ ತಾವೇ ಹೇಗೋ ನಾವಿದ್ದಲ್ಲಿಗೆ ಬಂದು ಧುಮುಕುತ್ತವೆ; ಭಗವಂತನು ಭಕ್ತರಿಗೆ ತಾನೇ ಬೇಕಾದ ವಸ್ತುಗಳನ್ನು ಒದಗಿಸಿಕೊಡುತ್ತಾನೆ ಎಂದು ಹೇಳಿಕೊಳ್ಳುತ್ತಾ ತಮ್ಮ ಮೈಗಳ್ಳತನವನ್ನು ಮರೆಯಿಸಿಕೊಳ್ಳುವದಕ್ಕಾಗಿ ಕೈಯಲ್ಲಿ ಜಪಮಾಲಿಕೆಯ ಪ್ರದರ್ಶನವನ್ನು ಮಾಡುತ್ತಿರುವ ಅಲಸರು ಈಗಲೂ ಅಲ್ಲಲ್ಲಿ ಸಿಕ್ಕುವರು. ಇದನ್ನು ಪುಷ್ಟಿಗೊಳಿಸುವ ದಂತಕಥೆಗಳೂ

ಪ್ರಚಾರದಲ್ಲಿವೆ. ಒಮ್ಮೆ ಒಬ್ಬ ಹರಿದಾಸರು ಕೀರ್ತನೆಯ ಕಾಲಕ್ಕೆ ಒಂದು ಉಪಕಥೆಯನ್ನು ಹೇಳಿದರು. ಯಾವನೋ ಒಬ್ಬ ಆಸ್ತಿಕನು ಗೀತೆಯನ್ನು ಪಾರಾಯಣಮಾಡುತ್ತಿದ್ದನು. ಅವನು ಶ್ರದ್ಧೆಯಿಂದ ಗೀತೆಯನ್ನೇನೋ ಓದುತ್ತಿದ್ದನಾದರೂ ಅವನಿಗೆ ಒಂದು ದಿನ "ಅನನ್ಯಾಶ್ಚಿನ್ತಯನ್ತೋಮಾಮ್" ಎಂಬ ಈ ಶ್ಲೋಕದ ವಿಷಯಕ್ಕೆ ಸ್ವಲ್ಪ ಸಂಶಯ ವುಂಟಾಯಿತು. ಇದು ನಿಜವಾಗಿ ಭಗವಂತನು ಹೇಳಿದ್ದಿರಬಹುದೆ? ಭಗವಂತನು ಸತ್ಯಸ್ವರೂಪನು; ಅವನು ಸುಳ್ಳನ್ನು ಹೇಳುವ ಸಂಭವವಿಲ್ಲ. ನಾನು ಭಗವಂತನನ್ನು ಧ್ಯಾನಿಸುತ್ತಲೇ ಇರುವೆನು; ಆದರೆ ಭಗವಂತನೇಕೆ ನನ್ನ ಯೋಗಕ್ಷೇಮವನ್ನು ವಹಿಸಲಿಲ್ಲ? ನನಗೆ ಬಡತನವೇತಕ್ಕೆ ಬಂದಿದೆ?-ಎಂದು ಅವನು ಬಹುವಾಗಿ ಯೋಚಿಸಿದನು. ಕೊನೆಗೆ ಇದು ಭಗವಂತನ ವಾಕ್ಯವಲ್ಲವೆಂದು ನಿಶ್ಚಯಿಸಿ ಅದನ್ನು ಅರಿದಾಳದಿಂದ ತಿಕ್ಕಿ ಒರಸಿಹಾಕಿದನು. ಆ ದಿನವೇ ಆ ಬ್ರಾಹ್ಮಣನು ವ್ಯವಹಾರದ ನಿಮಿತ್ತವಾಗಿ ಎಲ್ಲಿಗೋ ಹೊರಗೆ ಹೋಗಿದ್ದನು. ಆಗ ಭಗವಂತನು ವೇಷಾಂತರದಿಂದ, ಒಂದು ಮೂಟೆಯಲ್ಲಿ ಮನೆಗೆ ಬೇಕಾದ ಸಾಮಾನುಗಳನ್ನೆಲ್ಲ ಹೊತ್ತುಕೊಂಡು ಬಂದು ಅದನ್ನು ಮನೆಯೊಳಗೆ ಇಟ್ಟು ಯಜಮಾನಿಗೆ "ತಾಯೀ, ಸ್ವಲ್ಪ ತಡವಾದದ್ದಕ್ಕೆ ಶಾಸ್ತ್ರಿಗಳು ನನ್ನ ನಾಲಗೆಯನ್ನು ಸೀಳಿರುತ್ತಾರೆ; ಆದರೂ ನನ್ನ ಕರ್ತವ್ಯವೆಂದು ಸಾಮಾನನ್ನೇನೋ ತಂದುಕೊಟ್ಟಿರುತ್ತೇನೆ" ಎಂದು ರಕ್ತಸುರಿಯುತ್ತಿದ್ದ ತನ್ನ ನಾಲಗೆಯನ್ನು ತೋರಿಸಿ ಹೊರಟುಹೋದನಂತೆ! ಬ್ರಾಹ್ಮಣನು ಮನೆಗೆ ಬಂದು ನಡೆದದ್ದನ್ನೆಲ್ಲ ಕೇಳಿ ಪಶ್ಚಾತ್ತಾಪದಿಂದ ಕೊರಗಿದನಂತೆ!

ಈ ಕಥೆಯಲ್ಲಿ ಭಗವಂತನು ನಮ್ಮೆಲ್ಲರನ್ನೂ ಆದರದಿಂದಲೇ ಪೋಷಿಸುತ್ತಿರುವನೆಂಬ ಅಭಿಪ್ರಾಯವು ಗರ್ಭಿತವಾಗಿರುವದು ನಿಜ. ಆದರೆ ಸೋಮಾರಿಗಳಿಗೂ ಅಲಸರಿಗೂ ಸ್ವಲ್ಪ ಅಧ್ಯಾತ್ಮಸಾಧನದ ಸೋಗನ್ನು ಹಾಕಿಕೊಂಡ ಮಾತ್ರದಿಂದ ಅವರಿಗೆ ಬೇಕಾದದ್ದನ್ನೆಲ್ಲ ದೇವರು ಸುರಿಮಳೆಗೈಯುತ್ತಾನೆಂಬ ಅಪಾಯಕರವಾದ ಅಭಿಪ್ರಾಯವನ್ನೂ ಅದರಿಂದ ತೆಗೆಯುವದಕ್ಕೆ ಬರುತ್ತದೆ. "ಅನನ್ಯಾಶ್ಚಿನ್ತಯನ್ತಃ" ಎಂಬ ಶ್ಲೋಕಕ್ಕೆ ಈ ಅರ್ಥವು ಎಳ್ಳಷ್ಟೂ ಹೊಂದುವದಿಲ್ಲವೆಂಬುದನ್ನು ನಾವೆಲ್ಲರೂ ಮೊದಲು ಮನಸ್ಸಿಗೆ ತಂದುಕೊಳ್ಳಬೇಕು. ಈ ಶ್ಲೋಕದ ನಿಜವಾದ ಅಭಿಪ್ರಾಯವೇನೆಂದರೆ ವಿವೇಕಿಗಳಾದವರು ಯಾವ ಕೆಲಸವನ್ನೂ ಪ್ರತಿಫಲದ ಆಶೆಯಿಂದ ಮಾಡುವದಿಲ್ಲ. ಅವರಿಗೆ ಭಗವಂತನೇ ಸರ್ವಸ್ವವಾಗಿರುತ್ತಾನೆ. ಜ್ಞಾನಿಗಳ ಆತ್ಮನೇ ಅವನು, ಜ್ಞಾನಿಗಳು ಅವನ ಆತ್ಮರೂಪರೇ. ಅವರು ಅನನ್ಯಭಕ್ತಿಯಿಂದ ಪರಮಾತ್ಮನನ್ನೇ ಸ್ಮರಿಸುತ್ತಾ ಪರಮಾತ್ಮನಲ್ಲಿಯೇ ನೆಲೆನಿಂತುಬಿಟ್ಟಿರುತ್ತಾರೆ. ಪರಮಾತ್ಮನು ಆಪ್ತಕಾಮನು; ಲೋಕದಲ್ಲಿ ಯಾವದೊಂದು ಕಾಮವೂ ಭಗವಂತನಿಗೆ ದೂರವಿರುವದಿಲ್ಲ. ಎಲ್ಲಾ ಕಾಮಗಳಿಗೂ ನಿಜವಾಗಿ ಆತನೇ ಆತ್ಮನು. ಭಗವಂತನಲ್ಲಿ ಒಂದಾಗಿರುವ ಭಕ್ತರಿಗೆ ಹೇಗೆತಾನೆ ಕಾಮಗಳು ಹೊರಚ್ಚಾದಾವು; ಅವರಿಗೆ ಯಾವ ಇಷ್ಟಾರ್ಥವು ತಾನೆ ನೆರವೇರದೆ ಇದ್ದೀತು.

ಭಗವಂತನ ಭಕ್ತರಾದವರು ಏನನ್ನೂ ಬಯಸುವದಿಲ್ಲ; ಅವರಿಗೆ ಇಂಥದ್ದೊಂದು ಇಲ್ಲದಿದ್ದರೆ ನಮ್ಮ ಜೀವನವು ಸುಪಥವಾಗಲಾರದು ಎಂಬ ಚಿಂತೆಯು ಎಂದಿಗೂ ಹತ್ತಿಕೊಳ್ಳುವದಿಲ್ಲ. ಅವರ ಚಿಂತೆಯೆಲ್ಲ ಪರಮಾತ್ಮನ ವಿಷಯವಾದದ್ದು. ಅವರು ಮತ್ತೆ ಏನನ್ನೂ ಚಿಂತಿಸುವ ಹಾಗೆಯೇ ಇಲ್ಲ. ನಿತ್ಯತೃಪ್ತನಾದ ಭಗವಂತನೇ ಅವರ ಹೃದಯದಲ್ಲಿ ಪ್ರತಿಷ್ಠಿತನಾಗಿರುತ್ತಾನೆ. ಅವರಿಗೆ ಯಾವದರ ಕೊರತೆ, ಅವರ ಆನಂದಕ್ಕೆ ಏನು ಕಡಿಮೆ? ಮತ್ತೆ ಏತರ ಚಿಂತೆಯೂ ಇಲ್ಲದೆ ಭಗವಂತನ ಚಿಂತೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವದೇ **ಉಪಾಸನೆ** ಎನಿಸುವದು. ಈ ಜ್ಞಾನಿಭಕ್ತರು ಎತ್ತನೋಡಿದರತ್ತ ಭಗವಂತನೇ ಅವರ ಮನಸ್ಸಿಗೆ ಕಾಣುತ್ತಿರುತ್ತಾನೆ; ಆದ್ದರಿಂದ ಅವರ ಉಪಾಸನೆಯನ್ನು "ಪರ್ಯುಪಾಸತೇ" (ಎಲ್ಲೆಲ್ಲಿಯೂ ಉಪಾಸನೆಮಾಡುತ್ತಿರುತ್ತಾರೆ) ಎಂಬ ಶಬ್ದದಿಂದ ತಿಳಿಸಿರುತ್ತದೆ. ಅವರು ಭಗವಂತನನ್ನು ಎಂದಿಗೂ ಒಂದಿಷ್ಟೂ ಅಗಲಿರಲಾರರು; ಎಂದೆಂದಿಗೂ ಭಗವಂತನಲ್ಲಿಯೇ ಸೇರಿಕೊಂಡಿರುತ್ತಾರೆ. ಆದ್ದರಿಂದ ಅವರು ನಿತ್ಯಾಭಿಯುಕ್ತರು ಎಂದು ಶ್ಲೋಕದಲ್ಲಿ ಹೇಳಿದೆ. ಹೀಗಿರುವದರಿಂದ ಭಗವಂತನಿಗೂ ಭಕ್ತರಿಗೂ ಯಾವ ಭೇದವೂ ಇರುವಂತಿಲ್ಲ. ಆದ್ದರಿಂದ ಭಗವಂತನು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ; ಅವರ ಜೀವನವು ಯಾವ ಆಯಾಸವೂ ಇಲ್ಲದೆ ಭಗವಂತನ ಅನುಗ್ರಹದಿಂದ ಸಾಗುತ್ತಿರುತ್ತದೆ ಎಂದು ಹೇಳಿರುವದು ಸ್ವಾಭಾವಿಕವಾಗಿರುತ್ತದೆ.

ಆದರೆ ಇಂಥ ಜ್ಞಾನಿಗಳು ಯಾವ ಕೆಲಸವನ್ನೂ ಮಾಡುವದಿಲ್ಲವೆಂದು ಹೇಳುವದು ಮಾತ್ರ ಶುದ್ಧ ಸುಳ್ಳು. ಯಾವನು ತನ್ನ ಸ್ವಾರ್ಥಕ್ಕೆ ಬೇಕಾಗಿರುವ ಒಂದೆರಡು ಪದಾರ್ಥಗಳಿಗಾಗಿ ಕೆಲಸಮಾಡುತ್ತಿರುವನೋ ಅವನು ಅವು ಸಿಕ್ಕಿದ ಕೂಡಲೆ ಕೆಲಸವನ್ನು ನಿಲ್ಲಿಸಿಬಿಡುತ್ತಾನೆ. ಅವನ ಕಣ್ಣೆಲ್ಲ ವಸ್ತುಗಳ ಮೇಲೆಯೇ ಇರುತ್ತದೆ. ನನಗೆ ಹಣ ಬೇಕು, ಮನೆ ಬೇಕು, ಹೊಲಗದ್ದೆಗಳು ಬೇಕು, ಮಕ್ಕಳು ಬೇಕು, ವಾಹನಗಳು ಬೇಕು, ಆರೋಗ್ಯವು ಬೇಕು, ಬಲವು ಬೇಕು, ದೇಶಸಂಚಾರದ ಸುಖವು ಬೇಕು, ತಿಳಿವಳಿಕೆ ಬೇಕು, ಅಧಿಕಾರವು ಬೇಕು, ಕೀರ್ತಿಯು ಬೇಕು–ಎಂದು ಮುಂತಾದ ಕೆಲವು "ಬೇಕು"ಗಳಿಂದ ಪ್ರೇರಿತನಾದವನು ಆ ಬೇಕುಗಳು ಇರುವವರೆಗೆ ತಾನೆ ಕೆಲಸಮಾಡುತ್ತಾನೆ? ಮೋಟಾರುಗಾಡಿಗೆ ಪೆಟ್ರೋಲ್ ಇರುವವರೆಗೇ ಅಲ್ಲವೆ ಚಲನ, ಕೂಗು? ಆದರೆ ಯಾರಿಗೆ ನಿತ್ಯತೃಪ್ತನಾದ ಪರಮೇಶ್ವರನೇ ಆತ್ಮನಾಗಿರುವನೋ ಅವರಿಗೆ ಬೇಕುಗಳ ಕಾಟವಿಲ್ಲ. ಅವರಿಗೆ ಭಗವಂತನ ಪ್ರೇಮವೇ ಕೆಲಸದಲ್ಲಿ ತೊಡಗುವುದಕ್ಕೆ ಕಾರಣವಾಗಿರುತ್ತದೆ. ಭಗವಂತನು ನಿತ್ಯನು, ಭಗವಂತನಲ್ಲಿರುವ ಪ್ರೇಮವೂ ನಿತ್ಯವು; ಅವರ ಚಟುವಟಿಕೆಯು ಏತಕ್ಕೆ ನಿಲ್ಲಬೇಕು? ನಿತ್ಯವಾದ ಬುಗ್ಗೆಯಿಂದ ಚಿಮ್ಮಿ ಹರಿಯುತ್ತಿರುವ ಅಮೃತಝರಿಯಂತೆ ಅವರ ಕರ್ಮಪ್ರವಾಹವು ಯಾವ ತಡೆಯಾಗಲಿ ವಿಚ್ಛಿತ್ತಿಯಾಗಲಿ ಇಲ್ಲದೆ ಒಂದೇ ಸಮಗೆ ಹರಿಯುತ್ತಲೇ ಇರುತ್ತದೆ.

ಭಗವಂತನು ಏನು ಹೇಳುತ್ತಾನೆಂದರೆ, "ನನಗೆ ಮೂರು ಲೋಕಗಳಲ್ಲಿಯೂ ಹೊಸದಾಗಿ ಪಡೆದುಕೊಳ್ಳಬೇಕಾದದ್ದು ಏನೂ ಇಲ್ಲ, ಆದರೂ ನಾನು ಎಂದಿಗೂ ಕರ್ಮವನ್ನು ಮಾಡುತ್ತಲೇ ಇರುವೆನು." ಭಗವದ್ಭಕ್ತರೂ ಹಾಗೆಯೇ ಅವರ ವಿಶ್ವಪ್ರೇಮವು ಅವರನ್ನು ಎಂದೆಂದಿಗೂ ಕರ್ಮದಲ್ಲಿ ತೊಡಗಿಸಿರುತ್ತದೆ.

ಅನನ್ಯಚಿಂತನೆಯಿಂದ ಪರಮಾತ್ಮನನ್ನು ಚಿಂತಿಸುತ್ತಿರುವದೇ ಜೀವನದ ಎಲ್ಲಾ ಸಂಕಷ್ಟಗಳ ಪರಿಹಾರಕ್ಕೂ ಉಪಾಯವು, ಎಲ್ಲಾ ಪುರುಷಾರ್ಥಗಳಿಗೂ ಉಪಾಯವು-ಎಂಬುದನ್ನು ತಿಳಿದುಕೊಳ್ಳುವದು ನಮ್ಮಲ್ಲನೇಕರಿಗೆ ಕಷ್ಟವಾಗಿರುತ್ತದೆ. ನಮಗೆ ಯೋಗಕ್ಷೇಮವೇ ಮುಖ್ಯವಾಗಿರುತ್ತದೆ. ಈಗ ಬೇಕಾಗಿರುವದನ್ನೆಲ್ಲ ಪಡೆದುಕೊಳ್ಳುವ "ಯೋಗ", ಈಗ ಪಡೆದುಕೊಂಡಿರುವದನ್ನು ಕಾಪಾಡಿಕೊಳ್ಳುವ "ಕ್ಷೇಮ"-ಇವೇ ನಮ್ಮಗಳ ಮನಸ್ಸಿನಲ್ಲಿ ಸಾಮಾನ್ಯವಾಗಿ ಹತ್ತಿಕೊಂಡಿರುವ ಚಿಂತೆಗಳು. ಇಷ್ಟೊಂದು ಯೋಗಕ್ಷೇಮದ ಚಿಂತೆಯನ್ನು ಹತ್ತಿಸಿಕೊಂಡಿರುವದೇ ನಮ್ಮ ಅನರ್ಥಗಳಿಗೆ ಕಾರಣವೆಂಬುದೂ ನಮಗೆ ತಿಳಿಯದೆ ಇದೆ. ಪ್ರಕೃತಿಯಲ್ಲಿಯೂ ನಮ್ಮ ಮನಸ್ಸಿನಲ್ಲಿಯೂ ಒಂದು ನಿಯಮವಿರುತ್ತದೆ:

**"ಸೈಯೆನುತಡಿಯಿಡೆ ಮಾಯವಾಗುವವು । ಹೇಯ ವಿಷಯವಿವು ಮಾನವ।**
**ಛೀಯೆನ್ನುತ ಹಿಂದಿರುಗಲು ಬೆನ್ನೊಳೆ । ನಾಯಂತೆ ಬಹವು ಮಾನವ ॥**

-ಅಧ್ಯಾತ್ಮ ಗೀತಾವಳಿ

ನಮಗೆ ವಿಷಯಗಳ ಯೋಗಕ್ಷೇಮದ ಚಿಂತೆಯು ಹತ್ತಿಕೊಂಡಷ್ಟೂ ಅವು ನಮ್ಮನ್ನು ಬಿಟ್ಟು ದೂರದೂರಕ್ಕೆ ಸರಿಯುತ್ತಿರುವವು. ಅವುಗಳನ್ನು ಲೆಕ್ಕಕ್ಕೆ ತಾರದೆ ಅಸಡ್ಡೆಮಾಡಿ ಪರಮಾರ್ಥಚಿಂತನೆಯಲ್ಲಿ ನಿಷ್ಠರಾದೆವೆಂದರೆ ಅವು ನಮ್ಮನ್ನೇ ಬೆಂಬಿಡಿದು ಓಡಿಕೊಂಡು ಬರುವವು. "ಹಾಗಾದೆ, ನಾವೂ ಅನನ್ಯಚಿಂತನೆಗೆ ಮನಸ್ಸು ಮಾಡೋಣ" ಎಂದು ಯಾರಾದರೂ ಬಗೆಯಬಹುದು. ಆದರೆ "ಹಾಗಾದರೆ"-ನಮ್ಮ ಯೋಗಕ್ಷೇಮಗಳನ್ನು ಭಗವಂತನು ನೋಡಿಕೊಳ್ಳುವದು ನಿಜವಾದರೆ-ನಾವು ಆತನನ್ನೇ ಚಿಂತಿಸುವೆವು ಎಂಬುದು ಅನನ್ಯಚಿಂತನೆಯೇ ಆಗುವದಿಲ್ಲ, ಅದು ವಿಷಯಗಳ ಚಿಂತೆಯೇ ಆಗಿರುತ್ತದೆ!

"ಪರಮೇಶ್ವರನು ಎಲ್ಲರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿರುವನೆಂಬುದು ಸುಳ್ಳೆ?" ಎಂದು ನೀವು ಕೇಳಬಹುದು. ಅದು ಸುಳ್ಳಲ್ಲ. ಅದೊಂದು ಪ್ರತಿಷೇಧರಹಿತವಾದ ತತ್ತ್ವವು. ಅವಶ್ಯವಾಗಿ ಪರಮೇಶ್ವರನೇ ಎಲ್ಲರ ಯೋಗಕ್ಷೇಮವನ್ನೂ ವಹಿಸಿರುತ್ತಾನೆ. ಆದರೆ ನಮಗೆ ಅದು ಇನ್ನೂ ತಿಳಿದಿಲ್ಲ. ಶ್ರೀ ಶಂಕರಾಚಾರ್ಯರು ಪ್ರಕೃತಶ್ಲೋಕದ ಅಭಿಪ್ರಾಯವನ್ನು ವಿವರಿಸುವಾಗ ಹೇಳಿರುವದೇನೆಂದರೆ: "ಭಗವಂತನು ತನ್ನ ಎಲ್ಲಾ ಭಕ್ತರ ಯೋಗಕ್ಷೇಮವನ್ನೂ ವಹಿಸಿರುತ್ತಾನೆಂಬುದು ಸತ್ಯವೇ. ಆದರೆ ಅವರು ತಾವೂ

ತಮ್ಮ ಯೋಗಕ್ಷೇಮಗಳನ್ನು ವಹಿಸಿ ಅದಕ್ಕಾಗಿ ಕೆಲಸಮಾಡುತ್ತಿರುತ್ತಾರೆ. ಅನನ್ಯ ಭಕ್ತರೋ ಎಂದರೆ ತಮ್ಮ ಯೋಗಕ್ಷೇಮಕ್ಕಾಗಿ ಕೆಲಸಮಾಡುವದಿಲ್ಲ; ಅವರು ಬದುಕಿರುವದಕ್ಕೆ ಅಥವಾ ಸಾಯುವದಕ್ಕೆ ಕೂಡ ಇಚ್ಛಿಸುವದಿಲ್ಲ. ಕೇವಲ ಭಗವಚ್ಛರಣರೇ ಆಗಿರುತ್ತಾರೆ. ಆದ್ದರಿಂದ ಭಗವಂತನೇ ಅವರ ಯೋಗಕ್ಷೇಮವನ್ನು ವಹಿಸುತ್ತಾನೆ."

ಸಿದ್ಧರಾದ ಜ್ಞಾನಿಭಕ್ತರ ಈ ಮೇಲುಪಙ್ಕ್ತಿಯನ್ನು ಸಾಧಕರೂ ಅನುಸರಿಸುವದಕ್ಕೆ ಪ್ರಯತ್ನವನ್ನು ಮಾಡುತ್ತಿರಬೇಕು. ನಮ್ಮನಮ್ಮ ಯೋಗಕ್ಷೇಮಕ್ಕಾಗಿ ನಾವು ಎಷ್ಟು ಹೊಡೆದಾಡುತ್ತೇವೋ ಅಷ್ಟುಮಟ್ಟಿಗೆ ನಾವು ಜೀವನದಲ್ಲಿ ಸುಖಿಗಳಾಗುತ್ತೇವೆ ಎಂಬ ಕುಕಲ್ಪನೆಯನ್ನು ನಾವು ಮೊದಲು ಬಿಟ್ಟುಬಿಡಬೇಕು. ನಾವು ಎಷ್ಟರಮಟ್ಟಿಗೆ ನಮ್ಮನಮ್ಮೊಳಗೇ ಇರುವ ಪರಮಾತ್ಮನನ್ನು ಕಂಡುಕೊಳ್ಳುತ್ತೇವೋ ಅಷ್ಟರಮಟ್ಟಿಗೆ ನಮ್ಮ ಜೀವನದ ಕಷ್ಟಗಳು ಕಣ್ಮರೆಯಾಗುತ್ತವೆ, ನಮ್ಮ ಜೀವನವ್ಯವಹಾರವು ಸುಪಥವಾಗುತ್ತದೆ ಎಂಬುದನ್ನು ನಂಬಬೇಕು. ಪರಮೇಶ್ವರನೇ ನಮ್ಮ ಸರ್ವ ಪ್ರಯತ್ನಗಳ ಗುರಿಯಾಗಬೇಕು. ನಾವು ಮಾಡುವ ಕೆಲಸಗಳು ಆತನ ಸೇವೆಯಾಗಬೇಕು. ನಮ್ಮಲ್ಲಿಯೂ ನಮ್ಮ ಸುತ್ತುಮುತ್ತಲೂ ಇರುವವರಲ್ಲಿಯೂ ಆ ಭಗವಂತನು ಅಂತರ್ಯಾಮಿಯಾಗಿರುತ್ತಾನೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ನಾವು ಮಾಡುವ ಕರ್ಮಗಳೆಲ್ಲ ಸರ್ವರಲ್ಲಿರುವ ಆ ಭಗವಂತನ ಸೇವೆಯಾಗಬೇಕು. ಎಲ್ಲರನ್ನೂ ಪ್ರೇಮದಿಂದ ಕಾಣುವ, ಎಲ್ಲರಲ್ಲಿಯೂ ಇರುವ, ಭಗವಂತನನನ್ನು ಸೇವಿಸುವ ಭಾವದಿಂದ ನಾವು ನಮ್ಮ ವ್ಯವಹಾರವನ್ನು ಸಾಗಿಸಬೇಕು. ಈ ನಿಷ್ಕಾಮಕರ್ಮಯೋಗದಿಂದ ನಮ್ಮ ಚಿತ್ತವು ಶುದ್ಧವಾಗುವದು. ನಮ್ಮೊಳಗೇ ಇರುವ ಪರಮಾತ್ಮನನ್ನು ಸತತವಾಗಿ ಚಿಂತಿಸುವ ಧ್ಯಾನಯೋಗಕ್ಕೆ ತಕ್ಕ ಯೋಗ್ಯತೆಯು ಬರುವದು.

ನಮ್ಮನಮ್ಮೊಳಗೇ ಇರುವ ಪರಮಾರ್ಥವನ್ನು ಕಂಡುಕೊಳ್ಳುವ ಭಗವದುಪಾಸನೆಯು ಸ್ವಾರ್ಥತೆಯಿಂದ ಕೂಡಿರುತ್ತದೆ ಎಂದು ಬಗೆಯಬಾರದು. ನಮ್ಮ ಮೋಕ್ಷವನ್ನು ನಾವು ಪಡೆದುಕೊಂಡರೆ ಸಾಕೆ? ಅದು ಕೇವಲ ಸ್ವಾರ್ಥತೆಯಲ್ಲವೆ?–ಎಂದು ಕೇಳುವವರು ಕೆಲವರು ಇದಾರೆ. ಆದರೆ ಮೋಕ್ಷವೆಂದರೇನು? ಎಂಬುದು ಅವರಿಗೆ ತಿಳಿಯದ್ದರಿಂದ ಈ ಪ್ರಶ್ನೆಯನ್ನು ಅವರು ಹಾಕುತ್ತಿರುತ್ತಾರೆ. ಮೋಕ್ಷವೆಂದರೆ ವ್ಯಕ್ತಿಸ್ವಾರ್ಥದಿಂದ ಬಿಡುಗಡೆ, ರಾಗದ್ವೇಷಗಳಿಂದ ಬಿಡುಗಡೆ, ಅಜ್ಞಾನದಿಂದ ಬಿಡುಗಡೆ, ಆಲಸ್ಯದಿಂದ ಬಿಡುಗಡೆ. ಪರಮಾರ್ಥವು ನಮ್ಮೊಳಗೆ ಇದೆ ಎಂದರೆ ಹೇಗೆ? ಆಕಾಶವು ನಮ್ಮ ಕೋಣೆ ಯೊಳಗಿರುವಂತೆ. ನಮಗೆ ಉಪಯೋಗಕ್ಕೆ ಬರುವದು ನಮ್ಮ ಮನೆಯೊಳಗಿನ ಬಯಲು. ಆದರೆ ಬಯಲು ತುಂಡಾಗಿರುವದೇನು? ಇಲ್ಲ. ಅದು ಮನೆಯ ಒಳಗೂ ಹೊರಗೂ ಅಖಂಡವಾಗಿರುತ್ತದೆ. ಇದರಂತೆ ನಮ್ಮೊಳಗೆ ಪರಮಾರ್ಥವನ್ನು, ಪರಮಾತ್ಮನನ್ನು, ಅನನ್ಯಚಿಂತನೆಯಿಂದ ಕಂಡುಕೊಳ್ಳುವದರಿಂದ ನಮ್ಮ ಹೊರಗೂ ಎಲ್ಲದರಲ್ಲಿಯೂ

ಇರುವ ಪರಮಾರ್ಥವನ್ನೇ ನಾವು ಕಂಡುಕೊಳ್ಳುತ್ತೇವೆ. ಸರ್ವರ ಪ್ರೇಮವನ್ನೇ, ಸರ್ವರ ಹಿತಚಿಂತನೆಯನ್ನೇ, ನಮ್ಮ ಜೀವನದ ಸ್ವಾಭಾವಿಕನಿಯಮವಾಗಿ ಮಾಡಿಕೊಳ್ಳುತ್ತೇವೆ! ಪರಮಾರ್ಥವನ್ನು ಕಂಡುಹಿಡಿಯುವದಕ್ಕೆ ಪ್ರಯತ್ನ ಮಾಡುವದೆಂದರೇನು? ಅನನ್ಯ ಪ್ರೇಮದಿಂದ ಭಗವಂತನನ್ನೇ ಚಿಂತಿಸುವದೆಂದರೇನು? ಈಗಿನ ನಮ್ಮ ಮನಸ್ಸು ನಮಗೆ ಹಾಕಿರುವ ಬೇಲಿಯ ಪರಿಚ್ಛೇದವನ್ನು ಮೀರುವದಕ್ಕೆ ಪ್ರಯತ್ನಿಸುವದು. ನಮ್ಮನ್ನೂ ನಿಮ್ಮನ್ನೂ ಎಲ್ಲರನ್ನೂ ಕೂಡಿಸುವ, ಎಲ್ಲರಿಗೂ ಆಧಾರವಾಗಿರುವ, ಎಲ್ಲರ ಉಸಿರಿಗೂ ಉಸಿರಾಗಿ, ಎಲ್ಲರ ನೋಟಕ್ಕೂ ನೋಟವಾಗಿ, ಎಲ್ಲರ ಮನಸ್ಸಿಗೂ ಮನಸ್ಸಾಗಿ, ಎಲ್ಲರ ಆತ್ಮನ ತಿರುಳಾಗಿರುವ ಪರಾರ್ಥದೊಡನೆ ಒಂದಾಗುವದಕ್ಕೆ ಪ್ರಯತ್ನಿಸುವದು. ಇದು ಸ್ವಾರ್ಥವಲ್ಲ, ಪರಾರ್ಥವೂ ಅಲ್ಲ, ಪರಮಾರ್ಥ.

ಪರಮಾರ್ಥವಿಚಾರದಲ್ಲಿ ಇದು ಸರಿಯೇ. ಆದರೆ ಮತ್ತೊಬ್ಬರಿಂದಲೇ ಆಗಬೇಕಾಗಿರುವ ಸಹಾಯವನ್ನು ನಾವು ತಿರಸ್ಕರಿಸುವದಕ್ಕಾದೀತೆ? ನಮ್ಮ ನಮ್ಮ ಪ್ರಯತ್ನವನ್ನು ಮಾಡದೆ ಬಿಡುವದಕ್ಕಾದರೂ ಆದೀತೆ? ಈಗಿನ ಕಾಲದಲ್ಲಿ ಜೀವನದ ಸಂಕಷ್ಟಗಳು ಹೆಚ್ಚಾಗುತ್ತಿವೆ. ಜನರು ತಮ್ಮ ಬಾಳು ಬದುಕನ್ನು ನೋಡಿಕೊಳ್ಳುವದೇ ಕಡುಕಷ್ಟವಾಗಿರುತ್ತದೆ! ಅನ್ನ, ಬಟ್ಟೆ, ಮನೆ-ಮುಂತಾದ ನಿತ್ಯದ ಆವಶ್ಯಕತೆಗಳು ಸಿಕ್ಕುವದು ದುರ್ಲಭವಾಗಿರುತ್ತದೆ. ಎಲ್ಲಿಯೋ ಕೆಲವರಿಗೆ ಮಾತ್ರ ಸ್ವಲ್ಪ ಉತ್ತಮಸ್ಥಿತಿಯಲ್ಲಿರುವವರ ವಾಕ್ಸಹಾಯ, ಧನಸಹಾಯ-ಮುಂತಾದ ಉಪಕಾರಗಳಿಂದ ಸ್ವಲ್ಪಮಟ್ಟಿಗೆ ಸಮಾಧಾನವು ದೊರೆಯುತ್ತದೆ. ಮಿಕ್ಕವರೆಲ್ಲರೂ ಶರೀರದಲ್ಲಾಗಲಿ ಮನಸ್ಸಿನಲ್ಲಾಗಲಿ ಸ್ವಾಸ್ಥ್ಯವಿಲ್ಲದೆ ಜೀವನದ ಹೋರಾಟಕ್ಕೆ ಸೊಂಟಕಟ್ಟಿ ಎದೆಯನ್ನೂ ಕಳೆದುಕೊಂಡಿರುತ್ತಾರಲ್ಲ! ಹೀಗಿರುವಲ್ಲಿ ನಾವು ಮಾಡುತ್ತಿರುವ ಅಲ್ಪಸ್ವಲ್ಪ ಪ್ರಯತ್ನವನ್ನೂ ಬಿಟ್ಟು "ಅನನ್ಯಚಿಂತನೆಗೆ" ಹೊರಟರೆ ಸಾಕಾದೀತೆ?- ಎಂಬುದು ಕೆಲವರ ಪ್ರಶ್ನೆ.

ಪಾಪ! ಅವರು ದಿನದಿನವೂ ಹೆಣಗಾಡಿ ತಾವು ಮಾಡಿದ ಪ್ರಯತ್ನಕ್ಕೆ ಪ್ರತಿಫಲವಿಲ್ಲದೆ ಬರಿಗೈಯಿಂದ ಮನೆಗೆ ಬಂದು ಉಸ್ಸೆಂದು ಕುಳಿತುಕೊಂಡಿರುವಾಗ ಇಂಥ ಯೋಚನೆಯು ಅವರ ಮನಸ್ಸಿನಲ್ಲಿ ಹತ್ತಿಕೊಳ್ಳುವದೇನೂ ಆಶ್ಚರ್ಯವಲ್ಲ. ಆದರೆ ಇದುವರೆಗೆ ನಾವು ಬರೆದಿರುವ ವಿಷಯಗಳನ್ನು ಮನಸ್ಸಿನಲ್ಲಿ ಹೊರಳಾಡಿಸಿರುವವರಿಗೆ ಅವರ ಪ್ರಶ್ನೆಗೆ ಉತ್ತರವೂ ಹೊಳೆದಿರಬೇಕೆಂದು ನನ್ನ ನಂಬಿಕೆ. ಮನುಷ್ಯನು ತನ್ನ ಪ್ರಯತ್ನದಿಂದ ಹೊರಗಿನ ವಿಷಯಗಳು ದೊರೆಯುವವೆಂಬ ನಂಬಿಕೆಯಿಂದ ಒದ್ದಾಡುತ್ತಿರುತ್ತಾನೆ. ಆ ಜೀವನದ ಸಾಮಗ್ರಿಗಳು ಮತ್ತೊಬ್ಬರ ಸಾಹ್ಯದಿಂದ ತನಗೆ ಸಿಕ್ಕಬೇಕೆಂದೂ ನಂಬಿರುತ್ತಾನೆ. ತಾನು ಎಷ್ಟರಮಟ್ಟಿಗೆ ಪ್ರಯತ್ನಮಾಡುತ್ತಾನೋ ಅಷ್ಟು ಪ್ರಮಾಣದಿಂದ ಅವು ಸಿಕ್ಕುವವೆಂದೂ ನಂಬಿರುತ್ತಾನೆ. ಆದರೆ ಇದೆಲ್ಲ ತಪ್ಪು ತಿಳಿವಳಿಕೆ. ನಮ್ಮ ಯೋಗಕ್ಷೇಮವನ್ನು ನಿಜವಾಗಿ

ನೋಡುತ್ತಿರುವವನು ಭಗವಂತನೇ. ನಾವು ಕೆಲಸಮಾಡಬಾರದೆಂದಲ್ಲ, ನಾವು ಮತ್ತೊಬ್ಬರ ಸಹಾಯವನ್ನು ಕೋರಬಾರದೆಂದೂ ಅಲ್ಲ, ನಾನು ಹೇಳುತ್ತಿರುವದು. ಆದರೆ ನಮ್ಮ ಪ್ರಯತ್ನಗಳು ಸಫಲವಾಗುವದೂ ನಮಗೆ ಯಾವದಾದರೊಂದು ರೀತಿಯಿಂದ ಹೊರಗಿನ ಸಹಾಯವು ದೊರೆಯುವದೂ ಅದರಿಂದ ನಮಗೆ ಪ್ರಯೋಜನವಾಗುವದೂ ಒಂದಾನೊಂದು ನಿಯಮಕ್ಕೆ ಒಳಪಟ್ಟಿದೆ. ನಮ್ಮನಮ್ಮಲ್ಲಿಯೇ ಒಂದಾನೊಂದು ಅದ್ಭುತಶಕ್ತಿಯಿದೆ. ಅದಕ್ಕೆ ಭಗವಂತನು, ಪರಮಾತ್ಮನು–ಎಂದು ಹೆಸರು. ನಾವು ನಮ್ಮ ಯೋಗಕ್ಷೇಮದ ಚಿಂತನೆಯನ್ನು ಎಷ್ಟು ಕಡಿಮೆಮಾಡಿ ಈ ಶಕ್ತಿಯನ್ನೇ ಎಷ್ಟುಮಟ್ಟಿಗೆ ಅವಲಂಬಿಸುವದನ್ನು ಕಲಿಯುವೆವೋ ಅಷ್ಟರ ಮಟ್ಟಿಗೆ ನಮಗೆ ಜೀವನದಲ್ಲಿ ನಿರಾಯಾಸವಾದ ಜೀವನವೂ ಸುಖಶಾಂತಿಗಳೂ ದೊರೆಯುವವು. ಇದನ್ನೇ ನಾವು ಈ ಲೇಖನದಲ್ಲಿ ಅನನ್ಯಪ್ರೇಮದ ಉಪಾಸನೆಯೆಂದು ಕರೆದಿರುವದು.

## 3.2. ಶ್ರದ್ಧಾ ಭಕ್ತಿಯ ಪಾರಾಯಣ

**ಅಧ್ಯೇಷ್ಯತೇ ಚ ಯ ಇಮಂ । ಧರ್ಮ್ಯಂ ಸಂವಾದಮಾವಯೋಃ । ಜ್ಞಾನ ಯಜ್ಞೇನ ತೇನಾಮಿಷ್ಟಃ ಸ್ಯಾಮಿತಿ ಮೇ ಮತಿಃ (70), ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ । ಸೋಽಪಿ ಮುಕ್ತಃ ಶುಭಾನ್ ಲೋಕಾನ್ ಪ್ರಾಪ್ನುಯಾತ್ ಪುಣ್ಯಕರ್ಮಣಾಮ್ ॥71॥**

ನಮ್ಮೀ ಧರ್ಮ್ಯವಾದ ಸಂವಾದವನ್ನು ಯಾವನು ಅಧ್ಯಯನಮಾಡುತ್ತಾನೋ ಅವನು ನನ್ನನ್ನು ಜ್ಞಾನಯಜ್ಞದಿಂದ ಪೂಜಿಸಿದವನಾಗುವನು. ಶ್ರದ್ಧೆಯುಳ್ಳವನಾಗಿ ಅಸೂಯೆಯಿಲ್ಲದೆ ಯಾವನು ಶ್ರವಣಮಾಡುತ್ತಾನೋ ಅವನೂ ಮುಕ್ತನಾಗಿ ಉತ್ತಮಲೋಕಗಳನ್ನು ಪಡೆದುಕೊಳ್ಳುವನು. –ಭಗವದ್ಗೀತೆ 18–70, 71

ಭಗವದ್ಗೀತಾಶಾಸ್ತ್ರವನ್ನು ಅಧ್ಯಯನಮಾಡಿದವರಿಗೂ ಶ್ರವಣಮಾಡಿದವರಿಗೂ ಆಗುವ ಫಲವನ್ನು ಮೇಲೆ ಬರೆದಿರುವ ವಾಕ್ಯಗಳಲ್ಲಿ ತಿಳಿಸಿದೆ. ಗೀತೆಯನ್ನು ಓದಿದಮಾತ್ರದಿಂದ ಅಷ್ಟು ಪುಣ್ಯವು ಹೇಗೆ ಬರುವದು? ಅದನ್ನು ಕೇಳಿದಮಾತ್ರದಿಂದ ಆ ಪುಣ್ಯವು ಬರುವದೆಂದು ನಂಬುವದಕ್ಕೆ ಆದೀತೆ?–ಎಂದು ಕೆಲವರು ಶಂಕಿಸುವದುಂಟು. ಇದನ್ನು ಅವಶ್ಯವಾಗಿ ಓದಬೇಕು, ಇದನ್ನು ಅವಶ್ಯವಾಗಿ ಕೇಳಬೇಕು–ಎಂದು ಒತ್ತಿ ಹೇಳುವದಕ್ಕಾಗಿ ವ್ಯಾಸರು ಹೀಗೆಂದು ಬರೆದಿದ್ದಾರೆ–ಎಂದು ಮತ್ತೆ ಕೆಲವರು ಸಮಾಧಾನವನ್ನು ಮಾಡುವದೂ ಉಂಟು. ಈ ಶಂಕಾಸಮಾಧಾನಗಳು ಗೀತೆಯ ಮಹಿಮೆಯನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳದ್ದರಿಂದ ಉಂಟಾದವುಗಳು ಎಂಬುದು ನನ್ನ ಮತವು.

ಭಗವದ್ಗೀತೆಯು ಶ್ರದ್ಧೆಯಿಂದ ಪಾರಾಯಣಮಾಡಬೇಕಾದ ಗ್ರಂಥಗಳಲ್ಲಿ ಒಂದು. ಈ ಬಗೆಯ ಗ್ರಂಥಗಳಲ್ಲಿ ಪರಮಾತ್ಮಭಾವನೆಯಿಂದ ತುಂಬಿ ತುಳುಕುವ ಸ್ಥಿತಿಯಲ್ಲಿ ಲೇಖಕರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಅಥವಾ ಅವರು "ತಮ್ಮ" ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆಂಬುದಕ್ಕಿಂತಲೂ ಪರಮೇಶ್ವರನೇ ಅವರ ಹೃದಯದಲ್ಲಿ ಕುಳಿತು ಅವರ ಬುದ್ಧಿಗೆ ಪ್ರೇರಣೆಯನ್ನುಂಟುಮಾಡಿ ಅವರ ಲೇಖನಿಯ ಮೂಲಕ ಈ ತನ್ನ ಅಭಿಪ್ರಾಯಗಳನ್ನು ಹೊರಗೆಡಹಿರುತ್ತಾನೆ ಎಂದರೆ ಹೆಚ್ಚು ಸಮಂಜಸವಾಗುವದು. ಏಕೆಂದರೆ ಈ ಗ್ರಂಥಗಳಲ್ಲಿರುವ ವಾಕ್ಯಗಳಲ್ಲಿ ಒಂದು ಸಲ ವಿನೋದಕ್ಕಾಗಿ ಓದಿ ಕೇಳಿ ಮರೆಯುವ ವಿಷಯಗಳಿರುವದಿಲ್ಲ. ಏಕಾಗ್ರತೆಯಿಂದ ಅಧ್ಯಯನ ಮಾಡಿ ಶ್ರವಣಮಾಡಿದವರ ಮನಸ್ಸಿನ ಮಟ್ಟಕ್ಕೆ ಅನುಗುಣವಾಗಿ ಹೆಚ್ಚು ಹೆಚ್ಚು ಸ್ಫೂರ್ತಿಯನ್ನು ಕೊಡುವ ಅಭಿಪ್ರಾಯಗಳೇ ಹೇರಳವಾಗಿರುತ್ತವೆ.

ಇಂಥ ಗ್ರಂಥಗಳನ್ನು ಹೇಗೆ ಓದಬೇಕು? ಅವುಗಳನ್ನು ಹೇಗೆ ಉಪಯೋಗಿಸಿಕೊಂಡರೆ, ನಮಗೆ ಅವುಗಳಿಂದಾಗಬೇಕಾದ ಪೂರ್ಣಪ್ರಯೋಜನವಾಗುತ್ತದೆ? ಇದೊಂದು ಮುಖ್ಯವಾದ ಪ್ರಶ್ನೆ. ಏಕೆಂದರೆ ಗ್ರಂಥವನ್ನು ಪುಸ್ತಕರೂಪದಿಂದ ಕೊಂಡುಕೊಂಡ ಮಾತ್ರದಿಂದ ಅದು ನಮ್ಮದಾಗುವದಿಲ್ಲ, ಅದನ್ನು ಮನಮುಟ್ಟಿ ಓದಿ ಅದರ ಸಾರವನ್ನು ಗ್ರಹಿಸಿ ನಮ್ಮದಾಗಿ ಮಾಡಿಕೊಂಡಾಗಲೇ ಗ್ರಂಥವು ನಮ್ಮದಾಗುವದು. ಈ ಗ್ರಂಥಗಳನ್ನು-ಅದರಲ್ಲಿಯೂ ಭಗವದ್ಗೀತೆಯನ್ನು-ಓದುವವರ ಸಂಖ್ಯೆಯೇನೂ ಸಣ್ಣದಲ್ಲ. ಭಗವದ್ಗೀತೆಯನ್ನು ಓದುವವರ ಸಂಖ್ಯೆ ಈಗ ಬಹಳ ಹೆಚ್ಚಾಗಿದೆ. ಅಚ್ಚಿನಲ್ಲಿ ಬರುವ ಭಗವದ್ಗೀತೆಗಳ ಸಂಖ್ಯೆಯೂ ಹೆಚ್ಚಾಗಿದೆ. ಆದಷ್ಟು ಕಡಿಮೆಯ ಬೆಲೆಗೆ ಪುಸ್ತಕವನ್ನು ಮಾಡುವವರೂ ಹೆಚ್ಚಿನ ಸಂಖ್ಯೆಯಲ್ಲಿ ಇದಾರೆ; ಅದರ ಅರ್ಥವನ್ನು ದೇಶಭಾಷೆಗಳಲ್ಲಿ ಬರೆಯಿಸಿ ಪ್ರಕಟಿಸುವವರೂ ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತಾರೆ. ಈ ದೃಷ್ಟಿಯಿಂದ ಗೀತೆಯನ್ನು ಓದುವವರ ಸಂಖ್ಯೆಯೂ ದಿನದಿನಕ್ಕೂ ಹೆಚ್ಚುತಲೇ ಇರುತ್ತದೆ ಎಂದು ಹೇಳಬಹುದು. ಆದರೆ ಗೀತೆಯನ್ನು ಓದುವವರು ಎಲ್ಲರೂ ಒಂದೇ ದೃಷ್ಟಿಯಿಂದ ಓದುತ್ತಿಲ್ಲ. ಅದನ್ನು ಹೇಗೆ ಓದುವದರಿಂದ ಅದನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸಿಕೊಂಡಂತಾಗುವದು?- ಎಂಬುದೇ ಈಗ ನಾವು ವಿಚಾರಿಸುತ್ತಿರುವದು.

ಕೆಲವರು ಗೀತೆಯ ಪ್ರತಿಪದಾರ್ಥ, ತಾತ್ಪರ್ಯ-ಮುಂತಾದವುಗಳನ್ನು ತಿಳಿದುಕೊಂಡು ಅದನ್ನು ಒಂದು ಕಾವ್ಯವೆಂಬಂತೆ ಪಠಿಸುತ್ತಾರೆ. ಸಾಹಿತ್ಯದೃಷ್ಟಿಯಿಂದ ಓದಿ ಗುಣ, ದೋಷ, ಅಲಂಕಾರ, ಧ್ವನಿ- ಮುಂತಾದವುಗಳನ್ನು ಗೊತ್ತುಮಾಡಿಕೊಳ್ಳುವದಕ್ಕೆ ಹವಣಿಸುವವರಿಗೆ ಅದರ ನಿಜವಾದ ಪ್ರಯೋಜನವು ದೊರಕಲಾರದು; ಗೀತೆಯು ಸಂಸ್ಕೃತಭಾಷೆಯನ್ನು ಕಲಿಯುವವರಿಗೆ ಸಾಧನವಾಗಿರಲೆಂದೇನೂ ವ್ಯಾಸರು ಅದನ್ನು

ಬರೆದಿಲ್ಲ. ಅದಕ್ಕಾಗಿ ಬರೆದಿರುವ ಕಾವ್ಯಚಂಪೂನಾಟಕಾದಿಯಾಗಿ ಲೆಕ್ಕವಿಲ್ಲದಷ್ಟು ಗ್ರಂಥಗಳಿವೆ. ಗೀತೆಯ ಗುರಿಯು ಅದಲ್ಲ.

ಇನ್ನು ಕೆಲವರು ಗೀತೆಯಲ್ಲಿ ಈಗ ಎಷ್ಟು ಶ್ಲೋಕಗಳಿವೆ? ಮೊದಲು ಇದನ್ನು ಯಾರು ಯಾವಾಗ ಬರೆದರು? ಭಾರತದಲ್ಲಿ ಮೊದಲಿನಿಂದಲೂ ಗೀತೆಯು ಒಂದು ಭಾಗವಾಗಿತ್ತೆ? ಆ ಮೊದಲು ಬರೆದಾಗ ಗೀತೆಯಲ್ಲಿ ಎಷ್ಟು ಶ್ಲೋಕಗಳಿದ್ದವು? ಇದರಲ್ಲಿ ಪಾಠಾಂತರಗಳೇನಾದರೂ ಆಗಿವೆಯೆ?– ಎಂದು ಮುಂತಾಗಿ ಐತಿಹಾಸಿಕದೃಷ್ಟಿಯಿಂದ ಗ್ರಂಥವನ್ನು ಓದುತ್ತಾರೆ. ಕೇವಲ ಐತಿಹಾಸಿಕಶೋಧನೆಗಾಗಿಯೇ ಇದನ್ನು ಉಪಯೋಗಿಸುವವರಿಗೆ ಅದೂ ಒಂದು ಪ್ರಯೋಜನವೇ ಸರಿ. ಆದರೆ ಅದೂ ಗೀತಾಕರ್ತರಾದ ವ್ಯಾಸರ ಉದ್ದೇಶವಲ್ಲ.

ಕೆಲವರು ಗೀತೆಯ ಅಧ್ಯಾಯಗಳ ಹೆಸರು, ಅವುಗಳಲ್ಲಿರುವ ಶ್ಲೋಕಗಳ ಸಂಖ್ಯೆ, ಒಂದೇ ಶ್ಲೋಕವು ಅಥವಾ ಶ್ಲೋಕಭಾಗವು ಯಾವ ಯಾವ ಬೇರೆ ಬೇರೆ ಅಧ್ಯಾಯಗಳಲ್ಲಿ ಬಂದಿದೆ? ಯಾವ ಯಾವ ಶಬ್ದಗಳ ಪ್ರಯೋಗವನ್ನು ಹೇಗೆ ಹೇಗೆ ಇಲ್ಲಿ ಮಾಡಿರುತ್ತಾರೆ?– ಎಂದು ಮುಂತಾಗಿ ವಿಚಾರಮಾಡಿ ಅದರ ವಿಷಯದಲ್ಲಿ ನಿಬಂಧಗಳನ್ನು ಬರೆಯುವದಕ್ಕೂ ಉಪನ್ಯಾಸಗಳನ್ನು ಮಾಡುವದಕ್ಕೂ ಪ್ರಯತ್ನಿಸುತ್ತಿರುತ್ತಾರೆ. ಅದೊಂದು ಬಗೆಯ ಅಷ್ಟಾವಧಾನವಾಗಬಹುದು. ಆದರೆ ಅದು ಗೀತಾಗ್ರಂಥರಚನೆಮಾಡಿದವರ ಉದ್ದೇಶವಲ್ಲ.

ಗೀತೆಯಂಥ ಗ್ರಂಥದಿಂದ ಹೆಚ್ಚಿನ ಲಾಭವನ್ನು ಸಂಪಾದಿಸುವವರ ಮನಸ್ಸು ಹೇಗಿರಬೇಕೆಂಬುದನ್ನು ಈ ಲೇಖನದ ಆದಿಯಲ್ಲಿ ನಾವು ಉದಾಹರಿಸಿರುವ ಅವತರಣಿಕೆಯಿಂದ ತಿಳಿದುಕೊಳ್ಳಬಹುದು. ವೇದವ್ಯಾಸರು ತಮ್ಮ ಗ್ರಂಥವನ್ನು **ಶ್ರೀಕೃಷ್ಣಾರ್ಜುನಸಂವಾದವೆಂತ** ಬರೆದಿರುತ್ತಾರೆ. ಅದನ್ನು ಆ **ದೃಷ್ಟಿಯಿಂದಲೇ** ಓದಬೇಕು. ಅದೊಂದು ಧರ್ಮಗ್ರಂಥವು; ಆ ಸಂವಾದವು ಧರ್ಮ್ಯವು, **ಧರ್ಮಕ್ಕನುಗುಣವಾಗುವಂತೆ** ರಚಿಸಿದ್ದು, ಆ **ದೃಷ್ಟಿಯಿಂದಲೇ** ನಾವು ಅದನ್ನು ಓದಬೇಕು. ಅದು ಭಗವಂತನಾದ **ಶ್ರೀಕೃಷ್ಣನು ಹೇಳಿದ್ದು, ಭಕ್ತನಾದ ಅರ್ಜುನನು ಕೇಳಿದ್ದು.** ಆ **ದೃಷ್ಟಿಯಿಂದಲೇ** ಅದನ್ನು ಓದಬೇಕು. ಹೀಗೆ ಯಾವನು ಗೀತೆಯನ್ನು ಅಧ್ಯಯನಮಾಡುತ್ತಾನೋ ಅವನಿಗೊಂದು ದೊಡ್ಡ ಫಲವು ದೊರಕುತ್ತದೆ. ಅವನು ಗೀತಾಧ್ಯಯನದಿಂದ ಭಗವಂತನನ್ನು ಜ್ಞಾನಯಜ್ಞದಿಂದ ಆರಾಧನೆಮಾಡಿದವನಾಗುತ್ತಾನೆ.

ಜ್ಞಾನಯಜ್ಞವೆಂದರೇನು? ಇದಕ್ಕೆ ಶ್ರೀ ಶಂಕರಾಚಾರ್ಯರವರು ಎರಡು ಬಗೆಯ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಒಂದು ವಾಕ್ಯವನ್ನು ಉಚ್ಚರಿಸುವದು, ಮತ್ತೆ ಮತ್ತೆ ಜಪಿಸುವದು, ಸಣ್ಣದಾಗಿ ಉಚ್ಚರಿಸುತ್ತಾ ಅರ್ಥದ ಕಡೆಗೇ ಲಕ್ಷ್ಯವನ್ನು ಕೊಡುವದು, ಮನಸ್ಸಿನಲ್ಲಿಯೇ ಚಿಂತಿಸುವದು–ಹೀಗೆ ನಾಲ್ಕು ಬಗೆಯಲ್ಲಿ ಉಪಯೋಗಿಸುವ

ಕ್ರಮಗಳುಂಟು. ಅವುಗಳಲ್ಲಿ ಮನಸ್ಸಿನಲ್ಲಿಯೇ ಹೊರಳಾಡಿಸುವದು ಹೆಚ್ಚಿನ ಫಲವನ್ನು ಕೊಡುವ ಜ್ಞಾನಯಜ್ಞವು. ಗೀತೆಯು ಭಗವಂತನ ಉಪದೇಶವೆಂದು ಯಾವನು ಗೀತೆಯನ್ನು ಅಧ್ಯಯನ ಮಾಡುತ್ತಾನೋ ಅವನು ಜ್ಞಾನಯಜ್ಞರೂಪವಾದ ಮಾನಸಜಪದಿಂದ ಭಗವಂತನನ್ನು ಪೂಜಿಸಿದವನಾಗುತ್ತಾನೆ ಎಂಬುದು ಒಂದು ಅರ್ಥ. ಅಥವಾ ಜ್ಞಾನಯಜ್ಞವೆಂದರೆ ದೇವತೆಯನ್ನು ಧ್ಯಾನಮಾಡುವದು; ಅಂಥ ಉತ್ತಮವಾದ ಧ್ಯಾನವನ್ನು ಮಾಡಿದ ಫಲವು ಗೀತಾಧ್ಯಯನದಿಂದ ಬರುತ್ತದೆ ಎಂಬುದು ಮತ್ತೊಂದು ಅರ್ಥವು.

ಆದ್ದರಿಂದ ಗೀತೆಯಿಂದಾಗುವ ಪರಮಪ್ರಯೋಜನವು ತಮಗೆ ಬೇಕೆನ್ನುವವನು ಅದು ಭಗವಂತನ ವಾಕ್ಯವೆಂಬುದನ್ನು ತಪ್ಪದೆ ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಆ ವಾಕ್ಯವನ್ನು ತಾನು ಪಠಿಸುವಾಗ ಭಗವಂತನ ಬಾಯಿಂದ ಈ ವಾಕ್ಯವು ಹೊರಡುತ್ತಿದೆ; ಇದನ್ನು ನನಗೋಸ್ಕರವಾಗಿ ಆತನು ಈ ಮೂಲಕವಾಗಿ ಪ್ರತ್ಯಕ್ಷವಾಗಿ ಉಪಯೋಗಿಸುತ್ತಿದಾನೆ- ಎಂಬ ಭಾವನೆಯು ಮನಸ್ಸಿನಲ್ಲಿ ಮೂಡಿರಬೇಕು. ಅರ್ಜುನನು ಹೇಗೆ ಶ್ರದ್ಧೆಯಿಂದ ಕೂಡಿ ಭಗವಂತನ ವಾಕ್ಯವನ್ನು ಕೇಳುತ್ತಿದ್ದನೋ ಹಾಗೆಯೇ ಗೀತಾಪಾಠಕನು ಶ್ರದ್ಧೆಯಿಂದ ಕೂಡಿ ಪ್ರತಿಯೊಂದು ವಾಕ್ಯವನ್ನೂ ಮನಸ್ಸಿನಲ್ಲಿಯೇ ಮೆಲುಕುಹಾಕುತ್ತಿರಬೇಕು, ಅದರ ಸವಿಯನ್ನು ಕಂಡುಕೊಳ್ಳಬೇಕು. ಆಗ ಅದು ಭಗವಂತನ ಆರಾಧನೆಯಾಗುವದು; ಅದೊಂದು ಜ್ಞಾನಯಜ್ಞವಾಗುವದು.

ಗೀತೆಯಲ್ಲಿ ಒಂದೊಂದು ದಿನಕ್ಕೆ ಎಷ್ಟೆಷ್ಟು ಭಾಗವನ್ನು ಓದಬೇಕೆಂದು ಕೆಲವರು ಕೇಳುವದುಂಟು. ಮೊದಮೊದಲು ಓದುವಾಗ ಒಟ್ಟು ಗ್ರಂಥದ ಅಭಿಪ್ರಾಯವನ್ನು ಮಾಡಿಕೊಳ್ಳುವದಕ್ಕೆಂದು ಆದಷ್ಟು ಹೆಚ್ಚಿನ ಭಾಗವನ್ನು ಓದುವದು ಯುಕ್ತವೇ ಸರಿ. ಆದರೆ ಆಮೇಲೆ ದಿನಕ್ಕೆ ಇಂತಿಷ್ಟನ್ನು ಓದಿ ಮುಗಿಸುತ್ತೇನೆಂದು ಗುತ್ತಿಗೆಯನ್ನೇನೂ ಹೊರಬೇಕಾದದ್ದಿಲ್ಲ. ಗೀತೆಯಂಥ ಗ್ರಂಥಗಳು ಪ್ರಾಸಾದಿಕವಾಣಿಯಿಂದ ಕೂಡಿರುತ್ತವೆ. ಅವುಗಳ ಅಭಿಪ್ರಾಯವು ನಮ್ಮ ಮನಸ್ಸಿನಲ್ಲಿ ನಿಂತು ಹೃದಯದೊಳಕ್ಕೆ ಆಳವಾಗಿ ಇಳಿದುಕೊಳ್ಳಬೇಕಾದರೆ ಕೆಲಕೆಲವು ಅಭಿಪ್ರಾಯಗಳನ್ನು ಆರಿಸಿಕೊಂಡು ಮಾನಸಯಜ್ಞದ ಆರಾಧನೆಯನ್ನು ಮಾಡುವದು ಅವಶ್ಯವಾಗುತ್ತದೆ.

ಗ್ರಂಥವನ್ನು ಇಂತಿಷ್ಟು ಪುಟ, ಇಂತಿಷ್ಟು ಶ್ಲೋಕ-ಎಂದು ಲೆಕ್ಕಮಾಡುವದಕ್ಕೆ ಹೊರಡದಿರಿ. ಯಾವದಾದರೊಂದು ಅಭಿಪ್ರಾಯವು ಮನಸ್ಸಿನಲ್ಲಿ ಹೊಕ್ಕು ಆಳವಾಗಿ ಇಳಿದು ಅಲ್ಲಿಯೇ ನಿಂತುಕೊಳ್ಳುವದಕ್ಕೆ ಅವಕಾಶವನ್ನು ಕೊಡಿರಿ. ಉತ್ತಮಪುಷ್ಟಿಯ ಔಷಧವನ್ನು ಸೇವಿಸುವವರು ಅದನ್ನು ಮಿತವಾಗಿ ಕ್ರಮಬದ್ಧವಾಗಿಯೇ ಉಪಯೋಗಿಸುತ್ತಾ ಬಂದರೆ ಕಾಲಕ್ರಮದಲ್ಲಿ ಅದರ ಪರಿಣಾಮವು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವಂತೆ ಮನಮುಟ್ಟಿ ಮನನಮಾಡಿದ ಪ್ರಾಸಾದಿಕವಾಣಿಯೂ ನಮ್ಮಲ್ಲಿ ಕ್ರಮಕ್ರಮವಾಗಿ ತನ್ನ

ಪರಿಣಾಮವನ್ನು ಸಾಕ್ಷಾತ್ಕಾರರೂಪದಿಂದಲೇ ತೋರಿಸಿಕೊಡುವದು. ಭಗವದ್ಗೀತೆಯ ಅಥವಾ ಆ ಜಾತಿಯ ಮತ್ತೆ ಯಾವದಾದರೂ ಗ್ರಂಥದ ವಾಕ್ಯಗಳನ್ನು ಶ್ರದ್ಧೆಯಿಂದ ಕೇಳಿದರೂ ಸಾಕು; ಅಂಥವರಿಗೂ ಪಾಪಗಳ ಬಿಡುಗಡೆಯಾಗುತ್ತದೆ. ಉತ್ತಮ ಗತಿಯಾಗುತ್ತದೆ ಎಂದು ಭಗವಂತನು ಹೇಳಿರುತ್ತಾನೆ. ಹೀಗಿರುವಲ್ಲಿ ಶ್ಲೋಕಗಳ ಅಭಿಪ್ರಾಯವನ್ನು ಮನಸ್ಸಿನಲ್ಲಿ ಆಡಿಸಿ ಆಡಿಸಿ ಒಳಗೆಲ್ಲ ಕೂಡಿಕೊಳ್ಳುವಂತೆ ಅಭ್ಯಾಸ ಮಾಡುವ ಸಾಧಕನಿಗೆ ಉತ್ತಮಫಲವು ಆಗುವದೆಂಬುದನ್ನು ಹೇಳುವದೇನಿದೆ? ಇಂಥ ಗ್ರಂಥಗಳ ಪಾರಾಯಣದಿಂದ ಆಗುವ ಫಲವು ಲೋಕಾಂತರದಲ್ಲಿ ಕಾಣುವದೆಂದು ನಂಬಬೇಕಾದದ್ದೇನೂ ಇಲ್ಲ. ಈ ಲೋಕದಲ್ಲಿಯೇ ಸ್ವಾನುಭವಕ್ಕೆ ಬರುವ ಫಲವನ್ನು ಕೊಡುವ ಶಕ್ತಿಯೂ ಆ ಗ್ರಂಥಗಳಿಗೆ ಇರುತ್ತದೆ.

ನನ್ನ ಅಭಿಪ್ರಾಯವನ್ನು ಒಂದು ಉದಾಹರಣೆಯಿಂದ ವಿಶದಪಡಿಸುವೆನು. ಗೀತೆಯಲ್ಲಿರುವ ಈ ಎರಡು ಶ್ಲೋಕಗಳನ್ನು ಲಕ್ಷ್ಯವಿಟ್ಟು ಓದಿರಿ :

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ॥** (8.61)
**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥** (8.62)

ಈ ಶ್ಲೋಕಗಳನ್ನು ನೀವು ಎಷ್ಟೋ ಸಲ ಓದಿರಬಹುದು. ಆದರೆ ಒಳಹೊಕ್ಕು ಅವುಗಳ ಭಾವಾರ್ಥವನ್ನು ಸ್ವಲ್ಪ ಮನಸ್ಸಿಗೆ ತಂದುಕೊಳ್ಳುವದಕ್ಕೆ ಪ್ರಯತ್ನಿಸಿರಿ. ಶ್ಲೋಕಗಳಲ್ಲಿ ಅಡಗಿರುವ ಭಾವವನ್ನು ಮನಸ್ಸಿನ ಕಣ್ಣಿಗೆ ಕಟ್ಟಿದಂತೆ ಮಾಡಿಕೊಂಡು ಮೆಲ್ಲಮೆಲ್ಲನೆ ಶ್ಲೋಕಗಳನ್ನು ಓದಿರಿ.

**"ಅರ್ಜುನನೆ, ಈಶ್ವರನು ಎಲ್ಲಾ ಭೂತಗಳ ಹೃದಯದಲ್ಲಿ ಇದ್ದುಕೊಂಡಿರುವನು"**– ಎಂಬಿದು ಮೊದಲನೆಯ ವಾಕ್ಯದ ಅಕ್ಷರಾರ್ಥವು. ಇದರ ಭಾವವು ಎಲ್ಲಿಯವರೆಗೆ ಹೋಗುತ್ತದೆ? ಈಶ್ವರನು, ಈ ಜಗತ್ತನ್ನೆಲ್ಲ ತನ್ನ ವಶದಲ್ಲಿಟ್ಟುಕೊಂಡಿರುವ ಭಗವಂತನು ಎಲ್ಲಾ ಪ್ರಾಣಿಗಳ– ನನ್ನ, ನಿಮ್ಮ, ಮತ್ತೆಲ್ಲ ಮನುಷ್ಯರ, ಅಷ್ಟೇ ಅಲ್ಲ ಕ್ರಿಮಿಕೀಟಾದಿಗಳಿಂದ ಹಿಡಿದು ಬ್ರಹ್ಮನವರೆಗಿನ ಎಲ್ಲಾ ಪ್ರಾಣಿಗಳ– ಹೃದಯದಲ್ಲಿ ಇರುತ್ತಾನೆ. ಇದನ್ನು ಮನಸ್ಸಿನಲ್ಲಿ ಮೆಲ್ಲಮೆಲ್ಲಗೆ ತಂದುಕೊಂಡು ಶ್ಲೋಕದ ಮೊದಲನೆಯ ವಾಕ್ಯವನ್ನು ಓದಿರಿ. ಈಶ್ವರನು ದೂರದಲ್ಲಿಲ್ಲ, ಅವನು ಪರೋಕ್ಷನಲ್ಲ; ಯಾವದೋ ದೇಶದಲ್ಲಿ ಯಾವದೋ ಕಾಲದಲ್ಲಿ, ಯಾರೋ ಕೆಲವರು ಮಾತ್ರ ಕಾಣಬಲ್ಲ ತತ್ತ್ವವಲ್ಲ. ಆತನು ಎಷ್ಟು ವ್ಯಾಪಿಯೆಂದರೆ ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ತುಂಬಿರುತ್ತಾನೆ. ಆದ್ದರಿಂದ ಈಗ ನನ್ನ ಹೃದಯದಲ್ಲಿಯೇ ಇರುತ್ತಾನೆ. ಆತನನ್ನು ಕಾಣುವದಕ್ಕೆ ನಾನು ದೂರದ ದೇಶಕ್ಕೆ ಹೋಗಬೇಕಾದ್ದಿಲ್ಲ. ಈಗಲೇ, ಇಲ್ಲಿಯೇ ಕಾಣಬಹುದು. ಈ ಭಾವವನ್ನು ನಿಮ್ಮ ಮನಸ್ಸಿನಲ್ಲಿ

ಒತ್ತಿ ನಿಲ್ಲಿಸಿಕೊಳ್ಳಿರಿ. ವಾಕ್ಯವನ್ನು ಇನ್ನೊಮ್ಮೆ ಓದಿರಿ. ಗಟ್ಟಿಯಾಗಿ ಉಚ್ಚರಿಸಬೇಕಾದದ್ದೇನೂ ಇಲ್ಲ. ಈ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಳ್ಳುತ್ತಾ "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ" ಎಂದು ಕಿರುದನಿಯಲ್ಲಿಯೇ- ಅಥವಾ ಯಾರಾದರೂ ಅದನ್ನು ಕೇಳಿದ್ದರಿಂದ ನಿಮಗೇನು? ನಿಮ್ಮ ಮನಸ್ಸಿಗೆ ಹಿಡಿಯುವಂತೆ ಯಾರೊ ಉಚ್ಚರಿಸಿದಂತೆ ನಿಮ್ಮನಿಮ್ಮ ಮನಸ್ಸಿನಲ್ಲಿಯೇ-ಓದಿಕೊಳ್ಳಿರಿ.

ಆ ಭಗವಂತನು ನಿಮ್ಮ ಹೃದಯದಲ್ಲಿ ಮಾತ್ರವೇ ಅಲ್ಲ. ಎಲ್ಲರ ಹೃದಯದಲ್ಲಿಯೂ, ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ, ಇದಾನೆಂದು ಭಾವಿಸಿಕೊಂಡು ಮತ್ತೊಮ್ಮೆ ವಾಕ್ಯವನ್ನು ಹೀಗೆಯೇ ಓದಿರಿ. ಈ ವಾಕ್ಯದ ಅಭಿಪ್ರಾಯವು ಎಷ್ಟೋ ದಿನಗಳವರೆಗೆ- ಇಡಿಯ ಜೀವನವೂ ಸಾಲದೆ ಹೋಗಬಹುದು- ಮನನಮಾಡತಕ್ಕದ್ದಾಗಿರುವದು.

ಈಗ ಎರಡನೆಯ ವಾಕ್ಯವನ್ನು ನೋಡಿರಿ. **"ಈಶ್ವರನು ಎಲ್ಲಾ ಪ್ರಾಣಿಗಳನ್ನೂ ಯಂತ್ರವನ್ನು ಏರಿದ್ದಂತೆ ತನ್ನ ಮಾಯೆಯಿಂದ ತಿರುಗಿಸುತ್ತಿರುವನು."** ಇದರ ಭಾವವನ್ನು ಮನಸ್ಸಿಗೆ ಹತ್ತಿಸಿಕೊಳ್ಳುವದಕ್ಕೆ ಪ್ರಯತ್ನಿಸಿರಿ. ಭಗವಂತನು ಯಂತ್ರಿಯು, ನಾವು ಯಂತ್ರವನ್ನು ಏರಿದವರು, ಅಥವಾ ಅಷ್ಟೇಕೆ, ಯಂತ್ರವೇ ಎನ್ನಬಹುದು. ದೊಡ್ಡದೊಡ್ಡ ಗಿರಣಿಗಳಲ್ಲಿ ವಿದ್ಯುಚ್ಛಕ್ತಿಯಿಂದ ತಿರುಗುವ ಬಲವಾದ ಯಂತ್ರಗಳು ಇರುತ್ತವೆ. ಅವುಗಳನ್ನು ನೀವು ನೋಡಿರಬಹುದು. ಬತ್ತಕುಟ್ಟುವ ಯಂತ್ರ, ಬಟ್ಟೆ ನೇಯುವ ಯಂತ್ರ, ಅಚ್ಚಿನ ಯಂತ್ರ- ಇಂಥವುಗಳನ್ನು ನೆನಪಿಗೆ ತಂದುಕೊಳ್ಳಿರಿ. ಯಂತ್ರಕ್ಕೆ ವಿದ್ಯುಚ್ಛಕ್ತಿಯು ಯಾವದೋ ತಂತಿಯ ಮೂಲಕ ಬರುತ್ತದೆ. ಅದರ ಒಂದು ಚಕ್ರವು ಸುತ್ತುವದಕ್ಕೆ ಮೊದಲುಮಾಡುತ್ತದೆ. ಕೂಡಲೆ ಅದಕ್ಕೆ ಸಂಬಂಧಪಟ್ಟಿರುವ ಬೇರೆ ಚಕ್ರಗಳೂ ಅವಯವಗಳೂ ಚಲಿಸುವದಕ್ಕೆ ಮೊದಲುಮಾಡುತ್ತವೆ. ನಿಮಿಷಮಾತ್ರದಲ್ಲಿ ಬೇರೆಬೇರೆಯ ಚಲನಗಳಾಗುತ್ತವೆ, ಬಗೆಬಗೆಯ ಕೆಲಸಗಳು ಆಗಿಬಿಡುತ್ತವೆ. ಅಲ್ಲವೆ? ಇಡಿಯ ಜಗತ್ತನ್ನೇ ಇಂಥದ್ದೊಂದು ದೊಡ್ಡ ಯಂತ್ರವೆನ್ನಬಹುದು. ಪ್ರಾಣಿಗಳು ಈ ಯಂತ್ರವನ್ನು ಏರಿರುತ್ತವೆ. ಭಗವಂತನ ಮಾಯಾಶಕ್ತಿಯು ಜಗತ್ತೆಂಬ ಈ ಯಂತ್ರಕ್ಕೆ ಕೊಟ್ಟಿರುವ ಚಲನೆಯಿಂದ ಕೆಲವುಕಡೆಗಳಲ್ಲಿ ಗಿಡಮರಬಳ್ಳಿಗಳು ಬೆಳೆದು ಚಿಗುರು ಎಲೆ ಹೂ ಹಣ್ಣುಗಳನ್ನು ಬಿಡುತ್ತವೆ, ಕೆಲವು ಕಡೆಗಳಲ್ಲಿ ಹುಳುಹುಪ್ಪಟೆ, ದನಕರು ಮುಂತಾದ ಪ್ರಾಣಿಗಳು, ಹಕ್ಕಿಗಳು- ಇವೆಲ್ಲ ಬಗೆಬಗೆಯ ವ್ಯಾಪಾರಗಳನ್ನು ಮಾಡುತ್ತಿರುವವು, ಮನುಷ್ಯರು ದೇವತೆಗಳು- ಮುಂತಾದವರೆಲ್ಲರೂ ತಮ್ಮತಮ್ಮ ವ್ಯಾಪಾರದಲ್ಲಿ ತೊಡಗಿರುವದು. ಜಗದ್ಯಂತ್ರದ ಚಲನೆಯಿಂದ ಪ್ರಾಣಿಗಳ ಮತ್ತು ಮನುಷ್ಯರ ಶರೀರಗಳೆಂಬ ಸಣ್ಣಸಣ್ಣ ಯಂತ್ರಗಳು ಶಕ್ತಿಯನ್ನು ಪಡೆದುಕೊಂಡು, ಚಿತ್ರವಿಚಿತ್ರವಾದ ವ್ಯಾಪಾರಗಳನ್ನು ಪ್ರದರ್ಶಿಸುತ್ತಿರುವವು. ಇಂಥ ಭಾರಿಯ ಗಿರಣಿಯಲ್ಲಿ ಕೆಲಸಮಾಡುತ್ತಿರುವ ಸಣ್ಣಪುಟ್ಟ ಯಂತ್ರಗಳು ನಾನು,

ನೀವು, ಮಿಕ್ಕವರು, ಎಲ್ಲರೂ ಆ ಯಂತ್ರಿಯ ಕೈಚಳಕದಿಂದ ಪ್ರವರ್ತಿಸುತ್ತಿರುವವರೇ. ಈಶ್ವರನು ಸುಮ್ಮನೆ ಹೃದಯದಲ್ಲಿ ಕುಳಿತಿರುವದಿಲ್ಲ; ನಮ್ಮ ಚಲನವಲನಗಳಿಗೆಲ್ಲ ಮೂಲ ಕಾರಣನಾಗಿರುತ್ತಾನೆ. ಇಂಥ ಮಹಾಮಾಯಾವಿ ಯಾಂತ್ರಿಕನವನು!

ಈಗ ಮತ್ತೊಂದು ವಾಕ್ಯವನ್ನು ಆಲೋಚನೆಗೆ ತೆಗೆದುಕೊಳ್ಳೋಣ. **"ಆತನನ್ನೇ ಸರ್ವಭಾವದಿಂದಲೂ ಶರಣುಹೊಂದು."** ಸ್ವಲ್ಪವೂ ಬಿಡುವಿಲ್ಲದೆ ಪಶುಗಳಂತೆಯೂ ಸಣ್ಣ ಮಕ್ಕಳಂತೆಯೂ ಅತ್ತಿತ್ತ ಹರಿದಾಡುತ್ತಿರುವದು ನಮ್ಮ ಸ್ವಭಾವವೆಂದೇ ನಮ್ಮಗಳ ಎಣಿಕೆ. ಯಂತ್ರದ ಅವಯವಗಳಂತೆ ಗಿರ್ರನೆ ತಿರುಗಿತಿರುಗಿ ನಮ್ಮ ಶರೀರದ ಭಾಗಗಳು ಹಗಲೆಲ್ಲ ಚಲಿಸುತ್ತಲೇ ಇರುತ್ತವೆ. ಆದರೆ ನಮಗೆ ಈ ನಮ್ಮ ಶರೀರೇಂದ್ರಿಯಸಂಘಾತದ ಆಶ್ರಯವಾಗಿರುವ ಮೂಲವೊಂದಿದೆ ಎಂಬುದರ ಅರಿವು ಆಗಿರುವದಿಲ್ಲ. ನಮ್ಮ ಈ ಚಟುವಟಿಕೆಗಳಿಗೆಲ್ಲ ನಾವು ಕರ್ತರು, ನಮ್ಮ·ಸಂಕಲ್ಪದಿಂದಲೇ ನಾವು ಈ ಶರೀರದ, ಇಂದ್ರಿಯಗಳ ಮತ್ತು ಮನಸ್ಸಿನ ವ್ಯಾಪಾರಗಳನ್ನು ಮಾಡುತ್ತಿರುವೆವು- ಎಂದು ನಮ್ಮಲ್ಲನೇಕರ ಭಾವನೆಯಿರುತ್ತದೆ. ಆದರೆ ನಮಗೆ ಇಷ್ಟವಿರಲಿ ಇಲ್ಲದಿರಲಿ, ಆಗಾಗ್ಗೆ ನಮ್ಮ ಈ ಅವಯವಗಳೆಲ್ಲ ಆಯಾಸಗೊಳ್ಳುತ್ತಲೇ ಇರುವವು. ಅವಕ್ಕೆ ಶ್ರಮವಾದಾಗ ಅವು ಸುಮ್ಮನೆ ಆಗಿಬಿಡುವವು. ದಿನಕ್ಕೊಂದು ಸಲ "ನಾನು ಒಲ್ಲೆ" ಎಂದರೂ ನಿರ್ಬಂಧದಿಂದ ಭಗವಂತನ ಆ ಮಾಯಾಶಕ್ತಿಯು ನಮ್ಮ ವ್ಯಾಪಾರವನ್ನೆಲ್ಲ ನಿಲ್ಲಿಸಿ ನಮ್ಮನ್ನು ತನಿನಿದ್ರೆಯಲ್ಲಿ ಮುಳುಗಿಸಿಬಿಡುವದು. ಗಿರಣಿಯು ಗೊತ್ತಾಗಿರುವಷ್ಟು ಕಾಲ ಕೆಲಸಮಾಡಿದ ಬಳಿಕ ವಿದ್ಯುಚ್ಛಕ್ತಿಯ ಸಂಬಂಧವನ್ನು ತಪ್ಪಿಸಿ ಯಂತ್ರಕ್ಕೆ ವಿಶ್ರಾಂತಿಯನ್ನು ಕೊಡುವ ಹಾಗೆ ಭಗವಂತನು ನಮ್ಮ ವ್ಯಾಪಾರವನ್ನು ನಿಲ್ಲಿಸಿಬಿಡುತ್ತಾನೆ. ಇದನ್ನೆಲ್ಲ ಮನಸ್ಸಿಗೆ ತಂದುಕೊಂಡು ಈ ನಮ್ಮ ತನುಮನ ಇಂದ್ರಿಯಾದಿಗಳೆಲ್ಲವೂ ಆ ಭಗವಂತನ ಅಧೀನದಲ್ಲಿಯೇ ಇವೆ; ನನ್ನ ವ್ಯಾಪಾರವೆಲ್ಲವೂ ಆತನದೇ ಎಂದು ಸರ್ವಭಾವದಿಂದ ಆ ಭಗವಂತನನ್ನು ಶರಣುಹೊಂದಬೇಕು. ಈ ವ್ಯಾಪಾರಕ್ಕೆಲ್ಲ ಕೇಂದ್ರವಾಗಿ ನಮ್ಮ ಹೃದಯದಲ್ಲಿದ್ದುಕೊಂಡಿರುವ ಆ ಭಗವಂತನಲ್ಲಿ ನಮ್ಮ ಮನಸ್ಸನ್ನು ನಿಲ್ಲಿಸುವ ಅಭ್ಯಾಸವನ್ನು ಮಾಡಬೇಕು. ಇದು ಮೂರನೆಯ ವಾಕ್ಯದ ಅಭಿಪ್ರಾಯವು.

ಈಗ ನಾಲ್ಕನೆಯ ವಾಕ್ಯವನ್ನು ಮನಸ್ಸಿಗೆ ಹತ್ತಿಸಿಕೊಳ್ಳೋಣ. ಅರ್ಜುನನಿಗೆ ಹೇಳಿದ್ದಾದರೂ ಅರ್ಜುನನಂತೆ ಶುದ್ಧಚಿತ್ತರಾದವರಿಗೆಲ್ಲವೂ ಗೀತೆಯ ಉಪದೇಶವು ಅನ್ವಯಿಸುತ್ತದೆ; ಅದರಲ್ಲಿಯು ಈ ಭರತಖಂಡದವರಿಗೆ ಅದು ವಿಶೇಷವಾಗಿ ಅನ್ವಯಿಸುತ್ತದೆ- ಎಂಬುದನ್ನು "ಅರ್ಜುನ". "ಭಾರತ" ಎಂಬ ವಿಶೇಷಣಗಳು ತಿಳಿಸುವವು. ನಮ್ಮ ದೇಶದ ಜನರಿಗೆ ಕೆಲಸದಲ್ಲಿ ಅಷ್ಟು ಆದರವಿಲ್ಲವೆಂದು ಕೆಲವರು ನಮ್ಮನ್ನು ಹಳಿಯುವದುಂಟು. ಅದು ತಪ್ಪುತಿಳಿವಳಿಕೆಯ ಫಲವಾದ್ದರಿಂದ ನಾವೇನೂ ಅದಕ್ಕೆ

ಅಷ್ಟು ಬೆಲೆಕೊಡಬೇಕಾದದ್ದಿಲ್ಲ, ಆದರೆ ವ್ಯವಹಾರದ ಚಟುವಟಿಕೆಗಳಲ್ಲಿ ನಿರತರಾಗಿ ಶ್ರಾಂತರಾಗಿರುವ ಜೀವಿಗಳಿಗೆ ಆಸರೆ ಯಾವದು? ಎಲ್ಲಕ್ಕೂ ಹೆಚ್ಚಿನ ಶಾಂತಿ ಯಾವದು?– ಎಂಬುದನ್ನು ನಮ್ಮ ದೇಶದಲ್ಲಿ ಬಹುಮಟ್ಟಿಗೆ ವಿಚಾರಮಾಡಿ ಒಂದು ಸಿದ್ಧಾಂತವನ್ನು ತೆಗೆದಿರುತ್ತಾರೆ. ಆ ಸಿದ್ಧಾಂತವು ಈ ನಾಲ್ಕನೆಯ ವಾಕ್ಯದಲ್ಲಿ ಗರ್ಭಿತವಾಗಿರುತ್ತದೆ. ಮನುಷ್ಯನಿಗೆ ಶಾಂತಿಯ ತಳಹದಿಯು ಸಾಮಾನ್ಯವಾಗಿ ಗೊತ್ತಾಗಿರುವದೇ ಇಲ್ಲ; ಶರೀರಕ್ಕೆ ಕ್ಲೇಶವನ್ನು ಕೊಡಲಾರದೆ ಸುಮ್ಮನೆ ಸೋಮಾರಿಯಾಗಿ ಕುಳಿತುಕೊಂಡರೆ ಶಾಂತಿಯು ಸಿಕ್ಕುವದೆಂದು ಎಷ್ಟೋ ಜನರ ಹುಚ್ಚುನಂಬಿಕೆಯಿರುತ್ತದೆ. ಇದು ತಪ್ಪೆಂಬುದು ಅವರಿಗೆ ಪ್ರಕೃತಿನಿಯಮಗಳಿಂದಲೇ ಗೊತ್ತಾಗಬೇಕಾಗಿದೆ. ಯಾರೊಬ್ಬರಿಗೂ ಸುಮ್ಮನೆ ಕುಳಿತಿರುವದರಿಂದ ಶಾಂತಿಯು ದೊರಕುವದಿಲ್ಲ; ಆಗ ಸ್ವಲ್ಪ ಬೇಸರಿಕೆಯಾಗಬಹುದು, ಅಷ್ಟೆ. ನಿಜವಾದ ಶಾಂತಿಯು, ಎಲ್ಲಕ್ಕೂ ಹೆಚ್ಚಿನ ಶಾಂತಿಯು, ಭಗವಂತನನ್ನು ಶರಣುಹೊಂದುವದರಲ್ಲಿದೆ. ಸರ್ವಕರಣಗಳಿಂದಲೂ ನಾವು ನೋಡುತ್ತಿರುವದೆಲ್ಲವೂ ಭಗವಂತನ ಮಾಯಾಶಕ್ತಿಯ ವ್ಯಾಪಾರವೇ ಎಂಬುದನ್ನು ಮನದಂದು ನಮ್ಮ ಸರ್ವವ್ಯಾಪಾರಗಳಿಗೂ ಕೇಂದ್ರವಾಗಿರುವ ಭಗವಂತನನ್ನು ಸರ್ವಭಾವದಿಂದಲೂ ಶರಣುಹೊಂದಬೇಕು. ಆತನ ಸಂಕಲ್ಪಕ್ಕೆ ನಮ್ಮ ಸಂಕಲ್ಪವು ಎಲ್ಲಾ ಬಗೆಯಿಂದಲೂ ಹೊಂದುಗೆಯಾಗಿ ಆತನಲ್ಲಿ ನಾವು ಒಂದಾಗಬೇಕು. ಅದೇ ಸರ್ವಭಾವದಿಂದ ಶರಣುಹೊಂದುವದು. ಆಗಲೇ ಆತನು ನಮ್ಮಲ್ಲಿ ಪ್ರಸನ್ನನಾಗುವನು, ಆಗಲೇ ನಮಗೆ ಎಲ್ಲಕ್ಕಿಂತಲೂ ಹೆಚ್ಚಿನ ಶಾಂತಿಯು ಸಿಕ್ಕುವದು. ಅದೇ ಶಾಶ್ವತಸ್ಥಾನವು, ವಿಷ್ಣುವಿನ ಪರಮಪದವು–ಎಂಬುದು ಈ ವಾಕ್ಯದ ಭಾವಾರ್ಥವು.

ಗೀತೆಯ ಶ್ಲೋಕಗಳನ್ನು ಹೀಗೆ ಶ್ರದ್ಧಾಭಕ್ತಿಪುರಸ್ಸರವಾಗಿ ಪಾರಾಯಣಮಾಡುವವರಿಗೆ ಆಗುವ ಸುಖಶಾಂತಿಗಳು ಪ್ರತ್ಯಕ್ಷವಾಗಿ ಈ ಲೋಕದಲ್ಲಿ ಈ ಜನ್ಮದಲ್ಲಿಯೇ ಅನುಭವಕ್ಕೆ ಬರುವವಾಗಿರುತ್ತವೆ. ಆಸ್ತಿಕರಾದವರು ಈ ಪ್ರಯತ್ನವನ್ನು ಮಾಡಿ ತಾವುತಾವೇ ಫಲವನ್ನು ಕಂಡುಕೊಳ್ಳಬೇಕಾಗಿದೆ.

## 3.3. ಆತ್ಮ ಜ್ಞಾನದ ಪಥ

**ನಾಯಮಾತ್ಮಾ ಪ್ರವಚನೇನಲಭ್ಯಃ, ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯಃ, ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್॥ –ಮುಂ. 3–2–3**

**ಈ ಆತ್ಮನು ಪ್ರವಚನಕ್ಕೆ ಸಿಕ್ಕುವದಿಲ್ಲ, ಮೇಧೆಗೆ ಸಿಕ್ಕುವದಿಲ್ಲ, ಬಹಳವಾಗಿ**

ಶಾಸ್ತ್ರಶ್ರವಣಮಾಡುವದರಿಂದಲೂ ಸಿಕ್ಕುವದಿಲ್ಲ. ಯಾರನ್ನೇ ಈತನು ವರಿಸುವನೋ ಅವನಿಗೆ ಸಿಕ್ಕುತ್ತಾನೆ. ಅವನಿಗೆ ಈ ಆತ್ಮನು ತನ್ನ ತನುವನ್ನು ಬಿಚ್ಚಿತೋರಿಸುತ್ತಾನೆ.

ವೇದಾಂತಗ್ರಂಥಗಳ ಪಠನಪಾಠನವು ಹೆಚ್ಚುತ್ತಿರುವ ಈ ಕಾಲದಲ್ಲಿ ಪರಮಾತ್ಮಪ್ರಾಪ್ತಿಗೆ ಯಾವ ಮುಖ್ಯಸಾಧನವನ್ನು ಶ್ರುತಿಯಲ್ಲಿ ಹೇಳಿದೆ ಎಂಬುದನ್ನು ವಿಮರ್ಶೆಗೆ ತೆಗೆದುಕೊಳ್ಳುವದು ಲಾಭದಾಯಕವಾಗಿರುತ್ತದೆ. ಪರಮೇಶ್ವರನು ನಮ್ಮಗಳ ಆತ್ಮನೇ ಎಂದು ಉಪನಿಷತ್ತುಗಳೆಲ್ಲವೂ ಒಕ್ಕೊರಲಿನಿಂದ ಸಾರುತ್ತವೆ. ಆದರೂ ಆ ಸರ್ವಾತ್ಮನ ಪ್ರಾಪ್ತಿಯು ಇಷ್ಟು ದುರ್ಲಭವಾಗಿರುವದಕ್ಕೆ ಕಾರಣವೇನು?– ಎಂಬೀ ಶಂಕೆಗೆ ಪರಿಹಾರವನ್ನು ಮೇಲೆ ಬರೆದಿರುವ ಶ್ರುತಿವಾಕ್ಯದಲ್ಲಿ ತಿಳಿಸಿದೆ.

ಪರಮಾತ್ಮನ ಪ್ರಾಪ್ತಿಗೆ ಉಪಾಯವೆಂದರೆ ಜನರು ಎಣಿಸಿಕೊಂಡಿರುವ ಕೆಲವು ಸಾಧನಗಳನ್ನು ಇಲ್ಲಿ ಅಲ್ಲಗಳೆದಿದೆ. ಈ ವಾಕ್ಯದ ಸರಿಯಾದ ಅಭಿಪ್ರಾಯವನ್ನು ತಿಳಿಯುವದಕ್ಕೆ ಇದರ ಸಂದರ್ಭವನ್ನು ತಿಳಿಯುವದು ಅವಶ್ಯವಾಗುತ್ತದೆಯಾದ್ದರಿಂದ ಮೊದಲು ಅದನ್ನಿಷ್ಟು ಇಲ್ಲಿ ವಿವರಿಸುವೆನು. ಪರಮಾತ್ಮನನ್ನು ಅರಿತುಕೊಂಡು ಆತನನ್ನು ಸೇರಿದವನು ಯಾವಯಾವ ಭೋಗಗಳನ್ನು ಮನಸ್ಸಿಗೆ ತಂದುಕೊಳ್ಳುವನೋ ಅವೆಲ್ಲವೂ ಅವನನ್ನು ಸೇವಿಸುವವರಿಗೆ ದೊರಕುವವು. ಯಾವ ಲೋಕದಲ್ಲಿ ಯಾವ ಕಾಮವಿದ್ದರೂ ಆತ್ಮಜ್ಞಾನಿಗೆ ಅದು ದುರ್ಲಭವಲ್ಲ. ಆದ್ದರಿಂದ ಆತ್ಮಜ್ಞಾನಿಯನ್ನು ಭೂತಿಕಾಮರಾದವರು, ತಮಗೆ ಒಳ್ಳೆಯದಾಗಬೇಕೆಂದು ಬಯಸುವವರು, ಪೂಜಿಸಬೇಕು; ಶುಶ್ರೂಷೆ, ನಮಸ್ಕಾರ– ಮುಂತಾದವುಗಳಿಂದ ಅವರ ಅನುಗ್ರಹವನ್ನು ಸಂಪಾದಿಸಬೇಕು. ಆತ್ಮಜ್ಞಾನಿಯು ಪ್ರಸನ್ನನಾದರೆ ಭಕ್ತರಿಗೆ ದೊರೆಯುವದು ಇಷ್ಟೇ ಅಲ್ಲ. ಯಾರು ನಿಷ್ಕಾಮರಾಗಿ ಜ್ಞಾನಿಯನ್ನು ಉಪಾಸನೆಮಾಡುವರೋ ಅವರು ಶುಕ್ಲಶೋಣಿತಗಳ ಸಂಪರ್ಕದಿಂದಾಗುವ ಶರೀರಗ್ರಹಣವನ್ನೇ ದಾಟುವರು. ಅವರು ಆಪ್ತಕಾಮನಾದ ಪರಮಾತ್ಮನನ್ನೇ ಪಡೆದು ಎಲ್ಲಾ ಬಂಧಗಳಿಂದಲೂ ಮುಕ್ತರಾಗುವರು– ಎಂದು ಹೇಳಿದ ಬಳಿಕ ಈ ಸಾಧನವಾಕ್ಯವು ಬಂದಿರುತ್ತದೆ. ಪರಮಾತ್ಮನ ಲಾಭವು ಎಲ್ಲಾ ಲಾಭಗಳಿಗಿಂತಲೂ ಮಿಗಿಲಾದದ್ದು, ಅದಕ್ಕಿಂತ ಮಿಗಿಲಾದ ಲಾಭವೇ ಇಲ್ಲ– ಎಂಬುದು ನಿಶ್ಚಯವಾದ ಬಳಿಕ ಆತ್ಮಲಾಭಕ್ಕೆ ಸಾಧನವೇನೆಂಬುದನ್ನು ವಿಚಾರಿಸುವದು ಯುಕ್ತವೇ ಅಷ್ಟೆ.

ನಮ್ಮಲ್ಲನೇಕರು ತಿಳಿದುಕೊಂಡಿರುವದೇನೆಂದರೆ ಶಾಸ್ತ್ರಗಳನ್ನು ಶ್ರವಣಮಾಡುವದು, ಅವುಗಳ ವಾಕ್ಯಗಳನ್ನು ನೆನಪಿನಲ್ಲಿಟ್ಟುಕೊಳ್ಳುವದು, ಅವುಗಳ ಅರ್ಥವನ್ನು ಮತ್ತೊಬ್ಬರಿಗೆ ಹೇಳುವದು– ಇವು ಆತ್ಮಪ್ರಾಪ್ತಿಗೆ ಅವಶ್ಯವಾಗಿವೆ. ಗ್ರಂಥಗಳ ಶ್ರವಣವಾಗಲಿ, ಮೇಧಾಶಕ್ತಿಯಾಗಲಿ ಪ್ರವಚನಪಟುತ್ವವಾಗಲಿ ಇಲ್ಲದವರಿಗೆ ಆತ್ಮಲಾಭವು ಆಗಲಾರದು– ಎಂದೇ ನಮ್ಮ ನಂಬಿಕೆ. ವೇದಾಧಿಕಾರವು ಯಾರಿಗೆ ಇದೆ, ಯಾರಿಗೆ ಇಲ್ಲ– ಎಂಬ

ಚರ್ಚೆಯನ್ನು ನಾವು ಮಾಡುತ್ತಿರುವೆವು. ಸಂಸ್ಕೃತಭಾಷೆಯ ಪರಿಚಯವಿಲ್ಲದೆ ಅಧ್ಯಾತ್ಮವಿದ್ಯೆಯು ದಕ್ಕಲಾರದೆಂದು ಹೇಳುತ್ತಿರುವೆವು. ಶ್ರುತಿ, ಸ್ಮೃತಿ, ಪುರಾಣ– ಇವುಗಳನ್ನು ಓದುವದಕ್ಕೂ ಶ್ರವಣಮಾಡುವದಕ್ಕೂ ಯೋಗ್ಯತೆಯಿಲ್ಲದವರಿಗೆ ಆತ್ಮನು ಸಿಕ್ಕಲಾರನು ಎಂದೇ ನಂಬಿರುವೆವು. ಯಾರು ಸಭೆಗಳಲ್ಲಿ ವಿದ್ವತ್ತಾಪರಿಪೂರ್ಣವಾದ ಭಾಷಣಗಳನ್ನು ಮಾಡಬಲ್ಲರೋ, ಯಾರು ವೇದಾಂತವಚನಗಳನ್ನೂ ಗೀತಾವಾಕ್ಯಗಳನ್ನೂ ಅಧ್ಯಾಯ, ಖಂಡ, ಶ್ಲೋಕ– ಮುಂತಾದ ವಿಭಾಗಗಳನ್ನು ಗೊತ್ತಾಗಿ ತಿಳಿಸಿ ಸರಿಯಾಗಿ ಉದಾಹರಿಸಬಲ್ಲರೋ, ಯಾರು ಜನಮನೋರಂಜನೆಯನ್ನು ಮಾಡುವ ಕಥೆಗಳನ್ನೂ ದೃಷ್ಟಾಂತಗಳನ್ನೂ ಕೊಟ್ಟು ವೇದಾಂತ ವಿಚಾರಗಳ ತಿಳಿವಳಿಕೆಯ ಪ್ರೌಢಿಮೆಯನ್ನು ತೋರಿಸಿಕೊಳ್ಳಬಲ್ಲರೋ ಅವರಿಗೆ ಮಾತ್ರ ಪರಮೇಶ್ವರನು ದೊರಕುತ್ತಾನೆ ಎಂದು ನಮ್ಮಗಳ ಭಾವನೆ. ಸಾಮಾನ್ಯ ತಿಳಿವಳಿಕೆಯ ಸ್ತ್ರೀಯರಿಗೂ ಹುಡುಗರಿಗೂ ಕಡಿಮೆಯ ಜಾತಿಯವರಿಗೂ ಆತ್ಮಪ್ರಾಪ್ತಿಯಾಗಲಾರದೆಂದೇ ನಮ್ಮಗಳ ನಿಶ್ಚಯ.

ಆದರೆ ಈ ಭಾವನೆಯಲ್ಲಿ ಒಂದಿಷ್ಟೂ ಹುರುಳಿಲ್ಲವೆಂದು ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ವಿಷಯವನ್ನು ತಿಳಿಸುವದಕ್ಕೆ ಅಧ್ಯಾತ್ಮಗ್ರಂಥಗಳ ಪಠನ, ಅಧ್ಯಾತ್ಮವಿಷಯಗಳ ಚಿಂತನ, ಅಧ್ಯಾತ್ಮವಿಚಾರಗಳನ್ನು ಸಾಧಕರು ಕಲೆತು ಒಬ್ಬರಿಗೊಬ್ಬರು ಹೇಳುವದು– ಇವೆಲ್ಲ ಸಪ್ರಯೋಜನವೆಂಬುದರಲ್ಲಿ ಸಂಶಯವಿಲ್ಲ. ಆದರೆ ಆತ್ಮಪ್ರಾಪ್ತಿಗೆ ಇವೇ ನೇರಾದ ಕಾರಣವಲ್ಲ. ಇವುಗಳಲ್ಲಿ ಯಾವದೊಂದೂ ಇದ್ದರೂ ಇಲ್ಲದಿದ್ದರೂ ಅವಶ್ಯವಾಗಿರಲೇಬೇಕಾದ ಸಂಭವವಿದೆ. **ಅದು ಯಾವದೆಂದರೆ ಪರಮಾತ್ಮನೇ ನಮಗೆ ಬೇಕೆಂಬ ತೀವ್ರವಾದ ಹಂಬಲಿಕೆ.** ಮನುಷ್ಯನು ಯಾವದು ತನಗೆ ಅವಶ್ಯವಾಗಿ ದೊರೆಯಬೇಕೆಂದು ಹಂಬಲಿಸುತ್ತಿರುವನೋ, ಅವನಿಗೇ ಅದು ದೊರೆಯುವದು ಸ್ವಾಭಾವಿಕವಾಗಿದೆ. ಏಕೆಂದರೆ ಯಾವನಿಗೆ ಏತರಲ್ಲಿ ಆಶೆಯು ಬಲವಾಗಿರುವದೋ ಅವನು ಅದನ್ನು ಪಡೆದುಕೊಳ್ಳುವದಕ್ಕಾಗಿ ಹೆಚ್ಚಿನ ಪ್ರಯತ್ನವನ್ನು ಮಾಡುತ್ತಾನೆ. ನಮಗೆ ಬೇಕಾಗಿರುವ ಅನೇಕ ವಸ್ತುಗಳಲ್ಲಿ ಆತ್ಮನೂ ಒಬ್ಬನಾಗಿದ್ದರೆ ನಮಗೆ ಆತ್ಮಪ್ರಾಪ್ತಿಯು ಆಗಿಯೇತೀರುವದೆಂದು ಹೇಳುವದಕ್ಕಿಲ್ಲ. ಏಕೆಂದರೆ ಆಗ ನಾವು ಅದಕ್ಕಾಗಿಯೇ ವಿಶೇಷಪ್ರಯತ್ನವನ್ನು ಮಾಡುತ್ತೇವೆಂಬ ಭರವಸೆಯಿರುವದಿಲ್ಲ. ಆದರೆ ನಮಗೆ ಪರಮಾತ್ಮನೇ ಬೇಕು, ಮತ್ತೇನೂ ಬೇಡ– ಎಂಬ ಬಲವಾದ ಆಶೆಯಿದ್ದರೆ ಆಗ ನಾವು ಆತ್ಮಪ್ರಾಪ್ತಿಗೆ ಅಡ್ಡಿಯಾದದ್ದು ಯಾವದಿದ್ದರೂ ಅದನ್ನು ಕೈಬಿಟ್ಟೇ ಆತ್ಮಪ್ರಾಪ್ತಿಗಾಗಿ ಪ್ರಯತ್ನಮಾಡುವದು ಖಂಡಿತ. ಆಗ ನಮಗೆ ಆತ್ಮನು ಸಿಕ್ಕುವದೂ ನಿಶ್ಚಿತ.

ಆದರೆ ಪರಮೇಶ್ವರನು ನಮ್ಮ ಆತ್ಮನೇ ಆಗಿರುತ್ತಾನೆ; ಆದ್ದರಿಂದ ಆತ್ಮನನ್ನು ಜ್ಞಾನಮಾತ್ರದಿಂದಲೇ ಪಡೆದುಕೊಳ್ಳಬಹುದು– ಎಂದಲ್ಲವೆ, ವೇದಾಂತಿಗಳ ಹೇಳಿಕೆ?

ಇದು ನಿಜವಾದರೆ ನಮ್ಮ ಆತ್ಮನೇ ಆಗಿರುವ ಪರಮೇಶ್ವರನನ್ನು ಅರಿತುಕೊಳ್ಳುವದಕ್ಕೆ ಯಾವ ಸಾಧನವಾದರೂ ಏತಕ್ಕೆ ಬೇಕು?- ಎಂದು ಕೆಲವರು ಆಕ್ಷೇಪಿಸುವದುಂಟು. ಇದಕ್ಕೆ ಉತ್ತರವನ್ನು ಕಂಡುಕೊಳ್ಳುವ ಮುಂಚೆ ಆತ್ಮಜ್ಞಾನವೆಂದರೇನೆಂಬುದನ್ನು ನಾವು ತಿಳಿದುಕೊಂಡಿರುವದು ಅವಶ್ಯವಾಗುತ್ತದೆ. ಜ್ಞಾನವೆಂಬ ಶಬ್ದವನ್ನು ಸಾಮಾನ್ಯವಾಗಿ ಎರಡು ಅರ್ಥಗಳಲ್ಲಿ ಬಳಸುತ್ತಾರೆ. ಜ್ಞಾನವೆಂದರೆ ಬುದ್ಧಿಯಿಂದ ಅರಿತುಕೊಳ್ಳುವದು ಎಂಬುದು ಒಂದು ಅರ್ಥ. ಬುದ್ಧಿಯಿಂದ ಯಾವದನ್ನು ಅರಿತುಕೊಳ್ಳಬೇಕಾಗಿರುವದೋ ಅದರ ಪ್ರತ್ಯಯವೊಂದನ್ನು ಏರ್ಪಡಿಸಿಕೊಳ್ಳಬೇಕಾಗುವದು. ಉದಾಹರಣೆಗೆ "ಬೆಂಕಿಯು ಬಿಸಿಯಾಗಿರುತ್ತದೆ" ಎಂಬ ವಾಕ್ಯಕ್ಕೆ ಅರ್ಥವನ್ನು ಮಾಡಿಕೊಳ್ಳುವಾಗ ಬೆಂಕಿಯೆಂಬುದು ಒಂದು ಸುಡುವ ವಸ್ತು ಎಂಬ ಪ್ರತ್ಯಯವು ನಮಗಿರಬೇಕು; ಬಿಸಿ ಎಂಬುದು ಬೆಂಕಿಯ ಧರ್ಮವು ಎಂಬ ಪ್ರತ್ಯಯವೂ ನಮಗೆ ಇರಬೇಕು. ಆಗ ವಾಕ್ಯಕ್ಕೆ ಬೆಂಕಿ ಮತ್ತು ಬಿಸಿ ಇವುಗಳಿಗೆ ಧರ್ಮಿಭಾವವಿರುತ್ತದೆ ಎಂಬ ಅರಿವು ನಮಗೆ ಆಗುತ್ತದೆ. ಇದರಂತೆ "ಹೊಟ್ಟೆ ನೋವೆಂಬುದು ದುರಾಹಾರಾದಿಗಳಿಂದ ಆಗುವ ಒಂದಾನೊಂದು ವೇದನೆಯು"- ಎಂಬ ವಾಕ್ಯಕ್ಕೆ ನಾವು ಆಹಾರ, ವೇದನೆ, ಹೊಟ್ಟೆ- ಎಂಬ ಪದಾರ್ಥಗಳ ಪ್ರತ್ಯಯಗಳನ್ನು ಮಾಡಿಕೊಂಡು ಒಂದಕ್ಕೊಂದನ್ನು ಸಂಬಂಧಿಸಿಕೊಳ್ಳಬೇಕಾಗುವದು. ಹೀಗೆ ಪ್ರತ್ಯಯಗಳ ಸಂಬಂಧವನ್ನು ಮಾಡಿಕೊಂಡು ನಮಗೆ ಆಗಿರುವ ಎಷ್ಟೋ ಅರಿವುಗಳು ಪರೋಕ್ಷವಾಗಿಯೇ ಇರುತ್ತವೆ. ಆದರೆ "ಕತ್ತಲೆಯಲ್ಲಿ ಏನೋ ಥಳಗುಟ್ಟುತ್ತಿತ್ತು; ಅದನ್ನು ಮುಟ್ಟಿದಾಗ ಕೈಚುರುಕ್ಕೆಂದು ನನಗೆ ಅದು ಬೆಂಕಿ ಎಂಬ ಅರಿವಾಯಿತು" ಎನ್ನುವಾಗಲೂ "ನಿನ್ನೆಯ ದಿನ ಹಲಸಿನಹಣ್ಣನ್ನು ತಿಂದದ್ದರಿಂದ ಈಗ ನನಗೆ ಹೊಟ್ಟೆನೋವಾಗಿದೆ" ಎನ್ನುವಾಗಲೂ ನಮಗೆ ಆಗಿರುವ ಬೆಂಕಿಯ ಮತ್ತು ಹೊಟ್ಟೆನೋವಿನ ಅರಿವು ಇಂಥ ಪ್ರತ್ಯಯಗಳ ದ್ವಾರದಿಂದ ಆದದ್ದಲ್ಲ. ಆಯಾ ಪದಾರ್ಥಗಳನ್ನು ನಾವು ನೇರಾಗಿಯೇ ಅನುಭವಿಸುತ್ತೇವೆ. ಅಲ್ಲವೆ? ಈ ಬಗೆಯ ನೇರಾದ ಅನುಭವವನ್ನೂ ಜ್ಞಾನವೆಂದೇ ಕರೆಯುತ್ತಾರೆ. ಆತ್ಮಜ್ಞಾನ, ಆತ್ಮಲಾಭ- ಎಂಬ ಶಬ್ದಗಳಿಗೆ ಈ ನೇರಾದ ಅರಿವೇ ಅರ್ಥ. ಇದು ಬರಿಯ ಶಬ್ದಗಳಿಂದಾಗುವ ಪ್ರತ್ಯಯವಿಶೇಷವಲ್ಲ, ಇದೊಂದು ಅನುಭವವಿಶೇಷ. ಇದನ್ನು "ವಿಜ್ಞಾನ"ವೆಂಬ ಹೆಸರಿನಿಂದ ವೇದಾಂತಿಗಳು ಕರೆಯುತ್ತಾರೆ.

ಪರಮೇಶ್ವರನು ನಮ್ಮ ಆತ್ಮನೇ ಆಗಿರುತ್ತಿದ್ದರೂ ಅವನ ಅರಿವು ನಮಗೆ ಪ್ರವಚನಾದಿಗಳಿಂದ ಏತಕ್ಕಾಗುವದಿಲ್ಲವೆಂಬುದನ್ನು ನಾವು ಈಗ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದಾಗಿದೆ. ನಮಗೆ ಪುಸ್ತಕಗಳಿಂದ ಶಬ್ದಗಳ ಜ್ಞಾನವಾಗುತ್ತದೆ. ಆ ಶಬ್ದಗಳು ಒಂದೊಂದು ಪ್ರತ್ಯಯವನ್ನು ನಮ್ಮ ಅಂತಃಕರಣದಲ್ಲಿ ಎಬ್ಬಿಸುತ್ತವೆ. ವಾಕ್ಯಗಳಿಂದ ನಮಗೆ ಪ್ರತ್ಯಯಗಳ ಸಂಸರ್ಗವು ಗೊತ್ತಾಗುತ್ತದೆ. ಆದರೆ ಆತ್ಮನು ಬೆಂಕಿ, ಬಿಸಿ, ಹೊಟ್ಟೆನೋವು, ಹಲಸಿನಹಣ್ಣು- ಮುಂತಾದವುಗಳಂಥ ಒಂದು ಹೊರಗಿನ ವಸ್ತುವಲ್ಲ.

ನಮಗಿಂತ ಹೊರಗಿರುವ ಅನಾತ್ಮವಸ್ತುಗಳನ್ನು ಪ್ರತ್ಯಯಗಳ ಮೂಲಕ ಅರಿತುಕೊಳ್ಳುವದಕ್ಕೆ ಬರುತ್ತದೆ. ಆದರೆ ನಮ್ಮ ಸ್ವರೂಪವೇ ಆಗಿರುವ ಆತ್ಮನನ್ನು ಯಾವ ಪ್ರತ್ಯಯವೂ ಹಿಡಿದುಕೊಳ್ಳಲಾರದು. ಕತ್ತರಿಯೂ ಇಕ್ಕಳವೂ ತಮಗಿಂತ ಬೇರೆಯಾದ ಪದಾರ್ಥಗಳನ್ನು ಹಿಡಿಯುವದಕ್ಕೆ ಉಪಯೋಗವಾಗುತ್ತವೆ; ಆದರೆ ಅವು ತಮ್ಮನ್ನು ತಾವೇ ಹಿಡಿಯಲಾರವು. ಅಲ್ಲವೆ? ಇದರಂತೆಯೇ ಪ್ರತ್ಯಯಗಳು ತಮಗೂ ಆತ್ಮನಾಗಿರುವ ಈ ಪರಮಾತ್ಮನನ್ನು ಗ್ರಹಿಸಲಾರವು. ಈ ಕಾರಣದಿಂದಲೇ ಶ್ರುತಿಯು "ಪರಮಾತ್ಮನನ್ನು ವಾಕ್ಕು ಮುಂತಾದ ಕರಣಗಳೂ ಮನಸ್ಸೂ ಗ್ರಹಿಸಲಾರದೆ ಹಿಂತಿರುಗುತ್ತವೆ" ಎಂದು ಹೇಳುತ್ತವೆ.

ಹಾಗಾದರೆ ಈ ಪರಮಾತ್ಮನನ್ನು ಕಂಡುಕೊಳ್ಳುವದಾದರೂ ಹೇಗೆ? ವಾಙ್ಮನಸ್ಸುಗಳಿಗೂ ನಿಲುಕದ ವಸ್ತುವು ಏತಕ್ಕೂ ನಿಲುಕುವದಲ್ಲವೆಂದೇ ಆಯಿತಲ್ಲ!- ಎಂಬ ಯೋಚನೆಯು ಕೆಲವರಿಗೆ ಎದ್ದುಕೊಳ್ಳಬಹುದು. ಇದಕ್ಕೆ ಬಲ್ಲವರು ಹೇಳುವದೇನೆಂದರೆ ಪರಮಾತ್ಮನನ್ನು ನೀವು ಹೊಸದಾಗಿ ಸೇರಬೇಕಾದದ್ದು ಇಲ್ಲ; ಅವನನ್ನು ಹೊಸದಾಗಿ ಅರಿತು ಕೊಳ್ಳಬೇಕಾದದ್ದೂ ಇಲ್ಲ. ಅವನು ಈಗಲೇ, ಇಲ್ಲಿಯೇ, ನಿಮ್ಮ ಆತ್ಮನಿಗೂ ಆತ್ಮನಾಗಿ ಇದ್ದುಕೊಂಡುಬಿಟ್ಟಿರುತ್ತಾನೆ. ಆದರೆ ನಿಮಗೆ ಆತನ ಕಡೆಗೆ ತಿರುಗುವದಕ್ಕೆ ಹಲವು ಅಡ್ಡಿಗಳು ಇರುತ್ತವೆ. ಇಷ್ಟೇ ಅಲ್ಲ. ನಿಮಗೆ ಪರಮಾತ್ಮನು ಬೇಕೆಂಬ ಆಶೆಯೂ ಕಡಿಮೆಯಾಗುತ್ತಾ ಆಗುತ್ತಾ ಹೊರಗಿನ ಎಷ್ಟೋ ಅನಿತ್ಯವಾದ, ಸುಖಾಭಾಸವನ್ನು ಕೊಡುವ, ವಿಷಯಗಳ ಕಾಮವು ಹೆಚ್ಚಿರುತ್ತದೆ. ಈ ಕಾಮಗಳ ಪಟ್ಟು ನಿಮ್ಮನ್ನು ಹಿಡಿದುಕೊಂಡಿರುವವರೆಗೂ ನಿಮಗೆ ಪರಮಾತ್ಮನ ಅರಿವು ಉಂಟಾಗಲಾರದು. ದೊರೆಮಗನಾದರೂ ಕನಸಿನಲ್ಲಿ ತಿರುಕರವನಾಗಿರಬಹುದಷ್ಟೆ. ಆಗ ಅವನು ಅಲ್ಲಲ್ಲಿ ಭಿಕ್ಷೆಯಿಂದ ಸಿಕ್ಕುವ ತಂಗಳುರೊಟ್ಟಿಯ ತುಣುಕುಗಳನ್ನು ಆಶೆಯಿಂದ ಆರಿಸಿಕೊಂಡು, ಯಾರಾದರೂ ಅದನ್ನು ಕದ್ದೊಯ್ದಾರೆಂಬ ಅಂಜಿಕೆಯಿಂದ ಜೋಪಾನವಾಗಿ ಬಚ್ಚಿಡುವದಕ್ಕೆ ಯತ್ನಿಸುತ್ತಿರಬಹುದು. ಅಷ್ಟೇ ಅಲ್ಲ. ಅವನಿಗೆ ಅಲ್ಲಿ ಹಸಿವುಬಾಯಾರಿಕೆಗಳ ಕಾಟವು ಬಲವಾಗಿ ಮತ್ತೊಬ್ಬ ತಿರುಕನ ಭಿಕ್ಷೆಯ ರೊಟ್ಟಿಯತುಂಡುಗಳನ್ನು ಕಳುವದಕ್ಕೆ ಕೂಡ ಪ್ರಯತ್ನವನ್ನು ಮಾಡಬಹುದು. ಅಲ್ಲವೆ? ಹಾಗೆಯೇ ಪ್ರಕೃತವಿಷಯದಲ್ಲಿಯೂ ಆಗಿರುತ್ತದೆ. ಪರಮಾತ್ಮನು ಈಗಲೇ, ಇಲ್ಲಿಯೇ, ನಮ್ಮ ಆತ್ಮನಾಗಿರುತ್ತಾನೆ. ಆದರೇನು? ನಮಗೆ ಆ ವಸ್ತುಸ್ಥಿತಿಯು ಯಾವ ಪ್ರಯೋಜನಕ್ಕೂ ಬರುವಂತಿಲ್ಲ. ನಾವು ಒಬ್ಬೊಬ್ಬರೂ ಈ ತತ್ತ್ವವನ್ನು ನಾವುನಾವೇ ಮನಗಾಣಬೇಕಾಗಿರುತ್ತದೆ. ಪರಮಾರ್ಥವಾಗಿ ನೋಡಿದರೆ ಇರುವದೆಲ್ಲ ಆತನೊಬ್ಬನೇ ಆಗಿದ್ದರೂ ನಮಗೆ ಅನಾದ್ಯಜ್ಞಾನದ ನಿದ್ರೆಯಲ್ಲಿ ಬಗೆಬಗೆಯ ಕನಸುಗಳು ಕಾಣುತ್ತಿರುತ್ತವೆ. ನಾವು ಆತನ ಮಕ್ಕಳೇ ಆಗಿದ್ದರೂ, ಆತನು ನಮ್ಮ ಮೂಲವೇ, ನಮ್ಮ ತಿರುಳಾಗಿರುವ ಆತ್ಮನೇ, ಆಗಿದ್ದರೂ ಅವನನ್ನು ಸಂಪೂರ್ಣವಾಗಿ

ಮರೆತು ಈ ಅಜ್ಞಾನದ ನಿದ್ರೆಯಲ್ಲಿ ತೋರಿಕೆಯ ವಿಷಯಗಳಿಗೆ ದಾಸರಾಗಿ, ನಮ್ಮನ್ನು ಅಲ್ಲಿ ಬಂಧಿಸಿಟ್ಟಿರುವ ಆಶೆಯ ಸೂತ್ರಗಳಿಂದ ಬಿಡಿಸಿಕೊಳ್ಳಲಾರದೆ ಇರುತ್ತೇವೆ. ಆ ಅನಾದಿ ಸ್ವಪ್ನದಲ್ಲಿ ನಾವು ಮಾಡಬಾರದ ಕೃತ್ಯಗಳನ್ನು ಮಾಡುತ್ತಿದೇವೆ, ಆಡಬಾರದ ಮಾತುಗಳನ್ನು ಆಡುತ್ತಿರುತ್ತೇವೆ, ಮನಸ್ಸಿಗೆ ಬರಬಾರದ ಆಲೋಚನೆಗಳನ್ನೂ ಭಾವಗಳನ್ನೂ ತಂದುಕೊಳ್ಳುತ್ತಿದೇವೆ!

ಈಗ ನಾವು ಮಾಡಬೇಕಾದದ್ದೇನು? ಮೊಟ್ಟಮೊದಲು ಶ್ರುತ್ಯಾಚಾರ್ಯರುಗಳು ನೆನಪಿಗೆ ಕೊಡುವ ಶುಭತತ್ತ್ವವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಶ್ರದ್ಧಾತಾತ್ಪರ್ಯಗಳಿಂದ ಆ ಪರಮಾತ್ಮನನ್ನು ಮುಟ್ಟುವ ದೃಢಸಂಕಲ್ಪವನ್ನು ಮಾಡಬೇಕು. ಅದಕ್ಕೆ ಪ್ರತಿಕೂಲವಾದ ಆಚಾರವಿಚಾರಗಳನ್ನು ಕೂಡಲೆ ನಿಲ್ಲಿಸಿಬಿಡಬೇಕು. ದೊಡ್ಡವರು ಉಪದೇಶಿಸುವ ನಡೆನುಡಿಗಳನ್ನೂ ಭಾವಗಳನ್ನೂ ಕೈಕೊಳ್ಳಬೇಕು. ಪರಮಾತ್ಮನೇ ನಮಗೆ ಬೇಕೆಂಬ ಹಂಬಲವನ್ನು ದಿನದಿನಕ್ಕೂ ಹೆಚ್ಚಿಸಿಕೊಳ್ಳಬೇಕು. ಕಾಠಕೋಪನಿಷತ್ತಿನಲ್ಲಿರುವ ಈ ವಚನವನ್ನು ಚೆನ್ನಾಗಿ ಮನಸ್ಸಿನಲ್ಲಿ ಮೆಲುಕುಹಾಕಬೇಕು.

**"ಕೆಟ್ಟನಡತೆಯನ್ನು ಬಿಡದೆ ಇರುವವನೂ, ಶಾಂತನಲ್ಲದವನೂ, ಸಮಾಹಿತನಲ್ಲದವನೂ ಮನಶ್ಶಾಂತಿಯಿಲ್ಲದವನೂ ಪ್ರಜ್ಞಾನದಿಂದ ಆತನನ್ನು ಪಡೆದುಕೊಳ್ಳಲಾರನು"**–ಕಠ. 1–1–24

ಪರಮಾತ್ಮನ ಹಂಬಲು ನಮಗೆ ಹೆಚ್ಚುತ್ತಿರುವದಕ್ಕೆ ಗುರುತೇನು? ಅಜ್ಞಾನದಿಂದ ನಾವು ನಮ್ಮ ಆತ್ಮನೆಂದು ಸಾಕಿಕೊಂಡಿರುವ ಈ ದೇಹವನ್ನು ನೆಪಮಾಡಿಕೊಂಡು ನಾವು ಮಾಡುತ್ತಿರುವ ಅಕೃತ್ಯಗಳನ್ನು ನಿಲ್ಲಿಸಿದ್ದು ಒಂದು ಗುರುತು; ಕ್ಷಣಿಕವಾದ ಸುಖಾಭಾಸಗಳನ್ನು ಇಣಿಕಿನೋಡುವ ಇಂದ್ರಿಯ ಲೌಲ್ಯವು ನಿಂತದ್ದು ಇನ್ನೊಂದು ಗುರುತು; ಘಳಿಗೆಗೊಂದು ಕ್ಷಣಕ್ಕೊಂದು ವೃತ್ತಿಯನ್ನು ತಂದುಕೊಂಡು ತಳಮಳ ಗೊಳ್ಳುತ್ತಿರುವ ಮನಸ್ಸು ಹೊರಮುಖವಾಗಿರುವದನ್ನು ಬಿಟ್ಟು ಹಿಂತಿರುಗಿ ಸುಮ್ಮನಾಗುವದು ಮತ್ತೊಂದು ಗುರುತು; ಇವೆಲ್ಲಕ್ಕೂ ಮಿಗಿಲಾಗಿ ಒಳಗೇ ಇದ್ದುಕೊಂಡು ಆತ್ಮನನ್ನು ಸೇರುವದೆಂಬುದೊಂದಲ್ಲದೆ ಮತ್ತೆ ಯಾವ ಇಚ್ಛೆಯೂ ಮನಸ್ಸಿನಲ್ಲಿ ಎಂದಿಗೂ ಮಿಂಚದೆ ಇರುವದು ಮುಖ್ಯವಾದ ಗುರುತು.

ಪರಮಾತ್ಮನ ಈ ಹಂಬಲಿಕೆಯು ಹಣ್ಣಾದಾಗ, ಪರಮಾತ್ಮನೇ ನನಗೆ ಬೇಕು ಎಂಬ ಈ ಇಚ್ಛೆಯು ಉತ್ಕಟವಾದಾಗ, ನಾವೂ ಪರಮೇಶ್ವರನಿಗೆ ಬೇಕಾದವರಾಗುವೆವು. ಯಾರು ಪರಮಾತ್ಮನನ್ನೇ ಆರಿಸಿಕೊಳ್ಳುವರೋ, ಯಾರಿಗೆ ಪರಮಾತ್ಮನೊಬ್ಬನೇ ಎಲ್ಲಕ್ಕಿಂತಲೂ ಪ್ರಿಯನಾಗಿರುವನೋ, ಅವರನ್ನು ಪರಮಾತ್ಮನು ಆರಿಸಿಕೊಳ್ಳುವನು, ಅವರೇ ಆ ಪರಮಾತ್ಮನಿಗೆ ಅತ್ಯಂತ ಪ್ರಿಯರಾಗಿರುವರು.

## 3.4. ಸಂಪೂರ್ಣ ಶರಣಾಗತಿಯಿಂದಲೇ ಮುಕ್ತಿ

> **ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥ ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥** – ಭಗವದ್ಗೀತೆ, 18–65, 66

**ನನ್ನಲ್ಲಿಯೇ ಮನಸ್ಸಿಡು, ನನ್ನ ಭಕ್ತನಾಗಿರು, ನನ್ನ ಯಜನವನ್ನೇ ಮಾಡುವವನಾಗಿ ನನ್ನನ್ನೇ ನಮಸ್ಕರಿಸುತ್ತಿರು; ಹೀಗಾದರೆ ನನ್ನನ್ನೇ ಸೇರುವೆಯೆಂದು ಪ್ರತಿಜ್ಞೆಮಾಡುತ್ತೇನೆ, ನೀನು ನನಗೆ ಪ್ರಿಯನಾದವನು. ಎಲ್ಲಾ ಧರ್ಮಗಳನ್ನೂ ಕೈಬಿಟ್ಟು ನನ್ನೊಬ್ಬನನ್ನೇ ಶರಣುಹೊಂದು; ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಬಿಡುಗಡೆಮಾಡಿಸುವೆನು, ಶೋಕಿಸದಿರು.**

ಮಾರ್ಗಶಿರದಲ್ಲಿ ಬರುವ ಗೀತಾಜಯಂತಿಯ ದಿನಕ್ಕೆ ಅನುಸಂಧಾನಕ್ಕೆಂದು ಗೀತೆಯ ಎರಡು ಶ್ಲೋಕಗಳನ್ನು ಈ ಸಾರಿಯ ಸಂದೇಶಕ್ಕೆ ಆರಿಸಿಕೊಂಡಿರುತ್ತೇನೆ. ಭಗವದ್ಗೀತೆಯ ಉಪಸಂಹಾರದಲ್ಲಿರುವ ಈ ಎರಡು ವಾಗ್ದಾನವಾಕ್ಯಗಳಲ್ಲಿ ಆ ಧರ್ಮಗ್ರಂಥದ ಉಪದೇಶದ ಸಾರವೆಲ್ಲವನ್ನು ಸಂಗ್ರಹಿಸಿದೆ ಎಂದು ನಾವು ಭಾವಿಸಬಹುದಾಗಿದೆ.

ಗೀತೆಯ ಉಪದೇಶವನ್ನು ಭಗವಂತನು ಅನುಗ್ರಹಿಸಿದ ಕಾಲದಲ್ಲಿ ಭರತಖಂಡದವರು ಒಂದು ಮಹಾಸಂಕಟಕ್ಕೆ ಒಳಗಾಗಿದ್ದರು. ಕೌರವಪಾಂಡವರ ಅನ್ಯೋನ್ಯಕಲಹದ ನಿಮಿತ್ತದಿಂದ ಈ ದೇಶದ ಜನರೆಲ್ಲರೂ ಒಂದು ಮಹಾಯುದ್ಧದ ಹಾವಳಿಗೆ ತುತ್ತಾಗಿದ್ದರು. ಆಗ್ಗೆ ಧರ್ಮಾಧರ್ಮಗಳ ಹೋರಾಟವು ಉತ್ಕಟವಾದ ಸ್ಥಿತಿಗೆ ಏರಿತ್ತು. ಅಧರ್ಮವೇ ಗೆಲ್ಲುವದೊ, ಏನೊ! ಎಂಬ ಅಂಜಿಕೆಯು ಜನರನ್ನು ತಲ್ಲಣಗೊಳಿಸುತ್ತಿತ್ತು. ಇಂಥ ಸಮಯದಲ್ಲಿ ಭಗವಂತನು ತನ್ನ ಉಪದೇಶದ ಮಹಿಮೆಯಿಂದ ಅರ್ಜುನನಿಗೆ ಕಣ್ಣು ತೆರೆಯುವಂತೆ ಮಾಡಿದನು; ಧರ್ಮಕ್ಕೆ ಜಯವನ್ನು ತಂದುಕೊಟ್ಟನು.

ಮಹಾಭಾರತದ ಯುದ್ಧದ ಕಾಲಕ್ಕೆ ಅಧರ್ಮವು ಹೆಚ್ಚಾಗಿತ್ತು; ಅಸುರ ಸಂಪತ್ತಿನವರೇ ಹೆಚ್ಚಾಗಿದ್ದರು. ಅದರ ಫಲವಾಗಿ ಆಗ ಹನ್ನೊಂದು ಅಕ್ಷೋಹಿಣಿಯ ಸೈನ್ಯವು ನುಚ್ಚುನುರಿಯಾಯಿತು. ಇಂಥ ಕಾಲದಲ್ಲಿಯೂ ಪಾಂಡವರು ಧರ್ಮವನ್ನು ಉಳಿಸಿಕೊಂಡು ಬಂದಿದ್ದರು. ಮಧ್ಯಮಪಾಂಡವನಾದ ಅರ್ಜುನನನ್ನು ನಿಮಿತ್ತಮಾಡಿಕೊಂಡು ಭಗವಂತನು ಪಾಪದ ಫಲದಿಂದ ಪಾರಾಗುವವರಿಗೆ ಸಾಧನವಾಗಿ ಈ ಗೀತೆಯ ಸಂದೇಶವನ್ನು ಕೊಟ್ಟನು. ಈ ಉಪದೇಶವು ಯಾವದಾದರೊಂದು ಗೊತ್ತಾದ ಯುಗಕ್ಕೆ ಅಸಾಧಾರಣವಾಗಿರಲಿಲ್ಲ; ಅಧರ್ಮವು ಯಾವಾಗ ತಲೆದೋರಿದರೂ ಅದರ ಉಪಟಳವನ್ನು ತಪ್ಪಿಸಿಕೊಳ್ಳಬೇಕೆನ್ನುವವರಿಗೆ ಉಪಾಯವನ್ನು ಇದರಲ್ಲಿ ತೋರಿಸಿಕೊಟ್ಟಿರುತ್ತದೆ. ಈಗಿನ ಕಾಲಕ್ಕೆ ಇಡಿಯ ಭೂಮಂಡಲವನ್ನೇ ಅಧರ್ಮವು

ವ್ಯಾಪಿಸಿಕೊಳ್ಳುವ ಅಂಜಿಕೆಯಿದೆ. ಆದ್ದರಿಂದ ಗೀತಾಚಾರ್ಯನ ಈ ಉಪದೇಶವನ್ನು ಮನಸ್ಸಿನಲ್ಲಿ ಹೊರಳಾಡಿಸುವದಕ್ಕೆ ಇದು ಸುಸಮಯವಾಗಿರುತ್ತದೆ.

ಪಾಪಪುಣ್ಯಗಳ ಬೆರಕೆಯಿಂದ ಮನುಷ್ಯಜನ್ಮವು ಪ್ರಾಪ್ತವಾಗಿರುತ್ತದೆ; ಪುಣ್ಯವು ಹೆಚ್ಚಾದರೆ ದೇವತ್ವವೂ ಪಾಪವು ಹೆಚ್ಚಾದರೆ ಅಸುರತ್ವವೂ ಫಲವಾಗುತ್ತದೆ- ಎಂದು ಶಾಸ್ತ್ರಗಳು ಮೊಳಗುತ್ತವೆ. ಈಗಿನ ಕಾಲದಲ್ಲಿ ಮಾನವನಿಗೆ ಪಾಪದ ಬಲವು ಹೆಚ್ಚಾಗಿರುತ್ತದೆ; ಆಸುರಸಂಪತ್ತು ಎಲ್ಲೆಲ್ಲಿಯೂ ತಾಂಡವವಾಡುತ್ತಿದೆ. ಆದ್ದರಿಂದ ಪಾಪಪುಣ್ಯಗಳ ಹೇತು, ಸ್ವರೂಪ, ಕಾರ್ಯ- ಇವುಗಳನ್ನು ಕುರಿತು ನಾವು ಆಲೋಚಿಸಬೇಕು. ಹೀಗಾದರೆ ನಮಗೆ ಪಾಪದಿಂದ ಎಲ್ಲಾ ಬಗೆಯಿಂದಲೂ ಬಿಡುಗಡೆಯಾದೀತು ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಬೇಕು.

ಪಾಪಪುಣ್ಯಗಳು ಮೂರ್ತಿಮಂತವಾಗಿ ನಮಗೆ ಕಾಣಿಸುವದಿಲ್ಲ. ಅವುಗಳ ಕಾರ್ಯದಿಂದಲೇ ಇದು ಪಾಪ, ಇದು ಪುಣ್ಯ- ಎಂದು ಗೊತ್ತುಮಾಡಿಕೊಳ್ಳಬೇಕು. ಭಗವದ್ಗೀತೆಯ ಹದಿನಾರನೆಯ ಅಧ್ಯಾಯದಲ್ಲಿ ದೈವಾಸುರ ಸಂಪತ್ತುಗಳ ವಿಭಾಗವಿದೆ. ಆಸುರಸಂಪತ್ತಿನ ವರ್ಣನೆಯಾದ ಬಳಿಕ ಮೂರು ಮಾತುಗಳಿಂದ ಅದನ್ನು ಸಂಗ್ರಹವಾಗಿ ಭಗವಂತನು ತಿಳಿಸಿರುತ್ತಾನೆ. "ಕಾಮ, ಕ್ರೋಧ, ಲೋಭ- ಈ ಮೂರು ನರಕಕ್ಕೆ ಹೆಬ್ಬಾಗಿಲುಗಳಾಗಿರುತ್ತವೆ; ಅವು ಮನುಷ್ಯನನ್ನು ಹಾಳುಮಾಡುತ್ತವೆ; ಆದ್ದರಿಂದ ಅವು ಮೂರನ್ನೂ ಬಿಟ್ಟುಬಿಡಬೇಕು" ಎಂಬುದು ಆತನ ಉಪದೇಶವು. ಆದ್ದರಿಂದ ಯಾರುಯಾರು ಕಾಮಕ್ರೋಧಲೋಭಗಳನ್ನು ಹೆಚ್ಚಿಸಿಕೊಳ್ಳುವ ಕಾರ್ಯಗಳಲ್ಲಿ ನಿರತರಾಗಿರುವರೋ ಅವರೆಲ್ಲರೂ ಆಸುರಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಿರುತ್ತಾರೆ, ಅವರೆಲ್ಲರೂ ಪಾಪವನ್ನು ರಾಶಿಹಾಕಿಕೊಳ್ಳುತ್ತಿರುತ್ತಾರೆ ಎಂದು ತಿಳಿಯಬೇಕು. ಇದಕ್ಕೆ ಬದಲು ಯಾರುಯಾರು ಔದಾರ್ಯವನ್ನೂ ಶಾಂತಿಯನ್ನೂ ವೈರಾಗ್ಯವನ್ನೂ ಹೆಚ್ಚಿಸುವ ಕಾರ್ಯಗಳಲ್ಲಿ ನಿರತರಾಗಿರುವರೋ ಅವರೆಲ್ಲರೂ ದೈವಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಿರುತ್ತಾರೆ, ಅವರೆಲ್ಲರೂ ಪುಣ್ಯವನ್ನು ರಾಶಿಹಾಕಿಕೊಳ್ಳುತ್ತಿರುತ್ತಾರೆ- ಎಂದು ಅರ್ಥಾತ್ ಹೇಳಿದಂತೆಯೇ ಆಯಿತು.

ಈಗಿನ ಕಾಲಕ್ಕೆ ಮನುಷ್ಯನಿಗೆ ಭೌತಿಕವಿಜ್ಞಾನದ ತಿಳಿವಳಿಕೆಯು ಹೆಚ್ಚಿರುತ್ತದೆ. ಆದರೆ ಅವನು ಆ ಜ್ಞಾನವನ್ನು ತನ್ನ ಭೋಗಕ್ಕೇ ಉಪಯೋಗಿಸಿಕೊಳ್ಳುತ್ತಿದಾನೆ. ಅವನ ಕಾಮಕ್ರೋಧಲೋಭಗಳು ಹಿಡಿಸದಷ್ಟು ಮಿತಿಮೀರಿರುತ್ತವೆ. ವ್ಯಕ್ತಿಗಳಂತೆ ಜನಾಂಗಗಳೂ ಈ ಕಾಮಕ್ರೋಧಲೋಭಗಳನ್ನು ಬೆಳೆಯಿಸಿಕೊಳ್ಳುವ ಕಾರ್ಯದಲ್ಲಿ ನಿರತವಾಗಿರುತ್ತವೆ. ಎಲ್ಲರೂ ಹೊಸಹೊಸ ಯಂತ್ರಗಳನ್ನು ಕಂಡುಹಿಡಿದುಕೊಂಡು ಭೋಗಸಾಮಗ್ರಿಗಳನ್ನು ರಾಶಿಹಾಕಿಕೊಳ್ಳಬೇಕೆಂದು ಹವಣಿಸುತ್ತಿದಾರೆ; ಅವುಗಳನ್ನು ಮತ್ತೊಬ್ಬರಿಗೆ ಮಾರಿ ಹಣದ ರಾಶಿಯನ್ನು ಹಾಕಿಕೊಳ್ಳಬೇಕೆಂದು ಹವಣಿಸುತ್ತಿದಾರೆ. ಮನುಷ್ಯನ ಆಶೆಗೆ ಇಡಿಯ ಭೂಮಂಡಲವೇ ಆದರೂ ಸಾಲದೆನಿಸಿದೆ. ಈ ಕಾಮವು ಎಲ್ಲರಿಗೂ ಹುಟ್ಟಿರುವದರಿಂದ

ಒಬ್ಬರ ಆಶೆಗೆ ಒಬ್ಬರು ಅಡ್ಡಿಯಾಗಿ ಎಲ್ಲರೂ ಕ್ರೋಧಪರವಶರಾಗುತ್ತಿದಾರೆ. ತಮಗಿರುವ ಧನ, ಅಧಿಕಾರ, ಸುಖಜೀವನ- ಮುಂತಾದವು ಮತ್ತೊಬ್ಬರಿಗೆ ಇರಬಾರದೆಂಬ ಲೋಭದಿಂದ ಎಲ್ಲರೂ ಒಬ್ಬರನ್ನೊಬ್ಬರು ವಂಚಿಸತೊಡಗಿರುತ್ತಾರೆ. ಈ ವಂಚನೆಯು ಸಾಗದಿದ್ದರೆ ಕ್ರೋಧವು ಹೊರಕ್ಕೆ ಭುಗಿಲೆಂದು ಏಳುತ್ತದೆ; ಎಲ್ಲರಿಗೂ ಪ್ರಾಣಾಂತವಾದ ದ್ವೇಷವೂ ಕಲಹವೂ ಏರ್ಪಡುತ್ತದೆ; ಜಗತ್ಪ್ರಲಯಕ್ಕೆ ಕಾರಣವಾದ ಯುದ್ಧಕ್ಕೆ ಎಲ್ಲರೂ ಹವಣಿಸುತ್ತಾರೆ. ಇದೇ ಪಾಪದ ಪ್ರವೃತ್ತಿಯು, ಇದೇ ಆಸುರಸಂಪತ್ತಿನ ವಿಲಾಸವು.

ಭೂಲೋಕದ ಜೀವನವೆಂಬುದು ನಮಗೆ ಪಾಪದ ಫಲವನ್ನೂ ಪುಣ್ಯದ ಫಲವನ್ನೂ ಕಲಿಸಿಕೊಡುವ ಒಂದು ದೊಡ್ಡ ಗುರುಕುಲವಾಗಿರುತ್ತದೆ. ಇಲ್ಲಿ ಈ ಪಾಠವನ್ನು ಸರಿಯಾಗಿ ಕಲಿತುಕೊಂಡವರು ಪಾಪದ ಮಾರ್ಗವನ್ನು ಬಿಟ್ಟು ಪುಣ್ಯದ ಹಾದಿಯನ್ನು ಹಿಡಿಯುತ್ತಾರೆ. ಕ್ರಮಕ್ರಮವಾಗಿ ಪರಮಪುರುಷಾರ್ಥವಾದ ನಿತ್ಯಾನಂದವನ್ನು ಪಡೆದುಕೊಳ್ಳುತ್ತಾರೆ; ಅದನ್ನು ಕಲಿತುಕೊಳ್ಳದೆ ಇರುವವರು ನಿತ್ಯದುಃಖವನ್ನು ಪಡೆಯುತ್ತಾರೆ. ಅನಾದಿಕಾಲದಿಂದಲೂ ಬೇರೆಬೇರೆಯ ಜನಾಂಗಗಳು ಈ ಪಾಪಪುಣ್ಯಗಳ ಚಕ್ರಕ್ಕೆ ಸಿಕ್ಕಿಕೊಂಡಿರುತ್ತಾರೆ. ಅವರಲ್ಲಿ ಕೆಲವರು ಪಾಪಪುಣ್ಯಗಳ ಮರ್ಮವನ್ನು ತಿಳಿದುಕೊಂಡು ಪಾರಾಗಿರುತ್ತಾರೆ; ಕೆಲವರು ಇದನ್ನು ತಿಳಿದುಕೊಳ್ಳಲೊಲ್ಲದೆ ದುಃಖಕ್ಕೆ ಸಿಕ್ಕಿ ನರಳಿರುತ್ತಾರೆ. ಆದ್ದರಿಂದ ಈಗ ನಾವು ಚಿತ್ತವಿಟ್ಟು ನೋಡಿ ಸರಿಯಾದ ಹಾದಿಯನ್ನು ಆರಿಸಿಕೊಳ್ಳಬೇಕು. ಈಗ್ಗೆ ಭೂಲೋಕದಲ್ಲಿ ಅಜ್ಞಾನದ ಅಂಧಕಾರವು ಮುಸುಕಿಕೊಂಡಿರುತ್ತದೆ. ನಮ್ಮ ಕಾಮವು ದಿನದಿನಕ್ಕೂ ಹೆಚ್ಚುತ್ತಲೇ ಇದೆ. ಸರ್ವಂ ಭಕ್ಷಯಾಮಿ, ಸಾಗರಂ ಭಕ್ಷಯಾಮಿ- ಎಂದು ನಾವು ಎಷ್ಟು ಸಂಪಾದನೆಯಾದರೂ ತೃಪ್ತಿಯಿಲ್ಲದೆ ಇಡಿಯ ಭೂಮಂಡಲವನ್ನೇ ಚಾಪೆಯಂತೆ ಸುರುಳಿ ಸುತ್ತಿ ಕಂಕುಳಲ್ಲಿಟ್ಟುಕೊಳ್ಳಬೇಕೆಂಬ ಹಿರಣ್ಯಾಕ್ಷರಾಗುತ್ತಿದೇವೆ! ನಮ್ಮ ಕ್ರೋಧಲೋಭಗಳು ಮಿತಿಮೀರುತ್ತಿವೆ. ಆದ್ದರಿಂದ ಆಸುರನೀತಿಯಲ್ಲಿ ಹೀಗೆಯೇ ಮುಂದುವರಿದು ಹಾಳಾಗುವದೊ, ಅಥವಾ ದೈವಸಂಪತ್ತಿನ ಮಾರ್ಗವನ್ನು ತಿಳಿದುಕೊಂಡು ಬದುಕುವದೊ? ಇದನ್ನು ನಾವು ಮೊದಲು ಆಲೋಚಿಸಬೇಕು.

ಪಾಪಪುಣ್ಯಗಳ ಸ್ವರೂಪವೂ ಕಾರ್ಯವೂ ನಮಗೆ ತಿಳಿದರೂ ಇವುಗಳು ಬೆಳೆಯುವದಕ್ಕೆ ಕಾರಣವೇನೆಂಬುದನ್ನು ನಾವು ನಿಶ್ಚಯಿಸಿಕೊಂಡ ಹೊರತು ಪಾಪದಿಂದ ಬಿಡುಗಡೆಯನ್ನು ಹೊಂದಿ ಪುಣ್ಯವನ್ನು ಆರಿಸಿಕೊಳ್ಳುವದು ಆಗಲಾರದು. ಸಾಮಾನ್ಯವಾಗಿ ನೋಡಿದರೆ ಸ್ವಾರ್ಥಕ್ಕಾಗಿಯೇ ಹವಣಿಸುವದು ಪಾಪದ ಕಡೆಗೆ ಒಲಿಯುವಂತೆ ಮಾಡುತ್ತದೆ, ಪರಾರ್ಥಕ್ಕಾಗಿ ಹವಣಿಸುವದು ಪುಣ್ಯದ ಕಡೆಗೆ ಒಲಿಯುವಂತೆ ಮಾಡುತ್ತದೆ ಎನ್ನಬಹುದು. ಆದರೆ ಸ್ವಾರ್ಥವೆಂದರೆ ಯಾವದು? ಸ್ವಾರ್ಥದೃಷ್ಟಿಯು ಬೆಳೆಯುವದಕ್ಕೆ ಮೂಲಕಾರಣವು ಯಾವದು? ಇದನ್ನು ಗೊತ್ತುಪಡಿಸಿ ಹೇಳುವದು ಸುಲಭವಲ್ಲ. ಭಗವದ್ಗೀತೆಯ ದೃಷ್ಟಿಯಲ್ಲಿ ಯಾರು ಭಗವಂತನನ್ನು ದ್ವೇಷಿಸುತ್ತಾರೋ ಅವರೇ ಸ್ವಾರ್ಥಪರರಾಗಿರುತ್ತಾರೆ; ಯಾರು

ಭಗವಂತನನ್ನು ಪ್ರೀತಿಸುತ್ತಾರೋ ಅವರೇ ಸರ್ವಭೂತಗಳನ್ನೂ ಪ್ರೀತಿಸುತ್ತಾರಾದ್ದರಿಂದ ದಾನಧರ್ಮಪರೋಪಕಾರಗಳ ಕರ್ಮಗಳಲ್ಲಿ ನಿರತರಾಗುತ್ತಾರೆಂದು ಹೇಳಬಹುದು. ಆದ್ದರಿಂದಲೇ ಭಗವಂತನು ಆಸುರಸಂಪತ್ತನ್ನು ವರ್ಣಿಸುವಾಗ "ಅಸುರರು ನನ್ನನ್ನು ತಮ್ಮ ದೇಹದಲ್ಲಿಯೂ ಪರರ ದೇಹದಲ್ಲಿಯೂ ಪ್ರದ್ವೇಷಮಾಡುತ್ತಾ ಅಸೂಯಾಪರ ರಾಗಿರುತ್ತಾರೆ" ಎಂದು ಹೇಳಿರುತ್ತಾನೆ. ಹಾಗೆ ಭಗವಂತನನ್ನು ದ್ವೇಷಿಸುವ ಕ್ರೂರರನ್ನು, ಆ ನರಾಧಮರನ್ನು, ಆ ಅಮಂಗಲಜನರನ್ನು, ಆಸುರಜನ್ಮದಲ್ಲಿಯೇ ಕೆಡಹುವೆನು, ಹೀಗೆಯೇ ಅವರು ಸಂಸಾರಗಳಲ್ಲಿ ತೊಳಲುತ್ತಿರುವಂತೆ ಮಾಡುವೆನು– ಎಂಬುದು ಭಗವಂತನ ವಾಕ್ಯವು.

ಗೀತೆಯಲ್ಲಿರುವ ಈ ವಾಕ್ಯಕ್ಕೆ ವ್ಯಾಖ್ಯಾನಮಾಡುವಾಗ ಕೆಲವು ತೊಡಕುಗಳು ಕಾಣಿಸಿಕೊಳ್ಳುತ್ತವೆ. ಭಗವಂತನನ್ನು ದ್ವೇಷಮಾಡುವವರನ್ನು ಭಗವಂತನು ಸಂಸಾರದಲ್ಲಿಯೇ ಹಾಕುತ್ತಾನೆ; ಆಸುರಸಂಪತ್ತಿನವರನ್ನು ಮತ್ತೆಮತ್ತೆ ಆಸುರಜನ್ಮಗಳಲ್ಲಿಯೇ ಕೆಡುಹುತ್ತಾನೆ– ಎಂದಿಷ್ಟೇ ವಾಕ್ಯದ ಅರ್ಥವೆಂದಿಟ್ಟುಕೊಂಡರೆ ಭಗವಂತನಲ್ಲಿ ವೈಷಮ್ಯವೂ ನೈರ್ಘೃಣ್ಯವೂ ಇದೆ ಎಂದು ಹೇಳಿದಂತೆ ಆಗುತ್ತದೆ. ಭಗವಂತನು ಮೊದಲು ಕೆಲವರನ್ನು ಆಸುರಸಂಪತ್ತಿನವರನ್ನಾಗಿಯೂ ಮತ್ತೆ ಕೆಲವರನ್ನು ದೈವೀಸಂಪತ್ತಿನವರನ್ನಾಗಿಯೂ ಸೃಜಿಸಿದ ಮೇಲಲ್ಲವೆ, ಅವರು ಆಯಾ ಸ್ವಭಾವಕ್ಕನುಗುಣವಾಗಿ ಆಯಾ ಪುಣ್ಯಾಪಾಪಗಳಲ್ಲಿ ತೊಡಗುವರು? ಆದರೆ ಅವರನ್ನು ಕಾರಣವಿಲ್ಲದೆ ಸುಮ್ಮನೆ ಏತಕ್ಕೆ ಹಾಗೆ ವಿಷಮಸ್ವಭಾವದಿಂದ ಸೃಜಿಸುತ್ತಾನೆ? ಎಂಬುದೊಂದು ತೊಡಕು. ಹಾಗೆ ಮಾಡುವ ಭಗವಂತನು ಜೀವರನ್ನು ಕಾರಣವಿಲ್ಲದೆ ಬೇರೆಬೇರೆಯ ಪ್ರಕಾರದಿಂದ ಸೃಜಿಸುತ್ತಾನಾದ್ದರಿಂದ ಅವನಲ್ಲಿ ವೈಷಮ್ಯವಿದೆ, ಪಕ್ಷಪಾತದೃಷ್ಟಿಯಿದೆ ಎಂಬ ದೋಷವುಂಟಾಗುತ್ತದೆ. ಇದರ ಜೊತೆಗೆ ಪಾಪಿಗಳು ಮಾಡಿದ್ದಕ್ಕೆ ದಂಡನೆಯನ್ನೂ ಪುಣ್ಯವಂತರಿಗೆ ಉತ್ತಮಫಲವನ್ನೂ ಕೊಡುವ ವೈಷಮ್ಯವು ಅವನಲ್ಲಿದೆ ಎಂದಾಗುವದು. ಈ ಲೋಕದಲ್ಲಿ ಬಗೆಬಗೆಯ ದುಃಖಗಳು ಕಾಣಬರುತ್ತವೆ; ಬಡತನ, ಅನಾರೋಗ್ಯ, ಕ್ಷಾಮ ಡಾಮರಗಳು, ಮನೋವ್ಯಥೆ, ಕೊನೆಗೆ ಈ ಶರೀರವನ್ನೂ ಬಂಧುಬಾಂಧವರನ್ನೂ ನಮ್ಮದೆಂದು ನಾವು ಕರೆದುಕೊಳ್ಳುವದೆಲ್ಲವನ್ನೂ ಬಿಟ್ಟು ಸಾಯುವದು– ಇಷ್ಟು ಬಗೆಯ ದುಃಖಗಳನ್ನು ಸೃಜಿಸುವ ದೇವರು ನಿರ್ಘೃಣನಲ್ಲವೆ? ಅವನಿಗೆ ದಯೆ ಇದ್ದರೆ ಇಂಥ ಕ್ರೂರವಾದ ದಂಡನೆಗಳನ್ನು ಸೃಜಿಸಿ ಪ್ರಾಣಿಗಳನ್ನು ಗೋಳುಗುಟ್ಟಿಸುತ್ತಿದ್ದನೆ? ಎಂಬ ಶಂಕೆಯೊಂದು ನಮ್ಮನ್ನು ಬಾಧಿಸುವದು.

ಇದಕ್ಕೆ ಪರಿಹಾರವಾಗಿ ಕೆಲವರು ಹೇಳುವದೇನೆಂದರೆ, ಜೀವರು ಮಾಡುವ ಕರ್ಮಕ್ಕೆ ಅನುಗುಣವಾಗಿ ಭಗವಂತನು ಸೃಷ್ಟಿಮಾಡುವದರಿಂದಲೂ ಅವರವರ ಕರ್ಮಗಳಿಗೆ

ಅನುಗುಣವಾಗಿ ಫಲವನ್ನು ಕೊಡುವದರಿಂದಲೂ ಈ ದೋಷವಿಲ್ಲ. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ತಕ್ಕಂತೆ ಈ ಜನ್ಮದಲ್ಲಿ ಫಲ, ಹಿಂದಿನ ಕಲ್ಪದಲ್ಲಿದ್ದ ಪ್ರಾಣಿಗಳ ಕರ್ಮಗಳಿಗೆ ಅನುಗುಣವಾಗಿ ಈ ಕಲ್ಪದಲ್ಲಿ ಪ್ರಾಣಿಗಳ ವಿವಿಧಸೃಷ್ಟಿ- ಹೀಗೆ ಆಗುತ್ತಿರುವದರಿಂದಲೂ ಸಂಸಾರವು ಅನಾದಿಯಾಗಿರುವದರಿಂದಲೂ ಯಾವ ದೋಷವೂ ಭಗವಂತನಲ್ಲಿರುವದಿಲ್ಲ- ಎಂಬುದು ಅವರ ಅಭಿಪ್ರಾಯ. ಈ ವಿವರಣೆಯಿಂದ ಸ್ವಲ್ಪಮಟ್ಟಿಗೆ ಸಮಾಧಾನವುಂಟಾಗಬಹುದಾದರೂ ದಯಾವಂತನಾದ ಭಗವಂತನ ಸೃಷ್ಟಿಯಲ್ಲಿ ದುಃಖದ ಸೃಷ್ಟಿ ಏತಕ್ಕೆ ಆಗಿರುತ್ತದೆ?- ಎಂಬುದಕ್ಕೆ ತೃಪ್ತಿಕರವಾದ ಉತ್ತರವು ದೊರೆತಂತಾಗುವದಿಲ್ಲ.

ಆದರೆ ಭಗವದ್ಗೀತೆಯ ಉಪದೇಶದ ಕ್ರಮವನ್ನು ಚೆನ್ನಾಗಿ ಅರಿತುಕೊಂಡಿರುವವರನ್ನು ಈ ಯಾವ ತೊಡಕೂ ಬಾಧಿಸುವಹಾಗಿಲ್ಲ. ಏಕೆಂದರೆ ಭಗವದ್ಗೀತೆಯಂತೆ ಜೀವನು ಭಗವಂತನ ಅಂಶವೇ ಆಗಿರುತ್ತಾನೆ. ಬೆಂಕಿಯ ಕಿಡಿಯು ಬೆಂಕಿಯೇ ಆಗಿರುವಂತೆ ಪರಮಾತ್ಮನ ಅಂಶವಾದ ಜೀವನು ಪರಮಾತ್ಮನೇ ಆಗಿರುತ್ತಾನೆ. ಅವನಿಗೆ ನಿಜವಾದ ಪಾಪಪುಣ್ಯಗಳ ಸೋಂಕಾಗಲಿ ಸುಖದುಃಖಗಳ ಹೊಡೆತವಾಗಲಿ ಇರುವದೇ ಇಲ್ಲ. ಈ ದೃಷ್ಟಿಯಿಂದ ನೋಡಿದರೆ ಯಾರೊಬ್ಬರಿಗಾಗಿಯೂ ಇಲ್ಲಿ ಶೋಕಿಸುವದಕ್ಕೆ ಕಾರಣವೇ ಇಲ್ಲ. ಅರ್ಜುನನು ತನ್ನ ಬಂಧುಬಾಂಧವರಿಗಾಗಿ ಮೋಹದಿಂದ ಶೋಕಿಸುತ್ತಿದ್ದಾಗ ಅವನಿಗೆ ಸರಿಯಾದ ತತ್ತ್ವವನ್ನು ತಿಳಿಸುವದಕ್ಕಾಗಿ ಪರಮಾರ್ಥತತ್ತ್ವವನ್ನು ಉಪದೇಶಿಸುವದಕ್ಕೆ ಭಗವಂತನು ಹೊರಟನು. ಜೀವರೆಲ್ಲರ ಆತ್ಮನೂ ಒಬ್ಬ ಪರಮಾತ್ಮನೇ; ಅವನಿಗೆ ಜನ್ಮಾದಿಗಳ ಸೋಂಕು ಒಂದಿಷ್ಟೂ ಇಲ್ಲ. ಆದ್ದರಿಂದ ಅವನಿಗೆ ಪರಮಾರ್ಥವಾಗಿ ಯಾವ ದುಃಖವೂ ಇಲ್ಲವೇ ಇಲ್ಲ- ಎಂಬುದು ಪ್ರಜ್ಞಾವಂತರ ದೃಷ್ಟಿಯು. ಈ ಪ್ರಜ್ಞೆಯಲ್ಲಿ ನೆಲೆನಿಂತವರು ಸ್ಥಿತಪ್ರಜ್ಞರು. ಆದರೆ ಯಾರಿಗೆ ಈ ಹೆಚ್ಚಿನ ಉತ್ಕೃಷ್ಟವಾದ ಅರಿವು ಆಗುವ ಯೋಗ್ಯತೆಯು ಇನ್ನೂ ಬಂದಿಲ್ಲವೋ ಅವರು ಕರ್ಮಯೋಗವೆಂಬ ಸಾಧನವನ್ನು ಮಾಡಿ ತಮ್ಮ ಚಿತ್ತಕ್ಕೆ ಶುದ್ಧಿಯನ್ನು ತಂದುಕೊಳ್ಳಬೇಕು; ಚಿತ್ತವನ್ನು ಒಳಗಿರುವ ಆತ್ಮನ ಕಡೆಗೆ ತಿರುಗಿಸಿಕೊಂಡು ಪರಮಾತ್ಮನ ಅರಿವನ್ನು ಸಂಪಾದಿಸಿಕೊಳ್ಳುವ ಯೋಗವನ್ನು ಅಭ್ಯಾಸಮಾಡಬೇಕು. ಆಗ ಅವರಿಗೆ "ಈಶ್ವರನು ಯಾವನೊಬ್ಬನ ಪಾಪವನ್ನಾಗಲಿ ಪುಣ್ಯವನ್ನಾಗಲಿ ಗಣಿಸಿ ಅದಕ್ಕನುಗುಣವಾಗಿ ಫಲವನ್ನು ಕೊಡುತ್ತಾನೆಂಬುದು ಅಜ್ಞಾನದ ಕಾರ್ಯ" (5-15) ಎಂಬ ತತ್ತ್ವವು ಮನದಲ್ಲಿ ಮಿಂಚುವದು.

ಹಾಗಾದರೆ ಈ ಲೋಕದಲ್ಲಿ ಕಾಣುವ ದುಃಖಕ್ಕೆ ಕಾರಣವೇನು? ಭಗವಂತನು ತನ್ನ ಅಂಶರೇ ಆಗಿರುವ ಜೀವರಿಗೆ ದುಃಖವನ್ನು ನಿರ್ಮಿಸುವದೆಂದರೆ ತನಗೆ ತಾನೇ ದುಃಖವನ್ನುಂಟುಮಾಡಿಕೊಂಡಂತೆ ಅಲ್ಲವೆ?-ಎಂದು ಕೆಲವರಿಗೆ ತೋರಬಹುದು. ಆದರೆ ದುಃಖವೆಂಬುದೇನು? ಈ ಜಗತ್ತಿನಲ್ಲಿ ಆನಂದದಿಂದ ವಿಹರಿಸುವದಕ್ಕೆ

ಉಪಾಯಗಳಿದ್ದರೂ ಅದೇ ಸಾಧನಗಳನ್ನೇ ತಪ್ಪಾಗಿ ಉಪಯೋಗಿಸುವದರಿಂದಾಗುವ ತಡೆಯು. ಈ ಜಗತ್ತೆಲ್ಲವೂ ಭಗವಂತನ ಸೃಷ್ಟಿಯಾಗಿರುವದರಿಂದ ಭಗವನ್ಮಯವಾಗಿರುತ್ತದೆ. ಇದೆಲ್ಲವೂ ಭಗವಂತನೇ; ಇದೆಲ್ಲಕ್ಕೂ ಆದಿಯೂ ಅಂತವೂ ಮಧ್ಯವೂ ಭಗವಂತನೇ ಎಂಬ ಉತ್ತಮ ದೃಷ್ಟಿಯುಳ್ಳ ಮಹಾತ್ಮರಿಗೆ ಈ ಲೋಕದಲ್ಲಿ ಯಾವ ದುಃಖವೂ ಕಾಣಿಸುವದೇ ಇಲ್ಲ. ಇದನ್ನು ಮರೆಯುವವರಿಗೆ ಈ ದೇಹಾದಿಗಳಲ್ಲಿ ನಾನು ನನ್ನದು ಎಂಬ ತಪ್ಪುತಿಳಿವಳಿಕೆಯ ಫಲವಾಗಿ ದುಃಖವು ಕಾಣಿಸಿಕೊಳ್ಳುವದು; ಆ ತಪ್ಪು ತಿಳಿವಳಿಕೆಯ ಜನರು ಆ ದುಃಖವನ್ನು ತಪ್ಪಿಸಿಕೊಳ್ಳುವದಕ್ಕೆ ತಪ್ಪು ಹಾದಿಯನ್ನೇ ಅನುಸರಿಸುವರು. ಹದಗೆಡಿಸಿದ ರಾಗಮಾಲಿಕೆಯನ್ನು ಮತ್ತಷ್ಟು ಹದಗೆಡಿಸಿದರೆ ಅದರಲ್ಲಿ ಇಂಪಾದ ರಾಗವು ಹೇಗೆ ಬರಬೇಕು? ಭಗವಂತನನ್ನೇ ಚಿಂತಿಸುತ್ತಾ ಲೋಕವೆಲ್ಲವನ್ನೂ ಭಗವನ್ಮಯವಾಗಿ ಕಂಡುಕೊಂಡು ಆನಂದಿಸುವ ಉತ್ತಮವಾದ ಉಪಾಯವು ಯಾರಿಗೆ ಸಿಕ್ಕಿರುವದೋ ಅವರಿಗೆ ಆನಂದರೂಪನಾದ ಭಗವಂತನು ನಿತ್ಯಪ್ರಾಪ್ತನಾಗಿರುತ್ತಾನೆ. ಹಾಗಿಲ್ಲದೆ ಯಾರು ಭಗವಂತನನ್ನು ಒಂದಿಷ್ಟಾದರೂ ಮರೆಯುವರೋ ಅವರಿಗೆ ಕೂಡಲೆ ದುಃಖವು ಕಾಣಿಸಿಕೊಳ್ಳುವದು. ಭಗವಂತನು ಪ್ರಾಣಿಗಳ ಮೇಲಿನ ದಯೆಯಿಂದ ಏರ್ಪಡಿಸಿರುವ ನಿಯಮವಿದು. ಎಲ್ಲಿಯವರೆಗೆ ನಾವುಗಳು ಭಗವಂತನನ್ನು ಸ್ಮರಿಸುವದಿಲ್ಲವೋ ಅಲ್ಲಿಯವರೆಗೆ ನಮಗೆ ಈ ಜಗತ್ತು ಭಗವನ್ಮಯವೆಂಬ ತತ್ತ್ವವು ಮನಸ್ಸಿನಲ್ಲಿ ಹೊಳೆಯುವದಿಲ್ಲ; ಅಲ್ಲಿಯವರೆಗೂ ನಮ್ಮನ್ನು ಎಚ್ಚರಿಸುವ ಅಲಾರಮ್ ಗಡಿಯಾರದಂತೆ ದುಃಖವು ಕಿರುಗುಟ್ಟಿಸುತ್ತಲೇ ಇರುತ್ತದೆ. ಆದ್ದರಿಂದ ಈ ಜಗತ್ತಿನಲ್ಲಿ ಕಾಣಿಸುವ ದುಃಖವನ್ನು ವಿವೇಕಿಯಾದವನು ಒಂದು ಮಂಗಲಮಯಸಂದೇಶವೆಂದು ಭಾವಿಸಬೇಕು.

ಆ ಭಗವಂತನ ಸಂದೇಶವು ಮುಖ್ಯವಾಗಿ ಎರಡು ಬಗೆಯಾಗಿರುವದು. ಸಾಮಾನ್ಯವಾದ ತಿಳಿವಳಿಕೆಯ ಮುಮುಕ್ಷುಗಳಿಗೆ ಕರ್ಮಯೋಗವು ಒಂದು; ಕರ್ಮಯೋಗದಿಂದ ಚಿತ್ತಶುದ್ಧಿಯಾಗಿರುವವರಿಗೆ ಜ್ಞಾನಯೋಗವು ಇನ್ನೊಂದು. ಈ ಎರಡರ ಗುರಿಯೂ ಒಂದೇ. ಭಗವಂತನನ್ನು ಬಿಟ್ಟು ಬಂದಿರುವದರಿಂದ ಮನುಷ್ಯನು ಪಾಪಿಷ್ಠನಾಗಿರುತ್ತಾನೆ; ಪಾಪದ ಫಲವಾಗಿ ಆಸುರಸಂಪತ್ತನ್ನು ಹೊಂದುತ್ತಾನೆ, ಅದರಿಂದ ದುಃಖಪಡುತ್ತಾನೆ. ದುಃಖವು ಒಂದು ಎಚ್ಚರಿಕೆಯ ಸಂದೇಶವಾಗಿದೆ. ಭಗವಂತನನ್ನೇ ಶರಣುಹೊಂದಬೇಕು, ಭಗವಂತನೇ ಜೀವನದ ಗುರಿ ಎಂದು ನಂಬಬೇಕು. ಆಗಲೇ ಎಲ್ಲಾ ದುಃಖದಿಂದಲೂ ಬಿಡುಗಡೆಯಾಗುವದು. ಹೀಗೆಂದು ತಿಳಿಸುವದೇ ಈ ಯೋಗೋಪದೇಶದ ಲಕ್ಷ್ಯವು. ಶ್ರೀ ಶಂಕರಾಚಾರ್ಯರವರು ನಾವು ಈ ಸಂದೇಶಕ್ಕೆ ಆರಿಸಿಕೊಂಡಿರುವ ಎರಡು ಶ್ಲೋಕಗಳ ತಾತ್ಪರ್ಯವನ್ನು ವರ್ಣಿಸುವಾಗ ಬರೆದಿರುವದೇನೆಂದರೆ:

"ಕರ್ಮಯೋಗನಿಷ್ಠೆಯ ಪರಮರಹಸ್ಯವಾದ ಈಶ್ವರಶರಣತೆಯನ್ನು ಉಪಸಂಹಾರ

ಮಾಡಿದ ಬಳಿಕ ಕರ್ಮಯೋಗನಿಷ್ಠೆಯ ಫಲವಾದ ಸರ್ವ ವೇದಾಂತವಿಹಿತವಾದ ಸಮ್ಯಗ್ದರ್ಶನವನ್ನು ಹೇಳುತ್ತಿದಾರೆ."

ಗೀತಾಜಯಂತಿಯ ದಿನ ನಾವು ಮನಸ್ಸಿಗೆ ತಂದುಕೊಳ್ಳಬೇಕಾದ ಸರ್ವೋತ್ತಮ ಸಂದೇಶವು ಇದು. ಈ ಪ್ರಪಂಚವೆಲ್ಲವೂ ಸಚ್ಚಿದಾನಂದ ಸ್ವರೂಪನಾದ ಭಗವಂತನಿಂದ ಬಂದಿರುವದರಿಂದ ಪರಮಾರ್ಥವಾಗಿ ಸಚ್ಚಿದಾನಂದರೂಪವೇ ಆಗಿರುತ್ತದೆ. ಇದರಲ್ಲಿ ದುಃಖವು ಎಳ್ಳಷ್ಟೂ ಇರುವದೇ ಇಲ್ಲ. ನಮಗೆ ಇಲ್ಲಿ ಕಾಣುತ್ತಿರುವ ದುಃಖವು ನಮ್ಮ ಪಾಪದ ಫಲವಾಗಿ ತೋರುತ್ತಿರುವದು. ಇದು ಪಾಪಕ್ಕಾಗಿ ನಮಗೆ ಭಗವಂತನು ವಿಧಿಸಿರುವ ದಂಡನೆಯಲ್ಲ; ಕರುಣಾಮಯನಾದ ಆತನು ನಾವು ಎಂದೆಂದಿಗೂ ಪಾಪದಿಂದ ಮುಕ್ತರಾಗುವದಕ್ಕೆ ಉಪಾಯವನ್ನು ಸೂಚಿಸುವದಕ್ಕೆಂದು ನಮ್ಮಲ್ಲಿಗೆ ಕಳುಹಿಸಿರುವ ದೇವದೂತನು. ಈ ದುಃಖವು ನಾವು ಎಲ್ಲಿಯವರೆಗೆ ಆ ಭಗವಂತನನ್ನು ಮರೆತಿರುವೆವೋ ಅಲ್ಲಿಯವರೆಗೇ ನಮ್ಮನ್ನು ಎಚ್ಚರಿಸುತ್ತಾ ಭಗವಂತನ ಕಡೆಗೆ ತಿರುಗಿಸುತ್ತಿರುವದು. ನಾವು ಮಾಡಿರುವ ಪಾಪವೆಂದರೆ ಮತ್ತೇನೂ ಅಲ್ಲ; ಆ ಭಗವಂತನಲ್ಲಿಯೇ ಇದ್ದುಕೊಂಡಿದ್ದರೂ ನಾವು ಆತನಿಗಿಂತ ಬೇರೆಯಾಗಿ ಸ್ವತಂತ್ರ ಜೀವನವನ್ನು ನಡೆಯಿಸುತ್ತಿದೇವೆಂದು ಅರಿತುಕೊಂಡಿರುವದೇ ಮಹಾಪಾಪವು.

ಭಗವಂತನು ನರೋತ್ತಮನಾದ ಅರ್ಜುನನ ಮೂಲಕ ನಮಗೆಲ್ಲರಿಗೂ ಈ ಸಂದೇಶವನ್ನು ಕಳುಹಿಸಿರುತ್ತಾನೆ. "ನನಗಿಂತ ಬೇರೆಯಾದ ಪ್ರಪಂಚದಲ್ಲಿದ್ದು ಮಾಯಾದುಃಖವನ್ನು ಅನುಭವಿಸುತ್ತಾ ಕಂಗೆಡಬೇಡಿರಿ. ಇದು ಸಾಧನವು, ಇದು ಸಾಧ್ಯವು; ಇದನ್ನು ಮಾಡಿ ಈ ಸಾಧ್ಯವನ್ನು ಹೊಂದಿ ಫಲವನ್ನನುಭವಿಸುವೆನು– ಎಂಬ ಒಣ ಹಂಬಲಿಕೆಯನ್ನು ಬಿಡಿ. ಸಾಧನವೂ ಸಾಧ್ಯವೂ ಪ್ರಯೋಜನವೂ ನಾನೇ ಎಂದು ದೃಢವಾಗಿ ನಂಬಿರಿ. ನನ್ನ ಚಿಂತನೆಯನ್ನೇ ಮಾಡುತ್ತಾ ನನ್ನಲ್ಲಿ ಅನನ್ಯಪ್ರೇಮವನ್ನು ಸಂಪಾದಿಸಿಕೊಂಡು ನನ್ನನ್ನೇ ಸೇರಿರಿ. ಈಗಲೂ ನೀವು ನನ್ನಲ್ಲಿಯೇ ಇರುವಿರಾದರೂ ಅದನ್ನು ಅರಿಯದೆ ಈ ತ್ರಿಗುಣಾತ್ಮಕವಾದ ಮಾಯಾಪ್ರಪಂಚದಲ್ಲಿ ತೊಳಲುತ್ತಿರುವಿರಿ. ನೀವೆಲ್ಲರೂ ನನಗೆ ಪ್ರಿಯರು, ನೀವೆಲ್ಲರೂ ನನ್ನ ಅಂಶಭೂತರಾಗಿರುವವರು. ನೀವೆಲ್ಲರೂ ನನ್ನನ್ನೇ ಸೇರಬೇಕೆಂಬುದು ನನ್ನ ಸಂಕಲ್ಪವು. ಆದ್ದರಿಂದ ಮಿಕ್ಕದ್ದೆಲ್ಲವನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣುಹೊಂದಿರಿ. ನಾನೊಬ್ಬನೇ ಎಲ್ಲೆಲ್ಲಿಯೂ ಇರುವೆನು. ನಾನು, ನೀನು, ಅವನು–ಎಂಬ ಪರಿಚ್ಛಿನ್ನಬುದ್ಧಿಯು ನಿಮಗೆ ಈ ಪರಮಾರ್ಥವನ್ನು ಅರಿಯದ್ದರಿಂದಲೇ ಬಂದಿರುವದು. ವಿಶ್ವವ್ಯಾಪಕ ಭಗವಂತನಾದ ನನ್ನ ತತ್ತ್ವವನ್ನರಿಯ ದಿರುವದೇ ಪಾಪವು, ದುಃಖವು, ನರಕವು; ಅದನ್ನು ಅರಿತುಕೊಂಡು ನನ್ನಲ್ಲಿ ನೆಲೆನಿಲ್ಲುವದೇ ಪರಮಸುಕೃತವು, ಆನಂದವು, ನಿತ್ಯಸ್ವರ್ಗವು.

"ನಿತ್ಯಾನಂದದ ಸಮುದ್ರದಲ್ಲಿಯೇ ಇದ್ದು ನೀವೇಕೆ ಹೀಗೆ ಹುಸಿಯಾದ ಉಪ್ಪುನೀರಿಗೆಂದು ಹಾತುವರಿಯುತ್ತಿರುವಿರಿ? ದುಃಖವೆಂಬ ನೀರಡಿಕೆಯು ಇಂಗಬೇಕೆ? ಹಾಗಾದರೆ ಈ ಕೂಡಲೆ ನಿಮ್ಮೊಳಗೇ ಇರುವ ನನ್ನ ಕಡೆಗೆ ತಿರುಗಿನೋಡಿರಿ, ನಿಮ್ಮ ಆತ್ಮನೇ ಆಗಿರುವ ನನ್ನ ವಿಷಯವನ್ನು ಶ್ರವಣಮಾಡಿರಿ, ಶ್ರವಣಮಾಡಿದ್ದನ್ನೇ ಮನನ ಮಾಡಿರಿ, ಆನಂದವೇ ನಿಮ್ಮ ನಿತ್ಯಸ್ವರೂಪವೆಂಬುದನ್ನು ಮನದಟ್ಟುಮಾಡಿಕೊಂಡು ಶಾಂತರಾಗಿರಿ!"

## 3.5. ಪರಮಾರ್ಥದ ಅರಿವಿನಿಂದಲೇ ಪರಮಪುರುಷಾರ್ಥವು

**ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವಂತಿ ।**
**ಯತ್ಪ್ರಯಂತ್ಯಭಿ ಸಂವಿಶಂತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ ॥** (ತೈ. 3–1)

**"ಯಾವದರಿಂದ ಈ ಭೂತಗಳು ಹುಟ್ಟುತ್ತಿರುವೆಯೋ ಯಾವದರಿಂದ ಹುಟ್ಟಿದವುಗಳೆಲ್ಲವೂ ಜೀವಿಸಿಕೊಂಡಿವೆಯೋ ಯಾವದನ್ನು ಸೇರಿ ಕೊನೆಗೆ ಇವೆಲ್ಲವೂ ಒಂದಾಗುವವೋ ಅದನ್ನು ಅರಿತುಕೊಳ್ಳುವದಕ್ಕೆ ಪ್ರಯತ್ನಮಾಡು, ಅದೇ ಬ್ರಹ್ಮವು"**

ಲೋಕದಲ್ಲಿ ಕಾರ್ಯಕಾರಣಭಾವದಿಂದ ಎಲ್ಲಾ ವಸ್ತುಗಳೂ ಒಂದಕ್ಕೊಂದು ಸಂಬಂಧಿಸಿಕೊಂಡಿರುವಂತೆ ಕಾಣುತ್ತದೆ. "ಇದು ಏರ್ಪಟ್ಟರೆ ಇದು ತಲೆದೋರುವದು," "ಇದು ಇದ್ದರೆ ಇದು ಉಂಟಾಗುವದು"–ಎಂಬ ಕಾರ್ಯಕಾರಣಭಾವವನ್ನು ಹೊಂದಿಸಿಕೊಳ್ಳದೆ ನಮ್ಮ ಮನಸ್ಸು ಯಾವ ಎರಡು ವಸ್ತುಗಳನ್ನೂ ಹತ್ತಿಸಿಕೊಳ್ಳುವದಿಲ್ಲ. ವ್ಯವಹಾರವೆಲ್ಲವೂ ಈ ಕಾರ್ಯಕಾರಣಭಾವಗಳ ಅರಿವಿನ ಸಿವುಡುಗಳೆಂದು ನಾವು ನಂಬಬಹುದು. ಯಾವನು ತನಗೆ ಇಷ್ಟವಾದ ಕಾರ್ಯವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅದಕ್ಕೆ ಬೇಕಾದ ಕಾರಣಸಾಮಗ್ರಿಯನ್ನು ಸರಿಯಾಗಿ ಕಾಲಕ್ಕೆ ತಕ್ಕಂತೆ ದಕ್ಷತೆಯಿಂದ ಉಪಯೋಗಿಸಿಕೊಳ್ಳಬಲ್ಲನೋ ಅವನನ್ನೇ ಲೋಕದಲ್ಲಿ ವ್ಯವಹಾರಚತುರನೆನ್ನುವರು. ಯಾರಿಗೆ ಈ ಕಾರ್ಯಕಾರಣಭಾವಗಳ ಸಂಬಂಧವು ಆಯಾ ಕಾಲಕ್ಕೆ ಹೊಳೆಯುವ ದಿಲ್ಲವೋ ಅಂಥವರು ಪ್ರತಿಭಾಶೀಲರಲ್ಲದೆ ವ್ಯವಹಾರದಲ್ಲಿ ಅಪಜಯವನ್ನು ಹೊಂದುತ್ತಾರೆ.

ಶಾಸ್ತ್ರಗಳೂ ಈ ಕಾರ್ಯಕಾರಣಭಾವದ ಮರ್ಮಗಳನ್ನು ಆಳವಾಗಿ ಒಳಹೊಕ್ಕು ಬಿಡಿಸಿ ತೋರಿಸುವದರಿಂದಲೇ ಶಾಸ್ತ್ರಗಳೆನಿಸಿವೆ. ಮನುಷ್ಯನಿಗೆ ಈವರೆಗೆ ತಿಳಿಯದೆ ಇದ್ದ ಎಷ್ಟೋ ಅದ್ಭುತಸಾಧನಸಾಮಗ್ರಿಗಳನ್ನು ಶಾಸ್ತ್ರಜ್ಞರು ಏರ್ಪಡಿಸಿಕೊಟ್ಟಿರುವದು ಈ ಕಾರ್ಯಕಾರಣಭಾವದ ಅನುಮಾನಕೌಶಲದಿಂದಲೇ. ವಸ್ತುಶಾಸ್ತ್ರ, ಶಕ್ತಿಶಾಸ್ತ್ರ–ಮುಂತಾದ ಶಾಸ್ತ್ರಗಳು, ಮಾನವನಿಗೆ ಸಂಪಾದಿಸುವದು ಅಸದಳವೆಂದೇ ತೋರುತ್ತಿದ್ದ ದೂರದರ್ಶನ, ದೂರಧ್ವನಿಪ್ರಸಾರಣ, ಆಕಾಶವಿಮಾನಗಳ ಮತ್ತು ನೌಕೆಗಳ ಉಪಯೋಗ,

ತಂತಿಯಿಲ್ಲದೆ ಸುದ್ದಿಯನ್ನು ಅತಿದೂರಕ್ಕೂ ಕಳುಹಿಸುವ ಚಾತುರಿ, ಭೂಗರ್ಭಶೋಧನೆಯಿಂದ ಮಾನವನ ಸೌಖ್ಯಕ್ಕೂ ಶತ್ರುಮರ್ದನಕ್ಕೂ ಬೇಕಾದ ನವನವೀನವಸ್ತುಗಳನ್ನು ಶೋಧನೆಮಾಡಿ ತೆಗೆದಿರುವದು, ಯುದ್ಧಗಳಲ್ಲಿ ಇಂದ್ರಜಿತ್ತಿನ ಮಾಯಾಯುದ್ಧವನ್ನು ಕೂಡ ಮರೆಯಿಸುವ ಅಣುಬಾಂಬೇ ಮುಂತಾದ ಘಾತುಕಾಸ್ತ್ರಗಳನ್ನು ಪ್ರಯೋಗಿಸುವ ಜಾಣ್ಮೆ- ಇವೇ ಮುಂತಾದ ಸಿದ್ಧಿಗಳನ್ನು ಮಾನವನಿಗೆ ದೊರಕಿಸಿಕೊಟ್ಟಿರುವದು ಈ ಕಾರ್ಯಕಾರಣಭಾವದ ಜ್ಞಾನದ ವಿಸ್ತಾರದಿಂದಲೇ, ಎಂದು ಧಾರಾಳವಾಗಿ ಹೇಳಬಹುದು.

ಆದರೆ ಮನುಷ್ಯನಿಗೆ ಈ ಕಾರ್ಯಕಾರಣಭಾವದ ತಿಳಿವಳಿಕೆಯು ಎಷ್ಟೇ ವಿಸ್ತರಿಸಲಿ, ಅದೇನು ಮಾಯೆಯೊ, ಅವನು ಇಡಿಯ ಜಗತ್ತಿನ ಮೂಲಕಾರಣವನ್ನು ಅನಾದರಮಾಡಿಯೇ ತನ್ನ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಿರುತ್ತಾನೆ. ತಾನು ಕಾರ್ಯಕಾರಣಗಳೆಂದು ತಿಳಿದುಕೊಂಡಿರುವ ದೃಶ್ಯಗಳೆಲ್ಲ ಬರಿಯ ಕಾರ್ಯಗಳೇ, ಅವು ಕಾರಣಗಳಲ್ಲ- ಎಂಬುದು, ಅದೇಕೊ, ಅವನ ಮನಸ್ಸಿಗೆ ಹೊಳೆಯದೆ ಇದೆ. ಭೌತಿಕವಿಜ್ಞಾನಶಾಸ್ತ್ರವು ಕಾರ್ಯಕಾರಣಭಾವದ ಬಲೆಯನ್ನು ಇಡಿಯ ಜಗತ್ತಿಗೇ ಹರಡಿ ಆ ಬಲೆಯಲ್ಲಿಯೇ ಎಲ್ಲವನ್ನೂ ಸಿಕ್ಕಿಸಿಕೊಂಡಿರುವೆನೆಂದು ಹೆಮ್ಮೆಪಡುತ್ತಿರುವದು. **ಆದರೆ ಈ ಕಾರ್ಯಕಾರಣಭಾವಗಳ ಸರಪಳಿಗೆ ಒಂದಿಷ್ಟೂ ಸಿಲುಕದೆ ಇವೆಲ್ಲಕ್ಕೂ ಪರಮಕಾರಣವಾಗಿರುವ ಒಂದು ಪರಮಾರ್ಥವು ಇವುಗಳಿಗೆ ಆಧಾರವಾಗಿರುವದೆಂಬುದು ಆ ಶಾಸ್ತ್ರವು ಬೆಳೆದಷ್ಟೂ ಅದರ ಕಣ್ಣಿಗೆ ದೂರವಾಗುತ್ತಿರುವದು.**

ಮನುಷ್ಯನು ರಾಗದ್ವೇಷಗಳ ಸೆಳೆತಕ್ಕೆ ಸಿಕ್ಕಿ ತಾನು ಕಲ್ಪಿಸಿಕೊಂಡಿರುವ ಕಾರ್ಯಕಾರಣಗಳ ಸರಪಳಿಯನ್ನು ದಿನದಿನಕ್ಕೂ ಬೆಳೆಯಿಸಿಕೊಳ್ಳುತ್ತಾ ಈ ಮನೋರಥವು ಇಂಥ ಕಾರಣಸಾಮಗ್ರಿಯಿಂದ ನನಗೆ ದೊರೆಯಿತು; ಇಂಥ ಹೊಸ ಭೋಗರಾಶಿಯನ್ನು ಇನ್ನೂ ಹೊಸ ಕಾರಣಗಳ ಕೊಂಡಿಗಳನ್ನು ಕಂಡುಹಿಡಿದುಕೊಂಡು ವಶಪಡಿಸಿಕೊಳ್ಳುವೆನು. ಈ ಜನರುಗಳೆಲ್ಲ ನಾನು ಒಡ್ಡಿರುವ ಆಶೆಯ ಪಾಶಕ್ಕೆ ಒಳಗಾಗಿ ನಾನು ಹೇಳುವಂತೆ ಕೇಳಿಕೊಂಡು ಬಿದ್ದಿರುತ್ತಾರೆ; ಇದರಂತೆಯೇ ಭೂಮಂಡಲದ ಎಲ್ಲಾ ಜನರನ್ನೂ ಅವರವರಿಗೆ ಬೇಕಾದ ಕಾಮಗಳನ್ನು ಒಡ್ಡಿ ವಶಪಡಿಸಿಕೊಳ್ಳುವೆನು, ಈ ನನ್ನ ಅಭೀಷ್ಟವು ನೆರವೇರದೆ ಇದ್ದರೆ ಇಗೊ, ಈ ಭೂಸೈನ್ಯ, ಆಕಾಶಸೈನ್ಯ- ಇವುಗಳನ್ನೂ ಅದ್ಭುತವಾದ ಘಾತುಕಾಸ್ತ್ರಗಳನ್ನೂ ಉಪಯೋಗಿಸಿ ಇವರನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಡುವೆನು- ಎಂದು ಸೊಕ್ಕಿನಿಂದ ಮೆರೆಯುತ್ತಿರುವನು. ಇಚ್ಛಾದ್ವೇಷಗಳಿಂದುಂಟಾದ ಸಹಜವಾಗಿರುವ ದ್ವಂದ್ವಮೋಹಕ್ಕೆ ಒಳಗಾಗಿ ಮಾನವನು ತಾನು ಶೋಧಿಸಿ ತೆಗೆದಿರುವ ಸಾಮಗ್ರಿಗಳು ತನ್ನ ನಾಶಕ್ಕೇ ಕಾರಣವೆಂಬುದನ್ನು ಅರಿತುಕೊಳ್ಳಲಾರದೆ ಇರುವನು. **ಜಗತ್ತಿಗೆಲ್ಲ ಮೂಲಕಾರಣವಾಗಿರುವ ಪರಮಾರ್ಥದ ಅರಿವಿನಿಂದಲೇ ತನಗೆ ಪರಮಪುರುಷಾರ್ಥವು ದೊರಕಬೇಕಾಗಿರುವದೆಂಬುದನ್ನೂ ಅರಿಯದೆ ಇರುವನು.**

ಭೂಮಂಡಡದಲ್ಲಿ ಆಗಾಗ್ಗೆ ಅವತರಿಸಿ ಜನಗಳಿಗೆ ಹಿತಬೋಧೆಯನ್ನು ಮಾಡಿ ಪರಂಧಾಮಕ್ಕೆ ತೆರಳಿರುವ ಬೇರೆಬೇರೆಯ ಆಚಾರ್ಯರುಗಳೆಲ್ಲರೂ ಒಕ್ಕೊರಲಿನಿಂದ ಈ ಪರಮಪುರುಷಾರ್ಥದ ಮೂಲಕಾರಣವನ್ನು ಸಾರಿಹೋಗಿರುತ್ತಾರೆ. ಭೂಮಂಡಲದ ಧಾರ್ಮಿಕವಾಙ್ಮಯದಲ್ಲಿ ಅತ್ಯಂತಪುರಾತನವಾಗಿರುವ ನಮ್ಮ ವೇದದಲ್ಲಿ ಈ ಕಾರಣವನ್ನು ಸುಸ್ಪಷ್ಟವಾಗಿ ಹೇಳಿರುತ್ತದೆ. ನಾವೆಲ್ಲರೂ ಒಂದೇ ಒಂದು ಪರಮಕಾರಣದಿಂದ ಬಂದಿರುತ್ತೇವೆ, ಈ ಜಗತ್ತಿನಲ್ಲಿ ಕಾಣುವ ಎಲ್ಲಾ ದೃಶ್ಯಗಳೂ ಆ ಒಂದು ಪರಮ ಕಾರಣದಿಂದಲೇ ಬಂದಿರುತ್ತವೆ. ಅದರಲ್ಲಿಯೇ ನಾವು ಜೀವಿಸಿಕೊಂಡು ನಮ್ಮ ವಿವಿಧ ವ್ಯವಹಾರಚೇಷ್ಟೆಗಳನ್ನು ಮಾಡಿಕೊಂಡಿರುತ್ತೇವೆ. ನಾವೆಲ್ಲರೂ ಕೊನೆಗೆ ಅದರಲ್ಲಿಯೇ ಐಕ್ಯವನ್ನು ಹೊಂದಬೇಕಾಗಿದೆ. ಹೆಚ್ಚೇಕೆ, ನಮ್ಮಲ್ಲಿ ಯಾರೊಬ್ಬರೂ ಅದನ್ನು ಒಂದು ಕ್ಷಣಮಾತ್ರವೂ ಅಗಲಿರಲಾರೆವು. ಅದೇ ಆನಂದಘನವಾದ ಬ್ರಹ್ಮವು ಅಥವಾ ಪರಮೇಶ್ವರನು. ಇದನ್ನು ಕಂಡುಕೊಂಡು ಆನಂದದಲ್ಲಿಯೇ ಇದ್ದುಕೊಂಡಿರುವದೇ ಮನುಷ್ಯನ ಜೀವನದ ಗುರಿ.

ಇಲ್ಲೊಂದು ಶಂಕೆ. ಎಲ್ಲವೂ ಆನಂದಧಾಮನಾದ ಆ ಪರಮೇಶ್ವರನಿಂದಲೇ ಬಂದಿರುವದಾದರೆ ಮಾನವನು ಈಗ ಉಪಯೋಗಿಸುತ್ತಿರುವ ಭೋಗಸಾಮಗ್ರಿಗಳೂ ಯಂತ್ರಸಾಮಗ್ರಿಗಳೂ ಎಲ್ಲವೂ ಅವನಿಂದಲೇ ತಾನೆ ಬಂದಿರಬೇಕು? ಹೀಗಿರುವಲ್ಲಿ ಈ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಮನುಷ್ಯನು ಹಾಳಾಗುತ್ತಿದಾನೆಂದು ವರ್ಣಿಸುವದೇಕೆ? ಪರಮೇಶ್ವರನು ಮನುಷ್ಯನಿಗೆ ಕೊಟ್ಟಿರುವ ಇಂದ್ರಿಯಗಳಿಂದ ಪರಮೇಶ್ವರನು ಲೋಕದಲ್ಲಿ ನಿರ್ಮಿಸಿರುವ ವಿಷಯಸಾಮಗ್ರಿಗಳನ್ನು, ಭೋಗಿಸಿ ಕೊಂಡಿರುವದು ಪಾಪವೆ? ಇದಕ್ಕಾಗಿ ಭೌತಿಕವಿಜ್ಞಾನಶಾಸ್ತ್ರವು ನಮಗೆ ಒದಗಿಸಿಕೊಡುವ ತಿಳಿವಳಿಕೆಯನ್ನು ಉಪಯೋಗಿಸಿಕೊಳ್ಳುವದು ತಪ್ಪೆ? ಈ ದೃಷ್ಟಿಯಿಂದ ನೋಡಿದರೆ ಮಾನವನು ದಿನದಿನಕ್ಕೂ ಹೆಚ್ಚುಹೆಚ್ಚಿನ ಅಭ್ಯುದಯವನ್ನೇ ಪಡೆಯುತ್ತಿದಾನೆಂದು ಹೇಳಬೇಕಲ್ಲವೆ?

ಇದಕ್ಕೆ ಪರಿಹಾರವಿಷ್ಟೇ. ಎಲ್ಲವೂ ಪರಮೇಶ್ವರನಿಂದಲೇ ಬಂದಿದೆ– ಎಂಬುದು ನಿಜ. ಪರಮೇಶ್ವರನಿಂದ ಇದು ಬಂದದ್ದೆಂಬ ಅರಿವಿನಿಂದ ಕೂಡಿಕೊಂಡು ಮನುಷ್ಯನು ಜೀವನಮಾಡಿದರೆ, ಅದು ತಪ್ಪಾಗಲಾರದೆಂಬುದಿರಲಿ– ಅದೇ ಯುಕ್ತವಾದ ಜೀವನವು– ಎಂದು ಹೊಗಳುವದಕ್ಕೂ ಯೋಗ್ಯವಾಗುತ್ತದೆ. ಆದರೆ ಸದ್ಯಕ್ಕೆ ಮಾನವನಿಗೆ ಈ ತಿಳಿವಳಿಕೆಯು ಕಣ್ಮರೆಯಾಗಿರುತ್ತದೆ. ಅವನಿಗೆ ಪರಮೇಶ್ವರನ ಸ್ಮರಣೆಯು ಅತಿದೂರದ ಮಾತಾಗಿದೆ. ಭೂಮಂಡಲದಲ್ಲಿ ದೊರಕುವ ವಸ್ತುಗಳೆಲ್ಲವೂ ಕೆಲವು ಪ್ರಕೃತಿನಿಯಮಗಳನ್ನು ಅನುಸರಿಸಿ ಮಾನವನ ಸೌಖ್ಯಕ್ಕಾಗಿ ಅವನಿಗೆ ಗೋಚರವಾಗುತ್ತಿದೆಯೆಂದೂ ಕಾರ್ಯಕಾರಣನಿಯಮಗಳ ಮರ್ಮವನ್ನು ಅರಿತುಕೊಂಡು ಆ ವಸ್ತುಗಳನ್ನು ತನ್ನ ಕಾಮೋಪಭೋಗಕ್ಕೆ ಉಪಯೋಗಿಸಿಕೊಳ್ಳುವದೇ ಜನ್ಮದ ಸಾರ್ಥಕ್ಯವೆಂದೂ ಮನುಷ್ಯನು

ಬಗೆಯುತ್ತಿದಾನೆ. ಆ ವಸ್ತುಗಳಲ್ಲಿ ತೋರುವ ಕಾರ್ಯಕಾರಣಭಾವವು ಎಷ್ಟೇ ಖಚಿತವಾಗಿ ಇವನಿಗೆ ತಿಳಿಯಬರುತ್ತಿರಲಿ, ಮತ್ತೆ ಮತ್ತೆ ಅದು ಇವನ ಕೈಯಿಂದ ನುಣುಚಿಕೊಂಡೇ ಹೋಗುತ್ತಿರುವದು. ಪರಮೇಶ್ವರನಿಗೆ ಸಂಬಂಧಿಸಿಕೊಳ್ಳದೆ ಇರುವ ಯಾವದೊಂದು ವಸ್ತುವೂ ಸುಖಕಾರಿಯಾಗಲಾರದೆಂಬುದೊಂದು ಮಹಾನಿಯಮವು. ಬೃಹದಾರಣ್ಯ ಕೋಪನಿಷತ್ತಿನಲ್ಲಿ ಈ ಎಚ್ಚರಿಕೆಯ ಉಪದೇಶವು ಕಂಡುಬರುತ್ತದೆ :

**"ಯಾವನು ಬ್ರಾಹ್ಮಣ್ಯವು ಪರಮಾತ್ಮನಿಗಿಂತ ಬೇರೆಯೆಂದು ಎಣಿಸುವನೋ ಅವನನ್ನು ಬ್ರಾಹ್ಮಣ್ಯವು ಅತ್ತ ತಳ್ಳಿಹಾಕುವದು; ಯಾವನು ಕ್ಷತ್ರಿಯಬಲವನ್ನು ಪರಮಾತ್ಮನಿಗಿಂತ ಬೇರೆಯೆಂದೆಣಿಸುವನೋ ಅವನನ್ನು ಆ ಕ್ಷತ್ರಿಯ ಬಲವು ಅತ್ತ ತಳ್ಳಿ ಹಾಕುವದು; ಯಾವನು ತನ್ನ ಭೋಗದ ಲೋಕಗಳು ಪರಮಾತ್ಮನಿಗಿಂತ ಬೇರೆಯೆಂದು ತಿಳಿಯುವನೋ ಅವನನ್ನು ಆ ಲೋಕಗಳು ಅತ್ತ ತಳ್ಳಿಹಾಕುವವು; ಯಾವನು ದೇವತೆಗಳು ಪರಮಾತ್ಮನಿಗಿಂತ ಬೇರೆಯೆಂದೆಣಿಸುವನೋ ಅವನನ್ನು ಆ ದೇವತೆಗಳು ಅತ್ತ ತಳ್ಳಿಹಾಕುವರು; ಯಾವನು ಭೂತಗಳು ಪರಮಾತ್ಮನಿಗಿಂತ ಬೇರೆಯೆಂದೆಣಿಸುವನೋ ಅವನನ್ನು ಆ ಭೂತಗಳು ಅತ್ತ ತಳ್ಳಿಹಾಕುವವು; ಯಾವನು ಯಾವದೊಂದನ್ನೇ ಆಗಲಿ ಪರಮಾತ್ಮನಿಗಿಂತ ಬೇರೆಯೆಂದೆಣಿಸುವನೋ ಆ ಪ್ರತಿಯೊಂದೂ ಅವನನ್ನು ಅತ್ತ ತಳ್ಳಿಹಾಕುವದು!"** –ಬೃ. 2–4–6

ಮೇಲಿನ ಈ ಎಚ್ಚರಿಕೆಯ ಮಾತನ್ನು ಮನುಷ್ಯನು ಕಿವಿಗೆ ಹಾಕಿಕೊಳ್ಳಲೊಲ್ಲನು. ಅವನು ಪ್ರತಿಯೊಂದು ವಸ್ತುವೂ ತನ್ನ ತನ್ನ ಸ್ವಂತ ಕಾರ್ಯಕಾರಣನಿಯಮಕ್ಕೆ ಒಳಪಟ್ಟು ಈ ಲೋಕದಲ್ಲಿ ಸುಖವನ್ನೋ ದುಃಖವನ್ನೋ ಕೊಡುತ್ತಿರುವದೆಂದು ತಪ್ಪಾಗಿ ಭಾವಿಸಿಕೊಂಡಿರುತ್ತಾನೆ. ಈ ಬ್ರಹ್ಮಾಂಡದಲ್ಲಿರುವ ಒಂದೊಂದು ಅಣುರೇಣುವಿನಲ್ಲಿಯೂ ಆ ಪರಮಾತ್ಮನ ಸಂಬಂಧವಿರುವದರಿಂದಲೇ ವಸ್ತುವೆಂದೆನಿಸಿಕೊಂಡಿರುವದೆಂಬುದನ್ನೂ ಆ ಪರಮಾತ್ಮನ ಸಂಬಂಧದಿಂದಲೇ ಅದರಲ್ಲಿ ಆನಂದವು ತುಂಬಿತುಳುಕಾಡುತ್ತಿರುವ ದೆಂಬುದನ್ನೂ ಅಜ್ಞಾನದಿಂದ ಯಾವ ವಸ್ತುವನ್ನು ಆ ಪರಮಾತ್ಮನಿಂದ ಬಿಡಿಸಿಕೊಂಡರೂ ಅದು ಶೋಕಮೋಹದುಃಖಭಯಗಳಿಗೆ ನಿದಾನವಾಗುವದೆಂಬುದನ್ನೂ ಅವನು ಕಡೆಗಣಿಸಿರುವನು. ಇದರಿಂದಲೇ ಮಾನವನಿಗೆ ಇಂದ್ರಿಯಗಳಿಂದಾಗುವ ಭೋಗವು ಭೋಗವಾಗಿರುವದಿಲ್ಲ, ಅದೊಂದು ರೋಗವಾಗಿದೆ. ಇದರಿಂದಲೇ ಮಾನವನ ತಿಳಿವಳಿಕೆ, ಅಧಿಕಾರ, ಧನರಾಶಿ– ಇವುಗಳಲ್ಲಿ ಯಾವದೊಂದೂ ಅವನಿಗೆ ಸುಖವನ್ನು ಕೊಡುವದಕ್ಕೆ ಬದಲು ಹೊಸ ಹೊಸ ದುಃಖವನ್ನೇ ಎಬ್ಬಿಸಿ ತೋರಿಸುತ್ತಿರುವದು. ಇಂದ್ರಿಯಗಳಿಂದ ವಿಷಯಗಳನ್ನು ಅನುಭವಿಸುವದು ಪಾಪವಲ್ಲ; ಆದರೆ ಆ ಇಂದ್ರಿಯಗಳನ್ನೂ ವಿಷಯಗಳನ್ನೂ ಆ ಪರಮಾತ್ಮನಿಂದ ಮನಸ್ಸಿನಲ್ಲಿ ಬೇರ್ಪಡಿಸಿಕೊಂಡಿರುವದು ಮಹಾ ಪಾಪವು. ಈ ಪಾಪದ ಫಲವಾಗಿಯೇ ಮನುಷ್ಯನು ಪಡಬಾರದ ದುಃಖಗಳನ್ನು

ಅನುಭವಿಸುತ್ತಿರುತ್ತಾನೆ. ಅಮಾವಾಸ್ಯೆಯ ಕಗ್ಗತ್ತಲೆಯಲ್ಲಿ ಸ್ವೇಚ್ಛಾವಿಹಾರದಿಂದ ತಿರುಗುವ ಕುರುಡರಹಾಗೆ ತನ್ನ ಅಜ್ಞಾನದಿಂದ ಏರ್ಪಡಿಸಿಕೊಂಡಿರುವ ಪ್ರಕೃತಿನಿಯಮವಗಳ ಶಾಸ್ತ್ರಗಳನ್ನು ಮನುಷ್ಯನು ತನಗೆ ತೋಚಿದಂತೆ ಉಪಯೋಗಿಸಿಕೊಳ್ಳುವದಕ್ಕೆ ಹೊರಟಿರುತ್ತಾನೆ. ಇದರಿಂದ ಮಾಡಬಾರದ್ದನ್ನು ಮಾಡಿ ಆಗಬಾರದ ದುಃಖವನ್ನು ಅನುಭವಿಸುತ್ತಿದಾನೆ.

ಮಾನವನ ತಿಳಿವಳಿಕೆಯಲ್ಲಿ ಒಂದೇ ಒಂದು ಲೋಪವಿದೆ. ಅಳಿಯನನ್ನು ಬಿಟ್ಟು ದಿಬ್ಬಣ ತೆರಳಿದ ಮೂರ್ಖರಂತೆ ಅವನು ಈ ಬ್ರಹ್ಮಾಂಡದ ಆಗುಹೋಗುಗಳಿಗೆಲ್ಲ ಕಾರಣನಾಗಿರುವ ಪರಮಾತ್ಮನನ್ನು ಕೈಬಿಟ್ಟು ಮೇಲೆಮೇಲೆ ತೋರುತ್ತಿರುವ ದೃಶ್ಯಗಳಿಗೇ ಕಾರ್ಯಕಾರಣಭಾವವನ್ನು ಕಲ್ಪಿಸಿಕೊಂಡು ಕಾಲತಳ್ಳುತ್ತಿದ್ದಾನೆ. ಇದರಿಂದ ಅವನಿಗೆ ಜೀವನವು ಒಂದು ಅಭೇದ್ಯವಾದ ಯಂತ್ರವಾಗಿಬಿಟ್ಟಿದೆ. ಇವನು ಕಲ್ಪಿಸಿಕೊಂಡಿರುವ ಕಾರ್ಯಕಾರಣನಿಯಮವು ಸ್ವಲ್ಪಸ್ವಲ್ಪ ದೂರ ಹೋಗುವವರೆಗೆ ಕೆಲಸಮಾಡುತ್ತದೆ. ಆದರೆ ಅಷ್ಟರಲ್ಲಿಯೇ ಒಳಗಿನ ಸ್ಪ್ರಿಂಗ್ ಮುರಿದುಹೋಗಿರುವ ಗಡಿಯಾರದಂತೆ, ಅಥವಾ ಮೃಗಶಾಲೆಯಿಂದ ತಪ್ಪಿಸಿಕೊಂಡ ಇನ್ನೂ ಪಳಗಿಸದೆ ಇರುವ ಮದ್ದಾನೆಯಂತೆ, ಅದು ಕಂಡ ಕಂಡಂತೆ ಫಲಗಳನ್ನು ತೋರಿಸುವದಕ್ಕೆ ಮೊದಲಾಗುವದು. ನಿದ್ರೆಯ ಮಬ್ಬುಗಣ್ಣಿನಲ್ಲಿ ತಮ್ಮ ಕಡೆಯವರನ್ನೇ ನುಂಗಿಹಾಕಿದ ಕುಂಭಕರ್ಣನ ಹಾಗೆ ಈ ನಿಯಮವು ಅನಿರೀಕ್ಷಿತವಾದ ಹೊಸಹೊಸ ದುಷ್ಪರಿಣಾಮಗಳನ್ನು ತೋರಿಸುವದಕ್ಕೆ ಹೊರಡುವದು. ಆಗ ಮುಂದೇನು ಮಾಡಬೇಕೆಂಬುದು ತೋಚದೆ ತನ್ನ ಪರಿಚ್ಛಿನ್ನ ದೃಷ್ಟಿಯಿಂದ ಕಂಡುಹಿಡಿದುಕೊಂಡ ಶಾಸ್ತ್ರದ ತಿಳಿವಳಿಕೆಯು ಯಾವ ಪ್ರಯೋಜನಕ್ಕೂ ಬಾರದ್ದನ್ನು ಕಂಡು ಮನುಷ್ಯನು ತಲೆಯಮೇಲೆ ತನ್ನ ಎರಡು ಕೈಗಳನ್ನೂ ಇಟ್ಟುಕೊಂಡು ಉಸ್ಸೆಂದು ಕೂತುಕೊಳ್ಳುವನು. ಇದೇ ಪರಿಚ್ಛಿನ್ನ ಕಾರ್ಯಕಾರಣಭಾವಜ್ಞಾನದ ಫಲ!

ಈ ಲೋಕದಲ್ಲಿ ಎಂದೆಂದಿಗೂ ಅಮಿತಾನಂದವನ್ನು ಸೂರೆಗೊಳ್ಳುತ್ತಿರಬೇಕೆ? ಕಾಮಕ್ರೋಧಲೋಭಾದಿಗಳಿಗೆ ವಶರಾಗದೆ ಎಲ್ಲಾ ಕಡೆಯಲ್ಲಿಯೂ ಜನರನ್ನೂ ಪ್ರಾಣಿಗಳನ್ನೂ ಸುಖಮಯವಾಗಿಯೇ ಕಾಣುತ್ತಿರಬೇಕೆ? ಹಾಗಾದರೆ ಈ ಮೇಲುಮೇಲಿನ ಕಾರ್ಯಕಾರಣನಿಯಮಗಳಿಗೆ ಹೆಚ್ಚಿನ ಬೆಲೆಯನ್ನು ಕೊಡಬೇಡಿ. ಈ ಎಲ್ಲಕ್ಕೂ ಪರಮಕಾರಣನಾಗಿರುವ ಪರಮಾನಂದಸಾಗರನಾದ ಪರಮಾತ್ಮನೇ ಪರಮಾರ್ಥವೆಂದೂ ಆತನಲ್ಲಿಯೇ ನಮ್ಮ ಹುಟ್ಟುಇರವು ಹೊಂದುಗಳು ಆಗುತ್ತಿರುವವೆಂದೂ ನೆರೆನಂಬಿರಿ. ಆ ಮೂಲಕಾರಣನಾದ ಪರಮಾತ್ಮನಲ್ಲಿ ನೆಲೆನಿಂತು ಎಲ್ಲವನ್ನೂ ನೋಡುವದಕ್ಕೆ ಪ್ರಾರಂಭಿಸಿರಿ. ಆಗ ನಿಮಗೆ ಜೀವನವು ಆನಂದದ ಉಕ್ಕಂದವಾಗುವದು; ದುಃಖವು ಹೇಳಹೆಸರಿಲ್ಲದೆ ಅಡಗಿ ಹೋಗುವದು.

## 3.6. ಮನಸ್ಸಿನ ಹಿಡಿತವೇ ಅಧ್ಯಾತ್ಮ ಸಾಧನವು

ಮಾನವನು ಮಾನವನೆನಿಸಿಕೊಂಡಿರುವದು ಮನಸ್ಸಿನಿಂದ. ಎಷ್ಟು ಬಗೆಯ ಮನಸ್ಸುಗಳಿರುವವೋ ಅಷ್ಟು ಬಗೆಯ ಮಾನವರಿರುವರು. ಮನಸ್ಸು ಕೆಲಸಮಾಡದೆ ಇದ್ದರೆ ಅವನು ಮಾನವನೇ ಅಲ್ಲ. ಮನಸ್ಸು ತಪ್ಪುಹಾದಿಯಿಂದ ಕೆಲಸಮಾಡುತ್ತಿದ್ದರೆ ಮಾನವನು ಬದ್ಧನೆನಿಸುತ್ತಾನೆ; ಸರಿಯಾದ ಮಾರ್ಗದಿಂದ ಕೆಲಸಮಾಡುತ್ತಿದ್ದರೆ ಮುಕ್ತನೆನಿಸುತ್ತಾನೆ. ಆದ್ದರಿಂದ ನಾವುಗಳು ನಮ್ಮ ಮನಸ್ಸಿನ ಸ್ವಭಾವವನ್ನು ಪರೀಕ್ಷೆಮಾಡಿಕೊಳ್ಳುತ್ತಲೇ ಇರಬೇಕು. ಅದನ್ನು ತಪ್ಪುಹಾದಿಯಿಂದ ಹಿಡಿತಂದು ಸರಿಯಾದ ಹಾದಿಗೆ ಬಿಡುವ ಪ್ರಯತ್ನವನ್ನು ಮಾಡುತ್ತಲೇ ಇರಬೇಕು, ಇದೇ ಅಧ್ಯಾತ್ಮಸಾಧನವು.

ಮನಸ್ಸಿನಲ್ಲಿ ಎರಡು ಬಗೆಯ ವಾಸನೆಗಳಿರುತ್ತವೆ. ನಮಗೆ ಬೇಕಾದ ಕೆಲವರನ್ನು ಪ್ರೀತಿಸಬೇಕು, ಅವರಿಗೆ ಮೆಚ್ಚಾಗುವ ಪದಾರ್ಥಗಳನ್ನು ತಂದುಕೊಡಬೇಕು, ಅವರಿಗೆ ಒಪ್ಪಾಗುವಂತೆ ನಡೆದುಕೊಳ್ಳುತ್ತಿರಬೇಕು, ಅವರಿಗೆ ಸಂತೋಷವನ್ನುಂಟುಮಾಡುವ ಮಾತುಗಳನ್ನಾಡುತ್ತಿರಬೇಕು– ಇದೊಂದು ಬಗೆಯ ವಾಸನೆ. ಆದರೆ ಹೀಗೆ ನಮಗೆ ಬೇಕಾದವರನ್ನು ಆರಿಸಿಕೊಳ್ಳುವಾಗ ಮತ್ತೆ ಕೆಲವರನ್ನು ನಮಗೆ ಬೇಡದವರೆಂದು ಗೊತ್ತುಮಾಡಿಕೊಂಡೇ ಹೊರಡಬೇಕಾಗುತ್ತದೆ. ನಮ್ಮ ಸುತ್ತಲೂ ಇರುವ ಜನರನ್ನು ಅತ್ಯಂತ ಪ್ರಿಯರಾದವರು ಮಿತ್ರರು, ಉದಾಸೀನರು, ಮಧ್ಯಸ್ಥರು, ದ್ವೇಷ್ಯರು, ಬಂಧುಬಾಂದವರು– ಎಂದು ವಿಂಗಡಿಸಿಕೊಳ್ಳದೆ ನಮ್ಮ ಮನಸ್ಸು ತನ್ನ ವ್ಯಾಪಾರವನ್ನು ಮಾಡಲೇ ಆರದು. ತನಗೆ ಬೇಕಾದವರಿಗೆ ಹಿತವನ್ನು ಆಚರಿಸುವಂತೆಯೇ ತನಗೆ ಬೇಡದವರಿಗೆ ಅಹಿತವನ್ನು ಆಚರಿಸದೆ ಅದಕ್ಕೆ ಗತ್ಯಂತರವಿಲ್ಲ.

ಮನಸ್ಸು "ನಾನು"–ಎಂಬ ಒಂದು ಕಲ್ಪಿತಕೇಂದ್ರವನ್ನಿಟ್ಟುಕೊಂಡಲ್ಲದೆ ತನ್ನ ವ್ಯಾಪಾರವನ್ನು ನಡೆಯಿಸಲೇ ಆರದು. ಜೇಡರಹುಳುವು ಒಂದು ಮಧ್ಯಪ್ರದೇಶವನ್ನು ಕಲ್ಪಿಸಿಕೊಂಡು ಸುತ್ತಲೂ ದಾರಗಳನ್ನು ನೆಯ್ದು ಅವುಗಳಿಗೆ ಅಡ್ಡಲಾಗಿ ಬೀಸುದಾರಗಳನ್ನು ಹಾಕಿ ವಿಚಿತ್ರವಾದ ಬಲೆಯನ್ನು ರಚಿಸಿಕೊಳ್ಳುವಂತೆ ಈ ಮನಸ್ಸು ತಾನು ಎಲ್ಲಿದ್ದರೆ ಅಲ್ಲಿ ಒಂದು ಕೇಂದ್ರವನ್ನೇ ಏರ್ಪಡಿಸಿಕೊಂಡು ಸುತ್ತಲೂ ತನ್ನ ರಾಗದ್ವೇಷಾದಿಗಳ ವಿಚಿತ್ರವಾದ ಬಲೆಯೊಂದನ್ನು ಏರ್ಪಡಿಸಿಕೊಳ್ಳುತ್ತಿರುವದು. ಈ ಬಲೆಯಿಲ್ಲದೆ ಮನಸ್ಸು ಮನಸ್ಸಾಗಿ ನಿಂತುಕೊಳ್ಳಲೇ ಆರದು. ಮನಸ್ಸು ಹೀಗೆ ಕಲ್ಪಿಸಿಕೊಂಡ ಕೇಂದ್ರ, ಸುತ್ತಲೂ ಹಾಕಿಕೊಂಡಿರುವ ರಾಗದ್ವೇಷಾದಿಗಳ ಬಲೆ–ಇವುಗಳಿಂದಲೇ ಜೀವರುಗಳು ಬೇರೆಬೇರೆಯ ವ್ಯಕ್ತಿಗಳೆನ್ನಿಸಿಕೊಂಡಿರುವರು. ಒಬ್ಬ ಜೀವನು ಮಿಕ್ಕ ಯಾವ ಜೀವರಂತೆಯೂ ಇರುವದಿಲ್ಲ. ಅವನು ತಾನುತಾನು ಮನಸ್ಸಿನಲ್ಲಿ ವಾಸನಾರೂಪದಿಂದ ಕೂಡಿಹಾಕಿಕೊಂಡಿರುವ

ರಾಗದ್ವೇಷಭಯಾದಿಗಳಿಂದಲೇ ತನ್ನತನ್ನ ಕರ್ಮರಾಶಿಯನ್ನು ಹೊರಹಾಕಿ ಆಯಾ ಫಲವನ್ನು ಅನುಭವಿಸಬೇಕಾಗಿರುವದು.

ಜೀವನು ತನ್ನ ಪರಮಾರ್ಥಾತ್ಮನಾಗಿರುವ ಪರಮಾತ್ಮನಕಡೆಗೆ ತಿರುಗದೆ ಹೊರಗಿರುವ ಬಗೆಬಗೆಯ ವಿಷಯಗಳಲ್ಲಿ ಶೋಭನಾಶೋಭನಬುದ್ಧಿಯನ್ನು ಇಟ್ಟುಕೊಂಡಿರುವದೇ ಅವನ ಮನೋರೂಪವಾದ ಸೂಕ್ಷ್ಮಶರೀರದ ಅಸಾಧಾರಣವಾದ ವಿಕಾಸಕ್ಕೆ ಕಾರಣವಾಗಿರುವದು. ಇಗೊ, ಇದು ಒಳ್ಳೆಯ ಪದಾರ್ಥವು, ಇದನ್ನು ಸಂಪಾದಿಸಿಕೊಂಡು ಸುಖಪಡುವೆನು, ಇಗೊ ಇದು ನನಗೆ ಬೇಡದ ಪದಾರ್ಥವು, ಇದನ್ನು ದೂರ ಮಾಡಿಕೊಂಡು ದುಃಖವನ್ನು ಪರಿಹರಿಸಿಕೊಳ್ಳುವೆನು; ಇಗೊ, ಇವರು ನನಗೆ ಬೇಕಾಗಿರುವ ಸುಹೃನ್ಮಿತ್ರಾದಿಗಳು, ಇವರನ್ನು ಕೂಡಿ ಕಾಲಕ್ಷೇಪವನ್ನು ಮಾಡುವೆನು; ಇಗೊ, ಇವರು ನನ್ನ ಶತ್ರುವೈರ್ಯಾದಿಗಳು, ಇವರನ್ನು ಹತ್ತಬಡೆದು ನನಗೆ ಯಾವ ಆತಂಕವೂ ಇಲ್ಲದಂತೆ ಮಾಡಿಕೊಳ್ಳುವೆನು–ಎಂದು ಜೀವನು ಕ್ಷಣಕ್ಷಣವೂ ತನ್ನಲ್ಲಿ ತಾನು ಗುಣಿಸಿಕೊಳ್ಳುತ್ತಲೇ ಇರುವನು. ಮನಸ್ಸಿನಲ್ಲಿ ಉಂಟಾದ ಈ ರಾಗದ್ವೇಷಭಾವನೆಗಳು ಇವನ ಸುತ್ತಲೂ ಅದಕ್ಕನುಗುಣವಾದ ಸನ್ನಿವೇಶಗಳನ್ನು ಏರ್ಪಡಿಸುತ್ತಲೇ ಇರುವವು. "ಈ ಊರು ಕೆಟ್ಟದು, ಇಲ್ಲಿಯ ಜನರು ಒಳ್ಳೆಯವರಲ್ಲ, ಇಲ್ಲಿ ನನ್ನ ಅಭಿವೃದ್ಧಿಗೆ ಆನುಕೂಲ್ಯಗಳಿಲ್ಲ, ಅಗೊ, ಆ ಊರಿಗೆ ಹೋದರೆ ಎಲ್ಲಾ ಸರಿಹೋಗುವದು; ಈ ಉದ್ಯೋಗವು ನನಗೆ ಹೊಂದಿಕೆಯಾಗಿಲ್ಲ, ಈ ಯಜಮಾನನು ನನಗೆ ಅನುಗುಣವಾಗಿಲ್ಲ, ಇಲ್ಲಿ ನನಗೆ ತಕ್ಕಷ್ಟು ಧನಲಾಭವಾಗುತ್ತಿಲ್ಲ"–ಎಂದು ಮುಂತಾಗಿ ಶುಭಾಶುಭಬುದ್ಧಿಗಳನ್ನು ಅಧ್ಯಾಸಮಾಡುತ್ತಾ ದಾರಿದ್ರ್ಯ, ಅನಾರೋಗ್ಯ, ಜನದ್ವೇಷ–ಮುಂತಾದವುಗಳಿಂದ ಸಂಕಟಪಡುವ ಸಂಸಾರಿಗಳೇ ಬಹಳ. ಕಾಲಸ್ಥಿತಿಯು ಮಾರ್ಪಟ್ಟಿರುವದರಿಂದ ಹೊಟ್ಟೆಬಟ್ಟೆಗಳಿಗೂ ಮನಸ್ಸಿನ ನೆಮ್ಮದಿಗೂ ಎಲ್ಲಾ ಕಡೆಯಲ್ಲಿಯೂ ಈಗ್ಯೆ ಸ್ವಲ್ಪ ಎಲ್ಲರಿಗೂ ಅಡಚಣೆಯಾಗಿದೆ– ಎಂಬುದು ನಿಜ; ಆದರೆ ಬಹುಜನರಿಗೆ "ಮಾಡಿದ್ದುಣ್ಣೋ ಮಾರಾಯ" ಎಂಬಂತೆ ಅವರವರ ಮನಸ್ಸಿನ ಒಲವೇ ಅವರವರಿಗೆ ಇಂಥ ಅಪ್ರಿಯವಾದ ಸನ್ನಿವೇಶಗಳನ್ನು ತಂದುಕೊಟ್ಟಿರುವದೆಂಬುದಕ್ಕೆ ಸಂದೇಹವಿಲ್ಲ.

ಸಾಧಕನಾದವನು ಹೊರಗಿನ ವಿಷಯಗಳನ್ನಾಗಲಿ ಜೀವರುಗಳನ್ನಾಗಲಿ ತನ್ನ ಪರಿಸ್ಥಿತಿಗೆ ಹೊಣೆ ಎಂದು ಎಂದಿಗೂ ಭಾವಿಸಬಾರದು. ತನ್ನ ಮನಸ್ಸಿನಲ್ಲಿ ತಾನು ಬೆಳಯಿಸಿಕೊಳ್ಳುತ್ತಿರುವ ಶುಭಾಶುಭವಾಸನಾರಾಶಿಯು ತನ್ನನ್ನು ಈ ಗತಿಗೆ ತಂದಿರಿಸಿರುವದೆಂಬುದನ್ನೂ ಮರೆಯದೆ ಇರಬೇಕು. ಯಾವದೋ ಅನಿರೀಕ್ಷಿತನಿಮಿತ್ತದಿಂದ ಆದ ಅಪ್ರಿಯಘಟನೆಗೆ ಕೆಲಕೆಲವರು ವ್ಯಕ್ತಿಗಳನ್ನು ಹೊಣೆಯಾಗಿ ಭಾವಿಸಿಕೊಂಡು ತನ್ನ ಯಾವಜ್ಜೀವವೂ ಅವರಲ್ಲಿ ದ್ವೇಷಬುದ್ಧಿಯನ್ನು ಬೆಳಯಿಸಿಕೊಂಡುಬರುವವರೂ

ಉಂಟು. ಕಾರಣವಿಲ್ಲದೆ ಕೆಲಕೆಲವರ ವಿಷಯಕ್ಕೆ ಅಸೂಯೆಯನ್ನೂ ಮಾತ್ಸರ್ಯವನ್ನೂ ಎಡೆಬಿಡದೆ ಧಾರಾಕಾರವಾಗಿ ನಡೆಯಿಸಿಕೊಂಡು ಬಂದಿರುವವರೂ ಉಂಟು. ಇಂಥವರೂ ತಾವು ಸ್ವತಂತ್ರವಾಗಿ ಒಬ್ಬರಿಗೆ ಕೇಡುಬಗೆಯುವೆವು, ಕೆಟ್ಟದ್ದನ್ನು ಮಾಡುವೆವು, ಅವರ ವಿಷಯಕ್ಕೆ ಕೆಟ್ಟಮಾತುಗಳನ್ನಾಡುವೆವು, ಚಾಡಿಹೇಳುವೆವು, ಅವರು ಮುಂದುವರಿಯದಂತೆ ಅಡ್ಡಿಮಾಡುವೆವು- ಎಂದು ಮುಂತಾಗಿ ಭಾವಿಸಿಕೊಂಡಿರುವರು. ಆದರೆ ನಿಜವೇನೆಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ- ಮುಂತಾದವುಗಳು ಇವರನ್ನು ಪಿಶಾಚಿಗಳಂತೆ ಹಿಡಿದುಕೊಂಡಿರುವವು. ಇವರಿಗೂ ಅರಿವಿಲ್ಲದೆಯೆ ಇವರಿಂದ ಮಾಡಬಾರದ ಕೆಲಸಗಳನ್ನು ಮಾಡಿಸುವವು; ಮತ್ತೊಬ್ಬರಿಗಲ್ಲದೆ ಇವರಿಗೂ ಮನೋವ್ಯಥೆಯನ್ನೂ ಅಸಹ್ಯವಾದ ಪರಿಸ್ಥಿತಿಯನ್ನೂ ತಂದೊಡ್ಡುತ್ತಿರುವವು.

ಮನುಷ್ಯನಿಗೆ ಬಡತನ, ಅನಾರೋಗ್ಯ, ಅವ್ಯವಸ್ಥೆ, ಮನಸ್ಸಿನ ಅವಸಾದ, ಜೀವನದಲ್ಲಿ ಬೇಸರ- ಇವುಗಳೆಲ್ಲ ಅವನ ಮನಸ್ಸಿನ ಆಲೋಚನಾತರಂಗಗಳಿಂದಲೇ ಬಹುಮಟ್ಟಿಗೆ ಆಗುವವೆಂಬುದು ನಮ್ಮಲ್ಲಿ ಅನೇಕರಿಗೆ ತಿಳಿಯದು. ತಿಳಿದಿರುವ ಎಲ್ಲಿಯೋ ಕೆಲವು ಜನಗಳಲ್ಲಿ ಇದಕ್ಕೆ ಪ್ರತೀಕಾರವನ್ನು ಹೇಗೆ ಮಾಡಿಕೊಳ್ಳಬೇಕೆಂಬುದು ತಿಳಿಯದು. ದುಷ್ಟವಾಸನೆಗಳು ನಮ್ಮನ್ನು ಹಿಡಿದುಕೊಂಡು ಕಪಿಯಂತೆ ಕುಣಿಸುತ್ತಿರುವವು. ಯೋಗಶಾಸ್ತ್ರವೇ ಮುಂತಾದವುಗಳಲ್ಲಿ ದುಷ್ಟಭಾವನೆಗಳನ್ನು, ಪ್ರತಿಪಕ್ಷಭಾವನೆಯನ್ನು ಮಾಡುವದರಿಂದ ಗೆದ್ದುಕೊಳ್ಳಬಹುದೆಂಬ ಸೂಚನೆಯನ್ನು ಕೊಟ್ಟಿದೆ. ಉದಾಹರಣೆಗೆ ಒಬ್ಬನ ವಿಷಯದಲ್ಲಿ ನಮಗೆ ಲೋಭಬುದ್ಧಿ ಉಂಟಾದರೆ ಪ್ರಯತ್ನಪೂರ್ವಕವಾಗಿ ಅವನಲ್ಲಿ ಔದಾರ್ಯವನ್ನು ತೋರಿಸಬೇಕು. ಒಬ್ಬನ ವಿಷಯಕ್ಕೆ ನಮಗೆ ಅನಿವಾರ್ಯವಾಗಿ ದುಷ್ಟ ಆಲೋಚನೆಗಳು ಬಂದರೆ ಕೂಡಲೆ ಅವುಗಳಿಗೆ ಪ್ರತಿಪಕ್ಷವಾದ ಸದ್ಭಾವನೆಗಳನ್ನು ತಂದುಕೊಂಡು ಅವನನ್ನು ಪ್ರೀತಿಸಬೇಕು. ಒಬ್ಬನ ವಿಷಯದಲ್ಲಿ ಚಾಡಿಯನ್ನೋ ಕೆಟ್ಟ ಮಾತುಗಳನ್ನೋ ಆಡುವ ಒಲವು ಬಂದರೆ ಕೂಡಲೆ ಅವನಲ್ಲಿರುವ ಸದ್ಗುಣಗಳನ್ನು ಎತ್ತಿಹಿಡಿದು ಕೊಂಡಾಡಬೇಕು. ಒಬ್ಬನ ವಿಷಯದಲ್ಲಿ ಏನಾದರೂ ಅಪಕಾರವನ್ನು ಮಾಡಬೇಕೆಂಬ ಬುದ್ಧಿಯು ಎದ್ದುಕೊಂಡರೆ ಕೂಡಲೆ ನಮ್ಮ ಕೈಯಲ್ಲಾದ ಉಪಕಾರವನ್ನು ಅವನಿಗೆ ಮಾಡುವದಕ್ಕೆ ಸರ್ವಪ್ರಯತ್ನವನ್ನೂ ಮಾಡಬೇಕು. ಹೆಚ್ಚೇನು? ಮನಸ್ಸಿನಲ್ಲಿ ಆಗಾಗ್ಗೆ ಎದ್ದುಕೊಳ್ಳುವ ಅಶುಭವಾಸನೆಗಳನ್ನು ಆಗಾಗಲೇ ಅವಕ್ಕೆ ಪ್ರತಿಯಾಗಿರುವ ಸದ್ಭಾವನೆಗಳನ್ನು ಎಬ್ಬಿಸಿಕೊಳ್ಳುವದರಿಂದ ಚಿವುಟಿಹಾಕಬೇಕು- ಹೀಗೆಂಬುದು ಪ್ರತಿಪಕ್ಷಭಾವನಾವಾದಿಗಳ ತತ್ತ್ವವು.

ಸಾಧಕನ ಪ್ರಥಮಸ್ಥಿತಿಯಲ್ಲಿ ಈ ಪ್ರತಿಪಕ್ಷಭಾವನೆ ಎಂಬುದು ಒಂದು ಮಹಾಸ್ತ್ರವೇ ಸರಿ! ಎಷ್ಟೋ ಜನರು ಅಭಕ್ಷ್ಯಭಕ್ಷಣ, ಅಹಿತಭಕ್ಷಣ- ಮುಂತಾದವುಗಳನ್ನು ಉಪವಾಸ,

ತಾನೇ ಮಾಡಿದ ಅನ್ನವನ್ನು ಈಶ್ವರನಿಗೂ ಅತಿಥಿಗಳಿಗೂ ಅರ್ಪಣೆಮಾಡುವ ನಿಯಮ- ಮುಂತಾದ ಪ್ರತಿಪಕ್ಷಗಳಿಂದ ಗೆದ್ದುಕೊಂಡಿದ್ದಾರೆ; ಪರಸ್ತ್ರೀಯಲ್ಲಿ ಕಾಮಭಾವನೆ ಉಂಟಾದಾಗ ಆಗಾಗಲೇ ಮಾತೃಭಾವನೆಯನ್ನು ಮಾಡಿ ಪಾರಾಗಿದ್ದಾರೆ. ಧನಲೋಭವೂ ಪರಧನಾಶೆಯೂ ಉಂಟಾದಾಗ ದಾನಧರ್ಮಪರೋಪಕಾರಗಳನ್ನು ಮಾಡಿ ಜಯಶೀಲರಾಗಿದ್ದಾರೆ. ಮತ್ತೊಬ್ಬರನ್ನು ಹಳಿಯುವದು, ಅನವಶ್ಯಕವಾಗಿ ಹರಟೆ ಹೊಡೆಯುವದು, ಚಾಡಿಹೇಳುವದು- ಮುಂತಾದ ದುರಭ್ಯಾಸಗಳನ್ನು ವಾಙ್ಮೌನದಿಂದ ಗೆದ್ದುಕೊಂಡಿರುತ್ತಾರೆ. ಇತ್ಯಾದಿ ಇತ್ಯಾದಿ. ಆದರೆ ಹೀಗೆ ಪ್ರತಿಪಕ್ಷಭಾವನೆಯನ್ನು ಮಾಡುವಾಗ ಸ್ವಪ್ರಯತ್ನವು ಹೆಚ್ಚಾಗಿ ಬೇಕಾಗುವದರಿಂದ ಹಿಂದಿನ ರೂಢಮೂಲವಾದ ದುಷ್ಟಹವ್ಯಾಸವನ್ನು ಹೊಡೆದೋಡಿಸುವದು ಕಷ್ಟಸಾಧ್ಯವಾಗಬಹುದು. ಇಷ್ಟೇ ಅಲ್ಲ, ದುಷ್ಟಾಭ್ಯಾಸಗಳು ತಮ್ಮನ್ನು ಎದುರಿಸಿದಾಗಲೆಲ್ಲ ಬಲವಾಗುವ ಸಂಭವವೂ ಉಂಟು. ಎಷ್ಟೋ ಜನರು ತಮ್ಮಲ್ಲಿರುವ ಕೆಟ್ಟಚಟಗಳನ್ನು ತಪ್ಪಿಸಿಕೊಳ್ಳುವದಕ್ಕೆಂದು ಬಗೆಬಗೆಯ ಪ್ರಯತ್ನಗಳನ್ನು ಮಾಡಿ ಸೋತಿರುವದಲ್ಲದೆ ಮೊದಲಿಗಿಂತಲೂ ಆ ದುರಭ್ಯಾಸಗಳು ಹೆಚ್ಚಿನ ಪ್ರಮಾಣದಿಂದ ತಮ್ಮಮೇಲೆ ಆಕ್ರಮಿಸಿಕೊಂಡದ್ದನ್ನು ಕಂಡು ವ್ಯಥೆಪಟ್ಟಿರುವದೂ ಉಂಟು.

ನಮ್ಮ ಮನಸ್ಸಿನಲ್ಲಿರುವ ದುಷ್ಟವಾಸನೆಗಳನ್ನು ತಪ್ಪಿಸಿಕೊಳ್ಳುವದಕ್ಕೆ ಅಧ್ಯಾತ್ಮ ವಿದ್ಯಾವಿಶಾರದರು ಒಂದು ಉಪಾಯವನ್ನು ತೋರಿಸಿಕೊಟ್ಟಿರುತ್ತಾರೆ. ಅದು ದುಷ್ಟಭಾವನೆಗಳನ್ನು ತಪ್ಪಿಸಿಕೊಳ್ಳುವದಕ್ಕೆ ಮಾತ್ರವೇ ಅಲ್ಲ, ನಮ್ಮ ಜೀವನವನ್ನು ಆನಂದಮಯವಾಗಿ ಮಾಡಿಕೊಳ್ಳುವದಕ್ಕೂ ಉಪಾಯವಾಗಿದೆ. ನಮ್ಮೆಲ್ಲರಿಗೂ ಆನಂದಘನನಾಗಿರುವ ಪರಮೇಶ್ವರನೊಬ್ಬನೇ ಆತ್ಮನಾಗಿರುತ್ತಾನೆ. ಇದೊಂದು ಅಬಾಧಿತವಾದ ತತ್ತ್ವವು. ನಾವು ಅರಿತಿರಲಿ ಅರಿಯದಿರಲಿ, ಪರಮೇಶ್ವರನನ್ನು ಬಿಟ್ಟು ಒಂದು ಅರೆಗಳಿಗೆಯೂ ಇರಲಾರೆವು, ಒಂದು ಅರೆಗಳಿಗೆಯೂ ಯಾವ ವ್ಯಾಪಾರವನ್ನೂ ಮಾಡಲಾರೆವು. ಆತನನ್ನು ಮನಸ್ಸಿಗೆ ತಂದುಕೊಳ್ಳುವದೇ ಸರ್ವವಿಧವಾದ ಅನಿಷ್ಟನಿವೃತ್ತಿಗೂ ಇಷ್ಟಪ್ರಾಪ್ತಿಗೂ ಪರಮೋಪಾಯವು.

ಹಿಂದೆ ಹೇಳಿರುವಂತೆ ಮನಸ್ಸಿಗೆ ಒಂದು ಕೇಂದ್ರವು ಬೇಕು. ಯಾವದೊಂದೂ ಕೇಂದ್ರವಿಲ್ಲದೆ ಅದು ಬಾಳಲೇ ಆರದು, ದೇಹವನ್ನೋ, ಪ್ರಾಣವನ್ನೋ, ಇಂದ್ರಿಯಗಳನ್ನೋ, ಅಹಂಕಾರವನ್ನೋ- ಯಾವದಾದರೊಂದನ್ನು ಅದು ನಾನೆಂದು ಮಾಡಿಕೊಂಡು ಬಾಳಬೇಕಾಗಿದೆ. ಅದಕ್ಕೆ ಅನುಕೂಲವಾದದ್ದನ್ನೆಲ್ಲ ಒಳ್ಳೆಯದೆಂದೂ ಪ್ರತಿಕೂಲವಾದದ್ದನ್ನೆಲ್ಲ ಕೆಟ್ಟದ್ದೆಂದೂ ಭಾವಿಸಿಕೊಳ್ಳುವದು ಅದರ ಸ್ವಭಾವ. ಸತ್ಸಂಗದಿಂದ ಪರಮಾತ್ಮನೊಬ್ಬನು ಇವುಗಳೆಲ್ಲಕ್ಕೂ ಒಳಗೆ ಆತ್ಮನಾಗಿ ಇದಾನೆಂದೂ ಅವನು ಯಾವ ವಿಕಾರವೂ ಇಲ್ಲದೆ ಇರುವ ಆನಂದದ ಗಟ್ಟಿಯೆಂದೂ ಅವನೇ ನಮ್ಮ ನಿಜವಾದ ಆತ್ಮನೆಂದೂ ತಿಳಿದುಕೊಂಡರೆ ಅಂದಿನಿಂದ ಅದು ಆ ಪರಮಾತ್ಮನ ಕಡೆಗೇ ಒಲಿಯುವದಕ್ಕೆ ಮೊದಲು ಮಾಡುವದು.

ಪರಮಾತ್ಮನಿಗಿಂತ ಬೇರೆಯಾಗಿರುವ ಯಾವದೊಂದು ವಸ್ತುವಿನಲ್ಲಿಯಾದರೂ ಆತ್ಮಭಾವನೆಯನ್ನು ಮಾಡುವದಕ್ಕೂ ನಿಜವಾದ ನಮ್ಮ ಆತ್ಮನೇ ಆಗಿರುವ ಭಗವಂತನಲ್ಲಿ ಆತ್ಮಭಾವನೆಮಾಡುವದಕ್ಕೂ ಒಂದು ಮುಖ್ಯವಾದ ತಾರತಮ್ಯವಿದೆ. ಮನಸ್ಸು ಯಾವದನ್ನು ತನ್ನ ಆತ್ಮನೆಂದು ಬಗೆದುಕೊಳ್ಳುವದೋ ಅದನ್ನೂ ಅದಕ್ಕನುಗುಣವಾದ ಮತ್ತೆ ಕೆಲವು ಪದಾರ್ಥಗಳನ್ನೂ ಜೀವರುಗಳನ್ನೂ ಇಷ್ಟಕೋಟಿಗೆ ಸೇರಿಸಿಕೊಳ್ಳುತ್ತದೆ; ಅದಕ್ಕನನುಗುಣವಾದ ಮತ್ತೆ ಕೆಲವು ಪದಾರ್ಥಗಳನ್ನೂ ಜೀವರುಗಳನ್ನೂ ಅನಿಷ್ಟಕೋಟಿಗೆ ಸೇರಿಸಿಕೊಳ್ಳುತ್ತದೆ. ನನ್ನ ಕುಟುಂಬ, ನನ್ನ ಗ್ರಾಮ, ನನ್ನ ದೇಶ, ನನ್ನ ರಾಷ್ಟ್ರ- ಎಂದು ಮುಂತಾಗಿ ಇಷ್ಟಕೋಟಿಯನ್ನು ಏರ್ಪಡಿಸಿಕೊಂಡಿರುವದರಲ್ಲಿ ಈ ತತ್ತ್ವವು ಅಡಗಿದೆ. ಇದು ಇಷ್ಟವೆಂದು ಅಧ್ಯಾಸಮಾಡಿಕೊಂಡಾಗ ಮಿಕ್ಕದ್ದು ಅನಿಷ್ಟವೆಂದು ಅಧ್ಯಾಸಮಾಡಿಕೊಳ್ಳುವದು ಅನಿವಾರ್ಯವಾಗಿರುತ್ತದೆ. ಇಷ್ಟದ ಉಪಾದಾನವೂ ಅನಿಷ್ಟದ ಹಾನವೂ ಅನಿವಾರ್ಯವಾಗುತ್ತದೆ. ಈ ಹಾನೋಪಾದಾನಗಳ ರಾಶಿಯೇ ಮನುಷ್ಯನ ಜೀವನವಾಗುತ್ತದೆ. ಆದರೆ ಪರಮಾತ್ಮನಲ್ಲಿ ಆತ್ಮಭಾವನೆಮಾಡುವಾಗ ಹೀಗಿರುವದಿಲ್ಲ. ಏಕೆಂದರೆ ಪರಮಾತ್ಮನು ಇಡಿಯ ಜಗತ್ತಿಗೆ ಆತ್ಮನಾಗಿರುತ್ತಾನೆ; ಹಾಗೆಯೇ ನಮಗೂ ಆತ್ಮನಾಗಿರುತ್ತಾನೆ. ನಮ್ಮ ಆತ್ಮನು ನಮಗೆ ಎಂದೆಂದಿಗೂ ಪ್ರೇಮಾಸ್ಪದನಾಗಿಯೇ ಇರುವದರಿಂದ ಎಲ್ಲರನ್ನೂ ಪ್ರೀತಿಸಿದಲ್ಲದೆ ಪರಮಾತ್ಮನನ್ನು ಪ್ರೀತಿಸುವದು ಆಗುವ ಹಾಗೆಯೇ ಇರುವದಿಲ್ಲ.

ಪರಮಾತ್ಮನಲ್ಲಿ ಪ್ರೇಮವಲ್ಲದೆ ಮತ್ತೆ ಯಾವ ಭಾವನೆಯನ್ನು ಮಾಡುವದಕ್ಕೆ ಆಗುವದೇ ಇಲ್ಲ. ಆದ್ದರಿಂದ ಪರಮಾತ್ಮನ ಭಕ್ತನು ಯಾವದೊಂದು ಪ್ರಾಣಿಯ ವಿಷಯದಲ್ಲಿಯೂ ಕ್ರೋಧವನ್ನಾಗಲಿ, ಮಾತ್ಸರ್ಯವನ್ನಾಗಲಿ ಲೋಭವನ್ನಾಗಲಿ, ಅಥವಾ ಮತ್ತೆ ಯಾವ ಕೆಟ್ಟಬುದ್ಧಿಯನ್ನಾಗಲಿ ಮಾಡುವದು ಸಾಧ್ಯವೇ ಇಲ್ಲ. ಆದ್ದರಿಂದ ಪರಮಾತ್ಮನ ಭಕ್ತರಾದ ಪುಣ್ಯಾತ್ಮರನ್ನು ರಾಗದ್ವೇಷಮೋಹಾದಿಕ್ಲೇಶಗಳು ಎಂದಿಗೂ ಕಾಡಲಾರವು. ಪರಮಾತ್ಮನು ಪುರುಷೋತ್ತಮನು. ಎಲ್ಲಾ ಜೀವರುಗಳನ್ನೂ ಆತ್ಮನಾಗಿ ವ್ಯಾಪಿಸಿಕೊಂಡಿರುವ ಪರಮಪುರುಷನು. ಅವನ ಸತ್ತ್ವವನ್ನೂ ಸ್ವರೂಪವನ್ನೂ ಅರಿಯದೆ ಇರುವವರು ಮಾತ್ರವೇ ರಾಗದ್ವೇಷಾದಿಗಳಿಗೆ ಪಕ್ಕಾಗಿರುವರು. ಎಂದು ಯಾವ ಸ್ಥಿತಿಯಲ್ಲಿ ಯಾವನು ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳಿಗೆಲ್ಲ ಒಬ್ಬ ಪರಮಾತ್ಮನೇ ಆತ್ಮನೆಂದು ಅರಿತುಕೊಳ್ಳುವನೋ ಅಂದು ಆ ಮಹಾತ್ಮನಿಗೆ ರಾಗದ್ವೇಷಾದಿಗಳು ಹೇಳಹೆಸರಿಲ್ಲದೆ ಮಾಯವಾಗುವವು. ಅದಕ್ಕಾಗಿ ಅವನು ಯಾವ ಪ್ರಯತ್ನವನ್ನೂ ಮಾಡಬೇಕಾದದ್ದಿರುವದಿಲ್ಲ.

## 3.7. ನಿಜವಾದ ಚಿದಂಬರನು ನಮ್ಮ ಆತ್ಮನೇ

**ಅಸ್ಯಲೋಕಸ್ಯ ಕಾ ಗತಿರಿತ್ಯಾಕಾಶ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತ ಆಕಾಶಂ ಪ್ರತ್ಯಸ್ತಂ ಯಂತ್ಯಾಕಾಶೋ ಹ್ಯೇವೈಭ್ಯೋ ಜ್ಯಾಯಾನಾಕಾಶಃ ಪರಾಯಣಮ್ ॥**

(ಛಾಂ. 1-9-1)

**"ಲೋಕಕ್ಕೆ ಆಶ್ರಯವು ಯಾವದು? ಆಕಾಶವೇ ಆಶ್ರಯವು; ಈ ಭೂತಗಳೆಲ್ಲವೂ ಆಕಾಶದಿಂದಲೇ ಹುಟ್ಟುತ್ತವೆ; ಆಕಾಶದಲ್ಲಿಯೇ ಲಯವಾಗುತ್ತವೆ. ಆಕಾಶವೇ ಇವುಗಳೆಲ್ಲಕ್ಕಿಂತಲೂ ದೊಡ್ಡದು, ಆಕಾಶವೇ ಪರಾಯಣವು."**

ಈ ಲೇಖನವು ಪ್ರಾರಂಭವಾಗುವಾಗ ನಾನು ಕುಳಿತಿರುವ "ಸುಖಾನಂದರತ್ನ ಮಂದಿರ"ದ ಕೋಣೆಯ ಕಿಟಕಿಯಿಂದ ನೋಡಿದರೆ ಸುಂದರವಾದ ಪ್ರಕೃತಿಯ ದೃಶ್ಯವು ಕಾಣಿಸುತ್ತಿದೆ. ಮನೆಯಿಂದ ಉತ್ತರದಿಕ್ಕಿಗೆ ಉದ್ದಕ್ಕೂ ಸುಮಾರು ಒಂದೆರಡು ಮೈಲಿಗಳವರೆಗೂ ವಿಶಾಲವಾದ ಬಯಲು ಕಾಣಿಸುತ್ತಿದೆ. ಅದರ ಹಿಂದೆ ತೆಂಗುಅಡಿಕೆಗಳ ತೋಟ ಒಂದು ಕಂಗೊಳಿಸುತ್ತಿದೆ. ಅದಕ್ಕೂ ಹಿಂದೆ ಬೆಟ್ಟದ ಸಾಲೊಂದು ಪೂರ್ವದಿಂದ ಪಶ್ಚಿಮಕ್ಕೆ ಹಬ್ಬಿದೆ. ನಾವಿರುವ ಪಟ್ಟಣದ ಬಡಾವಣೆಯ ನೆನಪನ್ನು ಮರೆತು ಈ ಚಿತ್ತಾಕರ್ಷಕವಾದ ದೃಶ್ಯದತ್ತ ಕಣ್ಣಿನ ನೋಟವನ್ನು ಚೆಲ್ಲಿದರೆ ಸಾಕು, ಮನಸ್ಸು ತನ್ನ ಸಂಕುಚಿತದೃಷ್ಟಿಯನ್ನು ಬಿಟ್ಟು ಕೂಡಲೆ ವೈಶಾಲ್ಯವನ್ನು ಹೊಂದಿ ಕರಗಿಹೋಗುತ್ತದೆ. ಅಭೂತಪೂರ್ವವಾದ ಶಾಂತಿಯೊಂದು ಮನಸ್ಸಿನಲ್ಲಿ ತೋರಿಕೊಳ್ಳುತ್ತದೆ. ಪರಮಾತ್ಮನ ಧ್ಯಾನವನ್ನು ಮಾಡುವವರು ಇಂಥ ಸುಂದರವಾದ ನೋಟಗಳನ್ನು ಆಗಾಗ್ಗೆ ನೋಡುತ್ತಿರುವದು ಅವಶ್ಯವು. ಕಣ್ಣಿಗೆ ಕಿರುಕುಳವನ್ನುಂಟು ಮಾಡುವ ನೋಟಗಳಿಲ್ಲದ ನಿಃಶಬ್ದವಾದ ಮನೋನುಕೂಲವಾದ ಇಂಥ ಏಕಾಂತಪ್ರದೇಶಗಳು ಸಿಕ್ಕಿದರೆ ಪರಮಾತ್ಮಧ್ಯಾನಾಸಕ್ತರಾದ ಯೋಗಿಗಳಿಗೆ ಬಹುಬೇಗನೆ ಪರಮಾತ್ಮನಲ್ಲಿ ಮನಸ್ಸು ಲೀನವಾಗುವದೆಂದು ಬಲ್ಲವರು ಹೇಳುತ್ತಾರೆ.

ಈ ನೋಟವನ್ನು ನೋಡುತ್ತಿದ್ದಹಾಗೆಯೇ ನನ್ನ ಮನಸ್ಸಿನಲ್ಲಿ ಒಂದು ಭಾವನೆಯು ಹೊಳೆಯಿತು. ಇದೇ ಬಯಲಿನಲ್ಲಿ ಈಗಾಗಲೆ ಅಲ್ಲೊಂದು, ಇಲ್ಲೊಂದು ಮನೆಗಳು ನಿರ್ಮಾಣವಾಗುತ್ತಿವೆ. ಪೌರಸಭೆಯವರ ಸಹಾಯದಿಂದಲೂ ಊರಜನರ ಉತ್ಸಾಹದಿಂದಲೂ ಇಲ್ಲಿ ಬಲುಬೇಗನೆ ದೊಡ್ಡ ಬಡಾವಣೆಯೊಂದು ಏರ್ಪಡುವ ಚಿಹ್ನೆಗಳು ಕಾಣಬರುತ್ತಿವೆ. ಇದೇ ವೇಗದಲ್ಲಿ ಮನೆಗಳು ನಿರ್ಮಾಣವಾದರೆ ಇನ್ನು ಆರೇಳು ತಿಂಗಳೊಳಗೇ ಒಂದು ಊರಿನ ಶಾಖೆಯು ಏರ್ಪಡುತ್ತದೆ. ಆಗ್ಗೆ ಜನಗಳ ಓಡಾಟವೂ ಪದಾರ್ಥಗಳನ್ನು ಕೊಳ್ಳುವ ಮಾರುವ ವ್ಯವಹಾರದ ಗದ್ದಲವೂ ಬೈಸಿಕಲ್ಲುಗಳು

ಜಟಕಾಗಳು, ಲಾರಿಗಳು ಮುಂತಾದ ಯಾನಗಳು ಚಲನವಲನಗಳೂ ಅವಶ್ಯಕವಾಗಿ ತುಂಬಿಕೊಳ್ಳುತ್ತವೆ. ಆದರೆ ಅಷ್ಟುಹೊತ್ತಿಗೆ ಈ ದೃಶ್ಯದ ಸೌಂದರ್ಯವು ಮಾಯವಾಗಿ ಬಿಟ್ಟಿರುತ್ತದೆ. ಇಲ್ಲಿ ಓಡಾಡುವ ಜನರ ಮನಸ್ಸುಗಳಲ್ಲಿ ಮತ್ತಷ್ಟು ವಿಕ್ಷೇಪಗಳು ಎದ್ದುಕೊಂಡಿರುತ್ತವೆ. ಹಚ್ಚಗಿರುವ, ಕಣ್ಣಿಗೆ ಸುಖಕರವಾಗಿರುವ, ಅಡಕೆತೆಂಗುಗಳ ಮರಗಳ ಮೇಲ್ಭಾಗವು ಕಣ್ಮರೆಯಾಗಿಬಿಟ್ಟಿರುತ್ತದೆ. ಮನಸ್ಸನ್ನು ಮೇಲುಮಟ್ಟದ ಭಾವನೆಗೆ ಏರಿಸುವದಕ್ಕೆ ಸಹಾಯವಾಗಿರುವ ಈ ಬೆಟ್ಟದಸಾಲು ಊರಿನಮರೆಯಲ್ಲಿ ಎಲ್ಲಿಯೋ ಅವಿತುಕೊಂಡಿರುತ್ತದೆ. ಆಗಿನ ಜನರು ತಮಗೆ ಉತ್ತಮವಾದ ಗಾಳಿಯು ಬೇಕಾದರೆ, ವಿಶಾಲವಾದ ಬಯಲಿನಲ್ಲಿ ಓಡಾಟವು ಬೇಕಾದರೆ, ಮನಸ್ಸಿಗೆ ಶಾಂತಿಯನ್ನು ಕೊಡುವ ದೃಶ್ಯವಿಶೇಷವು ಬೇಕಾದರೆ, ಊರಿನಿಂದ ಮತ್ತಷ್ಟು ದೂರ ಹೊರಗೆ ಹೋಗಬೇಕಾಗುವದು.

ಈ ಕಲ್ಪಿತಭಾವನೆಯಿಂದ ನಾವು ಕಲಿತುಕೊಳ್ಳಬಹುದಾದದ್ದೇನು? ಪ್ರಕೃತಿಸೌಂದರ್ಯವು ಯಾರೊಬ್ಬರ ಪ್ರಯತ್ನವನ್ನೂ ಬಯಸದೆ ತನಗೆತಾನೇ ಸಿದ್ಧವಾಗಿದ್ದುಕೊಂಡು ಮನುಷ್ಯನಿಗೆ ಸುಖಸಂತೋಷಗಳನ್ನುಂಟುಮಾಡುವದಕ್ಕೆ ಯಾವಾಗಲೂ ಸಿದ್ಧವಾಗಿರುತ್ತದೆ. ವಿಶಾಲವಾದ ಭೂಪ್ರದೇಶವೂ ವಾಯುಮಂಡಲದ ಭಾಗವೂ ಮಾನವನ ಸಂಕುಚಿತಬುದ್ಧಿಯನ್ನು ಬಿಡಿಸಿ ವಿಶಾಲವಾದ ಆಕಾಶದಲ್ಲಿ ಹರಡಿಕೊಳ್ಳುವಂತೆ ಮಾಡಿ ಸುಖಶಾಂತಿಗಳನ್ನು ಕೊಡುವದಕ್ಕೆ ಯಾವಾಗಲೂ ಸಿದ್ಧವಾಗಿರುತ್ತವೆ. ಆದರೆ ಮನುಷ್ಯನು ತನ್ನ ನಾಗರಿಕತೆಯ ಗುರುತಾಗಿ ರಸ್ತೆಗಳನ್ನು ಏರ್ಪಡಿಸಿಕೊಂಡು ಮನೆಗಳನ್ನು ಕಟ್ಟಿಕೊಂಡು ವಾಣಿಜ್ಯ, ವಿದ್ಯಾಶಾಲೆಗಳು, ಕೈಗಾರಿಕೆಗಳು ಮತ್ತು ಇತರ ಸೌಕರ್ಯಗಳಿಗಾಗಿ ಅಲ್ಲಲ್ಲಿ ಈ ಪ್ರಕೃತಿಯ ನೈಸರ್ಗಿಕಸ್ವಭಾವವನ್ನು ಮಾರ್ಪಡಿಸುತ್ತಾ ಹೋಗುತ್ತಾನೆ. ನಾನುನನ್ನದೆಂಬ ಭಾವನೆಗಳ ಹೊರಗುರುತಾಗಿ ಆಯಾ ಕಟ್ಟಡಗಳಿಗೆ ಒಂದೊಂದು ಪೌಳಿಗೋಡೆಗಳನ್ನು ಹಾಕಿಕೊಳ್ಳುತ್ತಾನೆ. ಸ್ನಾನಶೌಚಾದಿಗಳ ಅನುಕೂಲ್ಯಕ್ಕಾಗಿ ಮಾಡಿಕೊಳ್ಳುವ ಏರ್ಪಾಡುಗಳಿಂದಲೂ ಗಿರಣಿಯೇ ಮುಂತಾದವುಗಳ ಹೊಗೆಯಿಂದಲೂ ಭೂಮಿಯ ವಾಯುಮಂಡಲದ ಪಾವಿತ್ರ್ಯವನ್ನು ಹಾಳುಮಾಡಿಕೊಳ್ಳುತ್ತಾನೆ. ತಮ್ಮತಮ್ಮ ಜೀವನಯಾತ್ರೆಯ ಪ್ರಯತ್ನಗಳ ಸೋಲುಗೆಲವುಗಳ ಫಲವಾಗಿ ಮನಸ್ಸಿನಲ್ಲಿ ಉಂಟಾಗುವ ಏರಿಳಿತಗಳಿಂದ ಮುಖಮುದ್ರೆಗಳಲ್ಲಿ ಬಗೆಬಗೆಯ ಭಾವಗಳನ್ನು ತೋರಿಸುತ್ತಿರುವ ಹೊರಚಿಹ್ನೆಗಳು ಉಳ್ಳ ಜನರು ಗುಂಪುಗುಂಪಾಗಿ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಓಡಾಡುತ್ತಿರುವದರಿಂದ ಇಂಥ ಭಾವಗಳ ವಿನಿಮಯವೇ ಹೊರತು ಸುಖಶಾಂತಿಗಳ ಸುಳಿವೂ ತನ್ನ ಸುತ್ತುವಳೆಯದಲ್ಲಿ ಇಲ್ಲದಂತೆ ಮಾಡಿಕೊಳ್ಳುತ್ತಾನೆ.

ಹೀಗಿದ್ದರೂ ಒಂದಾನೊಂದು ತತ್ತ್ವವು ಮಾತ್ರ ಮೊದಲಿನಿಂದ ಕೊನೆಯವರೆಗೂ ಯಾವ ಮಾರ್ಪಾಡನ್ನೂ ಹೊಂದದೆ ಇದ್ದೇ ಇರುತ್ತದೆ. ಅದು ಯಾವದೆಂದರೆ ಆಕಾಶವು;

ಆಕಾಶವು ಎಲ್ಲಾ ದೃಶ್ಯವಸ್ತುಗಳಿಗೂ ಅವಕಾಶವನ್ನು ಕೊಡುವದಾಗಿದ್ದರೂ ಅವುಗಳ ಸಂಪರ್ಕವು ಒಂದಿಷ್ಟೂ ಇಲ್ಲದೆ ಇರುವ ಸರ್ವವ್ಯಾಪಕವಾದ ಭೂತವಿಶೇಷವು. ಸಾಮಾನ್ಯರು ಅದನ್ನು ನೀಲವರ್ಣದಿಂದ ಕೂಡಿ ನಮ್ಮ ತಲೆಯಮೇಲೆ ಕವುಚಿದ ದೊಡ್ಡ ಬಾಣಲೆಯಂತೆ ಕಾಣಿಸುತ್ತಿರುವ ಒಂದಾನೊಂದು ವಸ್ತುವೆಂದು ಭಾವಿಸಿಕೊಂಡಿರುತ್ತಾರೆ. ಆದರೆ ನಿಜವೇನೆಂದರೆ ಆಕಾಶಕ್ಕೆ ಯಾವ ಬಣ್ಣವೂ ಇರುವದಿಲ್ಲ. ಸ್ಪರ್ಶರೂಪರಸಗಂಧವುಳ್ಳ ವಸ್ತುಗಳೆಲ್ಲವೂ ಅದರೊಳಗೆ ಅದನ್ನಾಶ್ರಯಿಸಿಕೊಂಡೇ ಇರಬೇಕಾಗುತ್ತದೆ. ಹೀಗೆ ನೋಡಿದರೆ ಆಕಾಶವು ಪೃಥಿವ್ಯಪ್ತೇಜೋವಾಯುಗಳೆಂಬ ನಾಲ್ಕು ಭೂತಗಳಿಗೂ ಆಶ್ರಯವಾಗಿರುತ್ತದೆ, ಅವುಗಳೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತದೆ. ಲೋಕದಲ್ಲಿ ಆಕಾಶದಲ್ಲಿ ಅಡಕವಾಗದ ವಸ್ತುವೇ ಇಲ್ಲವೆನ್ನಬಹುದು. ಇನ್ನೂ ಒಂದು ದೃಷ್ಟಿಯಿಂದ ನೋಡಿದರೆ ಆಕಾಶದಿಂದಲೇ ವಾಯುವೂ ವಾಯುವಿನಿಂದ ಅಗ್ನಿಯೂ ಅಗ್ನಿಯಿಂದ ಅಪ್ಪೂ ಅಪ್ಪಿನಿಂದ ಪೃಥ್ವಿಯೂ ಹೀಗೆ ಒಂದಕ್ಕೊಂದು ಕಾರಣವಾಗಿರುವದೆಂದು ಶಾಸ್ತ್ರವು ಹೇಳುತ್ತಿರುವದರಿಂದ ಆಕಾಶವೊಂದೇ ವಾಯ್ವಾದಿಗಳ ರೂಪದಿಂದ ತೋರುತ್ತಿದೆ- ಎಂದು ಹೇಳಬಹುದು. ಈ ದೃಷ್ಟಿಯಲ್ಲಿ ನಾವು ನೋಡುತ್ತಿರುವ ಗಿರಿನದೀಸಮುದ್ರಾದಿ ಸ್ವಾಭಾವಿಕವಾದ ಪ್ರಕೃತಿದೃಶ್ಯಗಳೇ ಅಲ್ಲದೆ ಮನುಷ್ಯಕೃತವೆಂದು ನಾವು ಭಾವಿಸಿಕೊಂಡಿರುವ ಗ್ರಾಮ ಪಟ್ಟಣಪುರಗಳೂ ಅವುಗಳೊಳಗೆ ಮನುಷ್ಯನು ತನ್ನ ಸೌಕರ್ಯಕ್ಕೆಂದು ಕಲ್ಪಿಸಿಕೊಂಡಿರುವ ಸಕಲಕೃತಕದೃಶ್ಯಗಳೂ ಆಕಾಶವೇ ಆಗಿರುವವು. ಸರಾಫರ ಅಂಗಡಿಯಲ್ಲಿ ವ್ಯಾಪಾರಕ್ಕೆಂದು ಇಟ್ಟಿರುವ ಬಗೆಬಗೆಯ ಒಡವೆಗಳೆಲ್ಲ ಬೆಳ್ಳಿ ಅಥವಾ ಬಂಗಾರ ಎಂಬ ಒಂದೇ ಲೋಹದ ಆಕಾರವಿಶೇಷಗಳಾಗಿರುವಂತೆ ನಮಗೆ ಕಾಣುವ ಇಂದ್ರಿಯಗೋಚರವಾದ ನೈಸರ್ಗಿಕ ಮತ್ತು ಕೃತಕವಾದ ದೃಶ್ಯಗಳೆಲ್ಲವೂ ಆಕಾಶವೊಂದೇ ಆಗಿರುತ್ತದೆ. ಈ ಭಾವನೆಯನ್ನು ಮನಸ್ಸಿಗೆ ತಂದುಕೊಳ್ಳುವ ಕಲ್ಪನಾಚತುರರಿಗೆ ತಾವು ಎಲ್ಲಿ ಹೋದರೂ ಆಕಾಶವೊಂದನ್ನೇ ರೂಪಕಾರ್ಯನಾಮಧೇಯಗಳಿಂದ ಭಿನ್ನಭಿನ್ನವಾಗಿ ವ್ಯವಹರಿಸುತ್ತಿದೇವೆಂಬ ತತ್ತ್ವವು ಮನಸ್ಸಿನಲ್ಲಿ ನೆಲೆನಿಂತಿರುತ್ತದೆ.

ಇಡಿಯ ಜಗತ್ತೇ ಆಕಾಶತತ್ತ್ವದ ಪರಿಣಾಮವಿಶೇಷವೆಂಬ ಘನತತ್ತ್ವವನ್ನು ಮನಸ್ಸಿಗೆ ತಂದುಕೊಳ್ಳಬಲ್ಲವರು ಆಕಾಶಕ್ಕಿಂತಲೂ ಹೆಚ್ಚಿನದಾದ ವ್ಯಾಪಕತತ್ತ್ವವೊಂದಿದೆಯೆ?- ಎಂದು ತಮ್ಮಲ್ಲಿ ತಾವೇ ಶಂಕಿಸಿಕೊಳ್ಳುವದು ಸ್ವಾಭಾವಿಕ. ಆಕಾಶಕ್ಕಿಂತಲೂ ವ್ಯಾಪಕವಾಗಿ ಅದಕ್ಕಿಂತಲೂ ಸೂಕ್ಷ್ಮವಾಗಿರುವ ತತ್ತ್ವವನ್ನು ಕಲ್ಪಿಸುವದು ಅಸಾಧ್ಯವೆಂದು ನಮ್ಮಂಥವರಿಗೆ ತೋರಬಹುದು. ಏಕೆಂದರೆ ಯಾವ ವಸ್ತು ಇದ್ದರೂ ಅಲ್ಲಿ, ಇಲ್ಲಿ, ಅಥವಾ ಮತ್ತೆಲ್ಲಿಯಾದರೂ ಒಂದು ಕಡೆ ಇರಬೇಕಾಗುವದು. ಆಗ ಅಲ್ಲಿ, ಇಲ್ಲಿ-ಎಂದು ಕಲ್ಪಿಸುವದಕ್ಕೆ ಅವಕಾಶವನ್ನು ಕೊಡುವದೇ ಆಕಾಶ. ಆದ್ದರಿಂದ ನಾವು ಯಾವ ಭೂತಗಳನ್ನು ನೋಡಲಿ, ಯಾವ ಭೌತಿಕದೃಶ್ಯಗಳನ್ನು ನೋಡಲಿ, ಅಥವಾ ಮನುಷ್ಯ ನಿರ್ಮಿತವಾದ ಯಾವ

ನಾಗರಿಕತೆಯ ಕುರುಹುಗಳನ್ನು ನೋಡಲಿ, ಎಲ್ಲಕ್ಕೂ ಆಕಾಶವೇ ಆಶ್ರಯವಾಗಿರಬೇಕಲ್ಲವೆ? ಆಕಾಶಕ್ಕಿಂತಲೂ ದೊಡ್ಡ ವ್ಯಾಪಕವನ್ನು ಕಲ್ಪಿಸಿಕೊಳ್ಳುವದಾದರೂ ಹೇಗೆ? ಎಂದು ಕೇಳಬಹುದಾಗಿದೆ.

ಹೀಗಿದ್ದರೂ ಆಕಾಶಕ್ಕಿಂತಲೂ ಸೂಕ್ಷ್ಮವಾಗಿ ಆಕಾಶವನ್ನೂ ವ್ಯಾಪಿಸಿಕೊಂಡಿರುವ ಒಂದು ಸೂಕ್ಷ್ಮವಾದ ತತ್ತ್ವವಿಶೇಷವು ನಮ್ಮೆಲ್ಲರ ಅನುಭವದಲ್ಲಿಯೂ ಇದೆ. ನಾವು ಆಕಾಶವೇ ಮುಂತಾದ ಹೊರಗಿನ ದೃಶ್ಯವಿಶೇಷಗಳ ವಿಮರ್ಶೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವದರಿಂದ ನಮಗೆ ಅದು ಇದೆ ಎಂಬ ಶಂಕೆಯು ಹೊಳೆಯುತ್ತಲಿಲ್ಲ. ಆದರೆ ಸ್ವಲ್ಪ ವಿಚಾರಮಾಡಿನೋಡಿರಿ. ಆಕಾಶವು ಇದೆ ಎಂಬುದು ನಮಗೆ ಗೊತ್ತಾಗುವದು ಹೇಗೆ? ನಮ್ಮ ಒಳಗೆ, ಹೊರಗೆ, ಎಡಕ್ಕೆ, ಬಲಕ್ಕೆ, ಮೇಲೆ, ಕೆಳಗೆ-ಎಲ್ಲೆಲ್ಲಿಯೂ ಬರಿಯ ಆಕಾಶವೇ ಎಲ್ಲೆಲ್ಲಿಯೂ ಆಕಾಶದ ವಿಕಾರಗಳೇ-ಎಂಬುದು ನಮಗೆ ಗೊತ್ತಾಗುವದು ಹೇಗೆ? ಈ ಪ್ರಶ್ನೆಗೆ ಒಂದೇ ಉತ್ತರವಿದೆ. ಆಕಾಶವು ಇದೆ ಎಂಬುದು ನಮ್ಮ ಚಿತ್ತಕ್ಕೆ ವೇದ್ಯವಾಗಿದೆ. ಚಿತ್ತಕ್ಕೆ ಸಂಬಂಧಪಡದ ಆಕಾಶವನ್ನು ಕಲ್ಪಿಸುವದು ಯಾರೊಬ್ಬರಿಂದಲೂ ಆಗುವಹಾಗಿಲ್ಲ. ಎಲ್ಲೆಲ್ಲಿ ಆಕಾಶವಿರುವದೆಂದು ನಾವು ಅದರ ವ್ಯಾಪನೆಯನ್ನು ವಿಸ್ತರಿಸಿ ಕಲ್ಪಿಸುವೆವೋ ಅಲ್ಲೆಲ್ಲ ಅದನ್ನು ಇದೆ ಎಂದು ನಮ್ಮ ಅನುಭವಕ್ಕೆ ತರುವ ಚಿತ್ತವು ಅದಕ್ಕಿಂತಲೂ ಮೊದಲು ಇದ್ದುಕೊಂಡೇ ಇರಬೇಕು. ಅಲ್ಲದೆ ಈ ಅನುಭವವನ್ನು ಮನದಂದುಕೊಂಡಿರುವ ತತ್ತ್ವವಿಮರ್ಶಕರು ಭೂತಾಕಾಶಕ್ಕಿಂತಲೂ ಚಿತ್ತಾಕಾಶವು ಹೆಚ್ಚು ವ್ಯಾಪಕವಾಗಿದೆ, ಭೂತಾಕಾಶಕ್ಕೆ ಚಿತ್ತಾಕಾಶವೇ ಆಶ್ರಯವು ಎಂದು ಹೇಳುತ್ತಿರುವರು; ಇಷ್ಟೇ ಅಲ್ಲ, ಚಿತ್ತಕ್ಕೆ ತಿಳಿಯಬರದ ಆಕಾಶವೇ ಇಲ್ಲ. ಆದ್ದರಿಂದ ಒಂದು ದೃಷ್ಟಿಯಿಂದ **ಚಿತ್ತವೇ ಆಕಾಶವೆಂದೂ** ನಾವು ಹೇಳಬಹುದಾಗಿದೆ.

ಭೂತಾಕಾಶವು ಚಿತ್ತಾಕಾಶವನ್ನು ಆಶ್ರಯಿಸಿಕೊಂಡಿರುತ್ತದೆ; ಆದರೆ **ಚಿತ್ತವು ಭೂತಾಕಾಶದ ಹಂಗಿಲ್ಲದೆ ಇರಬಲ್ಲದು**-ಎಂಬುದೊಂದು ಬೆಲೆಯುಳ್ಳ ಅಭಿಪ್ರಾಯವು. ಇದನ್ನು ಮನಗಾಣ ಬೇಕಾದರೆ ನಮ್ಮನಮ್ಮ ಸ್ವಪ್ನಾವಸ್ಥೆಗಳನ್ನು ವಿಮರ್ಶಿಸಬೇಕು. ಯಾವದಾದರೊಂದು ಸ್ವಪ್ನವನ್ನು ಲಕ್ಷಿಸಿನೋಡಿರಿ. ಅಲ್ಲಿರುವದೇನು? ನಮ್ಮ ಎಚ್ಚರದ ಅವಸ್ಥೆಯ ಯಾವದೊಂದು ದೃಶ್ಯವೂ ಅಲ್ಲಿರುವದೇ ಇಲ್ಲ. ಇಲ್ಲಿ ನಾವು ಬಹುಬೆಲೆಯುಳ್ಳ ಪದಾರ್ಥಗಳೆಂದು ಮಾಡಿಕೊಂಡಿರುವ ದೃಶ್ಯಗಳು ಯಾವವೂ ನಮ್ಮ ಸ್ವಪ್ನದೊಳಕ್ಕೆ ತೂರಿಕೊಂಡು ಬರಲಾರವು. ಒಬ್ಬ ಚಕ್ರವರ್ತಿಯು ತನ್ನ ಬಾಹುಬಲದಿಂದ ಗೆದ್ದುಕೊಂಡಿರುವ ಸಾಮ್ರಾಜ್ಯವನ್ನಾಗಲಿ, ಅಲ್ಲಿ ತಾನು ರಾಜ್ಯಶಾಸನಕ್ಕಾಗಿ ಏರ್ಪಡಿಸಿಕೊಂಡಿರುವ ಮಂತ್ರಿ, ಮಾರುಬಲ, ತನ್ನ ಭೋಗಸಾಮಗ್ರಿಗಳಾದ ಅರಮನೆ, ಅಂತಃಪುರ, ಧನಕನಕ ವಸ್ತುವಾಹನಗಳು- ಇವುಗಳಲ್ಲಿ ಯಾವದೊಂದನ್ನೂ ಒಂದಿಷ್ಟನ್ನೂ ತನ್ನ ಕನಸಿಗೆ ತೆಗೆದುಕೊಂಡುಹೋಗಲಾರನು. ಕನಸಿನಲ್ಲಿ ಎಚ್ಚರದಲ್ಲಿರುವಂಥ ಅರಮನೆ

ಮುಂತಾದವುಗಳೂ ಒಂದೊಂದು ವೇಳೆ ಕಾಣಬರಬಹುದು, ನಿಜ; ಆದರೇನು? ಅಲ್ಲಿ ಕಾಣುವ ರಾಜ್ಯಕೋಶ ಬಲಭೋಗಸಾಮಗ್ರಿ ಮುಂತಾದದ್ದೆಲ್ಲವೂ ಚಿತ್ತದ ವಿಲಾಸವೇ, ಚಿತ್ತವೊಂದೇ ತನ್ನ ಮಹಾಶಕ್ತಿಯಿಂದ ಐಂದ್ರಜಾಲಿಕನಂತೆ ಅಲ್ಲಿ ಕ್ಷಣಮಾತ್ರದಲ್ಲಿ ಎಚ್ಚರದ ಎಲ್ಲಾ ಪ್ರಕೃತಿಗಳನ್ನೂ ಸೃಷ್ಟಿಸಿಕೊಂಡಿರುವದು. ಅಲ್ಲಿ ಕಾಣುವದೆಲ್ಲ ಚಿತ್ತದ ವಾಸನಾಮಯವಾದ ದೃಶ್ಯಗಳು. ಅಲ್ಲಿಯೂ ಸೂರ್ಯಚಂದ್ರಭೂಮ್ಯಾದಿಗಳೂ ಅವುಗಳಿಗೆಲ್ಲ ಆಶ್ರಯವನ್ನಿತ್ತಿರುವ ಭೂತಾಕಾಶವೂ ಇರುವಂತೆ ತೋರುವದು ನಿಜ. ಆದರೆ ಆ ದೃಶ್ಯಗಳೂ, ಆಕಾಶವೂ ಎಲ್ಲವೂ ಚಿತ್ತದ ಆಟಗಳೇ. ಆ ಚಿತ್ತಕ್ಕೆ ಜಾಗ್ರತ್ತಿನ ಆಕಾಶಾದಿಗಳ ಹಂಗು ಎಳ್ಳಷ್ಟೂ ಇರುವದೇ ಇಲ್ಲ.

ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಈ ಚಿತ್ತಾಕಾಶವನ್ನು ಕುರಿತು ಆಲೋಚನೆ ಮಾಡುವವರು ಲೋಕದಲ್ಲಿ ಬಹಳ ಕಡಿಮೆ. ಏಕೆಂದರೆ ಈ ಚಿತ್ತವು ಒಂದಾನೊಂದು ಗ್ರಹದಂತೆ ಜನರಲ್ಲಿ ಆವೇಶವಾಗಿ ಚಿತ್ತವೇ ತಾವು ಎಂಬ ಭಾವನೆಯನ್ನು ಅವರಿಗೆ ಉಂಟುಮಾಡಿಬಿಟ್ಟಿರುತ್ತದೆ. ಭೂತಾಕಾಶವು ಎಲ್ಲಾ ಭೌತಿಕದೃಶ್ಯಗಳಿಗೂ ಆಧಾರವಾಗಿದ್ದರೂ ಅದನ್ನು ಇಲ್ಲವೆಂಬಂತೆ ಅಸಡ್ಡೆಮಾಡಿ ಆಕಾಶದ ದೃಶ್ಯವಿಶೇಷಗಳಲ್ಲಿಯೇ ನಾನುನನ್ನದು ಎಂದು ಭಾವನೆಯನ್ನು ಮಾಡುವ ಜನಗಳು ಎಲ್ಲೆಲ್ಲಿಯೂ ಇರುವರು. ಹೀಗಿರುವಲ್ಲಿ ಈ ಭೂತಾಕಾಶವನ್ನೂ ವ್ಯಾಪಿಸಿಕೊಂಡಿರುವ ಚಿತ್ತಾಕಾಶವನ್ನು ಬಿಡಿಸಿನೋಡುವವರು ಯಾರು? ಚಿತ್ತವು ಯಾವ ರೂಪವನ್ನು ಬೇಕಾದರೆ ಆ ರೂಪವನ್ನು ತಾಳಬಲ್ಲದು. ತಾನೇ ನೋಡುವವನು, ನೋಟ, ನೋಡುವ ಸಾಧನ–ಎಲ್ಲವೂ ಆಗಿಬಿಡಬಲ್ಲದು. ಮಣ್ಣಿನಿಂದ ಮಾಡಿದ ಗೊಂಬೆಗಳನ್ನು ಇಟ್ಟುಕೊಂಡು ಆಡುವ ಚಿಕ್ಕಮಕ್ಕಳಂತೆ ವಿವೇಕ ಶೂನ್ಯರಾದವರು ಚಿತ್ತವು ನಿರ್ಮಿಸಿಕೊಟ್ಟಿರುವ ದೃಶ್ಯವಿಶೇಷಗಳಲ್ಲಿಯೇ ಅಭಿಮಾನವನ್ನಿಟ್ಟು ಆ ದೃಶ್ಯಗಳಿಂದಾಗುವ ಶೋಕಮೋಹ ಭಯಾದಿಗಳಿಂದ ಕುಣಿದಾಡುತ್ತಾ ರಾಗದ್ವೇಷಗಳ ಬಲೆಯಲ್ಲಿ ಸಿಕ್ಕಿ ನರಳುತ್ತಿರುವರು. ಸರಿಯಾಗಿ ನೋಡಿದರೆ ಈ ಲೋಕದಲ್ಲಿ ಚಿತ್ತವೇ ಪ್ರಭುವು. ಅದರ ಅಪ್ಪಣೆಯಂತೆಯೇ ಎಲ್ಲರೂ ನಡೆಯ ಬೇಕಾಗಿರುವದು. ಅದು ಇದ್ದದ್ದನ್ನು ಇಲ್ಲವಾಗಿ ಮಾಡಿಬಿಡಬಹುದು. ನಾವುಗಳು ಅದರ ಮಾತಿಗೆ ಕಂಕಿಂ ಎನ್ನದೆ ಅದು ಹಾಡಿದ ರಾಗಕ್ಕೆ ತಾಳವನ್ನು ಹಾಕಿಕೊಂಡು ಕುಣಿಯುತ್ತಲೇ ಇರುವೆವು. ಉದಾಹರಣೆಗೆ ನೋಡಿರಿ. ಕನಸಿನಲ್ಲಿರುವದೆಲ್ಲ ಚಿತ್ತದ ವಾಸನಾಮಯವಾದ ತೋರಿಕೆ ಎಂಬುದು ಯಾರಿಗೆತಾನೆ ಗೊತ್ತಿಲ್ಲ? ಚಿತ್ತವು ಕನಸಿನಲ್ಲಿ ತೋರಿಸುವ ಹುಸಿ ತೋರಿಕೆಗಳನ್ನೇ ನಿಜವೆಂದು ನಂಬಿ ನಾವುಗಳು ಆಶ್ಚರ್ಯ, ಭಯ, ರಾಗ, ದ್ವೇಷ–ಮುಂತಾದ ಭಾವನೆಗಳನ್ನು ಎಷ್ಟು ಸಲ ತೋರಿಸಿಕೊಂಡಿಲ್ಲ? ಎಚ್ಚತ್ತಮೇಲೆ "ಅದೆಲ್ಲ ಕನಸಿನ ತೋರಿಕೆ, ನಾನು ಸುಮ್ಮನೆ ಮೋಸಹೋದೆನು"–ಎಂದು ಎಷ್ಟು ಸಲ ನಾಚಿಕೆಗೊಂಡಿಲ್ಲ? ಆದರೇನು? ಇನ್ನು ಮುಂದಾದರೂ ನಾವು ಕನಸಿನ ಇಂಥ ಹುಸಿತೋರಿಕೆಗಳಿಗೆ ಮರುಳಾಗವದಿಲ್ಲವೆಂಬ ಭರವಸೆಯುಂಟೇನು? ಎಚ್ಚರದಲ್ಲಿ

ತೋರುವ ದೃಶ್ಯಗಳು ಯಾವವುತಾನೆ ಚಿತ್ತದ ಹಂಗಿಲ್ಲದೆ ಇರುತ್ತದೆ? ಯಾವದನ್ನು ತಾನೆ ಚಿತ್ತವು ನಿರ್ಮಾಣಮಾಡಿದ ದೃಶ್ಯವಲ್ಲವೆಂದು ಎದೆತಟ್ಟಿಕೊಂಡು ಹೇಳಬಹುದು? ಹೀಗಿದ್ದರೂ ನಾವು ಈ ದೃಶ್ಯಗಳಲ್ಲಿ ಕೆಲವನ್ನು ಸಂಪಾದಿಸಿ ಕೊಳ್ಳಬೇಕೆಂದೂ ಮತ್ತೆ ಕೆಲವನ್ನು ದೂರವಿರಿಸಿಕೊಳ್ಳಬೇಕೆಂದೂ ನಮ್ಮ ಜೀವಮಾನದಲ್ಲೆಲ್ಲ ವೃಥಾಯಾಸಪಟ್ಟು ಕೊನೆಗೆ ಈ ದೇಹವನ್ನು ಯತ್ನವಿಲ್ಲದೆ ಬಿಟ್ಟು ಹೋಗಬೇಕಾಗಿಬಂದಾಗ "ಅಯ್ಯೋ, ಇದನ್ನು ನಾನು ಸಂಪಾದಿಸಿಕೊಳ್ಳಲಾಗಲಿಲ್ಲವಲ್ಲ! ಇಂಥದ್ದೊಂದು ನನಗೆ ತೀರ ಸಿಕ್ಕಿದಂತೆ ಆಗಿ ಕೈಕಳಚಿಕೊಂಡುಹೋಗಿಬಿಟ್ಟಿತಲ್ಲ! ನನ್ನ ಇಂಥಿಂಥ ಮನೋರಥಗಳೆಲ್ಲ ಮಣ್ಣುಪಾಲಾಗಿಬಿಟ್ಟವಲ್ಲ!" ಎಂದು ಕೊರಗುತ್ತಾ ನಮಗೆ ಯಾವದೆಂಬ ಅರಿವಿಲ್ಲದ ಯಾವದೋ ಒಂದು ಲೋಕಾಂತರಕ್ಕೆ ನಮ್ಮ ಚಿತ್ತವು ಕೊಂಡೊಯ್ದಂತೆ ಕೈಕಟ್ಟಿಕೊಂಡು ಹೋಗಿಬಿಡುವೆವು. ಆಹಾ! ಈ ಚಿತ್ತದ ವಿಲಾಸವನ್ನು ಎಷ್ಟೆಂದು ವರ್ಣಿಸುವದು?

ವಾಚಕಮಹಾಶಯ, ಪ್ರಕೃತಿಸೌಂದರ್ಯವನ್ನು ಭೂತಾಕಾಶದಲ್ಲಿ ಲಯಮಾಡಿಕೊಂಡು ಆ ಭೂತಾಕಾಶವನ್ನು ಚಿತ್ತಾಕಾಶದೊಳಗೆ ಸಿಕ್ಕಿಸಿಕೊಂಡು ಹೀಗೆ ಮನೋವ್ಯಥೆಯನ್ನು ಕಟ್ಟಿಕೊಳ್ಳುವದರಿಂದ ಆಗುವ ಪುರುಷಾರ್ಥವೇನೆಂದು ತಾವು ಕೇಳಬಹುದು. ಆದರೆ ಈ ಆಕಾಶದ ಭಾವನೆಯು ಇಲ್ಲಿಗೇ ಕೊನೆಗಂಡಿಲ್ಲ. ಭೂತಾಕಾಶವು ನಮಗೆ ಈ ಲೋಕದಲ್ಲಿ ತಾತ್ಕಾಲಿಕ ಮನಃಶಾಂತಿಯನ್ನು ಕೊಡುವಂತೆಯೂ ಅದನ್ನು ವ್ಯಾಪಿಸಿಕೊಂಡಿರುವ ಚಿತ್ತಾಕಾಶವು ತನ್ನ ಮಾಯಾಸೃಷ್ಟಿಯಿಂದ ನಮಗೆ ಆಶ್ಚರ್ಯವನ್ನೂ ರಾಗದ್ವೇಷಭಯಾದಿಗಳನ್ನೂ ಕೊಟ್ಟು ಗೋಳುಗುಟ್ಟಿಸುವಂತೆಯೂ ಇದ್ದರೂ ಈ ಚಿತ್ತಾಕಾಶಕ್ಕೂ ಹೆಚ್ಚಿನ, ಇದನ್ನೂ ವ್ಯಾಪಿಸಿಕೊಂಡಿರುವ, ಆಕಾಶವೊಂದುಂಟೆಂದು ತತ್ತ್ವಜ್ಞರು ಹೇಳುತ್ತಿರುವರು. ಆ ಆಕಾಶದ ಬಲದಿಂದಲೇ ಈ ಹೊರಗಿನ ಎರಡು ಆಕಾಶಗಳೂ ನಮ್ಮನ್ನು ತಮ್ಮ ಕಡೆಗೇ ಎಳೆಯುತ್ತಿರುವವು. ಮಿಕ್ಕ ವಸ್ತುಗಳಿಗೆಲ್ಲ ಆಶ್ರಯವಾಗಿರುವದೆಂಬ ಇವುಗಳ ಮಹಿಮೆಯು ಈ ಮೂರನೆಯದಾದ ಮತ್ತೊಂದು ಆಕಾಶವನ್ನು ಅವಲಂಬಿಸಿಕೊಂಡು ಇರುವದು. ಭೂತಾಕಾಶವು ತನ್ನೊಳಗೆ ಬೇರೆಯ ಭೌತಿಕದೃಶ್ಯಗಳು ತುಂಬಿಕೊಳ್ಳದೆ ಇರುವಾಗ ನಮ್ಮಗಳನ್ನು ಮೇಲಿನ ಮಟ್ಟಕ್ಕೆ ಎತ್ತುವಂತೆಯೇ ಚಿತ್ತಾಕಾಶವೂ ತನ್ನೊಳಗೆ ಬಗೆಬಗೆಯ ದೃಶ್ಯಗಳ ರಾಶಿಯು ತುಂಬಿಕೊಳ್ಳದೆ ಇರುವಾಗ ನಮ್ಮನ್ನು ಇನ್ನೂ ಮೇಲಿನ ಮಟ್ಟಕ್ಕೆ ಏರಿಸುವದು. ಆಗಲೇ ಈ ಮೂರನೆಯ ಆಕಾಶದ ಅರಿವು ನಮಗೆ ಆಗುವದು; ಆಗಲೇ ನಿಜವಾದ ಆನಂದದ ಅರಿವು ನಮಗೆ ತೋರುವದು.

ಚಿತ್ತವನ್ನೂ ವ್ಯಾಪಿಸಿಕೊಂಡಿರುವ ಮತ್ತೊಂದು ತತ್ತ್ವವುಂಟೆ? ಚಿತ್ತವೆಂಬ ಸಾಧನವಿಲ್ಲದೆ ಯಾವದನ್ನು ತಾನೆ ಅರಿತುಕೊಳ್ಳುವದಕ್ಕೆ ಆದೀತು? ಎಲ್ಲವನ್ನೂ ವ್ಯಾಪಿಸಿಕೊಂಡಿರುವ ತತ್ತ್ವವನ್ನು ಆಕಾಶವೆಂದು ಕರೆಯಬೇಕಾದರೆ ಚಿತ್ತವೊಂದೇ ಆಕಾಶವಾಗುವದಲ್ಲದೆ ಚಿತ್ತಕ್ಕಿಂತಲೂ ವ್ಯಾಪಕವಾಗಿ ಚಿತ್ತಕ್ಕೂ ಆಶ್ರಯವಾಗಿ ಇರುವ ಮತ್ತೊಂದು ಆಕಾಶವೆಂಬುದು

ಮೊಲದ ಕೊಂಬು ಎಂಬಂತೆ ಕಲ್ಪನಾತೀತವಲ್ಲವೆ?– ಎಂದು ಕೆಲವರು ಕೇಳಬಹುದು. ಆದರೆ ಅಧ್ಯಾತ್ಮಶಾಸ್ತ್ರಜ್ಞರು ಅನುಭವವೊಂದನ್ನೇ ಆಧಾರವಾಗಿಟ್ಟುಕೊಂಡಿರುವದರಿಂದ ಅವರು ಯಾವದೊಂದನ್ನೂ ಕಲ್ಪಿಸುವದಿಲ್ಲ; ಕಲ್ಪಿಸಿದ್ದು ತತ್ತ್ವವೆಂಬುದನ್ನು ಅವರು ಒಪ್ಪುವದೂ ಇಲ್ಲ. ಭೂತಾಕಾಶವು ಕಲ್ಪಿತವೆಂದು ನಾವು ಹೇಳುವದಿಲ್ಲ. ಏಕೆಂದರೆ ಈ ಆಕಾಶವು ಎಲ್ಲರ ಅನುಭವದಲ್ಲಿಯೂ ಇದೆ. ಹೀಗೆಯೇ ಚಿತ್ತಾಕಾಶವೂ ಕಲ್ಪಿತವಲ್ಲ. ಏಕೆಂದರೆ ಭೂತಾಕಾಶವನ್ನು ವ್ಯಾಪಿಸಿಕೊಂಡು ಭೂತಾಕಾಶದ ಹಂಗೇ ಇಲ್ಲದೆ ಅದು ಇದ್ದುಕೊಂಡಿರುವದು ನಮ್ಮೆಲ್ಲರ ಅನುಭವದಲ್ಲಿದೆ. ಹೀಗೆಯೇ ಚಿತ್ತಾಕಾಶವನ್ನೂ ವ್ಯಾಪಿಸಿಕೊಂಡು ಅದರ ಹಂಗೇ ಇಲ್ಲದ ಮತ್ತೊಂದು ಆಕಾಶವು ನಮ್ಮನಮ್ಮ ಅನುಭವದಲ್ಲಿಯೇ ಇದೆ. ಅದನ್ನು ಕಲ್ಪಿಸಬೇಕಾದದ್ದೇನೂ ಇಲ್ಲವೇ ಇಲ್ಲ.

ಚಿತ್ತವನ್ನು ನಾವು ಇದೆ ಎಂದು ಏತರಿಂದ ತಿಳಿಯುವೆವು? ಚಿತ್ತವು ಭೂತಾಕಾಶವನ್ನು ವ್ಯಾಪಿಸಿಕೊಂಡಿರುವದೆಂದು ನಮಗೆ ಹೇಗೆ ಗೊತ್ತಾಗುವದು? ಈ ಪ್ರಶ್ನೆಗೆ ಸಾವಧಾನವಾಗಿ ನಾವು ಉತ್ತರವನ್ನು ಕಂಡುಕೊಳ್ಳಬೇಕು. ಅಧ್ಯಾತ್ಮಶಾಸ್ತ್ರಜ್ಞರು ಹೊಸದಾಗಿ ಈ ಮೂರನೆಯ ಆಕಾಶವನ್ನು ಕಲ್ಪಿಸಿರುವದಿಲ್ಲ. "ಚಿತ್ತವೆಂಬುದು ಎಲ್ಲವೂ ನಮ್ಮನಮ್ಮ ಅನುಭವದಲ್ಲಿಯೇ ಇದೆ" ಎಂದು ನಾವುಗಳೆಲ್ಲರೂ ಒಪ್ಪಲೇಬೇಕಷ್ಟೆ? ಆ ಅನುಭವವು ಎಂಬುದು ಯಾವದು? ಇದೇ ಚಿದ್ರೂಪವಾದ ನಮ್ಮ ಸ್ವರೂಪವು. ಇದನ್ನೇ ಪರಮಾತ್ಮನೆಂದು ಶಾಸ್ತ್ರಜ್ಞರು ಕರೆಯುವರು. ಚಿತ್ತವನ್ನು ಅರಿಯುವ ನಮ್ಮ ಅನುಭವಕ್ಕೆ ಚಿತ್ತದ ಎಲ್ಲೆಕಟ್ಟು ಎಂದಿಗೂ ಇರಲಾರದಷ್ಟೆ; ಚಿತ್ತದ ಆಗುಹೋಗುಗಳೆಲ್ಲವನ್ನೂ ಅರಿಯಬಲ್ಲ ಆ ಅನುಭವಸ್ವರೂಪವಾದ ತತ್ತ್ವಕ್ಕೆ ಚಿತ್ತದ ಹಂಗು ಏನುತಾನೆ ಇದ್ದೀತು? ಕನಸಿನಲ್ಲಿ ಚಿತ್ತವು ಜ್ಞಾತೃಜ್ಞಾನಜ್ಞೇಯಗಳಾಗಿ ವಿಂಗಡಿಸಿಕೊಂಡು ಬಗೆಬಗೆಯಾಗಿ ಕುಣಿಯುತ್ತಿರುವಾಗ ಅದನ್ನು ಅರಿತುಕೊಳ್ಳುವವರು ಯಾರು? ಈ ಅನುಭವವೇ ಅಲ್ಲವೆ? ಚಿತ್ತವು ದೃಶ್ಯಗಳನ್ನು ಅರಿಯುವಾಗ ಬೇರೆಬೇರೆಯ ಮಾರ್ಪಾಡನ್ನು ಹೊಂದುವಂತೆ ಈ ಅನುಭವವು ಯಾವ ಮಾರ್ಪಾಡನ್ನೂ ಹೊಂದುತ್ತಿರುವದಿಲ್ಲ. ಕೇವಲ ಚಿದ್ರೂಪವಾಗಿ ಅಂದರೆ ಬರಿಯ ಅರಿವಾಗಿ ಇದ್ದುಕೊಂಡೇ ಚಿತ್ತದ ಕುಣಿತಗಳನ್ನೆಲ್ಲ ನೋಡುತ್ತಿರುವದು.

ಚಿತ್ತವು ಇಲ್ಲದೆ ಇರುವ ಗಾಢನಿದ್ರೆಯಲ್ಲಿಯೂ ಈ ಚಿದಾಕಾಶವು ಇದ್ದುಕೊಂಡೇ ಇರುವದೆಂಬುದು ನಮ್ಮೆಲ್ಲರ ಅನುಭವದಲ್ಲಿದೆ. ಆದ್ದರಿಂದ ಈ ಚಿದಾಕಾಶಕ್ಕೆ ಚಿತ್ತದ ಹಂಗು ಒಂದಿಷ್ಟೂ ಇರುವದಿಲ್ಲ. ಚಿತ್ತವು ಎಲ್ಲಾ ದೃಶ್ಯಗಳಾಗಿ ತೋರುತ್ತಿರುವದರಿಂದಲೂ ಚಿತ್ತವಿಲ್ಲದೆ ಯಾವ ದೃಶ್ಯವೂ ತೋರುವದಿಲ್ಲವಾದ್ದರಿಂದಲೂ ಚಿತ್ತವೇ ಎಲ್ಲಾ ದೃಶ್ಯಗಳೂ ಆಗಿದೆ ಎಂದು ನಿರ್ಣಯಿಸುವಂತೆಯೇ ಈ ಚಿದಾಕಾಶವಿಲ್ಲದೆ ಚಿತ್ತವಾಗಲಿ ಚಿತ್ತದ ದೃಶ್ಯಗಳಾಗಲಿ ಎಲ್ಲಿಯೂ ಯಾರಿಗೂ ತೋರಿದ್ದೇ ಇಲ್ಲವಾದ್ದರಿಂದ ಚಿದಾಕಾಶಕ್ಕಿಂತ ಬೇರೆಯಾದ ಚಿತ್ತಾಕಾಶವಾಗಲಿ ಭೂತಾಕಾಶವಾಗಲಿ ಇಲ್ಲವೇ ಇಲ್ಲವೆಂದು ನಾವು ನಿರ್ಣಯಿಸಬಹುದಾಗಿದೆ.

ಈ ಲೇಖನವು ದೊಡ್ಡದಾಯಿತು. ಸದ್ಯಕ್ಕೆ ಇಷ್ಟನ್ನು ನೆನಪಿನಲ್ಲಿಡೋಣ. ಚಿದಾಕಾಶವೆಂಬುದು ನಮ್ಮಗಳೆಲ್ಲರ ಆತ್ಮನಾಗಿರುವ ಬರಿಯ ಅರಿವು. ಇದರ ಆಧಾರದಿಂದಲೇ ಬಗೆಬಗೆಯ ಚಿತ್ತಗಳೂ ಚಿತ್ತದ ದೃಶ್ಯಗಳೂ ತೋರಿಕೊಳ್ಳುತ್ತಿರುವವು. ಇದರಿಂದ ವ್ಯಾಪ್ತವಲ್ಲದೆ ಇದರ ಸಂಬಂಧವಿಲ್ಲದೆ ಯಾವದೊಂದು ಪದಾರ್ಥವೂ ಇರುವ ಹಾಗೆಯೇ ಇಲ್ಲ. ಯಾವ ದೃಶ್ಯವು ತೋರಿಕೊಂಡರೂ ಈ ಚಿದಾಕಾಶದಲ್ಲಿಯೇ ತೋರಿಕೊಂಡು ಅದರಲ್ಲಿಯೇ ಅಡಗಬೇಕಾಗಿರುತ್ತದೆ. ಭೌತಿಕದೃಶ್ಯಗಳನ್ನು ನೋಡುವದರಲ್ಲಿ ನಿರತರಾಗಿರುವವರು ಭೂತಾಕಾಶವನ್ನು ಮರೆಯುವಂತೆ ಚಿತ್ತಗಳನ್ನೂ ಅವುಗಳ ವಿಲಾಸಗಳನ್ನೂ ನೋಡಿ ಬೆರಗಾಗುತ್ತಿರುವವರು ಈ ಚಿದಾಕಾಶವನ್ನು ಮರೆಯಬಹುದು. ಆದರೆ ಅವರ ಅರಿವಿಗೂ ಮರವಿಗೂ ಆಧಾರವಾಗಿರುವದು ಈ ಚಿದಾಕಾಶವೇ. ಅನಿತ್ಯವಾದ ಚಿತ್ತದೃಶ್ಯಗಳು ನಮ್ಮಗಳನ್ನು ರಾಗದ್ವೇಷಭಯಾದಿಗಳಲ್ಲಿ ಸಿಕ್ಕಿಸಿಕೊಂಡು ನರಳಿಸುತ್ತಿರಬಹುದು. ಆದರೆ ಪರಮಾರ್ಥವಾಗಿ ಇದೆಲ್ಲವೂ ಚಿದಾಕಾಶವೇ. ಇವೆಲ್ಲವೂ ಆ ಚಿದಾಕಾಶದಲ್ಲಿ ತೋರಿಹಾರುವ ಹುಸಿತೋರಿಕೆಗಳೇ- ಎಂಬಿದನ್ನು ಅನುಸಂಧಾನ ಮಾಡಬಲ್ಲ ಪುರುಷಧೌರೇಯರಿಗೆ ಈ ಹುಸಿತೋರಿಕೆಗಳ ಇಂದ್ರಜಾಲದ ಭಯವು ಒಂದಿಷ್ಟೂ ಅಂಟದು. ಎಲ್ಲೆಲ್ಲಿಯೂ ಪರಿಪೂರ್ಣವಾಗಿ ನಾಶರಹಿತವಾಗಿರುವ ಆನಂದಮಯವಾಗಿರುವ ಚಿದಾಕಾಶವೇ ತಾವೆಂಬ ಪರಮಶಾಂತಿಯು ಅಂಥ ಮಹನಿಯರಿಗೇ ಮೀಸಲಾಗಿರುತ್ತದೆ.

ಆಕಾಶವೆಂಬ ಮಾತಿಗೆ ಸಂಸ್ಕೃತದಲ್ಲಿ ಎಲ್ಲೆಲ್ಲಿಯೂ ತೋರುವ ಪದಾರ್ಥವೆಂದು ಅರ್ಥವಾಗುವದು. ಈ ಅರ್ಥದಲ್ಲಿ ಮಿಕ್ಕ ಎಲ್ಲಾ ಭೂತಗಳಿಗಿಂತಲೂ ಭೂತಾಕಾಶವು ಅನ್ವರ್ಥವಾಗಿ ಆಕಾಶವಾಗಿರುತ್ತದೆ. ಏಕೆಂದರೆ ಆ ಆಕಾಶವೇ ಎಲ್ಲೆಲ್ಲಿಯೂ ಇದ್ದುಕೊಂಡಿರುತ್ತದೆ. ಆಕಾಶವಿರುವೆಡೆಯಲ್ಲೆಲ್ಲ ಚಿತ್ತವು ಅದನ್ನು ವ್ಯಾಪಿಸಿಕೊಂಡಿರುವದರಿಂದ ಭೂತಾಕಾಶಕ್ಕಿಂತಲೂ ಅದು ಹೆಚ್ಚಿನ ಅರ್ಥದಲ್ಲಿ ಆಕಾಶವಾಗುವದು. ಆತ್ಮಚೈತನ್ಯವು ಅದನ್ನೂ ವ್ಯಾಪಿಸಿಕೊಂಡಿರುವದರಿಂದ ಆಕಾಶವೆಂಬ ಹೆಸರು ಎಲ್ಲಕ್ಕೂ ಹೆಚ್ಚಿನ ಅರ್ಥದಲ್ಲಿ ಆತ್ಮನಿಗೇ ಒಪ್ಪುವದು. ಆದ್ದರಿಂದಲೇ ವೇದಾಂತದಲ್ಲಿ ಆತ್ಮನಿಗೆ ಆಕಾಶವನ್ನು ಉಪಮಾನವಾಗಿ ಹೇಳಿರುವದಲ್ಲದೆ ಆತ್ಮನನ್ನೇ ಆಕಾಶವೆಂದೂ ಕರೆದಿರುತ್ತದೆ. ಸರ್ವಗತವಾದದ್ದು, ವ್ಯಾಪಕತಮವಾದದ್ದು, ಎಲ್ಲಕ್ಕೂ ಪರಮಸೂಕ್ಷ್ಮವಾದದ್ದು, ಎಲ್ಲಕ್ಕೂ ತಿರುಳಾದದ್ದು- ಎಂಬೀ ನಾಲ್ಕು ಅರ್ಥಗಳಲ್ಲಿಯೂ ಆತ್ಮನನ್ನು ಆಕಾಶವೆಂದು ಕರೆಯುವದು ಸಮಂಜಸವಾಗಿರುತ್ತದೆ. ಭರತಖಂಡದಲ್ಲಿರುವ ಚಿದಂಬರಕ್ಷೇತ್ರವು ಪರಮಾತ್ಮನ ಈ ಸ್ವಭಾವವನ್ನು ತಿಳಿಸಿಕೊಡುವ ಸಂಕೇತಸ್ಥಾನವೆಂದು ನಾವು ಭಾವಿಸಬಹುದು. ಹೊರಗಿನ ಚಿದಂಬರವು ಅಲ್ಲಿದ್ದರೂ ನಿಜವಾದ ಚಿದಂಬರವು ನಮ್ಮ ಆತ್ಮನೇ ಆಗಿರುತ್ತದೆ ಎಂಬುದನ್ನು ಜಿಜ್ಞಾಸುಗಳು ನೆನಪಿನಲ್ಲಿಡಬೇಕು.

## 3.8. ಪರಮಾತ್ಮನ ಸಾಂನಿಧ್ಯಕ್ಕೆ ಸಾಧನಗಳು

**ಬ್ರಹ್ಮೈವೇದಂ ಅಮೃತಂ ಪುರಸ್ತಾದ್ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ ।
ಅಧಶ್ಚೋರ್ಧ್ವಂ ಚ ಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್ ॥ ಮುಂ.2-2-11**

**ಈ ಮುಂದುಗಡೆ ಕಾಣಿಸುತ್ತಿರುವದು ಅಮೃತವಾದ ಬ್ರಹ್ಮವೇ; ಹಿಂದೆ ಬ್ರಹ್ಮವೇ, ಬಲಕ್ಕೂ ಎಡಕ್ಕೂ ಬ್ರಹ್ಮವೇ; ಕೆಳಕ್ಕೂ ಮೇಲಕ್ಕೂ ಹಬ್ಬಿಕೊಂಡಿರುವದು ಬ್ರಹ್ಮವೇ; ಈ ಜಗತ್ತೆಲ್ಲವೂ ವರಿಷ್ಠವಾದ ಬ್ರಹ್ಮವೇ.**

ವಾಚಕವೃಂದಕ್ಕೆಲ್ಲ ಹೊಸ ವರ್ಷದ ಅಭಿನಂದನೆಗಳು. ಈ ನಂದನ ಸಂವತ್ಸರದಲ್ಲಿ ಆನಂದಘನನಾದ ಶ್ರೀಮನ್ನಾರಾಯಣನ ಸಂನಿಧಿಯ ಭಾವನೆಯನ್ನು ಅಳವಡಿಸಿಕೊಂಡು ಆನಂದಿಸುವ ಯೋಗವನ್ನು ಆ ಭಗವಂತನು ತಮಗೆಲ್ಲರಿಗೂ ಅನುಗ್ರಹಿಸಲೆಂದು ಹಾರೈಸುತ್ತೇನೆ. ಆ ಪರಮಾತ್ಮನ ಸಂಬಂಧವು ನಾವುಗಳು ಸಾಮಾನ್ಯವಾಗಿ ತಿಳಿದು ಕೊಂಡಿರುವದಕ್ಕಿಂತಲೂ ನಮಗೆ ನಿಕಟತರವಾಗಿರುತ್ತದೆ. ಆದರೆ ನಮ್ಮ ಚಿತ್ತವು ಮಾತ್ರ ಅದನ್ನು ಅನುಭವಿಸುವ ಶಕ್ತಿಯನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಆ ಶಕ್ತಿಯು ಎಂದಿಗೆ ನಮಗೆ ಬರುವದೋ ಅಂದು ನಮಗೆ ಹೊಸದೊಂದು ಯುಗಾದಿಯು ಪ್ರಾರಂಭ ವಾಗುತ್ತದೆ; ಈಗ ನಮಗೆ ಅನಿತ್ಯವಾದ ಕಹಿಸಿಹಿಗಳ ಬೆರಕೆಯಾಗಿ ತೋರುತ್ತಿರುವ ಜೀವನವೇ ಅಂದಿನಿಂದ ನಮಗೆ ಸರ್ವಪ್ರಕಾರದಿಂದಲೂ ಮಧುರವಾಗಿ ಅನುಭವ ಗೋಚರವಾಗುತ್ತದೆ.

ಅಧ್ಯಾತ್ಮವಿದ್ಯಾವಿಶಾರದರು ಹೇಳುತ್ತಿರುವದೇನೆಂದರೆ, ಈ ವಿಶ್ವವೆಲ್ಲವೂ ಆನಂದ ರೂಪನಾದ ಪರಮಾತ್ಮನಿಂದಲೇ ವ್ಯಾಪ್ತವಾಗಿರುತ್ತದೆ. ಆಕಾಶದಂತೆ ಸರ್ವಗತನಾಗಿರುವ ಆ ಆನಂದತತ್ತ್ವವು ಇಲ್ಲದಿದ್ದರೆ ಯಾರೊಬ್ಬರೂ ವ್ಯವಹಾರವನ್ನು ಮಾಡಿಕೊಂಡಿರುವ ದಾಗುತ್ತಿರಲಿಲ್ಲ, ಯಾರೊಬ್ಬರೂ ಉಸಿರಾಡಿಕೊಂಡು ಜೀವಿಸುತ್ತಿರಲಿಲ್ಲ, ಪ್ರಪಂಚದಲ್ಲಿ ಜೀವರುಗಳು ಅನಂತಸಂಖ್ಯೆಯಲ್ಲಿರುವರು. ಅವರೆಲ್ಲರೂ ಜೀವರೆನಿಸಿಕೊಂಡಿರುವದು ಜೀವಿಸಿರುವದರಿಂದಲೇ. ಜೀವಿಸಿರುವದೆಂದರೇನು? ಪ್ರಾಣಧಾರಣೆಮಾಡಿಕೊಂಡಿರುವದು. ಜೀವರುಗಳು ಜೀವಿಸಿದ್ದಾರೆಂಬುದಕ್ಕೆ ಅರ್ಥವೇನೆಂದರೆ, ಅವರು ಈ ಆನಂದವನ್ನು ತಮ್ಮಲ್ಲಿ ತುಂಬಿಕೊಂಡು, ತಮ್ಮ ಸುತ್ತಲೂ ಈ ಆನಂದದ ತಂಬೆಳಕನ್ನು ಪಸರಿಸುತ್ತಿರುವರು. ಆದ್ದರಿಂದ ಯಾವನು ಎಷ್ಟುಮಟ್ಟಿಗೆ ಈ ಆನಂದಾನುಭವದ ಶಕ್ತಿಯನ್ನು ತನ್ನ ಸುತ್ತಲೂ ಹರಡಬಲ್ಲನೋ ಅವನು ಅಷ್ಟುಮಟ್ಟಿಗೆ ಜೀವನೆಂಬ ಶಬ್ದಕ್ಕೆ ಅರ್ಹನಾಗಿರುತ್ತಾನೆ.

ಈ ಅಭಿಪ್ರಾಯವನ್ನು ನನಗೆ ಈಚೆಗೆ ದೊರೆತ ಹೊಸದೊಂದು ಚಿಕಿತ್ಸಾಕ್ರಮದ ಪರಿಚಯದ ದೃಷ್ಟಾಂತವನ್ನು ಕೊಟ್ಟು ವಿಶದೀಕರಿಸುವೆನು. ಫೆಬ್ರವರಿ ತಿಂಗಳಲ್ಲಿ ನಾನು

ಶರೀರದಲ್ಲುಂಟಾಗಿದ್ದ ಸಂಧಿವಾತದಿಂದಾದ ಅನಾರೋಗ್ಯದ ಪರಿಹಾರಕ್ಕಾಗಿ ಚಿತ್ರದುರ್ಗಕ್ಕೆ ಹೋಗಿದ್ದೆನು. ಅಲ್ಲಿ ನನಗೆ ಮೊದಲೇ ಪರಿಚಿತರಾಗಿದ್ದ ಶ್ರೀ॥ ಹೆಚ್. ಜೆ. ಕೃಷ್ಣರಾಯರೆಂಬ ಪ್ಲೀಡರು ಮಹಾಶಯರ ಸಂಗವು ದೊರೆಯಿತು. ಚಿತ್ರದುರ್ಗದ ವಾಯುಗುಣವೇ ಅಲ್ಲದೇ ಶ್ರೀ ಕೃಷ್ಣರಾಯರು ನನಗೆ ಮಾಡಿದ "ವಿದ್ಯುತ್ಸಂಸ್ಕಾರ" (Electro Culture) ಎಂಬ ಚಿಕಿತ್ಸೆಯೂ ನನ್ನ ದೇಹಾರೋಗ್ಯವು ಕುದುರಿಕೊಳ್ಳುವದಕ್ಕೆ ಕಾರಣವಾಯಿತು. ಕೃಷ್ಣರಾಯರು ತಮ್ಮ ಉದ್ಯೋಗದಿಂದ ನಿವೃತ್ತರಾದರೂ ಆ ಚಿಕಿತ್ಸಾಕ್ರಮದ ಲಾಭವನ್ನು ಮಹಾಜನರಿಗೆ ಉಂಟುಮಾಡಿಕೊಡುವದರಲ್ಲಿ ನಿರತರಾಗಿರುತ್ತಾರೆ. ಎಪ್ಪತ್ತರ ಹತ್ತಿರವಿರುವ ವಯಸ್ಸಿನವರಾದರೂ ಅವರು ಬಹಳ ಚಟುವಟಿಕೆಯಿಂದ ಕೂಡಿ ಪರೋಪಕಾರಕ್ಕಾಗಿ ಈ ಚಿಕಿತ್ಸಾಕ್ರಮವನ್ನು ಉಪಯೋಗಿಸುತ್ತಿದಾರೆ. ಅವರ ಹರ್ಷೋತ್ಫುಲ್ಲವಾದ ಮುಖಭಾವವೂ ವಿನಯವೂ ಸಹಾನುಭೂತಿಯ ವರ್ತನೆಯೂ ಜನರಿಗೆ ವಿದ್ಯುತ್ಸಂಸ್ಕಾರದ ಪ್ರಯೋಜನವು ಇಮ್ಮಡಿಸುವಂತೆ ಮಾಡುತ್ತವೆ. ಈ ಕ್ರಮದಿಂದ ಸಸ್ಯಗಳಿಗೂ ಪಶ್ವಾದಿಗಳಿಗೂ ಮನುಷ್ಯರಿಗೂ ಸಮವಾಗಿಯೇ ಉಪಯೋಗವಾಗುವದೆಂದು ಡಾ॥ ನೆಹರು ಎಂಬುವರು ಉಪದೇಶದಿಂದಲೂ ಅನುಷ್ಠಾನದಿಂದಲೂ ಪ್ರಚಾರಮಾಡುತ್ತಿರುತ್ತಾರೆ; ಶ್ರೀಕೃಷ್ಣರಾಯರು ಅವರ ಮೂಲಕ ಶಿಕ್ಷಣವನ್ನು ಪಡೆದು ಭರತಖಂಡದಲ್ಲಿ ಈ ಪದ್ಧತಿಯನ್ನು ನಮ್ಮ ದೇಶದಲ್ಲಿ ಪ್ರಯೋಗಗಳ ಮೂಲಕ ಜನಾನುರಾಗಕ್ಕೆ ಪಾತ್ರವಾಗಿ ಮಾಡುತ್ತಿರುತ್ತಾರೆ. ನಾನೇನೂ ಈ ಶಾಸ್ತ್ರದಲ್ಲಿ ಪರಿಣತನಲ್ಲ; ಅದರ ವಿಷಯವಾಗಿ ಹೆಚ್ಚಿನ ವಿವರವನ್ನು ತಿಳಿದುಕೊಳ್ಳಬೇಕೆನ್ನುವವರು ಕೃಷ್ಣರಾಯರಿಗೇ ಬರೆದು ತಿಳಿದುಕೊಳ್ಳಬೇಕು. ನಾನು ಇಲ್ಲಿ ಅದನ್ನು ಪ್ರಸ್ತಾಪಿಸಿರುವದರ ಉದ್ದೇಶವೇನೆಂದರೆ ವಿದ್ಯುತ್ಸಂಸ್ಕಾರವು ಶಾಸ್ತ್ರೀಯ ವಾಗಿರುವದಕ್ಕಿಂತಲೂ ಹೆಚ್ಚಾಗಿಯೇ ಅಧ್ಯಾತ್ಮವಿದ್ಯೆಯು ಶಾಸ್ತ್ರೀಯವಾಗಿ ಜನರ ಅನುಭವಕ್ಕೆ ಬರುವಂತಿದೆ ಎಂಬುದನ್ನು ವಾಚಕರಿಗೆ ಮನಗಾಣಿಸುವದಕ್ಕೆ.

ಎಲೆಕ್ಟ್ರೋ ಕಲ್ಚರ್ ವಾದಿಗಳು ಹೇಳುತ್ತಿರುವದೇನೆಂದರೆ ವಿದ್ಯುಚ್ಛಕ್ತಿಯು ನಮ್ಮ ಸುತ್ತಲೂ ಇದ್ದೇ ಇರುತ್ತದೆ. ಜೀವಾಣುಗಳು ವ್ಯಾಪಾರಮಾಡುತ್ತಿರುವ ಸ್ಥಾವರಜಙ್ಗಮ ಪ್ರಾಣಿಗಳಲ್ಲೆಲ್ಲ ಈ ಶಕ್ತಿಯು ಉತ್ಪನ್ನವಾಗುತ್ತಲೇ ಇರುತ್ತದೆ. ವಿದ್ಯುಚ್ಛಕ್ತಿಯನ್ನು ಕ್ರಮವರಿತು ಪ್ರಯೋಗಿಸಿದರೆ ಜೀವಾಣುಗಳ ವ್ಯಾಪಾರವು ಬಲವಾಗುವದು, ಪ್ರಾಣಿಗಳು ಬೆಳೆದು ಪುಷ್ಟವಾಗುವವು. ಪ್ರಸಾರಶಕ್ತಿವಿಶೇಷವನ್ನು ಹೊರಸೂಸುತ್ತಿರುವದೇ ವಸ್ತುಸ್ವಭಾವವು. ಹೀಗೆ ಶಕ್ತಿವಿಶೇಷವನ್ನು ಪಸರಿಸುತ್ತಿರುವ ಅವಸ್ಥೆಯೇ ಬದುಕಿರುವದು; ಈ ಪ್ರಸಾರಣಯೋಗ್ಯತೆಯು ನಿಂತರೆ ಅದೇ ಮರಣವು. ಈ ವಾದವನ್ನು ಅನುಷ್ಠಾನದಲ್ಲಿ ಉಪಯೋಗಿಸಿಕೊಳ್ಳುವದು ಹೇಗೆ?-ಎಂಬ ಪ್ರಶ್ನೆಗೆ ಜೀವಾಣುವಿನ ವ್ಯಾಪಾರವು ಚೆನ್ನಾಗಿ ನಡೆಯುವಂತೆ ತಕ್ಕ ಕ್ಷೇತ್ರವಿಶೇಷವನ್ನು ಏರ್ಪಡಿಸುವದು, ವಿದ್ಯುತ್ತಿನ ಕಿಡಿಯ ಸಂಮಿಶ್ರಣವುಳ್ಳ

ನೀರನ್ನು ಉಪಯೋಗಿಸುವದು, ವಿದ್ಯುತ್ತಿನ ಕಿಡಿಯ ಸಂಪರ್ಕವನ್ನುಂಟುಮಾಡಿ ವಿದ್ಯುತ್ಪ್ರವಾಹವು ಸಂತತವಾಗಿ ಹರಿಯುವಂತೆ ಮಾಡುವದು, ಶಕ್ತಿಪ್ರಸಾರವನ್ನು ಮಾಡಬಲ್ಲ ಸಜೀವ ಪದಾರ್ಥಗಳನ್ನುಪಯೋಗಿಸುವದು, ವಾಯುಮಂಡಲದ ವಿದ್ಯುಚ್ಛಕ್ತಿಯನ್ನು ಆಕರ್ಷಿಸಿಕೊಳ್ಳುವದು-ಇವೇ ಮುಂತಾದ ಉಪಾಯಗಳಿಂದ ವಿದ್ಯುತ್ಸಂಸ್ಕಾರವನ್ನು ಮಾಡಿಕೊಟ್ಟು ಸ್ಥಾವರಜಂಗಮಪ್ರಾಣಿಗಳ ಬೆಳವಣಿಗೆಯನ್ನೂ ಆರೋಗ್ಯವನ್ನೂ ಹೆಚ್ಚಿಸಬಹುದು ಎಂದು ಈ ವಾದಿಗಳು ಉತ್ತರವನ್ನು ಕೊಡುತ್ತಿರುವರು. ವಿದ್ಯುಚ್ಛಕ್ತಿಯನ್ನು ಭೌತಿಕಶಾಸ್ತ್ರಜ್ಞರು ಬಹಳ ಈಚೆಗೆ ಕಂಡುಹಿಡಿದಿರುತ್ತಾರಾದರೂ ಅವರು ಅದನ್ನು ಶೋಧಿಸಿ ಅರಿತುಕೊಳ್ಳುವದಕ್ಕಿಂತ ಮುಂಚೆಯೂ ಅದು ಇದ್ದೇ ಇತ್ತೆಂಬುದು ಸ್ಪಷ್ಟ. ಅದರ ಇರುವಿಕೆಯನ್ನು ಅರಿತುಕೊಂಡು ಅದರ ಉಪಯೋಗವನ್ನು ಮಾಡಿಕೊಂಡಿರುವವರಿಗೆ ಮಾತ್ರ ಅದರಿಂದ ಲಾಭವಾಗಿರುತ್ತದೆ. ಅಲ್ಲವೆ? ಇದರಂತೆ ಈ ಇಡಿಯ ಬ್ರಹ್ಮಾಂಡವನ್ನೇ ವ್ಯಾಪಿಸಿಕೊಂಡಿರುವ ಪರಮಾತ್ಮತತ್ತ್ವದ ವಿಷಯವನ್ನೂ ಅರಿಯಬೇಕು. ಜನರು ಪರಮಾತ್ಮನ ಅಸ್ತಿತ್ವವನ್ನು ಅರಿತುಕೊಂಡಿರಲಿ ಅರಿತುಕೊಳ್ಳದೆ ಇರಲಿ, ಆತನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಇದ್ದೇ ಇರುತ್ತಾನೆ. ಆದರೆ ಇದನ್ನು ಮನದಟ್ಟು ಮಾಡಿಕೊಂಡು ಪರಮಾತ್ಮನಿಗೂ ತಮಗೂ ಸಂಬಂಧವನ್ನು ಏರ್ಪಡಿಸಿಕೊಂಡವರಿಗೆ ಮಾತ್ರ ಅದರ ಲಾಭವುಂಟಾಗುತ್ತದೆ. ಈ ಸಂಬಂಧವನ್ನು ಏರ್ಪಡಿಸಿಕೊಂಡವರಿಗೆ ಮಾತ್ರ ಜೀವನವು ಆನಂದಮಯವಾಗಿರುವದೆಂಬ ನಿತ್ಯನಿಯಮದ ಸಾಕ್ಷಾತ್ಕಾರವಾಗುತ್ತದೆ.

ಪರಮಾತ್ಮನ ಸಾಂನಿಧ್ಯವನ್ನು ಅನುಭವಿಸುವ ಶಕ್ತಿಯು ಜೀವನಿಗೆ ಉಂಟಾಗುವದು ಹೇಗೆ?- ಎಂಬ ಪ್ರಶ್ನೆಗೆ ಉತ್ತರವಾಗಿ ಅಧ್ಯಾತ್ಮತತ್ತ್ವಜ್ಞರು ಬಗೆಬಗೆಯ ಸಾಧನಗಳನ್ನು ಹೇಳಿರುತ್ತಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿಮರ್ಶಿಸುವದರಿಂದ ಪ್ರಯೋಜನವುಂಟು. ಮೊಟ್ಟಮೊದಲನೆಯದಾಗಿ ಪರಮಾತ್ಮನ ಸತ್ತೆಯನ್ನು ಉತ್ತಮರೀತಿಯಲ್ಲಿ ನೆನಪಿಗೆ ತರಬಲ್ಲ ಕ್ಷೇತ್ರವನ್ನು ಏರ್ಪಡಿಸಿಕೊಳ್ಳಬೇಕು. ಪರಮೇಶ್ವರನ ಪೂಜೆ, ಧ್ಯಾನ, ಭಜನೆ, ಗುಣಕಥನ- ಮುಂತಾದವುಗಳು ಸಂತತವಾಗಿ ನಡೆಯುತ್ತಿರುವ ಸ್ಥಾನವಿಶೇಷಗಳಲ್ಲಿ ಬಲುಬೇಗನೆ ಪರಮಾತ್ಮಭಾವನೆಯು ಹೃದಯದಲ್ಲಿ ಉದ್ಬುದ್ಧವಾಗುತ್ತದೆ. ಪವಿತ್ರವಾದ ತೀರ್ಥಗಳಲ್ಲಿಯೂ ಕ್ಷೇತ್ರಗಳಲ್ಲಿಯೂ ಸ್ವಭಾವದಿಂದಲೇ ಸಾತ್ತ್ವಿಕಭಾವನೆಗಳ ಉತ್ಥಾನವಾಗುತ್ತದೆ. ಇಂಥ ತೀರ್ಥಕ್ಷೇತ್ರಗಳು ಪುರಾಣಪ್ರಸಿದ್ಧವಾಗಿಯೇ ಇರಬೇಕೆಂಬ ನಿಯಮವೇನೂ ಇಲ್ಲ; ಎಲ್ಲೆಲ್ಲಿ ಪರಮೇಶ್ವರನನ್ನು ಹೃದಯದಲ್ಲಿಟ್ಟುಕೊಂಡಿರುವ ಸಾಧುಸಂತರ ಪ್ರಭಾವವು ಜೀವಂತವಾಗಿರುವದೋ ಅವೆಲ್ಲ ಪವಿತ್ರತೀರ್ಥಕ್ಷೇತ್ರಗಳಾಗಿರುತ್ತವೆ. ಸಾಧುಸಂಗವೆಂಬುದೇ ಒಂದು ದೊಡ್ಡ ಶಕ್ತ್ಯಾಧಾಯಕಸಾಮಗ್ರಿಯಾಗಿರುತ್ತದೆ. ಏಕೆಂದರೆ ಸಾಧುಗಳ ಸಂನಿಧಿಯಲ್ಲಿರುವಾಗ ನಾವು ಒಲ್ಲೆವೆಂದರೂ ನಮ್ಮ ಅಂತಃಕರಣದಲ್ಲಿ

ಸಾತ್ತ್ವಿಕಭಾವನೆಗಳ ಅಲೆಗಳು ಎದ್ದುಕೊಳ್ಳುತ್ತವೆ. ಸಾಧುಗಳು ಪರಮಾತ್ಮನ ಪ್ರಭಾವವನ್ನು ಬೀರುವ ಬ್ಯಾಟರಿಗಳಂತೆ ಇರುತ್ತಾರೆ. ಅವರ ದರ್ಶನ, ಸೇವೆ, ಸಂಭಾಷಣೆ- ಮುಂತಾದವುಗಳೆಲ್ಲ ಪರಮಾತ್ಮನ ಸಂನಿಧಿಯನ್ನು ಬಲವಾಗಿ ನಮ್ಮ ಮನಸ್ಸಿಗೆ ತಟ್ಟುವಂತೆ ಮಾಡುತ್ತವೆ.

ಶಾಸ್ತ್ರಗಳನ್ನೂ ಸಾಧುಜನರ ಸೂಕ್ತಿಗಳನ್ನೊಳಗೊಂಡ ಸದ್ಗ್ರಂಥಗಳನ್ನೂ ಅವಲೋಕಿಸುತ್ತಿರುವದು ಪರಮಾತ್ಮನ ಸಾಂನಿಧ್ಯವನ್ನು ಮನಸ್ಸಿಗೆ ತಾಕಿಸುವ ಒಂದು ಉತ್ತಮಸಾಧನವಾಗಿರುತ್ತದೆ. ಅಧ್ಯಾತ್ಮಗ್ರಂಥಗಳಲ್ಲಿರುವ ವಚನಗಳಲ್ಲಿ ಒಂದಾನೊಂದು ಶಕ್ತಿವಿಶೇಷವು ತುಂಬಿಕೊಂಡಿರುತ್ತದೆ. ಆ ವಚನಗಳನ್ನು ನಾವು ಉಚ್ಚರಿಸುವಾಗಲೆ ಅವುಗಳು ನಮ್ಮ ಮನಸ್ಸಿನಲ್ಲಿ ಉತ್ತಮಭಾವನೆಗಳ ಅಲೆಗಳನ್ನು ತಪ್ಪದೆ ಎಬ್ಬಿಸುತ್ತವೆ. ರಾಮಾಯಣ, ಭಗವದ್ಗೀತೆ-ಮುಂತಾದ ಗ್ರಂಥಗಳನ್ನು ಪಾರಾಯಣಕ್ಕೆಂದು ಇಟ್ಟುಕೊಳ್ಳುವದರ ಉದ್ದೇಶವೇ ಇದು. ಆ ಗ್ರಂಥಗಳು ಮತ್ತೆಮತ್ತೆ ಓದುವದರಿಂದ ಹಳೆಯವಾಗಿ ನೀರಸವಾಗುವದಿಲ್ಲ, ಎಷ್ಟು ಓದಿದರೆ ಅಷ್ಟು ಹೊಸಹೊಸ ಭಾವನೆಗಳು ಸ್ಫೂರ್ತಿಯಾಗುವವು. ಆದ್ದರಿಂದ ಜೀವಂತವಾದ ಅಧ್ಯಾತ್ಮಶಕ್ತಿಯುಳ್ಳ ಸಾಧುಸಂತರ ಸಂಗವು ನಮಗೆ ಸಿಕ್ಕದೆ ಇರುವಾಗ ಇಂಥ ಗ್ರಂಥಗಳನ್ನು ಮನಮುಟ್ಟಿ ಓದುವದು ಭಗವತ್ಸಾಂನಿಧ್ಯಜ್ಞಾನಕ್ಕೆ ಒಂದು ಹೆಚ್ಚಿನ ಸಾಧನವಾಗುತ್ತದೆ.

ಗ್ರಂಥವನ್ನು ತಾವೇ ಓದಿ ಅರ್ಥಾನುಸಂಧಾನವನ್ನು ಮಾಡಲಾರದವರು ಪುರಾಣಶ್ರವಣಾದಿಗಳನ್ನು ಮಾಡಬೇಕು. ಪುರಾಣಗಳಲ್ಲಿ ಕಥೆಗಳ ನೆಪದಿಂದ ಅಧ್ಯಾತ್ಮತತ್ತ್ವಗಳನ್ನು ಬೋಧಿಸಿರುತ್ತದೆ; ಅಧ್ಯಾತ್ಮಸಾಧನಗಳಿಂದ ಹಿಂದೆ ಅನೇಕರು ಪರಮಾತ್ಮಸಾಂನಿಧ್ಯವನ್ನು ಸಾಕ್ಷಾತ್ಕಾರಮಾಡಿಕೊಂಡು ಹೇಗೆ ಕೃತಾರ್ಥರಾಗಿರುವ ರೆಂಬುದನ್ನು ತಿಳಿಸಿರುತ್ತದೆ. ಪುರಾಣವನ್ನು ಶ್ರವಣಮಾಡಿಸುವವರು ಅನುಭವಿಗಳೇ ಆದರಂತೂ ರೊಟ್ಟಿಯು ಜಾರಿ ತುಪ್ಪಕ್ಕೆ ಬಿದ್ದಂತೆ ನಮಗೆ ಅಧಿಕಫಲವೇ ಆಗುತ್ತದೆ. ಆದರೆ ಸಾಮಾನ್ಯಪಂಡಿತರು ಮಾಡಿಸುವ ಪುರಾಣಶ್ರವಣಗಳಿಂದ ನಮಗೆ ಯಾವ ಲಾಭವೂ ಆಗಲಾರದೆಂದು ಮಾತ್ರ ತಿಳಿಯಬಾರದು. ಏಕೆಂದರೆ ಪುರಾಣಗಳನ್ನು ಬರೆದ ವ್ಯಾಸಾದಿಗಳು ಜನರು ಕೃತಾರ್ಥರಾಗಲಿ ಎಂದು ಅನುಕಂಪೆಯಿಂದ ವಿಧವಿಧವಾಗಿ ಮನೋರಂಜನೆಯಾಗುವ ಮಾರ್ಗಗಳಿಂದ ಸಿದ್ಧಾಂತವನ್ನೂ ಸಾಧನವನ್ನೂ ತಿಳಿಸಿಕೊಟ್ಟಿರುತ್ತಾರೆ. ಆದ್ದರಿಂದ ಶ್ರವಣಮಾಡಿಸುವವರು ಅಧ್ಯಾತ್ಮಾನುಭವವಿಲ್ಲದೆ ಗಿಣಿಯಂತೆ ಪುರಾಣವನ್ನು ಓದಿ ಸಾಮಾನ್ಯವಾದ ಅರ್ಥವನ್ನು ಹೇಳಿದರೂ ಸಾಕು, ಭಾವುಕರಾದ ಶ್ರೋತೃಗಳಿಗೆ ಪುರಾಣಗಳು ಸಾತ್ತ್ವಿಕಭಾವನೆಗಳನ್ನು ಎಬ್ಬಿಸಿ ಅಂತರ್ಮುಖತೆ ಯನ್ನುಂಟುಮಾಡುತ್ತವೆ.

ತೀರ್ಥಕ್ಕೆ ಸಾಧುಸಂಗವಾಗಲಿ ಶಾಸ್ತ್ರಪುರಾಣಾದಿಗಳ ಪಠನಶ್ರವಣಗಳಾಗಲಿ ದೊರೆಯದಿದ್ದರೂ ಪರಮಾತ್ಮಭಾವನೆಗೆ ಉತ್ತೇಜನವುಂಟಾಗುವ ಸಾಮಗ್ರಿಗಳಿಗೇನೂ

ಕೊರತೆಯಿರುವದಿಲ್ಲ. ಏಕೆಂದರೆ ವರ್ಷಂಪ್ರತಿ ನಮಗೆ ಪ್ರತಿಯೊಂದು ಋತುವಿನಲ್ಲಿಯೂ ಭಗವಂತನ ಮಾಹಾತ್ಮ್ಯವನ್ನು ಮನಸ್ಸಿಗೆ ತಾಕಿಸುವ ದೃಶ್ಯವಿಶೇಷಗಳು ಕಂಗೊಳಿಸುತ್ತಲೇ ಇರುತ್ತವೆ. ನಮ್ಮ ಸುತ್ತಲೂ ಕಾಣಿಸುತ್ತಿರುವ ಮರಗಿಡಬಳ್ಳಿಗಳು ಅವುಗಳಲ್ಲಿ ಭಗವಂತನ ವಿಭೂತಿಯನ್ನು ಹೊರಸೂಸುತ್ತಿರುವ ಹೂಹಣ್ಣುಗಳು, ಅವುಗಳಲ್ಲಿ ಬಗೆಬಗೆಯ ಬಣ್ಣದ ಬಗೆಬಗೆಯ ಆಕಾರದಿಂದ ಚಿತ್ತವನ್ನು ಉಲ್ಲಾಸಗೊಳಿಸುವ ಮೃಗಾದಿಗಳು, ಕ್ರಿಮಿಕೀಟಾದಿಗಳು, ತಮ್ಮ ಕಲರವದಿಂದ ಕಿವಿಗೆ ಇಂಪನ್ನುಂಟುಮಾಡಿ ಮನಸ್ಸನ್ನು ಮೇಲುಮಟ್ಟಕ್ಕೇರಿಸುವ ಪಕ್ಷಿಗಳು– ಇವೆಲ್ಲ ಭಗವದ್ಭಾವನೆಗೆ ಸಹಕಾರಿಗಳಾಗಿರುತ್ತವೆ. ಅಲ್ಲಲ್ಲಿ ಹರಿಯುತ್ತಿರುವ ನದಿಗಳು, ದೂರಕ್ಕೆ ಕಾಣಿಸುತ್ತಿರುವ ಬೆಟ್ಟಗಳು, ಸಮುದ್ರಗಳು ವನಗಳು– ಮುಂತಾದ ಸ್ವಾಭಾವಿಕದೃಶ್ಯಗಳು ಕೂಡ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಂಡು ಉತ್ಕೃಷ್ಟವಾದ ಮಟ್ಟಕ್ಕೇರಿಸುವದಕ್ಕೆ ಸಹಾಯಕವಾಗಿರುತ್ತವೆ. ಆಕಾಶದಲ್ಲಿ ಕಾಣಿಸುವ ನಕ್ಷತ್ರಗಳೂ ಸೂರ್ಯಚಂದ್ರಾದಿಗ್ರಹಗಳೂ ನಮ್ಮ ಪರಿಚ್ಛಿನ್ನವಾದ ಸಂಕುಚಿತದೃಷ್ಟಿಯನ್ನು ತಪ್ಪಿಸಿ ಭಗವಂತನ ವ್ಯಾಪ್ತಿಯನ್ನು ಸಾರುತ್ತಿರುವವು. ಹೀಗೆಯೇ ಕಾಂತಿ, ಉತ್ಸಾಹಶಕ್ತಿ, ಸೌಂದರ್ಯ ಮುಂತಾದ ಗುಣವಿಶೇಷಗಳಿಂದ ಕೂಡಿದ ಭಗವಂತನ ವಿಭೂತಿಗಳಿಗೆ ಎಲ್ಲಿಯೂ ಕೊರತೆಯಿರುವದಿಲ್ಲ. ನಿಜವಾದ ಸಾಧಕಭಾವವನ್ನು ತಳೆದವರು ಇವುಗಳಲ್ಲಿ ಒಂದೊಂದರಲ್ಲಿಯೂ ಭಗವಂತನ ಮಹಿಮೆಯು ತುಂಬಿತುಳುಕುತ್ತಿದೆ ಎಂಬ ಭಾವನೆಯನ್ನು ಮಾಡುತ್ತಿರಬೇಕು. ಅದರಿಂದ ಮನಸ್ಸಿನಲ್ಲಿ ಸಮತೆಯುಂಟಾಗುವದು, ಶಾಂತಿಯುಂಟಾಗುವದು, ಭಗವಂತನು ಮೆಲ್ಲಮೆಲ್ಲಗೆ ಅಂಥವರ ಅಂತಃಕರಣದಲ್ಲಿ ಪ್ರವೇಶಿಸಿ ನೆಲಸುವನು.

ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಕೆಲಕೆಲವು ಕರ್ಮಗಳ ಅನುಷ್ಠಾನವು ಬಹುಜನರ ಮನೆಗಳಲ್ಲಿ ಆಚರಣೆಯಲ್ಲಿರುತ್ತವೆ. ಅಂಥ ಕರ್ಮಗಳನ್ನೂ ದೇಶಾಚಾರ, ಕುಲಾಚಾರ– ಮುಂತಾದ ಸದಾಚಾರಗಳನ್ನೂ ಪರಿಪಾಲಿಸುತ್ತಾ ಬರುವದರಿಂದಲೂ ಭಗವಂತನ ಸಾಂನಿಧ್ಯದ ಭಾವನೆಯು ಮನಸ್ಸಿನಲ್ಲಿ ಮೂಡಿಕೊಳ್ಳುವದು. ಪ್ರಾತಃಕಾಲದಲ್ಲಿ ಮುಂಚಿತವಾಗಿ ಎದ್ದು ಭಗವಂತನ ಸ್ತೋತ್ರಾದಿಗಳನ್ನು ಹೇಳಿಕೊಳ್ಳುವದು, ಸ್ನಾನಶೌಚಾದಿಗಳಿಂದ ಶುದ್ಧರಾಗುವದು, ದೇವತಾರ್ಚನೆ, ನಮಸ್ಕಾರ, ಜಪ– ಮುಂತಾದವುಗಳನ್ನು ಯಥಾಶಕ್ತಿಯಾಗಿ ಮಾಡುವದು, ಮನೆಗೆ ಬರುವ ಸಾತ್ತ್ವಿಕರಾದ ಅತಿಥಿಗಳನ್ನೂ ಅಭ್ಯಾಗತರನ್ನೂ ಆದರದಿಂದ ಸತ್ಕರಿಸುವದು, ಸಾತ್ತ್ವಿಕವಾದ ಹಿತಮಿತವಾದ ಆಹಾರಾದಿಗಳನ್ನು ಸೇವಿಸುವದು– ಇವೇ ಮುಂತಾದ ಪದ್ಧತಿಗಳನ್ನು ಕಾಪಾಡಿಕೊಂಡು ಬರುವದೂ ಒಂದು ಭಗವದ್ಭಾವನೆಯ ಸಾಧನವಾಗಿರುತ್ತದೆ. ಈ ಆಚಾರಪರಿಪಾಲನೆಯು ದೇಶದ ಸಂಸ್ಕೃತಿಯನ್ನು ಕಾಪಾಡುವದಲ್ಲದೆ ನಮ್ಮ ಚಿತ್ತಶುದ್ಧಿಗೂ ಕಾರಣವಾಗುತ್ತದೆ.

ಸಾಧಕರಾದವರಿಗೆ ಮತ್ತೆಯಾವ ಉಪಾಯವು ತೋರದಿದ್ದರೂ ಭಗವಂತನ ನಾಮಸ್ಮರಣೆಯನ್ನು ತಪ್ಪದೆ ಮಾಡುತ್ತಿರಬೇಕು. ಕರ್ಮ, ಮಂತ್ರ, ತಪಸ್ಸು, ಧ್ಯಾನ, ಮುಂತಾದ ಸಾಧನಗಳಿಗೆ ಮತ್ತೊಬ್ಬರ ಸಹಾಯವು ಆಗಾಗ್ಗೆ ಬೇಕಾಗುತ್ತಲೇ ಇರುತ್ತದೆ; ಆದರೆ ನಾಮೋಚ್ಚಾರಣೆ, ಅಖಂಡವಾದ ನಾಮಜಪ, ಭಗವಂತನ ನಾಮಗಳನ್ನು ರಾಗತಾಳಗಳಿಂದ ಕೀರ್ತನೆಮಾಡುವ ರೂಪದ ಭಜನೆ- ಇವುಗಳನ್ನು ಎಲ್ಲರೂ ಎಲ್ಲಾ ದೇಶಗಳಲ್ಲಿಯೂ ಅಳವಡಿಸಿಕೊಳ್ಳಬಹುದು. ಭಗವಂತನ ನಾಮದಲ್ಲಿ ಒಂದಾನೊಂದು ಅದ್ಭುತಶಕ್ತಿಯಿರುತ್ತದೆ. ನಾಮಜಪವನ್ನೂ ನಾಮಕೀರ್ತನೆಯನ್ನೂ ಮಾಡುತ್ತಿದ್ದರೆ ನಾಲಗೆಯು ಪವಿತ್ರವಾಗುತ್ತದೆ, ವಾಗಿಂದ್ರಿಯದಲ್ಲಿ ಸತ್ತ್ವವು ವೃದ್ಧಿಯಾಗುತ್ತದೆ. ಪ್ರತಿಯೊಬ್ಬನ ಹೃದಯದಲ್ಲಿಯೂ ಸುಪ್ತವಾಗಿರುವ ಅಧ್ಯಾತ್ಮಿಕಶಕ್ತಿಗಳು ಉದ್ಬುದ್ಧವಾಗುತ್ತವೆ, ಸಾತ್ತ್ವಿಕರ ಸಹವಾಸವು ಲಭಿಸುತ್ತದೆ, ಸಾಧುಸಂತರಲ್ಲಿ ಶ್ರದ್ಧಾಭಕ್ತಿಗಳು ಹೆಚ್ಚುತ್ತವೆ, ಭಗವಂತನ ಗುಣಕರ್ಮಗಳನ್ನು ಮತ್ತೆ ಮತ್ತೆ ಶ್ರವಣಮಾಡಬೇಕೆಂಬ ಕೌತೂಹಲವುಂಟಾಗುತ್ತದೆ, ಭಗವಂತನ ಸಾಂನಿಧ್ಯವು ತನ್ನ ಹೃದಯದಲ್ಲಿಯೂ ತನ್ನ ಸುತ್ತಲೂ ಇರುವದೆಂಬ ಅರಿವು ಮೆಲ್ಲಮೆಲ್ಲಗೆ ಉದಯಿಸಿ ಬೆಳಗುವದಕ್ಕೆ ಆರಂಭಿಸುತ್ತದೆ. ಭಗವಂತನ ಧ್ಯಾನವು ನಿರಂತರವಾಗಿ ಲಭಿಸಿ ಆತನನ್ನು ಸಾಕ್ಷಾತ್ಕಾರಮಾಡಿಕೊಳ್ಳುವ ಶಕ್ತಿಯೂ ಅಳವಡುತ್ತದೆ.

ಈ ನಂದನಸಂವತ್ಸರದಲ್ಲಿ ನಮ್ಮ ವಾಚಕವೃಂದಕ್ಕೆ ಭಗವಂತನ ಸಾಂನಿಧ್ಯದ ಭಾವನೆಯನ್ನು ಬೇರೂರಿಸಿಕೊಳ್ಳಬೇಕೆಂಬ ಸತ್ಸಂಕಲ್ಪವುಂಟಾಗಲಿ! ಈ ಸಂದೇಶವನ್ನು ಒಂದು ಸಲ ಹಾಗೆಯೇ ಓದಿ ಸುಮ್ಮನಾಗದೆ ಇಲ್ಲಿ ಸೂಚಿಸಿರುವ ಸಾಧನಗಳಲ್ಲಿ ತಮ್ಮತಮ್ಮ ಅಧಿಕಾರಕ್ಕೆ ಹೊಂದುವ ಯಾವದಾದರೊಂದನ್ನು ಅಳವಡಿಸಿಕೊಂಡೇ ತೀರಬೇಕೆಂಬ ಸ್ಥಿರಚಿತ್ತವನ್ನು ಆ ಭಗವಂತನು ಅನುಗ್ರಹಿಸಲಿ!

## 3.9. ಪರಮೇಶ್ವರನ ಪಾದಾರವಿಂದ ಸೇವೆಯೇ ಸಾರವು

**ಅನ್ಯತ್ರ ಧರ್ಮಾದನ್ಯತ್ರಾಧರ್ಮಾದನ್ಯತ್ರಾಸ್ಮಾತ್ಕೃತಾಕೃತಾತ್ । ಅನ್ಯತ್ರ ಭೂತಾಚ್ಚಭವ್ಯಾಚ್ಚ ಯತ್ತತ್ಪಶ್ಯಸಿ ತದ್ವದ ॥** (ಕಠ. 2-4)

**"ಧರ್ಮಕ್ಕಿಂತ ಬೇರೆಯಾಗಿ, ಅಧರ್ಮಕ್ಕಿಂತ ಬೇರೆಯಾಗಿ, ಕಾರ್ಯಕಾರಣಕ್ಕಿಂತ ಬೇರೆಯಾಗಿ, ಭೂತಭವ್ಯಗಳಿಗಿಂತ ಬೇರೆಯಾಗಿರುವ ಯಾವ ತತ್ತ್ವವನ್ನು ನೀನು ಬಲ್ಲೆಯೋ ಅದನ್ನು ನನಗೆ ತಿಳಿಸಿಕೊಡು".**

ಪರಮಾರ್ಥವು ನಮ್ಮ ಎಲ್ಲಾ ಕಲ್ಪನೆಗಳನ್ನೂ ಮೀರಿ ಸ್ವತಂತ್ರವಾಗಿ ತನ್ನ ಮಹಿಮೆಯಲ್ಲಿ ನೆಲೆನಿಂತಿರುತ್ತದೆ. ಪರಮಾರ್ಥವನ್ನು ಯಾವ ಹೆಸರಿನಿಂದ ಕರೆದರೂ ಅದನ್ನು ಇದ್ದದ್ದು ಇದ್ದಂತೆ ವರ್ಣಿಸಿ ತಿಳಿಸುವದು ಆಗಲಾರದು. ಪರಮಾರ್ಥವು ಯಾವದೊಂದು

ಇಂದ್ರಿಯದ ಹಿಡಿತಕ್ಕೂ ಸಿಕ್ಕುವಂಥದ್ದಲ್ಲ. ಹೀಗಿದ್ದರೂ ಅದನ್ನು ಶಾಸ್ತ್ರಾಚಾರ್ಯರು ತಿಳಿಸುವ ಉಪಾಯಗಳಿಂದ ನಮ್ಮನಮ್ಮ ಹೃದಯದಲ್ಲಿಯೇ ಕಂಡುಕೊಂಡು ಆನಂದಿಸಬಹುದು. ಇದೊಂದು ಆಧ್ಯಾತ್ಮಿಕವಿರೋಧಾಭಾಸವು.

ಪರಮಾರ್ಥವನ್ನು ಶಾಸ್ತ್ರದಲ್ಲಿ ಬ್ರಹ್ಮ, ಪರಮೇಶ್ವರ, ಪರಮಾತ್ಮ- ಮುಂತಾದ ಬಗೆಬಗೆಯ ಹೆಸರುಗಳಿಂದ ಕರೆದಿರುತ್ತೇವೆ. ಪರಮಾರ್ಥವು ಯಾವ ಹೆಸರಿಗೂ ಗೋಚರವಾಗದೆ ಇದ್ದರೂ ಈ ಶಾಸ್ತ್ರೀಯನಾಮಗಳಿಂದ ಅದನ್ನು ಕರೆಯುವದರಿಂದ ಅದರ ಯಥಾರ್ಥವಾದ ತತ್ತ್ವಕ್ಕೆ ಅತಿಸಮೀಪವಾಗಿ ನಾವು ತಲುಪಿದಂತೆ ಆಗುವದು. ನಾಮಾತೀತನಾದ ಪರಮಾತ್ಮನನ್ನು ಅನಂತನಾಮಗಳಿಂದ ಕರೆಯುವದಕ್ಕೆ ಋಷಿಗಳು ಮಾಡಿರುವ ಪ್ರಯತ್ನದ ರಹಸ್ಯವೇ ಇದು. ಒಂದೊಂದು ನಾಮವು ಪರಮಾತ್ಮನ ಒಂದೊಂದು ಸ್ವಭಾವವಿಶೇಷವನ್ನು ನೆನಪುಕೊಡುತ್ತದೆ; ಆದರೆ ಯಾವದೊಂದು ನಾಮವೂ ಸಂಪೂರ್ಣವಾಗಿ ಯಥಾರ್ಥವಾಗಿ ಆತನನ್ನು ಬಣ್ಣಿಸಲಾರದು.

ಪರಮಾತ್ಮನನ್ನು ಮುಟ್ಟಿಸುವದಕ್ಕೆಂದು ಕೆಲವು ಕರ್ಮಗಳನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ವೇದವಿಹಿತವಾದ ಯಜ್ಞ, ದಾನ, ತಪಸ್ಸು- ಇವುಗಳನ್ನು ಒಂದಾನೊಂದು ಕ್ರಮದಲ್ಲಿ, ಫಲೇಚ್ಛೆಯಿಲ್ಲದೆಯೂ ಕರ್ಮಸಂಗವಿಲ್ಲದೆಯೂ, ಮಾಡಿದರೆ ಪರಮೇಶ್ವರನ ಜ್ಞಾನದ ಉತ್ಕಟೇಚ್ಛೆಯೂ ಆತನನ್ನು ಅರಿಯುವ ಯೋಗ್ಯತೆಯೂ ದೊರಕುವವೆಂದು ಶ್ರುತಿಗಳು ಹೇಳುತ್ತವೆ. ಸ್ವಕರ್ಮದಿಂದ ಪರಮೇಶ್ವರನ ಅಭ್ಯರ್ಚನೆಯನ್ನು ಮಾಡಿದರೆ ಮಾನವನಿಗೆ ಸಿದ್ಧಿಯುಂಟಾಗುವದು- ಎಂದು ಗೀತಾವಚನವೂ ಇದೆ. ಹೀಗೆ ಪರಮೇಶ್ವರನ ಪ್ರಾಪ್ತಿಗೆಂದು ವಿಹಿತವಾಗಿರುವ ಕರ್ಮಗಳಿಗೆ ಧರ್ಮವೆಂದು ಹೆಸರು; ಏಕೆಂದರೆ ಅವುಗಳನ್ನು ಮಾಡಿದರೆ ಧರ್ಮವು, ಅಥವಾ ಪುಣ್ಯವು ಉಂಟಾಗುತ್ತದೆ. ಪುಣ್ಯದಿಂದಲೇ ಭಗವತ್ಪ್ರಾಪ್ತಿಯ ಇಚ್ಛೆಯೂ ಆ ಪ್ರಾಪ್ತಿಗೆ ಬೇಕಾದ ಯೋಗ್ಯತೆಯೂ ಉಂಟಾಗುವವು. ಆದರೆ ಶಾಸ್ತ್ರದಲ್ಲಿ ಮಾಡಬಾರದೆಂದು ಹೇಳಿರುವ ಕೆಲವು ಕರ್ಮಗಳುಂಟು. ಅವಕ್ಕೆ ಅಧರ್ಮವೆಂದು ಹೆಸರು; ಏಕೆಂದರೆ ಅವುಗಳನ್ನು ಮಾಡಿದರೆ ಅಧರ್ಮವು, ಅಥವಾ ಪಾಪವು ಉಂಟಾಗುತ್ತದೆ. ಪಾಪದಿಂದಲೇ ಮಾನವನ ಮನಸ್ಸಿನಲ್ಲಿ ಪರಮೇಶ್ವರನಿಂದ ಹಿಮ್ಮೆಟ್ಟಿಸುವ ಚಿತ್ತದ ಕೊಳೆಯೂ ಚಾಂಚಲ್ಯವೂ ಉಂಟಾಗುವವು. ಮನುಷ್ಯನು ಧರ್ಮಾಧರ್ಮಗಳನ್ನು ಮಾಡಿ ಕಾಲಾಂತರದಲ್ಲಿ ಅವುಗಳಿಂದಾಗುವ ಸುಖದುಃಖಗಳನ್ನು ಪಡೆಯುತ್ತಾನೆ.

ಧರ್ಮಾಧರ್ಮಗಳೆಂಬ ಕಾರಣಗಳಿಂದ ಪುಣ್ಯಪಾಪಗಳು ಉಂಟಾಗಿ ಅವುಗಳ ಮೂಲಕ ಭಗವಂತನ ಕಡೆಗೆ ತಿರುಗುವದು ಅಥವಾ ಅವನಿಂದ ಹಿಮ್ಮೆಟ್ಟುವದು, ಸುಖಶಾಂತಿಗಳನ್ನು ಅಥವಾ ದುಃಖಾಶಾಂತಿಗಳನ್ನು ಅನುಭವಿಸುವದು- ಎಂಬ

ಕಾರ್ಯಕಾರಣಭಾವವನ್ನು ಮೇಲೆ ವರ್ಣಿಸಿದೆಯಷ್ಟೆ. ಕಾರಣವಾದ ಕರ್ಮಗಳನ್ನು ಮಾಡುವದು ಮೊದಲು, ಕಾರ್ಯವಾದ ಫಲವನ್ನು ಅನುಭವಿಸುವದು ಆಮೇಲೆ- ಎಂಬ ಕಾಲಕೃತವಾದ ಕ್ರಮವು ಇಲ್ಲಿ ತೋರುತ್ತದೆ. ಕರ್ಮವನ್ನು ಮೊದಲು ಮಾಡುವದು, ಫಲವನ್ನು ಆಮೇಲೆ ಅನುಭವಿಸುವದು- ಎಂಬ ನಿಯಮವು ನಮಗೆ ತೋರುತ್ತದೆ. ಆದರೆ ಪರಮಾರ್ಥದೃಷ್ಟಿಯಲ್ಲಿ ಹೀಗೇನೂ ಇಲ್ಲ. ಪರಮಾರ್ಥವು ಧರ್ಮಾಧರ್ಮಗಳನ್ನು ಮೀರಿರುತ್ತದೆ, ಕಾಲದ ಅನುಕ್ರಮವನ್ನೂ ಮೀರಿರುತ್ತದೆ.

ನಾವು ಕರ್ಮಗಳನ್ನು ಮಾಡಿದ ಮೇಲೆಯೇ ಕಾಲಾಂತರದಲ್ಲಿ ಕರ್ಮಕ್ಕನುಗುಣವಾದ ಫಲವು ದೊರಕುವದು ಎಂಬ ನಂಬಿಕೆಯು ನಮ್ಮಲ್ಲನೇಕರಿಗೆ ಇರುತ್ತದೆ. ಇದು ವ್ಯವಹಾರದಲ್ಲಿ ಬಲುಮಟ್ಟಿಗೆ ನಿಜವೂ ಆಗಿರುತ್ತದೆ. ಕಾರಕಗಳಿಲ್ಲದೆ ಕ್ರಿಯೆಯು ತೋರಿಕೊಳ್ಳುವದೆಂದಾಗಲಿ, ಕ್ರಿಯೆಯೆಂಬ ಕಾರಣವು ಮೊದಲು ಏರ್ಪಡದೆ ನಮಗೆ ಇಷ್ಟಾನಿಷ್ಟಫಲಗಳು ದೊರಕುವವೆಂದಾಗಲಿ, ನಾವು ನಂಬುವದಿಲ್ಲ. ಆದರೆ ಪರಮೇಶ್ವರನು ಧರ್ಮಾಧರ್ಮಗಳಿಗೆ ಕಟ್ಟುಬಿದ್ದಿರುವದಿಲ್ಲ; ಇಂಥ ಧರ್ಮವನ್ನು ಇವನು ಮಾಡಿರುವದರಿಂದ ಇವನಿಗೆ ಈ ಫಲವನ್ನು ಕೊಡಬೇಕು ಎಂದೇನೂ ಅವನು ಲೆಕ್ಕಮಾಡಿ ಕೊಡುವದಿಲ್ಲ. ಪರಮೇಶ್ವರನ ದೃಷ್ಟಿಯಿಂದ ನೋಡಿದಾಗ, ನಾವು ಫಲವೆಂದು ಕರೆಯುತ್ತಿರುವ ಪದಾರ್ಥವು ಮೊದಲೇ ಸಿದ್ಧವಾಗಿರುತ್ತದೆ; ಅದು ಪರಮೇಶ್ವರನ ಕಡೆಗೆ ನಾವು ತಿರುಗಿದಾಗ ನಮಗೆ ಗೋಚರವಾಗುತ್ತದೆ. ಅಷ್ಟೆ.

ನಾವು ಮಾಡುವ ಕರ್ಮಕ್ಕೆ ಅನುಗುಣವಾಗಿ ನಮಗೆ ಫಲವು ದೊರಕುವದೆಂಬುದೇ ನಿಜವಾದ ನಿಯಮವಾಗಿದ್ದರೆ ಎರಡು ಘಂಟೆ ಕೆಲಸಮಾಡಿದವನಿಗೆ ದೊರಕುವ ಫಲದ ಎರಡರಷ್ಟು ಫಲವು ನಾಲ್ಕು ಘಂಟೆ ಕೆಲಸಮಾಡಿದವನಿಗೆ ದೊರಕಬೇಕು. ಆದರೆ ಲೋಕದಲ್ಲಿ ಕರ್ಮವನ್ನು ಮಾಡಿಮಾಡಿ ಫಲವು ದೊರಕಲಿಲ್ಲವೆಂದು ಆಯಾಸ ಪಡುತ್ತಿರುವವರು ಎಷ್ಟೋ ಜನರು ನಮಗೆ ಕಾಣಬರುತ್ತಿದಾರೆ. ಪರಮೇಶ್ವರನ ಆರಾಧನೆಯ ರೂಪವಾಗಿ ಮಾಡಿದ ಸ್ವಲ್ಪ ಕರ್ಮಕ್ಕೇ ಅನಂತಫಲವಾಗುತ್ತದೆ-ಎಂದೂ ಶಾಸ್ತ್ರಗಳು ಹೇಳುತ್ತಲೂ ಇವೆ. ಆದ್ದರಿಂದ ಪುಣ್ಯಕರ್ಮವು ಆಯಾ ಸತ್ಫಲವನ್ನು ತೋರಿಸಿಕೊಡುವ ಕೈಕಂಬವೇ ಹೊರತು ತಾನೇ ಆ ಫಲವನ್ನು ಕೊಡುತ್ತದೆ ಎನ್ನುವದಕ್ಕೆ ಆಗುವದಿಲ್ಲ. ಮಗುವು ತನ್ನ ಪುಟ್ಟ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಅತ್ತರೆ, ತಾಯಿಯು ಅದನ್ನು ಎತ್ತಿಕೊಂಡು ಮುದ್ದಿಡುತ್ತಾಳೆ. ಆದಮಾತ್ರಕ್ಕೆ ಆಗ ಮಗುವು ಕೈಯಾಡಿಸಿದ್ದರ ಫಲವದೆಂದು ಬಗೆಯಬಹುದೆ?

ಕರ್ಮವೇ ಕಾರಣವಾಗಿದ್ದು ಅದರಿಂದಲೇ ಫಲವಾಗುವದೆಂಬ ನಿಯಮವು ಯಥಾರ್ಥವಾಗಿದ್ದರೆ ಕರ್ಮವಾದಮೇಲೆಯೇ ಫಲವುಂಟಾಗಬೇಕಲ್ಲವೆ? ಆದರೆ ಫಲವು

ಕರ್ಮಕ್ಕಿಂತ ಮೊದಲೇ ತಯಾರಾಗಿದ್ದ ಕೆಲವು ಉದಾಹರಣೆಗಳು ನಮ್ಮ ಅನುಭವದಲ್ಲಿ ಸಿಕ್ಕುತ್ತವೆ. ಒಬ್ಬ ಮನುಷ್ಯನಿಗೆ ಈದಿನ ಇನ್ನೂರು ರೂಪಾಯಿಗಳು ಬೇಕಾಗಿರುತ್ತವೆ; ಅವನು ಯಾರನ್ನು ಎಷ್ಟು ಬೇಡಿಕೊಂಡರೂ ಎರಡು ರೂಪಾಯಿಗಳು ಕೂಡ ಅವನಿಗೆ ದೊರಕಿರುವದಿಲ್ಲ. ಅವನು ಪ್ರಯತ್ನಮಾಡಿ ಸಾಕಾಗಿ ಉಸ್ಸೆಂದು ಕೂತುಕೊಳ್ಳುವದಕ್ಕೆ ಸಿದ್ಧನಾಗಿರುವ ಹೊತ್ತಿಗೆ ಅಂಚೆಯ ಜವಾನನು ಅವನಿಗೊಂದು ಮನಿಆರ್ಡರನ್ನು ತಂದು ಕೊಡುತ್ತಾನೆ. ಕಳೆದ ವರ್ಷ ಸೀಮೆಗೆ ಹೋಗಿದ್ದ ಅವನ ಸ್ನೇಹಿತನೊಬ್ಬನು ಅವನ ಉಪಯೋಗಕ್ಕೆಂದು ಇನ್ನೂರು ರೂಪಾಯಿಗಳನ್ನು ಮನಿಆರ್ಡರು ಮಾಡಿದ್ದನೆಂದು ಈಗ ತಿಳಿದುಬರುತ್ತದೆ. ಅವನ ಕಷ್ಟವು ಪರಿಹಾರವಾಯಿತು! ಈ ದೃಷ್ಟಾಂತದಲ್ಲಿ ಸ್ನೇಹಿತನು ಮನಿಆರ್ಡರು ಮಾಡಿರುವದು ಕೆಲವು ತಿಂಗಳುಗಳ ಹಿಂದೆ; ಹಣವು ಬೇಕಾಗಿರುವದು ಇಂದು. ಭೂತಭವಿಷ್ಯತ್ತುಗಳನ್ನು ಮೀರಿರುವ ಪರಮಾತ್ಮನ ನಿಯಮವಲ್ಲದೆ ಮತ್ತೆ ಯಾವದನ್ನು ಇಟ್ಟುಕೊಂಡರೆ ತಾನೆ ಈ ಕಾರ್ಯಕಾರಣಗಳ ಕಾಲಾನುಕ್ರಮವನ್ನು ನಾವು ಹೊಂದಿಸಿ ಹೇಳುವದಕ್ಕಾದೀತು? ಸೃಷ್ಟಿಯ ವಿಕಾಸಕ್ರಮವನ್ನು ನಾವು ಹೊಂದಿಸಿ ಹೇಳುವದಕ್ಕಾದೀತು? ಸೃಷ್ಟಿಯ ವಿಕಾಸಕ್ರಮದಲ್ಲಿ ಪ್ರಾಣಿಗಳ ಮತ್ತು ಮನುಷ್ಯರ ಆಹಾರವಾಗಿರುವ ಸಸ್ಯಗಳು ಮೊದಲು ಹುಟ್ಟುವವು; ಪ್ರಾಣಿಗಳೂ ಮನುಷ್ಯರೂ ಆಮೇಲೆ ಹುಟ್ಟುವರು. "ಓಷಧೀಭ್ಯೋಽನ್ನಮ್, ಅನ್ನಾತ್ಪುರುಷಃ" ಎಂದೇ ಉಪನಿಷತ್ತಿನಲ್ಲಿ ಹೇಳಿದೆ. ಹುಟ್ಟುವ ಮಗುವಿಗೆ ಬೇಕಾದ ತಾಯಿಯ ಸ್ತನ್ಯವು ಮೊದಲೇ ಸಿದ್ಧವಾಗಿರುತ್ತದೆ. ನಮಗೆ ಬೇಕಾಗಿರುವ ಪದಾರ್ಥಗಳು ನಮ್ಮ ಪ್ರಯತ್ನದ ಕೊನೆಯಲ್ಲಿ ಪ್ರಾಪ್ತವಾದ ಮಾತ್ರದಿಂದ ಅವು ನಮ್ಮ ಪ್ರಯತ್ನದಿಂದಲೇ ಉಂಟಾಗುವವೆಂದು ಹೇಳುವದು ತಪ್ಪೆಂಬುದಕ್ಕೆ ಇವೆಲ್ಲ ಪ್ರಮಾಣಗಳಲ್ಲವೆ?

ನಮ್ಮನಮ್ಮ ಕರ್ಮಗಳೇ ನಮಗೆ ಆಯಾ ಫಲವನ್ನು ಕೊಡುತ್ತವೆ ಎಂಬುದು ಲೋಕದೃಷ್ಟಿಯು, ವ್ಯವಹಾರದೃಷ್ಟಿಯು. ಪರಮೇಶ್ವರನೇ ಆಯಾಕರ್ಮಗಳನ್ನು ನೆಪಮಾಡಿಕೊಂಡು ಅಥವಾ ನೇರಾಗಿ ತಾನೇ ಆಯಾ ಫಲವನ್ನು ಕೊಡುತ್ತಾನೆಂಬುದು ಶಾಸ್ತ್ರದೃಷ್ಟಿಯು, ಪರಮಾರ್ಥದೃಷ್ಟಿಯು. ಶಾಸ್ತ್ರದಲ್ಲಿ ಹೇಳಿರುವ ಧರ್ಮಾಧರ್ಮವಿಭಾಗದಲ್ಲಿ ಲೋಕದೃಷ್ಟಿಯಿಂದ ಸಿದ್ಧವಾಗಿರುವ ಜೀವನ ಕರ್ತೃತ್ವಭೋಕ್ತೃತ್ವಗಳನ್ನು ಇಟ್ಟುಕೊಂಡೇ ಇಂಥ ಕರ್ಮಕ್ಕೆ ಇಂಥ ಫಲವೆಂದು ತಿಳಿಸಿಕೊಟ್ಟಿರುತ್ತದೆ. ಆದರೆ ಈ ಧರ್ಮಾಧರ್ಮ ವಿಭಾಗವು ಪರಮಾರ್ಥವೆಂದೇನೂ ಅಲ್ಲಿ ಹೇಳಿರುವದಿಲ್ಲ. ಧರ್ಮಾಧರ್ಮಗಳನ್ನು ಶಾಸ್ತ್ರವು ತಿಳಿಸುವಾಗ ಕಾರ್ಯಕಾರಣಗಳ ಸಂಬಂಧವನ್ನೂ ಕಾಲದಲ್ಲಿರುವ ಭೂತಭವಿಷ್ಯದ್ವರ್ತಮಾನಗಳೆಂಬ ವಿಂಗಡವನ್ನೂ ಒಪ್ಪಿಕೊಂಡೇ ತಿಳಿಸಬೇಕಾಗಿದೆ. ಆದರೆ ಶಾಸ್ತ್ರದೃಷ್ಟಿಯಲ್ಲಿ ಈ ವಿಂಗಡವು ಇರುವದೇ ಇಲ್ಲ. ಆದ್ದರಿಂದಲೇ ತತ್ತ್ವವನ್ನು

ತಿಳಿಸುವದಕ್ಕಾಗಿಯೇ ಹೊರಟಿರುವ ಶಾಸ್ತ್ರವು ಪರಮಾರ್ಥದಲ್ಲಿ ಧರ್ಮಾಧರ್ಮಗಳಾಗಲಿ ಕಾರ್ಯಕಾರಣಗಳಾಗಲಿ ಕಾಲವಿಭಾಗವಾಗಲಿ ಇಲ್ಲವೇ ಇಲ್ಲ ಎಂದು ಘಂಟಾಘೋಷವಾಗಿ ಸಾರುತ್ತಿದೆ. ಕ್ರಿಯಾಕಾರಕಫಲಗಳ ವ್ಯವಹಾರವು ನಮಗೆಲ್ಲ ಸ್ವಾಭಾವಿಕವಾಗಿರುತ್ತದೆ; ಅದನ್ನು ಶಾಸ್ತ್ರವೇನೂ ತಿಳಿಸಿಕೊಡಬೇಕಾದದ್ದಿಲ್ಲ. ಆದರೆ ಈ ವ್ಯವಹಾರವನ್ನು ಹೇಗೆ ಉಪಯೋಗಿಸಿಕೊಂಡರೆ ನಾವು ಇದನ್ನೆಲ್ಲ ಮೀರಿರುವ ಪರಮಾರ್ಥವನ್ನು ಅನುಭವದಲ್ಲಿ ಕಂಡುಕೊಳ್ಳಬಹುದೆಂಬುದನ್ನು ಶಾಸ್ತ್ರವೇ ಹೇಳಿಕೊಡಬೇಕಾಗಿರುತ್ತದೆ.

ಕ್ರಿಯಾಕಾರಕಫಲಗಳ ವ್ಯವಹಾರವೊಂದು, ಕ್ರಿಯಾಕಾರಕಫಲಗಳನ್ನು ಮೀರಿರುವ ಪರಮಾರ್ಥವೊಂದು– ಹೀಗೆ ಎರಡು ತತ್ತ್ವಗಳಿರುವವೆಂದು ಭಾವಿಸಬಾರದು. ವ್ಯವಹಾರವು ಹೇಗೆ ಕಾಣಿಸುತ್ತಿರುವದೋ ಅದನ್ನು ಹಾಗೆಯೇ ಇಟ್ಟುಕೊಂಡೇ ಶಾಸ್ತ್ರವು ಪರಮಾರ್ಥವನ್ನು ತಿಳಿಸುವದಕ್ಕೆ ಹೊರಟಿರುತ್ತದೆ. ಶಾಸ್ತ್ರದೃಷ್ಟಿಯಿಂದ ಕಾಣಬರುವ ಪರಮಾರ್ಥವೊಂದೇ ಪರಮಸತ್ಯವು. ಈ ಪರಮಾರ್ಥದ ದೃಷ್ಟಿಯನ್ನೇ ಭಗವಂತನೂ ಭಗವದ್ಭಕ್ತರಾದ ಜ್ಞಾನಿಗಳೂ ಅನುಸರಿಸುವರು. ಅವರ ಉಪದೇಶವನ್ನು ನಂಬಿ ನಾವುಗಳೂ ಈ ದೃಷ್ಟಿಯನ್ನೇ ತಂದುಕೊಂಡು ಕರ್ಮಬಂಧದಿಂದ ಬಿಡುಗಡೆಯಾಗಬೇಕಾಗಿರುತ್ತದೆ. ಈ ಪರಮಾರ್ಥವು ಪರಮಾತ್ಮನಿಗಿಂತ ಬೇರೆಯಾಗಿರುವದಿಲ್ಲ; ಅವನೇ ನಮಗೆ ಗತಿ ಎಂದು ನೆರೆನಂಬಿ ಅಧ್ಯಾತ್ಮಸಾಧನಗಳನ್ನು ಅವಲಂಬಿಸಿರುವವರೇ ಮುಮುಕ್ಷುಗಳು.

ನಿಜವನ್ನು ಬಲ್ಲ ಮಹನೀಯರು ನಮಗೆ ಉಪದೇಶಿಸುತ್ತಿರುವದೇನೆಂದರೆ ಪರಮೇಶ್ವರನೊಬ್ಬನೇ ಪರಮಸತ್ಯವು. ಆತನ ಕಡೆಗೆ ನಾವು ದೃಷ್ಟಿಯನ್ನು ತಿರುಗಿಸುವವರೆಗೂ ನಮಗೆ ಈ ಕ್ರಿಯಾಕಾರಕಫಲಾತ್ಮಕವಾದ ವ್ಯಾವಹಾರಿಕ ಪ್ರಪಂಚವೇ ಸತ್ಯವೆಂದು ತೋರುತ್ತಿರುವದು. ಇದು ಸತ್ಯವಾಗಿ ತೋರುವದಕ್ಕೆ ಕಾರಣವೇನು? ಎಂದರೆ ಪರಮಾರ್ಥಸತ್ಯನಾಗಿರುವ ಆ ಪರಮಾತ್ಮನೇ ಇದಕ್ಕೆ ಆಧಾರವಾಗಿರುವದೇ ಕಾರಣ. ಧರ್ಮಾಧರ್ಮಗಳು, ಕಾಲದೇಶನಿಮಿತ್ತಗಳು, ಕ್ರಿಯಾಕಾರಕಫಲಗಳು– ಇವೆಲ್ಲವೂ ಆ ಪರಮಾತ್ಮನಲ್ಲಿ ಕಾಣುತ್ತಿರುವ ತೋರಿಕೆಗಳು ಮಾತ್ರ.. ಆದರೂ ನಾವು ಧರ್ಮಾಧರ್ಮವಿಭಾಗವನ್ನು ಅನುಸರಿಸಿಕೊಂಡಿದ್ದೇ ಧರ್ಮಾಧರ್ಮಗಳನ್ನು ಮೀರಿರುವ ಆ ಪರಮಾತ್ಮನನ್ನು ಕಂಡುಕೊಳ್ಳಬೇಕಾಗಿದೆ.

ಧರ್ಮಾಧರ್ಮವಿಭಾಗವು ವಿವೇಕಿಗಳಿಗೆಲ್ಲ ಪರಮಾರ್ಥವಾಗಿಯೇ ಕಾಣುತ್ತಿದೆ; ಆದ್ದರಿಂದಲೇ ಅಧರ್ಮವನ್ನು ಬಿಟ್ಟು ಧರ್ಮವನ್ನು ಅನುಸರಿಸಬೇಕೆಂದು ಶಾಸ್ತ್ರವು ಬೋಧಿಸುತ್ತಿದೆ. ಹೀಗಿರುವಲ್ಲಿ ಧರ್ಮಾಧರ್ಮಗಳು ಬರಿಯ ತೋರಿಕೆ ಎಂದು ಅವುಗಳನ್ನು ಅನಾದರಮಾಡಬಹುದೆ? ಅವು ಬರಿಯ ತೋರಿಕೆಯೇ ಆಗಿದ್ದರೆ ಧರ್ಮದಿಂದ ಪರಮಾತ್ಮನನ್ನು ಪಡೆಯಬಹುದೆಂಬ ಉಪದೇಶವಾದರೂ ಹೇಗೆ ಹೊಂದೀತು?– ಎಂಬ ಶಂಕೆಯು ಕೆಲವರಿಗೆ ಉಂಟಾಗಬಹುದು. ಈ ಶಂಕೆಯನ್ನು ಪರಿಹರಿಸುವದಕ್ಕೆ

ನಮ್ಮೆಲ್ಲರ ಅನುಭವದಲ್ಲಿರುವ ಒಂದು ಉದಾಹರಣೆಯನ್ನು ಇಲ್ಲಿ ಕೊಡುವೆನು. ನಮ್ಮೆಲ್ಲರಿಗೂ ಸ್ವಪ್ನಾವಸ್ಥೆಯೆಂಬ ಒಂದು ಅವಸ್ಥೆಯ ಅನುಭವವಿರುತ್ತದೆಯಷ್ಟೆ. ಆ ಅವಸ್ಥೆಯಲ್ಲಿ ಕಾಣುವ ದೃಶ್ಯಗಳಿಗೂ ಎಚ್ಚರದವಸ್ಥೆಯ ದೃಶ್ಯಗಳಿಗೂ ಸಂಬಂಧವೇನು?- ಎಂಬುದನ್ನು ನಾವು ಮನಸ್ಸಿನಲ್ಲಿ ಸ್ವಲ್ಪ ಹೊರಳಾಡಿಸಿ ನೋಡೋಣ. ನನಗೆ ಒಂದು ದಿನ ಒಂದಾನೊಂದು ನಾಮಕರಣಮಹೋತ್ಸವವನ್ನು ಕಂಡ ಸ್ವಪ್ನವಾಯಿತು. ಅಲ್ಲಿ ತಾಯಿತಂದೆಗಳು ಉಲ್ಲಾಸದಿಂದ ನೆರೆಯವರನ್ನು ಕರೆದು, ಬಂದ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಟ್ಟರು; ಜನರಿಗೆಲ್ಲ ಸಕ್ಕರೆಯನ್ನು ಹಂಚಿದರು. ಈ ದೃಶ್ಯವನ್ನು ನಾನು ನೋಡಲೇ ಇಲ್ಲವೆಂದು ಹೇಳುವದಕ್ಕೆ ಬರುವದಿಲ್ಲ. ಅಲ್ಲಿ ಅನೇಕಜನರು ನೆರೆದಿದ್ದದ್ದೂ, ತಂದೆತಾಯಿಗಳಿಗೆ ಹೊಸದಾಗಿ ಮಗು ಹುಟ್ಟಿ ಅದಕ್ಕೆ ನಾಮಕರಣವಾದದ್ದೂ-ಮುಂತಾದ ದೃಶ್ಯವು ನನಗೆ ಸ್ಫುಟವಾಗಿ ಕನಸಿನಲ್ಲಿ ಕಂಡುಬಂತೆಂಬುದು ಈಗಲೂ ನನ್ನ ನೆನಪಿನಲ್ಲಿದೆ. ಆಗ ಕೊಟ್ಟ ಕೊಬ್ಬರಿಸಕ್ಕರೆಯನ್ನು ತಿಂದಾಗ ಎಚ್ಚರದ ಸಕ್ಕರೆಯಂತೆಯೇ ಅದು ಮಧುರವಾಗಿತ್ತೆಂದು ನೆನಪಿದೆ. ಮಗುವಿಗೂ ತಾಯಿತಂದೆಗಳಿಗೂ ಆರತಿಯನ್ನು ಮಾಡುವಾಗ ಊದಿದ ನಾಗಸ್ವರ ಮತ್ತು ದೋಣಿನ ಧ್ವನಿ-ಇವುಗಳ ಗದ್ದಲವೂ ಜನರೆಲ್ಲರೂ ಸಂಭ್ರಮದಿಂದ ಮಾತನಾಡುತ್ತಿದ್ದ ಕಲಕಲಶಬ್ದವೂ ನನ್ನನ್ನು ತಟ್ಟನೆ ಎಚ್ಚರುವಂತೆ ಮಾಡಿದವೆಂಬ ನೆನಪೂ ಇದೆ. ಆದರೇನು? ಆ ಕನಸಿನಲ್ಲಿದ್ದ ನೋಟಗಳೆಲ್ಲವೂ ಬರಿಯ ಕನಸು, ಬರಿಯ ತೋರಿಕೆ-ಎಂಬ ನಿಶ್ಚಯವೂ ನನಗೆ ಆಗಿಬಿಟ್ಟಿರುತ್ತದೆ. ಆಗ್ಗೆ ನಾಮಕರಣವು ಪರಮಾರ್ಥವಾಗಿಯೇ ನನಗೆ ಕಂಡುಬಂತು; ಆದರೆ ಈಗಿನ ಎಚ್ಚರದ ದೃಷ್ಟಿಯಿಂದ ನೋಡುವಾಗ ಅವೆಲ್ಲ ಬರಿಯ ತೋರಿಕೆಯಾಗಿಬಿಟ್ಟಿರುತ್ತದೆ. ಅಲ್ಲವೆ? ಇದರಂತೆ ವ್ಯವಹಾರದೃಷ್ಟಿಯಿಂದ ನಿಜವೆಂದೇ ತೋರುವ ಧರ್ಮಾಧರ್ಮಾದಿವಿಭಾಗವು ಶಾಸ್ತ್ರದೃಷ್ಟಿಯಿಂದ ಬರಿಯ ತೋರಿಕೆಯಾದರೆ ಅದರಲ್ಲೇನೂ ವಿರೋಧವಿರುವದಿಲ್ಲ. ಕನಸಿನಲ್ಲಾದ ಗದ್ದಲವು ನನ್ನನ್ನು ಎಚ್ಚರಕ್ಕೆ ತಂದಂತೆ ವ್ಯಾವಹಾರಿಕವಾದ ಧರ್ಮವು ನಮ್ಮನ್ನು ಪರಮಾರ್ಥದ ಅರಿವಿಗೆ ತಂದುಬಿಟ್ಟರೆ ಆಶ್ಚರ್ಯವೂ ಅಲ್ಲ. ಕನಸಿನಲ್ಲಿ ನಾನೊಬ್ಬನೇ ಇದ್ದು ಕಂಡ ಚಿತ್ರವಿಚಿತ್ರವಾದ ದೃಶ್ಯಗಳು ಎಚ್ಚರದ ದೃಷ್ಟಿಯಿಂದ ನನಗೆ ಒಂದಿಷ್ಟೂ ಸೋಂಕದೆ ಇರುವಂತೆಯೇ ವ್ಯವಹಾರದೃಷ್ಟಿಯ ಧರ್ಮಾಧರ್ಮಗಳು ಪರಮಾರ್ಥದಲ್ಲಿ ನಮ್ಮ ನಿಜವಾದ ಆತ್ಮನಿಗೆ ಒಂದಿಷ್ಟೂ ಸೋಂಕದೆ ಇದ್ದರೆ ಅದೂ ಆಶ್ಚರ್ಯವಲ್ಲ.

ಹೀಗಿರುವದರಿಂದಲೇ ಶಾಸ್ತ್ರದಲ್ಲಿ ಧರ್ಮವನ್ನು ಆಚರಿಸಬೇಕು ಎಂಬ ವಿಧಿಯೂ ಕಾಣಬರುತ್ತದೆ; ಧರ್ಮವನ್ನು ಮೀರಿ ಪರಮಾತ್ಮನನ್ನು ಶರಣುಹೊಂದಬೇಕು ಎಂಬ ಉಪದೇಶವೂ ಕಂಡುಬರುತ್ತದೆ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬ ಶ್ರೀಕೃಷ್ಣಭಗವಂತನ ಉಪದೇಶದ ಸಾರವೇ ಇದು. ಮಹಾಭಾರತದಲ್ಲಿ ಒಂದು ವಾಕ್ಯವಿದೆ :

**ತ್ಯಜ ಧರ್ಮಮಧರ್ಮಂ ಚ ತಥಾ ಸತ್ಯಾನೃತೇ ತ್ಯಜ ।**
**ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ತ್ಯಜ ॥**

ಧರ್ಮವನ್ನು ಬಿಡು, ಅಧರ್ಮವನ್ನು ಬಿಡು; ಹಾಗೂ ನಿಜವನ್ನೂ ಸುಳ್ಳನ್ನೂ ಬಿಡು. ಸತ್ಯಾನೃತಗಳೆರಡನ್ನೂ ಬಿಟ್ಟಬಳಿಕ ಅವನ್ನು ಏತರಿಂದ ಬಿಡುವೆಯೋ ಅದನ್ನೂ ಬಿಡು (ಮೋ. ಧ. 329-40) ಎಂಬುದು ಶ್ಲೋಕದ ಅರ್ಥವು. ಅಧರ್ಮವನ್ನು ಹೇಗೆ ಬಿಡಬೇಕು? ಧರ್ಮವನ್ನು ಬಿಡುವದು ಹೇಗೆ? ಸತ್ಯಾನೃತಗಳೆರಡನ್ನೂ ಬಿಡುವದು ಹೇಗಾದೀತು?- ಎಂಬ ಶಂಕೆಯು ಕೆಲವರಿಗೆ ತೋರುತ್ತದೆ. ಇದಕ್ಕೆ ಉತ್ತರವನ್ನು ಮುಂದಿನ ಶ್ಲೋಕದಲ್ಲಿಯೇ ತಿಳಿಸಿರುತ್ತದೆ :

**ತ್ಯಜ ಧರ್ಮಮಸಂಕಲ್ಪಾದಧರ್ಮಂ ಚಾಪ್ಯಲಿಪ್ಸಯಾ ।**
**ಉಭೇ ಸತ್ಯಾನೃತೇ ಬುದ್ಧ್ಯಾ ಬುದ್ಧಿಂ ಪರಮನಿಶ್ಚಯಾತ್ ॥**

ಅಧರ್ಮವನ್ನು ಕಾಮನಾಶದಿಂದ ಗೆಲ್ಲಬೇಕು. ಇದು ಬೇಕು, ಅದು ಬೇಕು- ಎಂಬ ಆಶೆಯೇ ಅಧರ್ಮವನ್ನು ಮಾಡಿಸುತ್ತದೆ. ಆದ್ದರಿಂದ ಶಾಸ್ತ್ರಕ್ಕೆ ಕಟ್ಟುಬಿದ್ದು ಧರ್ಮಾಚರಣೆಯನ್ನು ಮಾಡುತ್ತಿದ್ದರೆ ಅತ್ಯಾಶೆಯಿಂದ ಅಧರ್ಮವನ್ನು ಮಾಡುವ ಪ್ರವೃತ್ತಿಯು ನಿಂತುಹೋಗುವದು. ಇನ್ನು ಧರ್ಮವನ್ನು ಬಿಡುವದು ಹೇಗೆ? ಎಂದರೆ ಅಸಂಕಲ್ಪದಿಂದ. ಇಂಥ ಧರ್ಮವನ್ನು ಮಾಡಿದರೆ ಇಂಥಿಂಥ ಅದೃಷ್ಟಫಲವಾಗುವದು ಎಂಬ ಸಂಕಲ್ಪವು ನಮ್ಮನ್ನು ಧರ್ಮದಲ್ಲಿ ತೊಡಗಿಡುತ್ತದೆ; ಆದ್ದರಿಂದ "ಧರ್ಮಾಧರ್ಮವಿಭಾಗವೇ ಅನೃತ, ಅದು ಹುಸಿ" ಎಂಬ ಶಾಸ್ತ್ರೋಪದೇಶವನ್ನು ತಂದುಕೊಂಡು ಕ್ರಿಯಾಕಾರಕಫಲವಿಭಾಗವು ಸತ್ಯವೆಂದೆಣಿಸಿ ಫಲಕ್ಕಾಗಿ ಸಂಕಲ್ಪವನ್ನು ಮಾಡುವ ಚಟವನ್ನು ಬಿಡಬೇಕು. ಧರ್ಮವನ್ನು ಮಾಡುವದರಿಂದೇನೂ ಬಾಧಕವಿಲ್ಲ; ಆದರೆ ಕರ್ಮದಲ್ಲಿ ಸಂಗವನ್ನೂ ಫಲದಲ್ಲಿ ಅಭಿಲಾಷೆಯನ್ನೂ ಮಾಡುವದೇ ಕರ್ಮದ ಬಂಧಕ್ಕೆ ಕಾರಣವಾಗುತ್ತದೆ. ಆದ್ದರಿಂದ ಕ್ರಿಯಾಕಾರಕಫಲವಿಭಾಗವು ನಮ್ಮ ಈಗಿನ ಅನುಭವದಲ್ಲಿದ್ದರೂ ಕನಸಿನ ವ್ಯವಹಾರದಂತೆ ಹುಸಿಯೇ ಎಂಬ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಈ ಕರ್ಮಬಂಧದಿಂದ ಪಾರಾಗಬೇಕು. ಇದೂ ಆದಮೇಲೆ "ಧರ್ಮಾಧರ್ಮವ್ಯವಹಾರವು ಸತ್ಯವಲ್ಲ. ಅದು ಅನೃತವೇ; ಪರಮಾರ್ಥವು ಇದಕ್ಕಿಂತಲೂ ಬೇರೆ ಇದೆ- ಎಂಬ ಸತ್ಯಾನೃತವ್ಯವಹಾರವೊಂದು ಉಳಿದುಕೊಳ್ಳುತ್ತದೆಯಷ್ಟೆ. ಇಲ್ಲಿ ಸತ್ಯಕ್ಕಿಂತ ಬೇರೆಯಾದ ಹುಸಿತೋರಿಕೆಯು ತಾನೇ ಸ್ವತಂತ್ರವಾಗಿರುವದಲ್ಲ; ಕನಸಿನಲ್ಲಿ ತೋರುವ ದೃಶ್ಯಗಳು ಯಾವವೂ ಕನಸುಕಾಣುವವನಿಗಿಂತ ಬೇರೆಯಾಗಿರುವದೇ ಇಲ್ಲವಷ್ಟೆ. ಅದರಂತೆ "ಸತ್ಯಾನೃತವೆಂಬ ವಿಭಾಗವೂ ಪರಮಾರ್ಥದಲ್ಲಿ ಆಗಿರುವ ಕಲ್ಪನೆಯೇ"

ಎಂಬ ಬುದ್ಧಿಯನ್ನು ಸಂಪಾದಿಸಿಕೊಂಡು ಈ ವ್ಯವಹಾರವನ್ನು ತಪ್ಪಿಸಿಕೊಳ್ಳಬೇಕು. ಹಾಗಾದರೆ ಕೊನೆಗೆ ಉಂಟಾದ ಆ ಬುದ್ಧಿಯೋ? ಎಂದರೆ ಅದೂ ಪರಮಾತ್ಮನಲ್ಲಿ ಕಾಣುವ ವಿಕಲ್ಪಮಾತ್ರವೇ ಆಗಿರುವದರಿಂದ ಇದೆಲ್ಲವೂ ಆ ಪರಮಾತ್ಮನೇ ಎಂಬ ನಿಶ್ಚಯದಿಂದ ಈ ಬುದ್ಧಿಯ ತೊಡರನ್ನು ತಪ್ಪಿಸಿಕೊಳ್ಳಬೇಕು– ಎಂಬುದು ಶ್ಲೋಕದ ಅಭಿಪ್ರಾಯವು.

ಈ ಸಂದೇಶದಲ್ಲಿರುವ ಕೆಲವು ವಿಚಾರಗಳು ಅರಗಿಸಿಕೊಳ್ಳುವದಕ್ಕೆ ಕಷ್ಟವಾಗಿರುವವೆಂದು ವಾಚಕರಿಗೆ ತೋರಬಹುದು. ಆದರೆ ಈ ವಿಚಾರಗಳನ್ನು ತರ್ಕದಿಂದ ನಿಶ್ಚಯಿಸಿಕೊಳ್ಳುವದಕ್ಕೆಂದೇನು ಇಲ್ಲಿ ಬರೆದಿರುವದಿಲ್ಲ. ಈ ಸಂಸಾರದ ವ್ಯವಹಾರವು ನಮಗೆ ಎಷ್ಟೇ ಭಾರವಾಗಿ ತೋರಲಿ, ಇದರಲ್ಲಿ ನಮಗಿರುವ ಕಾಲಬುದ್ಧಿ, ಕಾರ್ಯಕಾರಣಬುದ್ಧಿ, ಧರ್ಮಾಧರ್ಮಬುದ್ಧಿ– ಇವುಗಳು ಎಷ್ಟು ಸತ್ಯವಾಗಿ ತೋರುತ್ತಿರಲಿ, ನಾವು ಅದಕ್ಕಾಗಿ ಅಂಜಬೇಕಾದದ್ದಿಲ್ಲ. ಇವುಗಳನ್ನೆಲ್ಲ ಮೀರಿ, ಇವುಗಳನ್ನು ತನ್ನ ವಶದಲ್ಲಿಟ್ಟುಕೊಂಡಿರುವ ಪರಮಾತ್ಮನನ್ನು ಶರಣುಹೊಕ್ಕರೆ ಸಾಕು; ಎಚ್ಚರವಾದ ಕ್ಷಣದಲ್ಲಿಯೇ ಹೇಳಹೆಸರಿಲ್ಲದೆ ಮಾಯವಾಗುವ ಕನಸಿನ ದೃಶ್ಯಗಳಂತೆ ಈ ವ್ಯವಹಾರದ ಸಂಕಷ್ಟಗಳೆಲ್ಲವೂ ಆ ಪರಮಾತ್ಮನ ಅನುಗ್ರಹದಿಂದ ಮಾಯವಾಗಿಬಿಡುವವು ಎಂಬಿಷ್ಟನ್ನು ನಾವು ಶ್ರದ್ಧೆಯಿಂದ ನಂಬಿದರೆ ಸಾಕಾಗಿರುತ್ತದೆ. ಸಂಸಾರವು ಅತ್ಯಂತವಾಗಿ ಅಸಾರವಾಗಿರುತ್ತದೆ, ಆ ಪರಮೇಶ್ವರನ ಪಾದಾರವಿಂದದ ಸೇವೆಯೊಂದೇ ಇದರಲ್ಲಿ ಸಾರವಾಗಿರುತ್ತದೆ ಎಂಬುದನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಂಡಿರಬೇಕು.

ಪರಮಾತ್ಮನು ಭಗವಂತನೆಂದೆನಿಸಿರುವದು ಏತರಿಂದ? ಆತನಲ್ಲಿ ಧರ್ಮಾಧರ್ಮಗಳ ಬಂಧವಾಗಲಿ ಕಾರ್ಯಕಾರಣಗಳ ಬಂಧವಾಗಲಿ ಕಾಲಕೃತವಾದ ಪರಿಚ್ಛೇದದ ಬಂಧವಾಗಲಿ ಒಂದಿಷ್ಟೂ ಇರುವದಿಲ್ಲ. ಅಂಥ ಪರಮೈಶ್ವರ್ಯಯುಕ್ತನವನು! ತನ್ನನ್ನು ನಂಬಿದವರನ್ನು ಆತನು ತನ್ನ ಈ ಐಶ್ವರ್ಯದಲ್ಲಿ ಪಾಲುದಾರರನ್ನಾಗಿ ಮಾಡಿಬಿಡುತ್ತಾನೆ; ಆ ಪರಮೇಶ್ವರನ ಪಾದಾರವಿಂದವನ್ನು ನೆನಪಿಗೆ ತಂದುಕೊಂಡಮಾತ್ರದಿಂದ ಈ ಬಂಧಗಳನ್ನೆಲ್ಲ ನಾವು ಮೀರಬಹುದು.

## 3.10. ತ್ಯಾಗವೊಂದೇ ಅಮೃತತ್ವಕ್ಕೆ ಸಾಧನವು

**ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ ।**
**ಪರೇಣ ನಾಕಂ ನಿಹಿತಂ ಗುಹಾಯಾಂ ವಿಭ್ರಾಜದೇತತ್ ಯತಯೋ ವಿಶಂತಿ ॥** (ನಾರಾಯಣ. 10–5)

**"ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲೂ ಅಲ್ಲ, ತ್ಯಾಗದಿಂದಲೇ ಕೆಲವರು ಅಮೃತವನ್ನು ಪಡೆದುಕೊಂಡರು. ನಾಕಕ್ಕಿಂತಲೂ ಅತಿಶಯವಾಗಿ, ಹೃದಯಗುಹೆಯಲ್ಲಿ ಹೊಳೆಯುತ್ತಿರುವ, ಇದನ್ನು ಯತಿಗಳು ಪ್ರವೇಶಿಸುವರು."**

ಪರಮಾರ್ಥಪ್ರಾಪ್ತಿಯಿಂದ ಮನುಷ್ಯನು ಅಮೃತತ್ವವನ್ನು ಪಡೆಯುತ್ತಾನೆ; ವ್ಯವಹಾರದಲ್ಲಿ ನಾವು ಪಡೆಯುವ ಯಾವ ಲಾಭವೂ ನಮಗೆ ಅಮೃತತ್ವವನ್ನು ಕೊಡಲಾರದು- ಎಂಬುದು ಅಧ್ಯಾತ್ಮಶಾಸ್ತ್ರಗಳ ಉಪದೇಶವು. ನಾವು ಈಗ ಇರುವಂತೆ ಮರ್ತ್ಯರೇ, ಮರಣಧರ್ಮವುಳ್ಳವರೇ, ಆಗಿರುತ್ತೇವೆ. ಈ ಲೋಕದಲ್ಲಿ ನಾವು ಮಾಡಬಹುದಾದ ಕರ್ಮಗಳಿಂದ ನಮಗೆ ಆಗುವ ಯಾವ ಲಾಭವೇ ಆಗಲಿ ನಮ್ಮನ್ನು ಸಾವಿನ ಭೂಮಿಕೆಯಿಂದ ಪಾರುಮಾಡಲಾರದು. ನಾವು ಅಮೃತರಾಗುವದಕ್ಕೆ, ಸಾವನ್ನು ತಪ್ಪಿಸಿಕೊಳ್ಳುವದಕ್ಕೆ, ಸರ್ವತ್ಯಾಗವನ್ನೂ ಮಾಡಬೇಕು ಎಂಬುದೇ ತತ್ತ್ವಜ್ಞಾನಿಗಳ ಹಿತೋಕ್ತಿಯು.

ಈ ಉಪದೇಶವು ಅನೇಕರಿಗೆ ತಲ್ಲಣವನ್ನುಂಟುಮಾಡುತ್ತದೆ. ಮನುಷ್ಯನು ಕಷ್ಟಪಟ್ಟು ದುಡಿದು ಅನ್ನಬಟ್ಟೆಗಳನ್ನೂ ಜೀವನದ ಮಿಕ್ಕ ಉಪಕರಣಗಳನ್ನೂ ಸಂಪಾದಿಸಿದರೆ ಸುಖವೆಂಬುದು ತಾನೇ ಪ್ರಾಪ್ತವಾಗುತ್ತದೆ ಎಂದು ನಮ್ಮೆಲ್ಲರ ಸಾಮಾನ್ಯವಾದ ನಂಬಿಕೆ. ಮನುಷ್ಯನು ತಾನೂ ದುಡಿದು ಉಣ್ಣಬೇಕು, ತನ್ನ ಮುಂದಿನವರಿಗೂ ಗಳಿಸಿಟ್ಟು ಸೌಖ್ಯದ ದಾರಿಯನ್ನು ತೋರಿಸಬೇಕು. ಧನಸಂಪಾದನೆಯಿಂದಲೇ ನಮ್ಮ ಸುಖಕ್ಕೆ ಉಪಾಯವು ದೊರೆಯುತ್ತದೆ. ವ್ಯಕ್ತಿಗಳಾಗಲಿ ದೇಶದ ಜನಾಂಗವಾಗಲಿ ಅಭಿವೃದ್ಧಿಯಾಗುವದಕ್ಕೆ ಧನಸಂಗ್ರಹವೇ ಉಪಾಯವು. ಅನ್ನಪಾನಾದಿಗಳ ಸಮೃದ್ಧಿಯಿಲ್ಲದೆ ಎಲ್ಲರೂ ಕಷ್ಟಪಡುತ್ತಿರುವ ಈ ಕಾಲದಲ್ಲಿ "ಕರ್ಮವು ಬೇಡ, ಪ್ರಜೆಗಳು ಬೇಡ, ಧನವೂ ಬೇಡ"- ಎಂದು ಸೋಮಾರಿತನವನ್ನು ಜನರಿಗೆ ಉಪದೇಶಿಸುವ ಈ ಅಧ್ಯಾತ್ಮವಿದ್ಯೆಯಿಂದ ಜನಾಂಗಕ್ಕೇ ಅಪಾಯವುಂಟು ಎಂದು ಬಹುಜನರಿಗೆ ತೋರುವ ಸಂಭವವಿದೆ.

ಆದರೆ ನಿಜವನ್ನು ಸ್ವಲ್ಪ ನಿಷ್ಪಕ್ಷಪಾತದೃಷ್ಟಿಯಿಂದ ಪರೀಕ್ಷಿಸುವದಕ್ಕೆ ನಾವು ಸಿದ್ಧರಾಗಿರಬೇಕು. ಏಕೆಂದರೆ ಕರ್ಮ, ಪ್ರಜೆ, ಆಹಾರಾದಿಗಳ ಬೆಳೆ, ಕೈಗಾರಿಕೆ, ಧನ- ಎಂಬ ಘೋಷಣೆಯನ್ನು ಜೀವನಸೂತ್ರವಾಗಿಟ್ಟುಕೊಂಡಿರುವ ಈಗಿನ ನಾಗರಿಕತೆಯಲ್ಲಿ ಜೀವನದ ಸಂಕಷ್ಟಗಳು ದಿನದಿನಕ್ಕೂ ಹೆಚ್ಚಾಗುತ್ತಿವೆ. ಪ್ರಪಂಚದಲ್ಲೆಲ್ಲ ಪೈಪೋಟಿಯ ಜೀವನವು ಹಬ್ಬಿಕೊಂಡಿದೆ. ವಿವೇಕಿಗಳಾದವರಿಗೆ ಈ ಜೀವನದ ಸಂಕಷ್ಟಗಳಿಂದ ಪಾರಾಗುವದಕ್ಕೆ ಏನು ಉಪಾಯವೆಂಬುದು ತೋಚದಂತಾಗಿದೆ. ಇನ್ನುಮುಂದೆ ನಮ್ಮ ಗತಿ ಏನಾಗುವದು? ದಿನದಿನಕ್ಕೂ ನಾವು ಎಷ್ಟೇ ಶ್ರಮಿಸಿದರೂ ಸುಖಜೀವನವೆಂಬುದು

ಸ್ವಪ್ನದಲ್ಲಿ ಕಾಣುವದಕ್ಕೂ ಸಿಕ್ಕದಂತೆ ಆಗುತ್ತಿದೆ. ಯಂತ್ರಗಳಿಂದ ಮಾನವನ ಶ್ರಮವನ್ನು ಕಡಿಮೆಮಾಡುವ ಉಪಾಯಗಳು ಕೈವಶವಾಗಿವೆ ಎಂಬುದು ನಿಜ; ಆದರೆ ಜೀವನವು ಮಾತ್ರ ಸುಖಪ್ರದವಾಗಿಲ್ಲ. ನಮ್ಮ ವ್ಯವಹಾರವೇ ಒಂದು ಜಟಿಲವಾದ ದೊಡ್ಡ ಯಂತ್ರವಾಗಿಬಿಟ್ಟಿದೆ. ನಮಗೆ ಮನಸ್ಸಿನಲ್ಲಿ ಕಿರಿಕಿರಿ ಹೆಚ್ಚಾಗುತ್ತಿದೆ; ಆದರೆ ನಾವು ಎಲ್ಲಿಯೂ ನಿಲ್ಲದೆ ಇದೇ ಮಾರ್ಗದಲ್ಲಿ ಮುಂದುಮುಂದಕ್ಕೆ ಹೋಗುತ್ತಲೇ ಇದ್ದೇವೆ. ನಾವು ಎಲ್ಲಿಗೆ ಹೋಗುತ್ತಿದೇವೆ, ಯಾವ ಮಜಲನ್ನು ಮುಟ್ಟುತ್ತಿದೇವೆ– ಎಂಬುದು ಯಾರಿಗೆ ಗೊತ್ತಿದೆ?

ಜನರು ದಿನದಿನದ ದುಃಖವನ್ನು ಪರಿಹಾರಮಾಡಿಕೊಳ್ಳುವದಕ್ಕೆ ಉಪಾಯವನ್ನು ಹುಡುಕುತ್ತಿರುವರು. ಬಡವರು ಹಗಲೆಲ್ಲ ದುಡಿದರೂ ತಮ್ಮ ಕಷ್ಟವು ಪರಿಹಾರವಾಗದೆ ಇರುವದರಿಂದ ತಮ್ಮ ಜೀವನದ ಸಮಸ್ಯೆಯನ್ನು ಹೇಗೆ ಬಿಡಿಸಬೇಕೆಂಬುದು ತೋರದೆ ಬೇರೆಬೇರೆಯ ಅಡ್ಡದಾರಿಗಳನ್ನು ಹಿಡಿಯುತ್ತಿರುವರು. ಕೆಲವರು ಅದ್ಭುತಘಟನೆಗಳ ಕಾದಂಬರಿಗಳನ್ನು ಓದಿ ತಮ್ಮ ಕಷ್ಟವನ್ನು ಮರೆಯುವದಕ್ಕೆ ಯತ್ನಿಸುತ್ತಿರುವರು; ಕೆಲವರು ಕುಡಿತ, ಇಸಪೀಟು, ಗಂಜೀಪು– ಮುಂತಾದ ಹವ್ಯಾಸಗಳಿಗೆ ಬೀಳುತ್ತಿರುವರು; ಇನ್ನು ಕೆಲವರು ರಾಜಕೀಯ ವಿಚಾರಗಳ ಒಣಚರ್ಚೆಗಳು, ವೃತ್ತಪತ್ರಿಕೆಗಳಿಗೆ ತಮಗೆ ಕಂಡಂತೆ ಲೇಖನಗಳನ್ನು ಬರೆಯುವದು– ಮುಂತಾದವುಗಳನ್ನು ಉಪಾಯವಾಗಿ ಎಣಿಸಿರುವರು; ಮತ್ತೆ ಕೆಲವರು ಸೋಷಲ್ ಕ್ಲಬ್, ಬ್ರಾಡ್‌ಕ್ಯಾಸ್ಟ್ ಕೇಳುವದು, ನಾಟಕ ಸಿನಿಮಗಳನ್ನು ನೋಡುವದು– ಮುಂತಾದ ರೀತಿಗಳಿಂದ ಕಷ್ಟವನ್ನು ಮರೆಯುವದಕ್ಕೆ ಹಾರೈಸುತ್ತಿರುವರು! ಇನ್ನೂ ಕೆಲವರು ತಮ್ಮನ್ನು ತಾವೇ ಮಹಾವಿಚಾರಪರರೆಂದೆಣಿಸಿ "ಅಯ್ಯೋ! ಪೂರ್ವಕಾಲದ ಸರಳಜೀವನವು ಮತ್ತೆ ನಮಗೆ ದೊರೆಯಬಾರದೆ, ಈ ಹಾಳು ನಾಗರಿಕತೆಯು ನಮ್ಮನ್ನು ಈ ಪಾಡಿಗೆ ತಂದಿಟ್ಟಿತಲ್ಲ!" ಎಂದು ನಿಟ್ಟುಸಿರುಬಿಡುತ್ತಿರುವರು! ಇದನ್ನೆಲ್ಲ ನೋಡಿದರೆ ನಮ್ಮ ಮಾರ್ಗವು ಸಾವಿನ ಭೂಮಿಗೇ ಒಯ್ಯುತ್ತಿರುವದು, ನಾವು ಇರುವದು ಮರ್ತ್ಯತ್ವದ ಭೂಮಿಕೆಯೇ ಎಂಬುದರಲ್ಲಿ ನಿಜವಿರಬಹುದೆಂದು ವಿಚಾರಪರರಿಗೆ ತೋರದೆ ಇದ್ದೀತೆ?

ಪರಮಾರ್ಥದಲ್ಲಿಯೇ ಕಣ್ಣಿಟ್ಟಿರುವ ಋಷಿಗಳ ವಾಕ್ಯವನ್ನು ನಾವು ಕಡೆಗಣಿಸುವದಕ್ಕೆ ಕಾರಣವಿಲ್ಲ. ಅವರು ನಮ್ಮೆಲ್ಲರ ಹಿತಕ್ಕಾಗಿಯೇ ಹೇಳಿದ ಹಿತೋಕ್ತಿಗಳು ನಮಗೆ ಅಮೃತತುಲ್ಯವಾಗಿರುತ್ತದೆ. ಪರಮಾತ್ಮನು "ಪ್ರಾಣಕ್ಕೆ ಪ್ರಾಣವು, ಚಕ್ಷುವಿಗೆ ಚಕ್ಷುಸ್ಸು, ಶ್ರೋತ್ರಕ್ಕೂ ಶ್ರೋತ್ರವು, ಅನ್ನಕ್ಕೂ ಅನ್ನವು" (ಬೃ.) ಎಂದು ಅವರು ಹೇಳಿರುತ್ತಾರೆ. ನಾವು ಬದುಕಿರುವದು ಹೊರಗಿನ ಪ್ರಾಣದಿಂದಲ್ಲ, ಪ್ರಾಣಕ್ಕೂ ಪ್ರಾಣವಾದ ಪರಮಾತ್ಮನಿಂದ; ನಾವು ಎಲ್ಲವನ್ನೂ ಕಾಣುತ್ತಿರುವದು ಚಕ್ಷುರಿಂದ್ರಿಯದಿಂದಲ್ಲ, ಚಕ್ಷುಸ್ಸಿಗೂ ಚಕ್ಷುಸ್ಸಾಗಿರುವ ಪರಮಾತ್ಮನಿಂದ! ನಾವು ಶಬ್ದವನ್ನು ಕೇಳುತ್ತಿರುವದು ಬರಿಯ ಶ್ರೋತ್ರೇಂದ್ರಿಯದಿಂದಲ್ಲ,

ಶ್ರೋತ್ರಕ್ಕೂ ಶ್ರೋತೃವಾಗಿರುವ ಪರಮಾತ್ಮನಿಂದ; ನಾವು ಶರೀರಧಾರಣೆಮಾಡಿಕೊಂಡಿರುವದು ಬರಿಯ ಅನ್ನದಿಂದಲ್ಲ, ಅನ್ನಕ್ಕೂ ಅನ್ನವಾಗಿರುವ ಪರಮಾತ್ಮನಿಂದ- ಎಂಬುದು ಈ ವಾಕ್ಯಕ್ಕೆ ಅರ್ಥವು. ಇದನ್ನು ನಾವು ಅರಿತು ಅನುಭವಕ್ಕೆ ತಂದುಕೊಳ್ಳಬೇಕು. ನಮ್ಮ ಸುತ್ತಲೂ ಇರುವ ಅನ್ನವೇ ಮುಂತಾದ ಜೀವನಸಾಮಗ್ರಿಗಳು ಶರೀರದ ಪೋಷಣೆಗೆ ಬೇಕಾಗಿರಬಹುದು; ಆದರೆ ಶರೀರವೇನೂ ನಮ್ಮ ನಿಜವಾದ ಸ್ವರೂಪವಲ್ಲ. ಶರೀರದೊಳಗೆ ಇರುವ ಅಶರೀರನಾದ ಪರಮಾತ್ಮನೇ ನಮ್ಮಗಳ ನಿಜವಾದ ಆತ್ಮನು. ಆ ಆತ್ಮನ ಅನುಗ್ರಹದಿಂದಲೇ ನಮ್ಮ ಶರೀರವೂ ಇಂದ್ರಿಯಗಳೂ ಪೋಷಣೆಯನ್ನು ಪಡೆಯುತ್ತಿರುವವು. ಅನ್ನಪಾನಾದಿಗಳು ಶರೀರಪೋಷಣೆಗೆ ಬೇಕಾಗಿವೆ ಎಂಬುದು ನಿಜ; ಆದರೆ ಆತ್ಮನ ಅನುಗ್ರಹಕ್ಕೆ ಪಾತ್ರವಾದ ಶರೀರವು ಮಾತ್ರ ಅನ್ನಪಾನಾದಿಗಳಿಂದ ಸ್ಥಿತಿಯನ್ನು ಪಡೆಯುತ್ತದೆ. ಜೀವಾತ್ಮನು ಶರೀರವನ್ನು ಬಿಟ್ಟರೆ ಎಂಥ ಉತ್ತಮವಾದ ಅನ್ನಪಾನಾದಿಗಳನ್ನು ಎಷ್ಟುಮಟ್ಟಿಗೆ ಕೊಟ್ಟರೂ ಆ ಶರೀರಕ್ಕೆ ಜೀವನವನ್ನು ಕೊಡುವದಕ್ಕಾಗುವದಿಲ್ಲ, ಅದನ್ನು ಪೋಷಿಸುವದಕ್ಕೂ ಆಗುವದಿಲ್ಲ.

ಆದ್ದರಿಂದ "ಕರ್ಮದಿಂದ, ಪ್ರಜೆಯಿಂದ, ಅಥವಾ ಧನದಿಂದ ನಾವು ಬದುಕುವೆವು; ಅವುಗಳಿಂದಲೇ ನಾವು ಅಮೃತರಾಗುವೆವು" ಎಂಬ ಹುಚ್ಚು ನಂಬಿಕೆಯನ್ನು ಬಿಟ್ಟುಬಿಡಬೇಕು. ಅವುಗಳು ವ್ಯವಹಾರದಲ್ಲಿ ಸ್ವಲ್ಪಮಟ್ಟಿಗೆ ಬೇಕಾಗಿವೆಯಾದರೂ ಅವೇ ಸರ್ವಸ್ವವಲ್ಲ. ಕರ್ಮದಿಂದಲೇ ನಮ್ಮ ಜೀವನವು ಸುಖಮಯವಾಗುವದು ನಿಜವಾಗಿದ್ದರೆ ಕರ್ಮವನ್ನು ಹೆಚ್ಚಿಸಿದಷ್ಟೂ ಸುಖವು ಹೆಚ್ಚಾಗಬೇಕು; ಆದರೆ ನಿಜವು ಹಾಗಿಲ್ಲ, ಕರ್ಮವು ಹೆಚ್ಚುವದೂ ಕಡಿಮೆಯಾಗುವದೂ ಸುಖಕ್ಕೆ ನೇರಾಗಿ ಸಾಧಕವಾಗಿಲ್ಲವೇ ಇಲ್ಲ. ಹಿಗೆಯೇ ಪ್ರಜೆಗಳೂ ಸುಖಕ್ಕೆ ಸಾಧನವಲ್ಲ; ಪ್ರಜಾಸಂಖ್ಯೆ ಹೆಚ್ಚಾಗುತ್ತಿರುವದರಿಂದ ನಮ್ಮ ದುಃಖವು ಹೆಚ್ಚಾಗುತ್ತಿದೆ ಎಂದು ಈಗಿನ ಅರ್ಥಶಾಸ್ತ್ರಜ್ಞರೂ ಕೆಲವರು ಹೇಳುತ್ತಿರುವದು ನಮಗೆ ತಿಳಿದೇ ಇದೆ. ಇದರಂತೆ ಧನವೂ ಸುಖಕ್ಕೆ ನೇರಾಗಿ ಕಾರಣವಲ್ಲ; ಧನವು, ಎಂದರೆ ಆಸ್ತಿಯ ಸಂಪತ್ತು, ಹೆಚ್ಚಿದಂತೆಲ್ಲ ಜನರಿಗೆ ಆಶೆಯೂ ಪರಸ್ಪರದ್ವೇಷವೂ ಹೆಚ್ಚಿ ಜನಾಂಗಗಳಿಗೆ ಪರಸ್ಪರಯುದ್ಧವು ಎದ್ದುಕೊಂಡು ಜೀವನಸಮಸ್ಯೆಯನ್ನು ಇನ್ನಷ್ಟು ಕಗ್ಗಂಟುಮಾಡುತ್ತಿರುವದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ.

ಮನುಷ್ಯನಿಗೆ ಒಂದೇ ಒಂದು ಅಮೃತತ್ವಸಾಧನವಿರುತ್ತದೆ. ಅದೇನೆಂದರೆ ನಾವು ನಂಬಿರುವ ಕರ್ಮಾದಿಗಳು ಅಮೃತತ್ವಕ್ಕೆ ನಿಜವಾದ ನೇರಾದ ಸಾಧನವಲ್ಲ ಎಂದು ನಂಬಿ ಅವುಗಳಲ್ಲಿ ಸಾಧನಬುದ್ಧಿಯನ್ನು ತ್ಯಾಗಮಾಡುವದು; ನಮ್ಮ ಜೀವನಕ್ಕೆ ಅಮೃತದ ಅಭಿಷೇಕವನ್ನು ಮಾಡಿಸುತ್ತಿರುವ ನಮ್ಮನಮ್ಮ ಹೃದಯಗುಹೆಯಲ್ಲಿಯೇ ಇರುವ ಪರಮಾತ್ಮನನ್ನು ಶರಣುಹೋಗುವದು- ಇದೇ ಆ ಉಪಾಯವು. ಪರಮಾತ್ಮನಿಂದಲೇ ಇಡಿಯ ಬ್ರಹ್ಮಾಂಡವು ಉತ್ಪನ್ನವಾಗಿರುವದು; ಪರಮಾತ್ಮನಲ್ಲಿಯೇ ಈ ಇಡಿಯ

ಬ್ರಹ್ಮಾಂಡವು ಸ್ಥಿತಿಯನ್ನು ಪಡೆದು ಜೀವಿಸಿರುವದು; ಈ ಇಡಿಯ ಬ್ರಹ್ಮಾಂಡವು ತನಗೆ ವಿಶ್ರಾಂತಿಯೂ ಸುಖವೂ ಜೀವನಕ್ಕೆ ಬೇಕಾದ ಬಲವೂ ಬೇಕಾದಾಗ ಆ ಪರಮಾತ್ಮನಲ್ಲಿಯೇ ಮುಳುಗಿ ಅವನಲ್ಲಿ ಒಂದಾಗುತ್ತಿರುವದು. ಪರಮಾತ್ಮನೇ ನಮಗೆ ನಿಜವಾಗಿ ತುಷ್ಟಿಪುಷ್ಟಿಗಳನ್ನು ಕೊಡುವವನು ಎಂದು ನಂಬಿ ಮಿಕ್ಕದ್ದೆಲ್ಲವನ್ನೂ ತ್ಯಜಿಸಬೇಕು. ಇದೇ ನಮಗೆ ಅಮೃತತ್ವವನ್ನು ಕೊಡುವ ಮುಖ್ಯಸಾಧನವು.

**ಆದರೆ ಸರ್ವತ್ಯಾಗವೆಂದರೇನು? ಇದನ್ನು ತಿಳಿದುಕೊಳ್ಳುವದು ಅತ್ಯವಶ್ಯವಾಗಿರುತ್ತದೆ. ಮನೆಮಾರು, ಹೆಂಡಿರುಮಕ್ಕಳು, ಹಣಕಾಸು– ಮುಂತಾದದ್ದನ್ನೆಲ್ಲ ಬಿಟ್ಟು ಕಾಡಿಗೆ ಹೋಗಿ ಒಂದು ಗವಿಯಲ್ಲಿ ಅವಿತುಕೊಳ್ಳುವದೇನೂ ಸರ್ವತ್ಯಾಗವಲ್ಲ. ನಾನು ಏನೂ ಕೆಲಸಮಾಡುವದಿಲ್ಲ, ನನಗೆ ಯಾವ ಪ್ರಜೆಯೂ ಬೇಡ, ನನಗೆ ಯಾವ ಧನಸಂಪತ್ತೂ ಬೇಡ– ಎಂದು ಸೋಮಾರಿಯಾಗಿ ಕೈಗಳನ್ನು ಮುದುರಿಕೊಂಡು ಒಂದು ಮೂಲೆಯಲ್ಲಿ ಕುಳಿತುಕೊಳ್ಳುವದೇನೂ ಸರ್ವತ್ಯಾಗವಲ್ಲ. ನಮ್ಮ ಹೊರಗೆ ಕಾಣುವದೆಲ್ಲಕ್ಕೂ ಆಧಾರನಾಗಿರುವವನು ಪರಮಾತ್ಮನೇ, ಅವಕ್ಕೆಲ್ಲ ಸತ್ತ್ವವನ್ನು ಕೊಟ್ಟಿರುವವನು ಪರಮಾತ್ಮನೇ; ಆ ಪರಮಾತ್ಮನನ್ನು ಬಿಟ್ಟರೆ ಅವಕ್ಕೆ ಯಾವ ಬೆಲೆಯೂ ಇಲ್ಲವೇ ಇಲ್ಲ, ಅವು ಮಿಥ್ಯೆ ಯಾಗಿರುತ್ತವೆ–ಎಂಬ ದೃಢವಿಶ್ವಾಸದಿಂದ ಪರಮಾತ್ಮನಕಡೆಗೆ ತಿರುಗುವದೇ ಸರ್ವತ್ಯಾಗವು.**

ಮನುಷ್ಯನು ಪರಮಾರ್ಥವಾಗಿ ಆತ್ಮನಾಗಿರುತ್ತಾನೆ; ಆ ಪರಮಾತ್ಮನಲ್ಲಿ ಒಂದಾಗಿರುತ್ತಾನೆ. ಆದರೆ ವ್ಯವಹಾರದಲ್ಲಿ ನಡೆಯುತ್ತಿರುವಾಗ ಅವನಿಗೆ ಈ ಶರೀರೇಂದ್ರಿಯಗಳೆಂಬ ಉಪಾಧಿಗಳು ಬೇಕಾಗಿರುತ್ತವೆ. ಈ ಉಪಾಧಿಗಳಿಗೆ ಆಗಾಗ್ಗೆ ಪೋಷಕದ್ರವ್ಯವೂ ಬೇಕಾಗಿರುತ್ತದೆ ಎಂಬುದು ನಿಜ. ಆದರೆ ಪರಮಾರ್ಥವನ್ನು ಮನಗಂಡು ಪರಮಾರ್ಥಸ್ವರೂಪನಾದ ಪರಮಾತ್ಮನಲ್ಲಿಯೇ ನೆಲೆನಿಂತವನಿಗೆ ಇತರರಂತೆ ತನ್ನ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದದ್ದೇನೂ ಇರುವದಿಲ್ಲ. ಆ ಪರಮಾತ್ಮನೇ ಅವನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಆದ್ದರಿಂದಲೇ ಶ್ರೀಕೃಷ್ಣಭಗವಂತನು "ಅನನ್ಯರಾಗಿ ನನ್ನನ್ನು ಚಿಂತಿಸುತ್ತಾ ಯಾವ ಜನರು ಎಲ್ಲಾ ವಿಧದಿಂದಲೂ ಉಪಾಸನೆಮಾಡುತ್ತಿರುವರೋ, ನಿತ್ಯಾಭಿಯುಕ್ತರಾಗಿರುವ ಅವರ ಯೋಗಕ್ಷೇಮವನ್ನು ನಾನು ವಹಿಸುವೆನು" (ಗೀ. 9–22) ಎಂದಿರುತ್ತಾನೆ.

**ಪರಮಾತ್ಮನನ್ನೇ ಅನನ್ಯಭಕ್ತಿಯಿಂದ ಉಪಾಸನೆಮಾಡುತ್ತಿರುವವರು ಕೆಲಸಮಾಡುವದೇ ಇಲ್ಲವೆ? ಅವರಿಗೆ ಕರ್ಮವಾಗಲಿ, ಪ್ರಜೆಯಾಗಲಿ, ಧನವಾಗಲಿ ಬೇಕೇ ಇಲ್ಲವೆ– ಎಂದು ನೀವು ಕೇಳಬಹುದು. ಅವರು ಕೆಲಸ ಮಾಡುವದಿಲ್ಲವೆಂದು ತಿಳಿಯಬಾರದು. ಆದರೆ ಅವರ ಕೆಲಸವು ತಮಗಾಗಿಯಲ್ಲ, ಲೋಕಸಂಗ್ರಹಕ್ಕಾಗಿ. ಜನರನ್ನು ಸರಿಯಾದ ಮಾರ್ಗಕ್ಕೆ ಹತ್ತಿಸುವದಕ್ಕೆಂದು ಅವರು ಒಂದೇ ಸಮನೆ ಕೆಲಸಮಾಡುತ್ತಲೇ ಇರುತ್ತಾರೆ. ಅಥವಾ ಅವರಿಗೆ ಲೋಕಸಂಗ್ರಹವಾಗಲಿ!–** ಎಂಬ ಸಂಕಲ್ಪವು ಇರುತ್ತದೆ ಎಂದಾದರೂ ಏಕೆ

ಹೇಳಬೇಕು? ಮರವು ಕೊಂಬೆರೆಂಬೆಗಳಿಂದಲೂ ಎಲೆಗಳಿಂದಲೂ ಕೂಡಿ ದೊಡ್ಡದಾಗಿ ಬೆಳೆದಿದ್ದರೆ ಅದರಿಂದ ದಾರಿಹೋಕರಿಗೆ ವಿಶ್ರಾಂತಿಯನ್ನು ಕೊಡುವ ನೆರಳು ತಾನೇ ಉಂಟಾಗುವಂತೆ, ಅವರು ಪರಮಾತ್ಮನ ಚಿಂತನೆಯಲ್ಲಿಯೇ ಕಾಲವನ್ನು ಹಾಕುತ್ತಾ ಮಾಡುತ್ತಿರುವ ಕರ್ಮಗಳು ತಾವೇ ಲೋಕಸಂಗ್ರಹಕ್ಕೆ ಸಾಧಕವಾಗುವವು. ಅವರು ಮಾತ್ರ ಪರಮಾತ್ಮನನ್ನೊಬ್ಬನನ್ನೇ ಆಶ್ರಯಿಸಿಕೊಂಡಿರುವದರಿಂದ ಸರ್ವಕರ್ಮಗಳನ್ನೂ ತ್ಯಾಗಮಾಡಿರುತ್ತಾರೆಂದು ಹೇಳಬೆಕು. ಪರಮಾತ್ಮನನ್ನೇ ಧ್ಯಾನಿಸುತ್ತಿರುವ ಶುಚಿಮನಸ್ಕರಾದ ಮಹಾತ್ಮರು ಪ್ರಜೆಗಳನ್ನು ಬಯಸರು; ತಮ್ಮ ವಂಶದಲ್ಲಿ ಸತ್ಪುತ್ರನು ಹುಟ್ಟಿವಂಶಕ್ಕೆ ಕೀರ್ತಿಯನ್ನು ತರಬೇಕೆಂಬ ಹಂಬಲಿಕೆಯೇನೂ ಅವರಿಗಿರುವದಿಲ್ಲ. ಆದರೂ ಅಂಥವರ ವಂಶದಲ್ಲಿ ಪರಮಾತ್ಮನ ಭಕ್ತರೇ ಜನಿಸುವರೆಂಬುದಕ್ಕೆ ಸಂಶಯವೇನು? ಅವರ ಕುಲದಲ್ಲಿ ಹುಟ್ಟಿದವರಮೂಲಕವಾಗಿ ಲೋಕೋದ್ಧಾರವನ್ನು ಮಾಡುವದಕ್ಕೆಂದು ಪರಮಾತ್ಮನೇ ಅವರಿಗೆ ಸತ್ಪ್ರಜೆಯನ್ನು ಕೊಡುವನು. ನಿರ್ಧನರಿಗೂ ಧನವಾಗಿರುವ ಪರಮಾತ್ಮನನ್ನೇ ನಂಬಿಕೊಂಡಿರುವ ಮಹಾತ್ಮರಿಗೆ ಯಾವ ಧನದ ಆಶೆಯೂ ಇರಲಾರದು. ಆದರೆ ವಿದೇಹದ ಜನಕಚಕ್ರವರ್ತಿಯಂತೆ ತತ್ತ್ವಚಿಂತನೆಯಲ್ಲಿಯೇ ಮುಳುಗಿರುವ ಅವರಿಗೆ ಭಗವಂತನು ತನ್ನ ಸಂಕಲ್ಪಮಾತ್ರದಿಂದ ನಿರತಿಶಯವಾದ ಧನಸಂಪತ್ತನ್ನು ಅನುಗ್ರಹಿಸುವನು. ಪರಮೇಶ್ವರನ ಭಕ್ತರಿಗೆ ಯಾವ ಧನದ ಆಶೆಯೂ ಇರುವದಿಲ್ಲ; ತಾವು ಆ ಶ್ರೀನಿವಾಸನ ಧನವಾಗಿರಬೇಕೆಂಬುದೇ ಅವರ ಹೆಬ್ಬಯಕೆಯಾಗಿರುತ್ತದೆ. ಆದರೆ ಆ ಪರಮೇಶ್ವರನ ಅನುಗ್ರಹದಿಂದ ಅವರ ಜೀವನಕ್ಕೆ ಬೇಕಾದ ಯಾವ ಧನಕ್ಕೂ ಕೊರತೆಯಿರಲಾರದು.

ಬರಿಯ ಧನದಿಂದಲಾಗಲಿ, ಧನದ ಆಶೆಯಿಂದ ಕೆಲಸಮಾಡುವದರಿಂದಲಾಗಲಿ, ವಂಶಾಭಿವೃದ್ಧಿಯಿಂದಲಾಗಲಿ, ನಮಗೆ ಅಮೃತತ್ವವು ಎಂದಿಗೂ ದೊರಕಲಾರದು. ಆದರೆ ನಮ್ಮ ಕರ್ಮವನ್ನೂ, ನಮಗೆ ಇರುವ ಧನವನ್ನೂ, ಪ್ರಜೆಯನ್ನೂ, ಆ ಅಮೃತತ್ವಕ್ಕೆ ಪರಂಪರೆಯಿಂದ ಸಾಧನವಾಗುವಂತೆ ಉಪಯೋಗಿಸುವದಕ್ಕೆ ಬರುತ್ತದೆ. **ಕರ್ಮಪ್ರಜಾಧನಗಳು ತಮಗೆತಾವೇ ಪುರುಷಾರ್ಥವಲ್ಲ; ಪರಮಪುರುಷಾರ್ಥಕ್ಕೆ ಅವು ಸಾಧನವಾದರೂ ಆಗಬಹುದು, ಅಡ್ಡಿಯಾದರೂ ಆಗಬಹುದು. ಪರಮಪುರುಷಾರ್ಥ ಪ್ರಾಪ್ತಿಗೆ ಅಡ್ಡಿಯಾದಾಗ ಕರ್ಮಪ್ರಜಾಧನಗಳು ಮರ್ತ್ಯತ್ವವನ್ನು ತಂದುಕೊಡುತ್ತವೆ. ಆದ್ದರಿಂದ ಅವುಗಳನ್ನೇ ಲಕ್ಷ್ಯದಲ್ಲಿಟ್ಟುಕೊಂಡಿರುವ ದುರಾಶೆಯ ಬುದ್ಧಿಯನ್ನು ತ್ಯಾಗಮಾಡಬೇಕು. ಆ ತ್ಯಾಗವೇ ಅಮೃತತ್ವಕ್ಕೆ ಸಾಧನವು.**

ಕರ್ಮಗಳಿಂದ ಪಡೆಯುವ ಸ್ವರ್ಗವುಕೂಡ ಅಮೃತತತ್ವಕ್ಕೆ ಸಾಧನವಾಗಲಾರದು. ಅಲ್ಲಿಯೂ ಸ್ವಲ್ಪ ಕಾಲ ವಿಷಯಭೋಗಗಳು ದೊರಕಬಹುದು. ಆ ಬಳಿಕ ನಾವು ಮತ್ತೆ ಈ ಲೋಕಕ್ಕೇ ಬರಬೇಕಾಗುವದು. ಆದ್ದರಿಂದ ಮರ್ತ್ಯತ್ವದಿಂದ ಬಿಡುಗಡೆಯಾಗುವದಕ್ಕೆಂದು

ಸ್ವರ್ಗಸಾಧನವನ್ನು ಹುಡುಕುವವರು ವಿವೇಕಿಗಳಲ್ಲ, ಈಗಲೇ ಇಲ್ಲಿಯೇ, ನಮ್ಮನಮ್ಮ ಹೃದಯುದಲ್ಲಿಯೇ ಇದ್ದುಕೊಂಡಿರುವ ಪರಮಾತ್ಮನೇ ಪರಮಾರ್ಥವೆಂಬ ದೃಢವಿಶ್ವಾಸದಿಂದ ಮಿಕ್ಕದ್ದೆಲ್ಲವನ್ನೂ ತ್ಯಜಿಸಿ ಆ ಪರಮಾತ್ಮನನ್ನೇ ಕಾಣುವದಕ್ಕೆ ಯಾರು ಪ್ರಯತ್ನವನ್ನು ಮಾಡುವರೋ ಅವರು ಆ ಅಮೃತಸ್ವರೂಪನಾದ ಪರಮಾತ್ಮನಲ್ಲಿ ಒಂದಾಗಿ ಅಭಯದಲ್ಲಿ ನೆಲೆನಿಲ್ಲುವರು. ಅವರ ಜೀವನವು ಶಾಂತಿಸುಖಗಳಿಂದ ಕೂಡಿರುವದು, ಅವರಿಗೆ ಬೇಕಾದ ಜಿವನಸಾಮಗ್ರಿಗಳು ತಮಗೆತಾವೇ ಪರಮೇಶ್ವರನ ಅನುಗ್ರಹದಿಂದ ದೊರೆಯುವವು. ಅಂಥ ಮಹಾತ್ಮರು ತಮಗಾಗಿ ತಾವು ಯಾವ ಕೆಲಸವನ್ನೂ ಮಾಡಬೇಕಾದದ್ದು ಇರುವದಿಲ್ಲವಾದರೂ ಲೋಕಕ್ಕೆಲ್ಲ ಅವರ ಜೀವನವು ಮಂಗಲವನ್ನುಂಟುಮಾಡುವದು. ಶರತ್ಕಾಲದ ಚಂದ್ರನ ತಂಬೆಳಕು ಜನರಿಗೆಲ್ಲ ಉಲ್ಲಾಸವನ್ನುಂಟುಮಾಡುವಂತೆ ಅವರು ತಮ್ಮ ಸುತ್ತಲಿರುವವರೆಲ್ಲರಿಗೂ ಉಲ್ಲಾಸವನ್ನುಂಟುಮಾಡುತ್ತಿರುವರು.

## 3.11. ಪ್ರಜ್ಞಾನವೆಂಬ ಪ್ರತಿಷ್ಠೆ

**ಸರ್ವಂ ತತ್ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ । – ಐ. 5–3**

"ಇದೆಲ್ಲವೂ ಪ್ರಜಾನೇತ್ರವು, ಪ್ರಜ್ಞಾನದಲ್ಲಿ ಪ್ರತಿಷ್ಠಿತವಾಗಿದೆ; ಲೋಕವೆಲ್ಲವೂ ಪ್ರಜ್ಞಾನೇತ್ರವಾಗಿರುತ್ತದೆ, ಪ್ರಜ್ಞೆಯೇ ಪ್ರತಿಷ್ಠೆಯು, ಪ್ರಜ್ಞಾನವೇ ಬ್ರಹ್ಮವು."

ಪ್ರತಿಯೊಂದು ಆಷಾಢಮಾಸದಲ್ಲಿಯೂ ವ್ಯಾಸಪೂರ್ಣಿಮೆಯು ಬರುತ್ತದೆ. ಪ್ರತಿಯೊಂದು ವ್ಯಾಸಪೂರ್ಣಿಮೆಯಲ್ಲಿಯೂ ಶ್ರೀ ವೇದವ್ಯಾಸರನ್ನೂ ತಮ್ಮ ಗುರುಪರಂಪರೆಯ ಇತರ ಗುರುಗಳನ್ನೂ ಆಸ್ತಿಕರೆಲ್ಲರೂ ಸ್ಮರಣೆಗೆ ತಂದುಕೊಳ್ಳುತ್ತಾರೆ. ವ್ಯಾಸರೆಂದರೆ ತತ್ತ್ವಜ್ಞಾನದ ಗನಿಯು. ಅವರನ್ನು ಸ್ಮರಿಸುವದೂ ಅವರ ಉಪದೇಶಗಳನ್ನು ಸ್ಮರಣೆಗೆ ತಂದುಕೊಳ್ಳುವದೂ ಪರಮಾತ್ಮನ ಸಂನಿಧಿಗೆ ಒಯ್ಯುವದಕ್ಕೆ ಒಂದು ಮಹಾದ್ವಾರವಾಗುವದು.

ಈ ಸಂದರ್ಭಕ್ಕೆ ತಕ್ಕಂತೆ ಯಾವದಾದರೊಂದು ಅಧ್ಯಾತ್ಮವಿಚಾರವನ್ನು ಮನನಕ್ಕೆ ಇಟ್ಟುಕೊಳ್ಳುವದು ಒಂದು ದೊಡ್ಡ ಅಧ್ಯಾತ್ಮಸಾಧನವಾಗುವದು. ಈ ಅಭಿಲಾಷೆಯುಳ್ಳ ಸಾಧಕರಿಗೆ ಉಪಯೋಗವಾಗಲೆಂದು ಈ ಪ್ರಪಂಚಕ್ಕೆಲ್ಲ ಪ್ರತಿಷ್ಠೆಯಾಗಿರುವ ತತ್ತ್ವವು ಯಾವದು?– ಎಂಬ ವಿಷಯವನ್ನು ಕುರಿತು ಈ ತಿಂಗಳ ಸಂದೇಶದಲ್ಲಿ ಕೆಲವು ವಾಕ್ಯಗಳನ್ನು ಬರೆಯುವದಕ್ಕೆ ಪ್ರಯತ್ನಿಸುವೆನು.

ನಮಗೆ ಪ್ರತಿಷ್ಠೆ ಯಾವದು? ಯಾವದನ್ನು ಆಶ್ರಯಿಸಿದರೆ ನಾವು ಅಲುಗಾಡದೆ ಭದ್ರವಾಗಿ ನಿಲ್ಲಬಲ್ಲೆವು? ಯಾವದು ಯಾವ ವಿಕಾರವೂ ಇಲ್ಲದ ಆಲಂಬನವೆಂದು ನಾವು ನಂಬಿರಬಹುದು? ಯಾವದರ ಮಾರ್ಗದರ್ಶಿತ್ವವನ್ನು ನಾವು ಆಶ್ರಯಿಸಿ

ಜೀವನಯಾತ್ರೆಯನ್ನು ಸುಖವಾಗಿ ಸಾಗಿಸಬಹುದು? ನಮಗೆ ವ್ಯವಹಾರದಲ್ಲಿ ಒದಗುವ ಕಷ್ಟಪರಂಪರೆಗಳನ್ನೆಲ್ಲ ಸುಲಭವಾಗಿ ದಾಟಿಸಬಲ್ಲ ಉದ್ಧಾರಕಶಕ್ತಿ ಯಾವದು? ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವದೇ ಮಾನವಜೀವನದ ಹೆಗ್ಗುರಿ ಎನ್ನಬಹುದು. ಅರಿತೋ ಅರಿಯದೆಯೋ ಮಾನವರೆಲ್ಲರೂ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವದಕ್ಕೆಂದು ಪ್ರಯತ್ನಿಸುತ್ತಿದ್ದಾರೆ.

ಮನುಷ್ಯನು ಮತ್ತೊಬ್ಬರ ಸಹಾಯವಿಲ್ಲದೆ ಹೇಗೋ ಒಂದೊಂದು ಉತ್ತರವನ್ನು ಕಂಡುಕೊಂಡು ಅದನ್ನು ಅವಲಂಬಿಸುತ್ತಾನೆ. ಆದರೆ ಸ್ವಲ್ಪ ದೂರ ನಡೆದಮೇಲೆ ತಾನು ಬಂದದ್ದು ಸರಿಯಾದ ಮಾರ್ಗದಲ್ಲಲ್ಲ ಎಂಬುದನ್ನು ಗೊತ್ತುಮಾಡಿಕೊಳ್ಳುತ್ತಾನೆ. ಆಗ ಅವನು ಮತ್ತೊಂದು ಮಾರ್ಗವನ್ನು ಅವಲಂಬಿಸುತ್ತಾನೆ; ಮತ್ತೊಂದು ಉತ್ತರವನ್ನು ಸರಿಯೆಂದು ನಂಬಿಕೊಳ್ಳುತ್ತಾನೆ, ಮತ್ತೆ ಮೋಸಹೋಗುತ್ತಾನೆ. ಇದೇ ಮನುಷ್ಯನ ನೈಸರ್ಗಿಕವಾದ ವ್ಯವಹಾರವು.

ಈ ದೇಹವನ್ನೂ ದೇಹಕ್ಕೆ ಸಂಬಂಧಪಟ್ಟ ಪುತ್ರಪಶುಧನಾದಿಗಳನ್ನೂ ಆಶ್ರಯಿಸಿದರೆ ತಮಗೆ ಸುಖಶಾಂತಿಗಳೂ ದೊರೆಯುವವೆಂದು ಕೆಲವರ ನಂಬಿಕೆ. ಹಣಕಾಸು, ಹೊಲಮನೆ, ಅಧಿಕಾರ, ದೇಹಬಲ, ರೂಪು, ನಂಟರಿಷ್ಟರು, ವಿದ್ಯೆ, ವಿಚಾರಶಕ್ತಿ– ಮುಂತಾದವುಗಳನ್ನು ಅವಲಂಬನೆಮಾಡಿಕೊಂಡು ಜೀವನದಲ್ಲಿ ಶಾಂತಿಸಮಾಧಾನಗಳನ್ನು ಪಡೆಯಬಹುದೆಂದು ಬೇರೆಬೇರೆಯ ಜನರು, ಅಥವಾ ಒಬ್ಬರೇ ಬೇರೆಬೇರೆಯ ಅವಸ್ಥೆಗಳಲ್ಲಿ, ನಂಬಿ ನಡೆಯುತ್ತಿದಾರೆ. ಆದರೆ ಅವು ಯಾವವೂ ಅವರಿಗೆ ಸ್ಥಿರವಾದ ಅವಲಂಬನೆಯಾಗುವದಿಲ್ಲ. ಅವುಗಳೆಲ್ಲ ಒಂದೊಂದು ಕಾಲದಲ್ಲಿ ಅವರಿಗೆ ಪ್ರಿಯವಾಗಿ ತೋರಬಹುದು; ಅವುಗಳಿಂದ ತಮಗೆ ಜೀವನಕ್ಕೊಂದು ಬಲವಾದ ಊರುಗೋಲು ಸಿಕ್ಕಿದೆಯೆಂದು ಅವರು ಸ್ವಲ್ಪಕಾಲದವರೆಗೆ ನಂಬಬಹುದು. ಆದರೆ ಒಂದಲ್ಲ ಒಂದು ಕಾಲದಲ್ಲಿ ಆ ಕೋಲು ಲಡ್ಡಾಗಿದೆ ಎಂದು ಕಂಡುಬರುತ್ತದೆ; ಆ ಊರುಗೋಲು ಮುರಿದುಕೊಳ್ಳುತ್ತದೆ, ಅದನ್ನು ನಂಬಿಕೊಂಡಿದ್ದವರೂ ಕುಸಿದುಬೀಳುತ್ತಾರೆ.

ಅಧ್ಯಾತ್ಮವಿದ್ಯಾವಿಶಾರದರಾದ ಋಷಿಗಳ ಹೃದಯದಲ್ಲಿ ಒಂದು ಘನತತ್ತ್ವೋಪದೇಶವು ಸ್ಫುರಿಸಿರುತ್ತದೆ. ಅವರ ಮೂಲಕ ಪ್ರಚಾರಕ್ಕೆ ಬಂದ ವೇದದಲ್ಲಿ ಲೋಕಕ್ಕೆಲ್ಲ ಪ್ರತಿಷ್ಠೆ ಯಾವದೆಂಬ ವಿಷಯಕ್ಕೆ ಒಂದು ಆಶಾಪ್ರದವಾದ ಸಂದೇಶವು ಕಂಡುಬರುತ್ತದೆ. ಅದರ ಸಾರವನ್ನು ಸಂಗ್ರಹವಾಗಿ ತಿಳಿಸುವದಕ್ಕೆಂದು ಈ ಸಂದೇಶಕ್ಕೆ ಸೂತ್ರವಾಗಿ ಐತರೇಯೋಪನಿಷತ್ತಿನಿಂದ ಒಂದು ವಾಕ್ಯವನ್ನು ಉಪಯೋಗಿಸಿಕೊಂಡಿರುತ್ತೇವೆ.

ನಾವೂ, ನಾವು ವಾಸಮಾಡಿಕೊಂಡಿರುವ ಈ ಜಗತ್ತೆಲ್ಲವೂ ಪರಮೇಶ್ವರನಿಂದ ಬಂದಿರುವುದು. ಪರಮೇಶ್ವರನು ಈ ಜಗತ್ತೆಲ್ಲವನ್ನೂ ಸೃಷ್ಟಿಸಿರುತ್ತಾನೆ; ಆದ್ದರಿಂದ

ಆತನ ಪರಿಪೂರ್ಣಪ್ರಜ್ಞೆಗೆ ಅನುಗುಣವಾಗಿ ಈ ಜಗತ್ತಿನಲ್ಲಿ ಸಂಪೂರ್ಣವಾದ ವ್ಯವಸ್ಥೆಯು ಸುಖಶಾಂತಿಸಮಾಧಾನಗಳೂ ತುಂಬಿರುತ್ತವೆ. ಜಗತ್ತನ್ನು ಅನೇಕಲೋಕಗಳೆಂದೂ ಅವನ್ನು ಕಾಪಾಡುವ ಲೋಕಪಾಲಕರೆಂದೂ ವರ್ಣಿಸುವದು ಶ್ರುತಿಸ್ಮೃತಿಪುರಾಣಗಳ ಕ್ರಮವು. ಈ ಲೋಕಲೋಕಪಾಲಕರೆಲ್ಲರನ್ನೂ ಸೃಷ್ಟಿಸಿರುವವನು ಪರಮೇಶ್ವರನೇ; ಲೋಕಗಳಲ್ಲೊಂದಾದ, ಪಶುಪಕ್ಷಿಮೃಗಾದಿಗಳಿಂದಲೂ ಮನುಷ್ಯರಿಂದಲೂ ನಿಬಿಡವಾಗಿರುವ, ಈ ಭೂಲೋಕವನ್ನೂ ಆತನೇ ನಿರ್ಮಾಣಮಾಡಿರುತ್ತಾನೆ. ಪರಮೇಶ್ವರನು ಈ ಜಗತ್ತನ್ನು ನಿರ್ಮಿಸಿ, ಯಂತ್ರಗಳನ್ನು ನಿರ್ಮಿಸಿ ದೂರದೇಶಕ್ಕೆ ರವಾನಿಸುವ ಯಂತ್ರನಿರ್ಮಾಣಕನಂತೆ, ಈ ಜಗತ್ತಿಗೆ ದೂರವಾಗಿದ್ದುಕೊಂಡಿರುವದಿಲ್ಲ. ಇಲ್ಲಿರುವ ಪ್ರತಿಯೊಬ್ಬ ಜೀವನ ಹೃದಯದೊಳಗೂ ಹೊಕ್ಕಿರುತ್ತಾನೆ. ಆತನೇ ನಮ್ಮೆಲ್ಲರಿಗೂ ಆತ್ಮನಾಗಿರುತ್ತಾನೆ–ಹೀಗೆಂಬುದು ಉಪನಿಷತ್ತುಗಳ ಬೋಧೆಯು.

ಪರಮೇಶ್ವರನು ಪ್ರಜ್ಞಾರೂಪನಾಗಿರುತ್ತಾನೆ. ಆತನ ಪ್ರಜ್ಞೆಯ ಬೆಳಕು ನಮ್ಮೊಳಗೆಲ್ಲ ಸತತವಾಗಿ ತನ್ನ ಪ್ರಕಾಶವನ್ನು ಬೀರುತ್ತಿದೆ. ಪರಮೇಶ್ವರನು ಸತ್ಯಸ್ವರೂಪನೂ ನಿತ್ಯನೂ ಆಗಿರುವದರಿಂದ ಆತನ ಪ್ರಜ್ಞೆಯ ಬೆಳಕು ಸತ್ಯಸ್ವರೂಪವೂ ನಿತ್ಯವೂ ಆಗಿರುತ್ತದೆ. ಹೊರಗಿನ ವಸ್ತುಗಳು ಬರಿಯ ತೋರಿಕೆಯವು; ಅವು ಬಗೆಬಗೆಯ ವಿಕಾರಗಳನ್ನು ಹೊಂದುತ್ತಿರುವವು, ಅವು ಅನಿತ್ಯವಾಗಿರುತ್ತವೆ. ಆದ್ದರಿಂದ ನಾವು ಹೊರಗಿನ ಯಾವದೊಂದು ವಸ್ತುವನ್ನೂ ನಮಗೆ ಪ್ರತಿಷ್ಠೆಯೆಂದು, ನಮಗೆ ನಿತ್ಯವಾದ ಅವಲಂಬನೆಯಾಗಿರುವದೆಂದು, ನಂಬಬಾರದು. ಯಾವ ಪುತ್ರಪಶುವಿತ್ತವಿದ್ಯಾದಿಗಳೂ ನಮಗೆ ಸ್ಥಿರವಾದ ಅವಲಂಬನೆಯನ್ನು ಕೊಡಲಾರವು. ಅವು ನಿತ್ಯವೆಂದು ನಂಬಿದರೆ ನಾವು ಕೊನೆಯಲ್ಲಿ ಮೋಸಹೋಗುವೆವು. ಭಂಡವಾಳವಿಲ್ಲದ ಕಂಪೆನಿಗಳಲ್ಲಿ ಇನ್ಶೂರೆನ್ಸು ಮಾಡಿ ಮೂಢರಾದ ಕೆಲವು ಜನರು ತಮ್ಮಲ್ಲಿದ್ದ ಹಣಕಾಸುಗಳನ್ನೆಲ್ಲ ಕಳೆದುಕೊಂಡು ಕೊನೆಯಲ್ಲಿ ಅಳುವಂತೆ ನಾವು ಇವುಗಳನ್ನು ಆಶ್ರಯವೆಂದು ನಂಬಿದರೆ ಕೊನೆಯಲ್ಲಿ ಅಳಬೇಕಾಗುವದು. ಆದರೆ ನಮ್ಮನಮ್ಮೊಳಗೇ ಪರಮೇಶ್ವರನ ನಿತ್ಯವಾದ ಪ್ರಜ್ಞೆಯ ಬೆಳಕು ಇದ್ದುಕೊಂಡಿರುವದು; ಅದರಲ್ಲಿ ನಾವು ನಿತ್ಯಪ್ರತಿಷ್ಠೆಯನ್ನು ಪಡೆದುಕೊಂಡು ನಿತ್ಯವಾದ ಶಾಂತಿಸುಖಸಮಾಧಾನಗಳನ್ನು ಪಡೆದುಕೊಳ್ಳಬಹುದು.

ಆದರೆ ಪರಮೇಶ್ವರನ ಈ ಪ್ರಜ್ಞೆಯೆಂಬುದು ಯಾವದು? ನಮ್ಮೊಳಗೆ ಅಂತಃಕರಣವೊಂದು ಇದೆ. ಅದರಲ್ಲಿ ಬಗೆಬಗೆಯ ವೃತ್ತಿಗಳು ಉಂಟಾಗುತ್ತಿರುತ್ತವೆ. ಅದು ನಮ್ಮ ಇಂದ್ರಿಯಗಳ ದ್ವಾರದಿಂದ ಹೊರಗಿನ ವಸ್ತುಗಳನ್ನೆಲ್ಲ ಬೆಳಗುತ್ತಿರುತ್ತದೆ. ಅದು ಚಕ್ಷುರಿಂದ್ರಿಯವಾಗಿ ರೂಪವನ್ನೆಲ್ಲ ನೋಡುತ್ತದೆ, ಶ್ರೋತ್ರೇಂದ್ರಿಯವಾಗಿ ಎಲ್ಲವನ್ನೂ ಕೇಳುತ್ತದೆ. ಘ್ರಾಣೇಂದ್ರಿಯವಾಗಿ ಎಲ್ಲವನ್ನೂ ಮೂಸುತ್ತದೆ, ಜಿಹ್ವೇಂದ್ರಿಯವಾಗಿ ಎಲ್ಲದರ

ಸವಿಯನ್ನೂ ನೋಡುತ್ತದೆ, ತ್ವಗಿಂದ್ರಿಯವಾಗಿ ಎಲ್ಲಾ ಸ್ಪರ್ಶವನ್ನೂ ಅರಿತುಕೊಳ್ಳುತ್ತದೆ. ನಮ್ಮಲ್ಲಿರುವ ಈ ಅಂತಃಕರಣವನ್ನು ಸಾಮಾನ್ಯವಾಗಿ ಜನರು "ಮನಸ್ಸು" ಎಂದು ಕರೆಯುತ್ತಾರೆ. ಮನಸ್ಸು ಎಂದರೆ ಮನನಮಾಡತಕ್ಕದ್ದು, ಆಲೋಚನೆ ಮಾಡತಕ್ಕದ್ದು- ಎಂದರ್ಥ. ಆದರೆ ಅಂತಃಕರಣಕ್ಕೆ ಮನನವೊಂದೇ ಕೆಲಸವಲ್ಲ. ಅದು ಒಂದೊಂದು ಮಾರ್ಪಾಡನ್ನು ತಳೆದು ಒಂದೊಂದು ಕೆಲಸವನ್ನು ಮಾಡುತ್ತದೆ. ಸಾಮಾನ್ಯವಾಗಿ ಹೊರಗನ್ನು ಅರಿಯುವದು, ನಾನು ಇದಕ್ಕೆಲ್ಲ ಒಡೆಯನೆಂದು ಮೆರೆಯುವದು, ಇದು ಇಂಥದ್ದೆಂದು ನಿಶ್ಚಯಿಸುವದು, ಹೆಚ್ಚಿನ ಪ್ರಜ್ಞಾಕೌಶಲವನ್ನು ತೋರಿಸುವದು, ಅನುಭವಿಸಿದ್ದನ್ನು ನೆನಪಿನಲ್ಲಿಟ್ಟುಕೊಂಡಿರುವದು, ಶರೀರೇಂದ್ರಿಯಗಳು ಕುಸಿಯದಂತೆ ಎತ್ತಿಹಿಡಿದಿಟ್ಟುಕೊಳ್ಳುವದು, ವಿಚಾರವಮಾಡುವದು, ನರಳುವದು, ನೆನಪಿಗೆ ತಂದುಕೊಳ್ಳುವದು, ಇಂಥದ್ದು ಇಂಥದ್ದು ಎಂದು ಸಂಕಲ್ಪಿಸುವದು, ಇದೊ ಇದೊ? ಎಂದು ಸಂಶಯಪಡುವದು- ಇವೇ ಮುಂತಾದ ಹಲವು ವೃತ್ತಿಗಳು ಅದರಲ್ಲಿ ಉಂಟಾಗುತ್ತಿರುವವು. ಮನುಷ್ಯನಲ್ಲಿರುವ ಈ ಅಂತಃಕರಣಕ್ಕೆ ಸಮಾನವಾದ ಮತ್ತೊಂದು ಅದ್ಭುತವಸ್ತುವೇ ಲೋಕದಲ್ಲಿಲ್ಲವೆನ್ನಬಹುದು. "ಭೂಲೋಕದಲ್ಲಿ ಮನುಷ್ಯನಿಗಿಂತ ಹೆಚ್ಚಿನದು ಮತ್ತೊಂದಿಲ್ಲ, ಮನುಷ್ಯನೊಳಗೆ ಮನಸ್ಸಿಗಿಂತ ಹೆಚ್ಚಿನದು ಮತ್ತೊಂದಿಲ್ಲ" ಎಂದು ಒಬ್ಬ ಪಾಶ್ಚಾತ್ಯತತ್ತ್ವವಿಚಾರಕನು ನುಡಿದಿರುತ್ತಾನೆ. ಈಗಿನ ಮನಃಶಾಸ್ತ್ರಜ್ಞರಲ್ಲಿ ಮನಸ್ಸಿಗಿಂತ ಹೆಚ್ಚಿನ ತತ್ತ್ವವನ್ನೇ ಅನೇಕರು ಒಪ್ಪಿರುವದಿಲ್ಲ. ಆದ್ದರಿಂದ ಸಾಮಾನ್ಯಬುದ್ಧಿಯ ಜನರಿಗೆ ಇದೇ ನಮ್ಮಲ್ಲಿರುವ ಪ್ರಜ್ಞೆ ಎಂದು ಇಟ್ಟುಕೊಳ್ಳುವದು ಸುಲಭವಾಗಿರುತ್ತದೆ.

ಆದರೆ ಈ ಅಂತಃಕರಣವೆಂಬುದು ಹುಟ್ಟು, ಇರವು, ಹೊಂದು- ಎಂಬ ಎಲ್ಲಾ ವಿಕಾರಗಳನ್ನೂ ಪಡೆಯುತ್ತಿರುತ್ತದೆ. ಇದರ ಶಕ್ತಿವಿಶೇಷಗಳು ಚಿಕ್ಕಮಕ್ಕಳಲ್ಲಿ ಇನ್ನೂ ವಿಕಾಸವಾಗಿರುವದಿಲ್ಲ; ಸಂಸ್ಕಾರದಿಂದಲೂ ಅಭ್ಯಾಸದಿಂದಲೂ ಅವು ಬೆಳೆದುಕೊಳ್ಳುತ್ತವೆ; ರೋಗ, ಮುಪ್ಪು- ಮುಂತಾದ ನಿಮಿತ್ತಗಳಿಂದ ಮಂಕಾಗಿಹೋಗುತ್ತವೆ. ಇಷ್ಟೇ ಅಲ್ಲ. ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಅಂತಃಕರಣದ ಯಾವ ಆಟವೂ ನಡೆಯುವದೇ ಇಲ್ಲ. ಅದು ಅಲ್ಲಿ ಇರುತ್ತದೆ- ಎಂಬುದಕ್ಕೆ ಯಾವ ಪ್ರಮಾಣವೂ ಇರುವದಿಲ್ಲ. ಇಂಥ ಅದಿರಾಟದ ಅರಿವನ್ನು ಪ್ರಜ್ಞೆಯೆಂದೂ, ಬೆಳಕೆಂದೂ, ನಮಗೆ ಮಾರ್ಗದರ್ಶಿಯೆಂದೂ, ನಮಗೆಲ್ಲ ಆಶ್ರಯವೆಂದೂ ಶಾಸ್ತ್ರವು ಹೇಳುತ್ತಿದೆ ಎಂಬುದು ಯಾರಿಗೂ ಒಪ್ಪತಕ್ಕ ಮಾತಲ್ಲ.

ನಾವು ಯಾವ ಅವಸ್ಥೆಯಲ್ಲಿಯೇ ಇರಲಿ, ನಮ್ಮ ಅಂತಃಕರಣವು ಎಷ್ಟರಮಟ್ಟಿಗೆ ವಿಕಾಸವಾಗಿರಲಿ ಅಥವ ಆಗದಿರಲಿ, ನಮ್ಮ ಶರೀರೇಂದ್ರಿಯಾದಿಗಳ ಮತ್ತು ಹೊರಗಿನ ವಿಷಯಗಳ ಆಗುಹೋಗುಗಳನ್ನು ಕಾಣುವದಕ್ಕೆ ನಮ್ಮಲ್ಲಿಯೇ ಒಂದು ಕೂಟಸ್ಥವಾದ ಅರಿವಿನ ಬೆಳಕಿದೆ ಎಂಬುದು ಒಳಗಣ್ಣಿನಿಂದ ವಿಚಾರಮಾಡಿ ನೋಡಿದವರಿಗೆ ಹೊಳೆಯುತ್ತದೆ. ನಾವು ಏನನ್ನಾದರೂ ವಿಚಾರಮಾಡುತ್ತಿರಲಿ ಬಿಡಲಿ, ಇಂದ್ರಿಯಗಳಿಂದ

ಯಾವದನ್ನಾದರೂ ಕಾಣುತ್ತಿರಲಿ ಕಾಣದೆ ಇರಲಿ, ನಾವು ಎಚ್ಚರವಾಗಿರಲಿ, ಕನಸುಕಾಣುತ್ತಿರಲಿ, ತನಿನಿದ್ರೆಯನ್ನು ಅನುಭವಿಸುತ್ತಿರಲಿ– ಈ ಎಲ್ಲಾ ಅನುಭವಗಳ ಆಗನ್ನೂ ಹೋಗನ್ನೂ ಬೆಳಗುವದು ಯಾವದು? ಕಣ್ಣಿಗೆ ಕಣ್ಣಾಗಿ, ಕಣ್ಣನ್ನು ಕಣ್ಣೆನಿಸಿ, ಹೊರಗಿನ ರೂಪವೆಲ್ಲವನ್ನೂ ಬೆಳಗಿ ತೋರುವಂತೆ ಮಾಡುವ ಅದರ ಆತ್ಮವು, ಅದರ ತಿರುಳು, ಯಾವದು? ಹೀಗೆಯೇ ಕಿವಿಗೆ ಕಿವಿಯಾಗಿ, ಮೂಗಿಗೆ ಮೂಗಾಗಿ, ತ್ವಗಿಂದ್ರಿಯಕ್ಕೂ ತ್ವಕ್ಕಾಗಿ, ನಾಲಗೆಗೂ ನಾಲಗೆಯಾಗಿ, ಎಲ್ಲವನ್ನೂ ಅರಿತುಕೊಳ್ಳುವಂತೆ ಅವಕ್ಕೆ ಶಕ್ತಿಯನ್ನು ಕೊಟ್ಟಿರುವ, ಅವುಗಳ ತಿರುಳೇ ಆಗಿರುವ, ಎಲ್ಲವನ್ನೂ ಬೆಳಗುತ್ತಿರುವ, ತನ್ನನ್ನು ಬೆಳಗುವದಕ್ಕೆ ಮತ್ತೊಂದಿಲ್ಲದ, ತನ್ನ ಅರಿವಿನ ಬೆಳಕಿನಿಂದಲೇ ತಾನು ಯಾವ ಎಚ್ಚರನಿದ್ರೆಗಳ ಮಾರ್ಪಾಡೂ ಇಲ್ಲದೆ ಬೆಳಗುತ್ತಿರುವ ಆ ಪ್ರಜ್ಞೆಯು, ಆ ಜಗತ್ತಿನ ತಿರುಳು, ಯಾವದು? ಇದೇ ಆ ಪರಮೇಶ್ವರಪ್ರಜ್ಞೆಯು, ನಮ್ಮೆಲ್ಲರಿಗೂ ಆತ್ಮನು; ಅದರ ಅವಲಂಬನೆಯಿಲ್ಲದೆ ಯಾವ ಜ್ಞಾನೇಂದ್ರಿಯಗಳೂ ಯಾವ ಕರ್ಮೇಂದ್ರಿಯಗಳೂ ತಮ್ಮ ಕೆಲಸವನ್ನು ಮಾಡಲಾರವು. ಅದೇ ಇವೆಲ್ಲಕ್ಕೂ ಆಧಾರವು, ಎಲ್ಲಕ್ಕೂ ಪ್ರತಿಷ್ಠೆಯು.

ವಾಚಕಮಹಾಶಯರೆ, ಚೆನ್ನಾಗಿ ಆಲೋಚನೆಮಾಡಿ ನಿಮ್ಮನಿಮ್ಮೊಳಗೇ ಇರುವ ಈ ಪ್ರಜ್ಞೆಯನ್ನು ಕಂಡುಕೊಂಡು, ಅದರಲ್ಲಿಯೇ ನಿಲುಗಡೆಯನ್ನು ಪಡೆದುಕೊಳ್ಳಿರಿ. ಅದೇ ಈ ಜಗತ್ತೆಲ್ಲವನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡು ಆಳುತ್ತಿರುವ ಪರಮೇಶ್ವರನು. ಪರಮೇಶ್ವರನು ಪ್ರೇಮಮೂರ್ತಿಯು ಎಂದು ಇತಿಹಾಸಪುರಾಣಗಳು ಸಾರುತ್ತಿರುವವು, ಭಕ್ತರು ಕೊಂಡಾಡುತ್ತಿರುವರು. ಆತನು "ಈ ಜಗತ್ತೆಲ್ಲವನ್ನೂ ತನ್ನ ಅಚಿಂತ್ಯವಾದ ಅದ್ಭುತವಾದ ಶಕ್ತಿಯಿಂದ ಸೃಜಿಸಿ ಇದೆಲ್ಲದರ ಒಳಗೂ ಹೊಕ್ಕು, ಎಲ್ಲಕ್ಕೂ ಆತ್ಮನಾಗಿ, ಎಲ್ಲಕ್ಕೂ ಬೆಳಕಾಗಿರುತ್ತಾನೆ. ಆತನಲ್ಲಿ ನಾವು ಧಾರಾಳವಾಗಿ ಸಂಪೂರ್ಣವಿಶ್ವಾಸ ವನ್ನಿಡಬಹುದು. ಏಕೆಂದರೆ ಆತನೇ ನಮ್ಮ ಸರ್ವಸ್ವವೂ ನಮ್ಮ ತಿರುಳೂ ಆಗಿರುತ್ತಾನೆ. ಆತನಿಲ್ಲದೆ ನಮಗೆ ಸ್ವರೂಪಸ್ಥಿತಿಪ್ರವೃತ್ತಿಗಳು ಯಾವವೂ ಇರುವದಿಲ್ಲ; ಆತನಿಲ್ಲದೆ, ಆತನ ಅನುಗ್ರಹವಿಲ್ಲದೆ, ನಮ್ಮದೆಂದುಕೊಳ್ಳುವದಕ್ಕೆ ನಮಗೆ ಯಾವದೊಂದೂ ಸಿಕ್ಕುವದಿಲ್ಲ. ಎಲ್ಲವೂ ಆತನದೇ, ಎಲ್ಲವೂ ಆತನ ಅನುಗ್ರಹವೇ–ಎಂದು ಸಂಪೂರ್ಣವಾಗಿ ನಂಬಿಕೊಳ್ಳಿರಿ.

ಈ ಜಗತ್ತನ್ನು ನಾವು ಯಾವಾತನ ಪ್ರಜ್ಞೆಯೆಂಬ ಒಳಗಣ್ಣಿನಿಂದ ನೋಡುತ್ತಿರುವೆವೋ ಆತನ ಅನುಗ್ರಹವಿಲ್ಲದಿದ್ದರೆ ನಾವು ಕುರುಡರೇ ಸರಿ. ನಾನೂ ನೀವೂ ಏಕೆ? ಬ್ರಹ್ಮ, ಇಂದ್ರ, ಪ್ರಜಾಪತಿ, ದೇವತೆಗಳು, ಪಂಚಮಹಾಭೂತಗಳು, ಭೌತಿಕವಸ್ತುಗಳು, ಸ್ಥಾವರಜಂಗಮಪ್ರಾಣಿಗಳು– ಎಲ್ಲವೂ ಸಣ್ಣವಾಗಲಿ ದೊಡ್ಡವಾಗಲಿ ಆ ಪ್ರಜ್ಞಾನೇತ್ರದಿಂದಲೇ ಜೀವಿಸಿಕೊಂಡು ವ್ಯವಹರಿಸುತ್ತಿರುವವು– ಎಂದು ಶ್ರುತಿಯು ಸಾರುತ್ತಿದೆ. ಈ ಜಗತ್ತಿಗೆ ಆ ಪ್ರಜ್ಞೆಯೇ ನೇತೃವು. ಅದರ ನೇತೃತ್ವದಲ್ಲಿಯೇ ನಾವೆಲ್ಲರೂ ಮುನ್ನಡೆಯುತ್ತಿರುವೆವು.

ಆ ಅಮೃತವಾದ ಪ್ರಜ್ಞೆಯು ನಮ್ಮ ಬುದ್ಧಿಗಳಿಗೆ ಬೇಕಾದ ವೃತ್ತಿಗಳನ್ನು ಕೊಟ್ಟು ಅಜ್ಞಾನಾಂಧಕಾರವನ್ನು ಕಳೆಯುತ್ತಿರುವದರಿಂದ ಅದೇ ನಮಗೆ ನಿಜವಾದ ನೇತ್ರವು; ಅದರ ಅನಂತವಾದ ಶಕ್ತಿಯೇ ನಮಗೆ ಬೇಕಾದದ್ದೆಲ್ಲವನ್ನೂ ಕೊಟ್ಟು ನಮ್ಮನ್ನು ಪೋಷಿಸುತ್ತಿರುವದು; ಅದೇ ನಮಗೆ ಎಂಥ ಕಷ್ಟಪರಂಪರೆಗಳು ಬಂದರೂ ಹಿಡಿದೆತ್ತುವ ಅವಲಂಬನೆಯಾಗಿರುವದು; ಆ ಪ್ರಜ್ಞೆಯ ಅಪರಿಮಿತವಾದ ಆನಂದರಸವೇ ನಮ್ಮೊಳಗೆಲ್ಲ ಹರಿಯುತ್ತಿರುವದು.

ನಮ್ಮ ಪರಮಾರ್ಥಜೀವನವು ಅನಂತವಾದ ಈ ಪ್ರಜ್ಞಾನವೆಂಬ ಪ್ರತಿಷ್ಠೆಯನ್ನವಲಂಬಿಸಿಕೊಂಡು, ಈ ಪ್ರಜ್ಞಾನವೆಂಬ ಆಧಾರದಿಂದ ತನಗೆ ಬೇಕಾದ ಸಾಮಗ್ರಿಗಳನ್ನೆಲ್ಲ ಒದಗಿಸಿಕೊಂಡು, ತನಗೆ ಒದಗುವ ಅಡಚಣೆಗಳನ್ನೆಲ್ಲ ದಾಟಿ ತನಗೆ ಬೇಕಾದ ತಿಳಿವಳಿಕೆಯನ್ನು ಸಂಪಾದಿಸಿಕೊಂಡು, ಅದರ ತಂಬೆಳಕಿನಲ್ಲಿಯೇ ನಿತ್ಯವಾಗಿ ನೆಲಸಿರುವದು. ಈ ಪರಮಾರ್ಥವನ್ನು ಕಂಡುಕೊಳ್ಳುವದೇ ನಮ್ಮ ಜೀವನದ ಪರಮೋದ್ದೇಶವು. ಈ ಅನಂತವಾದ ಆನಂದಾಭಿನ್ನಪ್ರಜ್ಞೆಯಲ್ಲಿಯೇ ನಾವಿರುವೆವು. ನಮ್ಮೊಳಗೇ ಈಗಲೇ ಇಲ್ಲಿಯೇ ನಾವು ಇಷ್ಟಪಟ್ಟರೆ ಅದನ್ನು ಕಂಡುಕೊಂಡು, ಅದರ ತಾದಾತ್ಮ್ಯವನ್ನೇ ಪಡೆದುಕೊಳ್ಳಬಹುದು.

ಯಾರು ತಮ್ಮತಮ್ಮೊಳಗೇ ಈ ಪ್ರಜ್ಞೆಯ ಸ್ವರೂಪವನ್ನು ಕಂಡುಕೊಂಡು ಅದರಲ್ಲಿ ಒಂದಾಗುವರೋ, ಅವರಿಗೆ ಈ ದುಃಖಪರಂಪರೆಯ ಲೋಕವು ಮರೆಯಾಗುವದು. ಅವರು ತಾವುತಾವು ಇದ್ದಲ್ಲಿಯೇ, ಮಿಕ್ಕವರ ದೃಷ್ಟಿಯಿಂದ ಮೊದಲಿನಂತೆಯೇ ವ್ಯವಹಾರವನ್ನು ಮಾಡುತ್ತಿದ್ದರೂ, ಈ ಲೋಕವನ್ನು ಬಿಟ್ಟು ಸ್ವರ್ಗಗಳಲ್ಲೆಲ್ಲ ಮಿಗಿಲಿನ ಸ್ವರ್ಗವಾದ ಈ ಆನಂದಧಾಮವನ್ನು ಸೇರಿಕೊಂಡು, ಸರ್ವಕಾಮಗಳನ್ನೂ ಪಡೆದುಕೊಂಡು, ಎಂದೆಂದಿಗೂ ಅಮೃತರಾಗಿರುವರು. ಅವರಿಗೆ ಈ ಇಂದ್ರಿಯಗಳ ಲೋಕದಲ್ಲಿ ಮರ್ತ್ಯರಾಗಿ ಬೇಯುವ ಕೋಟಲೆಯು ಎಂದೆಂದಿಗೂ ತಪ್ಪಿಹೋಗುವದು, ಸುಖಶಾಂತಿಗಳು ಅವರಿಗೆ ಕಟ್ಟಿಟ್ಟ ಬುತ್ತಿಯಾಗುವದು.

## 3.12. ನೈಷ್ಕರ್ಮ್ಯ ಸಿದ್ಧಿಯಿಂದ ಕೃತಕೃತ್ಯತೆ

**ನ ಹಿ ಕಶ್ಚಿತ್ ಕ್ಷಣಮಪಿ । ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮ । ಸರ್ವಃ ಪ್ರಕೃತಿ ಜೈರ್ಗುಣೈಃ ॥ (ಗೀ. 3-5)**

**ಯಾವ ಕರ್ಮವನ್ನೂ ಮಾಡದೆ ಯಾವನೊಬ್ಬನೂ ಎಂದಿಗೂ ಇರುವದೇ ಇಲ್ಲ. ಪ್ರತಿಯೊಬ್ಬನೂ ಪ್ರಕೃತಿಜನ್ಯವಾದ ಗುಣಗಳಿಂದ ಪ್ರೇರಿತನಾಗಿ ಅವನು ತಾನು ಒಲ್ಲೆನೆಂದರೂ ಕರ್ಮವನ್ನು ಮಾಡುತ್ತಲೇ ಇರುವನು.**

ಪ್ರಾಸಾದಿಕವಾಣಿಯಲ್ಲಿ ಬರೆದಿರುವ ಭಗವದ್ಗೀತೆಯಂಥ ಗ್ರಂಥಗಳಲ್ಲಿರುವ ವಾಕ್ಯಗಳ ಅರ್ಥವು ಗಂಭೀರವಾಗಿರುತ್ತದೆ. ಈ ವಾಕ್ಯಗಳು ಪ್ರಸನ್ನವಾಗಿ ಎಲ್ಲರಿಗೂ ತಿಳಿಯುವಂತೆ ಇದ್ದರೂ ಅವುಗಳನ್ನು ಓದುಗರು ತಮ್ಮತಮ್ಮ ಮನಸ್ಸಿನ ಮಟ್ಟಕ್ಕೆ ಅನುಗುಣವಾಗಿಯೇ ಅರ್ಥಮಾಡಿಕೊಳ್ಳುವರು. ಅವರು ಮಾಡಿಕೊಳ್ಳುವ ಅರ್ಥವು ತಪ್ಪೆಂದು ಹೇಳುವದಕ್ಕೆ ಬರುವದಿಲ್ಲ. ಆದರೆ ಅತ್ಯಂತವಾಗಿ ಪರಮಾರ್ಥವಾಗಿರುವ ಅರ್ಥವು ಅಧ್ಯಾತ್ಮಜ್ಞಾನಿಗಳಿಗೆ ಮಾತ್ರ ದಕ್ಕುವದು. ಜ್ಞಾನಿಗಳಲ್ಲಿಯೂ ಬೇರೆಬೇರೆಯ ಮಟ್ಟದ ಸಂಸ್ಕಾರವುಳ್ಳವರು ಇರುತ್ತಾರೆ. ಪರಮಾರ್ಥತತ್ತ್ವವನ್ನು ಸಾಕ್ಷಾತ್ತಾಗಿ ಅರಿತುಕೊಂಡು ಅದರಲ್ಲಿಯೇ ನೆಲೆನಿಂತವರು ಮಾತ್ರ ಈ ಎಲ್ಲಾ ಅರ್ಥಗಳಿಗೂ ಏಕವಾಕ್ಯತೆಯನ್ನು ಮಾಡಿಕೊಳ್ಳಬಲ್ಲರು.

ಭಗವದ್ಗೀತೆಗೆ ಈವರೆಗೆ ರಚಿತವಾಗಿರುವ ನೂರಾರು ವ್ಯಾಖ್ಯಾನಗಳು ಸಂಸ್ಕೃತದಲ್ಲಿಯೂ ದೇಶೀಯಭಾಷೆಗಳಲ್ಲಿಯೂ ವಿದೇಶೀಯಭಾಷೆಗಳಲ್ಲಿಯೂ ಹೊರಕ್ಕೆ ಬಂದಿವೆ. ಮುಂದೆ ಇನ್ನೆಷ್ಟು ಬರುವವೋ ಊಹಿಸುವದು ಸಾಧ್ಯವಿಲ್ಲ. ಗೌಡಪಾದರವರು ಪರಮಾರ್ಥದ ವಿಷಯಕ್ಕೆ ಹೇಳಿರುವಂತೆ ಗೀತೆಗೂ ಬೇರೆಬೇರೆಯ ವಾದಿಗಳು ಬೇರೆಬೇರೆಯ ಅರ್ಥವನ್ನು ಕಲ್ಪಿಸಿರುತ್ತಾರೆ. ಪರಮಾರ್ಥದೃಷ್ಟಿಯಿಂದ ಆ ಅರ್ಥವೆಲ್ಲವೂ ಅವರವರ ದೃಷ್ಟಿಯಿಂದ ಸರಿಯೇ; ಯಾವ ಗುರುವು ಯಾವದನ್ನು ಇದೇ ತತ್ತ್ವಾರ್ಥವೆಂದು ತನ್ನ ಶಿಷ್ಯನಿಗೆ ತೋರಿಸಿಕೊಡುತ್ತಾನೋ ಅದನ್ನೇ ಆ ಶಿಷ್ಯನು ಹಿಡಿದುಕೊಂಡುಬಿಡುತ್ತಾನೆ. ಮಿಕ್ಕ ಅರ್ಥಗಳು ಅವನಿಗೆ ತೋರದಂತೆ ಆ ಉಪದೇಶವು ಅವನನ್ನು ಆವರಿಸಿಕೊಂಡುಬಿಡುತ್ತದೆ.

ಈ ತಿಂಗಳ ಸಂದೇಶಕ್ಕೆ ನಾನು ಆರಿಸಿ ಬರೆದುಕೊಂಡಿರುವ ಗೀತಾವಾಕ್ಯಕ್ಕೆ ನನ್ನ ಪರಿಚಯದವರಲ್ಲೊಬ್ಬರು ಮಾಡಿರುವ ಅರ್ಥವು ಪ್ರೇರಕವಾಗಿರುತ್ತದೆ. ಅವರು ಈ ಶ್ಲೋಕಕ್ಕೆ ಇಂಗ್ಲಿಷುವಾಕ್ಯದಲ್ಲಿ ಒಂದು ಅರ್ಥವನ್ನು ಬರೆದು "ಇದು ಸರಿಯೆ?" ಎಂದು ಕೇಳಿರುತ್ತಾರೆ. "ವಿಶ್ವಶಕ್ತಿಯ ಪ್ರೇರಣೆಗೆ ಒಳಪಡದೆ ಯಾವನೊಬ್ಬನೂ ಒಂದು ಕ್ಷಣವೂ ಇರುವದಿಲ್ಲ. ಆ ವಿಶ್ವಶಕ್ತಿಯಿಂದ ಹೊರಹೊರಟು ಬಂದ ಪರಿಸ್ಪಂದವೇ ಕರ್ಮವು. ನಮ್ಮ ಕರ್ಮದ ಸ್ವಭಾವವು ಈ ವಿಶ್ವಶಕ್ತಿಯನ್ನು ನಾವು ಹೇಗೆ ಸ್ವೀಕರಿಸಿಸ್ವಾತ್ಮ್ಯವಾಗಿ ಮಾಡಿಕೊಳ್ಳುತ್ತೇವೋ ಅದನ್ನು ಅವಲಂಬಿಸಿಕೊಂಡಿರುತ್ತದೆ."

ನಮ್ಮ ಮಿತ್ರರು ಈ ವಾಕ್ಯಕ್ಕೆ ಯಾವ ಅಭಿಪ್ರಾಯವನ್ನು ಮಾಡಿಕೊಂಡಿರುವರೋ ತಿಳಿಯದು. ಭೌತಿಕದೃಷ್ಟಿಯಿಂದ ನೋಡಿದರೆ ಇಡಿಯ ಬ್ರಹ್ಮಾಂಡದೊಳಗೇ ಒಂದು ಶಕ್ತಿಸಾಮಾನ್ಯವು ತುಂಬಿತುಳುಕುತ್ತಿರುವದು; ಅದನ್ನು ಮಾನವನು ತನ್ನ ವ್ಯವಹಾರದಲ್ಲಿ ಬಗೆಬಗೆಯಿಂದ ಸೆಳೆದುಕೊಂಡು ತನ್ನ ಜೀವನದಲ್ಲಿ ಅದರ ಪರಿಣಾಮವನ್ನು ತೋರಿಸುತ್ತಿರುವನು– ಎಂದು ಹೇಳಬಹುದು. ಆದರೆ ಇನ್ನಷ್ಟು ಒಳಹೊಕ್ಕು ನೋಡಿದರೆ

ಸಮಷ್ಟಿಭೌತಿಕ ಶಕ್ತಿಯಂತೆಯೇ ಸಮಷ್ಟಿಮನಃಶಕ್ತಿಯೂ ಸಮಷ್ಟಿಚೈತನ್ಯಶಕ್ತಿಯೂ ಎಲ್ಲೆಲ್ಲಿಯೂ ವ್ಯಾಪ್ತವಾಗಿದೆ ಎಂದು ಹೇಳಬಹುದು. ಭಗವದ್ಗೀತೆಯಲ್ಲಿಯೇ ಮತ್ತೊಂದು ಕಡೆಯಲ್ಲಿ ಹೇಳಿರುವಂತೆ :

**"ಯಾವ ಅಂತರ್ಯಾಮಿಯಾದ ಪರಮಾತ್ಮನಿಂದ ಎಲ್ಲಾ ಪ್ರಾಣಿಗಳ ಪ್ರವೃತ್ತಿಯೂ ಆಗುತ್ತಿರುವದೋ, ಯಾವ ಪರಮಾತ್ಮನಿಂದ ಈ ಚರಾಚರಜಗತ್ತೆಲ್ಲವೂ ವ್ಯಾಪ್ತವಾಗಿರುವದೋ, ಆ ಪರಮಾತ್ಮನನ್ನು ತನ್ನ ಕರ್ಮದಿಂದ ಅಭ್ಯರ್ಚನೆಯನ್ನು ಚೆನ್ನಾಗಿ ಮಾಡಿದರೆ ಮಾನವನು ಸಿದ್ಧಿಯನ್ನು ಪಡೆದುಕೊಳ್ಳುವನು."** –ಗೀತೆ 18–46

ಪರಮೇಶ್ವರನ ಶಕ್ತಿಯು ಇಡಿಯ ಜಗತ್ತನ್ನೇ ವ್ಯಾಪಿಸಿಕೊಂಡಿರುತ್ತದೆ. ಆ ಶಕ್ತಿಯೇ ನಮ್ಮೆಲ್ಲಿಲ್ಲ ಒಳಹೊಕ್ಕು ನಮ್ಮನ್ನು ಬಗೆಬಗೆಯ ಕಾರ್ಯಗಳಲ್ಲಿ ತೊಡಗಿಸುತ್ತಿರುವದು. ಆದರೆ ಈ ಗುಟ್ಟನ್ನು ನಾವು ತಿಳಿದುಕೊಳ್ಳಲಾರದೆ, ನಮ್ಮ ಶರೀರಮನ ಇಂದ್ರಿಯಗಳಲ್ಲಿ ಕಾಣಿಸಿಕೊಳ್ಳುತ್ತಿರುವ ವ್ಯಾಪಾರವು ನಮ್ಮ ವಶವೆಂದು ಭ್ರಮಿಸಿರುವೆವು. ಈ ವ್ಯಾಪಾರಗಳನ್ನು ನಮ್ಮನಮ್ಮ ವ್ಯಕ್ತಿಗತವಾದ ಶರೀರಾದಿಗಳಿಗೂ ಅವಕ್ಕೆ ಸಂಬಂಧಪಟ್ಟಿರುವರೆಂದು ನಾವು ತಿಳಿದುಕೊಂಡಿರುವ ಪುತ್ರಮಿತ್ರಬಂಧುಬಾಂಧವರಿಗೂ ಅನುಕೂಲವಾಗುವಂತೆಯೂ ಉಪಯೋಗಿಸಿಕೊಳ್ಳಬೇಕೆಂದು ಹವಣಿಸುತ್ತಿರುವೆವು. ನಮಗೂ ನಮ್ಮವರಿಗೂ ಆಗದವರೆಂದು ನಾವು ಭಾವಿಸಿಕೊಂಡಿರುವವರಿಗೆ ಪ್ರತಿಕೂಲವಾಗುವಂತೆಯೂ ಈ ವ್ಯಾಪಾರಗಳನ್ನು ಉಪಯೋಗಿಸಿಕೊಳ್ಳಬೇಕೆಂಬುದು ನಮ್ಮ ಹೆಬ್ಬಯಕೆ. ಆದರೆ ಈ ಬಯಕೆಯು ಎಷ್ಟರಮಟ್ಟಿಗೆ ನೆರವೇರುವದೋ, ಈ ಬಯಕೆಯಿಂದ ಪ್ರೇರಿತರಾಗಿ ನಾವು ಮಾಡುವ ಪ್ರಯತ್ನದ ಪರಿಣಾಮವು ನಮ್ಮ ಮೇಲೆ ಹೇಗೆ ಆಗುತ್ತಿರುವದೋ, ನಮಗೇ ತಿಳಿಯದು. ಯಾರೋ ಒಬ್ಬರು ತನಗೆ ಉಪದೇಶಿಸಿದ್ದ ಸಂಜೀವಿನೀಮಂತ್ರದ ಪರಿಪೂರ್ಣಜ್ಞಾನವಿಲ್ಲದೆ ಮಂತ್ರಗಾರನೊಬ್ಬನು ಸತ್ತುಬಿದ್ದಿದ್ದ ಹುಲಿಯನ್ನು ಬದುಕಿಸಿದರೆ ಎಲ್ಲರನ್ನೂ ಹೆದರಿಸಿ ವಶಗೊಳಿಸಿಕೊಳ್ಳಬಹುದೆಂದು ಭಾವಿಸಿಕೊಂಡನಂತೆ. ಆದರೆ ಆ ಬದುಕಿ ಎದ್ದ ಹುಲಿಯು ಮೊದಲೇ ಅವನನ್ನು ಕೊಂದುಹಾಕಿತಂತೆ! ಈ ದೃಷ್ಟಾಂತದ ಅವಿವೇಕಿ ಮಂತ್ರಗಾರನಂತೆ ನಾವು ನಮ್ಮ ಸುತ್ತಲೂ ಇರುವ ಪ್ರಪಂಚದಲ್ಲಿ ಕಾಣಬರುವ ಶಕ್ತಿವಿಶೇಷದ ಹೊರರೂಪನ್ನು ನಮಗೆ ಸದ್ಯಃಫಲದಾಯಕವೆಂದು ನಾವು ತಿಳಿದುಕೊಂಡಿರುವ ರೀತಿಯಲ್ಲಿ ಉಪಯೋಗಿಸುವೆವು. ಅದರ ಫಲವು ನಾನಾರೂಪಗಳಲ್ಲಿ ಮೈದೋರಿಕೊಳ್ಳುವದು. ಈ ರೂಪಗಳನ್ನು ಕಂಡ ನಮ್ಮ ಮನಸ್ಸಿನಲ್ಲಿ ಆಗುವ ಪ್ರತಿಕ್ರಿಯೆಗಳೇ ಈ ಸಂಸಾರವು.

ಇದಂತಿರಲಿ. ಮೇಲಿನ ಶ್ಲೋಕದಲ್ಲಿರುವ "ಪ್ರಕೃತಿಜೈರ್ಗುಣೈಃ" (ಪ್ರಕೃತಿ ಜನ್ಯ ಗುಣಗಳಿಂದ) ಎಂಬ ಮಾತಿಗೆ ಅರ್ಥವೇನು? ಭಗವದ್ಗೀತೆಯಲ್ಲಿ ಸಾಂಖ್ಯಪ್ರಕ್ರಿಯೆಯನ್ನು ಉಪಯೋಗಿಸಿಕೊಂಡು ತತ್ತ್ವಪ್ರತಿಪಾದನೆಯನ್ನು ಮಾಡುತ್ತಾ ಹೋಗಿರುತ್ತದೆ. ಸಾಂಖ್ಯರು ಪ್ರಕೃತಿ ಅಥವಾ ಪ್ರಧಾನ ಎಂಬ ಮೂಲತತ್ತ್ವದಲ್ಲಿ ಸತ್ತ್ವ, ರಜಸ್ಸು, ತಮಸ್ಸು- ಎಂಬ

ಮೂರು ಗುಣಗಳು ಇರುವವೆಂದೂ ಆ ಗುಣಗಳು ಲೋಕದಲ್ಲಿರುವ ಎಲ್ಲಾ ಪದಾರ್ಥಗಳಲ್ಲಿಯೂ ಬೇರೆಬೇರೆಯ ಪ್ರಮಾಣಗಳಿಂದ ಇರುವವೆಂದೂ ಕಲ್ಪಿಸಿರುತ್ತಾರೆ. ನಮ್ಮ ಶರೀರ, ಇಂದ್ರಿಯಗಳು, ಮನಸ್ಸು-ಇವುಗಳೆಲ್ಲೆಲ್ಲ ಈ ಪ್ರಕೃತಿಯ ಗುಣಗಳು ಹಾಸುಹೊಕ್ಕಾಗಿ ಹೆಣೆದುಕೊಂಡಿರುವವು. ನೇಯ್ಗೆಯವನು ಮೂರು ಬಗೆಯ ಬಣ್ಣದ ನೂಲುಗಳಿಂದ ನೇಯುವ ಬಟ್ಟೆಗಳು ಆ ನೂಲುಗಳ ಪರಿಣಾಮದಿಂದಲೂ ರಚನಾವಿಶೇಷದಿಂದಲೂ ಬೇರೆಬೇರೆಯ ಮಾದರಿಯವಾಗಿರಬಹುದಲ್ಲವೆ? ಕೆಲವು ವಸ್ತ್ರಗಳಲ್ಲಿ ಕೆಂಪು ನೂರು ಹೆಚ್ಚಾಗಿರಬಹುದು; ಕೆಲವು ವಸ್ತ್ರಗಳಲ್ಲಿ ಕಪ್ಪುನೂಲು ಹೆಚ್ಚಾಗಿರಬಹುದು; ಮತ್ತೆ ಕೆಲವು ವಸ್ತ್ರಗಳಲ್ಲಿ ಬಿಳಿಯ ನೂಲೇ ಹೆಚ್ಚಾಗಿರಬಹುದು. ಇಷ್ಟೇ ಅಲ್ಲ. ಕೆಂಪು, ಬಿಳಿದು, ಕರಿದು-ಈ ನೂಲುಗಳನ್ನು ಒಂದರಪಕ್ಕದಲ್ಲೊಂದನ್ನು ಬಗೆಬಗೆಯ ಪ್ರಕಾರದಿಂದ ಬೇರೆಬೇರೆಯ ಪರಿಮಾಣದಲ್ಲಿ ಜೋಡಿಸುವದರಿಂದಲೂ ಮಾದರಿಗಳ ಸಂಖ್ಯೆಯು ಹೆಚ್ಚಬಹುದಲ್ಲವೆ? ಹೀಗೆಯೇ ಈ ಮೂರು ಗುಣಗಳು ಬಗೆಬಗೆಯ ಅಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವಸ್ತುಗಳಿಗೆ ಕಾರಣವಾಗಿರಬಹುದಾಗಿದೆ. ಆದ್ದರಿಂದ ಎಲ್ಲೆಲ್ಲಿ ಯಾವಯಾವ ಪ್ರವೃತ್ತಿವಿಶೇಷವು ಕಂಡರೂ ಅದೆಲ್ಲ ಗುಣಗಳ ವ್ಯಾಪಾರವೆಂದೇ ಹೇಳಬಹುದಾಗುತ್ತದೆ. ಮನುಷ್ಯದೇಹವೂ ಹೀಗೆಯೇ ಗುಣಗಳ ಕಾರ್ಯವೇ ಆಗಿರುವದರಿಂದ ಮನುಷ್ಯನು ಈ ಪ್ರಕೃತಿಜನ್ಯವಾದ ಗುಣಗಳಿಗೆ ಪರವಶನಾಗಿ ತಾನು ಒಲ್ಲೆನೆಂದರೂ ಏನಾದರೊಂದು ಕರ್ಮವನ್ನು ಮಾಡುತ್ತಿರುವ ನೆಂಬುದರಲ್ಲೇನೂ ಆಶ್ಚರ್ಯವಿಲ್ಲ.

ಈಗ ಒಂದು ವಿಚಾರವು ಅವಶ್ಯವಾಗುತ್ತದೆ. ಲೋಕತ್ರಯದಲ್ಲಿರುವದೆಲ್ಲವೂ ಗುಣತ್ರಯವೇ ಆದರೆ, ಜೀವನು ಯಾವ ಲೋಕದಲ್ಲಿ ಜನಿಸಿದರೂ ಈ ಗುಣತ್ರಯಗಳ ಪ್ರಭಾವವು ಅವನಮೇಲೆ ಆಗಿಯೇತೀರುತ್ತದೆಯೆಂದಾಯಿತಷ್ಟೆ. ಹಾಗಾದರೆ ಜೀವನಿಗೆ ಸ್ವಾತಂತ್ರ್ಯವೆಲ್ಲಿಯದು? ಜೀವನು ಕರ್ಮಗಳಿಗೆ ಅಧಿಕಾರಿಯು, ಉಪಾಸನೆಗಳಿಗೆ ಅಧಿಕಾರಿಯು, ಜ್ಞಾನಕ್ಕೆ ಅಧಿಕಾರಿಯು ಎಂದು ಶಾಸ್ತ್ರದಲ್ಲಿ ವರ್ಣಿಸಿರುತ್ತದೆ. ಇಂಥ ಕರ್ಮಗಳನ್ನು ಮಾಡಬೇಕು, ಇಂಥ ಕರ್ಮವನ್ನು ಬಿಡಬೇಕು; ಹೀಗೆ ಉಪಾಸನೆಯನ್ನು ಮಾಡಿದರೇ ಫಲವುಂಟಾಗುವದು; .ತತ್ತ್ವವಿಚಾರವನ್ನು ಹೀಗೆ ಮಾಡಿದರೇ ಜ್ಞಾನವುಂಟಾಗುವದು- ಎಂದಲ್ಲವೆ, ಶಾಸ್ತ್ರಗಳೂ ಗುರುಗಳೂ ಹೇಳಿಕೊಡುತ್ತಾರೆ? ಆದರೆ ಪ್ರತಿಯೊಬ್ಬನೂ ಈ ಗುಣಗಳಿಗೆ ವಶನಾಗಿಯೇ ಕರ್ಮಗಳನ್ನು ಮಾಡುತ್ತಿರುವನಾದರೆ, ಅವನಿಗೆ ಸ್ವಾಂತಂತ್ರ್ಯವೆಲ್ಲಿಯದು? ಇಂಥ ಕರ್ಮವನ್ನು ಮಾಡಬೇಕು, ಇಂಥ ಕರ್ಮವನ್ನು ಮಾಡಬಾರದು-ಎಂಬ ಉಪದೇಶದಂತೆ ನಡೆಯುವದಕ್ಕೆ ಜೀವನಿಗೆ ಸ್ವಾತಂತ್ರ್ಯವೇ ಇಲ್ಲದಿದ್ದರೆ, ಶಾಸ್ತ್ರಾಚಾರ್ಯರ ಉಪದೇಶಗಳಿಗೆ ಅವಕಾಶವೆಲ್ಲಿ?

ಈ ಶಂಕೆಗೆ ಉತ್ತರವನ್ನು ಕಂಡುಕೊಳ್ಳುವವರು ಒಂದು ವಿಷಯವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಸಾಗರವನ್ನು ನೋಡಿರಿ. ಆ ಸಾಗರವು ಎಲ್ಲಿಗೆ ಹೋಗುತ್ತಿದೆ? ಎಂಬ ಪ್ರಶ್ನೆಗೆ ಅವಕಾಶವಿಲ್ಲ; ನದಿಗಳೆಲ್ಲವೂ ಪೂರ್ವಕ್ಕೋ ಪಶ್ಚಿಮಕ್ಕೋ

ಹರಿಯುತ್ತಿರುವಂತೆ ಸಾಗರವೇನೂ ಹರಿಯುವ ಜಲಾಶಯವಲ್ಲ. ಅದು ಮೇರೆದಪ್ಪದೆ ತನ್ನಲ್ಲಿತಾನು ನಿಂತೇ ಇರುತ್ತದೆ. ಅಲ್ಲವೆ? ಆದರೂ ಆ ಸಾಗರದಲ್ಲಿ ಕೆಲವು ಪ್ರವಾಹಗಳು ಇರುತ್ತವೆ ಎಂದು ಭೂಗೋಲತತ್ತ್ವಜ್ಞರು ಕಂಡುಹಿಡಿದಿರುತ್ತಾರೆ. ಜಪಾನುದೇಶದ ಬಳಿ ಶಾಂತಿಸಾಗರದಲ್ಲಿ ಒಂದು ಶೀತೋದಕಪ್ರವಾಹವು ಇದೆಯಂತೆ; ಹೀಗೆಯೇ ಯೂರೋಪು ಅಮೆರಿಕಖಂಡಗಳ ನಡುವೆ ಇರುವ ಸಾಗರದಲ್ಲಿ ಒಂದು ಉಷ್ಣೋದಕಪ್ರವಾಹವಿದೆಯಂತೆ. ಅಚಲವಾಗಿರುವ ಕಡಲಿನಲ್ಲಿ ಚಲನಸಹಿತವಾದ ಪ್ರವಾಹಗಳು ಇರುವಂತೆಯೇ ಮೂರು ಗುಣಗಳ ರಾಶಿಯಾಗಿರುವ ಜಗತ್ತಿನಲ್ಲಿಯೂ ಗುಣಪ್ರವಾಹಗಳು ಇರುತ್ತವೆ. ಇಂದ್ರಿಯಗಳು, ಮನಸ್ಸು- ಎಂಬೀ ಗುಣಗಳು ವಿಷಯಗಳೆಂಬ ಗುಣಗಳ ವಿಕಾರಗಳ ಕಡೆಗೆ ಹರಿಯುತ್ತಿರುತ್ತವೆ. ಈ ಇಂದ್ರಿಯವ್ಯಾಪಾರಗಳನ್ನೂ ಮನೋವ್ಯಾಪಾರವನ್ನೂ ಜೀವನು ಪ್ರಯತ್ನಪೂರ್ವಕವಾಗಿ ಒಂದು ವಿಷಯದಿಂದ ಹಿಂತಿರುಗಿಸಿಕೊಂಡು ಮತ್ತೊಂದು ವಿಷಯದ ಕಡೆಗೆ ಬಿಡುತ್ತಲಿದಾನೆ. ಈ ಶರೀರೇಂದ್ರಿಯಸಂಘಾತವು ನಾನು ಅಥವಾ ನನ್ನದು; ಇದರ ಅನುಕೂಲತೆಗಾಗಿ ನಾನು ಇವುಗಳ ವ್ಯಾಪಾರಗಳನ್ನು ಮುನ್ನಡೆಯಿಸುವದಕ್ಕೂ ಹಿಂಜಗ್ಗುವದಕ್ಕೂ ಸ್ವತಂತ್ರನಾಗಿರುತ್ತೇನೆ ಎಂದು ಒಬ್ಬೊಬ್ಬ ಜೀವನೂ ತಿಳಿದುಕೊಂಡಿರುತ್ತಾನೆ. ಆಯಾ ಪ್ರಯತ್ನಪೂರ್ವಕವಾದ ವ್ಯಾಪಾರಕ್ಕೇ ಇಲ್ಲಿ "ಕರ್ಮ" ಎಂಬ ಹೆಸರನ್ನು ಕೊಟ್ಟಿದೆ. ಯಾವನೊಬ್ಬನೂ ಒಂದು ಕ್ಷಣವೂ ಕರ್ಮವನ್ನು ಮಾಡದೆ ಇರುವದಿಲ್ಲ; ಯಾವದಾದರೊಂದು ವಿಷಯದ ಕಡೆಗೆ ಒಲಿಯುವ ಕರ್ಮವನ್ನೋ ಯಾವದಾದರೊಂದು ವಿಷಯದ ಕಡೆಯಿಂದ ಹಿಮ್ಮೆಟ್ಟುವ ಕರ್ಮವನ್ನೋ ಮಾಡುತ್ತಲೇ ಇರುವನು. ಇದು ಜೀವನ ಸ್ವಭಾವವು; ಪ್ರಕೃತಿಯ ಗುಣಗಳಿಂದ ಉಂಟಾಗುವ ಇಂದ್ರಿಯಮನೋವ್ಯಾಪಾರಗಳನ್ನೂ ಶರೀರದ ವ್ಯಾಪಾರವನ್ನೂ ಹೀಗೆ ಮಾಡುತ್ತಲೂ ಬಿಡುತ್ತಲೂ ಇದಾನಲ್ಲ, ಇದು ಅವನವನ ಸ್ವಭಾವವು. ಪ್ರಕೃತಿಯ ಗುಣಗಳು ಹೀಗೆ ಅವನನ್ನು ಸೆರೆಯಾಳಿನಂತೆ ಹಿಡಿದುಕೊಂಡು ಯಾವದಾದರೊಂದು ಕರ್ಮದಲ್ಲಿ ತೊಡಗಿಸುತ್ತಲೂ ಯಾವದಾದರೊಂದು ಕರ್ಮದಿಂದ ಹಿಮ್ಮೆಟ್ಟಿಸುತ್ತಲೂ ಇರುವವು. ಹೀಗೆ ತೊಡಗುವದಕ್ಕೆ ರಾಗದ್ವೇಷಗಳೆಂಬ ಗುಣವ್ಯಾಪಾರಗಳೇ ಪ್ರಯೋಜಕಗಳು. ಆದ್ದರಿಂದಲೇ ಭಗವಂತನು ಒಂದು ಕಡೆಯಲ್ಲಿ ಹೀಗೆಂದಿರುತ್ತಾನೆ:

**ಒಂದೊಂದು ಇಂದ್ರಿಯಕ್ಕೂ ತನ್ನತನ್ನ ಅರ್ಥದಲ್ಲಿ ರಾಗದ್ವೇಷಗಳು ಇದ್ದುಕೊಂಡಿರುವವು. ವಿವೇಕಿಯಾದವನು ಅವಕ್ಕೆ ವಶನಾಗಬಾರದು. ಏಕೆಂದರೆ ಅವೇ ಇವನಿಗೆ ಸನ್ಮಾರ್ಗದಲ್ಲಿ ಅಡ್ಡಬರುವ ಎಡರುಗಳು.** – ಗೀ. 3-34.

ಈಗ ಇಷ್ಟು ಸಿದ್ಧವಾಯಿತು : ಗುಣಗಳು ಇದ್ದಂತಿರದೆ ಬಗೆಬಗೆಯ ಆಕಾರಗಳನ್ನು ಪಡೆದುಕೊಳ್ಳುತ್ತಿರುವವು. ಹೊರಗೆ ವಿಷಯಗಳೂ ಒಳಗೆ ಮನ ಇಂದ್ರಿಯಗಳೂ

ಮಾರ್ಪಡುತ್ತಲೇ ಇರುವದು ಗುಣಗಳಿಗೆ ಸಹಜವಾದ ಸ್ವಭಾವವು. ಈ ಇಂದ್ರಿಯಮನಸ್ಸುಗಳು ಆಯಾ ವಿಷಯದಲ್ಲಿ ರಾಗದಿಂದಲೋ ದ್ವೇಷದಿಂದಲೋ ಮುಂಬರಿಯುವದೂ ಹಿಂಜರಿಯುವದೂ ಸ್ವಾಭಾವಿಕವಾಗಿರುತ್ತದೆ. ಆದರೆ ವಿವೇಕಿಯಾದವರಿಗೆ ಈ ರಾಗದ್ವೇಷಗಳೆಂಬ ಗುಣಕಾರ್ಯಗಳಿಗೆ ವಶನಾಗದೆ ಇರುವದಕ್ಕೂ ಸ್ವಾತಂತ್ರ್ಯವುಂಟು. ಆ ಸ್ವಾತಂತ್ರ್ಯವನ್ನು ಉಪಯೋಗಿಸದೆ ಇರುವವನು ಅವುಗಳಿಗೆ ಪರವಶನಾಗಿ ರಾಗದ್ವೇಷಗಳಿಂದ ಪ್ರವೃತ್ತಿನಿವೃತ್ತಿರೂಪಕರ್ಮಗಳಲ್ಲಿ ತೊಡಗುತ್ತಿರುವನು. "ಇದು ಬೇಕು ಇದು ಬೇಡ; ಇದನ್ನು ಮಾಡುವೆನು, ಇದನ್ನು ಬಿಡುವೆನು" ಎಂಬುದೇ ಗುಣಪ್ರೇರಿತನಾದ ಜೀವನ ದಾಸ್ಯದ ಸಂಕೋಲೆಯು. "ಈ ಸಂಕೋಲೆಯನ್ನು ಕಡಿಯುವದಕ್ಕೆ ನಿನಗೆ ಅವಕಾಶವಿದೆ. ಹೀಗೆ ಹೀಗೆ ಕರ್ಮವನ್ನು ಮಾಡು, ಹೀಗೆ ಹೀಗೆ ಉಪಾಸನೆಯನ್ನು ಮಾಡು, ಹೀಗೆ ಹೀಗೆ ವಿಚಾರವನ್ನು ಮಾಡು" ಎಂದು ತಿಳಿಯಹೇಳುವದೇ ಶಾಸ್ತ್ರಾಚಾರ್ಯರ ಕೆಲಸವು.

"ಒಂದು ಕ್ಷಣವೂ ಜೀವನು ಕರ್ಮವನ್ನು ಮಾಡದೆ ಇರುವದಿಲ್ಲ" ಎಂಬ ವಾಕ್ಯಕ್ಕೆ ಈಗ ಅರ್ಥವಾಯಿತಷ್ಟೆ. ಸ್ವಭಾವದಿಂದಾಗುವ ಗುಣಗಳ ವ್ಯಾಪಾರಕ್ಕೆ ವಶನಾಗಿ ಜೀವನು ಕರ್ಮವನ್ನು ಮಾಡುತ್ತಲೇ ಇರುತ್ತಾನೆ. ಆದ್ದರಿಂದ "ನಾನು ಕರ್ಮವನ್ನು ಮಾಡುವದಿಲ್ಲ" ಎಂಬ ಸಂಕಲ್ಪವು ಮಿಥ್ಯಾಸಂಕಲ್ಪವು. ಕರ್ಮವನ್ನು ಮಾಡುವ ಇಂದ್ರಿಯಗಳನ್ನು ಬೇಕಾದರೆ ಬಿಗಿಹಿಡಿದುಕೊಳ್ಳಬಹುದು, ನಿಜ. ಆದರೆ ಹಾಗೆ ಬಿಗಿಹಿಡಿಯುವದೂ ಒಂದು ಕರ್ಮವೇ ಆಗಿರುತ್ತದೆ. ಕೆಲವರು ಕರ್ಮಸಂನ್ಯಾಸಮಾಡುತ್ತೇವೆಂದು ಹೇಳಿಕೊಳ್ಳುತ್ತಾರೆ; ಕರ್ಮೇಂದ್ರಿಯಗಳನ್ನು ಬಿಗಿಹಿಡಿದು ಕೂತುಕೊಳ್ಳುತ್ತಾರೆ. ಅವರ ಶರೀರವು ಚಲಿಸುವದಿಲ್ಲ, ಕೈಕಾಲುಗಳು ಕೆಲಸಮಾಡುವದಿಲ್ಲ, ನಾಲಗೆ ಮಾತನಾಡುವದಿಲ್ಲ; ಹೀಗೆ ಹೊರಕ್ಕೆ ಅವರು ಯಾವ ಕೆಲಸವನ್ನೂ ಮಾಡುವದಕ್ಕೆ ಒಪ್ಪದಿದ್ದರೂ ಗುಣತ್ರಯದ ದಾಸ್ಯದಿಂದ ಅವರು ಬಿಡುಗಡೆಯಾಗಿರುವದಿಲ್ಲ. ಒಳಗೆ ಮನಸ್ಸಿನ ವ್ಯಾಪಾರವು ನಡೆದೇ ಇರುತ್ತದೆ. ಅವರಿಗೆ ಇಂದ್ರಿಯಾರ್ಥಗಳ ಚಿಂತನೆಯು ಎಡೆಬಿಡದೆ ಮನಸ್ಸಿನಲ್ಲಿ ಸಾಗಿರುತ್ತದೆ. ಸಾಹುಕಾರನ ಮನೆಯಲ್ಲಿ ರಾತ್ರೆ ಮಲಗಿರುವ ಕಳ್ಳನು ನಿಜವಾಗಿ ಕಳವುಮಾಡದೆ ಇದ್ದರೂ ಅವನ ಮನಸ್ಸು "ಕೋಣೆಯಲ್ಲಿರುವ ಪೆಟ್ಟಿಗೆಯನ್ನು ಎಂದಿಗೆ ಒಡೆದೇನು? ಅಲ್ಲಿರುವ ನಗನಾಣ್ಯಗಳನ್ನು ಎಂದಿಗೆ ಎತ್ತಿಹಾಕಿಯೇನು?" ಎಂದುಮುಂತಾಗಿ ಚಿಂತಿಸುತ್ತಲೇ ಇರುವದಲ್ಲವೆ? ಹೀಗೆಯೇ ಈ ಮಿಥ್ಯಾಚಾರಿಗಳಾದ ಸಂನ್ಯಾಸಿಗಳಿಗೆ ಮನಸ್ಸಿನಲ್ಲಿ ವಿಷಯಚಿಂತನೆಯು ತಪ್ಪುವದೇ ಇಲ್ಲ. ಸಾಧುಗಳು, ಸಂನ್ಯಾಸಿಗಳು, ಬೈರಾಗಿಗಳು-ಮುಂತಾದವರನ್ನು ಕಂಡರೆ ಪೋಲೀಸಿನವರು ಸಂಶಯಗ್ರಸ್ತರಾಗಿ ಪರೀಕ್ಷಿಸುತ್ತಿರುವದಕ್ಕೆ ಇಂಥ ಮಿಥ್ಯಾತ್ಯಾಗಿಗಳೇ ಕಾರಣ.

ಹಾಗಾದರೆ ಕರ್ಮೇಂದ್ರಿಯಗಳ ಪಟ್ಟಿನಿಂದ ಬಿಡುಗಡೆಹೊಂದುವದು ಹೇಗೆ?– ಎಂದು ನೀವು ಕೇಳಬಹುದು. ಕುಸ್ತಿಯಾಡುವವರಲ್ಲಿ ಒಬ್ಬನು ಸುಮ್ಮನೆ ಇದ್ದುಬಿಟ್ಟರೆ ಎದುರಾಳಿಯು ಸುಲಭವಾಗಿ ಅವನನ್ನು ಹಿಡಿದುಕೊಂಡು ಕೆಳಕ್ಕೆ ಕೆಡಹಿ ಬೆನ್ನನ್ನು ಮಣ್ಣಿಗೆ ಸೋಕಿಸುವದು ಖಂಡಿತ. ಇದರಂತೆ ಕರ್ಮೇಂದ್ರಿಯಗಳ ವ್ಯಾಪಾರವನ್ನು ಮಾಡದವರನ್ನು ಗುಣಗಳು ತಮ್ಮ ವಶಕ್ಕೆ ತೆಗೆದುಕೊಂಡು ಮನೋವ್ಯಾಪಾರಗಳಲ್ಲಿ ತೊಡಗಿಸುವದು ಖಂಡಿತ. ಆದರೆ ಹೊರಗೂ ಒಳಗೂ ಒಂದು ಬಗೆಯ ಕರ್ಮವನ್ನು ಮಾಡಿದರೆ, ಕರ್ಮೇಂದ್ರಿಯಗಳಿಂದ ನುಣುಚಿಕೊಳ್ಳುವದಕ್ಕೆ ಆಗುತ್ತದೆ. ಎದುರಿಗಿರುವ ಕುಸ್ತಿಯ ಜಟ್ಟಿಯು ಒಂದು ಬಗೆಯ ಪಟ್ಟನ್ನು ಹಾಕಿ ಹಿಡಿದುಕೊಳ್ಳುವನೆಂಬ ಕಲ್ಪನೆ ಬರುವಹೊತ್ತಿಗೆ ಸರಿಯಾಗಿ ಅವನನ್ನು ಮತ್ತೊಂದು ಕಡೆಯಿಂದ ಬೇರೊಂದು ಪಟ್ಟಿನಿಂದ ಹಿಡಿದುಕೊಳ್ಳುವ ಜಾಣನಾದ ಕುಸ್ತಿಗಾರನು ಹೇಗೆ ಸುಲಭವಾಗಿ ಪ್ರತಿಪಕ್ಷದವನಿಗೆ ವಶನಾಗನೋ ಹಾಗೆ ಕರ್ಮಯೋಗವೆಂಬ ಕೌಶಲದ ಕರ್ಮವನ್ನು ಅವಲಂಬಿಸುವ ಸಾರ್ಥಕನು ಕರ್ಮದ ಪಟ್ಟನ್ನು ಸುಲಭವಾಗಿ ಬಿಡಿಸಿಕೊಳ್ಳುವನು. ಅವನು ಹೊರಗಿನ ಇಂದ್ರಿಯಾರ್ಥಗಳ ವಿಲಾಸಕ್ಕೆ ಮರುಳಾಗಿ ಅವಕ್ಕೆ ವಶನಾಗದೆ ಇರುವನು. ಮುಂದೆ ಕ್ರಮಕ್ರಮವಾಗಿ ಯಾವದೊಂದು ಕರ್ಮವನ್ನೂ ಮಾಡದೆ ಇರುವದೆಂಬ ಪರಮಾರ್ಥಕರ್ಮಸಂನ್ಯಾಸಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವನು. ಆದ್ದರಿಂದಲೇ ಭಗವಂತನು ಹೀಗೆಂದು ಉಪದೇಶಿಸಿರುತ್ತಾನೆ :

**ಕರ್ಮಗಳನ್ನು ಮಾಡದೆ ಇದ್ದಮಾತ್ರದಿಂದ ಪುರುಷನಿಗೆ ನೈಷ್ಕರ್ಮ್ಯವು ಲಭಿಸುವದಿಲ್ಲ. ಕರ್ಮಗಳನ್ನು ಸುಮ್ಮನೆ ಬಿಟ್ಟಮಾತ್ರದಿಂದ ಸಿದ್ಧಿಯನ್ನೂ ಪಡೆಯುವದಿಲ್ಲ.** –ಗೀತಾ 3–4

ಮೇಲಿನ ವಾಕ್ಯದಲ್ಲಿ ಕರ್ಮವನ್ನು ಬಿಟ್ಟರೆ ಸಿದ್ಧಿಯಾಗುವದಿಲ್ಲ, ಕರ್ಮಗಳನ್ನು ಮಾಡದೆ ಇರುವದರಿಂದ ನೈಷ್ಕರ್ಮ್ಯವು ದಕ್ಕುವದಿಲ್ಲ– ಎಂದಿರುವದರಿಂದ ಕರ್ಮಗಳನ್ನು ಮಾಡಿ ಸಿದ್ಧಿಯನ್ನು ಹೊಂದಲೂಬಹುದು, ನೈಷ್ಕರ್ಮ್ಯವನ್ನು ಪಡೆಯಲೂಬಹುದು– ಎಂದು ಅರ್ಥವಶದಿಂದ ಆಗುವದಷ್ಟೆ. ಯಾವ ಕರ್ಮವನ್ನು ಮಾಡುವದರಿಂದ ಸಿದ್ಧಿಯು ದೊರಕುತ್ತದೆ? ಯಾವ ಕರ್ಮವನ್ನು ಹೇಗೆ ಮಾಡುವದರಿಂದ ನಿಜವಾದ ನೈಷ್ಕರ್ಮ್ಯವು ದೊರಕುತ್ತದೆ?– ಎಂಬುದನ್ನು ತಿಳಿಸಿಕೊಡುವದೇ ಅಧ್ಯಾತ್ಮಶಾಸ್ತ್ರಗಳ ಉದ್ದೇಶವು. ಕೆಲವು ಕರ್ಮಗಳಿವೆ. ಅವನ್ನು ಸಂಗವಿಲ್ಲದೆ ಫಲಾಸಕ್ತಿಯಿಲ್ಲದೆ ಪರಮೇಶ್ವರನಿಗೆ ಅರ್ಪಿಸಿ ಮಾಡುತ್ತಾಬಂದರೆ ಮನುಷ್ಯನು ಕಾಲಕ್ರಮದಲ್ಲಿ ನೈಷ್ಕರ್ಮ್ಯಸಿದ್ಧಿಯನ್ನು ಪಡೆದು ಪರಮಾರ್ಥಸಂನ್ಯಾಸಿಯಾಗುತ್ತಾನೆ; ಅದರಿಂದ ಕೃತಕೃತ್ಯನೂ ಆಗುತ್ತಾನೆ– ಎಂದು ಅಧ್ಯಾತ್ಮಶಾಸ್ತ್ರಗಳೆಲ್ಲ ಉಪದೇಶಿಸುತ್ತಿವೆ. ಆ ಸಿದ್ಧಿಗಾಗಿ ಪ್ರಯತ್ನಿಸುವದೇ ವಿವೇಕಿಯಾದವನ ಕರ್ತವ್ಯವು.

# 4. ಜ್ಞಾನ ಸಾಧನಗಳು

## 4.1. ಇಕ್ಕಟ್ಟಿನ ಹಾದಿ

**ಅಣುಃಪಂಥಾ ವಿತತಃ ಪುರಾಣೋ ಮಾಂ ಸ್ಪೃಷ್ಟೋಽನುವಿತ್ತೋ ಮಯ್ಯೈವ ।**
**ತೇನ ಧೀರಾಃ ಅಪಿಯಂತಿ ಬ್ರಹ್ಮವಿದಃ ಸ್ವರ್ಗಂ ಲೋಕಮಿತ ಊರ್ಧ್ವಂ**
**ವಿಮುಕ್ತಾಃ ॥ (ಬೃ. 4–4–8)**

ವಾಚಕಮಹಾಶಯರಿಗೆಲ್ಲ ನಾರಾಯಣಸ್ಮರಣೆ. ಅಧ್ಯಾತ್ಮಪ್ರಕಾಶದ ಇಪ್ಪತ್ತಾರನೆಯ ಸಂಪುಟವು ಪ್ರಾರಂಭವಾಗಿದೆ. ಈ ಹೊಸ ವರ್ಷದಿಂದ ಯಾವ ಬಗೆಯ ಸಂದೇಶಗಳು ಬರುವವೋ ಎಂದು ತಾವುಗಳು ಕುತೂಹಲದಿಂದೊಡಗೂಡಿರಬಹುದು. ಆದರೆ ಅಧ್ಯಾತ್ಮಮಾರ್ಗವು ಕಾಲದಲ್ಲಿ ಎಂದಿಗೂ ಹೊಸದಾಗಿ ಸಿಕ್ಕತಕ್ಕದ್ದಲ್ಲ. ಯಾವದು ಕಾಲದಲ್ಲಿ ಹೊಸದಾಗಿ ಸಿಕ್ಕುವದೋ ಅದು ಕಾಲಾನುಕಾಲಕ್ಕೆ ಹಳತಾಗಿ ಹೋಗಿಬಿಡುವದು. ಆದರೆ ಪರಮಾರ್ಥತತ್ತ್ವವು ಕಾಲದೇಶಗಳನ್ನು ಮೀರಿರುವದಾಗಿದೆ. ಆದ್ದರಿಂದ ಅದನ್ನು ಮುಟ್ಟುವದಕ್ಕೆ ಹೋಗುವ ದಾರಿಯು ಪುರಾಣವಾದದ್ದು; ಹಳೆಯದೇ, ಅಥವಾ ಕಾಲವನ್ನು ಮೀರಿ ಎಂದೆಂದಿಗೂ ಇದ್ದುಕೊಂಡಿರುವದೇ, ಆಗಿರುತ್ತದೆ. ಆ ದಾರಿಯಲ್ಲಿ ಹಿಂದೆ ಎಷ್ಟೋ ಜನರು ನಡೆದಿರುತ್ತಾರೆ, ಪರಮಾರ್ಥವನ್ನು ಮುಟ್ಟಿ ಆನಂದವನ್ನು ಪಡೆದುಕೊಂಡೂ ಇರುತ್ತಾರೆ. ಅದರ ವಿಷಯವನ್ನೇ ಈ ಮೊದಲನೆಯ ಸಂಚಿಕೆಯಲ್ಲಿ ತಮ್ಮ ಲಕ್ಷ್ಯಕ್ಕೆ ತರಬೇಕೆಂದು ಹೊರಟಿರುತ್ತೇನೆ.

ಈ ಸಂದೇಶಕ್ಕೆ ಬರೆದುಕೊಂಡಿರುವ ವೇದಮಂತ್ರವು ಬೃಹದಾರಣ್ಯಕೋಪನಿಷತ್ತಿನಲ್ಲಿರುತ್ತದೆ. ಒಬ್ಬಾನೊಬ್ಬ ಋಷಿಯು ಪರಮಪುರುಷಾರ್ಥಕ್ಕೆ ಅನುಸರಿಸಬೇಕಾಗಿರುವ ಈ ಮೋಕ್ಷಮಾರ್ಗವನ್ನು ಕುರಿತು ಹೀಗೆಂದಿರುತ್ತಾನೆ : ಇದೊಂದು ಇಕ್ಕಟ್ಟಿನ ಹಾದಿಯು. ಇದರಲ್ಲಿ ಅನೇಕರು ನಡೆನಡೆದು ದಾರಿಯು ಸವೆದಿರಬಹುದು; ಆದ್ದರಿಂದ ಈಗ ಅದನ್ನನುಸರಿಸುವವರಿಗೆ ಅದು ಬಹಳ ಸುಪಥವಾಗಿರಬಹುದು–ಎಂದು ಯೋಚಿಸಿಕೊಳ್ಳಬೇಡಿರಿ. ಏಕೆಂದರೆ ಮಿಕ್ಕ ಹಾದಿಗಳಂತೆ ಅದು ಮಹಾಜನವು ನಡೆಯುವದಕ್ಕೆಂದು ಮೊದಲೇ ತಯಾರಾಗಿರುವದಲ್ಲ. ಪ್ರತಿಯೊಬ್ಬನೂ ತಾನುತಾನೇ ಮಾಡಿಕೊಂಡು ನಡೆಯಬೇಕಾದ ಮಾರ್ಗವದು. ಮೂಲದಲ್ಲಿ "ಪನ್ಥಾಃ" (ಹಾದಿ) ಎಂದಿರುವದರಿಂದ ಅದು ಬಹಳ ವಿಶಾಲವಾಗಿರುವ ರಾಜಮಾರ್ಗವಲ್ಲ ಎಂಬುದನ್ನು ಸೂಚಿಸಿದಂತೆ ಆಗಿರುತ್ತದೆ. ಈ ಹಾದಿಯು ಬಹಳ ಇಕ್ಕಟ್ಟಾಗಿರುತ್ತದೆ; ಅದರಲ್ಲಿ ಎರಡುಮೂರು ಜನರು ಸೇರಿ ಒಟ್ಟಿಗೆ ನಡೆಯುವಷ್ಟು ಅವಕಾಶವಿರುವದಿಲ್ಲ. ಅದರಲ್ಲಿ

ಹೋಗುವವರು ತಾವು ಒಬ್ಬರೇ ನಡೆಯಬೇಕಾಗುತ್ತದೆ. ಲೋಕದಲ್ಲಿ ಧನಬಲ, ಜನಬಲ, ತಪೋಬಲ-ಮುಂತಾದವುಗಳನ್ನು ಸಂಪಾದಿಸಿಕೊಂಡವರು ದೊಡ್ಡದೊಡ್ಡ ಸುಗಮವಾದ ದಾರಿಗಳನ್ನು ಸಂಪಾದಿಸಿಕೊಳ್ಳಬಹುದು. ಈಗಿನ ಕಾಲದಲ್ಲಿ ಬೈಸಿಕಲ್ಲು, ಮೋಟಾರು, ರೈಲು, ಏರೋಪ್ಲೇನ್ (ವಾಯುವಿಮಾನ)-ಮುಂತಾದ ಯಾನಗಳನ್ನು ತಮ್ಮ ತಮ್ಮ ಸಾಧನಸಂಪತ್ತಿಗೆ ಅನುಗುಣವಾಗಿ ಏರ್ಪಡಿಸಿಕೊಂಡು ಶೀಘ್ರವಾಗಿ ಪ್ರಯಾಣಮಾಡುವದಕ್ಕೆ ಹವಣಿಸುತ್ತಾರೆಂಬುದು ನಿಮಗೆಲ್ಲ ತಿಳಿದಿದೆ. ಆದರೆ ಈ ಹಾದಿಯಲ್ಲಿ ರಾಜನು ರಂಕನು, ಧನವಂತನು ಕಡು ಬಡವನು, ಬಲವಂತನು, ನಿರ್ಬಲನು, ಗಂಡಸು ಹೆಂಗಸು-ಯಾರೇ ಆಗಲಿ, ಹಾಗೆ ಹೆಚ್ಚಿನ ಸೌಕರ್ಯವನ್ನು ಮಾಡಿಕೊಳ್ಳುವದಕ್ಕೆ ಬರುವದಿಲ್ಲ. ಇದು "ಅಣುಃ ಪನ್ಥಾಃ" ಇಕ್ಕಟ್ಟಿನ ಹಾದಿ; ಇದರಲ್ಲಿ ಹೋಗಬೇಕಾದರೆ ಒಬ್ಬೊಬ್ಬರೇ ನಡೆಯಬೇಕು.

ಹಾದಿಯು ಚಿಕ್ಕದಾದರೇನು? ಅದರಲ್ಲಿ ನಡೆಯುವದಕ್ಕೇನೂ ಆತಂಕವಿಲ್ಲದಿದ್ದ ರಾಯಿತು-ಎಂದು ನೀವು ಅಂದುಕೊಳ್ಳಬಹುದು. ಆದರೆ ನಿಜವು ಹಾಗಿಲ್ಲ. ಮತ್ತೊಂದು ಉಪನಿಷತ್ತಿನಲ್ಲಿ ಈ ಹಾದಿಯನ್ನು ಹೀಗೆಂದು ವರ್ಣಿಸಿದೆ; "ಹರಿತಮಾಡಿದ ಕ್ಷೌರದಕತ್ತಿಯ ಅಲುಗಿನಮೇಲೆ ನಡೆಯುವದು ಎಷ್ಟು ಕಷ್ಟವೋ ನಡೆಯುವದಕ್ಕೆ ಅಷ್ಟು ಕಷ್ಟವಾಗಿರುವ ದುರ್ಗಮವಾಗಿರುವ ಹಾದಿಯದು ಎಂದು ಬಲ್ಲವರು ಹೇಳುತ್ತಾರೆ" (ಕ. 1-3-14) ಅದರಲ್ಲಿ ನಡೆಯುವದು ಇಷ್ಟು ಕಷ್ಟವಾಗಿರುವದಕ್ಕೆ ಕಾರಣವೇನೆಂದರೆ ಅದು ಹೊರಗಿನ ದಾರಿಗಳಂತೆ ಕಾಲಿನಿಂದ ನಡೆಯತಕ್ಕದ್ದಲ್ಲ; ಅತ್ಯಂತ ಸೂಕ್ಷ್ಮವಾದ ಪರಮಾರ್ಥವಸ್ತುವನ್ನು ಕಂಡುಕೊಳ್ಳುವ ಜ್ಞಾನಮಾರ್ಗವದು.

ಈ ಹಾದಿಯನ್ನು ಬಿಟ್ಟು ಮತ್ತೊಂದನ್ನು ಸ್ವೀಕರಿಸೋಣವೆ?- ಎಂದು ಯೋಚಿಸುವದಕ್ಕಿಲ್ಲ. ಏಕೆಂದರೆ ಒಬ್ಬ ಋಷಿಯು ಹೀಗೆಂದಿರುತ್ತಾನೆ : "ಕತ್ತಲೆಯನ್ನು ಮೀರಿರುವ ಸೂರ್ಯನಂತೆ ಥಳಥಳಿಸುತ್ತಿರುವ ಈ ಪುರುಷನನ್ನು ನಾನು ಅರಿತುಕೊಂಡಿರುತ್ತೇನೆ. ಆತನನ್ನೇ ಅರಿತುಕೊಂಡರೆ ಮೃತ್ಯುವಿನಾಚೆಗೆ ಹೋಗುತ್ತಾರೆ; ಇಲ್ಲದಿದ್ದರೆ ಆ ಅಮೃತತತ್ವವನ್ನು ಹೊಂದುವದಕ್ಕೆ ಬೇರೆಯ ಹಾದಿಯೇ ಇಲ್ಲ!" (ಶ್ವೇ. 3-8). ಈಗ ನಾವು ಇರುವದು ಅಜ್ಞಾನದ ಕತ್ತಲೆಯ ಹಾದಿಯಲ್ಲಿ; ಈ ಹಾದಿಯಲ್ಲಿ ನಡೆದರೆ ಮೃತ್ಯುವಿನ ಬಾಯಿಗೆ ಬೀಳುವದು ಕಡುಖಂಡಿತ. ಮೃತ್ಯುವನ್ನು ದಾಟಿ ಅಮೃತತ್ವವನ್ನು ಪಡೆಯಬೇಕಾದರೆ, ಮರ್ತ್ಯರಾಗಿರುವ ನಾವುಗಳು ಅಮರರೂ ಅಮೃತರೂ ಎನ್ನಿಸಿಕೊಳ್ಳಬೇಕಾದರೆ, ಆ ಪರಮಾತ್ಮನೆಂಬ ನಿತ್ಯಪ್ರಕಾಶರೂಪನಾದ ಸೂರ್ಯನನ್ನು ಕಂಡುಕೊಳ್ಳಬೇಕು. ಅದಲ್ಲದೆ ಮತ್ತೊಂದು ಹಾದಿಯೇ ಇರುವದಿಲ್ಲ.

ಈ ಜ್ಞಾನವೆಂಬ ಹಾದಿಯು ಇಕ್ಕಟ್ಟಾಗಿದೆ, ಅದರಲ್ಲಿ ನಡೆಯುವದು ಬಲು ಕಷ್ಟ-ಎಂದು ಹೇಳಿದ್ದಾಗಿದೆಯಷ್ಟೆ? ಆದರೆ ಅದರಲ್ಲಿ ಒಂದು ವಿಶೇಷವಿದೆ. ಮೊದಲು

ನಡೆಯುವದಕ್ಕೆ ಸುಲಭವಾಗಿ ಕಾಣುವ ಎಷ್ಟೋ ಹಾದಿಗಳು, ಅನೇಕ ವೇಳೆಗಳಲ್ಲಿ ಕೊನೆಗೆ ಎಲ್ಲಿಯೋ ತಟ್ಟನೆ ಅಲ್ಲಿಗೇ ನಿಂತುಬಿಡುವವು; ಅಥವಾ ಅವು ಮುಂದುವರಿದರೂ ಕೊನೆಗೆ ಯಾವದೋ ಒಂದು ಕೊರಕಲಿಗೆ ಹೋಗಿಬಿಡಬಹುದು, ಅಥವಾ ಯಾವದಾದರೊಂದು ಆಳವಾದ ಗುಂಡಿಗೆ ಕೆಡವಿಬಿಡಬಹುದು. ಈ ಜ್ಞಾನಮಾರ್ಗವು ಅಂಥದ್ದಲ್ಲ. ಇದು ಒಂದು ಸಲ ನಮಗೆ ದೊರಕಿತೆಂದರೆ ವಿತತವಾಗಿ-ಅತ್ತಲಾಗಿ ಇತ್ತಲಾಗಿ ಸೀಳು ಒಡೆದುಕೊಳ್ಳದೆ-ನಮ್ಮ ಗುರಿಯಾದ ಅಮೃತಸ್ವರೂಪನಾದ ಪರಮಾತ್ಮನನ್ನೇ ಮುಟ್ಟಿಸಿಬಿಡುತ್ತದೆ. ಮೂಲದಲ್ಲಿರುವ "ವಿತತಃ" ಎಂಬುದಕ್ಕೆ "ವಿತರಃ" ಎಂಬ ಪಾಠಾಂತರವೂ ಉಂಟು. ಆಗ ವಿಸ್ಪಷ್ಟವಾಗಿ ನಮ್ಮನ್ನು ಈ ಸಂಸಾರದ ಕಷ್ಟದಿಂದ ಆಚೆಗೆ ದಾಟಿಸಿಬಿಡುವ ಹಾದಿಯಿದು ಎಂದು ಅರ್ಥ. ಮೊದಲು ಕಷ್ಟವಾದರೂ ಕೊನೆಗೆ ನಿತ್ಯಸುಖವನ್ನು ಕೊಡುವ ಮಾರ್ಗವಿದಾದ್ದರಿಂದ ಅವಶ್ಯವಾಗಿ ಇದನ್ನು ಕಂಡುಹಿಡಿದುಕೊಂಡು ಕಷ್ಟಗಳನ್ನು ಸಹಿಸಿಕೊಂಡಾದರೂ ಮುಂದಕ್ಕೆ ಹೋಗುವ ಪ್ರಯತ್ನವನ್ನು ಮಾಡಬೇಕು ಎಂಬುದನ್ನು ಈ ವಿಶೇಷಣವು ತಿಳಿಸುತ್ತದೆ.

ಋಷಿಯು ತನ್ನ ಅನುಭವವನ್ನು ಹೀಗೆಂದು ವಿವರಿಸಿ ಹೇಳುತ್ತಿದ್ದಾನೆ : ಇಂಥ ಹಾದಿಯು ನನಗೆ ಹೇಗೋ ಬಂದು ತಗುಲಿತು; ನನಗೆ ಅದು ದೊರಕಿತಲ್ಲ, ನಾನೇ ಧನ್ಯ! ಯಾರುಯಾರಿಗೆ ಈ ದಾರಿಯು ದೊರಕುವದೋ ಅವರು ಧನ್ಯರಾಗುವರು.

ಇನ್ನೊಂದು ಮಾತು. ಈ ದಾರಿಯು ನನಗೆ ಹೇಗೋ ಪುಣ್ಯವಶದಿಂದ ದೊರಕಿತು ಎಂಬುದಲ್ಲದೆ "ನನಗೇ ಇದರ ಅರಿವಾಯಿತು"-ಎಂದು ಋಷಿಯು ಹೇಳುತ್ತಿದ್ದಾನೆ. ಮಿಕ್ಕ ಮಾರ್ಗಗಳು- ಕರ್ಮ, ಉಪಾಸನೆ ಮುಂತಾದ ಮಾರ್ಗಗಳೂ- ಶಾಸ್ತ್ರದಲ್ಲಿಯೇ ಹೇಳಿವೆ; ಅವುಗಳನ್ನೂ ಗುರುಗಳಿಂದ ತಿಳಿದುಕೊಳ್ಳಬಹುದು. ಆದರೆ ಇಲ್ಲಿ ಒಂದು ತಾರತಮ್ಯವುಂಟು. ಆ ಮಾರ್ಗಗಳ ಫಲವು ಕೊನೆಯವರೆಗೂ ಶ್ರದ್ಧಾಭಕ್ತಿಗಳಿಂದ ನಂಬತಕ್ಕದ್ದಾಗಿರುತ್ತದೆ. ಅವುಗಳ ಫಲವು ಅದೃಷ್ಟವು; ನಾವು ಅವನ್ನು ವಿಹಿತಕ್ರಮದಿಂದ ಮಾಡಿದ್ದರೆ ಅವುಗಳ ಫಲವು ದೇಹವನ್ನು ಬಿಟ್ಟ ಬಳಿಕ ಕಾಲಾಂತರದಲ್ಲಿ ದೇಶಾಂತರದಲ್ಲಿ ಆಗತಕ್ಕವುಗಳಾಗಿರುತ್ತದೆ. ಸದ್ಯಕ್ಕೆ ಅವುಗಳ ಹೆಚ್ಚುಗಾರಿಕೆಯನ್ನು ಶಾಸ್ತ್ರದಿಂದಲೂ ಗುರುಗಳಿಂದಲೂ ತಿಳಿದುಕೊಳ್ಳಬೇಕಾಗಿರುತ್ತದೆ; ಕುರುಡರು ಮತ್ತೊಬ್ಬರ ಕೈಯನ್ನು ಹಿಡಿದುಕೊಂಡು ನಡೆಯುವಂತೆ ಪರಾಧೀನವಾದ ಜ್ಞಾನದಿಂದ ಅಲ್ಲಿ ನಾವು ಮುನ್ನಡೆಯಬೇಕಾಗಿರುತ್ತದೆ. ಅವುಗಳನ್ನು ಮಾಡುವದರಿಂದ ಈ ಜನ್ಮದಲ್ಲಿಯೂ ಒಂದು ಬಗೆಯ ಹರ್ಷವಾಗುತ್ತದೆ. ಸ್ವೇಚ್ಛೆಯಿಂದ ತಪ್ಪುಹಾದಿಯಲ್ಲಿ ನಡೆಯುತ್ತಿದ್ದದ್ದರ ಅನರ್ಥದಿಂದ ಬಿಡುಗಡೆಯಾಗುತ್ತದೆ ನಿಜ. ಆದರೆ ಆ ಅನುಷ್ಠಾನಗಳ ಫಲವು ಇಲ್ಲಿಯೇ ಈ ಜನ್ಮದಲ್ಲಿಯೇ, ಆ ಶಾಸ್ತ್ರಾಚಾರ್ಯರ ವಚನವನ್ನು ಕೇಳಿದೊಡನೆಯೇ ನಮಗೆ

ಗೊತ್ತಾಗುವಂತಿರುವದಿಲ್ಲ. ಈ ಜ್ಞಾನ ಮಾರ್ಗದಲ್ಲಿ ಹಾಗಲ್ಲ. ಇದನ್ನು ಯಾವಯಾವನು ಶಾಸ್ತ್ರದೃಷ್ಟಿಯನ್ನೂ ಆಚಾರ್ಯರ ದೃಷ್ಟಿಯನ್ನೂ ಅನುಸರಿಸಿ ವಿಚಾರಮಾಡಿ ಪಡೆದು ಕೊಳ್ಳುವನೋ ಅವನಿಗೆ ಇಲ್ಲಿಯೇ ಈಗಲೇ ಅದರ ಅನುಭವವು–ಊಟಮಾಡಿದವನಿಗೆ ತೃಪ್ತಿಯ ಅನುಭವವು ಆಗಿಂದಾಗಲೇ ತೋರಿಬರುವಂತೆ–ತೋರಿಕೊಂಡುಬಿಡುತ್ತದೆ!

ಋಷಿಯು ಈ ಜ್ಞಾನವನ್ನು ಹೊಗಳಿರುವ ಬಗೆಯನ್ನು ಕೇಳಿರಿ : "ಈ ಮಾರ್ಗದಿಂದ ಬ್ರಹ್ಮಜ್ಞಾನಿಯು ಸ್ವರ್ಗಲೋಕಕ್ಕೆ ಹೋಗುತ್ತಾನೆ." ಈ ಜ್ಞಾನಮಾರ್ಗವು ಯಾವನೋ ಒಬ್ಬ ಋಷಿಗೆ ಮಾತ್ರ ದಕ್ಕಿತು, ನಮಗೆ ಹೇಗೆ ದೊರಕೀತು!–ಎಂದು ಶಂಕಿಸಬೇಡಿರಿ. ಈ ಮಾರ್ಗವನ್ನು ಕಂಡುಕೊಂಡ ಬ್ರಹ್ಮಜ್ಞಾನಿಯು ಯಾವನಾದರೂ–ದೇವತೆಗಳು, ಋಷಿಗಳು ಮುಂತಾದ ಮಹಾನುಭಾವರು ಮಾತ್ರವೇ ಅಲ್ಲ, ಮನುಷ್ಯರುಕೂಡ–ಸ್ವರ್ಗಲೋಕಕ್ಕೆ ಹೋಗಬಹುದು. ಈಗಿನಿಂದ ನೀವು ಪ್ರಯತ್ನಪಟ್ಟರೆ ನಿಮಗೂ ಆ ಲೋಕವು ಅವಶ್ಯವಾಗಿ ಸಿಕ್ಕುತ್ತದೆ; ಬ್ರಹ್ಮಜ್ಞಾನವಿದ್ದರಾಯಿತು, ಅವರಿಗೆ ಫಲವು ಸಿಕ್ಕಿಬಿಡುತ್ತದೆ. ಅವರು ಅದಕ್ಕಿಂತ ಮೊದಲು ದೇವತೆಗಳು, ಋಷಿಗಳು–ಮುಂತಾದವರ ಹಾಗೆ ಮಹಾವೀರ್ಯರಾಗಿಯೇ ಇದ್ದಿರಬೇಕೆಂಬ ನಿಯಮವೇನೂ ಇಲ್ಲ.

ಬ್ರಹ್ಮಜ್ಞಾನದಿಂದ ಸ್ವರ್ಗವನ್ನು ಪಡೆಯುತ್ತಾರೆ ಎಂದು ಮಂತ್ರದಲ್ಲಿದೆ. ಇದಲ್ಲದೆ "ಇನ್ನುಮೇಲೆ", ಈ ಶರೀರವನ್ನು ಬಿಟ್ಟಮೇಲೆ, ಎಂದೂ ಇದೆ. ಆದ್ದರಿಂದ ಬ್ರಹ್ಮಜ್ಞಾನಕ್ಕೆ ಯಾವದೋ ಒಂದು ಪರಲೋಕದವು ಫಲವು. ಅದು ಸತ್ತಮೇಲೆ ಸಿಕ್ಕತಕ್ಕದ್ದು– ಎಂದು ತಿಳಿಯಬಾರದು. ಜ್ಞಾನದಿಂದ ಇಲ್ಲಿಯೇ ಮುಕ್ತರಾಗಿಬಿಡುತ್ತಾರೆ; ಸಂಸಾರದಲ್ಲಿ ಬಂಧಕಗಳಾಗಿರುವ ಕಾಮ, ಕ್ರೋಧ, ಲೋಭ, ಮೋಹ–ಮುಂತಾದ ದೋಷಗಳ ಕಟ್ಟಿನಿಂದ ಬಿಡುಗಡೆಹೊಂದಿಬಿಡುತ್ತಾರೆ. ಈ ಸ್ಥಿತಿಗೆ ಜೀವನ್ಮುಕ್ತಿ ಎಂದು ಹೆಸರು. ಬ್ರಹ್ಮಜ್ಞಾನಿಗಳು ಜ್ಞಾನಮಾತ್ರದಿಂದ ಇಲ್ಲಿಯೇ ಮುಕ್ತರಾಗಿ ಈ ಸ್ವರ್ಗಲೋಕಕ್ಕೆ ಹೋಗುತ್ತಾರೆ.

ಇಲ್ಲಿ "ಸ್ವರ್ಗ"ವೆಂಬ ಮಾತಿಗೆ ಅರ್ಥವೇನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವದು ಅವಶ್ಯ. ಸ್ವರ್ಗವೆಂಬ ಶಬ್ದಕ್ಕೆ ಸುಖ ಎಂದು ಸಾಮಾನ್ಯವಾದ ಅರ್ಥ. ಲೋಕ ವ್ಯವಹಾರದಲ್ಲಿ ಕೂಡ ಒಳ್ಳೆಯ ತಿಳಿವಳಿಕೆಯುಳ್ಳವರಾಗಿ ಒಳ್ಳೆಯ ನಡತೆಯುಳ್ಳವ ರಾಗಿರುವವರಿಗೆ ಐಹಿಕಸುಖವು ದೊರಕುವದು ನಮ್ಮ ಅನುಭವದಲ್ಲಿದೆ. ಆದರೆ ಸ್ವಾಭಾವಿಕವಾದ ಈ ಜ್ಞಾನಕರ್ಮಗಳ ಫಲವಾದ ಸುಖವು ಎಷ್ಟುಮಟ್ಟಿಗೆ ಎಷ್ಟುಕಾಲ ನಮಗೆ ಸುಖವಾಗಿಯೇ ಉಳಿದುಕೊಳ್ಳುವದೆಂಬುದನ್ನು ಭರವಸೆಯಿಂದ ಹೇಳುವದಕ್ಕೆ ಬರುವದಿಲ್ಲ. ಎಷ್ಟೋ ಸಲ ನಮ್ಮ ನಡೆನುಡಿಗಳ ಫಲಗಳು ಸದ್ಯಕ್ಕೆ ಅಮೃತದ ಹಾಗೆ ಸುಖಕರವಾಗಿ ತೋರಿಕೊಂಡು ಬರುಬರುತ್ತಾ ವಿಷದಂತೆ ದುಃಖದಲ್ಲಿ ಕೊನೆಗಾಣುವದೇ ಬಹಳ. ಆದ್ದರಿಂದ ಇದನ್ನು ಅಮೃತವೆನ್ನುವದಕ್ಕಿಂತ ಮೃತ್ಯುವೆಂದು ಕರೆಯುವದೇ ಮೇಲು

ಎಂದು ಶಾಸ್ತ್ರಕಾರರು ಭಾವಿಸಿರುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಲೌಕಿಕಸುಖವು ನಿಜವಾದ ಸ್ವರ್ಗವಾಗಲಾರದು; ಶಾಸ್ತ್ರೀಯದೃಷ್ಟಿಯನ್ನು ಅನುಸರಿಸಿ ಪಾಪವನ್ನು ಬಿಟ್ಟು ಪುಣ್ಯಕರ್ಮಗಳನ್ನು ಮಾಡಿ ಅದರಿಂದ ಪಡೆಯುವ ಸುಖವೇ ಸ್ವರ್ಗವು–ಎಂದು ಹೇಳಬೇಕಾಗುತ್ತದೆ. ವೇದದಲ್ಲಿ ಸ್ವರ್ಗವನ್ನು ಬಯಸುವವನು ಇಂಥಿಂಥ ಕರ್ಮವನ್ನು ಮಾಡಬೇಕು– ಎಂದು ಅಲ್ಲಲ್ಲಿ ಹೇಳಿರುವದು ತಿಳಿಯಬರುತ್ತದೆ. ಅಲ್ಲೆಲ್ಲ ಪರಲೋಕದಲ್ಲಿ ಸಿಕ್ಕುವ ಪುಣ್ಯಫಲಕ್ಕೇ "ಸ್ವರ್ಗ" ಎಂಬ ಹೆಸರನ್ನು ಕೊಟ್ಟಿರುತ್ತದೆ.

ವೇದದಲ್ಲಿ ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ಎರಡು ಮುಖ್ಯ ಭಾಗಗಳಿರುತ್ತವೆ. ಕರ್ಮಕಾಂಡದಲ್ಲಿ ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ಹೇಳಿರುತ್ತದೆ; ಈ ಶ್ರುತ್ಯುಕ್ತವಾದ ವರ್ಣಾಶ್ರಮಧರ್ಮಗಳಲ್ಲದೆ ಸ್ಮೃತಿಗಳಲ್ಲಿ ವಿಧಿಸಿರುವ ಕೆಲವು ಕರ್ಮಗಳೂ ಇವೆ. ಶ್ರುತಿ, ಸ್ಮೃತಿ, ಸದಾಚಾರ–ಈ ಮೂರನ್ನೂ ಅನುಸರಿಸಿ ಮಾಡಿದ ಕರ್ಮಗಳಿಂದ ಆಗುವ ಫಲಗಳನ್ನು ಸ್ವರ್ಗವೆಂದು ಕರೆಯುತ್ತಾರೆ. ಇದನ್ನು ಆಗಲೆ ತಿಳಿಸಿದ್ದಾಗಿದೆಯಷ್ಟೆ? ಆದರೆ ಜ್ಞಾನಕಾಂಡದಲ್ಲಿ ಕೆಲವು ಉಪಾಸನೆಗಳನ್ನು ಕೂಡ–ಧ್ಯಾನಮಾಡುವ ಮಾನಸಕರ್ಮಗಳನ್ನು ಕೂಡ–ಹೇಳಿರುತ್ತದೆ. ಈ ಉಪಾಸನೆಗಳು ಮಾನಸವೃತ್ತಿರೂಪವಾಗಿರುವದರಿಂದಲೂ ಮನಸ್ಸಿನಿಂದಲೇ ಅವುಗಳನ್ನು ಅನುಷ್ಠಾನಮಾಡುವ ಬಗೆಯನ್ನು ಅರಿತುಕೊಂಡು ಮನಸ್ಸಿನಿಂದಲೇ ಅವುಗಳನ್ನು ಮಾಡಬೇಕಾಗಿರುವದರಿಂದಲೂ ಅವುಗಳನ್ನು ವಿದ್ಯೆ ಎಂದೂ ಕರೆಯುವರು. ವೇದದಲ್ಲಿ ಹೇಳಿರುವ ಕೆಲವು ಉಪಾಸನೆಗಳನ್ನು ಕರ್ಮದ ಜೊತೆಯಲ್ಲಿ ಮಾಡುವದಕ್ಕೆ ಬರುತ್ತದೆ; ಕೆಲವನ್ನು ಕರ್ಮಗಳ ಹಂಗಿಲ್ಲದೆ ಸ್ವತಂತ್ರವಾಗಿಯೂ ಮಾಡಬೇಕಾದದ್ದಿರುತ್ತದೆ. ಈ ಉಪಾಸನೆಗಳಿಂದ ಸಿಕ್ಕುವ ಲೋಕವು ಕಾಮ್ಯಕರ್ಮಗಳಿಂದ ದೊರಕುವ ಲೋಕಕ್ಕಿಂತ ಹೆಚ್ಚಿನ ಸುಖವನ್ನು ಕೊಡುವದಾಗಿರುತ್ತದೆ. ಆ ಲೋಕಕ್ಕೆ ದೇವಲೋಕವೆಂದು ಹೆಸರು. ದೇವತೆಗಳು ಸ್ವಭಾವದಿಂದಲೇ ಕೆಲವು ಸಿದ್ಧಿಗಳನ್ನು ಪಡೆದವರಾಗಿರುತ್ತಾರೆ. ಅವರಿಗೆ ಸುಖವಿಹಾರಕ್ಕೆ ಅಡ್ಡಿಯು ಮನುಷ್ಯರಿಗಿರುವದಕ್ಕಿಂತಲೂ ಕಡಿಮೆಯಾಗಿರುತ್ತದೆಯಂತೆ. ಆದ್ದರಿಂದ ಯಾವಯಾವ ದೇವತೆಯನ್ನು ಉಪಾಸನೆಮಾಡಿ ಯಾವಯಾವ ದೇವತೆಯ ಸಾಲೋಕ್ಯವನ್ನಾಗಲಿ ಸಾಮೀಪ್ಯವನ್ನಾಗಲಿ ಸಾಯುಜ್ಯವನ್ನಾಗಲಿ ಪಡೆದು ಕೊಂಡಿರುವರೋ ಆಯಾ ದೇವತೆಯ ಸಿದ್ಧಿಗೆ ತಕ್ಕಂತೆ ಆಯಾ ಉಪಾಸಕರಿಗೆ ಅಪ್ರತಿಹತವಾದ ಸುಖವು ದೀರ್ಘಕಾಲದವರೆಗೆ ಸಿಕ್ಕುತ್ತದೆ. ಇಂಥ ದೇವಲೋಕಗಳಲ್ಲಿ ತೀರ ಉತ್ಕೃಷ್ಟಲೋಕಕ್ಕೆ ಬ್ರಹ್ಮಲೋಕ ಎಂದು ಹೆಸರು. ಈ ರೀತಿಯಿಂದ ಉಪಾಸನೆಗಳ ಮೂಲಕವಾಗಿ ಹೆಚ್ಚಿನ ಸುಖವನ್ನು ಬಹುಕಾಲದವರೆಗೆ ಪಡೆದುಕೊಳ್ಳಬಹುದಾಗಿರುವದರಿಂದ ಆ ಸುಖವನ್ನು ಹಿಂದೆ ಹೇಳಿದ ಕರ್ಮಲಭ್ಯವಾದ ಸುಖಕ್ಕೆ ಹೋಲಿಸಿದರೆ ಇನ್ನೂ ಹೆಚ್ಚಿನ "ಸ್ವರ್ಗ" ಎಂದು ಕರೆಯಬೇಕಾಗುವದು; ಅದು ಇನ್ನೂ ಹೆಚ್ಚಿನ ಅರ್ಥದಲ್ಲಿ

"ಅಮೃತತ್ವ"ವಾಗಿರುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿ "ಅವಿದ್ಯೆಯಿಂದ ಮೃತ್ಯುವನ್ನು ದಾಟಿ, ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾರೆ" ಎಂದು ಹೇಳಿದೆ. ಇಲ್ಲಿ ವಿದ್ಯೆ ಎಂದರೆ ಉಪಾಸನೆ, ಅವಿದ್ಯೆ-ಎಂದರೆ ಆ ಉಪಾಸನೆಗಿಂತ ಬೇರೆಯಾಗಿರುವ ಕರ್ಮ. ಕರ್ಮದಿಂದ ಲೌಕಿಕಸುಖದುಃಖ ರೂಪವಾದ ಮೃತ್ಯುವನ್ನು ಕಳೆದುಕೊಂಡು, ಉಪಾಸನೆಯಿಂದ ಅಮೃತತ್ವವನ್ನು, ಎಂದರೆ ಬಹುಕಾಲದವರೆಗೂ ನಾಶವಾಗದ ಸುಖವನ್ನು ಕೊಡುವ ಲೋಕವನ್ನು, ಪಡೆಯಬಹುದು ಎಂದು ಅರ್ಥ. "ಈ ಎರಡನೆಯ ಜಾತಿಯ ಸ್ವರ್ಗಲೋಕದಲ್ಲಿ ಅಂಜಿಕೆಯಿರುವದಿಲ್ಲ. ಯಮನ ಭೀತಿಯಿರುವದಿಲ್ಲ, ಮುಪ್ಪಿನಿಂದ ನರಳುವದಿರುವದಿಲ್ಲ; ಹಸಿವುಬಾಯಾರಿಕೆಗಳನ್ನು ದಾಟಿ ಶಾಶ್ವತವಾಗಿ ಸುಖದಿಂದ ವಿಹರಿಸುತ್ತಿರುತ್ತಾರೆ" ಎಂದು (ಕ. 1-1-12) ಶ್ರುತಿಯಲ್ಲಿ ಅದನ್ನು ಕೊಂಡಾಡಿರುತ್ತದೆ.

ಆದರೆ ಈವರೆಗೆ ವರ್ಣಿಸಿರುವ ಎರಡು ಸ್ವರ್ಗಗಳಿಗೂ ಕಾಲದ ಮಿತಿಯುಂಟು. ಪುಣ್ಯಕರ್ಮಗಳಿಂದ ಪಡೆದುಕೊಂಡ ಸ್ವರ್ಗವು ಆ ಪುಣ್ಯವು ಸವೆದಬಳಿಕ ತಪ್ಪಿ ಹೋಗುವದು. ಉಪಾಸನೆಯಿಂದ ಪಡೆದ ಲೋಕವು ಆಯಾ ದೇವತೆಗಳಿಗೆ ಇರುವಷ್ಟು ದೀರ್ಘಾಯುಸ್ಸಿನವರೆಗೆ ಇದ್ದುಕೊಂಡಿರುವದಾದರೂ ಅದಕ್ಕೂ ಒಂದು ಕಾಲದ ಅಳತೆಯಿರುತ್ತದೆ. ಹೆಚ್ಚೇಕೆ? ಬ್ರಹ್ಮಲೋಕಕ್ಕೆ ಹೋದರೂ ಆಯಾ ಬ್ರಹ್ಮನ ಕಲ್ಪವು ಇರುವವರೆಗೆ ಆ ಲೋಕದಲ್ಲಿ ನಾವು ವಿದ್ಯಾಫಲವನ್ನು ಅನುಭವಿಸಿಕೊಂಡು ಇರಬಹುದು. ಆದರೆ ಆ ಕಲ್ಪವು ಮುಗಿದ ಬಳಿಕ ಅಲ್ಲಿಂದಲೂ ಮತ್ತೆ ಈ ಸಂಸಾರಕ್ಕೆ ಮರಳಿ ಬರಬೇಕಾಗುತ್ತದೆ-ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಬ್ರಹ್ಮಲೋಕದ ಸೊಬಗನ್ನು ವರ್ಣಿಸುವ ವಾಕ್ಯಗಳಲ್ಲಿ ಅವರು ಮತ್ತೆ "ಇಲ್ಲಿಗೆ ಹಿಂತಿರುಗಿಬರುವದಿಲ್ಲ, ಈ ಮಾನವಲೋಕಕ್ಕೆ ಬರುವದಿಲ್ಲ" ಎಂದುಮುಂತಾಗಿ ಹೇಳಿರುವದು ಈ ಕಲ್ಪದಲ್ಲಿ ಸಂಸಾರಕ್ಕೆ ಮರಳುವ ಅಂಜಿಕೆಯಿಲ್ಲ ಎಂಬರ್ಥವನ್ನು ಸೂಚಿಸುತ್ತದೆ ಎಂದು ಬಲ್ಲವರು ಹೇಳುತ್ತಾರೆ.

ಹಾಗಾದರೆ ಯಾವ ಸುಖವುತಾನೆ ಎಂದೆಂದಿಗೂ ನಿಂತೀತು? ನಾವು ಒಂದು ಸಾಧನದಿಂದ ಅದನ್ನು ಪಡೆದುಕೊಂಡಿದ್ದರೆ ಅದು ಆ ಸಾಧನದ ತೇಜಸ್ಸಿಗೂ ವೇಗಕ್ಕೂ ಅನುಗುಣವಾದಷ್ಟು ಕಾಲದವರೆಗೆಮಾತ್ರ ಇದ್ದೀತಲ್ಲವೆ? ಆದ್ದರಿಂದ ಶಾಶ್ವತಸುಖವೆಂಬುದು ಕನಸಿನ ಗಂಟೇ ಎಂದಾಗುವದಿಲ್ಲವೆ?-ಎಂದು ಯಾರಾದರೂ ಕೇಳಬಹುದು.

ಈ ಪ್ರಶ್ನೆಯನ್ನು ಕೇಳುವಷ್ಟು ಮನಸ್ಸಿನ ಪರಿಪಾಕವು ಯಾರಿಗೆ ಆಗಿರುವದೋ ಅವರಿಗೆ "ಮುಮುಕ್ಷುಗಳು" ಎಂದು ಹೆಸರು. ಅಂಥ ಮುಮುಕ್ಷುಗಳಿಗೆ ಸಾಧನದಿಂದಾಗಿರುವ ಕೃತಕಫಲವು ಎಂದಿಗೂ ನಿತ್ಯವಾಗಲಾರದು ಎಂಬ ವಿವೇಕವು ಉಂಟಾಗಿಬಿಟ್ಟಿರುತ್ತದೆ. ಅಕೃತಕವಾದ ಒಂದು ಫಲವು, ನಿಜವಾದ ಸ್ವರ್ಗವು, ಅನ್ವರ್ಥವಾದ ಅಮೃತತ್ವವು, ಇದೆಯೆ? ಇದ್ದರೆ ನಮಗೆ ಅದೇ ಬೇಕು- ಎಂಬ ಹಂಬಲು ಹತ್ತಿರುತ್ತದೆ. ಈ ಹಂಬಲು ಹತ್ತುವದು

ಎಲ್ಲರಿಗೂ ದಕ್ಕುವ ಮಾತಲ್ಲ; ಅದು ಯಾರಿಗೆ ಹತ್ತಿಕೊಂಡಿರುವದೋ ಅವರೇ ಧನ್ಯರು. ಅವರಿಗೇ ಶ್ರುತಿಯಲ್ಲಿ ಜ್ಞಾನಮಾರ್ಗವನ್ನು ಹೇಳಿರುತ್ತದೆ. ಪ್ರಕೃತಸಂದೇಶದ ಮಂತ್ರದಲ್ಲಿ ಹೇಳಿರುವ ವಿಶೇಷರೂಪದ ಸ್ವರ್ಗವು ಆ ಮಾರ್ಗದಿಂದ ಪಡೆದುಕೊಳ್ಳತಕ್ಕದ್ದಾಗಿರುವದು.

ಹಿಂದೆ ಹೇಳಿರುವ ಉಪಾಸನಾರೂಪವಾದ ವಿದ್ಯೆಗೂ ಈ ಬ್ರಹ್ಮಜ್ಞಾನವೆಂಬ ವಿದ್ಯೆಗೂ ಒಂದು ಮುಖ್ಯತಾರತಮ್ಯವು ಇರುತ್ತದೆ. ಅದೇನೆಂದರೆ ಉಪಾಸನೆ ಎಂದರೆ ಮನಸ್ಸಿನಲ್ಲಿ ಭಾವನೆಮಾಡಿಕೊಳ್ಳುವದು; ಒಂದಾನೊಂದು ಶುಭಕಲ್ಪನೆಯನ್ನು ಮಾಡಿಕೊಂಡು ಅದನ್ನು ಎಡೆಬಿಡದೆ, ಮತ್ತೊಂದರ ಚಿಂತೆಯನ್ನು ಮನಸ್ಸಿಗೆ ಬರಗೊಡದಂತೆ, ಸಂತತವಾಗಿ ಮಾಡುವ ಧ್ಯಾನವದು. ಶಾಸ್ತ್ರದಲ್ಲಿ ಹೇಳಿರುವ ಉಪಾಸನೆಗಳು ಈ ಬಗೆಯವು. ಅವುಗಳನ್ನು ಯಾವಾಗಲೂ ಸತತವಾಗಿ ಮಾಡುತ್ತಿದ್ದರೆ ಆ ಭಾವನೆಯು ಮನಸ್ಸಿನಲ್ಲಿ ಊಡಿಕೊಂಡುಬಿಡುತ್ತದೆ. ಕೊನೆಗೆ ಆ ಭಾವನೆಯ ಫಲವು ಇಲ್ಲಿಯೇ ಉಪಾಸಕನಿಗೆ ಆದಷ್ಟು ಬಲವಾಗಿ ಒಡಮೂಡಿಕೊಳ್ಳುತ್ತದೆ. ಅದಕ್ಕೆ ಸಾಕ್ಷಾತ್ಕಾರ ಎಂದು ಹೆಸರು. ಹೀಗೆ ಸಾಕ್ಷಾತ್ಕಾರವನ್ನು ಮಾಡಿಕೊಂಡವರು ಆಯಾ ಲೋಕವನ್ನು ಪಡೆದು ಉಪಾಸಕರು ಹಿಂದೆ ಹೇಳಿರುವಂತೆ ಆಯಾ ದೇವಲೋಕದ ಸುಖವನ್ನು ಪಡೆದು ಅನುಭವಿಸುವರು. ಇನ್ನು ಬ್ರಹ್ಮಜ್ಞಾನರೂಪವಾದ ವಿದ್ಯೆಯ ಸ್ವರೂಪವೇನು? ಎಂದರೆ ಅದು ವೇದಾಂತವಾಕ್ಯವೆಂಬ ಪ್ರಮಾಣದಿಂದ ನಮ್ಮ ಆತ್ಮನ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳುವ ರೂಪದ ಜ್ಞಾನವು. ಉಪಾಸನಾರೂಪವಾದ ವಿದ್ಯೆಗೂ ಈ ಆತ್ಮಜ್ಞಾನರೂಪವಾದ ವಿದ್ಯೆಗೂ ಇರುವ ತಾರತಮ್ಯವನ್ನು ಒಂದು ದೃಷ್ಟಾಂತದಿಂದ ಸ್ಪಷ್ಟಪಡಿಸಬಹುದು. ದೂರದಲ್ಲಿ ಹೊಳೆಯುವ ಎರಡು ಬೆಳಕುಗಳನ್ನು ಕಂಡು ಅವು ರತ್ನಗಳಿರಬೇಕೆಂದು ತಿಳಿದು ಇಬ್ಬರು ತಾವು ಮನಸ್ಸಿನಲ್ಲಿ ಮಾಡಿಕೊಂಡು ಆ ರತ್ನವನ್ನು ತೆಗೆದುಕೊಳ್ಳುವದಕ್ಕೆ ಅತ್ತಕಡೆಗೆ ಹೋಗುತ್ತಾರೆಂದು ಇಟ್ಟುಕೊಳ್ಳಿರಿ; ಒಬ್ಬನಿಗೆ ಅದು ರತ್ನವೆಂಬ ತಿಳಿವಳಿಕೆಯು ಒಬ್ಬ ಆಪ್ತನ ಉಪದೇಶದಿಂದ ಬಂದಿತ್ತು, ಇನ್ನೊಬ್ಬನಿಗೆ ತನ್ನ ಬರಿಯ ಕಲ್ಪನೆಯಿಂದ ಬಂದಿತ್ತು. ಆಗ ಇಬ್ಬರೂ ಮಾಡುವ ಪ್ರಯತ್ನವೂ ಒಂದೇ ಬಗೆಯದಾದರೂ ಒಬ್ಬನಿಗೆ ಅಲ್ಲಿ ಒಂದು ಕೆಂಡವು ಇರುವದು ಕಂಡುಬಂತು, ಇನ್ನೊಬ್ಬನಿಗೆ ರತ್ನವೇ ಸಿಕ್ಕಿತು. ವೇದಾಂತದಲ್ಲಿ ಉಪದೇಶಿಸಿರುವ ಉಪಾಸನೆಯು ಈ ರತ್ನಪ್ರಾಪ್ತಿಗೆ ಮಾಡಿದ ಪ್ರಯತ್ನಕ್ಕೆ ಆಧಾರವಾದ ಉಪದೇಶದಂತೆ ಇರುತ್ತದೆ. ಬರಿಯ ಲೌಕಿಕಪ್ರಯತ್ನವು ದೃಷ್ಟಾಂತದಲ್ಲಿ ಮನುಷ್ಯನು ತನಗೆತಾನೇ ಮಾಡಿಕೊಂಡ ಕಲ್ಪನೆಯಂತೆ ಇರುತ್ತದೆ. ಆದರೆ ಇವೆರಡೂ ಮನಸ್ಸಿನ ಕಲ್ಪನೆಯಿಂದಾದ ಭಾವನೆಗಳೇ ಹೊರತು ವಸ್ತುಸ್ವರೂಪಕ್ಕೇನೂ ಸಂಬಂಧಿಸಿಲ್ಲವೆಂಬುದು ಎರಡಕ್ಕೂ ಸಮಾನವಾಗಿರುತ್ತದೆ. ಅಲ್ಲವೆ? ಹೀಗಿರುವದರಿಂದ ನಮ್ಮ ಎದುರಿಗೇ ಇರುವ ರತ್ನವನ್ನು ಪ್ರತ್ಯಕ್ಷವಾಗಿ ಕಂಡು ಇದು ರತ್ನವು ಎಂದು ತಿಳಿದುಕೊಳ್ಳುವ ಜ್ಞಾನಕ್ಕೆ ಈ ಎರಡರಲ್ಲಿ ಯಾವದೊಂದೂ ಸರಿಗಟ್ಟಲಾರದಲ್ಲವೆ? ಇದರಂತೆ ವೇದಾಂತದಲ್ಲಿ ಹೇಳಿರುವ ಆತ್ಮಸ್ವರೂಪವನ್ನು "ಇದೇ

ನನ್ನ ಆತ್ಮನು" ಎಂದು ನೇರಾಗಿ ಅನುಭವಿಸಿ ಕಂಡುಕೊಳ್ಳುವದು ಬ್ರಹ್ಮಜ್ಞಾನವು; ಆದರೆ ಅಲ್ಲಿ ಉಪದೇಶಮಾಡಿರುವ ರೀತಿಯಿಂದ ಶ್ರದ್ಧಾಪೂರ್ವಕವಾಗಿ ಭಾವನೆಮಾಡುವದು ಬ್ರಹ್ಮೋಪಾಸನೆಯು. ಈ ಎರಡು ಬಗೆಯ ಮನೋವೃತ್ತಿಗಳಿಗೂ ವಿದ್ಯೆ ಎಂಬ ಹೆಸರೇ ಇದ್ದರೂ ನಿಜವಾದ ವಸ್ತುವಿನ ಅರಿವಾದ ಜ್ಞಾನಕ್ಕೂ ಭಾವನಾರೂಪವಾದ ಉಪಾಸನೆಗೂ ಹೀಗೆ ಬಹಳ ತಾರತಮ್ಯವಿರುತ್ತದೆ.

ಬ್ರಹ್ಮವಿದ್ಯೆಯಿಂದ ಪಡೆಯಬಹುದಾಗಿರುವ ಸ್ವರ್ಗವು ಯಾವದೆಂಬುದು ನಿಮಗೆ ಮನಸ್ಸಿನಲ್ಲಿ ಈಗ ಸ್ವಲ್ಪಮಟ್ಟಿಗೆ ಮಿಂಚಿರಬಹುದು. ವೇದಾಂತದಲ್ಲಿ ನಮ್ಮೆಲ್ಲರಿಗೂ ಇರುವ ಆತ್ಮನು ಒಬ್ಬನೇ ಎಂದೂ ಅವನಿಗೆ ಸಂಸಾರದ ಕ್ಷಣಿಕ ಸುಖದುಃಖಗಳ ಕೋಟಲೆಯು ಎಂದಿಗೂ ಇಲ್ಲವೆಂದೂ ಹೇಳಿರುತ್ತದೆ. ಅತ್ಯಂತ ನಿರಾಯಾಸರೂಪವಾದ ನಿತ್ಯತೃಪ್ತವಾದ ಈ ರೂಪವನ್ನು ಆನಂದವೆಂದೂ ಕರೆಯುತ್ತಾರೆ. ಈ ಆನಂದವೇ ಪ್ರಕೃತದಲ್ಲಿ ಹೇಳಿರುವ ಸ್ವರ್ಗವು; ಅದು ಕೈಯಲ್ಲಿರುವ ರತ್ನದಂತೆ ನಿತ್ಯಪ್ರಾಪ್ತವಾಗಿಯೇ ಇರುವದರಿಂದ ಜ್ಞಾನದಿಂದ ಅದನ್ನು ಕೂಡಲೆ ಪಡೆದುಕೊಂಡಂತೆ ಆಗಿಬಿಡುತ್ತದೆ. ಅದನ್ನು ಪಡೆಯುವದಕ್ಕೆ ಎಲ್ಲಿಗೂ ಹೋಗಬೇಕಾದದ್ದೇ ಇರುವದಿಲ್ಲ.

ಕರ್ಮದಿಂದ ಪಡೆಯುವ ಸ್ವರ್ಗವನ್ನೂ ಉಪಾಸನೆಯಿಂದ ಪಡೆಯುವ ಸ್ವರ್ಗವನ್ನೂ ಆಯಾ ಅನುಷ್ಠಾನವನ್ನು ಮಾಡಿದಕೂಡಲೆ ಪಡೆಯುವದಕ್ಕೆ ಆಗುವದಿಲ್ಲ; ಈ ಶರೀರವನ್ನು ಬಿಟ್ಟುಹೋದಬಳಿಕವೇ ಅವನ್ನು ಕಾಣಬೇಕಾಗಿರುತ್ತದೆ. ಆದರೆ ಬ್ರಹ್ಮವಿದ್ಯೆಯಿಂದ ಕಾಣಬೇಕಾಗಿರುವ ನಮ್ಮ ಆತ್ಮಸ್ವರೂಪವು ನಮಗಿಂತ ಸ್ವಲ್ಪವೂ ದೂರದಲ್ಲಿಲ್ಲ. ಹೀಗಿರುವದರಿಂದ ಅದನ್ನು ಸೇರುವದಕ್ಕೆ ಎಲ್ಲಿಗೂ ಹೋಗಬೇಕಾದದ್ದಿಲ್ಲ. ಆದ್ದರಿಂದ ಈ ಶರೀರದಲ್ಲಿ ನಾವು ಇದ್ದುಕೊಂಡೇ ನಮ್ಮ ಸ್ವರೂಪವು ಈ ಬ್ರಹ್ಮಾತ್ಮನಾಗಿದೆ ಎಂದು ಅರಿತುಕೊಳ್ಳುವದಕ್ಕೆ ಆಗುತ್ತದೆ. ಆದರೆ ಇಲ್ಲಿ ಒಂದು ವಿಶೇಷವುಂಟು. ನಾವು ಶರೀರಿಗಳೆಂದು ತಿಳಿದುಕೊಂಡಿರುವವರೆಗೆ ಬ್ರಹ್ಮವು ನಮಗೆ ಅತ್ಯಂತದೂರವಾಗಿರುತ್ತದೆ. ನಾನೇ ಆ ಬ್ರಹ್ಮಸ್ವರೂಪವು ಎಂದು ತಿಳಿದುಕೊಂಡಾಗಲೊ, ಎಂದರೆ ನಮ್ಮ ಈ ಶರೀರವು ಆ ಜ್ಞಾನದ ದೃಷ್ಟಿಯಿಂದ ಬೇರೆಯಾಗಿ ಉಳಿದಿರುವದಿಲ್ಲ. ನಮ್ಮ ಶರೀರೇಂದ್ರಿಯಾದಿಗಳೆಲ್ಲವೂ ಆ ಬ್ರಹ್ಮದಲ್ಲಿಯೇ ಕಲ್ಪಿತವಾಗಿರುವದರಿಂದ ಬ್ರಹ್ಮವೊಂದೇ ಆಗ ಉಳಿದುಕೊಂಡಿರುತ್ತದೆ, ಶರೀರವು ಇರುವದೇ ಇಲ್ಲ. ಆದ್ದರಿಂದ ಈ ದೃಷ್ಟಿಯಿಂದ ನೋಡಿದರೆ ಬ್ರಹ್ಮಜ್ಞಾನದಿಂದ ನಿತ್ಯಾನಂದರೂಪವಾದ ಸ್ವರ್ಗವು ಪ್ರಾಪ್ತಿಯಾಗುವದಕ್ಕೂ ನಾವು ನಮ್ಮ ಶರೀರವನ್ನು ಬಿಡಲೇಬೇಕು; ಆದರೆ ಇಲ್ಲಿ ಶರೀರವನ್ನು ಬಿಡುವದೆಂದರೆ ಸಾಯುವದಲ್ಲ, ಜ್ಞಾನದಿಂದ ಅದು ಎಂದೆಂದಿಗೂ ಇರಲೇಇಲ್ಲವೆಂಬ ಅರಿವನ್ನು ಸಂಪಾದಿಸಿಕೊಳ್ಳುವದೇ ಶರೀರತ್ಯಾಗವು. ಹೀಗೆ ಜ್ಞಾನದಿಂದ ಶರೀರತ್ಯಾಗವನ್ನು ಮಾಡಿಕೊಂಡವರು ಬದುಕಿರುವಾಗಲೂ ಮುಕ್ತರೇ, ಅಜ್ಞರ ದೃಷ್ಟಿಯಿಂದ ಶರೀರತ್ಯಾಗವನ್ನು ಮಾಡಿದಮೇಲೂ ಮುಕ್ತರೇ. ಏಕೆಂದರೆ ಅವರು ಎಂದೆಂದಿಗೂ ನಿತ್ಯಮುಕ್ತವಾದ ಬ್ರಹ್ಮಸ್ವರೂಪರೇ ಆಗಿರುತ್ತಾರೆ.

## 4.2. ಜ್ಞಾನಕ್ಕೆ ಹೊರಗಿನ ಸಾಧನಗಳು

**ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾऽನಾಶಕೇನ ॥ (ಬೃ. 4-4-22)**

ವೇದಾಂತಜ್ಞಾನಮಾರ್ಗವೆಂಬುದು ಸುಲಭವಾಗಿ ಎಲ್ಲರಿಗೂ ದಕ್ಕುವದಲ್ಲ, ಯಾವ ಮಹನೀಯರು ಮಿಕ್ಕೆಲ್ಲವನ್ನೂ ತೊರೆದು ಅದಕ್ಕಾಗಿಯೇ ಮಾಡಬೇಕಾದ ಸಾಧನಗಳನ್ನು ಅಳವಡಿಸಿಕೊಂಡಿರುವರೋ ಅವರಿಗೆ ಮಾತ್ರ ಅದು ದೊರೆತೀತು. ಕರ್ಮದಿಂದ ಪಡೆದುಕೊಳ್ಳಬಹುದಾದ ಸ್ವರ್ಗಕ್ಕಿಂತಲೂ ಉಪಾಸನೆಯಿಂದ ಪಡೆದುಕೊಳ್ಳಬಹುದಾದ ಬ್ರಹ್ಮಲೋಕದ ಸುಖಕ್ಕಿಂತಲೂ ಮಿಗಿಲಾದ ನಿತ್ಯಾನಂದವೇ ಜ್ಞಾನಮಾರ್ಗಕ್ಕೆ ಫಲವು ಎಂಬುದನ್ನು ಹಿಂದಿನ ಸಂದೇಶದಲ್ಲಿ ತಿಳಿಸಿರುತ್ತೇನೆ.

ಇದರಿಂದ ಕರ್ಮವೂ ಉಪಾಸನೆಯೂ ಕೀಳುಸಾಧನೆಗಳು, ಮುಮುಕ್ಷುಗಳಿಗೆ ಅವುಗಳಿಂದ ಆಗಬೇಕಾದ್ದು ಏನೂ ಇರುವದಿಲ್ಲ-ಎಂದು ಕೆಲವರು ತಪ್ಪಾಗಿ ತಿಳಿದುಕೊಳ್ಳುವ ಸಂಭವವಿರುತ್ತದೆ. ಈಗಿನಕಾಲಕ್ಕೆ ಕರ್ಮವು ಮೋಕ್ಷಕ್ಕೆ ಸಾಧನವಲ್ಲವೆಂದು ಹೇಳುವದಲ್ಲದೆ ಅದನ್ನು ಮನಬಂದಂತೆ ಹಳಿಯುವ ವೇದಾಂತಿಗಳೂ (?) ಕೆಲವರು ಇರುತ್ತಾರೆ. ಕರ್ಮವನ್ನು ಮಾಡುವದು ಕಷ್ಟವಾಗಿರುವದರಿಂದಲೂ ಕಾಲಗತಿಯಿಂದ ಕರ್ಮಾಚರಣೆಗೆ ಆನುಕೂಲ್ಯಗಳು ಕಡಿಮೆಯಾಗುತ್ತಿರುವದರಿಂದಲೂ ಅಂಥ ಕರ್ಮನಿಂದಕಗುರುಗಳ ಉಪದೇಶವನ್ನು ಅನುಕೂಲಸಿಂಧುವಾಗಿಮಾಡಿಕೊಂಡು ನಿತ್ಯನೈಮಿತ್ತಿಕಕರ್ಮಗಳನ್ನು ಅಸಡ್ಡೆಯಿಂದ ಕಾಣುತ್ತಲೂ ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸಿದಲ್ಲದೆ ಮೋಕ್ಷವು ಎಂದಿಗೂ ದೊರಕಲಾರದೆಂದು ಇತರರಿಗೂ ಹೇಳುತ್ತಲೂ ತಾವೂ ಕೆಟ್ಟು ಮತ್ತೊಬ್ಬರನ್ನೂ ಹಾಳುಮಾಡುವ ಮೂರ್ಖರೂ ಇರುತ್ತಾರೆ!

ಆದರೆ ನಿಜವು ಹೀಗಿರುವದಿಲ್ಲ. ಏಕೆಂದರೆ ಮೋಕ್ಷಕ್ಕೆ ಜ್ಞಾನವನ್ನು ಉಪದೇಶಿಸಿರುವ ವೇದದಲ್ಲಿಯೇ ಕರ್ಮವನ್ನೂ ಉಪಾಸನೆಯನ್ನೂ ಉಪದೇಶಿಸಿರುತ್ತದೆ. ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ಮನುಷ್ಯನು ತಾನೇ ಅರಿತುಕೊಳ್ಳುವದಕ್ಕೆ ಆಗದೆ ಇರುವ ಅತೀಂದ್ರಿಯಪುರುಷಾರ್ಥಸಾಧನವನ್ನು ತಿಳಿಸಿಕೊಡುವದರಿಂದಲೇ ವೇದಕ್ಕೆ "ವೇದ" ಎಂಬ ಅನ್ವರ್ಥನಾಮಧೇಯವು ಬಂದಿರುತ್ತದೆ. ಯಾವದರಿಂದ ಉತ್ತಮವಾದ ಸಾಧನವನ್ನು ಅರಿತುಕೊಳ್ಳುತ್ತಾರೋ (ಯೇನ ವಿದನ್ತಿ) ಅದೇ ವೇದವು. ಇಂಥ ವೇದವು ಮಾಡುವದಕ್ಕೆ ಕಷ್ಟವಾಗಿಯೂ ಕೊನೆಗೂ ಪುರುಷಾರ್ಥಕ್ಕೆ ಸಾಧನವಲ್ಲದೆಯೂ ಇರುವ ಕರ್ಮಾದಿಗಳನ್ನು ಏತಕ್ಕೆ ತಾನೆ ಉಪದೇಶಿಸೀತು?

ಕೆಲವರು ಪ್ರತ್ಯಕ್ಷವಾಗಿ ಕರ್ಮಗಳನ್ನು ದ್ವೇಷಿಸದೆ ಇದ್ದರೂ "ಅವು ಮುಮುಕ್ಷುಗಳಲ್ಲದವರಿಗೆ, ಅಥವಾ ಕಾಮಿಗಳಿಗೆ, ಬೇಕಾದ ಸಾಧನಗಳು; ಆದ್ದರಿಂದ ವೇದದಲ್ಲಿ ಅದನ್ನು ಹೇಳಿರುತ್ತದೆ.

ಮುಮುಕ್ಷುಗಳು ಅವುಗಳನ್ನು ಮಾಡಬಾರದು"-ಎಂದು ಕರ್ಮಗಳಲ್ಲಿ ಬಲತಾಯಿಯ ಪ್ರೇಮವನ್ನು ತೋರಿಸುವದುಂಟು. ಅವರ ಮಾತಿನಲ್ಲಿ ನಿಜದ ಅಂಶವೂ ಇರುತ್ತದೆ. ಏಕೆಂದರೆ ಯಾವ ಶ್ರದ್ಧಾಳುಗಳಿಗೆ ಲೌಕಿಕ ಉಪಾಯಗಳಿಂದ ದೊರಕುವದಕ್ಕಿಂತಲೂ ಉತ್ತಮವಾದ ಸುಖವು ದೊರಕಬೇಕೆಂಬ ಆಶೆಯು ಇರುವದೋ ಅವರಿಗೆ ವೇದದಲ್ಲಿ ಕೆಲವು ಕರ್ಮಗಳನ್ನು ವಿಧಿಸಿರುತ್ತದೆ. ಅವನ್ನು ಶ್ರದ್ಧೆಯಿಂದ ಮಾಡುವವರಿಗೆ ಆಯಾ ಪ್ರಯೋಜನಗಳು ದೊರಕುವವೆಂದು ವೈದಿಕಕರ್ಮಗಳಲ್ಲಿ ಶ್ರದ್ಧೆಯುಳ್ಳ ಮಹನೀಯರು ಹೇಳುತ್ತಾರೆ. ಆದರೆ ವೇದವನ್ನೇ ಅಧ್ಯಯನಮಾಡದೆ, ಅವುಗಳಲ್ಲಿ ಹೇಳಿರುವ ಕರ್ಮಗಳನ್ನು ಕಣ್ಣೆತ್ತಿಯೂ ನೋಡದೆ, "ಇವೆಲ್ಲ ಮಂದಾಧಿಕಾರಿಗಳಿಗೆ ಹೇಳಿದ ಸಾಧನಗಳು" ಎಂದು ತಿರಸ್ಕಾರಭಾವದಿಂದ ಅವನ್ನು ಕಾಣುತ್ತಿರುವವರಿಗೆ ಆ ಕರ್ಮಗಳ ಸವಿಯು ಒಂದಿಷ್ಟೂ ತಿಳಿದಿರುವದಿಲ್ಲ. ಕರ್ಮಗಳ ವಿಷಯಕ್ಕೆ ಅವರು ಮಾಡುವ ಉಪದೇಶಕ್ಕೆ ಯಾವ ಬೆಲೆಯೂ ಇರುವದೂ ಇಲ್ಲ.

ಇದಂತಿರಲಿ. ಮುಮುಕ್ಷುಗಳಿಗೆ ಕರ್ಮಗಳು ಅವಶ್ಯವೆ? ಅವುಗಳಿಂದ ಏನಾದರೂ ಪ್ರಯೋಜನವುಂಟೆ?-ಎಂದು ಶ್ರದ್ಧಾಪೂರ್ವಕವಾಗಿ ಕೇಳುವವರಿಗೆ ಈ ಸಂದೇಶಕ್ಕೆ ನಾವು ಬರೆದುಕೊಂಡಿರುವ ಶ್ರುತಿಯು ಉತ್ತರವನ್ನು ಹೇಳುತ್ತದೆ. ವೇದಾನುವಚನ, ಯಜ್ಞ, ದಾನ, ಅನಾಶಕತಪಸ್ಸು-ಇವುಗಳಿಂದ ಬ್ರಹ್ಮಜ್ಞಾನವು ಲಭಿಸುತ್ತದೆ ಎಂಬುದು ಈ ಶ್ರುತಿವಾಕ್ಯದ ಅಕ್ಷರಾರ್ಥವು. ಆದ್ದರಿಂದ ಯಾರು ವೇದೋಕ್ತವಾದ ಕರ್ಮಕ್ಕೆ ಅಧಿಕಾರಿಗಳೋ, ಅವರು ಮೋಕ್ಷಕ್ಕೆ ಬೇಕಾದ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಈ ಕರ್ಮಗಳನ್ನು ಮಾಡಬೇಕು ಎಂಬುದು ಈ ಶ್ರುತಿಯ ಉಪದೇಶವಾಗಿರುತ್ತದೆ.

ವೇದಾನುವಚನವೇ ಮುಂತಾದವುಗಳು ಕರ್ಮಗಳು, ಮೋಕ್ಷಕ್ಕೆ ಜ್ಞಾನವೇ ಬೇಕಾಗಿರುತ್ತದೆ; ಹೀಗಿರುವಲ್ಲಿ ಜ್ಞಾನಕ್ಕೆ ಬೇಕಾದ ವಿಚಾರವೇ ಮುಂತಾದವುಗಳನ್ನು ಮಾಡುವದನ್ನು ಬಿಟ್ಟು ಕರ್ಮಗಳನ್ನು ಮಾಡಿದರೆ ತತ್ತ್ವವು ಹೇಗೆ ತಿಳಿದೀತು?-ಎಂದು ಯಾರಾದರೂ ಆಕ್ಷೇಪಿಸಬಹುದು. ಜ್ಞಾನಕ್ಕೆ ಸಾಧನವಾದ ಇಂದ್ರಿಯಗಳನ್ನೂ ಮನಸ್ಸನ್ನೂ ಉಪಯೋಗಿಸಿಕೊಂಡು ವಿಚಾರಮಾಡಿದರಲ್ಲವೆ, ಯಾವದಾದರೊಂದು ವಿಷಯದ ತಿಳಿವಳಿಕೆಯು ನಮಗೆ ಬಂದೀತು?-ಎಂಬುದು ಅವರ ಆಶಯ. ಈ ಶಂಕೆಗೆ ಪರಿಹಾರವಾಗಿ ಮೋಕ್ಷಗ್ರಂಥವೆಂದು ಎಲ್ಲರೂ ಒಪ್ಪಿರುವ ಭಗವದ್ಗೀತೆಯಲ್ಲಿ ಹೇಳಿರುವ ಸಮಾಧಾನವನ್ನು ಇಲ್ಲಿ ಮನಸ್ಸಿಗೆ ತಂದುಕೊಳ್ಳಬಹುದು. ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿ ಭಗವಂತನು ಹೇಳಿರುವದೇನೆಂದರೆ :

**ಯಜ್ಞೋ ದಾನಂ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥**

**ಏತಾನ್ಯಪಿ ತು ಕರ್ಮಾಣಿ ಸಙ್ಗಂ ತ್ಯಕ್ತ್ವಾ ಫಲಾನಿ ಚ ।**
**ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥**

ಯಜ್ಞ, ದಾನ, ತಪಸ್ಸು– ಎಂಬ ಕರ್ಮಗಳನ್ನು ಮಾಡಲೇಬೇಕು, ಬಿಡತಕ್ಕದ್ದಲ್ಲ, ಏಕೆಂದರೆ ಅವುಗಳು ವಿವೇಕಿಗಳಿಗೆ ಪವಿತ್ರಕರವಾಗಿರುವವು. ಆದರೆ ಆ ಕರ್ಮಗಳನ್ನು ಸಂಗವನ್ನೂ ಫಲದಾಶೆಯನ್ನೂ ಬಿಟ್ಟು ಮಾಡಬೇಕು ಎಂಬುದು ನನ್ನ ಉತ್ತಮಮತವು– ಎಂದು ಭಗವಂತನು ಅರ್ಜುನನಿಗೆ ಉಪದೇಶಿಸಿರುತ್ತಾನೆ.

ವೇದದಲ್ಲಿ ಹೇಳಿರುವ ಕರ್ಮಗಳನ್ನು ಎರಡು ರೀತಿಯಿಂದ ವಿನಿಯೋಗಿಸಿ ಕೊಳ್ಳುವದಕ್ಕೆ ಬರುತ್ತದೆ. ಆಯಾ ಜನರಿಗೆ ಉಪದೇಶಿಸಿರುವ ಕರ್ಮಗಳನ್ನು ಅವರು ನಿಯಮದಿಂದ ಮಾಡಿದರೆ ತಮ್ಮತಮ್ಮ ಕರ್ತವ್ಯವನ್ನು ನೆರವೇರಿಸಿದಂತೆ ಆಗುವದು. ಅದರಿಂದ ಅವರಿಗೆ ಉತ್ತಮವಾದ ಪರಲೋಕದ ಪ್ರಾಪ್ತಿಯಾಗುವದು. ಆದರೆ ಮುಮುಕ್ಷುಗಳಾದವರು ಅದೇ ಕರ್ಮಗಳನ್ನೇ ಈ ಕರ್ಮಗಳನ್ನು ನನ್ನ ಅಭ್ಯುದಯಕ್ಕಾಗಿ ಮಾಡುತ್ತಿದೇನೆ ಎಂಬ ಕರ್ಮಸಂಗವನ್ನೂ ಫಲಾಶೆಯನ್ನೂ ತೊರೆದು ಮಾಡಿದರೆ ಅವುಗಳಿಂದ ಅಂತಃಕರಣಶುದ್ಧಿಯು ದೊರೆತು ತತ್ತ್ವಜ್ಞಾನಕ್ಕೆ ಬೇಕಾದ ಯೋಗ್ಯತೆಯು ದೊರಕುತ್ತದೆ. ಆದ್ದರಿಂದಲೇ ವೇದದಲ್ಲಿ ಕರ್ಮ ಕಾಂಡದಲ್ಲಿಯೇ ಅಲ್ಲದೆ ಜ್ಞಾನಕಾಂಡದಲ್ಲಿಯೂ ಕರ್ಮಗಳನ್ನು ಹೇಳಿರುತ್ತದೆ.

ಒಂದೇ ಕರ್ಮವು ಎರಡು ಬೇರೆಬೇರೆಯ ಪ್ರಯೋಜನಕ್ಕೆ ಕಾರಣವಾಗಬಹುದೆಂಬುದನ್ನು ತಿಳಿಸುವದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು. ಒಂದು ಉದ್ಯಾನದಲ್ಲಿ ಅಥವಾ ಒಂದು ದೇವಾಲಯದಲ್ಲಿ ಇಂತಿಷ್ಟು ಹೊತ್ತು ಪ್ರತಿದಿನವೂ ಓಲಗ (ನಾಗಸ್ವರ)ವನ್ನು ಊದಿಹೋಗುವದಕ್ಕೆಂದು ಒಬ್ಬನನ್ನು ನಿಯಮಿಸಿಕೊಂಡಿರುತ್ತಾರೆಂದು ಇಟ್ಟುಕೊಳ್ಳಿರಿ. ಈ ವಾದ್ಯಗಾರನು ನಿಯತಕಾಲಕ್ಕೆ ಬಂದು ಓಲಗವನ್ನು ಊದಿಹೋದರೆ ಅವನಿಗೆ ತಿಂಗಳ ಸಂಬಳವು ಅವಶ್ಯವಾಗಿ ದೊರೆಯುತ್ತದೆ. ಆದರೆ ಅವನೇ ಕಾಲಾನುಕಾಲಕ್ಕೆ ತನ್ನ ಸಂಗೀತಶಾಸ್ತ್ರದ ಅಭಿರುಚಿಯನ್ನು ಬಲಪಡಿಸಿಕೊಂಡು ಅಲ್ಲಿಗೆ ಬರುವ ಮಹಾಜನರೆಲ್ಲರೂ ಆನಂದದಿಂದ ತಲೆದೂಗುವಂತೆ ತನ್ನ ಕೌಶಲವನ್ನು ತೋರಿಸುವದಕ್ಕೆ ಪ್ರಯತ್ನಿಸುತ್ತಾನೆಂದು ಇಟ್ಟುಕೊಳ್ಳಿರಿ. ಆಗ ಅವನಿಗೆ ತಿಂಗಳುತಿಂಗಳಿಗೆ ಬರಬೇಕಾದ ಸಂಬಳವೇನೋ ಅವಶ್ಯವಾಗಿ ಸಂದಾಯವಾಗುತ್ತಿರುತ್ತದೆ. ಆದರೆ ಈಗ ಅವನಿಗೆ ಅದರಲ್ಲೇನೋ ಅಷ್ಟು ಮಹತ್ತ್ವವು ತೋರುತ್ತಿರುವದಿಲ್ಲ; ಏಕೆಂದರೆ ತಾನು ವಾದ್ಯಕೌಶಲವನ್ನು ಸದುಪಯೋಗಮಾಡಿದ್ದರಿಂದ ತನಗೆ ಆಗುವ ಆನಂದಕ್ಕೆ ಅವನು ಮನಸೋತುಬಿಟ್ಟಿರುತ್ತಾನೆ. ಅಲ್ಲಿಗೆ ಬರುವ ಮಹಾಜನರುಕೂಡ ಈ ಅವನ ಓಲಗದ ಸೇವೆಯಿಂದ ಮುಗ್ಧರಾಗಿಹೋಗಿಬಿಟ್ಟಿರುತ್ತಾರೆ. ಯಾವದಾದರೂ ನಿಮಿತ್ತದಿಂದ ಯಾವದಾದರೊಂದು ದಿನ ಅವನ ಓಲಗವನ್ನು ಕೇಳುವ ಲಾಭವು ತಪ್ಪಿದರೆ

ಅವರಿಗೆ ಅಪರಿಮಿತನಷ್ಟವಾದಂತೆ ಭಾಸವಾಗುತ್ತದೆ. ಈಗ ಓಲಗದವನು ಕೀರ್ತಿ, ಮಹಾಜನರ ಸಂತೋಷಕ್ಕೆ ಪಾತ್ರನಾಗುವಿಕೆ, ಇವೆಲ್ಲಕ್ಕಿಂತಲೂ ಮಿಗಿಲಾಗಿ ತನ್ನ ಸಂಗೀತವಿದ್ಯೆಯಲ್ಲಿ ತಾದಾತ್ಮ್ಯಭಾವನೆಯಿಂದ ಮೈಮರೆತಿರುವಿಕೆ–ಇವುಗಳಿಂದಲೇ ತನ್ನ ಜೀವನದ ಸಾರ್ಥಕ್ಯವು ದೊರೆತಂತಾಯಿತೆಂದು ಭಾವಿಸುತ್ತಾನೆ. ಅಲ್ಲವೆ?

ಇದರಂತೆಯೇ ಶಾಸ್ತ್ರದಲ್ಲಿ ನಿಷೇಧಿತವಾಗಿರುವ ಕೆಟ್ಟಕರ್ಮಗಳನ್ನು ಬಿಡುವದು, ಅವಶ್ಯವಾಗಿ ಮಾಡಬೇಕೆಂದು ಹೇಳಿರುವ ಕರ್ಮಗಳನ್ನು ಮಾಡುತ್ತಿರುವದು– ಇವುಗಳಿಂದ ಮಾನವನಿಗೆ ಪಾಪವು ಸಂಘಟಿಸದೆ ಇರುವದಲ್ಲದೆ ಇಹಜೀವನವು ಶುದ್ಧರೀತಿಯಿಂದ ಸಾಗುತ್ತದೆ. ಪರಲೋಕದಲ್ಲಿ ಸದ್ಗತಿಯೂ ದೊರಕುತ್ತದೆ. ಇದು ದೃಷ್ಟಾಂತದ ಓಲಗದವನಿಗೆ ತಿಂಗಳ ಸಂಬಳವು ದೊರೆತದ್ದರ ಸ್ಥಾನದಲ್ಲಿ ಸಿಕ್ಕುವ ಫಲವು. ಶಾಸ್ತ್ರೋಕ್ತವಾದ ಸತ್ಕರ್ಮವನ್ನು ಮಾಡುವಾತನು ತಾನು ಮಾಡುವ ಕರ್ಮದಿಂದ ದೇವತೆಗಳ ತೃಪ್ತಿಯಾಗಿ ತನ್ನ ಜೀವನಕ್ಕೆ ನೆಮ್ಮದಿಯು ದೊರಕುವಂತೆ ಮಾಡಿಕೊಳ್ಳುವದು ಹೆಚ್ಚಿನದೇ ಸರಿ. ಆದರೆ ಕರ್ಮಕ್ಕೆ ಇಷ್ಟು ಮಾತ್ರ ಫಲವೆಂದು ಯಾರೂ ಭಾವಿಸಬಾರದು. ಕರ್ಮದಿಂದ ದೇವತೆಗಳಿಗಾಗಿ ಯಾಗವನ್ನು ಮಾಡುವದು ಮತ್ತು ತನ್ನ ಆತ್ಮಕ್ಕಾಗಿ ಯಾಗವನ್ನು ಮಾಡುವದು ಎಂಬ ಎರಡು ಬಗೆಯ ಪ್ರಯೋಜನಗಳನ್ನು ಪಡೆಯಬಹುದು : ಶತಪಥಬ್ರಾಹ್ಮಣದಲ್ಲಿ (ಕಾಂ. 11–22, ಬ್ರಾ. 2–13, 14) ಹೀಗೆಂದು ಹೇಳಿರುತ್ತದೆ :

**"ಆ ವಿಷಯದಲ್ಲಿ ಬ್ರಹ್ಮವಾದಿಗಳು ಹೀಗೆಂದು ವಿಚಾರಮಾಡಿರುತ್ತಾರೆ : ಆತ್ಮಯಾಜಿಯು ಹೆಚ್ಚಿನವನೊ, ದೇವಯಾಜಿಯು ಹೆಚ್ಚಿನವನೊ? ಆತ್ಮಯಾಜಿಯೇ ಹೆಚ್ಚಿನವನು ಎನ್ನಬೇಕು; ಏಕೆಂದರೆ ಆತ್ಮಯಾಜಿಯು ಈ ಕರ್ಮಾಂಗದಿಂದ ನನ್ನ ಈ ಅಂಗವು ಸಂಸ್ಕಾರವನ್ನು ಪಡೆಯುವದು ಎಂಬುದನ್ನು ಬಲ್ಲನು, ಇದರಿಂದ ಈ ನನ್ನ ಅಂಗವು ನಿಂತಿರುವದು ಎಂಬುದನ್ನು ಬಲ್ಲನು. ಹೇಗೆ ಹಾವು ಪರೆಯಿಂದ ಬಿಡುಗಡೆಯಾಗುವದೋ ಹಾಗೆಯೇ ಅವನು ಈ ಮರ್ತ್ಯವಾದ ಕೆಟ್ಟ ಶರೀರದಿಂದ ಬಿಡುಗಡೆಯನ್ನು ಹೊಂದುವನು. ಅವನು ಋಙ್ಮಯನಾಗಿ, ಯಜುರ್ಮಯನಾಗಿ ಸಾಮಮಯನಾಗಿ ಆಹುತಿಮಯನಾಗಿ ಸ್ವರ್ಗಲೋಕವನ್ನು ಪಡೆಯುವನು. ಇನ್ನು ಆ ದೇವಯಾಜಿಯೊ?– ಎಂದರೆ "ಇದರಿಂದ ದೇವತೆಗಳಿಗೇ ಯಾಗಮಾಡುತ್ತಿರುವೆನು, ದೇವತೆಗಳನ್ನು ಪೂಜಿಸುತ್ತಿರುವೆನು" ಎಂದು ತಿಳಿದುಕೊಂಡಿರುವನು. ಹೇಗೆ ಮೇಲಿನಂತಸ್ತಿನಲ್ಲಿರುವವನಿಗೆ ಕೀಳು ಅಂತಸ್ತಿನವನು ಕಾಣಿಕೆಯನ್ನು ಒಪ್ಪಿಸುವನೋ, ಹೇಗೆ ವೈಶ್ಯನು ರಾಜನಿಗೆ ಕಂದಾಯವನ್ನು ಒಪ್ಪಿಸುವನೋ, ಅವನೂ ಹಾಗೆಯೇ. ಅವನಿಗೆ ಆ ಇನ್ನೊಬ್ಬನಾದ ಆತ್ಮಯಾಜಿಗೆ ದೊರಕುವ ಲೋಕವು ದೊರಕಲಾರದು."**

ಈ ಮೇಲಿನ ವಾಕ್ಯದ ಅಭಿಪ್ರಾಯವನ್ನು ಓದುಗರು ಚೆನ್ನಾಗಿ ಮನಸ್ಸಿನಲ್ಲಿ ಮೆಲುಕುಹಾಕಬೇಕು. ಸ್ವಾಭಾವಿಕವಾದ ನಡತೆಯಿಂದ ಮನುಷ್ಯನು ತನ್ನ ಮನಸ್ಸಿನ ರಾಗದ್ವೇಷಗಳನ್ನು ಅನುಸರಿಸಿ ಬೇಕಾದದ್ದನ್ನು ಸಂಪಾದಿಸುವದಕ್ಕೂ ಬೇಡದ್ದನ್ನು

ತೊಲಗಿಸಿಕೊಳ್ಳುವದಕ್ಕೂ ಪ್ರಯತ್ನಿಸುತ್ತಿರುತ್ತಾನೆ. ಆದರೆ ಇಚ್ಛಾದ್ವೇಷಗಳ ದ್ವಂದ್ವಮೋಹಕ್ಕೆ ಕಟ್ಟುಬಿದ್ದ ಮನುಷ್ಯನ ನಡೆನುಡಿಗಳು ಅವನ ಅಧೀನದಲ್ಲಿರುವದಿಲ್ಲ; ಆ ಬೇಕುಬೇಡಗಳೆಂಬ ಮನಸ್ಸಿನ ಅಲೆಗಳು ಎತ್ತಲೆಂದರೆ ಅತ್ತ ಅವನನ್ನು ಹಾರಿಸಿಕೊಂಡು ಹೋಗುತ್ತಿರುವವು. ಅಂಥ ಸ್ವಾಭಾವಿಕ ವೃತ್ತಿಯ ಮನುಷ್ಯನಿಗಿಂತಲೂ ಶಾಸ್ತ್ರದೃಷ್ಟಿಯನ್ನು ಅವಲಂಬಿಸಿ ಇದನ್ನು ಮಾಡಬೇಕು, ಇದನ್ನು ಬಿಡಬೇಕು– ಎಂಬ ತಿಳಿವುಗಣ್ಣನ್ನು ಪಡೆದುಕೊಂಡು ಪಾಪಕರ್ಮವನ್ನು ಪುಣ್ಯಕರ್ಮವನ್ನು ಮಾಡುವವನು ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿ ಸುಖವನ್ನೇ ಪಡೆಯುತ್ತಾನೆ. ಆದರೆ ಅದಕ್ಕಿಂತಲೂ ಇನ್ನೂ ಒಂದು ಹೆಚ್ಚಿನ ಅಂತಸ್ತು ಇದೆ. ಕರ್ಮವನ್ನು ದೇವತೆಗಳ ಆರಾಧನೆಗಾಗಿ ಉಪಯೋಗಿಸಿ ಅವರನ್ನು ಪ್ರಸನ್ನರಾಗಿ ಮಾಡಿಕೊಂಡು ಅವರ ಅನುಗ್ರಹದಿಂದ ಪುರುಷಾರ್ಥವನ್ನು ಪಡೆಯುವದು ಹೆಚ್ಚಿನದಾದರೂ ಅದು ಕೆಲಸವನ್ನು ಮಾಡಿ ದಿನಗೂಲಿಯನ್ನು ಪಡೆಯುವವನ ಬಾಳಿನಂತೆಯೇ ಸರಿ. ಅದಕ್ಕಿಂತಲೂ ಹೆಚ್ಚಿನ ಫಲವನ್ನು ಪಡೆಯುವದಕ್ಕೂ ಕರ್ಮಗಳನ್ನು ಉಪಯೋಗಿಸಿಕೊಳ್ಳಬಹುದು, ಆಗ ಕರ್ಮವು ದೇವತಾಯಾಗವಾಗುವದಕ್ಕೆ ಬದಲು ಆತ್ಮಯಾಗವೆನಿಸುವದು. ಅದರಿಂದ ಸಾಧಕನ ಶರೀರೇಂದ್ರಿಯಗಳಿಗೆ ಉತ್ತಮವಾದ ಸಂಸ್ಕಾರವು ದೊರಕುವದು; ಆ ಸಂಸ್ಕಾರದಿಂದ ಅವನು ದೇವತೆಗಳಿಗೆಲ್ಲ ದೇವನೆನಿಸಿಕೊಂಡಿರುವ, ಸಕಲ ಪ್ರಾಣಿಗಳಿಗೂ ಆತ್ಮನೆಂದೆನಿಸಿ ಕೊಂಡಿರುವ, ಪರಮಾತ್ಮನನ್ನು ಆರಾಧಿಸುವದಕ್ಕೆ ತಕ್ಕ ಯೋಗ್ಯತೆಯನ್ನು ಪಡೆದುಕೊಳ್ಳುವನು– ಎಂಬುದು ಮೇಲಿನ ವೇದವಾಕ್ಯದ ಅಭಿಪ್ರಾಯವು.

ವೇದಶಾಸ್ತ್ರಗಳನ್ನು ಅಧ್ಯಯನಮಾಡುವದು, ಅವುಗಳಲ್ಲಿ ಹೇಳಿದ ಕರ್ಮಗಳನ್ನು ಮಾಡುವದು, ಪಾತ್ರವನ್ನರಿತು ದಾನಮಾಡುವದು, ಇಂದ್ರಿಯಗಳಿಗೆ ಮಿತಾಹಾರವನ್ನು ಒದಗಿಸಿಕೊಂಡು ತಪಸ್ಸುಮಾಡುವದು–ಎಂಬೀ ಕರ್ಮಗಳನ್ನು ಮೇಲೆ ವರ್ಣಿಸಿರುವ ರೀತಿಯಿಂದ ಆತ್ಮಯಾಗಕ್ಕೆಂದು ಬಳಸುವ ಮರ್ಮವನ್ನು ಅರಿತವನು ಮಿಕ್ಕ ಕರ್ಮಿಗಳಂತೆ ಮೇಲೇರಿ ಸುಖವನ್ನು ಪಡೆದು ಹಿಗ್ಗುವದು, ಕೆಳಕ್ಕೆ ಕುಸಿದು ದುಃಖವನ್ನು ಪಡೆದು ತಗ್ಗುವದು– ಎಂಬ ಏರಿಳಿತಗಳ ಹೊಡೆತವನ್ನು ತಪ್ಪಿಸಿಕೊಳ್ಳುವನು. ಆದ್ದರಿಂದ ಪೊರೆಯುಗಿದ ಹಾವಿನಂತೆ ಅವನು ತನ್ನ ಶರೀರಕ್ಕೆ ಸಂಬಂಧಪಟ್ಟ ಪಾಪದಿಂದ ಬಿಡುಗಡೆಯನ್ನು ಹೊಂದಿ ಉತ್ತಮವಾದ ಆತ್ಮಲೋಕಕ್ಕೆ ಅರ್ಹನಾಗುವನು.

ಕರ್ಮವನ್ನು ಹೀಗೆ ಆತ್ಮಯಾಗವಾಗಿ ಮಾಡಿಕೊಳ್ಳುವದಕ್ಕೆ ಉಪಾಯವು ಯಾವದು? ಇದಕ್ಕೆ ಉತ್ತರವನ್ನು ಸುಸ್ಪಷ್ಟವಾಗಿ ತಿಳಿಸಿರುವದು ಭಗವದ್ಗೀತೆಯಲ್ಲಿ. ಭಗವಂತನು ಅರ್ಜುನನಿಗೆ ತಾನೇ ಅಪ್ಪಣೆಕೊಡಿಸಿರುವ ಈ ವಾಕ್ಯವನ್ನು ನೆನಪಿನಲ್ಲಿಡುವದು ಒಳ್ಳೆಯದು.

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥** – ಭ. 18–46

ಯಾವ ಭಗವಂತನಿಂದಲೇ ಪ್ರಾಣಿಗಳ ಉತ್ಪತ್ತಿಯೂ ಸಕಲವ್ಯಾಪಾರಗಳೂ ನಡೆಯುತ್ತಿರುವವೋ ಯಾವನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿರುವದೋ ಆ ಪರಮೇಶ್ವರನನ್ನು ತನ್ನತನ್ನ ಕರ್ಮದಿಂದ ಅಭ್ಯರ್ಚನೆಮಾಡಿದರೆ ಮಾನವನು ಸಿದ್ಧಿಯನ್ನು ಹೊಂದುವನು-ಎಂಬುದು ಶ್ಲೋಕದ ಅಕ್ಷರಾರ್ಥವು. ಕರ್ಮಗಳನ್ನು ಶಾಸ್ತ್ರವಿಹಿತವೆಂಬ ಕಾರಣದಿಂದ ಮಾಡಿದರೆ ಪರಲೋಕದಲ್ಲಿ ಸುಖವನ್ನು ಅನುಭವಿಸಿದ ಬಳಿಕ ಉತ್ತಮವಾದ ದೇಶ, ಜಾತಿ, ಕುಲ, ಧರ್ಮ, ಆಯುಸ್ಸು, ವಿದ್ಯೆ, ಧನ, ಸುಖ, ಬುದ್ಧಿ-ಮುಂತಾದವುಗಳುಳ್ಳ ಜನ್ಮವನ್ನು ಪಡೆಯುತ್ತಾರೆ-ಎಂದು ಗೌತಮಾದಿಸ್ಮೃತಿಕಾರರು ಬರೆದಿರುತ್ತಾರೆ. ಆದರೆ ಯಾರು ತಾವು ಮಾಡುವ ಕರ್ಮವನ್ನು ಭಗವಂತನ ಆರಾಧನೆ ಎಂಬ ಭಾವನೆಯಿಂದ ಮಾಡುವರೋ ಅವರಿಗೆ ಈ ಮೇಲೆ ಹೇಳಿದ ಇಹಪರಗತಿಗಳಿಗಿಂತಲೂ ಹೆಚ್ಚಿನದಾದ ಜ್ಞಾನನಿಷ್ಠಾಯೋಗ್ಯತೆ ಎಂಬ ಫಲವು ದೊರಕುತ್ತದೆ.

ಈ ಸಂದೇಶಕ್ಕೆ ತೆಗೆದುಕೊಂಡಿರುವ ವಿಷಯವಾಕ್ಯದಲ್ಲಿ ಹೇಳಿರುವ ವೇದಾನುವಚನವೇ ಮುಂತಾದವುಗಳನ್ನು ಉಪಲಕ್ಷಣವಾಗಿ ತೆಗೆದುಕೊಳ್ಳಬೇಕು. ವೇದಾನುವಚನವೆಂಬುದು ನಿತ್ಯವಾಗಿ ಪಠಿಸಬೇಕೆಂದು ವಿಧಿಸಿರುವ ಕರ್ಮವು. ವೇದಾರ್ಥವನ್ನು ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿ ಯಾವಯಾವ ಸ್ಮೃತಿ ಪುರಾಣಾದಿಗಳನ್ನೂ ಯಾವಯಾವ ಅಂಗರೂಪವಾದ ಶಾಸ್ತ್ರಗಳನ್ನೂ ಓದುತ್ತಾರೆಯೋ ಅವೆಲ್ಲವೂ ಪರಮಪುರುಷನಾದ ಪರಮೇಶ್ವರನ ಆರಾಧನೆ ಎಂದು ಭಾವಿಸುವದು-ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯನ್ನು ಕೊಡುವ ಒಂದು ಹೆಚ್ಚಿನ ಸಾಧನವಾಗುವದು. ಲೌಕಿಕವಿದ್ಯೆಗಳನ್ನು ಓದಿ ಅವುಗಳಿಂದ ಲೌಕಿಕಜೀವನಯಾತ್ರೆಗೆ ತಕ್ಕ ಲಾಭವನ್ನು ಪಡೆಯುವದಕ್ಕಿಂತಲೂ "ಜ್ಞಾನವನ್ನು ಸಂಪಾದಿಸತಕ್ಕದ್ದು ನನ್ನ ಕರ್ತವ್ಯವು, ಅದರಿಂದ ಪರಮೇಶ್ವರನ ಅಭ್ಯರ್ಚನೆಯಾಗುವದು"- ಎಂಬ ಭಾವನೆಯು ಬಲಿತುಕೊಂಡವನು ಆತ್ಮಜ್ಞಾನಪ್ರಾಪ್ತಿಗೆ ಬಹಳ ಹತ್ತಿರವಿರುತ್ತಾನೆ. ಇದರಂತೆ ಪುತ್ರಪಶುಧನಾದಿಸಂಪತ್ತಿಗಳೂ ಪರಲೋಕದಲ್ಲಿ ಸುಖವೂ ಪ್ರಾಪ್ತವಾಗಲಿ ಎಂದು ಮಾಡುವ ಶಾಸ್ತ್ರೀಯಕರ್ಮಕ್ಕಿಂತಲೂ ಈ ಕರ್ಮವನ್ನು ಮಾಡುವದೇ ಪರಮೇಶ್ವರನ ಪರಮಪೂಜೆಯು ಎಂದು ಮಾಡುವದೂ ಜ್ಞಾನಪ್ರಾಪ್ತಿಗೆ ಬಹಳ ಹತ್ತಿರವಾದ ಸಾಧನವಾಗಿರುತ್ತದೆ. ಯೋಗ್ಯರಾದವರಿಗೆ ಪುಣ್ಯಪ್ರಾಪ್ತಿಯಾಗಲೆಂದು ಮಾಡುವ ದಾನಕ್ಕಿಂತಲೂ ಈ ದಾನವು ಪರಮೇಶ್ವರನ ಪ್ರಸನ್ನತೆಗೆ ಕಾರಣವಾಗಲಿ!- ಎಂಬ ಸದಿಚ್ಛೆಯಿಂದ ಮಾಡಿದ ದಾನವು ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ಹೋಗಲಾಡಿಸುವದಕ್ಕೆ ಕಾರಣವಾಗಿ ಅದರ ಮೂಲಕವಾಗಿ ಜ್ಞಾನಪ್ರಾಪ್ತಿಗೆ ಕಾರಣವಾಗುತ್ತದೆ. ಇದರಂತೆಯೇ ಹಿತಮಿತಮೇಧ್ಯವಾದ ಆಹಾರವನ್ನು ಪರಮೇಶ್ವರನ ಪ್ರಸಾದವೆಂದು ಸ್ವೀಕರಿಸುವ ತಪಸ್ಸು ಬಗೆಬಗೆಯ ಸಿದ್ಧಿಗಳನ್ನು ಕೊಡುವ ಕಾಷ್ಠತಪಸ್ಸಿಗಿಂತಲೂ ಬಹಳ ಹೆಚ್ಚಿನ ಅಂತಸ್ತಿನ ಪರಿಶುದ್ಧಿಯನ್ನು ಕೊಡುವದು.

ಹೀಗೆ ಯಾವ ಪುಣ್ಯಾತ್ಮರು ಶಾಸ್ತ್ರಾಧ್ಯಯನ, ಶಾಸ್ತ್ರೋಕ್ತಕರ್ಮ, ಸತ್ಪಾತ್ರದಲ್ಲಿ ದಾನ, ದೇಹೇಂದ್ರಿಯಗಳಿಗೆ ಪರಿಶುದ್ಧಿಯಾಗುವಂತೆ ಸಾತ್ತ್ವಿಕವಿಷಯ ಸೇವನೆ– ಇವುಗಳನ್ನು ಪರಮೇಶ್ವರನ ಆರಾಧನೆಗೆಂದು ಮಾಡುತ್ತಿರುವರೋ ಅವರೇ ಆತ್ಮಯಾಜಿಗಳು, ಅವರನ್ನೇ ಪರಮಾತ್ಮಜ್ಞಾನಕ್ಕೆ ಬೇಕಾದ ಕರ್ಮಯೋಗವೆಂಬ ಸಾಧನವನ್ನು ಮಾಡುವವರೆಂದು ಹೇಳಿರುತ್ತದೆ. ಈ ಸಾಧನವು ಆತ್ಮಜ್ಞಾನಕ್ಕೆ ಬಾಹ್ಯಾಂಗವಾದ ಸಾಧನವೆನಿಸುತ್ತದೆ.

## 4.3. ಜ್ಞಾನಕ್ಕೆ ಒಳಗಿನ ಸಾಧನಗಳು

**ತಸ್ಮಾದೇವಂ ವಿಚ್ಛಾಂತೋ ದಾಂತ ಉಪರತಸ್ತಿತಿಕ್ಷುಃ ।**
**ಶ್ರದ್ಧಾವಿತ್ತೋ ಭೂತ್ವಾಽಽತ್ಮನ್ಯೇವಾತ್ಮಾನಂ ಪಶ್ಯೇತ್ ॥ –ಬೃ. ಮಾ. 4–2–28**

ಅಧ್ಯಾತ್ಮಸಾಧನವೆಂಬುದು ಮುಖ್ಯವಾಗಿ ಅಂತಃಕರಣಕ್ಕೆ ಸಂಬಂಧಪಟ್ಟದ್ದು. ಏಕೆಂದರೆ ಅಂತಃಕರಣದಲ್ಲಿರುವ ಅನಾದಿಯಾದ ತಪ್ಪುತಿಳಿವಳಿಕೆಯೇ ಮನುಷ್ಯನ ಬಂಧಕ್ಕೆ ಕಾರಣವಾಗಿರುತ್ತದೆ. ಹೀಗಿದ್ದರೂ ಸಾಮಾನ್ಯಸ್ಥಿತಿಯಲ್ಲಿ ಮೊದಲು ಶಾರೀರಕ ವಾಚಿಕಕರ್ಮಗಳನ್ನು ಅನುಷ್ಠಾನಮಾಡುವದು ಅತ್ಯವಶ್ಯವಾಗಿರುತ್ತದೆ. ಏಕೆಂದರೆ ನಮ್ಮ ನಡೆನುಡಿಗಳಿಂದ ಅನುಕ್ಷಣವೂ ನಮ್ಮ ಅಂತಃಕರಣದ ಮೇಲೆ ಪರಿಣಾಮವು ಆಗುತ್ತಲೇ ಇರುತ್ತದೆ. ಆದ್ದರಿಂದ ಸಾಧಕನಾದವನು ಮೊದಲು ಬಾಹ್ಯಕರ್ಮಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆ ಮಾಡುತ್ತಾ ತನ್ನ ಅಂತಃಕರಣಕ್ಕೆ ಈಗ ಇರುವದಕ್ಕಿಂತ ಹೆಚ್ಚಿನ ಕಲ್ಮಷವು ಸೇರಿಕೊಳ್ಳದಂತೆ ನೋಡಿಕೊಳ್ಳುವದು ಅತ್ಯವಶ್ಯವಾಗಿರುತ್ತದೆ. ಈ ದೃಷ್ಟಿಯಿಂದಲೇ ಶ್ರುತಿಸ್ಮೃತಿಗಳಲ್ಲಿ ಅವಶ್ಯವಾಗಿ ಮಾಡಬೇಕಾದ ಕರ್ಮಗಳನ್ನು ವಿಧಿಸಿರುತ್ತದೆ. ಈ ಕರ್ಮಗಳನ್ನು ಪರಮೇಶ್ವರನ ಆರಾಧನೆ ಎಂಬ ಬುದ್ಧಿಯಿಂದ ಮಾಡುವದರಿಂದ ಅಂತಃಕರಣಕ್ಕೆ ಹೆಚ್ಚಿನ ಸಂಸ್ಕಾರವೂ ಆಗುತ್ತದೆ; ಆದ್ದರಿಂದಲೂ ಮುಮುಕ್ಷುಗಳು ಅವಶ್ಯವಾಗಿ ಯಥಾಶಕ್ತಿಯಾಗಿ ತಮ್ಮ ತಮ್ಮ ಕರ್ಮಗಳನ್ನು ಪರಮೇಶ್ವರಾರ್ಚನೆಯ ಬುದ್ಧಿಯಿಂದ ಮಾಡುವದು ಒಳ್ಳೆಯದು ಎಂದು ಹಿಂದಿನ ಸಂದೇಶದಲ್ಲಿ ತಿಳಿಸಲಾಗಿದೆ.

ಆದರೆ ಕರ್ಮವೆಂಬುದು ಒಂದು ಸಾಧನ; ಅದಕ್ಕೊಂದು ಉದ್ದೇಶವಿದೆ. ಆ ಉದ್ದೇಶವು ನೆರವೇರಿದ ಮೇಲೆ ಅದನ್ನು ಮಾಡಬೇಕಾದದ್ದಿರುವದಿಲ್ಲ. ಇದನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ಮುಮುಕ್ಷುಗಳಿಗೆಂದು ಶಾಸ್ತ್ರದಲ್ಲಿ ವಿಧಿಸಿರುವ ಧರ್ಮವು ಎರಡು ಪ್ರಕಾರವಾಗಿರುತ್ತದೆ. ಒಂದು ಪ್ರವೃತ್ತಿಧರ್ಮವು; ಶಾಸ್ತ್ರೋಕ್ತ ಕರ್ಮಗಳನ್ನು ಉಕ್ತವಿಧಾನದಿಂದ ಮಾಡಿ ಚಿತ್ತಶುದ್ಧಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಅದನ್ನು ವಿನಿಯೋಗಿಸಿಕೊಳ್ಳಬೇಕು. ಇನ್ನೊಂದು ನಿವೃತ್ತಿಧರ್ಮವು; ಕರ್ಮದ ಬಂಧದಿಂದ ಬಿಡುಗಡೆಮಾಡಿಕೊಳ್ಳುವದಕ್ಕೆ ಅದನ್ನು ವಿನಿಯೋಗಿಸಬೇಕು. ಈ ಗುಟ್ಟನ್ನು ಅರಿತುಕೊಳ್ಳಲಾರದವರು "ಕರ್ಮವನ್ನು ಮಾಡಬೇಕೊ, ಬಿಡಬೇಕೊ? ಶಾಸ್ತ್ರದಲ್ಲಿ ಎರಡನ್ನೂ ಹೇಳಿದಂತೆ ಇದೆಯಲ್ಲ!" ಎಂದು

ಕೇಳುತ್ತಿರುವರು. ರೋಗಿಯಾದವನು "ನಾನು ಆಹಾರವನ್ನು ತೆಗೆದುಕೊಳ್ಳಲೊ, ಬೇಡವೋ?" ಎಂದು ವೈದ್ಯನನ್ನು ಕೇಳಿದರೆ ವೈದ್ಯನು ಯಾವಾಗಲೂ ಒಂದೇ ಬಗೆಯ ಉತ್ತರವನ್ನು ಕೊಡುವದಿಲ್ಲ. "ಈ ಸಮಯದಲ್ಲಿ ನೀನು ಯಾವ ಆಹಾರವನ್ನೂ ತೆಗೆದುಕೊಳ್ಳದೆ ಇರಬೇಕು", "ಈಗ ನೀನು ಬಹಳ ಹಗುರವಾದ ಬೇಗನೆ ಜೀರ್ಣವಾಗುವ ಇಂಥಿಂಥ ಆಹಾರಗಳನ್ನು ತೆಗೆದುಕೊಳ್ಳುತ್ತಿರಬಹುದು", "ಈಗ ಪುಷ್ಟಿಕರವಾದ ಇಂಥಿಂಥ ಆಹಾರಗಳನ್ನು ತೆಗೆದುಕೊ"–ಎಂದು ಆಯಾ ಸಂದರ್ಭಕ್ಕೆ ತಕ್ಕಂತೆಯೇ ಆಹಾರ ನಿಯಮವನ್ನು ಹೇಳುವನು. ಅಲ್ಲವೆ? ಇದರಂತೆಯೇ ಸಂಸಾರರೋಗಕ್ಕೆಲ್ಲ ಮಹಾವೈದ್ಯನಂತಿರುವ ವೇದವೂ "ನೀವು ಇಂಥಿಂಥ ಸಂದರ್ಭದಲ್ಲಿ ಇಂಥಿಂಥ ಕರ್ಮಗಳನ್ನು ಮಾಡಿರಿ", "ಇಂಥಿಂಥ ಸಂದರ್ಭದಲ್ಲಿ ಇಂಥಿಂಥ ಕರ್ಮಗಳನ್ನು ಬಿಡಿರಿ"– ಎಂದು ವಿಧಿನಿಷೇಧಗಳ ರೂಪದಿಂದ ನಮಗೆ ಬುದ್ಧಿಹೇಳುತ್ತದೆ. ವಿವೇಕಿಯಾದವನು ಶಾಸ್ತ್ರದಲ್ಲಿ ಹೇಳಿರುವಂತೆಯೇ ಕಾರ್ಯವು ಯಾವದು? ಕಾರ್ಯವಲ್ಲದ್ದು ಯಾವದು?– ಎಂಬುದನ್ನು ನಿಶ್ಚಯಿಸಬೇಕು. ಅದರಿಂದಲೇ ಅವನಿಗೆ ಶ್ರೇಯಸ್ಸಾಗುವದು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಕರ್ಮಯೋಗವನ್ನು ಎಲ್ಲಿಯವರೆಗೆ ಮಾಡಬೇಕು, ಕರ್ಮೋಪಶಮವನ್ನು ಯಾವಾಗ ಆಚರಿಸಬೇಕು?– ಎಂಬುದನ್ನು ಹೀಗೆ ತಿಳಿಸಿಕೊಟ್ಟಿರುತ್ತಾನೆ :

**ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।**
**ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥ (ಗೀ. 6–3)**

ಧ್ಯಾನಯೋಗವನ್ನು ಪಡೆಯಬೇಕೆಂದು ಇಚ್ಛಿಸುವವನಿಗೆ ಕರ್ಮವೇ ಕಾರಣವು. ಸ್ವೇಚ್ಛೆಯಿಂದ ವರ್ತಿಸುವವನಿಗೆ ಮನಸ್ಸು ಹೇಗೆ ಹಿಡಿತಕ್ಕೆ ಬಂದೀತು? ಅದನ್ನು ಅಧ್ಯಾತ್ಮಸಾಧನೆಗೆ ಉಪಯೋಗಿಸಿಕೊಳ್ಳುವದಾದರೂ ಹೇಗೆ ಆದೀತು? ಎಂದಿಗೂ ಆಗಲಾರದು. ಆದ್ದರಿಂದ ವಿವೇಕಿಯಾದವನು ಮೊದಲು ತನ್ನ ಶರೀರೇಂದ್ರಿಯಗಳನ್ನು ಕರ್ಮಯೋಗದಿಂದ ಒಂದು ಹಿಡಿತಕ್ಕೆ ತಂದುಕೊಳ್ಳುವ ಪ್ರಯತ್ನವನ್ನು ಮೊದಲು ಮಾಡಬೇಕು. ಕರ್ಮವನ್ನು ಮಾಡುತ್ತಲೂ ಅದರಲ್ಲಿ ಸಂಗವನ್ನು ಅಂಟಿಸಿಕೊಳ್ಳದೆ ಫಲಾಸಕ್ತಿಗೆ ಮನಸ್ಸನ್ನು ಜೋಲುಬಿಡದೆ ಪರಮೇಶ್ವರನಿಗೇ ಅದನ್ನು ಅರ್ಪಿಸುತ್ತಲೂ ಇರುವವನಿಗೆ ಕ್ರಮಕ್ರಮವಾಗಿ ಅಂತಃಕರಣವು ಸ್ವಾಧೀನಕ್ಕೆ ಬರುತ್ತದೆ. ಹೊರಗಿನ ಶರೀರಕ್ಕೂ ಅಂತಃಕರಣಕ್ಕೂ ಸಾಮಾನ್ಯಸ್ಥಿತಿಯಲ್ಲಿ ಇದ್ದುಕೊಂಡಿರುವ ಬೆಸುಗೆಯು ಬಿಟ್ಟುಕೊಳ್ಳುತ್ತದೆ; ಅಂತಃಕರಣವು ಹೊರಗಿನ ಪ್ರಪಂಚದ ಹಂಗಿಲ್ಲದೆ ತನ್ನಲ್ಲಿ ತಾನು ತತ್ತ್ವ ಚಿಂತನೆಯನ್ನು ಮಾಡುವ ಯೋಗ್ಯತೆಯನ್ನು ಹೊಂದುತ್ತದೆ. ಇನ್ನುಮೇಲೆ ಅದಕ್ಕೆ ಪ್ರವೃತ್ತಿಧರ್ಮದ ಅವಶ್ಯಕತೆಯಿರುವದಿಲ್ಲ, ನಿವೃತ್ತಿಧರ್ಮವೇ ಬೇಕಾಗುತ್ತದೆ.

ನಿವೃತ್ತಿಧರ್ಮದ ಸಾರವನ್ನು "ಶಾನ್ತೋ ದಾನ್ತಃ" ಎಂಬ ಶ್ರುತಿಯಲ್ಲಿ ಹೇಳಿರುತ್ತದೆ. "ಶಮಾದಿಷಟ್ಕಸಂಪತ್ತಿ" ಎಂದು ರೂಢಿಯಾಗಿ ಜನರು ಆಡಿಕೊಳ್ಳುತ್ತಿರುವರಷ್ಟೆ? ಬೃಹದಾರಣ್ಯಕದ ಕಾಣ್ವಶಾಖೆಯ ಪಾಠದಲ್ಲಿ ಶಮೆ, ದಮೆ, ಉಪರತಿ, ತಿತಿಕ್ಷೆ, ಸಮಾಧಾನ- ಎಂಬ ಐದು ಸಾಧನಗಳನ್ನು ಹೇಳಿದೆ. ನಾನು ಈ ಸಂದೇಶಕ್ಕೆ ಬರೆದುಕೊಂಡಿರುವ ಮಾಧ್ಯಂದಿನಪಾಠದಲ್ಲಿ ಶಮೆ, ದಮೆ, ಉಪರತಿ, ತಿತಿಕ್ಷೆ, ಶ್ರದ್ಧೆ- ಎಂಬ ಐದು ಸಾಧನಗಳನ್ನು ಹೇಳಿದೆ. ಈ ಎರಡು ಶಾಖೆಗಳಲ್ಲಿಯೂ ಹೇಳಿರುವ ಸಾಧನಗಳನ್ನು ಗುಣೋಪಸಂಹಾರ ನ್ಯಾಯದಿಂದ ಸೇರಿಸಿಕೊಂಡು **ಶಮಾದಿಷಟ್ಕ**ವೆಂಬ ಮಾತಿನಲ್ಲಿ ವೇದಾಂತಿಗಳು ಆರು ಸಾಧನಗಳನ್ನು ಉಲ್ಲೇಖಿಸುತ್ತಿರುತ್ತಾರೆ.

ಶಮೆ ಎಂದರೆ ಅಂತಃಕರಣದ ನಿಗ್ರಹವು; ಮನಸ್ಸು ಚದರದಂತೆ ನೋಡಿಕೊಳ್ಳುವದೇ ಶಮೆಯು. ದಮೆಯೆಂದರೆ ಬಹಿರಿಂದ್ರಿಯನಿಗ್ರಹವು; ಶಬ್ದ ಸ್ಪರ್ಶಾದಿಗಳತ್ತ ಇಂದ್ರಿಯಗಳು ಓಡದಂತೆ ಹಿಂಜಗ್ಗಿ ಅವನ್ನು ಪಳಗಿಸುವ ಸಾಧನವಿದು. ಬರಿಯ ಇಂದ್ರಿಯಗಳನ್ನು ಹಿಂದಕ್ಕೆ ಎಳೆದುಕೊಂಡರೆ ಮತ್ತೆ ಅವು ಯಾವಾಗಲೋ ಒಮ್ಮೆ ನಮಗೆ ಅರಿಯದಂತೆ ಹೊರಚಿಮ್ಮುವವು; ಮನಸ್ಸಂತೂ ಒಳಗೇ ಹಿಂದಿನ ಅನುಭವದ ವಾಸನೆಯಿಂದ ಒಳಗೊಳಗೇ ವಿಷಯಚಿಂತನೆಯನ್ನು ಮಾಡುತ್ತಿರುವದು. ಈ ಎರಡು ದೋಷಗಳನ್ನೂ ತಪ್ಪಿಸಿಕೊಳ್ಳಬೇಕೆನ್ನುವವರು ಇಂದ್ರಿಯಗಳನ್ನು ಯಾವಾಗಲೂ ವಿಷಯಸಂನಿಧಿಯಲ್ಲಿರದಂತೆ ನೋಡಿಕೊಳ್ಳುವದಲ್ಲದೆ, ಅವು ವಿಷಯಗಳತ್ತ ಹರಿದಾಡುವಾಗ ಮನಸ್ಸನ್ನು ಅವುಗಳ ಬೆನ್ನುಹತ್ತದಂತೆ ಮಾಡಿಕೊಳ್ಳುವದನ್ನು ಕಲಿಯಬೇಕು. ಮನುಷ್ಯನು ಎಂಥ ವಿವೇಕಿಯಾಗಿರಲಿ, ಇಂದ್ರಿಯಗಳ ಹಿಂದೆ ಮನಸ್ಸನ್ನು ಹರಿಯಬಿಟ್ಟನೆಂದರೆ ದೋಣಿಯನ್ನು ಗಾಳಿಯು ಎಳೆದೊಯ್ಯುವಂತೆ ಅವನ ವಿವೇಕವನ್ನು ಅದು ಹಾರಿಸಿಬಿಡುತ್ತದೆ. ಆದ್ದರಿಂದ **ಶಮೆದಮೆ**ಗಳೆರಡನ್ನೂ ಮುಮುಕ್ಷುವಾದವನು ಒಟ್ಟಿಗೆ ಅಭ್ಯಾಸಮಾಡಬೇಕು. ವ್ಯವಹಾರದ ಕಾರ್ಯಗಳಲ್ಲಿ ಆಗಾಗ್ಗೆ ಕರ್ಮೇಂದ್ರಿಯಗಳನ್ನು ಹರಿಯಗೊಡುವದರಿಂದಲೂ ಜ್ಞಾನೇಂದ್ರಿಯಗಳನ್ನೂ ಕರ್ಮೇಂದ್ರಿಯಗಳ ಸೇವೆಯನ್ನು ಮಾಡುವಂತೆ ಪ್ರೋತ್ಸಾಹಿಸುವದರಿಂದಲೂ ಮನಸ್ಸು ಬಗೆಬಗೆಯ ಆಶೆಗಳನ್ನಿಟ್ಟುಕೊಂಡು ಹಂಬಲಿಸುತ್ತಿರುವದರಿಂದಲೂ ಅಧ್ಯಾತ್ಮ ಚಿಂತನೆಯೆಂಬುದು ಅಳವಡದೆ ಇರುತ್ತದೆ. ಆದ್ದರಿಂದ ಮುಮುಕ್ಷುವಾದ ಸಾಧಕನು **ಉಪರತಿ**, ಕರ್ಮಗಳ ಗೊಡವೆಗೆ ಹೋಗದಿರುವದು, ಎಂಬ ಕರ್ಮ ಸಂನ್ಯಾಸವನ್ನು ಅಭ್ಯಾಸಮಾಡಬೇಕು. "ತತಸ್ತತಶ್ಚೋಪರಮಃ ಕ್ರಿಯಾಭ್ಯಃ" ಆಗಾಗ್ಗೆ ಬಂದೊದಗುವ ಕ್ರಿಯೆಗಳಿಂದ ವಿಮುಖನಾಗುವದೇ ಉಪರತಿಯು; ಇದು ಬಹಿರಿಂದ್ರಿಯಗಳ ವ್ಯಾಪಾರಮಾತ್ರವೆಂದು ತಿಳಿಯಬಾರದು; ಮನಸ್ಸಿಗೂ ಸೇರಿದ್ದಾಗಿರುತ್ತದೆ. **ತಿತಿಕ್ಷೆ** ಎಂದರೆ ಚಳಿಸೆಕೆ- ಮುಂತಾದವುಗಳಿಂದಾಗುವ ಉಪಟಳದಿಂದ ಮನಸ್ಸಿನಲ್ಲಿ ಕಳವಳಪಡದೆ ಇರುವದು; ಆ ದ್ವಂದ್ವಗಳಿಂದ ಮನಸ್ಸಿನಲ್ಲಿ ಏರುಪೇರುಗಳಾಗದಂತೆ ನೋಡಿಕೊಳ್ಳುವದು. **ಶ್ರದ್ಧೆ**

ಎಂದರೆ ಗುರುಶಾಸ್ತ್ರಗಳ ವಚನದಲ್ಲಿ ಪ್ರಾಮಾಣ್ಯಬುದ್ಧಿಯಿರುವದು. ಯಾರಿಂದಲೇ ಅಧ್ಯಾತ್ಮವಿದ್ಯೆಯ ರಹಸ್ಯವು ಗೊತ್ತಾಗಬೇಕೋ ಅವರಲ್ಲಿ ಶ್ರದ್ಧೆಯಿಲ್ಲದಿದ್ದರೆ ಯಾರಿಗೂ ಆ ವಿದ್ಯೆಯು ಒಲಿಯಲಾರದು. ಸಮಾಧಾನವೆಂದರೆ ಮನಸ್ಸನ್ನು ಅತ್ತಿತ್ತ ಹರಿದಾಡಗೊಡದೆ ಆತ್ಮನಲ್ಲಿಯೇ ಇಟ್ಟುಕೊಳ್ಳುವ ಅಭ್ಯಾಸ. ಈ ಆರೂ ನಿವೃತ್ತಿಮಾರ್ಗಕ್ಕೆ ಅವಶ್ಯವಾಗಿ ಬೇಕಾಗುವ ಅಂತರಂಗಸಾಧನಗಳು.

ಶಮಾದಿಷಟ್ಕವೆಂದು ಸಂಕ್ಷೇಪವಾಗಿ ಕರೆದಿರುವ ಈ ನಿವೃತ್ತಿಧರ್ಮದಲ್ಲಿ ಕೇವಲ ಮನಸ್ಸಿನಿಂದಲೇ ಮಾಡಬೇಕಾದ ಸಾಧನಗಳೆಲ್ಲವೂ ಅಡಗಿರುತ್ತವೆ. ಈ ಸಾಧನಗಳನ್ನು "ಅಕ್ರೋಧೋಽಹರ್ಷೋಽರೋಷೋಽಲೋಭೋಽಮೋಹೋಽದಂಭೋಽದ್ರೋಹಃ ಸತ್ಯವಚನಮನತ್ಯಾಶೋಽಪೈಶುನಮನಸೂಯಾ ಸಂವಿಭೋಗ ಆರ್ಯಮಾನ್ಯಶಂ- ಸಗ್‌ಂತುಷ್ಟಿರಿತಿ ಸರ್ವಾಶ್ರಮಾಣಾಗ್‌ಂ ಸಮಯಪರಾಣಿತಾನ್ಯನುತಿಷ್ಠನ್ ವಿಧಿನಾ ಸಾರ್ವಗಾಮೀ ಭವತಿ" (ಆ. ಧ. 1-23-6) ಎಂದು ಆಪಸ್ತಂಬರು ತಮ್ಮ ಧರ್ಮಶಾಸ್ತ್ರದಲ್ಲಿ ವಿವರಿಸಿರುತ್ತಾರೆ. ಪ್ರಾಣಿಗಳನ್ನು ಸುಡುತ್ತಿರುವ ಕ್ರೋಧಾದಿದೋಷಗಳನ್ನೇ ಈ ಸಾಧನಗಳು ಸುಟ್ಟುಹಾಕುತ್ತವೆ-ಎಂದು ಅವರ ಮತ. ಹೀಗೆಯೇ ಯೋಗಸೂತ್ರದಲ್ಲಿ ಯಮಗಳು ಎಂಬ ಹೆಸರಿನಿಂದ ಹೇಳಿರುವ ಧರ್ಮಗಳನ್ನೂ ಭಗವದ್ಗೀತೆಯಲ್ಲಿ ಹೇಳಿರುವ "ಅಮಾನಿತ್ವ ಮದಂಭಿತ್ವಮ್" ಮುಂತಾದ ಧರ್ಮಗಳನ್ನೂ ತಿಳಿಯಬೇಕು.

ಭಗವಂತನು ಅರ್ಜುನನಿಗೆ ಹೇಳಿರುವ ಇಪ್ಪತ್ತು ಗುಣಗಳಿಗೆ "ಜ್ಞಾನ"ವೆಂಬ ಹೆಸರನ್ನು ಕೊಟ್ಟಿರುತ್ತಾನೆ. "ಏತಜ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ" ಇದಕ್ಕೆ ಜ್ಞಾನವೆಂದು ಹೆಸರು, ಇದಕ್ಕೆ ವಿಪರೀತವಾಗಿರುವ ಮಾನಿತ್ವವೇ ಮುಂತಾದದ್ದಿದೆಯಲ್ಲ, ಅದು ಅಜ್ಞಾನವು- ಎಂದು ಶ್ರೀಕೃಷ್ಣನು ಸ್ಪಷ್ಟವಾಗಿ ನುಡಿದಿರುತ್ತಾನೆ. ಪ್ರವೃತ್ತಿಧರ್ಮವೆಂದರೆ ಕರ್ಮಗಳ ನಿಯಮಕ್ಕೆ ವರ್ತಿಸುವದು ಎಂದು ತಿಳಿದಿರುವವರು ತಮ್ಮದು ತಪ್ಪುತಿಳಿವಳಿಕೆ ಎಂಬುದನ್ನು ಈ "ಜ್ಞಾನಗಳ" ಪಟ್ಟಿಯಿಂದಲೇ ತಿಳಿದುಕೊಳ್ಳಬಹುದಾಗಿರುತ್ತದೆ. ಈಗಿನ ಕಾಲಕ್ಕೆ ಅನೇಕರು "ನಾವು ಪರಮಹಂಸರು, ನಮಗೆ ಯಾವ ನಿಯಮವೂ ಇಲ್ಲ" ಎಂದು ದಿಟ್ಟತನದಿಂದ ನುಡಿಯುತ್ತಿರುತ್ತಾರೆ. ಮತ್ತೆ ಕೆಲವರು "ನಾವು ಬ್ರಹ್ಮನಿಷ್ಠರು, ಬ್ರಹ್ಮವಿದ್ವರಿಷ್ಠರು, ಬ್ರಹ್ಮಜ್ಞಾನಿಗಳು ಯಾವ ವಿಧಿಗೂ ಕಿಂಕರರಲ್ಲ" ಎಂದು ಹೆಮ್ಮೆಯನ್ನು ಕೊಚ್ಚಿಕೊಳ್ಳುವದುಂಟು. ನಿಜವನ್ನು ಅರಿಯದ ಸಾಮಾನ್ಯ ಜನರು "ಪರಮಹಂಸರು, ಅಥವಾ ಜ್ಞಾನಿಗಳು" ಎಂಬುವರು ಎಲ್ಲಕ್ಕೂ ಮೇಲಿನ ಅಂತಸ್ತಿನವರಾದ್ದರಿಂದ ಅವರು ಸ್ವೇಚ್ಛಾಚಾರಿಗಳಾಗಿದ್ದರೂ ಚಿಂತೆಯಿಲ್ಲ-ಎಂದುಕೊಳ್ಳುತ್ತಾರೆ. ಆದರೆ ಸ್ವೇಚ್ಛಾಚಾರಿಗಳಾಗಿ ಯಾವ ಕಟ್ಟುಪಾಡೂ ಇಲ್ಲದ ನಡೆನುಡಿಗಳವರು ಪರಮಹಂಸರೂ ಅಲ್ಲ, ಜ್ಞಾನಿಗಳೂ ಅಲ್ಲ-ಎಂದು ವಿವೇಕಿಗಳು ನಿಶ್ಚಯಿಸಿಕೊಂಡುಬಿಟ್ಟಿರುತ್ತಾರೆ.

ಬ್ರಹ್ಮಸೂತ್ರಭಾಷ್ಯದಲ್ಲಿ ಶ್ರೀಶಂಕರಭಗವತ್ಪಾದರವರು ಹೇಳಿರುವ ಈ ಸ್ಪಷ್ಟೋಕ್ತಿಗಳನ್ನು ಓದುಗರು ಮನಸ್ಸಿಗೆ ತಂದುಕೊಳ್ಳಬೇಕು. "ಬ್ರಹ್ಮಸಂಸ್ಥಃ ಇತಿ ಹಿ ಬ್ರಹ್ಮಣಿ ಪರಿಸಮಾಪ್ತಿಃ, ಅನನ್ಯವ್ಯಾಪಾರತಾರೂಪತನ್ನಿಷ್ಠತ್ವಮ್ ಅಭಿಧೀಯತೇ । ತಚ್ಚ ತ್ರಯಾಣಾಮ್ ಆಶ್ರಮಿಣಾಂ ನ ಸಂಭವತಿ । ಸ್ವಾಶ್ರಮ ವಿಹಿತಕರ್ಮಾನನುಷ್ಠಾನೇ ಪ್ರತ್ಯವಾಯ ಶ್ರವಣಾತ್। ಪರಿವ್ರಾಜಕಸ್ಯ ತು ಸರ್ವ ಕರ್ಮಸಂನ್ಯಾಸಾತ್ ಪ್ರತ್ಯವಾಯೋ ನ ಸಂಭವತ್ಯನನುಷ್ಠಾನನಿಮಿತ್ತಃ । ಶಮದಮಾದಿಸ್ತು ತದೀಯೋ ಧರ್ಮೋ ಬ್ರಹ್ಮಸಂಸ್ಥತಾಯಾ ಉಪೋದ್ಬಲಕೋ ನ ವಿರೋಧೀ । ಬ್ರಹ್ಮನಿಷ್ಠತ್ವಮೇವ ಹಿ ತಸ್ಯ ಶಮದಮಾದ್ಯುಪಬೃಂಹಿತಂ ಸ್ವಾಶ್ರಮವಿಹಿತಂ ಕರ್ಮ, ಯಜ್ಞಾದೀನಿ ಚೇತರೇಷಾಮ್ । ತದ್ವ್ಯತಿಕ್ರಮೇ ಚ ತಸ್ಯ ಪ್ರತ್ಯವಾಯಃ ॥" (ಸೂ. ಭಾ. 3–4–20) ಇದರ ಅಭಿಪ್ರಾಯವೇನೆಂದರೆ : ಬ್ರಹ್ಮಸಂಸ್ಥ ಎಂಬ ಮಾತು ಬ್ರಹ್ಮದಲ್ಲಿಯೇ ಪರಿಸಮಾಪ್ತಿಯನ್ನು ಹೊಂದಿರುವದು, ಮತ್ತೊಂದು ವ್ಯಾಪಾರವಿಲ್ಲದ್ದೆಂಬ ಬ್ರಹ್ಮನಿಷ್ಠತ್ವವನ್ನೇ ಹೇಳುತ್ತದೆ. ಆ ಬ್ರಹ್ಮನಿಷ್ಠತ್ವವು ಮಿಕ್ಕ ಮೂರು ಆಶ್ರಮಗಳಲ್ಲಿರುವವರಿಗೆ ಸಂಭವಿಸುವದಿಲ್ಲ; ಏಕೆಂದರೆ ತಮ್ಮ ತಮ್ಮ ಆಶ್ರಮಕ್ಕೆ ವಿಹಿತವಾಗಿರುವ ಕರ್ಮವನ್ನು ಅನುಷ್ಠಾನಮಾಡದಿದ್ದರೆ ಮಾಡಬಾರದ ಕರ್ಮವನ್ನು ಮಾಡಿದ್ದರಿಂದಾಗುವ ಪ್ರತ್ಯವಾಯವು ಉಂಟಾಗುತ್ತದೆ ಎಂದು ಶ್ರುತಿಯಲ್ಲಿದೆ. ಪರಿವ್ರಾಜಕನಿಗಾದರೋ ಅವನು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರುವದರಿಂದ ಅವುಗಳನ್ನು ಅನುಷ್ಠಾನಮಾಡಲಿಲ್ಲವೆಂಬ ನಿಮಿತ್ತದಿಂದ ಯಾವ ಪ್ರತ್ಯವಾಯವೂ ಆಗಲಾರದು. ಶಮದಮಾದಿಗಳೆಂಬ ಅವನ ಧರ್ಮವೋ ಬ್ರಹ್ಮಸಂಸ್ಥನಾಗಿರುವದಕ್ಕೆ ಬೆಂಬಲವನ್ನು ನೀಡುವದೇ ಹೊರತು ವಿರೋಧಿಯಾಗಿರುವದಿಲ್ಲ. ಶಮದಮಾದಿಗಳಿಂದ ಬೆಳೆದ ಬ್ರಹ್ಮನಿಷ್ಠತ್ವವೇ ಅಲ್ಲವೆ, ಅವನ ಆಶ್ರಮಕ್ಕೆ ವಿಹಿತವಾಗಿರುವ ಕರ್ಮವು? ಯಜ್ಞಾದಿಗಳು ಇತರರಿಗೆ ಕರ್ಮವು. ಆ ಶಮದಮಾದ್ಯುಪೇತವಾದ ಬ್ರಹ್ಮನಿಷ್ಠತ್ವವನ್ನು ಮೀರಿದರೆ ಮಾತ್ರ ಆ ಪರಿವ್ರಾಜಕನಿಗೆ ಪ್ರತ್ಯವಾಯವಾಗುವದು.

ಮೇಲೆ ಕಪ್ಪಕ್ಷರದಲ್ಲಿ ಅಚ್ಚುಮಾಡಿಸಿರುವ ಶಂಕರವಾಕ್ಯವನ್ನು ಅಧ್ಯಾತ್ಮವಿದ್ಯೆಯಲ್ಲಿ ಆದರವುಳ್ಳ ನಾವೆಲ್ಲರೂ ಮತ್ತೆ ಮತ್ತೆ ಮೆಲುಕುಹಾಕಬೇಕು. ಗೃಹಸ್ಥರಾದವರು ವೇದಾಂತವಿಚಾರವನ್ನು ಮಾಡಬಹುದು; ಆದರೆ ಅವರು ತಮ್ಮ ಆಶ್ರಮದ ಕರ್ಮಗಳನ್ನು ಎಂದಿಗೂ ಬಿಡಬಾರದು; ಬಿಟ್ಟರೆ ಅವರಿಗೆ ಶಾಸ್ತ್ರದೃಷ್ಟವಾದ ದೋಷವು ಬಂದು ಜ್ಞಾನೋತ್ಪತ್ತಿಗೆ ಅಡ್ಡಿಯನ್ನುಂಟು ಮಾಡುತ್ತದೆ ಎಂದು ಸ್ಪಷ್ಟೋಕ್ತಿಯಿಂದ ಆಚಾರ್ಯರು ಹೇಳಿರುತ್ತಾರೆ. ಇನ್ನು ಪರಮಹಂಸಪರಿವ್ರಾಜಕರಾದವರು ಗೃಹಸ್ಥಕರ್ಮಗಳನ್ನು ವಿಧಿವತ್ತಾಗಿ ಬಿಟ್ಟಿದ್ದರಿಂದಲೇ ಸಂನ್ಯಾಸಿಗಳೆನಿಸಿಕೊಂಡಿರುತ್ತಾರೆ; ಆದ್ದರಿಂದ ಅವರು ಗೃಹಸ್ಥರಿಗೆ ಹೇಳಿರುವ ಜಾತಿಯ ಕರ್ಮಗಳನ್ನು ಯಾವವನ್ನೂ ಮಾಡತಕ್ಕದ್ದಲ್ಲ, ಏಕೆಂದರೆ ಅವನ್ನು ಸಂನ್ಯಾಸಿಗಳಿಗೆ ವಿಧಿಸಿಲ್ಲ. ಆದರೆ ಇಷ್ಟುಮಾತ್ರದಿಂದ ಸಂನ್ಯಾಸಿಗಳಿಗೆ ಯಾವ ಕರ್ತವ್ಯವೂ ಇಲ್ಲವೆಂದು ತಿಳಿಯುವಹಾಗಿಲ್ಲ. ಅವರು ಬಾಹ್ಯಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು

ಮಾಡಿಕೊಂಡಿರುತ್ತಾರಾದ್ದರಿಂದ ಇನ್ನುಮುಂದೆ ಆ ಕರ್ಮಗಳನ್ನು ಮಾಡಬಾರದು, ಏಕೆಂದರೆ ಅವು ಅವರಿಗೆ ಚಿತ್ತವಿಕ್ಷೇಪವನ್ನುಂಟುತ್ತವೆ, ನಿಜ. ಅವರು ಅನುಸರಿಸಬೇಕಾದದ್ದು ನಿವೃತ್ತಿಧರ್ಮವು. ನಿವೃತ್ತಿ ಧರ್ಮಗಳನ್ನು ಅನುಸರಿಸುತ್ತಾ ಪರಮಾತ್ಮನಲ್ಲಿಯೇ ಮನಸ್ಸನ್ನು ಏಕಾಗ್ರತೆಗೊಳಿಸಿಕೊಂಡಿರುವದೇ ಅವರಿಗೆ ವಿಹಿತವಾದ ಧರ್ಮವು. ಗೃಹಸ್ಥರು ಪ್ರವೃತ್ತಿ ಧರ್ಮವನ್ನು ಬಿಟ್ಟರೆ ಹೇಗೆ ಅವರಿಗೆ ಪ್ರತ್ಯವಾಯ ವುಂಟಾಗುವದೋ ಹಾಗೆಯೇ ಸಂನ್ಯಾಸಿಗಳು ಶಮದಮಾದಿಗಳ ಅಭ್ಯಾಸವನ್ನು ಬಿಟ್ಟರೆ ಅವರಿಗೂ ಪ್ರತ್ಯವಾಯ ವುಂಟಾಗುತ್ತದೆ. ಹೀಗೆಂದು ಆಚಾರ್ಯರು ಹೇಳಿರುತ್ತಾರೆಂಬುದು ಸೂರ್ಯ ಪ್ರಕಾಶದಷ್ಟು ಸ್ಫುಟವಾಗಿರುತ್ತದೆ.

ಭಗವದ್ಗೀತೆಯಲ್ಲಿ ಹೇಳಿರುವ ಅಮಾನಿತ್ವಾದಿಗಳಲ್ಲಿ ಏನು ಸೇರಿವೆಯೆಂಬುದನ್ನು ವಾಚಕರು ಮನಸ್ಸಿನಲ್ಲಿ ಹೊರಳಾಡಿಸುವದರಿಂದ ಪ್ರಯೋಜನವುಂಟು. ಗೀತೆಯಲ್ಲಿ ಅವುಗಳು ಎಲ್ಲರಿಗೂ ತಿಳಿಯುವಂತೆ ಉಕ್ತವಾಗಿವೆ; ಭಾಷ್ಯಕಾರರೂ ಅವನ್ನು ವಿವರಿಸಿ ಇರುತ್ತಾರೆ. ಆದ್ದರಿಂದ ಅವುಗಳೆಲ್ಲವನ್ನೂ ಇಲ್ಲಿ ವಿವರಿಸುವ ಗೋಜಿಗೆ ಹೋಗದೆ ಕೆಲವು ಮುಖ್ಯಸಾಧನಗಳನ್ನು ಓದುಗರ ಲಕ್ಷ್ಯಕ್ಕೆ ತರುವೆನು. ಆಚಾರ್ಯರ ಸೇವೆ, ಅಂತರ್ಬಹಿಃಶೌಚ, ಮನ ಇಂದ್ರಿಯಗಳ ನಿಗ್ರಹ, ಪರಮೇಶ್ವರನಲ್ಲಿ ಅವ್ಯಭಿಚರಿತವಾದ ಭಕ್ತಿ, ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವ ನಿತ್ಯಪ್ರಯತ್ನ-ಇವುಗಳನ್ನು ಅವಶ್ಯವಾಗಿ ನಾವು ಲಕ್ಷ್ಯದಲ್ಲಿಡಬೇಕು.

ಶಂಕರಾಚಾರ್ಯರವರು ತಮ್ಮ ಭಾಷ್ಯದಲ್ಲಿ ಈ ಸಾಧನಗಣಗಳನ್ನು ಹೇಳುವ ಶ್ಲೋಕಗಳಿಗೆ ಅವತಾರಿಕೆಯಾಗಿ ಹೇಳಿರುವ ವಾಕ್ಯವನ್ನು ಇಲ್ಲಿ ಸಂಗ್ರಹಿಸಿ ತಿಳಿಸಬೇಕೆಂದು ನನ್ನ ಮನಸ್ಸಿಗೆ ಬಂದಿರುತ್ತದೆ. "ಯಸ್ಮಿನ್ ಸತಿ ತಜ್ಜ್ಞೇಯ ವಿಜ್ಞಾನೇ ಯೋಗ್ಯೋಽಧಿಕೃತೋ ಭವತಿ, ಯತ್ಪರಃ ಸಂನ್ಯಾಸೀ ಜ್ಞಾನನಿಷ್ಠ ಉಚ್ಯತೇ ತಮ್ ಅಮಾನಿತ್ವಾದಿಗಣಂ ಜ್ಞಾನಸಾಧನತ್ವಾತ್ ಜ್ಞಾನಶಬ್ದವಾಚ್ಯಂ ವಿದಧಾತಿ ಭಗವಾನ್॥" (ಗೀ. ಭಾ. 13-7) **ಯಾವ ಸಾಧನಗಳಿದ್ದರೆ ಆ ಪರಮಜ್ಞೇಯವಾದ ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಯೋಗ್ಯನಾಗುತ್ತಾನೋ, ಯಾವ ಸಾಧನಗಳಲ್ಲಿ ತತ್ಪರನಾಗಿರುವ ಸಂನ್ಯಾಸಿಯು ಜ್ಞಾನನಿಷ್ಠನೆನಿಸುವನೋ ಆ ಅಮಾನಿತ್ವಾದಿಗಳನ್ನು ಭಗವಂತನು ಹೇಳುತ್ತಿದಾನೆ; ಜ್ಞಾನಕ್ಕೆ ಸಾಧನವಾಗಿರುವದರಿಂದಲೇ ಇದಕ್ಕೆ ಜ್ಞಾನವೆಂದು ಹೆಸರು.**

ಇದಕ್ಕಿಂತ ಇನ್ನು ಸ್ಫುಟತರವಾಗಿ ಹೇಳುವದು ಯಾರಿಂದಲೂ ಆಗಲಾರದು. ಜ್ಞಾನವೆಂಬುದು ಬರಿಯ ಮೆದುಳಿನ ಕೆಲಸವಲ್ಲ. ಹೇಗಾದರೂ ಬುದ್ಧಿವಂತಿಕೆಯಿಂದ ವೇದಾಂತಗ್ರಂಥಗಳ ಕೆಲವು ಅಂಶಗಳನ್ನು ಕಂಠಪಾಠಮಾಡಿಕೊಂಡು ಒಪ್ಪಿಸುವದು ಎಂದಿಗೂ ಜ್ಞಾನವಲ್ಲ. ಜ್ಞಾನವಾದದ್ದಕ್ಕೆ ಅಂತಃಕರಣದಲ್ಲಿ ಸಂಪೂರ್ಣವಾಗಿ ಮಾರ್ಪಾಡು

ಆದದ್ದೇ ಗುರುತು. ಅಭಿಮಾನ, ದಂಭ, ಹಿಂಸೆ, ವಕ್ರತನ, ಅಸಹಿಷ್ಣುತೆ, ಗುರುಹಿರಿಯರಲ್ಲಿ ಅನಾದರ, ಅಶುಚಿಯಾದ ನಡೆನುಡಿಗಳು, ಇಂದ್ರಿಯಮನಗಳನ್ನು ಹರಿಯಬಿಡುವದು, ಅಹಂಕಾರ, ಸಂಸಾರದ ದುಃಖವನ್ನು ಅಸಡ್ಡೆಮಾಡಿ ಮೈಮರೆತು ನಡೆಯುವದು, ಹೆಂಡಿರುಮಕ್ಕಳುಮನೆಮಠಗಳಲ್ಲಿ ಆಸಕ್ತನಾಗಿರುವದು, ಮನಸ್ಸಿನಲ್ಲಿ ಏರುಪೇರುಗಳನ್ನು ಅನುಭವಿಸುತ್ತಲೇ ಇರುವದು, ಪರಮೇಶ್ವರನ ಅಸ್ತಿತ್ವದಲ್ಲಿಯೂ ನಂಬಿಕೆಯಿಲ್ಲದೆ ಇರುವದು, ಮಿಥ್ಯಾ ಲೌಕಿಕವ್ಯವಹಾರಗಳಲ್ಲಿ ಅನವಶ್ಯವಾಗಿ ಆಸಕ್ತನಾಗಿರುವದು, ತತ್ತ್ವವಿಚಾರಕ್ಕೆ ಮನಗೊಡದಿರುವದು–ಇವೆಲ್ಲ ಜ್ಞಾನಕ್ಕೆ ವಿಮುಖನಾಗಿರುವನೆಂಬುದಕ್ಕೆ ಹೆಗ್ಗುರುತು ಗಳಾಗಿರುತ್ತವೆ. ಇವಕ್ಕೆ ಬದಲಾಗಿ ಅಮಾನಿತ್ವವೇ ಮುಂತಾದವುಗಳಲ್ಲಿ ನಿರತನಾಗಿರುವವನು ಜ್ಞಾನಾಭ್ಯಾಸಿಯೆನಿಸುವನು; ಯಾವ ಪ್ರಯತ್ನವೂ ಇಲ್ಲದೆ ಇವುಗಳನ್ನು ಲೀಲಾಜಾಲವಾಗಿ ಬಳಸುತ್ತಿರುವ ಮಹಾತ್ಮನು ಜ್ಞಾನನಿಷ್ಠನೆನಿಸುವನು.

ಭಗವಂತರಾದ ಬಾದರಾಯಣಾಚಾರ್ಯರು ತಮ್ಮ ಮೊದಲನೆಯ ಸೂತ್ರವಾಗಿ "ಅಥಾತೋ ಬ್ರಹ್ಮಜಿಜ್ಞಾಸಾ" ಎಂದು ಬರೆದಿರುತ್ತಾರೆ. ಇನ್ನುಮೇಲೆ ಆದ್ದರಿಂದ ಬ್ರಹ್ಮವಿಚಾರವನ್ನು ಮಾಡತಕ್ಕದ್ದು ಎಂದು ಸೂತ್ರಕ್ಕೆ ಅಕ್ಷರಾರ್ಥವು. ಇಲ್ಲಿ "ಇನ್ನುಮೇಲೆ" ಎಂದರೆ ನಿತ್ಯಾನಿತ್ಯವಿವೇಕ, ವೈರಾಗ್ಯ, ಶಮಾದಿಷಟ್ಕ ಸಂಪತ್ತು, ಮುಮುಕ್ಷುತ್ವ–ಎಂಬ ನಾಲ್ಕು ಸಾಧನಗಳು ಅಳವಟ್ಟ ಬಳಿಕ ಎಂದರ್ಥ. ಯಾವನು ಬ್ರಹ್ಮಜ್ಞಾನದಿಂದ ತನಗೆ ಪರಮಪುರುಷಾರ್ಥವು ದೊರಕುವದೆಂದು ನಂಬಿರುವನೋ ಅವನೇ ಮುಮುಕ್ಷುವು. ಕರ್ಮೋಪಾಸನೆಗಳಿಂದ ದೊರಕುವ ಇಹಾಮುತ್ರಫಲಗಳಲ್ಲಿ ವಿರಕ್ತನಾದವನಿಗೆ ಮಾತ್ರ ಇಂಥ ಮುಮುಕ್ಷುತ್ವವು ದೊರಕೀತು. ಯಾವನು ಸ್ವಧರ್ಮಾಚರಣೆಯನ್ನು ಮಾಡಿ ಚಿತ್ತಶುದ್ಧಿಯನ್ನು ಹೊಂದಿರುವನೋ, ಯಾವನು ಶಮದಮಾದಿಸಾಧನಗಳಿಂದ ಅಂತಃಕರಣಕ್ಕೆ ತಕ್ಕ ಸಂಸ್ಕಾರವನ್ನುಂಟುಮಾಡಿಕೊಂಡಿರುವನೋ–ಅಂಥ ಮಹನೀಯನಿಗೆ ಮಾತ್ರ ವೈರಾಗ್ಯವು ಪರಿಪೂರ್ಣವಾಗಿ ಉತ್ಕಟವಾದ ಮೋಕ್ಷೇಚ್ಛೆಯು ಉಂಟಾಗುವದು. ಅಂಥವನು ಮಾಡುವ ಬ್ರಹ್ಮವಿಚಾರದಿಂದಲೇ ಬ್ರಹ್ಮಜ್ಞಾನವು ದೊರಕುವದು, ಅದರಿಂದಲೇ ಮನುಷ್ಯನು ಕೃತಾರ್ಥನಾಗುವನು–ಎಂದು ಬಲ್ಲವರು ಹೇಳುತ್ತಾರೆ.

## 4.4. ಜ್ಞಾನಕ್ಕೆ ನೇರಾದ ಸಾಧನಗಳು

> ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯೋ
> ಮೈತ್ರೇಯ್ಯಾತ್ಮನೋ ಖಲ್ವರೇ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ
> ವಿಜ್ಞಾನೇನ ದೃಷ್ಟೇ ಶ್ರುತೇ ಮತೇ ವಿಜ್ಞಾತ ಇದಂ ಸರ್ವಂ ವಿದಿತಮ್
> – ಬೃ. 2–4–5

**ಇಲ್ಲಿರುವ "ಖಲ್ವರೇ ದೃಷ್ಟೇ ಶೃತೇ ವಿಜ್ಞಾತ" ಎನ್ನುವುದು ಮೂಲದಲ್ಲಿ "ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನ" ಎಂದು ಇದೆ.**

ಪರಮಾತ್ಮಸ್ವರೂಪವನ್ನು ಪ್ರತಿಯೊಬ್ಬನೂ ತನ್ನೊಳಗೇ ಕಂಡುಕೊಳ್ಳಬೇಕೆಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ. ಹೊರಗಿನ ಇಂದ್ರಿಯಗಳು ಆತ್ಮದರ್ಶನಕ್ಕೆ ಉಪಯೋಗಕ್ಕೆ ಬರುವಂತಿಲ್ಲವೆಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ. ಪರಮಾತ್ಮನು ಭಕ್ತರಿಗೆ ತನ್ನ ದರ್ಶನವನ್ನು ಕೊಟ್ಟನೆಂದೂ ಆಗ ಇಂಥಿಂಥ ಸಾಕಾರರೂಪದಿಂದ ಅವರು ಆತನನ್ನು ಕಂಡು ಆತನಿಂದ ತಮಗೆ ಇಷ್ಟವಾಗಿದ್ದ ವರಗಳನ್ನು ಪಡೆದುಕೊಂಡರೆಂದೂ ಪುರಾಣಾದಿಗಳಲ್ಲಿ ವರ್ಣಿತವಾಗಿರುವದು ನಿಜ. ಆದರೆ ಅದು ಮಹಾ ಯೋಗೀಶ್ವರನಾದ ಪರಮೇಶ್ವರನು ಭಕ್ತರನ್ನು ಅನುಗ್ರಹಿಸುವದಕ್ಕಾಗಿ ತನ್ನ ಇಚ್ಛಾಮಾತ್ರದಿಂದ ಕಲ್ಪಿಸಿಕೊಂಡ ರೂಪವು. ಆದ್ದರಿಂದಲೇ ಭಕ್ತರ ತತ್ಕಾಲದ ದರ್ಶನವು ಆಗುತ್ತಲೂ ಭಗವಂತನು ಮತ್ತೆ ಅಂತರ್ಧಾನವಾದನು, ಕಣ್ಮರೆಯಾದನು-ಎಂದು ಅಂಥ ಸಂದರ್ಭಗಳಲ್ಲಿ ವರ್ಣಿಸಿರುತ್ತದೆ. ನಾರದಮಹರ್ಷಿಗೆ ಶ್ರೀಮನ್ನಾರಾಯಣಭಗವಂತನು ವಿಶ್ವರೂಪದರ್ಶನವನ್ನು ಕೊಟ್ಟು ಹೀಗೆಂದು ನುಡಿದನೆಂದು ಮೋಕ್ಷಧರ್ಮದಲ್ಲಿದೆ:

**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ।**
**ಸರ್ವಭೂತಗುಣೈರ್ಯುಕ್ತಂ ನೈವಂ ಮಾಂ ಜ್ಞಾತುಮರ್ಹಸಿ ॥**

ಎಲೈ ನಾರದನೆ, ಇಗೋ, ನನ್ನನ್ನು ಈ ರೂಪದಲ್ಲಿ ಕಾಣುತ್ತಿರುವೆಯಲ್ಲ, ಇದು ನಾನು ಸೃಷ್ಟಿಸಿರುವ ಮಾಯೆ; ನಾನು ಭೂತಗುಣಗಳಾದ ಶಬ್ದಸ್ಪರ್ಶಾದಿಗಳಿಂದ ಕೂಡಿರುವ ಈ ರೂಪದವನೇ ಎಂದು ತಿಳಿಯಬೇಡ-ಎಂಬುದು ಶ್ಲೋಕದ ಅರ್ಥ. ಹೀಗಿರುವದರಿಂದಲೇ ಶ್ರುತಿಯಲ್ಲಿ ಪರಮಾತ್ಮನನ್ನು ತನ್ನೊಳಗೇ ಕಂಡುಕೊಳ್ಳಬೇಕು (ಆತ್ಮನ್ಯೇವಾತ್ಮಾನಂ ಪಶ್ಯೇತ್) ಎಂದು ಸುಸ್ಪಷ್ಟವಾಗಿ ಹೇಳಿರುತ್ತದೆ.

ಇಂದ್ರಿಯಗಳೂ ಮನಸ್ಸೂ ಹೊರಗಿನ ವಿಷಯಗಳ ಭಾವನೆಯಿಂದ ತನ್ಮಯವಾಗಿರುವಾಗ ವಿಷಯಗಳ ಕಾಮವು, ಅವುಗಳನ್ನು ಭೋಗಿಸಿ ಸುಖಿಸಬೇಕೆಂಬ ಆಶೆಯು, ಇರುವದು ಸ್ವಾಭಾವಿಕವಾಗಿರುತ್ತದೆ. ಆ ಇಂದ್ರಿಯಾರ್ಥಗಳ ಭೋಗವೆಂಬುದು ಈ ಜನ್ಮದಲ್ಲಿಯೇ ಅಲ್ಲದೆ ಮತ್ತೊಂದು ಜನ್ಮದಲ್ಲಿಯೂ ಆಗಬೇಕು, ಈ ಲೋಕದಲ್ಲಲ್ಲದೆ ಪರಲೋಕದಲ್ಲಿಯೂ ಆಗಬೇಕು- ಎಂಬ ಕಾಮವು ಯಾರಿಗೆ ಬಲವಾಗಿರುತ್ತದೆಯೋ ಅವರು ಲೌಕಿಕವ್ಯವಹಾರದ ಕರ್ಮಗಳನ್ನು ಮಾಡಿ ಭೋಗ್ಯವಿಷಯಗಳನ್ನು ಕೂಡಿಹಾಕಿಕೊಳ್ಳುವದಲ್ಲದೆ ಅತೀಂದ್ರಿಯವಾದ ಸಾಧನಗಳನ್ನು ತಿಳಿಸುವ ಶಾಸ್ತ್ರದಲ್ಲಿ ಉಕ್ತವಾಗಿರುವ ಸಾಧನಗಳನ್ನೂ ಮಾಡಿ ಪರಲೋಕದಲ್ಲಿಯೂ ಸುಖಪ್ರಾಪ್ತಿಯನ್ನು ಮಾಡಿಕೊಳ್ಳಬೇಕೆಂದು ಬಯಸುವರು. ಈ ಲೋಕದ ಭೋಗಗಳು ಅವುಗಳ ಪ್ರಾಪ್ತಿಗೆ ತಕ್ಕ ಯಾವದಾದರೊಂದು ಸಾಧನದಿಂದಲಾದರೂ

ಸಿಕ್ಕಬಹುದು. ಸಾಲವನ್ನು ಮಾಡಿಯಾದರೂ ತುಪ್ಪವನ್ನು ಸವಿಯಬೇಕು ಎಂದು ಚಾರ್ವಾಕರ ಉಪದೇಶವು ಆ ವ್ಯವಹಾರಕ್ಕೆ ಸಾಕಾಗಿರುವದು. ಲೋಕದಲ್ಲಿ ಜನರು ಮೋಸ, ಹಿಂಸೆ–ಮುಂತಾದವುಗಳನ್ನು ಮಾಡಿಯಾದರೂ ತಮ್ಮ ಶರೀರದ ಭೋಗಕ್ಕೆ ಬೇಕಾದ ವಸ್ತುಗಳನ್ನು ಕೂಡಿಹಾಕಿಕೊಳ್ಳುವದಕ್ಕೆ ಪ್ರಯತ್ನಿಸುವದು ಈ ಬುದ್ಧಿಯಿಂದಲೇ. ಆದರೆ ಪರಲೋಕದ ಸುಖಕ್ಕೆ ಪಾಪಕರ್ಮವು ಎಂದಿಗೂ ಸಾಧನವಾಗದು; ಅದು ಅದಕ್ಕೆ ಅಡ್ಡಿಯೇ ಆಗಿರುತ್ತದೆ. ಆದ್ದರಿಂದ ಪರಲೋಕದ ಅಸ್ತಿತ್ವವನ್ನು ಒಪ್ಪುವವರು ಪಾಪಕ್ಕೆ ಅಂಜಿ ಪುಣ್ಯವನ್ನೇ ಮಾಡುವರು. ಪಾಪವನ್ನೇ ಮಾಡಲಿ ಪುಣ್ಯವನ್ನೇ ಮಾಡಲಿ, ಈ ಎರಡೂ ವಿಷಯಭೋಗಕ್ಕೇ ಸಾಧನವಾಗಿರುವವು. ವಿಷಯಭೋಗದಿಂದ ಸುಖವೇ ಆಗುವದೆಂದಾಗಲಿ, ಆಗಬಹುದಾದ ಸುಖವು ನಿತ್ಯವಾಗಿ ಇದ್ದುಕೊಂಡೇ ಇರುವದೆಂದಾಗಲಿ, ಎಂದಿಗೂ ನಂಬುವದಕ್ಕೆ ಬರುವದಿಲ್ಲ. ಇದನ್ನು ಚೆನ್ನಾಗಿ ಮನಗಂಡವರಿಗೆ **ಇಹಾಮುತ್ರಫಲಭೋಗವಿರಾಗ**– ಈ ಲೋಕದ ಮತ್ತು ಪರಲೋಕದ ವಿಷಯಭೋಗದಲ್ಲಿ ವೈರಾಗ್ಯ–ಎಂಬ ಮನಃಸ್ಥಿತಿಯು ಏರ್ಪಡುವದು. ಅಂಥವರು ಈ ಅಲ್ಪವೂ ಅಸ್ಥಿರವೂ ಆದ ಭೋಗಗಳಿಂದಾಗುವ ಸುಖಕ್ಕಿಂತ ಹೆಚ್ಚಿನ ಸುಖವೊಂದುಂಟೆ?– ಎಂದು ವಿಚಾರಿಸುವರು. ಅವರಿಗೇ ವೇದಾಂತಶಾಸ್ತ್ರದಲ್ಲಿ ಹೇಳಿರುವ ಆತ್ಮಜ್ಞಾನದಲ್ಲಿ ಮುಖ್ಯಾಧಿಕಾರವಿರುತ್ತದೆ.

ಈ ಲೋಕದಲ್ಲಿ ಸಿಕ್ಕಬಹುದಾದ ಸುಖಕ್ಕೂ ಪರಲೋಕದಲ್ಲಾಗುವ ಸುಖಕ್ಕೂ ಬೇಸರುವವರು ಯಾರಾದರೂ ಇರಬಹುದೆ? ಸುಖವು ಯಾರಿಗೆತಾನೆ ಬೇಡ? ಇದಲ್ಲದೆ, ಈ ಲೋಕದ ಸುಖವನ್ನೂ ಪರಲೋಕದ ಸುಖವನ್ನೂ ಬಿಟ್ಟರೆ ಅವರಿಗೆ ಉಳಿಯುವದಾದರೂ ಏನು?–ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವನ್ನು ಶ್ರುತಿಯಲ್ಲಿ ಹೇಳಿರುವದು ಹೇಗೆಂದರೆ, ಕೃತಕವಾದ ಸುಖಗಳು ಇಂದ್ರಿಯವಿಷಯಗಳ ಸಂಯೋಗದಿಂದ ಉಂಟಾಗಿ ತತ್ಕಾಲಕ್ಕೆ ಇದ್ದು ಮಾಯವಾಗುವವು; ಆದರೆ ಅಕೃತಕವಾದ ಸುಖವೊಂದು ಇದೆ, ಆ ಸಮೃದ್ಧವಾದ ಸುಖಕ್ಕೆ ಆನಂದವೆಂದೂ ಹೆಸರಿದೆ. ಅದೇ ಆತ್ಮಸುಖವು. ನಮ್ಮ ನಿಜವಾದ ಆತ್ಮನು ಎಂದೆಂದಿಗೂ ಆನಂದಸ್ವರೂಪನೇ ಆಗಿರುತ್ತಾನೆ; ಅವನನ್ನು ಅರಿತುಕೊಂಡ ಮಾತ್ರದಿಂದಲೇ ಆ ಪರಮಾನಂದದ ಪ್ರಾಪ್ತಿಯಾಗುವದು. ಆದ್ದರಿಂದ ಯಾರಿಗೆ ಕೃತಕವಾದ ಸಾಧನಗಳಿಂದ ಕೃತಕವಾದ ಸುಖವನ್ನು ಪಡೆದುಕೊಳ್ಳುವದು ಬೇಡವಾಗಿದೆಯೋ ಅಂಥವರು ಅವಶ್ಯವಾಗಿ ಅಕೃತಕವಾದ ಆ ಪರಮಾನಂದವನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ಅವರಿಗೆ ಮುಮುಕ್ಷುಗಳು ಎಂದು ಹೆಸರು. ಮುಮುಕ್ಷುಗಳು ಎಂದರೆ ಮತ್ತೆಮತ್ತೆ ಶರೀರವನ್ನು ಪಡೆದುಕೊಂಡು ಕರ್ಮವನ್ನು ಮಾಡಿಮಾಡಿ ವಿಷಯಭೋಗದ ಸುಖವನ್ನು ಪಡೆಯುವ ಕೋಟಲೆಯನ್ನು ತಪ್ಪಿಸಿಕೊಳ್ಳಬೇಕೆನ್ನುವವರು. ವಿಷಯಗಳ ಸಂಕಲ್ಪವನ್ನು ಮಾಡುತ್ತಿರುವದು, ಅವುಗಳ ಕಾಮಕ್ಕೆ ವಶರಾಗುವದು, ಆ

ಕಾಮನಿಮಿತ್ತದಿಂದ ಬೇರೆಬೇರೆಯ ಕರ್ಮಗಳನ್ನು ಮಾಡುವದು, ಅವುಗಳ ಫಲವನ್ನು ಅನುಭವಿಸುವದು, ಆ ಫಲಾನುಭವದ ವಾಸನೆಯು ಮನಸ್ಸಿನಲ್ಲಿ ಮೂಡಿಕೊಂಡದ್ದರಿಂದ ಮತ್ತೆ ವಿಷಯಗಳ ಸಂಕಲ್ಪವನ್ನು ಮಾಡುವದು– ಹೀಗೆ ಚಕ್ರಭೀಮನ ಕೋಟೆಯೊಳಕ್ಕೆ ಹೊಕ್ಕಂತೆ ಸಂಕಲ್ಪ, ಕಾಮ, ಕರ್ಮ, ಫಲ– ಇವುಗಳ ಸುತ್ತುಗಟ್ಟಿನಲ್ಲಿಯೇ ತೊಳಲುವವರು **ಸಂಸಾರಿ**ಗಳು; ಈ ಸಂಸಾರದಿಂದ ಬಿಡುಗಡೆಯಾಗಬೇಕೆಂದು ಇಚ್ಛಿಸುವವರು **ಮುಮುಕ್ಷು**ಗಳು.

ಮುಮುಕ್ಷುಗಳು ಈ ಲೋಕದ ಮತ್ತು ಪರಲೋಕದ ಫಲಭೋಗಗಳನ್ನು ಬಿಡುತ್ತಾರಾದರೆ, ಅವರಿಗೆ ಮತ್ತೆಲ್ಲಿ, ಹೇಗೆ, ಯಾವ ಆನಂದವು ಸಿಕ್ಕೀತು?– ಎಂಬ ಸಂಶಯವು ಈಗ ಸ್ವಲ್ಪಮಟ್ಟಿಗೆ ಬಗೆಹರಿದಿರಬೇಕು. ಈ ಲೋಕದಲ್ಲಿ ಬರಿಯ ವಿಷಯಭೋಗವೇ ತುಂಬಿರುವದೆಂದು ಭಾವಿಸುವದು ತಪ್ಪು. ನಿಜವಾಗಿ ಇಲ್ಲಿ ನಾನು ಮೇಲೆ ಸೂಚಿಸಿರುವ ಪರಮಾತ್ಮನೆಂಬ ಪರಮಾನಂದವೇ ತುಂಬಿತುಳುಕಾಡುತ್ತಿದೆ. ನಾವುಗಳೆಲ್ಲರೂ ಇಷ್ಟೊಂದು ಚಟುವಟಿಕೆಯಿಂದ ಕೆಲಸಮಾಡುತ್ತಿರುವದೂ ಸುಖಕ್ಕೆ ಹಾತುವರಿಯುತ್ತಿರುವದೂ ಈ ನಿಜವಾದ ಆನಂದವಿರುವದರಿಂದಲೇ ಆಗಿದೆ. ಈ ಆನಂದವೆಂಬುದು ಇಲ್ಲದಿದ್ದರೆ ಯಾರೊಬ್ಬರೂ ಇಲ್ಲಿ ಬಾಳಿಕೊಂಡು ವ್ಯವಹರಿಸುವದಕ್ಕೆ ಆಗುತ್ತಲೇ ಇರಲಿಲ್ಲ. ನಮಗೆಲ್ಲರಿಗೂ ಸಿಕ್ಕುತ್ತಿರುವ ವಿಷಯಭೋಗನಿಮಿತ್ತದ ಸುಖಗಳೆಂಬವೂ ಈ ಆನಂದಸಾಗರದ ತುಂತುರುಗಳೇ ಆಗಿವೆ. ಆದರೆ ನಮಗೆ ಈ ಗುಟ್ಟು ತಿಳಿದಿಲ್ಲ. ಮುಮುಕ್ಷುಗಳಾದವರು ಇದನ್ನು ಅರಿತುಕೊಂಡಿರುತ್ತಾರೆ. ಅವರು ತಕ್ಕ ಸಾಧನಗಳನ್ನು ಮಾಡಿ ತಮ್ಮತಮ್ಮೊಳಗೆ ಮೊದಲು ಈ ಆನಂದರೂಪನಾದ ಆತ್ಮನನ್ನು ಕಂಡುಕೊಳ್ಳುತ್ತಾರೆ. "ತಸ್ಮಾದೇವಂವಿಚ್ಛಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾऽऽತ್ಮನ್ಯೇವಾऽऽತ್ಮಾನಂ ಪಶ್ಯತಿ ಸರ್ವಮಾತ್ಮಾನಂ ಪಶ್ಯತಿ ॥" (ಬೃ. 4-4-23) ವಿವೇಕಿಯಾದ ಮುಮುಕ್ಷುವು ಶಮದಮಾದಿಸಾಧನಗಳನ್ನು ಮಾಡಿ ಪಡೆದುಕೊಂಡ ಸಮಾಹಿತವಾದ ಮನಸ್ಸಿನಿಂದ ತನ್ನೊಳಗೇ ಈ ಆತ್ಮನನ್ನು ಕಂಡುಕೊಳ್ಳುತ್ತಾನೆ; ಆಮೇಲೆ ಎಲ್ಲವೂ ಈ ಆತ್ಮನೇ ಎಂಬುದನ್ನು ಕಂಡುಕೊಳ್ಳುತ್ತಾನೆ– ಎಂದು ಶ್ರುತಿಯು ಸಾರುತ್ತಿದೆ.

ಮುಮುಕ್ಷುಗಳಾದವರು ಈ ಪರಮಾನಂದವನ್ನು ಎಲ್ಲೆಲ್ಲಿಯೂ ಕಂಡುಕೊಳ್ಳುವದಕ್ಕಿಂತ ಮುಂಚೆ ತಮ್ಮಲ್ಲಿಯೇ ಅವನನ್ನು ಕಂಡುಕೊಳ್ಳಬೇಕೆಂದು ಹೇಳಿದ್ದಾಗಿದೆಯಷ್ಟೆ? ಅದಕ್ಕಾಗಿ ಅವರು ಮಾಡುವ ಪ್ರಯತ್ನವೇನು?– ಎಂದರೆ ಮೊಟ್ಟಮೊದಲು ಅವರು ವಿಷಯಸಂಕಲ್ಪವನ್ನು ಮಾಡುವ ಅಭ್ಯಾಸದಿಂದ ಬಿಡುಗಡೆ ಹೊಂದುವರು. ವಿಷಯಸಂಕಲ್ಪವು ಏತರಿಂದ ಉಂಟಾಗುತ್ತಿದೆ ಎಂಬುದನ್ನು ಮೇಲೆ ಸಂಕ್ಷೇಪವಾಗಿ ವರ್ಣಿಸಿದ್ದಾಗಿದೆ. ಸಂಕಲ್ಪದಿಂದ ಕಾಮವುಂಟಾಗುತ್ತಿರುತ್ತದೆ; ಆ ಕಾಮದಿಂದ ಕರ್ಮಗಳನ್ನು ಮಾಡಿ ವಿಷಯಗಳನ್ನು

ಪಡೆದುಕೊಂಡು ಉಪಭೋಗಿಸಿದರೆ ಕಾಮವು ಆರಿಹೋಗುವದೆಂದು ಸಾಮಾನ್ಯಜನರ ನಂಬಿಕೆ. ಅದು ಸುಳ್ಳು. ವಿಷಯಗಳನ್ನು ಅನುಭವಿಸುವದರಿಂದ ಕಾಮವು ಎಂದಿಗೂ ಇಂಗುವದಿಲ್ಲ. "ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ" ಬೆಂಕಿಯಲ್ಲಿ ಹೋಮಮಾಡಿದರೆ ಅದು ಎದ್ದು ಉರಿಯುವದೇ ಹೊರತು ಆರುವದಿಲ್ಲ; ಅದರಂತೆ ವಿಷಯಗಳನ್ನು ಉಪಭೋಗಿಸುವದರಿಂದ ಕಾಮದ ಉರಿಯು ಭುಗಿಲೆಂದೀತೇ ಹೊರತು ಎಂದಿಗೂ ಉಪಶಮವಾಗಲಾರದು. ಈ ಗುಟ್ಟನ್ನು ತಿಳಿದಿರುವ ಮುಮುಕ್ಷುಗಳು ಇಂದ್ರಿಯಾರ್ಥಗಳ ಆಸಕ್ತಿಯನ್ನು ಬಿಟ್ಟು ಬಿಡುತ್ತಾರೆ; ಫಲಾರ್ಥವಾಗಿ ಕರ್ಮಗಳನ್ನು ಮಾಡುವದನ್ನು ಬಿಟ್ಟುಬಿಡುತ್ತಾರೆ. ನಿಷ್ಕಾಮಕರ್ಮದಿಂದ ಭಗವಂತನನ್ನು ಆರಾಧನೆಮಾಡುವ ರೂಪದ ಕರ್ಮಯೋಗವನ್ನು ಮೊದಲು ಕೈಕೊಳ್ಳುತ್ತಾರೆ. ಹೀಗೆ ಬಹಿರ್ವಿಷಯದ ಸಂಕಲ್ಪವನ್ನು ಗೆದ್ದುಕೊಂಡ ಬಳಿಕ ಒಳಮುಖವಾಗಿ ಚಿತ್ತವೃತ್ತಿಯನ್ನು ಹರಿಯಿಸಿ ಆತ್ಮನನ್ನು ಹುಡುಕುವದಕ್ಕೆ ಮೊದಲುಮಾಡುತ್ತಾರೆ.

ಈ ಸ್ಥಿತಿಯಲ್ಲಿ ಸಾಧಕರು ಮಾಡಬೇಕಾಗಿರುವದೇನು?– ಎಂಬ ಪ್ರಶ್ನೆಗೆ ಉತ್ತರವನ್ನು ಯಾಜ್ಞವಲ್ಕ್ಯನು ತನ್ನ ಹೆಂಡತಿಯಾದ ಮೈತ್ರೇಯಿಗೆ ಕೊಟ್ಟಿರುತ್ತಾನೆ. ಆತನ ವಾಕ್ಯವನ್ನೇ ಈ ಸಂದೇಶಕ್ಕೆ ಸೂತ್ರವಾಕ್ಯವಾಗಿ ಬರೆದುಕೊಳ್ಳಲಾಗಿದೆ. ಯಾಜ್ಞವಲ್ಕ್ಯನು ಆದರ್ಶಕುಟುಂಬಿಯಾದ ಬ್ರಾಹ್ಮಣನಾಗಿ ಬಾಳಿದನು. ಅವನು ಅನೇಕ ಶಿಷ್ಯರನ್ನು ತನ್ನ ಮನೆಯಲ್ಲಿಟ್ಟುಕೊಂಡು ಅವರಿಗೆ ವೇದಶಾಸ್ತ್ರಗಳನ್ನು ಅಧ್ಯಯನಮಾಡಿಸಿದ್ದನು. ಉತ್ಕೃಷ್ಟವಾದ ಉಪಾಸನೆಗಳನ್ನು ಮಾಡಿದ್ದನು; ತತ್ತ್ವವಿಚಾರದಲ್ಲಿ ತನ್ನ ಕಾಲದ ಎಲ್ಲರಿಗಿಂತಲೂ ಆಳವಾಗಿ ಇಳಿದಿದ್ದನು. ಜನಕನು ಮಾಡಿದ ಮಹಾಯಜ್ಞವೊಂದರ ಸಮಯಕ್ಕೆ ಅಲ್ಲಿ ಸೇರಿದ್ದ ವಿದ್ವಾಂಸರಾದ ಬ್ರಾಹ್ಮಣರುಗಳೆಲ್ಲರನ್ನೂ ತತ್ತ್ವವಿಚಾರದ ಚರ್ಚೆಯಲ್ಲಿ ಸೋಲಿಸಿ ಜನಕನಿಂದ ಸಾವಿರ ಗೋಗಳ ಸಂಭಾವನೆಯನ್ನು ಪಡೆದಿದ್ದನು. ಆ ಚಕ್ರವರ್ತಿಗೆ ತತ್ತ್ವವನ್ನು ಉಪದೇಶಮಾಡಿ ಅವನನ್ನೂ ತನ್ನ ಶಿಷ್ಯನನ್ನಾಗಿ ಮಾಡಿಕೊಂಡಿದ್ದನು; "ಈ ರಾಜ್ಯವೆಲ್ಲ ತಮ್ಮದು, ನಾನು ನಿಮ್ಮ ಅಡಿಯಾಳು?" ಎಂದು ಸರ್ವಸ್ವವನ್ನೂ ಇವನಿಗೆ ಒಪ್ಪಿಸುವದಕ್ಕೂ ಜನಕನು ಸಿದ್ಧನಾಗಿದ್ದನು. ಇಂಥ ಸ್ಥಿತಿಯಲ್ಲಿಕೂಡ ಯಾಜ್ಞವಲ್ಕ್ಯನು, ಬ್ರಾಹ್ಮಣನಾದವನು ಕೊನೆಗೆ ಇಟ್ಟುಕೊಳ್ಳಬೇಕಾದ ಗುರಿಯನ್ನು ಮರೆಯದೆ, ಸರ್ವಸ್ವವನ್ನೂ ತ್ಯಾಗಮಾಡಿ, ಬ್ರಹ್ಮಚಿಂತನೆಯಿಂದಲೇ ಮನಸ್ಸಿಗೆ ಶಾಂತಿಸುಖಗಳು ದೊರೆಯುವವೆಂಬುದನ್ನು ಬಲ್ಲವನಾದ್ದರಿಂದ, ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸುವದಕ್ಕೆ ಸಿದ್ಧನಾದನು. ತನ್ನ ಇಬ್ಬರು ಹೆಂಡತಿಯರಿಗೂ ತನ್ನ ಆಸ್ತಿಯನ್ನು ಪಾಲುಮಾಡಿಕೊಟ್ಟು ಹೊರಡುವದಕ್ಕೆ ಉದ್ಯುಕ್ತನಾದನು. ಆಗ ಹಿರಿಯ ಹೆಂಡತಿಯಾದ ಮೈತ್ರೇಯಿಯು "ಇಡಿಯ ಪೃಥ್ವಿಯೆಲ್ಲ ನನ್ನ ಆಸ್ತಿಯೇ ಆದರೆ, ನನಗೆ ಅಮೃತತ್ವವು ಸಿಕ್ಕೀತೇನು?" ಎಂದು ಕೇಳಿದಳು; ಯಾಜ್ಞವಲ್ಕ್ಯನು

"ಇಲ್ಲ, ಭೋಗೋಪಕರಣಗಳನ್ನು ತುಂಬಿಕೊಂಡಿರುವವರಿಗೆ ಇರುವಂಥ ಜೀವನವೇ ನಿನ್ನದಾಗುವದು; ಆದರೆ ವಿತ್ತದಿಂದ ಅಮೃತತ್ವವು ದೊರಕುವ ಆಶೆಯೇನೂ ಇಲ್ಲ" ಎಂದನು. ಅವಳು "ಹಾಗಾದರೆ ತಮಗೆ ಅಮೃತತ್ವಕ್ಕೆ ಯಾವದು ಸಾಧನವೆಂದು ತಿಳಿದಿದೆಯೋ, ಅದನ್ನೇ ನನಗೆ ಹೇಳಿಕೊಡಿರಿ; ನನಗೆ ಅಮೃತತ್ವಕ್ಕೆ ಸಾಧನವಲ್ಲದ ಈ ಆಸ್ತಿಯೇನೂ ಬೇಡ!" ಎಂದಳು. ಆಗ ಯಾಜ್ಞವಲ್ಕ್ಯನಿಗೆ ಬಹಳ ಸಂತೋಷವಾಯಿತು. ಆಕೆಗೆ ಅತ್ಯಂತ ಪ್ರೀತಿಯಿಂದ ಅವನು ಮಾಡಿದ ಉಪದೇಶವಾಕ್ಯವೇ ಇದು.

ಯಾಜ್ಞವಲ್ಕ್ಯನು ಮೊದಲು ಮಾಡಿದ ಉಪದೇಶವೇನೆಮದರೆ, ಲೋಕದಲ್ಲಿ ಯಾವ ವಸ್ತುವು ನಮಗೆ ಪ್ರಿಯವೆಂದು ಕಾಣಿಸಿದರೂ ಅದು ಆತ್ಮನಿಗಾಗಿ–ತನಗಾಗಿ–ಪ್ರಿಯವಾಗಿರುತ್ತದೆ. ಹೆಂಡತಿ, ಗಂಡ, ಮಗ, ಬ್ರಾಹ್ಮಣ್ಯಾದಿವರ್ಣ, ಲೋಕಗಳು, ದೇವತೆಗಳು, ಯಾವದೇ ಆಗಲಿ ಪ್ರಿಯವೆನಿಸಬೇಕಾದರೆ ತನಗೋಸ್ಕರವಲ್ಲವೆ? ಹೀಗಿರುವದರಿಂದ ತಾನೆಂಬ ವಸ್ತು ಎಷ್ಟು ಪ್ರಿಯವಾಯಿತು! ಈ ತಾನು ಎಂಬ ವಸ್ತುವಿನ ತತ್ತ್ವವೇನು? ಇದನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ಅದನ್ನು ಕುರಿತು ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು. ಹೀಗೆ ಆತ್ಮನ ಶ್ರವಣಮನನನಿದಿಧ್ಯಾಸನ ಗಳನ್ನು ಮಾಡಿದರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದು–ಎಂದು ಅವನು ಹೇಳಿರುತ್ತಾನೆ.

ಈ ಉಪದೇಶದಲ್ಲಿ ಅಡಗಿರುವ ಭಾವಗಳನ್ನು ಒಂದೊಂದಾಗಿ ಬಿಡಿಸಿ ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸೋಣ. ಮೊಟ್ಟಮೊದಲನೆಯದಾಗಿ ಹೊರಗಿನ ಇಂದ್ರಿಯಾರ್ಥಗಳನ್ನೆಲ್ಲ ಇಲ್ಲಿ "ವಿತ್ತ" ಎಂಬ ಹೆಸರಿನಿಂದ ಕರೆದಿರುತ್ತದೆ ಎಂಬುದನ್ನು ನಾವು ಲಕ್ಷಿಸಬೇಕು. ವಿತ್ತವು ಏತಕ್ಕೆ ಬೇಕು? ಎಂದರೆ ನಿತ್ಯಜೀವನಕ್ಕಾಗಿ. ಆ ವಿತ್ತವು ಕೊಡುವ ಭೋಗವು ತತ್ಕಾಲಕ್ಕೆ ಮಾತ್ರವಿರುವದೇ ಹೊರತು ಅಮೃತವಲ್ಲ. **ವಿತ್ತಭೋಗವೆಲ್ಲವೂ ಮರ್ತ್ಯವೇ,** ಸಾಯತಕ್ಕದ್ದೇ, ಒಂದಲ್ಲ ಒಂದು ಕಾಲಕ್ಕೆ ಹೋಗತಕ್ಕದ್ದೇ. ಇದು ಮೊದಲನೆಯ ಉಪದೇಶವು. ಹಾಗಾದರೆ ಅಮೃತವಾದ ಸುಖವು ಹೇಗೆ ದೊರಕುತ್ತದೆ? ನಿತ್ಯಾನಂದಸ್ವರೂಪನಾದ ಆತ್ಮನ ದರ್ಶನದಿಂದ. ಆತ್ಮನು ಆನಂದ ರೂಪನೆಂದು ಹೇಗೆ ಗೊತ್ತಾಯಿತು? ಅವನು ಅತ್ಯಂತಪ್ರಿಯ ನಾಗಿರುವದರಿಂದ. ಲೋಕದಲ್ಲಿ ಪ್ರಿಯವಾಗಿರುವದೆಲ್ಲವೂ ಆತ್ಮನಿಗಾಗಿಯೇ ಪ್ರಿಯವಾಗಿರುವದರಿಂದ ನಮ್ಮ ಆತ್ಮನು ಅತ್ಯಂತಪ್ರಿಯನೆಂದಾಯಿತು. ಯಾವದು ಸುಖದಾಯಕವೆಂದು ನಮಗೆ ತೋರುವದೋ ಅದೇ ನಮಗೆ ಪ್ರಿಯವಾಗಿರುತ್ತದೆ. ಆದ್ದರಿಂದ ಅತ್ಯಂತಪ್ರಿಯನಾಗಿರುವ ಆತ್ಮನು ಅತ್ಯಂತವಾಗಿ ಆನಂದಸ್ವರೂಪನೆಂದು ನಮ್ಮ ಸ್ವಾಭಾವಿಕವಾದ ವರ್ತನೆಯಿಂದಲೇ ಹೊರಬೀಳುತ್ತದೆ. ಆದ್ದರಿಂದ ವಿವೇಕಿಯಾದವನು ಆತ್ಮಾನಂದವನ್ನು ಪಡೆದುಕೊಳ್ಳಬೇಕು. ಇದು ಎರಡನೆಯ ಭಾವವು. ಆತ್ಮನೆಂದರೆ ತನ್ನ ಸ್ವರೂಪವೇ ಆಗಿರುತ್ತದೆ; ಆದ್ದರಿಂದ

ಹೊರಗಿನ ಅನಾತ್ಮವಸ್ತುಗಳಂತೆ ಅದು ಹೊಸದಾಗಿ ಪಡೆದುಕೊಳ್ಳತಕ್ಕದ್ದಲ್ಲ. ಹೊರಗಿನ ವಸ್ತುಗಳ ವಿಷಯವನ್ನು ಮತ್ತೊಬ್ಬರಿಂದ ಕೇಳಿ, ಅದನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸಿ, ಆಮೇಲೆ ಅದನ್ನು ಕಂಡುಹಿಡಿಯಬೇಕಾಗಿರುತ್ತದೆ. ಏಕೆಂದರೆ ಆ ವಸ್ತುವಿಗೂ ನಮಗೂ ನಡುವೆ ವ್ಯವಧಾನವಿರುತ್ತದೆ. ಆದರೆ ಆತ್ಮನೆಂದರೆ ಇಂಥ ವ್ಯವಧಾನವಿರುವ ವಸ್ತುವಲ್ಲ; ಅದಕ್ಕೂ ನಮಗೂ ನಡುವೆ ದೇಶದ ಅಥವಾ ಕಾಲದ ವ್ಯವಧಾನವು ಇರುವದಿಲ್ಲ. ಆತ್ಮನು ಈಗಲೇ ಇಲ್ಲಿಯೇ ನಮ್ಮ ಸ್ವರೂಪವೇ ಆಗಿರುತ್ತಾನೆ. ಆದ್ದರಿಂದ ಆತ್ಮನನ್ನು ಕಂಡುಕೊಳ್ಳುವದೆಂದರೆ ಕಣ್ಣಿನಿಂದ ಕಾಣುವದಲ್ಲವೆಂದಾಯಿತು. ಆತ್ಮಸ್ವರೂಪವನ್ನು ಅರಿತುಕೊಳ್ಳುವದೇ, ನನ್ನ **ನಿಜವಾದ ಸ್ವರೂಪವು** ಯಾವದೆಂಬುದನ್ನು **ಅನುಭವಕ್ಕೆ ತಂದುಕೊಳ್ಳುವದೇ, ಆತ್ಮದರ್ಶನವು.** ಇದು ಮೂರನೆಯ ಭಾವವು. ಈ ಆತ್ಮದರ್ಶನಕ್ಕೆ ಉಪಾಯವು ಯಾವದು? ಇದರ ವಿಷಯವಾಗಿ ಬಲ್ಲವರನ್ನು ಕೇಳುವದು, ಮನಸ್ಸಿನಲ್ಲಿ ಮನನಮಾಡುವದು, ಅದನ್ನೇ ಧ್ಯಾನಮಾಡುವದು–ಇವೇ **ಆತ್ಮದರ್ಶನಕ್ಕೆ ಉಪಾಯಗಳು.** ಇದು ನಾಲ್ಕನೆಯ ಭಾವವು. ಈ ಆತ್ಮನನ್ನು ಹೀಗೆ **ಶ್ರವಣಮನನನಿದಿಧ್ಯಾಸನಗಳಿಂದ** ಅರಿತುಕೊಂಡರೆ **ಎಲ್ಲವನ್ನೂ ಅರಿತುಕೊಂಡಂತೆ ಆಗುವದು.** ಇದು ಐದನೆಯ ಭಾವವು. ಯಾಜ್ಞವಲ್ಕ್ಯನ ಉಪದೇಶದಲ್ಲಿ ಈ ಐದು ಭಾವಗಳು ಅಡಕವಾಗಿರುತ್ತವೆ.

ಈಗ ಈ ಭಾವಗಳ ವಿಷಯದಲ್ಲಿ ಸಾಮಾನ್ಯಜನರಿಗೆ ಉಂಟಾಗಬಹುದಾದ ಸಂಶಯಗಳನ್ನು ಒಂದೊಂದಾಗಿ ತೆಗೆದುನೋಡೋಣ. ಆತ್ಮನು ಎಲ್ಲಕ್ಕಿಂತಲೂ ಹೆಚ್ಚು ಪ್ರಿಯನು ಎಂಬುದನ್ನು ಒಪ್ಪುವದಕ್ಕೆ ಕಷ್ಟವೇನೂ ಆಗುವದಿಲ್ಲ. ನಮ್ಮಲ್ಲಿ ಪ್ರತಿಯೊಬ್ಬನಿಗೂ ತನ್ನತನ್ನ ಮೇಲೆ ಮಿಕ್ಕ ಎಲ್ಲಕ್ಕಿಂತಲೂ ಹೆಚ್ಚಿನ ಪ್ರೀತಿಯಿದೆ. ತಾನುಂಟೋ, ಮೂರು ಲೋಕವುಂಟೋ?– ಎಂಬ ಗಾದೆ ನಮಗೆಲ್ಲರಿಗೂ ಗೊತ್ತೇ ಇದೆ. ಮಿಕ್ಕದ್ದು ಯಾವದಾದರೂ ತನಗಾಗಿಯೇ ಬೇಕಾಗಿರುತ್ತದೆ. ಆದರೆ ಆತ್ಮನು ಅಮೃತವಾದ, ಸಾವಿಲ್ಲದ, ಆನಂದವು ಎಂದರೆ ಹೇಗೆ? "ನಮಗೆ ಸಾವಿಲ್ಲ" ಎಂದು ಯಾರುತಾನೆ ಭರವಸೆಯಿಟ್ಟುಕೊಂಡಿರುತ್ತಾರೆ? ಅವಿವೇಕಿಗಳು ಇಹಲೋಕದ ವ್ಯಾಪಾರಗಳಲ್ಲಿ ಮಗ್ನರಾಗಿರುವಾಗ ನಾವು ಹೀಗೆಯೇ ಬಹುಕಾಲ ಬದುಕಿರುವೆವು– ಎಂದುಕೊಂಡಿರಬಹುದು. ಆದರೆ ನಮಗೆ ಸಾವಿಲ್ಲವೆ?– ಎಂಬ ಪ್ರಶ್ನೆಯನ್ನು ಯಾರು ಯಾವಾಗ ಹಾಕಿಕೊಂಡರೂ "ಉಂಟು?" ಎಂಬ ಕಡುಖಂಡಿತವಾದ ಉತ್ತರವು ಬಂದುಬಿಡುತ್ತದೆಯಲ್ಲವೆ? ಇನ್ನು ಆತ್ಮನೆಂದರೆ ನಮ್ಮ ಸ್ವರೂಪವೇ ಆದರೆ, ಆತ್ಮಪ್ರಾಪ್ತಿ ಎಂದರೇನು? ಆತ್ಮಜ್ಞಾನವೇ ಆತ್ಮಪ್ರಾಪ್ತಿ ಎಂದರೂ ತನ್ನನ್ನು ತಾನು ಅರಿತುಕೊಳ್ಳಬೇಕಾದದ್ದಾದರೂ ಏನಿದೆ? ತನಗಿಂತ ಬೇರೆಯಾದ ಮತ್ತೊಂದನ್ನು ಅರಿತಿಲ್ಲ, ಅದರ ವಿಷಯಕ್ಕೆ ಸಂಶಯವಿದೆ, ಅಥವಾ ತಪ್ಪಾಗಿ ತಿಳಿದುಕೊಂಡಿದ್ದೆನು–ಎಂಬ ತಿಳಿವಳಿಕೆಯುಂಟಾಗಬಹುದು. ಆದರೆ "ನನ್ನನ್ನು ನಾನು ಅರಿಯೆ" ಎಂದು ಯಾವನು ತಾನೆ ಹೇಳಿಕೊಳ್ಳುತ್ತಾನೆ? ಹೀಗೆ ಆತ್ಮನನ್ನು ಅರಿತುಕೊಳ್ಳಬೇಕಾದದ್ದೇ ಇಲ್ಲವೆಂದಾದಮೇಲೆ, ಆತ್ಮನ

ವಿಷಯವಾಗಿ ಶ್ರವಣಮನನನಿದಿಧ್ಯಾಸನಗಳನ್ನು ಮಾಡಬೇಕಾದದ್ದು ಏನೂ ಇಲ್ಲವೆಂದು ನಿಶ್ಚಯವಾಯಿತು. ಇದೂ ಅಲ್ಲದೆ ತನ್ನ ಆತ್ಮನ ವಿಷಯದಲ್ಲಿ ಮತ್ತೊಬ್ಬರನ್ನು ಕೇಳುವದೆಂದರೆ ಎಂಥ ಮಾತಿದು! ಮನೆಯಲ್ಲಿ ಕೆಡವಿಕೊಂಡಿದ್ದ ಸೂಜಿಯನ್ನು ಬೀದಿಯಲ್ಲಿ ಹುಡುಕುವ ಪ್ರಯತ್ನವಲ್ಲವೆ, ಅದು? ಹೀಗಿರುವಲ್ಲಿ ಯಾಜ್ಞವಲ್ಕ್ಯನು ತನಗೆ ಪ್ರಿಯಳಾದ ಹೆಂಡತಿಗೂ ಈ ವಿಷಯದಲ್ಲಿ ಹೀಗೇಕೆ ಅನವಶ್ಯಕವಾದ ಉಪದೇಶವನ್ನು ಮಾಡಿರುತ್ತಾನೆ? ಇದೆಲ್ಲಕ್ಕಿಂತಲೂ ಇಲ್ಲಿ ಅತ್ಯಂತ ಅಸಂಭಾವಿತವಾಗಿ ತೋರುವ ವಿಷಯವು ಯಾವದೆಂದರೆ ಆತ್ಮನನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದು ಎಂಬುದು. ಇದು ಹೇಗೆತಾನೆ ಸಾಧ್ಯ? ಒಂಧು ವಸ್ತುವನ್ನು ಅರಿತುಕೊಂಡರೆ ಮತ್ತೊಂದನ್ನು ಅರಿತಂತೆ ಎಂದಿಗಾದರೂ ಆದೀತೆ? ಹೀಗಿರುವಲ್ಲಿ ಆತ್ಮನನ್ನು ಅರಿತುಕೊಂಡರೆ ಸರ್ವವನ್ನೂ ಅರಿತುಕೊಂಡಂತೆ ಆಗುವದೆಂದು ಹೇಳಿದ ಯಾಜ್ಞವಲ್ಕ್ಯನ ಅಭಿಪ್ರಾಯ ವಾದರೂ ಏನು!

ವಾಚಕರೆ, ತಮ್ಮಲ್ಲಿ ಎಲ್ಲರಿಗೂ ಈ ಸಂಶಯಗಳೆಲ್ಲವೂ ಒಂದೇ ರೀತಿಯಾಗಿ ಉಂಟಾಗುವವು ಎಂದೇನೂ ನನ್ನ ಅಭಿಪ್ರಾಯವಲ್ಲ. ತಮ್ಮಗಳೊಳಗೆ ಆತ್ಮ ವಿಚಾರದ ಗ್ರಂಥಗಳನ್ನು ಓದಿದವರೂ ತತ್ತ್ವವಿಚಾರವನ್ನು ಮಾಡಿದವರೂ ಎಷ್ಟೋ ಮಂದಿ ಇರುತ್ತಾರೆ. ಆದರೆ ವೇದಾಂತವಿಚಾರಕ್ಕೆ ಹೊಸಬರಾದವರಿಗೆ ಈ ಸಂಶಯಗಳು ಉಂಟಾಗುವದು ಸ್ವಾಭಾವಿಕವಾಗಿದೆ. ಅವರ ಈ ಸಂಶಯಗಳನ್ನು ಬಗೆಹರಿಸುವ ಉತ್ತರಗಳನ್ನು ಕಂಡುಹಿಡಿಯುವದರಿಂದ ನಮ್ಮ ಜ್ಞಾನವು ಪರಿಶುದ್ಧವಾಗುವದು. ಆತ್ಮಜ್ಞಾನದಿಂದ ಅಮೃತತ್ವವು ದೊರಕುವದು, ಪರಮಾನಂದವು ದೊರಕುವದು- ಎಂದರೇನೆಂಬುದು ನಮ್ಮ ಮನಸ್ಸಿನಲ್ಲಿ ನಿಃಸಂದಿಗ್ಧವಾಗಿ ಮಿಂಚುವದು. ಮುಖ್ಯವಾಗಿ ಶ್ರವಣಮನನನಿದಿಧ್ಯಾಸನಗಳನ್ನು ಈ ಸಂದೇಶದಲ್ಲಿ ಸೂತ್ರಿಸಿದೆ. ಇವುಗಳ ಸ್ವರೂಪದ ಚಿತ್ರವು ನಮ್ಮ ಒಗೆಗಣ್ಣಿನ ಎದುರಿಗೆ ಸ್ಫುಟವಾಗಿ ನಿಲ್ಲಬೇಕಾದರೆ ಈ ಎಲ್ಲಾ ಪ್ರಶ್ನೆಗಳನ್ನೂ ನಾವು ಸಾವಧಾನವಾಗಿ ಪರೀಕ್ಷಿಸಿ ಅವಕ್ಕೆ ಚಿತ್ತಸಮರ್ಪಕವಾದ ಉತ್ತರಗಳನ್ನು ಕಂಡುಕೊಳ್ಳುವದಕ್ಕೆ ಯತ್ನಿಸಬೇಕು. ಇದನ್ನು ತಿಳಿಯಪಡಿಸುವದಕ್ಕಾಗಿಯೇ ನಾನು ಜಿಜ್ಞಾಸುಗಳ ಈ ಸಂಶಯಮಾಲೆಯನ್ನು ಇಲ್ಲಿ ತಮ್ಮ ಮುಂದೆ ಇಟ್ಟಿರುತ್ತೇನೆ. ಈ ವಿಷಯವನ್ನು ಮತ್ತೊಂದು ಸಂದೇಶದಲ್ಲಿ ವಿವರಿಸುವದಕ್ಕೆ ಪ್ರಯತ್ನಿಸುವೆನು.

ಅಧ್ಯಾತ್ಮವಿಚಾರವು ಮೊದಮೊದಲು ಬಹಳ ತೊಡಕುಗಳಿಂದ ಕೂಡಿರುವಂತೆ ಕಾಣುವದು. ನಮಗೆಲ್ಲರಿಗೂ ಅನುಭವದಲ್ಲಿರುವ ಪ್ರಪಂಚವನ್ನು ಅದರಲ್ಲಿ ಅಸಡ್ಡೆಮಾಡಿರುವಂತೆ ಕಾಣಿಸುತ್ತದೆ. ಮನುಷ್ಯನಿಗೆ ಇಲ್ಲಿ ಆತ್ಯಂತಿಕಶುದ್ಧಸುಖವು ಸಿಕ್ಕುವಹಾಗಿಲ್ಲವೆಂಬುದು ನಿಜ. ಆದರೆ ಸುಖವು ದುಃಖಮಿಶ್ರವಾಗಿದೆ ಎಂಬ ಕಾರಣದಿಂದಲಾಗಲಿ, ಅದು ಎಂದೆಂದಿಗೂ ನಿಲ್ಲುವದಿಲ್ಲ ಎಂಬ ಕಾರಣದಿಂದಲಾಗಲಿ

ಸುಖಕ್ಕಾಗಿ ಪ್ರಯತ್ನಿಸುವದನ್ನೇ ಬಿಡಬೇಕೆ?- ಎಂಬ ಸಂಶಯವೊಂದು ಎಲ್ಲಕ್ಕೂ ಮೊಟ್ಟಮೊದಲು ಅಂಕುರಿಸುವದು ಸ್ವಾಭಾವಿಕವಾಗಿದೆ. ಆ ಸಂಶಯಕ್ಕೆ ಪರಿಹಾರವನ್ನು ಈ ಸಂದೇಶದಲ್ಲಿ ಸ್ವಲ್ಪಮಟ್ಟಿಗೆ ಸೂಚಿಸಲಾಗಿದೆ. ಲೋಕದಲ್ಲಿ ಸಿಕ್ಕುವದೆಂಬ ಸುಖವೆಲ್ಲವೂ ಆತ್ಮನಿಮಿತ್ತವಾಗಿಯೇ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಆತ್ಮವಿಚಾರವೂ ಸುಖವಿಚಾರವೇ ಆಗಿದೆ ಎಂಬುದನ್ನು ಸ್ವಲ್ಪಮಟ್ಟಿಗೆ ವಿಶದಗೊಳಿಸಿದ್ದಾಗಿದೆ. ಆದರೆ ಈ ವಿಷಯವು ಇನ್ನೂ ಸ್ಫುಟವಾಗಬೇಕಾದರೆ ಮುಂದಿನ ಸಂದೇಶವನ್ನು ಅವಶ್ಯವಾಗಿ ಕೇಳಬೇಕು.

## 4.5. ಆತ್ಮನ ಅಮೃತಸ್ವರೂಪ

**ಅವಿನಾಶೀ ವಾ ಅರೇಽಯಮಾತ್ಮಾಽನುಚ್ಛಿತ್ತಿಧರ್ಮಾ ॥ ಬೃ. 4-5-14**

ವಾಚಕವೃಂದ, ಆತ್ಮನನ್ನು ಕುರಿತು ಶ್ರವಣಮನನನಿದಿಧ್ಯಾಸನಗಳನ್ನು ಮಾಡಬೇಕು. ಆತ್ಮನನ್ನು ಅರಿತುಕೊಂಡರೆ ಇದೆಲ್ಲವನ್ನೂ ಅರಿತಂತೆ ಆಗುವದು, ಅದರಿಂದ ಅಮೃತತ್ವವು ದೊರಕುವದು-ಎಂದು ಯಾಜ್ಞವಲ್ಕ್ಯನು ಮೈತ್ರೇಯಿಗೆ ಮಾಡಿದ ಉಪದೇಶವಾಕ್ಯವನ್ನು ತಮ್ಮ ಮುಂದೆ ಇಟ್ಟಿದ್ದೆನು. ಆ ವಿಷಯಕ್ಕೆ ಸಾಮಾನ್ಯಜನರಿಗೆ ಉಂಟಾಗಬಹುದಾದ ಕೆಲವು ಸಂದೇಹಗಳನ್ನೂ ಹಿಂದಿನ ಸಂದೇಶದ ಕೊನೆಯಲ್ಲಿ ತಿಳಿಸಿದ್ದೆನು. ಈ ತಿಂಗಳಿನ ಲೇಖನದಲ್ಲಿ ಮುಖ್ಯವಾಗಿ ಆತ್ಮನಿಗೆ ಸಾವಿಲ್ಲ, ಅವನು ಅಮೃತಾನಂದಸ್ವರೂಪನು- ಎಂಬುದನ್ನು ಕುರಿತು ಸ್ವಲ್ಪ ಬರೆಯಬೇಕೆಂದು ಹೊರಟಿರುತ್ತೇನೆ. ಸಾವಧಾನವಾಗಿ ಕೇಳಬೇಕು.

ಆತ್ಮನಿಗೆ ಸಾವಿಲ್ಲವೆಂದರೆ ಹೇಗೆ? ಆತ್ಮನೆಂದರೆ ತಾನು. ಯಾವ ವಿವೇಕಿಯು ತಾನೆ ತನಗೆ ಸಾವಿಲ್ಲವೆಂದು ನಂಬಿರುತ್ತಾನೆ? ಹಿಂದಿನ ಎಲ್ಲಾ ಮಹಾತ್ಮರೂ ಸತ್ತು ಹೋಗಿರುತ್ತಾರೆ; ಈಗಿರುವವರೆಲ್ಲರೂ ಒಂದಲ್ಲ ಒಂದು ದಿನ ಸಾಯುತ್ತಾರೆಂಬುದು ಸರ್ವವಿದಿತ; ಹೀಗಿರುವಲ್ಲಿ ನನಗೆ ಸಾವಿಲ್ಲ ಎಂಬ ವಾಕ್ಯಕ್ಕೆ ಅರ್ಥವೇನು?-ಎಂದು ಸಾಮಾನ್ಯಜನರಿಗೆ ಸಂಶಯವು ಬರುವದು ಸ್ವಾಭಾವಿಕವಾಗಿದೆ. ಆದರೆ ಆತ್ಮನೆಂದರೆ ಯಾವ ವಸ್ತು? ಸಾವೆಂದರೆ ಏನು?- ಎಂಬೀ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡ ಹೊರತು ಈ ಸಂಶಯವನ್ನು ಬಗೆಹರಿಸಿಕೊಳ್ಳುವದಕ್ಕೆ ಆಗುವದಿಲ್ಲ. ಮಾಂಸಮಯವಾದ ದೇಹವು ದಿನದಿನಕ್ಕೂ ಮಾರ್ಪಡುತ್ತಲೇ ಇದೆ; ನನ್ನ ಶರೀರವು ಹಿಂದೆ ಇದ್ದಂತೆ ಈಗ ಇಲ್ಲ- ಎಂದು ಪ್ರತಿಯೊಬ್ಬನೂ ಹೇಳುತ್ತಿರುತ್ತಾನೆ. ಬಾಲ್ಯಯೌವನಾದಿಯಾದ ಅವಸ್ಥೆಗಳು ಬಂದು ಹೋದರೂ ಅವನ್ನು ನೋಡುತ್ತಿರುವವನು ನಾನೇ-ಎಂದು ಪ್ರತಿಯೊಬ್ಬನಿಗೂ ಅನುಭವವಿದೆ. ಅಂದಮೇಲೆ ದೇಹವು ನಾಶವಾದ ಮಾತ್ರದಿಂದ ತಾನು ನಾಶವಾಗುವದಿಲ್ಲವೆಂಬುದು ಸ್ಪಷ್ಟವಾಯಿತು.

ಶರೀರವು ನಾನಲ್ಲದಿದ್ದರೆ ಹೋಗಲಿ. ಪ್ರಾಣವು ಇರುವದು, ಪ್ರಾಣವು ಹೋಗುವದು- ಇದಾದರೂ ಎಲ್ಲರ ಅನುಭವದಲ್ಲಿದೆಯಷ್ಟೆ; ಪ್ರಾಣವಿಯೋಗವೇ ಸಾವು. ಇದುವರೆಗೆ ಇದ್ದವರೆಲ್ಲರೂ ಪ್ರಾಣಸಂಬಂಧವು ತಮ್ಮ ಶರೀರಕ್ಕೆ ತಪ್ಪಿದೊಡನೆ ಸತ್ತರಲ್ಲವೆ?-ಎಂದು ಯಾರಾದರೂ ಶಂಕಿಸಬಹುದು. ವ್ಯವಹಾರದೃಷ್ಟಿಯಿಂದ ಇದು ಸರಿಯೂ ಆಗಿದೆ. ಏಕೆಂದರೆ ಶರೀರವು ಹುಟ್ಟಿದರೆ ತಾನು ಹುಟ್ಟಿದೆನೆಂದೂ ಶರೀರವು ಬಿದ್ದುಹೋದರೆ ತಾನು ಬಿದ್ದುಹೋಗುವೆನೆಂದೂ ಎಲ್ಲರೂ ತಿಳಿದುಕೊಂಡಿರುತ್ತಾರೆ. ಶರೀರದಲ್ಲಿರುವಾಗಲೆ ಇಂದ್ರಿಯಗಳೂ ಪ್ರಾಣವೂ ಕೆಲಸಮಾಡುತ್ತಿರುತ್ತವೆ. ಆದ್ದರಿಂದ ಪ್ರಾಣೇಂದ್ರಿಯಗಳ ಸಂಬಂಧವಿಲ್ಲದವನಾಗುವದೇ ಸಾವು. ಈ ಸಾವು ಎಲ್ಲರಿಗೂ ಉಂಟಲ್ಲವೆ?- ಎಂಬುದು ಶಂಕಿಸುವವರ ಅಭಿಪ್ರಾಯ.

ಇಲ್ಲಿ ಸ್ವಲ್ಪ ವಿಚಾರಮಾಡತಕ್ಕದ್ದು ಇದೆ. ಏಕೆಂದರೆ ನಮ್ಮ ಮುಂದೆ ಕಾಣುವ ಜನರು ಶರೀರೇಂದ್ರಿಯಪ್ರಾಣಗಳನ್ನು ಬಿಟ್ಟದ್ದನ್ನು ನಾವು ಕಾಣಬಹುದು. ಅದರಂತೆ ನಮಗೂ ಶರೀರೇಂದ್ರಿಯಪ್ರಾಣಗಳ ವಿಯೋಗವಾಗುವದೆಂದು ನಾವು ಕಲ್ಪಿಸಿಕೊಳ್ಳಲೂಬಹುದು. ಆದರೆ ಯಾವ ನಮಗೆ ಶರೀರೇಂದ್ರಿಯಪ್ರಾಣಗಳ ಸಂಬಂಧವೂ ವಿಯೋಗವೂ ಆಗುವದೋ ಆ ನಾವು ಯಾರು? ಆ ನಮಗೆ ಸಾವು ಎಂದರೇನರ್ಥ? ಇದನ್ನು ಸಾವಧಾನವಾಗಿ ಮನಸ್ಸಿನಲ್ಲಿ ಹೊರಳಾಡಿಸಬೇಕು. "ನ ಹನ್ಯತೇ ಹನ್ಯಮಾನೇ ಶರೀರೇ" ಶರೀರವು ಹತವಾದರೆ ಆತ್ಮನು ಹತನಾಗುವದಿಲ್ಲ ಎಂಬ ಗೀತೋಕ್ತಿಯ ಅಭಿಪ್ರಾಯವೇ ಇದು. ನಮ್ಮ ಆತ್ಮನು ಶರೀರಪ್ರಾಣೇಂದ್ರಿಯಾದಿಗಳನ್ನು ನೋಡುತ್ತಿರುವವನು; ಅವನಿಗೆ ದೃಶ್ಯವಾದ ಈ ದೇಹಾದಿಗಳ ನಾಶದಿಂದ ನಾಶವಾದೀತೆ? ದೃಶ್ಯವು ನಾಶವಾದರೆ ದೃಕ್ಕಿಗೆ (ನೋಡುವವನಿಗೆ) ನಾಶವಾಗುವದೆಂಬುದು ಯಾರ ಅನುಭವದಲ್ಲಿದೆ?

ಇದು ಯುಕ್ತಿಯೇನೋ ಆಯಿತು. ಆದರೆ ಇದರಿಂದ ಯಾವ ಪುರುಷಾರ್ಥವುತಾನೆ ಲಭಿಸೀತು? ನಮಗೆ ಬೇಕಾದ ವಸ್ತುಗಳನ್ನು ಕಾಣುವದು, ಕೇಳುವದು, ಅವುಗಳ ವಿಷಯವನ್ನು ಕುರಿತು ಮನಸ್ಸಿನಲ್ಲಿ ಆಲೋಚಿಸುವದು, ಅವುಗಳನ್ನು ಧ್ಯಾನಿಸುವದು- ಇದೇ ಅಲ್ಲವೆ, ಪುರುಷಾರ್ಥವೆಂಬುದು? ಇದು ಯಾವದೂ ಇಲ್ಲದಿರುವಾಗ, ಮನುಷ್ಯನು ಶರೀರಾದಿಗಳ ಸಂಬಂಧವನ್ನು ಬಿಟ್ಟು ಏನನ್ನೂ ಕಾಣಲರಿಯದೆ, ಕೇಳಲರಿಯದೆ, ಮನನಮಾಡಲರಿಯದೆ, ಚಿಂತಿಸಲರಿಯದೆ, ಯಾವ ಸುಖದುಃಖವನ್ನೂ ಅನುಭವಿಸಲರಿಯದೆ ಇರುವ ಕಲ್ಲಿನ ಸ್ಥಿತಿಯು ಬಂದರೆ ಅದನ್ನು ಸಾವು ಎಂದು ಕರೆಯದೆ ಮತ್ತೇನೆಂದು ಕರೆಯಬೇಕು? "ನಿಮಗೆ ಸಾವಿಲ್ಲ; ನಿಮ್ಮ ದೇಹಕ್ಕೂ ಇಂದ್ರಿಯಗಳಿಗೂ ಸಾವು ಉಂಟು" ಎಂಬ ಸಮಾಧಾನೋಕ್ತಿಯಿಂದ ಯಾರಿಗೆ ತಾನೆ ತೃಪ್ತಿಯಾದೀತು?- ಎಂದು ಕೆಲವರ ಮನಸ್ಸಿನಲ್ಲಿ ಶಂಕೆಯು ಎದ್ದುಕೊಳ್ಳಬಹುದು. ಈ ಶಂಕೆಗೆ ಪರಿಹಾರವೇನೆಂದರೆ ಇಲ್ಲಿ ನಾವು ಹೇಳಿರುವದು

ಬರಿಯ ಯುಕ್ತಿಯಲ್ಲ, ಅನುಭವ. ಪ್ರಶ್ನೆಯನ್ನು ಕೇಳುವವರು ಯಾವ ದುರಭಿಮಾನವೂ ಇಲ್ಲದೆ ತಮ್ಮ ಅನುಭವವನ್ನು ಮರೆಮಾಚದೆ ನೋಡಿಕೊಂಡು ಆಮೇಲೆ ಏನುಬೇಕಾದರೂ ಕೇಳಬಹುದು. ನಾವು ಎಚ್ಚರದವಸ್ಥೆಯಲ್ಲಿ ವ್ಯವಹಾರಮಾಡುತ್ತಿರುವಾಗ ಮನಸ್ಸು, ಇಂದ್ರಿಯಗಳು, ಪ್ರಾಣ–ಇವುಗಳಿಂದಲೇ ವ್ಯವಹರಿಸುತ್ತಿರುವೆವೆಂಬುದು ನಿಜ. ಆದರೆ ಅಷ್ಟುಮಾತ್ರದಿಂದ ಈ ಮನಸ್ಸು, ಇಂದ್ರಿಯಗಳು, ಪ್ರಾಣ– ಇವೇ ನಾವು ಎಂದುಕೊಳ್ಳಬಹುದೆ? ಒಬ್ಬನು ಲೇಖನಿಯ ಮೂಲಕವಾಗಿ ಕಾಗದದಮೇಲೆ ಬರೆಯುತ್ತಾನೆಂದು ಇಟ್ಟುಕೊಳ್ಳಿ; ಆದರೆ ಆಗ್ಗೆ ಲೇಖನಿಯೇ ಬರೆಯಿತು, ಆ ಲೇಖನಿಯೇ ನಾನು– ಎಂದು ಯಾರೂ ಎನ್ನುವದಿಲ್ಲ. ಅಲ್ಲವೆ? ಇದರಂತೆ ಮನಸ್ಸು, ಇಂದ್ರಿಯ– ಮುಂತಾದವು ನಮಗೆ ವ್ಯವಹಾರಕ್ಕೆ ಬೇಕಾದ ಕರಣಗಳು; ಬರೆಯುವದಕ್ಕೆ ಬೇಕಾದ ಲೇಖನಿಯಂತೆಯೇ ಅವು ಇರುತ್ತವೆ. ಅವೇ ನಮ್ಮ ಸ್ವರೂಪವು ಎಂದು ನಾವು ಎಣಿಸುವದಕ್ಕೆ ಯಾವ ಕಾರಣವೂ ಇಲ್ಲ.

ಇಂದ್ರಿಯಗಳ ಮೂಲಕವೂ ಮನಸ್ಸಿನ ಮೂಲಕವೂ ನಾವು ನೋಡುವದು, ಕೇಳುವದು, ಯೋಚಿಸುವದು– ಮುಂತಾದ ವ್ಯವಹಾರವನ್ನು ಮಾಡುತ್ತೇವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ! ಏಕೆಂದರೆ ಈ ವ್ಯವಹಾರವು ನಮ್ಮ ಎಚ್ಚರದ ಅನುಭವದಿಂದ ಸಿದ್ಧವಾಗಿದೆ. ಅನುಭವವನ್ನು ಅಲ್ಲಗಳೆಯುವದು ಎಂದಿಗೂ ಸರಿಯಾಗಲಾರದು. ಆದರೆ ಈ ಕರಣಗಳ ವ್ಯಾಪಾರವಿಲ್ಲದೆ ಇದ್ದರೆ ನಾವು ಕಲ್ಲು ಮುಂತಾದ ಅಚೇತನಗಳಂತೆ ಆಗುವೆವು, ನಾವೇ ಇಲ್ಲವಾಗುವೆವು, ನಾವು ಸತ್ತುಹೋಗುವೆವು–ಎಂದು ಹೇಳಬಹುದೆ? ಒಬ್ಬ ಮನುಷ್ಯನು ಎಚ್ಚರವನ್ನು ಬಿಟ್ಟು ಕನಸನ್ನು ಅನುಭವಿಸುತ್ತಿದಾನೆಂದು ಇಟ್ಟುಕೊಳ್ಳೋಣ; ಆಗ ಅವನಿಗೆ ಎಚ್ಚರದ ಇಂದ್ರಿಯಗಳಾಗಲಿ, ಮನಸ್ಸಾಗಲಿ ಯಾವ ಉಪಯೋಗಕ್ಕೂ ಬರುವದಿಲ್ಲ. ಆದರೆ ಅಷ್ಟುಮಾತ್ರದಿಂದ ಅವನು ಕಲ್ಲಿನಂತೆ ಅಚೇತನವಾಗುವನೆ? ಅಥವಾ ಅವನೇ ಇಲ್ಲವಾಗುವನೆ? ಹಾಗೆಂದು ನಾವು ಯಾರೂ ತಿಳಿಯುವದಿಲ್ಲವಷ್ಟೆ? ಹಾಗಾದಮೇಲೆ ಇಂದ್ರಿಯಾದಿಗಳಿದ್ದರೇ ನಾವು ಇರುವೆವು, ಇಲ್ಲದಿದ್ದರೆ ಇಲ್ಲ– ಎಂಬ ವಾದವು ಅನುಭವಕ್ಕೆ ಸಮ್ಮತವಾಗಿದೆ ಎಂದು ಹೇಳಬಹುದೆ?

ಯಾಜ್ಞವಲ್ಕ್ಯನು ಮೈತ್ರೇಯಿಗೆ ಮಾಡಿದ ಉಪದೇಶದಲ್ಲಿ ಆತ್ಮನು "ಪ್ರಜ್ಞಾನಘನನು" (ಅರಿವಿನ ಗಟ್ಟಿಯು) ಅವನು ಕಲ್ಲು ಮುಂತಾದವುಗಳಂತೆ ಅಚೇತನವಲ್ಲ; ಆದರೆ ಅವನಿಗೆ ದರ್ಶನ, ಶ್ರವಣ, ಮನನ–ಮುಂತಾದ ವಿಶೇಷಜ್ಞಾನಗಳೇ ಸ್ವಭಾವವಲ್ಲ– ಎಂದು ಹೇಳಿರುತ್ತಾನೆ. ಇಂದ್ರಿಯಗಳೂ ಮನಸ್ಸೂ, ಪ್ರಾಣವೂ ಆತ್ಮನ ಸ್ವರೂಪಕ್ಕೆ ನಿಜವಾಗಿ ಸೇರಿಕೊಂಡಿರುವದಿಲ್ಲ. ಅವೆಲ್ಲ ಭೂತಮಾತ್ರೆಗಳು, ಎಂದರೆ ಭೂತಗಳ ಅಂಶಗಳು; ಅವುಗಳ ಸಂಪರ್ಕದಿಂದ ನಮಗೆ ವ್ಯವಹಾರದಲ್ಲಿ ನೋಡುವದು, ಕೇಳುವದು, ಯೋಚಿಸುವದು– ಮುಂತಾದ ವಿಶೇಷಜ್ಞಾನಗಳು ತೋರಿಕೊಳ್ಳುತ್ತಿರುತ್ತವೆ. ಜ್ಞಾನದಿಂದ ಅವುಗಳ ಸಂಬಂಧವನ್ನು ತಪ್ಪಿಸಿಕೊಂಡರೆ– ಇವುಗಳ ಸಂಬಂಧವು ನನಗೆ ಅವಿದ್ಯೆಯಿಂದ

ಮಾತ್ರವೇ ತೋರುತ್ತಿರುತ್ತದೆ, ನಿಜವಾಗಿ ಇವುಗಳ ಹಂಗು ನನ್ನ ಸ್ವರೂಪಕ್ಕೆ ಇಲ್ಲ ಎಂಬುದನ್ನು ಅರಿತುಕೊಂಡರೆ-ಆಗ ಈ ವಿಶೇಷಜ್ಞಾನಗಳಿಗೂ ನನಗೂ ಸಂಬಂಧವಿಲ್ಲ ಎಂಬುದು ಮನದಟ್ಟಾಗುವದು. ಅವುಗಳು ಕಾಣದಂತೆ ಆದರೂ ನಮ್ಮ ಸ್ವರೂಪಕ್ಕೆ ಯಾವ ಹಾನಿಯೂ ಇರುವದಿಲ್ಲ ಎಂಬುದು ಸ್ಪಷ್ಟವಾಗಿ ಅನುಭವಕ್ಕೆ ಬರುವದು.

ಈಗ ಇನ್ನೊಂದು ವಿಷಯವನ್ನು ಕುರಿತು ವಿಚಾರಮಾಡೋಣ. ಇಷ್ಟವಾದ ವಸ್ತುಗಳನ್ನು ಕಾಣುವದು, ಕೇಳುವದು, ಅವುಗಳ ವಿಷಯವನ್ನು ಮನಸ್ಸಿನಲ್ಲಿ ಆಲೋಚಿಸುವದು, ಅವುಗಳ ಸಂಬಂಧದಿಂದ ಆದ ಸುಖದುಃಖಗಳನ್ನು ಅನುಭವಿಸುವದು-ಇದೇ ನಾವು ಬದುಕಿದ್ದೇವೆಂಬುದಕ್ಕೆ ಗುರುತುಗಳು. ಇವು ಯಾವವೂ ಇಲ್ಲದಾಗ ನಾವು ಕಲ್ಲಿನ ಸ್ಥಿತಿಗೆ ಇಳಿಯುವದಿಲ್ಲವೆ?-ಎಂಬ ಶಂಕೆಯಲ್ಲಿ ಎಷ್ಟರಮಟ್ಟಿನ ನಿಜದ ಅಂಶವಿದೆ ಎಂಬುದನ್ನು ನೋಡೋಣ. ಕನಸಿನ ದೃಷ್ಟಾಂತದಿಂದ ಈ ಶಂಕೆಗೆ ಸ್ವಲ್ಪಮಟ್ಟಿಗೆ ಪರಿಹಾರವನ್ನು ಹೇಳಿದಂತೆ ಆಗಿದೆ. ಆದರೆ ಯಾವ ಇಂದ್ರಿಯದ ವ್ಯವಹಾರವೂ ಯಾವ ಮನಸ್ಸಿನ ವ್ಯವಹಾರವೂ ಇಲ್ಲದಿರುವಾಗ, ನಮಗೆ ಯಾವ ವಿಷಯದ ಅರಿವೂ ಇಲ್ಲದಾಗ, ನಮ್ಮ ಸ್ಥಿತಿ ಹೇಗಿರುತ್ತದೆ? ಆ ಸ್ಥಿತಿಯನ್ನು ಪಡೆದುಕೊಳ್ಳುವದರಿಂದ ನಮಗೆ ಯಾವ ಪುರುಷಾರ್ಥವಾದೀತು? ಈ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ನಾವು ಸುಷುಪ್ತಿಯ ಅವಸ್ಥೆಯನ್ನು ಪರೀಕ್ಷಿಸಬೇಕು. ಅಲ್ಲಿ ನೋಡಿ; ಇಂದ್ರಿಯಗಳಿಂದ ಯಾವ ವಿಷಯವನ್ನೂ ನಾವು ನೋಡುತ್ತಿರುವದಿಲ್ಲ, ಮನಸ್ಸಿನಿಂದ ಯಾವ ವಿಷಯವನ್ನೂ ವಿಚಾರಿಸುತ್ತಿರುವದಿಲ್ಲ. ಆದಮಾತ್ರಕ್ಕೆ ಅಲ್ಲಿ ನಾವೇ ಇಲ್ಲವಾಗಿರುವೆವೆ? ಅಥವಾ ಅಲ್ಲಿ ಯಾವ ಪುರುಷಾರ್ಥವೂ ನಮಗೆ ಸಿಕ್ಕಲಾರದೆಂದು ಭಾವಿಸುವೆವೆ? ತನಿನಿದ್ರೆ ಎಂಬುದು ಯಾರಿಗೆ ಬೇಡ? ಅಲ್ಲಿ ಸಿಕ್ಕುವ ಆನಂದವು ಯಾವ ಯಾವ ವ್ಯವಹಾರದಿಂದತಾನೆ ನಮಗೆ ಸಿಕ್ಕುತ್ತದೆ? ಅಂಥ ಆನಂದವನ್ನು ಅನುಭವಿಸುತ್ತಿರುವ ನಮಗೆ ಅಲ್ಲಿ ಜ್ಞಾನವೇ ಇಲ್ಲವೆಂದೂ ನಾವು ಅಲ್ಲಿ ಕಲ್ಲುಮಣ್ಣು ಮುಂತಾದವುಗಳಂತೆ ಅಚೇತನವಾಗಿರುವೆವೆಂದೂ ಭಾವಿಸಬಹುದೆ?

ಇದುವರೆಗೆ ನಾವು ಮಾಡಿರುವ ವಿಚಾರಧಾರೆಯನ್ನು ಸಂಗ್ರಹಿಸಿ, ವಿಷಯ ಪ್ರತಿಪಾದನೆಯನ್ನು ಮಾಡುವ ಒಂದು ಪದವನ್ನು ಈ ಕೆಳಗೆ ಕೊಡುವೆನು :

**ರಾಗ : ಪಂತುವರಾಳಿ**

**ಸಾವಿಲ್ಲವೊ ಜೀವ । ನಿನಗೆಂದಿಗು ॥ಪ॥**
**ಸಾವಿಲ್ಲವು ಪರಿಭಾವಿಸೆ ಜಗವೇ । ಸಾವ ಹುಟ್ಟತಿಹ ತಾವ್ಯೆಸಲೆ ನೀ ॥ಅ.ಪ॥**
**ಗಡಿಗೆಯ ದೂಸರಿಂದ । ಬಯಲು ಬೇ । ರ್ಪಡುತಡಗುವ ಚಂದ ।**
**ಅಡಿಗಡಿಗಾನುತೆ ಜಡದೇಹಂಗಳ ।**
**ಮಡಿವವೊಲಿರ್ದೊಡೇಂ ಬಿಡು ಪುಸಿದುಗುಡವ ॥1॥**

**ಕನಸುಮಾಯೆಯೊಳಗೆ । ದೇಹಂಗಳು । ನೆನಸಿಕೊಂಡ ಘಳಿಗೆ ।**
**ಎನಿಸೊ ತೋರುತಲಿ ಕೊನೆಗಾಣುವ ಪರಿ ।**
**ತನುವಿದು ಬರಿದೇ ಮೊನೆದು ಮೈಗರೆವುದು ॥2॥**
**ತನಿನಿದ್ರೆಯ ಸೊಗದೆ । ನೀನನುದಿನ । ತನುವಿನೊಳಗೆ ಸಿಗದೆ ।**
**ಚಿನುಮಯನಹೆ ನೀನನಘ ಶಂಕರನೈ ।**
**ಜನಿಮೃತಿಸಾಕ್ಷಿಯೆಂದನುಭವಸಿದ್ಧವು ॥3॥**

ನಾವು ದೇಹೇಂದ್ರಿಯಮನೋಬುದ್ಧಿಗಳಿಂದೊಡಗೂಡಿರುವ ಜೀವರೆಂದೂ ನಮಗೆ ಜನನಮರಣಗಳು ತಪ್ಪದೆ ಆಗುತ್ತಿರುವವೆಂದೂ ತಿಳಿಯುವದು ವ್ಯಾವಹಾರಿಕರಾದ ನಮಗೆಲ್ಲರಿಗೂ ಸ್ವಾಭಾವಿಕವಾಗಿರುವ ಭಾವನೆಯು. ಆದರೆ ಇದು ತಪ್ಪುತಿಳಿವಳಿಕೆಯೇ. ಗಡಿಗೆಯು ಹುಟ್ಟಿ ಹಾಳಾದರೆ ಗಡಿಗೆಯೊಳಗಿನ ಬಯಲೂ ಹುಟ್ಟಿಹಾಳಾಗುತ್ತಿರುವದೆಂಬ ತಿಳಿವಳಿಕೆಯಂಥ ಕೇವಲ ಮೂಢಭಾವನೆಯಾಗಿರುತ್ತದೆ. ನಮಗೆ ಎಷ್ಟೋ ಕನಸುಗಳಾಗಿರುವವು, ಅಲ್ಲಿ ಲೆಕ್ಕವಿಲ್ಲದಷ್ಟು ಶರೀರಾದಿಗಳ ಸಂಬಂಧವಾಗಿ ವಿಯೋಗವೂ ಆಗಿರುವದು; ಆದಮಾತ್ರದಿಂದ ನಮಗೆ ಅಲ್ಲಿ ಜನನವಾಗಲಿ ಮರಣವಾಗಲಿ ಆಯಿತೆಂದು ಯಾರು ನಂಬುತ್ತಾರೆ? ಇನ್ನು ಸುಷುಪ್ತಿಯಲ್ಲಿ ನಾವು ಪ್ರಜ್ಞಾನಘನರೇ ಆಗಿದ್ದು ಈ ಶರೀರಾದಿಗಳ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಹಾಕಿ ಪರಮಾನಂದಸ್ವರೂಪದಲ್ಲಿ ನಿಂತಿರುವೆವೆಂಬುದು ನಮ್ಮೆಲ್ಲರಿಗೂ ಅನುಭವದಲ್ಲಿದೆ. ಆದ್ದರಿಂದ ಪರಮಾರ್ಥದ ದೃಷ್ಟಿಯಿಂದ ನೋಡಿದಾಗ ನಾವು ಯಾರೂ ಶರೀರಾದಿಗಳಿಗೆ ಕಟ್ಟುಬಿದ್ದಿರುವ ಜೀವರಲ್ಲ; ನಾವು ಮರ್ತ್ಯರೂ ಅಲ್ಲ. ಇಡಿಯ ಜಗತ್ತೇ ನಮ್ಮ ಅಮೃತಾನಂದ ಸ್ವರೂಪದಲ್ಲಿ ಹುಟ್ಟಿ ಲಯವಾಗುತ್ತಿರುವದು. ಹೀಗೆಂಬುದು ಪದದ ಭಾವಾರ್ಥ.

ಹೀಗೆ ನಮ್ಮ ಸ್ವರೂಪವಾಗಿ ಆತ್ಮನು ಅಮೃತನಾಗಿಯೇ ಇರುತ್ತಾನೆ; ಅವನಿಗೆ ಎಂದಿಗೂ ನಾಶವಾಗುವ ಸ್ವಭಾವವಿಲ್ಲ– ಎಂಬುದು ಯಾಜ್ಞವಲ್ಕ್ಯನು ಮೈತ್ರೇಯಿಗೆ ಮಾಡಿರುವ ಉಪದೇಶದ ಸಾರವು. ಇದನ್ನು ಅರಿತುಕೊಳ್ಳುವದೇ ಅಮೃತತ್ವಪ್ರಾಪ್ತಿಗೆ ದಾರಿಯು; ಮತ್ತೆ ಯಾವ ಸಾಧನವೂ ಇದಕ್ಕೆ ಬೇಕಿಲ್ಲ ಎಂದು ಆ ಋಷಿಯು ಹೇಳಿರುತ್ತಾನೆ.

ನಮ್ಮ ಆತ್ಮಸ್ವರೂಪವು ಎಂದೆಂದಿಗೂ ಅಮೃತಸ್ವರೂಪವೇ ಆಗಿದ್ದರೂ ನಮ್ಮಗಳಿಗೇಕೆ ಸಾವಿನ ಅಂಜಿಕೆಯು ಇಷ್ಟು ಬಲವಾಗಿದೆ? ನಮ್ಮ ಸ್ವರೂಪವನ್ನು ನಾವೇ ಅರಿಯೆವೆಂಬುದು ಆಶ್ಚರ್ಯವಲ್ಲವೆ? ನಮಗಿಂತ ಬೇರೆಯಾಗಿರುವ ಯಾವ ವಸ್ತುವನ್ನಾದರೂ ಅರಿತೆವೆಂದಾಗಲಿ ಮರೆತೆವೆಂದಾಗಲಿ ಹೇಳಬಹುದು; ನಮ್ಮ ಸ್ವರೂಪದ ಮರಹು ನಮಗೆ ಏತರಿಂದ ಆಗಿರುತ್ತದೆ? ನಮ್ಮ ಸ್ವರೂಪವನ್ನು ಮತ್ತೊಬ್ಬರಿಂದ ತಿಳಿದುಕೊಳ್ಳಬೇಕೆಂತಲೂ ಅದಕ್ಕಾಗಿ ಶ್ರವಣಮನನಾದಿಗಳನ್ನು ಮಾಡಬೇಕೆಂತಲೂ ಹೇಳುವದು ಸರಿಯೆ?– ಎಂಬೀ ಪ್ರಶ್ನೆಗಳು ಇನ್ನೂ ಉಳಿದುಕೊಂಡಿವೆ. ಇವಕ್ಕೆ ಉತ್ತರವನ್ನು ಮತ್ತೊಂದು ಲೇಖನದಲ್ಲಿ ಬರೆಯಬೇಕೆಂದಿರುವೆನು.

## 4.6. ಆತ್ಮಾಜ್ಞಾನ

**ಪರಾಂಚಿ ಖಾನಿ ವ್ಯತೃಣಸ್ವಯಂಭೂಸ್ತಸ್ಮಾತ್ ಪರಾಙ್ಪಶ್ಯತಿ ನಾಂತರಾತ್ಮನ್।**
**ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್ ॥–ಕಾ. 2–1–1**

ಆತ್ಮಸ್ವರೂಪವು ಎಂದೆಂದಿಗೂ ಅಮೃತಸ್ವಭಾವವುಳ್ಳದ್ದೇ ಆಗಿದ್ದರೂ ನಮ್ಮಗಳಿಗೇಕೆ ಸಾವಿನ ಅಂಜಿಕೆಯು ಇಷ್ಟು ಬಲವಾಗಿದೆ? ನಮ್ಮ ಸ್ವರೂಪವನ್ನು ನಾವೇ ಅರಿಯೆವೆಂಬುದು ಆಶ್ಚರ್ಯವಲ್ಲವೆ?– ಎಂದು ಜಿಜ್ಞಾಸುಗಳು ಕೇಳುವದುಂಟು. ಆ ಪ್ರಶ್ನೆಗೆ ಇಲ್ಲಿ ನಾವು ಉದಾಹರಿಸಿದ ಉಪನಿಷದ್ವಾಕ್ಯದಲ್ಲಿ ಉತ್ತರವಿದೆ.

"ನಾನು ಅಮೃತಸ್ವರೂಪನು" ಎಂದು ಯಾರೊಬ್ಬರೂ ಸ್ವಾಭಾವಿಕವಾಗಿ ತಿಳಿದುಕೊಂಡಿರುವದಿಲ್ಲ. ಅಧ್ಯಾತ್ಮಶಾಸ್ತ್ರಗಳಲ್ಲಿ ಮಾತ್ರ ಹಾಗೆಂದು ತಿಳಿಸಿರುತ್ತದೆ. ಭಗವದ್ಗೀತೆಯಲ್ಲಿ ಅರ್ಜುನನ ಮೋಹವನ್ನು ಕಳೆಯುವದಕ್ಕೆಂದು ಹೊರಟ ಶ್ರೀಕೃಷ್ಣಭಗವಂತನು "ಅರ್ಜುನನೆ, ಈ ನಿನ್ನ ಮುಂದೆ ಕಾಣುತ್ತಿರುವ ಭೀಷ್ಮಾದಿಗಳ ಸ್ವರೂಪವನ್ನರಿಯದೆ ಅವರು ಸಾಯುವರು ಎಂದು ಭ್ರಾಂತನಾಗಿರುವೆ. ನಿಜವಾಗಿ ನೋಡಿದರೆ ನಾನಾಗಲಿ ನೀನಾಗಲಿ ಈ ನಮ್ಮ ಮುಂದೆ ಇರುವ ರಾಜರುಗಳಾಗಲಿ ಹಿಂದೆ ಇರಲಿಲ್ಲವೆಂಬುದಿಲ್ಲ; ಮುಂದೆ ನಾವುಗಳು ಇರುವದಿಲ್ಲವೆಂಬುದೂ ಇಲ್ಲ. ಈ ನಮ್ಮ ಆತ್ಮನು ಅವಿನಾಶಿಯು, ಸರ್ವವ್ಯಾಪಿಯು" ಎಂದು ಉಪದೇಶಿಸಿರುತ್ತಾನೆ. ಹೀಗೆಯೇ ಮೈತ್ರೇಯಿಗೆ ಯಾಜ್ಞವಲ್ಕ್ಯನು ಮಾಡಿದ ಉಪದೇಶದಲ್ಲಿಯೂ "ಈ ಆತ್ಮನು ಅವಿನಾಶಿಯು, ನಾಶವಾಗದ ಸ್ವಭಾವದವನು" ಎಂದೇ ಉಪದೇಶಿಸಿರುತ್ತಾನೆ. ಆದರೂ ಸಾಮಾನ್ಯವಾಗಿ ಜನರೇಕೆ "ನಾನು ಸಾಯುವೆನು, ಎಲ್ಲರೂ ಸಾಯುವವರೇ" ಎಂದು ತಿಳಿದುಕೊಂಡಿರುತ್ತಾರೆ?– ಎಂಬ ಪ್ರಶ್ನೆಯು ಎದ್ದುಕೊಳ್ಳುತ್ತಲೇ ಇರುತ್ತದೆ. ಇದಕ್ಕೆ ವೇದಾಂತದ ಉತ್ತರವು ಹೀಗಿದೆ: ಅಜ್ಞಾನವೇ ನಮಗೆ ಸಾವಿನ ಅಂಜಿಕೆಯನ್ನುಂಟು ಮಾಡಿರುತ್ತದೆ; ಒಳಹೊಕ್ಕು ನೋಡಿದರೆ ನಮ್ಮ ಸ್ವರೂಪಕ್ಕೆ ಎಂದಿಗೂ ಸಾವು ಉಂಟಾಗುವಂತೆಯೇ ಇಲ್ಲ. ಈ ಉತ್ತರದ ಅಭಿಪ್ರಾಯವನ್ನು ಹಿಂದಿನ ಸಂದೇಶದಲ್ಲಿ ವಿವರಿಸಲಾಗಿದೆ. ಅದನ್ನು ಮತ್ತೊಮ್ಮೆ ವಾಚಕರು ಓದುವದು ಒಳ್ಳೆಯದು. ಆದರೆ ಈಗ ನಾವು ಉತ್ತರವನ್ನು ಕಂಡುಕೊಳ್ಳಬೇಕಾಗಿರುವ ಪ್ರಶ್ನೆ ಇದು: ನಮ್ಮ ವಿಷಯದಲ್ಲಿ ನಮಗೆ ಅಜ್ಞಾನವಿದೆಯೆಂಬುದನ್ನು ಹೇಗೆ ನಂಬುವದು? ನಮಗಿಂತ ಬೇರೆಯಾಗಿರುವ ಮತ್ತೊಂದು ವಸ್ತುವಿನ ವಿಷಯಕ್ಕೆ ತಪ್ಪುತಿಳಿವಳಿಕೆಯುಂಟಾದರೂ ಆಗಬಹುದು. ಆದರೆ ನಮ್ಮನ್ನೇ ನಾವು ಅರಿಯೆವು ಎಂಬ ಮಾತಿಗೆ ಏನರ್ಥ?

ಅಧ್ಯಾತ್ಮಶಾಸ್ತ್ರದಲ್ಲಿ ಬರುವ ಅಜ್ಞಾನ, ಅವಿದ್ಯೆ–ಮುಂತಾದ ಶಬ್ದಗಳ ಅರ್ಥವನ್ನು

ಜನರು ತಪ್ಪಾಗಿ ತಿಳಿದುಕೊಂಡಿರುವದೇ ಈ ಬಗೆಯ ಪ್ರಶ್ನೆಗಳಿಗೆ ಕಾರಣವಾಗಿರುತ್ತದೆ. ಕೆಲವರು ವೇದಾಂತಿಗಳೂ ಜನರ ಈ ತಪ್ಪುತಿಳಿವಳಿಕೆಗೆ ಕಾರಣರಾಗಿರುತ್ತಾರೆ. ಏಕೆಂದರೆ ನಮ್ಮ ಆತ್ಮವನ್ನು "ಅವಿದ್ಯೆ" ಎಂಬ ಒಂದಾನೊಂದು ಅನಾದಿಯಾದ ಮುಸುಕು ಆವರಿಸಿಕೊಂಡುಬಿಟ್ಟಿದೆ ಎಂದು ಅವರು ಬೋಧಿಸುತ್ತಿರುತ್ತಾರೆ. "ಬೆಂಕಿಗೆ ಇರುವೆಗಳು ಮುತ್ತಿಕೊಂಡಿವೆ" ಎಂಬ ವಾಕ್ಯದಂತೆಯೇ ಚಿನ್ಮಾತ್ರ ಸ್ವರೂಪನಾಗಿರುವ ಆತ್ಮನನ್ನು ಅವಿದ್ಯೆಯು ಮುಸುಕಿಕೊಂಡಿದೆ ಎಂಬ ವಾಕ್ಯವೂ ಅರ್ಥಶೂನ್ಯವಾಗಿದೆ ಎಂಬುದನ್ನು ನಾವು ಮೊಟ್ಟಮೊದಲು ನಿಶ್ಚಯಿಸಿಕೊಳ್ಳಬೇಕು. ಇನ್ನು ಅಜ್ಞಾನವೆಂದರೆ "ತಪ್ಪುತಿಳಿವಳಿಕೆ" ಎಂಬ ಅರ್ಥವನ್ನು ಮಾಡಿಕೊಂಡಮೇಲೂ ನಾವು ಅದರ ಸ್ವರೂಪವನ್ನು ಚೆನ್ನಾಗಿ ಅರಿತುಕೊಂಡಂತಾಗಿರುವದಿಲ್ಲ; ಏಕೆಂದರೆ ನಮ್ಮ ಆತ್ಮನನ್ನು ಒಂದು ದಿನ ಮರೆತು ತಪ್ಪಾಗಿ ತಿಳಿದುಕೊಂಡೆವು ಎಂಬುದೇನೂ "ಅಜ್ಞಾನ" ಶಬ್ದದ ಅರ್ಥವಲ್ಲ. ಹಾಗೆ ಮರೆಯುವದೆಂಬುದೂ "ಅವಿದ್ಯಾವರಣ"ದ ಉಪದೇಶದಂತೆಯೇ ತನಗೆತಾನೇ ವಿರುದ್ಧವಾದ ವಾಕ್ಯವೇ ಆಗಿರುತ್ತದೆ. ನಮ್ಮನ್ನು ನಾವು ಮರೆಯುವದೂ ಆಗುವಂತಿಲ್ಲ, ಅರಿತುಕೊಳ್ಳುವದೂ ಆಗುವಂತಿಲ್ಲ. ಮರಹು, ಅರಿವು– ಇವೆರಡೂ ನಮಗಿಂತ ಬೇರೆಯಾಗಿರುವ ವಸ್ತುಗಳಿಗೇ ಅನ್ವಯಿಸುತ್ತವೆ ಎಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳುವದು ಇಲ್ಲಿ ಅತ್ಯವಶ್ಯವಾಗಿರುತ್ತದೆ.

ಹಾಗಾದರೆ ಆತ್ಮಾಜ್ಞಾನವೆಂದರೇನು ? ಅಜ್ಞಾನದಿಂದ ಬಂಧವೂ ಜ್ಞಾನದಿಂದ ಮೋಕ್ಷವೂ ಆಗುವದು ಎಂದಲ್ಲವೆ, ವೇದಾಂತಿಗಳು ಹೇಳುತ್ತಿರುವದು?–ಎಂದು ನೀವು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ ಮನುಷ್ಯನಿಗೆ ಯಾರೂ ಹೇಳಿಕೊಡದೆ ಬಂದಿರುವ ಸ್ವಾಭಾವಿಕವಾದ ಇಂದ್ರಿಯಜ್ಞಾನವನ್ನು ಶಾಸ್ತ್ರದಲ್ಲಿ ಅಜ್ಞಾನವೆಂದು ಕರೆದಿರುತ್ತದೆ. ನಮ್ಮ ಇಂದ್ರಿಯಗಳಿಗೆ ಕಾಣುವದೆಲ್ಲ ಹಗ್ಗದ ಹಾವು, ಕಪ್ಪೆಯಚಿಪ್ಪಿನ ಬೆಳ್ಳಿ, ಬಿಸಿಲುಕುದುರೆಯ ನೀರು–ಇವುಗಳಂತೆ ಭ್ರಾಂತಿಜ್ಞಾನಕ್ಕೆ ವಿಷಯವೇ ಎಂದೇನೂ ವೇದಾಂತಿಗಳು ಹೇಳುತ್ತಿಲ್ಲ. ವ್ಯವಹಾರದಲ್ಲಿ ನಮಗೆ ಕೆಲವು ವಿಷಯಗಳ ಬಗ್ಗೆ ಆಗಾಗ್ಗೆ ಭ್ರಾಂತಿಯುಂಟಾಗಬಹುದಾದರೂ ನಾವೆಲ್ಲರೂ ಪ್ರತ್ಯಕ್ಷವಾಗಿ ಕಾಣುತ್ತಿರುವ ವಿಷಯಗಳ ಅರಿವನ್ನು "ಅಜ್ಞಾನ"ವೆಂದೇನೂ ಇಲ್ಲಿ ಕರೆದಿಲ್ಲ. ನಾವುಗಳು ನಮ್ಮ ನಿಜವಾದ ಸ್ವರೂಪವೇನೆಂಬ ಬಗ್ಗೆ ಸ್ವಾಭಾವಿಕವಾಗಿ ಮಾಡಿಕೊಂಡಿರುವ ತಪ್ಪುತಿಳಿವಳಿಕೆಯ ಭಾವನೆಗೆ ಈ ಇಂದ್ರಿಯಜ್ಞಾನವೇ ಕಾರಣವಾಗಿರುವದರಿಂದ ಇದನ್ನು ಆತ್ಮಾಜ್ಞಾನವೆಂದು ಶಾಸ್ತ್ರಕಾರರು ಕರೆದಿರುತ್ತಾರೆ. ಅಷ್ಟೆ.

ಇಂದ್ರಿಯಗಳು ಹೊರಗಡೆಯಿರುವ ವಿಷಯಗಳನ್ನು ನೋಡುವದಕ್ಕೆ ತಕ್ಕಂತೆ ಸೃಷ್ಟಿಯಾಗಿರುತ್ತವೆ. ಏನುಮಾಡಿದರೂ ಅವುಗಳನ್ನು ಹಿಂದಕ್ಕೆ ತಿರುಗಿಸುವದಕ್ಕೆ ಆಗುವದಿಲ್ಲ.

ಇಂದ್ರಿಯಪ್ರಪಂಚವೇ ಪ್ರಮಾಣಪ್ರಮೇಯವ್ಯವಹಾರದ ಪ್ರಪಂಚ. ಇಂದ್ರಿಯಗಳು ನನ್ನವು, ಶರೀರವೇ ನಾನು–ಎಂದು ಸ್ವಾಭಾವಿಕವಾಗಿ ಜನರು ತಿಳಿದುಕೊಂಡಿರುತ್ತಾರೆ. ಈ ಪ್ರಪಂಚದಲ್ಲಿ ಇರುವವರಲ್ಲಿ ಅನೇಕರು ಶರೀರಭೋಗಕ್ಕಾಗಿ ಇಷ್ಟವಿಷಯಗಳನ್ನು ಕೂಡಿಹಾಕುತ್ತಲೂ ಅನಿಷ್ಟವಿಷಯಗಳನ್ನು ದೂರವಾಗಿರಿಸುವದಕ್ಕೆ ಪ್ರಯತ್ನಿಸುತ್ತಲೂ ಇರುತ್ತಾರೆ. ಕೆಲವರು ಮಾತ್ರ ಶಾಸ್ತ್ರದಲ್ಲಿ ಹೇಳಿರುವ ಆತ್ಮನು ದೇಹಕ್ಕಿಂತ ಬೇರೆಯಾಗಿರುತ್ತಾನಾದರೂ ದೇಹವನ್ನೂ ಇಂದ್ರಿಯಗಳನ್ನೂ ಉಪಯೋಗಿಸಿಕೊಂಡು ಸುಖಸಂಪಾದನೆಯನ್ನೂ ದುಃಖಪರಿಹಾರವನ್ನೂ ಮಾಡಿಕೊಳ್ಳುವೆವು ಎಂದು ಕೊಂಡಿರುತ್ತಾರೆ. ಇವರುಗಳ ತಿಳಿವಳಿಕೆಯು ಸ್ವಭಾವದಿಂದಲೇ ಇರುತ್ತಿರುವದಾದರೂ ಇದೂ ಅಜ್ಞಾನವೇ; ಏಕೆಂದರೆ ಆತ್ಮನು ಹೇಗಿರುವನೋ ಹಾಗೆಯೇ ಅವನನ್ನು ಅದು ತಿಳಿಸುತ್ತಿಲ್ಲ–ಎಂಬುದು ವೇದಾಂತಿಗಳ ಹೇಳಿಕೆ.

ಇಲ್ಲಿ ಒಂದು ಆಕ್ಷೇಪವು ಎದ್ದುಕೊಳ್ಳಬಹುದು. ಎಲ್ಲರಿಗೂ ಒಂದೇ ಸಮನಾಗಿ ಆಗುತ್ತಿರುವ ಈ ತಿಳಿವಳಿಕೆಯನ್ನು ಅಜ್ಞಾನ, ತಪ್ಪುತಿಳಿವಳಿಕೆ ಎಂದು ಕರೆಯಬಹುದೆ? ಇದು ತಪ್ಪುತಿಳಿವಳಿಕೆಯಾದರೆ ಇದಕ್ಕಿಂತಲೂ ಬೇರೆಯಾದ ಸರಿಯಾದ ತಿಳಿವಳಿಕೆಯು ಯಾರಿಗೆ, ಹೇಗೆ ಆಗಬೇಕು? ಇಂದ್ರಿಯಗಳನ್ನೂ ಮನಸ್ಸನ್ನೂ ಬಿಟ್ಟರೆ ನಮಗೆ ಜ್ಞಾನ ವುಂಟಾಗುವದಕ್ಕೆ ಬೇರೆ ಯಾವ ಸಾಧನವಿದೆ? ಈ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳುವದು ಅತ್ಯವಶ್ಯವಾಗಿರುತ್ತದೆ.

ಈ ಶಂಕೆಗೆ ಇದರ ಹಿಂದಿನ ಸಂದೇಶದಲ್ಲಿಯೇ ಉತ್ತರವನ್ನು ಹೇಳಿದ್ದಾಗಿರುತ್ತದೆ. ಅದನ್ನು ವಾಚಕರು ಇನ್ನೊಮ್ಮೆ ಸಾವಧಾನವಾಗಿ ಓದಬೇಕು. ಎಲ್ಲರಿಗೂ ಸಹಜವಾಗಿಯೇ ಆಗುವ ಕೆಲವು ಭ್ರಾಂತಿಗಳೂ ಉಂಟು. ಉದಾಹರಣೆಗೆ ಕನ್ನಡಿಯಲ್ಲಿ ನಮ್ಮ ಶರೀರವನ್ನು ನೋಡಿಕೊಂಡರೆ ಅಲ್ಲಿ ಕಾಣುವ ಪ್ರತಿಬಿಂಬದಲ್ಲಿ ನಮ್ಮ ಎಡದ ಕೈ ಬಲದ ಕೈಯಾಗಿಯೂ ಬಲದ ಕೈ ಎಡದ ಕೈಯಾಗಿಯೂ ಇರುವಂತೆ ಕಾಣುವದು. ಹಳೆಯಬೀಡಿನ ಬಸದಿಯಲ್ಲಿರುವ ಒಂದು ಕಂಬದಲ್ಲಿ ನಮ್ಮ ಶರೀರವು ಪ್ರತಿಬಿಂಬಿಸುವಾಗ ಅದರಲ್ಲಿ ನಮಗೆ ಎರಡು ತಲೆಗಳೂ– ಒಂದು ಮೇಲೆ ಒಂದು ಕೆಳಗೆ– ನಾಲ್ಕು ಕೈಗಳೂ ಇರುವಂತೆ ಕಾಣುವದು. ಆದರೆ ಇವೇನೂ ನೋಡುವವರ ಮರಹಿನಿಂದಾಗುವ ತಪ್ಪುತಿಳಿವಳಿಕೆಗಳಲ್ಲ; ಪ್ರಕೃತಿಯ ನಿಯಮಕ್ಕೆ ಒಳಪಟ್ಟು ಎಲ್ಲರಿಗೂ ಆಗುವ ಸಾರ್ವತ್ರಿಕಭ್ರಾಂತಿಗಳು. ಏಕೆಂದರೆ ಪಂಡಿತರಿಗೂ ಪಾಮರರಿಗೂ ಸಮವಾಗಿಯೇ ಈ ಪ್ರತಿಬಿಂಬಗಳು ಹೀಗೆಯೇ ಕಾಣಿಸುತ್ತವೆ. ಆದಮಾತ್ರಕ್ಕೆ ನಾವು ಕಂಬವನ್ನು ನೋಡುವಾಗ ನಮಗೆ ಎಡಗೈಬಲಗೈಗಳು ನಿಜವಾಗಿ ಅದಲುಬದಲಾಗಿರುವೆವೆಂದಾಗಲಿ, ನಾಲ್ಕು ಕೈಗಳೂ ಎರಡು ತಲೆಗಳೂ ಇರುವವೆಂದಾಗಲಿ ನಾವೇನೂ ಎಣಿಸಿಕೊಳ್ಳುವದಿಲ್ಲ. ಏಕೆಂದರೆ,

ನಮ್ಮ ಶರೀರದ ನಿಜವಾದ ತಿಳಿವಳಿಕೆಯು ನಮಗೆ ಬೇರೆಯ ರೀತಿಯಿಂದ ಆಗಿಬಿಟ್ಟಿರುತ್ತದೆ. ಅಲ್ಲವೆ? ಇದರಂತೆ ನಾವು ಶರೀರರೂಪರೆಂಬುದೂ ಎಲ್ಲರಿಗೂ ಸಾಮಾನ್ಯವಾಗಿ ಆಗುವ ಭ್ರಾಂತಿ; ಶರೀರಕ್ಕಿಂತ ಬೇರೆಯಾಗಿದ್ದುಕೊಂಡು ಅದನ್ನು ಉಪಯೋಗಿಸಿಕೊಳ್ಳುವ ವರೆಂಬುದೂ ನಮ್ಮಲ್ಲಿ ಕೆಲವರಿಗೆ ಆಗುವ ಭ್ರಾಂತಿಯೇ. ಏಕೆಂದರೆ ನಮ್ಮ ಸ್ವರೂಪದ ನಿಜವಾದ ತಿಳಿವಳಿಕೆಯು ನಮಗೆ ಬೇರೆಯ ರೀತಿಯಿಂದ ಆಗುವದಕ್ಕೆ ಅವಕಾಶವಿದೆ ಎಂಬುದು ವೇದಾಂತಿಗಳ ಹೇಳಿಕೆ.

ಯಾವದಾದರೊಂದು ವಸ್ತು ತನ್ನ ಸ್ವರೂಪದಿಂದ ಇರುವ ಬಗೆ ಬೇರೆ, ಮತ್ತೆ ಯಾವದಾದರೊಂದು ವಸ್ತುವಿನ ದ್ವಾರದಿಂದ– ಉದಾಹರಣೆಗೆ ಕನ್ನಡಿಯಿಂದ, ಅಥವಾ ಬಸದಿಯ ಕಂಬದಿಂದ– ಆಗುವ ತೋರಿಕೆಯ ತಿಳಿವಳಿಕೆ ಬೇರೆ ಎಂಬುದು ನಮಗೆಲ್ಲ ತಿಳಿದಿರುತ್ತದೆ. ಕೆರೆಯ ದಡದಲ್ಲಿ ನಿಂತುಕೊಂಡು ನೀರಿನಲ್ಲಿ ನೋಡಿದರೆ ನಮ್ಮ ಶರೀರದ ಪ್ರತಿಬಿಂಬವು ತಲೆಕೆಳಗಾಗಿ ತೋರುತ್ತದೆ. ಆದಮಾತ್ರಕ್ಕೆ ಅದನ್ನು ನಿಜವಾದ ತಿಳಿವಳಿಕೆಯೆಂದು ನಾವು ಯಾರೂ ಭಾವಿಸುವದಿಲ್ಲ. ಇದರಂತೆ ಎಚ್ಚರದ ಅವಸ್ಥೆಯಲ್ಲಿ ನಮಗೆ ತೋರುತ್ತಿರುವ "ನಾನು" ಎಂಬ ಸ್ವರೂಪವನ್ನೇ ಆ ನಮ್ಮ ನಿಜವಾದ ಆತ್ಮನೆಂದು ತಿಳಿದುಕೊಂಡಿರುವದೂ ಅಲ್ಲಿರುವ ಶರೀರೇಂದ್ರಿಯಗಳಲ್ಲಿಯೂ ಅಂತಃಕರಣದಲ್ಲಿಯೂ ನಮಗಿರುವ ಅಭಿಮಾನನಿಮಿತ್ತದಿಂದ ಆದದ್ದು. ಅದು ಸೋಪಾಧಿಕರೂಪವಾದದ್ದು, ಮತ್ತೊಂದು ವಸ್ತುವಿನ ಸಂಬಂಧದಿಂದ ತೋರುವಂಥದ್ದು; ನಮ್ಮ ಆತ್ಮನು ಇರುವಂತೆಯೇ ನಾವು ವಿಚಾರಮಾಡಿ ನೋಡಿ ತಿಳಿದುಕೊಂಡ ರೂಪವಲ್ಲ, ಅದು. ಆದರೆ ಎಚ್ಚರ, ಕನಸು, ತನಿನಿದ್ರೆ–ಈ ಮೂರನ್ನೂ ನಾವು ಯಾವ ಅನುಭವದಿಂದ ಅರಿಯುತ್ತಿರುವೆವೋ, ಅದು ಸೋಪಾಧಿಕವಲ್ಲ; ಅದು ಮತ್ತೊಂದು ವಸ್ತುವಿನ ದ್ವಾರದಿಂದ ಆದ ತೋರಿಕೆಯಲ್ಲ. ಆ ಅನುಭವವನ್ನು ಆಧಾರವಾಗಿಟ್ಟುಕೊಂಡು ನೋಡಿದರೆ ನಮ್ಮ ಸ್ವರೂಪದ ವಿಷಯಕ್ಕೆ ಈಗ ನಮಗೆ ಇರುವ ತಿಳಿವಳಿಕೆಯು ಭ್ರಾಂತಿಯೇ ಎಂಬುದು ಸುಸ್ಪಷ್ಟವಾಗುವದು.

ನಾನು ಈ ಸಂದೇಶಕ್ಕೆ ಬರೆದುಕೊಂಡಿರುವ ಉಪನಿಷದ್ವಾಕ್ಯದಲ್ಲಿ ಹೇಳಿರುವದೇನೆಂದರೆ, ಇಂದ್ರಿಯಗಳು ಸ್ವಭಾವದಿಂದಲೇ ಹೊರಮುಖವಾಗಿರುತ್ತವೆ. ಆದ್ದರಿಂದ ಅವುಗಳನ್ನು ಉಪಯೋಗಿಸುವವನು ಹೊರಗಡೆಯೇ ನೋಡುತ್ತಿರುತ್ತಾನೆ. ಈ ತಿಳಿವಳಿಕೆಯಿಂದ ನಾನು ಶರೀರೇಂದ್ರಿಯಗಳುಳ್ಳವನು ಎಂಬ ತಪ್ಪು ತಿಳಿವಳಿಕೆಯು ನಮ್ಮೆಲ್ಲರಿಗೂ ಸ್ವಭಾವದಿಂದಲೇ ಇದ್ದುಕೊಂಡುಬಿಟ್ಟಿರುತ್ತದೆ. ವಿಷಯಸೇವನೆಯಿಂದ ನಮ್ಮ ಇಂದ್ರಿಯಗಳ ಶಕ್ತಿಯು ಸವೆಯುತ್ತಲೇ ಇರುವದು; ಶರೀರವೂ ಭೋಗದಿಂದ ಮುಪ್ಪಾಗುತ್ತಲೇ ಇರುವದು. ಈ ಶರೀರೇಂದ್ರಿಯಗಳ ಮುಪ್ಪನ್ನು ನಮ್ಮದೆಂದೇ ಭಾವಿಸಿ ನಾವು ಮರ್ತ್ಯರಾಗಿರುವೆವು. ನಾವೆಲ್ಲರೂ ಸಾಯುವವರೇ ಎಂಬ ತಪ್ಪುತಿಳಿವಳಿಕೆಯನ್ನು ಗಟ್ಟಿಮಾಡಿಕೊಂಡಿರುವೆವು.

ಅನಾದಿಕಾಲದಿಂದಲೂ ಶರೀರದ ಮುಪ್ಪುಸಾವುಗಳು ನಮಗೇ ಆಗುವವೆಂಬ ಭ್ರಾಂತಿಯು ಇದ್ದುಕೊಂಡುಬಿಟ್ಟಿರುವದು. ಈ ತಪ್ಪುತಿಳಿವಳಿಕೆಯೇ ನಾವೆಲ್ಲರೂ ಒಂದಲ್ಲ ಒಂದುದಿನ ಸಾಯುವೆವೆಂಬ ಅಂಜಿಕೆಗೆ ಕಾರಣವಾಗಿರುತ್ತದೆ. ಮತ್ತು ನಮ್ಮ ಒಳಗಿನ ನಿಜವಾದ ಆತ್ಮಸ್ವರೂಪವನ್ನು ಅರಿತುಕೊಳ್ಳುವದಕ್ಕೆ ಅಡ್ಡಿಯನ್ನು ತಂದೊಡ್ಡಿರುತ್ತದೆ. ಇದಿಷ್ಟೂ ಈ ಮಂತ್ರದ ಎರಡು ಪಾದಗಳ ಅರ್ಥವು.

ಈಗ ಮಂತ್ರದ ಉಳಿದ ಭಾಗದಲ್ಲಿ ಹೇಳಿರುವದರ ಅಭಿಪ್ರಾಯವನ್ನು ಮನದಂದುಕೊಳ್ಳುವದಕ್ಕೆ ಪ್ರಯತ್ನಿಸೋಣ. ಸಾಮಾನ್ಯವಾಗಿ ಜನರೆಲ್ಲರೂ ಇಂದ್ರಿಯವ್ಯವಹಾರದಲ್ಲಿಯೇ ಮಗ್ನರಾಗಿ ಶರೀರಾಭಿಮಾನದಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಿರುವರು. ಅವರೆಲ್ಲರಿಗೂ ಮೃತ್ಯುವಿನ ಅಂಜಿಕೆಯು ಸಮಾನವಾಗಿರುತ್ತದೆ. ಆದರೆ ಅನೇಕಸಹಸ್ರಜನರಲ್ಲಿ ಒಬ್ಬನು ವಿವೇಕಿಯು ಇರುವನು. ಅವನು ಈ ಇಂದ್ರಿಯಗಳ ಬೆನ್ನುಹತ್ತಿ ನಡೆಯುವ ವ್ಯಾಪಾರಕ್ಕೆ ಬೇಸತ್ತಿರುವನು. ಇಂದ್ರಿಯಜೀವನದಲ್ಲಿ ಸಾವು ಕಟ್ಟಿಟ್ಟಬುತ್ತಿಯು ಎಂಬುದನ್ನು ಅವನು ಮನಗಂಡಿರುವನು. ಆದ್ದರಿಂದ ಇಂದ್ರಿಯಗಳು ತಮ್ಮತಮ್ಮ ವಿಷಯದಲ್ಲಿ ರಾಗದ್ವೇಷಗಳಿಂದ ವರ್ತಿಸುತ್ತಿರುವದನ್ನು ಕಂಡು ಅವನು ಅವಕ್ಕೆ ವಶನಾಗದೆ ಇರುತ್ತಾನೆ. ರಾಗದ್ವೇಷಗಳಿಲ್ಲದೆ ನಿತ್ಯಜೀವನವನ್ನು ಸಾಗಿಸುವದಕ್ಕೆ ಪ್ರಯತ್ನಿಸುತ್ತಿರುತ್ತಾನೆ. ಇಷ್ಟೇ ಅಲ್ಲ, ಅವನು ಅಂತರ್ಮುಖನಾಗುವ ಅಭ್ಯಾಸವನ್ನು ಮಾಡುವದಕ್ಕೂ ಪ್ರಯತ್ನಿಸುತ್ತಾನೆ, ಇಂದ್ರಿಯಗಳ ವ್ಯಾಪಾರವನ್ನು ಹಿಂಜಗ್ಗಿ ತನ್ನೊಳಗೇ ಆಗುತ್ತಿರುವ ಮನಸ್ಸಿನ ವ್ಯಾಪಾರವನ್ನು ಪರೀಕ್ಷಿಸುವದಕ್ಕೆ ಹೊರಡುತ್ತಾನೆ. ಆ ಮನಸ್ಸನ್ನು ರಾಗದ್ವೇಷಾದಿಗಳ ಹಿಡಿತದಿಂದ ತಪ್ಪಿಸಿಕೊಳ್ಳುವದಕ್ಕೆ ಹವಣಿಸುತ್ತಾನೆ. ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ– ಮುಂತಾದ ನಿವೃತ್ತಿ ಧರ್ಮಗಳನ್ನು ಅಭ್ಯಾಸಮಾಡುವದಕ್ಕೆ ಮೊದಲುಮಾಡುತ್ತಾನೆ. ಈಗ ಅವನ ಜೀವನವು ಸಾಮಾನ್ಯಜನರ ಜೀವನಕ್ರಮಕ್ಕಿಂತ ಅತ್ಯಂತವಿಪರೀತವಾಗಿ, ಅವರ ಮಾರ್ಗಕ್ಕೆ ಅತ್ಯಂತವಿರುದ್ಧವಾದ ದಿಕ್ಕಿನಲ್ಲಿ ಹೊರಟಿರುತ್ತದೆ.

ಗಂಗಾನದಿಯ ಪ್ರವಾಹವನ್ನು ಹಿಂದಕ್ಕೆ ತಳ್ಳುವಂಥ ಈ ಅದ್ಭುತಸಾಹಸ ಕೃತ್ಯವನ್ನು ಈ ಸಾಧಕನು ಏತಕ್ಕೆ ಪ್ರಯತ್ನಿಸುತ್ತಾನೆ?– ಎಂದರೆ ಅದಕ್ಕೆ ಮಂತ್ರದಲ್ಲಿ ಹೇಳಿರುವದೇನೆಂದರೆ, ಅವನಿಗೆ ಅಮೃತತ್ವವು ಬೇಕಾಗಿರುತ್ತದೆ. ಇಂದ್ರಿಯಗಳಿಂದಲೂ ಇಂದ್ರಿಯಗಳನ್ನು ಅನುಸರಿಸುವ ಮನಸ್ಸಿನಿಂದಲೂ ಸಿಕ್ಕುವದು ಜರಾಮರಣಗಳೇ; ಆ ಹೊರಮುಖವಾದ ವ್ಯವಹಾರದಿಂದ ಅಮೃತತ್ವವು ಎಂದಿಗೂ ಸಿಕ್ಕುವದಿಲ್ಲ. ಆದರೂ ಅದು ಹೇಗೋ, ನಮಗೆಲ್ಲರಿಗೂ ಎಂದೆಂದಿಗೂ ಸಾವಿನ ಅಂಜಿಕೆಯಿಲ್ಲದೆ ಇದ್ದರೆ ಒಳ್ಳೆಯದಾದೀತೆಂಬ ಆಶೆಯು ಹತ್ತಿಕೊಂಡಿದೆ. ಈ ಆಶೆಗೆ ಆಧಾರವಿಲ್ಲದೆ ಇಲ್ಲ. ಶಾಸ್ತ್ರದಲ್ಲಿ ಹೇಳಿರುವ ದೃಷ್ಟಿಯನ್ನು ಅವಲಂಬಿಸಿ ನೋಡಿದರೆ ನಾವೆಲ್ಲರೂ ನಿಜವಾಗಿ ಅಮೃತಸ್ವರೂಪರೇ

ಆಗಿರುತ್ತೇವೆ. ಕನ್ನಡಿ, ನೀರು-ಮುಂತಾದ ಉಪಾಧಿಯಲ್ಲಿ ಕಾಣಿಸಿದ ನಮ್ಮ ಪ್ರತಿಬಿಂಬವು ಹೇಗೆ ನಮ್ಮ ನಿಜವಾದ ರೂಪವಲ್ಲವೋ ಹಾಗೆಯೇ ಎಚ್ಚರದವಸ್ಥೆಯ ಶರೀರೇಂದ್ರಿಯಗಳ ಸಂಬಂಧದಿಂದ ನಮಗೆ ತಿಳಿದುಬರುವ ಮರ್ತ್ಯರೂಪವೂ ನಿಜವಾಗಿ ನಮ್ಮದಲ್ಲವೆಂಬುದೇ ಯುಕ್ತವಾಗಿರುತ್ತದೆ. ಶರೀರ, ಇಂದ್ರಿಯಗಳು, ಮನಸ್ಸು- ಇವೆಲ್ಲವನ್ನೂ ಬೆಳಗಿ ತೋರುತ್ತಿರುವ ನಮ್ಮ ಒಳಗಿನ ಸ್ವರೂಪವು ಮತ್ತೆ ಯಾವದನ್ನೂ ಅವಲಂಬಿಸದೆ ಇರುವದರಿಂದ ಅದು ನಮ್ಮ ನಿಜವಾದ ಸ್ವರೂಪವು. ಆ ಸ್ವರೂಪವು ನಮಗೆ ಮತ್ತೆ ಏತರಿಂದಲೂ ಬಂದಿರುವದಿಲ್ಲ; ಅದು ಮತ್ತೆ ಯಾವದರಿಂದಲೂ ಮಾರ್ಪಡುವದಿಲ್ಲ. ಅದು ನಮ್ಮ ಪರಮಾರ್ಥಸ್ವಭಾವವು. ಅದರಲ್ಲಿ ಯಾವ ಹೆಚ್ಚೂ ಹಿಗ್ಗೂ ಇರುವದಿಲ್ಲ. ಕುಂದೂ ಕುಗ್ಗೂ ಇರುವದಿಲ್ಲ. ಅದು ಕಾಲದೇಶನಿಮಿತ್ತಗಳಿಂದ ಮಾರ್ಪಡುವದಲ್ಲವಾದ್ದರಿಂದ ಅದಕ್ಕೆ ಸಾವು ಬಂದೀತೆಂಬ ಅಂಜಿಕೆಯೇ ಇರುವದಿಲ್ಲ.

ಈ ಸಂದೇಶದಲ್ಲಿ ವಿವರಿಸಿರುವ ವಿಷಯಗಳನ್ನು ಸಂಕ್ಷೇಪಿಸಿ ಹೇಳಿದರೆ ಇಷ್ಟರಲ್ಲಿ ಅಡಕವಾಗುವದು. ಮನುಷ್ಯರೆಲ್ಲರಿಗೂ ಮಿಕ್ಕ ಪ್ರಾಣಿಗಳಂತೆಯೇ ಸಾವಿನ ಅಂಜಿಕೆಯು ಇದ್ದುಕೊಂಡಿರುತ್ತದೆ. ಇದಕ್ಕೆ ಎಚ್ಚರದವಸ್ಥೆಯಲ್ಲಿ ನಮಗೆ ಹೊಂದಿಕೊಂಡಿರುವಂತೆ ತೋರುವ ಶರೀರ, ಇಂದ್ರಿಯಗಳು, ಮತ್ತು ಮನಸ್ಸು- ಇವುಗಳ ಗುಂಪಿನಲ್ಲಿ ನಾವು ಇಟ್ಟುಕೊಂಡಿರುವ ಅಭಿಮಾನವೇ ಕಾರಣವಾಗಿರುತ್ತದೆ. ಈ ಶರೀರಾಭಿಮಾನವು ಅವಿದ್ಯೆಯ ಫಲವು, ತಪ್ಪುತಿಳಿವಳಿಕೆಯಿಂದಾದದ್ದು. ಅವಿದ್ಯೆ ಎಂದರೆ ಒಂದಾನೊಂದು ಕಾಲದಲ್ಲಿ ನಾವು ನಮ್ಮ ಸ್ವರೂಪವನ್ನು ಮರೆತು ತಪ್ಪಾಗಿ ತಿಳಿದುಕೊಂಡದ್ದೆಂದೇನೂ ಅರ್ಥವಲ್ಲ. ನೇರಾಗಿ ನಾವು ನಮ್ಮ ಸ್ವರೂಪವನ್ನು ನೋಡಿಕೊಳ್ಳದೆ ಮತ್ತೊಂದು ಉಪಾಧಿಯ ಮೂಲಕವಾಗಿ ನೋಡಿ ನಿಶ್ಚಯಿಸಿಕೊಂಡಿರುವ ತಪ್ಪುತಿಳಿವಳಿಕೆ. ಈ ತಪ್ಪುತಿಳಿವಳಿಕೆಯು ಮನುಷ್ಯರೆಲ್ಲರಿಗೂ ಸ್ವಭಾವದಿಂದಲೇ ಅನಾದಿಕಾಲದಿಂದಲೂ ಇದ್ದುಕೊಂಡಿರುತ್ತದೆ. ಅವಿದ್ಯಾದೃಷ್ಟಿಯುಳ್ಳವರೆಲ್ಲರೂ ಇಂದ್ರಿಯಗಳ ಮೂಲಕ ದೇಹದ ಹೊರಗಡೆಗೇ ನೋಡುತ್ತಾ ವ್ಯವಹರಿಸುತ್ತಿರುತ್ತಾರೆ. ಇದನ್ನು ಪರಾಗ್ದೃಷ್ಟಿಯೆಂದು ವೇದಾಂತಿಗಳು ಕರೆಯುವರು. ಇದಕ್ಕೆ ವಿಪರೀತವಾಗಿ ಒಳಗೆ ನೋಡಿ ನಮ್ಮ ನಿಜವಾದ ಸ್ವರೂಪವನ್ನು ಅರಿತುಕೊಳ್ಳಬಹುದೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ, ಹಾಗೆ ನೋಡುವದಕ್ಕೆ ಪ್ರತ್ಯಗ್ದೃಷ್ಟಿ ಎಂದು ಹೆಸರು. ಪರಾಗ್ದೃಷ್ಟಿಯಿಂದ ನಾವೆಲ್ಲರೂ ಮರ್ತ್ಯರು, ಒಂದಲ್ಲ ಒಂದು ಕಾಲಕ್ಕೆ ಸಾವಿಗೆ ತುತ್ತಾಗುವವರು-ಎಂದೇ ತೋರುತ್ತದೆ. ಆದರೆ ಪ್ರತ್ಯಗ್ದೃಷ್ಟಿಯಿಂದ ನೋಡಿಕೊಂಡರೆ ನಮ್ಮ ಆತ್ಮನು ಎಂದೆಂದಿಗೂ ಅಮೃತನೇ ಆಗಿರುತ್ತಾನೆಂಬ ನಿಶ್ಚಯವಾಗುವದು.

x - x

## 4.7. ಆಚಾರ್ಯೋಪದೇಶ

**ಯಥಾಸೋಮ್ಯ ಪುರುಷಂ ಗಾಂಧಾರೇಭ್ಯೋಽಭಿನದ್ಧಾಕ್ಷಮಾನೀಯ ತಂ ತತೋಽತಿಜನೇ ವಿಸೃಜೇತ್ ಸ ಯಥಾ ತತ್ರ ಪ್ರಾಙ್ ವೋ ದಙ್ ವಾ ದರಾಙ್ ವಾ ಪ್ರತ್ಯಙ್ವಾ ಪ್ರಧ್ಮಾಯೀತಾಭಿನದ್ಧಾಕ್ಷ ಆನೀತೋಽಭಿನದ್ಧಾಕ್ಷೋ ವಿಸೃಷ್ಟಃ॥**

**ತಸ್ಯ ಯಥಾಭಿನಹನಂ ಪ್ರಮುಚ್ಯ ಪ್ರಬ್ರೂಯಾದೇತಾಂ ದಿಶಂ ಗಂಧಾರಾ ಏತಾಂ ದಿಶಂ ವ್ರಜೇತಿ ಸ ಗ್ರಾಮಾದ್ಗ್ರಾಮಂ ಪೃಚ್ಛನ್ ಪಂಡಿತೋ ಮೇಧಾವೀ ಗಂಧಾರಾನೇವೋಪಸಂಪದ್ಯೈತ್ಯೈವಮೇವೇಹಾಽಽಚಾರ್ಯವಾನ್ ಪುರುಷೋ ವೇದ ॥ – ಛಾಂ. 6–14, 12**

**ಮೂಲದಲ್ಲಿ ಇದು "ತಸ್ಯ ಪಾವ ದೇವ ಚಿರಂ ಯಾವನ್ನ ವಿಮೋಕ್ಷ್ಯೇಥ ಸಂಸತ್ಸ್ಯ ಇತಿ" ಎಂದು ಮುಂದುವರೆದಿದೆ.**

ಆತ್ಮಸ್ವರೂಪವು ಎಂದೆಂದಿಗೂ ಅಮೃತಸ್ವಭಾವದ್ದೇ ಆಗಿರುತ್ತದೆಯಾದರೂ ಮನುಷ್ಯಮಾತ್ರಕ್ಕೆ ಸ್ವಭಾವವಾಗಿರುವ ಇಂದ್ರಿಯಪ್ರಧಾನದೃಷ್ಟಿಯಿಂದ ನೋಡುವದರಿಂದ ಅದರ ವಿಷಯಕ್ಕೆ ತಪ್ಪುತಿಳಿವಳಿಕೆಯುಂಟಾಗಿರುತ್ತದೆ ಎಂಬುದನ್ನು ತಿಳಿದುಕೊಂಡ ದ್ದಾಗಿರುತ್ತದೆ. ನಮ್ಮ ಆತ್ಮಸ್ವರೂಪವನ್ನು ಅರಿತುಕೊಳ್ಳುವದಕ್ಕೆ ಮತ್ತೊಬ್ಬರ ಉಪದೇಶವನ್ನು ಶ್ರವಣಮಾಡುವದು ಹೇಗೆ ಉಪಯೋಗಕರವಾದೀತು?– ಎಂಬೀ ಶಂಕೆಗೆ ಈಗ ಪರಿಹಾರವನ್ನು ಕಂಡುಕೊಳ್ಳಬೇಕಾಗಿರುತ್ತದೆ.

ಈ ವಿಷಯದಲ್ಲಿ ಛಾಂದೋಗ್ಯದಿಂದ ಒಂದು ವಾಕ್ಯವನ್ನು ಆರಿಸಿ ಇಲ್ಲಿ ಉದಾಹರಿಸಿರುತ್ತದೆ. ಅದರ ಅಭಿಪ್ರಾಯವನ್ನು ಮನನಮಾಡುವದರಿಂದ ಉಕ್ತಶಂಕೆಗೆ ಪರಿಹಾರವು ದೊರಕುವದು. ವಾಕ್ಯದಲ್ಲಿ ಗರ್ಭಿತವಾಗಿರುವ ಕಥೆಯ ಸಾರಾಂಶವೇನೆಂದರೆ: ಗಂಧಾರದೇಶದಿಂದ ಒಬ್ಬ ಸಾಹುಕಾರನನ್ನು ಕಣ್ಣುಕಟ್ಟಿ ಕಳ್ಳರು ಕಾಡಿಗೆ ತಂದುಬಿಟ್ಟರು. ಅಲ್ಲಿ ಯಾವ ಜನವೂ ಇಲ್ಲದ್ದರಿಂದಲೂ ಆತನ ಕೈಗಳನ್ನು ಕಳ್ಳರು ಹಿಂಗಟ್ಟುಮುರಿಯಾಗಿ ಕಟ್ಟಿದ್ದರಿಂದಲೂ ಅವನಿಗೆ ತಾನೇ ಕಣ್ಣುಕಟ್ಟನ್ನು ಕಳಚಿಕೊಳ್ಳುವದು ಆಗುವಂತಿರಲಿಲ್ಲ. ಆದ್ದರಿಂದ ಅವನು ಹಿಂದಕ್ಕೂ ಮುಂದಕ್ಕೂ ಎಡಕ್ಕೂ ಬಲಕ್ಕೂ ಸಂಚರಿಸುತ್ತಾ– "ನನ್ನನ್ನು ಕಳ್ಳರು ಕಣ್ಣು ಕಟ್ಟಿಬಿಟ್ಟಿದಾರಪ್ಪ! ಇಲ್ಲಿ ಒಬ್ಬನನ್ನೇ ಬಿಟ್ಟುಬಿಟ್ಟಿದಾರಪ್ಪ! ಯಾರಾದರೂ ಈ ಬಂಧದಿಂದ ಬಿಡುಗಡೆಮಾಡಿರಪ್ಪ!" ಎಂದು ಬಲವಾಗಿ ಕಿರಿಚಿ ಮೊರೆಯಿಡುತ್ತಿದ್ದನು. ಹೀಗಿರುವಲ್ಲಿ ದೈವವಶದಿಂದ ಅಲ್ಲಿಗೆ ಬಂದ ಒಬ್ಬ ದಾರಿಹೋಕನು ಕರುಣೆಯಿಂದ ಅವನ ಕೈಗೆ ಕಟ್ಟಿದ್ದ ಹುರಿಯನ್ನು ಬಿಚ್ಚಿ ಕಣ್ಣುಕಟ್ಟನ್ನು ಕಳಚಿ, "ಇಗೊ, ಈ ಉತ್ತರದಿಕ್ಕಿಗೆ

ಗಂಧಾರದೇಶವಿದೆ, ಈ ದಿಕ್ಕಿಗೆ ಹೋಗು! ನಿಮ್ಮೂರು ಸಿಕ್ಕುತ್ತದೆ" ಎಂದು ನುಡಿದನು. ಅವನು ವಿವೇಕಿಯೂ ಮತ್ತೊಬ್ಬರು ಹೇಳಿದ್ದರ ಅಭಿಪ್ರಾಯವನ್ನು ನಿಶ್ಚಯಿಸುವದರಲ್ಲಿ ಶಕ್ತನೂ ಆಗಿದ್ದದ್ದರಿಂದ ಆ ಕಾರುಣಿಕನು ಹೇಳಿದ್ದ ದಾರಿಯನ್ನು ಕೇಳಿಕೊಂಡು ಊರಿಂದೂರಿಗೆ ಹೋಗಿ ಕೊನೆಗೆ ಗಂಧಾರವನ್ನೇ ಮುಟ್ಟಿದನು; ಬಳಿಕ ಸುಖಿಯಾದನು.

ಇದರಂತೆ ಮನುಷ್ಯನ ಆತ್ಮಸ್ವರೂಪವು ನಿತ್ಯಾಮೃತವೇ ಆಗಿರುತ್ತಿದ್ದರೂ ಅವನು ಪಾಪಪುಣ್ಯಗಳೆಂಬ ಕಳ್ಳರ ಕೈಗೆ ಸಿಕ್ಕಿಕೊಂಡು ಈ ದೇಹಾರಣ್ಯಕ್ಕೆ ಬಂದು ಸೇರಿರುತ್ತಾನೆ. ಗಂಧಾರದೇಶದ ಆ ಸಾಹುಕಾರನು ಹೊಕ್ಕ ಕಾಡು ಹೇಗೆ ಯಾವ ಜನರೂ ಇಲ್ಲದೆ ಬಗೆಬಗೆಯ ಮರಗಳಿಂದ ದಟ್ಟವಾಗಿದ್ದು ಹಿಂಸ್ರ ಮೃಗಗಳಿಂದ ಕೂಡಿಕೊಂಡು ಭಯಂಕರವಾಗಿದ್ದಿತೋ ಹಾಗೆಯೇ ಈ ದೇಹಾರಣ್ಯದಲ್ಲಿಯೂ ವಾತಪಿತ್ತಾದಿ ದೋಷಗಳೂ ಶೀತೋಷ್ಣಸುಖದುಃಖಾದಿಗಳೂ ಜೀವನಿಗೆ ವ್ಯಥೆಯನ್ನುಂಟು ಮಾಡುತ್ತಿರುತ್ತವೆ. ಕಳ್ಳರು ಸಾಹುಕಾರನಿಗೆ ಕಣ್ಣುಕಟ್ಟಿದ್ದಂತೆಯೇ ಇವನಿಗೂ ಮನಸ್ಸೆಂಬ ಕಣ್ಣಿಗೆ ಮೋಹವೆಂಬ ಬಟ್ಟೆಯನ್ನು ಬಿಗಿಯಲಾಗಿದೆ. ಆ ಗಂಧಾರದೇಶದವನು ಹೇಗೆ ಮುಂದಕ್ಕೂ ಹಿಂದಕ್ಕೂ ಎಡಕ್ಕೂ ಬಲಕ್ಕೂ ದಿಕ್ಕುತೋಚದೆ ಅಲೆಯುತ್ತಿದ್ದನೋ ಹಾಗೆಯೇ ಇವನೂ ಹೆಂಡತಿ, ಮಕ್ಕಳು, ಗೆಳೆಯರು, ದನಕರು, ಹೊಲಮನೆ, ಹಣಕಾಸು– ಮುಂತಾದವುಗಳ ಆಶೆಯ ಹಗ್ಗದಿಂದ ಬಿಗಿವಡೆದು ಅತ್ತಲಾಗಿ ಇತ್ತಲಾಗಿ ಎಳೆಯಲ್ಪಡುತ್ತಿದಾನೆ. ಅಯ್ಯೋ! ನಾನು ಕೆಟ್ಟೆನು, ಮುದುಕನಾದೆನು, ಮಕ್ಕಳು ಹೋದರು, ಹಣವು ನಷ್ಟವಾಯಿತು, ಇನ್ನು ಹೇಗೆ ಬದುಕಿರಲಿ? ನನಗೆ ಗತಿಯೇನು? ನನ್ನನ್ನು ಯಾರು ಕಾಪಾಡುವರು?– ಎಂದು ಮುಂತಾಗಿ ದುಃಖದಿಂದ ಅರಚಿಕೊಳ್ಳುತ್ತಿರುವನು. ಹೀಗಿರುವ ಇವನಿಗೆ ಹೇಗೋ ಪುಣ್ಯವಶದಿಂದ ಮಹಾಕಾರುಣಿಕನಾದ ಬ್ರಹ್ಮನಿಷ್ಠನೊಬ್ಬನು ದೊರಕಿದರೆ ಅವನ ಉಪದೇಶದಿಂದ ಸಂಸಾರದಲ್ಲಿರುವ ದೋಷವನ್ನು ಮನಗಂಡು ವಿರಕ್ತನಾಗಿ ತನ್ನ ಸ್ವರೂಪವನ್ನು ಅರಿತುಕೊಂಡು ಸ್ವಸ್ಥನಾಗುತ್ತಾನೆ– ಎಂಬುದು ಉಪನಿಷದ್ವಾಕ್ಯದ ಅಭಿಪ್ರಾಯವು.

ಇಲ್ಲಿ ಒಂದು ಶಂಕೆಯುಂಟಾಗಬಹುದಾಗಿದೆ: ದೃಷ್ಟಾಂತದಲ್ಲಿ ಗಂಧಾರದೇಶಸ್ಥನನ್ನು ಕಳ್ಳರು ಬಲಾತ್ಕಾರದಿಂದ ಊರಿನಿಂದ ಕಾಡಿಗೆ ತಂದುಬಿಟ್ಟರು; ಆದರೆ ದಾರ್ಷ್ಟಾಂತಿಕದಲ್ಲಿ ಹಾಗಿಲ್ಲವಲ್ಲ! ಮನುಷ್ಯನು ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡು ದುಃಖಪಡುತ್ತಿರುವದೇಕೆ? ಇದಲ್ಲದೆ ದೃಷ್ಟಾಂತದಲ್ಲಿ ದಯಾಶಾಲಿಯಾದ ದಾರಿಹೋಕನು ಹೇಳಿಕೊಟ್ಟ ಉಪದೇಶವನ್ನು ಕೇಳಿದ ಬಳಿಕ ಸಾಹುಕಾರನು ಕಾಡಿನಿಂದ ಹೊರಟು ಊರಿನಕಡೆಗೆ ತಿರುಗಬೇಕಾದದ್ದು ಉಳಿದುಕೊಂಡಿತ್ತು, ಮತ್ತು ಊರಿಂದೂರಿಗೆ ನಡೆಯಬೇಕಾದದ್ದೂ ಇತ್ತು; ಆದ್ದರಿಂದ ಅವನು ಜನರನ್ನು ಮತ್ತೆ ಮತ್ತೆ ದಾರಿಯನ್ನು ಕೇಳುತ್ತಾ ತನ್ನ ಬುದ್ಧಿಯನ್ನೂ ಉಪಯೋಗಿಸಿಕೊಂಡು ದಾರಿಯನ್ನು ನಡೆದು ಊರನ್ನು ಸೇರಬೇಕಾಗಿತ್ತು.

ಆದರೆ ದಾರ್ಷ್ಟಾಂತಿಕದಲ್ಲಿ ಮತ್ತೊಬ್ಬರನ್ನು ಕೇಳಬೇಕಾದ ಆವಶ್ಯಕತೆಯೇನೂ ಕಾಣುವದಿಲ್ಲವಲ್ಲ! ಹಾಗೆ ಉಪದೇಶವನ್ನು ಕೇಳಿದ ಮೇಲೆ ಇವನು ಮತ್ತೆ ಮಾಡಬೇಕಾದದ್ದಾದರೂ ಏನು ಉಳಿದಿರುತ್ತದೆ? ದೃಷ್ಟಾಂತದಲ್ಲಿ ಗಂಧಾರದೇಶದ ದಾರಿಯನ್ನು ತಿಳಿದವನು ಅದನ್ನು ಉಪದೇಶಮಾಡಬೇಕಾದದ್ದು ಅಗತ್ಯವಾಗಿತ್ತು; ಆದರೆ ನಮ್ಮ ಆತ್ಮನ ದಾರಿಯನ್ನು ಮತ್ತೊಬ್ಬರು ತಿಳಿಸುವದಕ್ಕೆ ಹೇಗೆತಾನೆ ಶಕ್ತರಾದಾರು? ಅವರ ಉಪದೇಶವನ್ನು ನಾವು ಗ್ರಹಿಸಿ ಆತ್ಮಸ್ವರೂಪವನ್ನು ಪಡೆದುಕೊಳ್ಳುವೆವೆಂಬ ಮಾತಿಗೆ ಅರ್ಥವಾದರೂ ಏನು?

ಈ ಶಂಕೆಗೆ ಉತ್ತರವನ್ನು ಹೇಳುವಮುಂಚೆ ಒಂದು ವಿಷಯವನ್ನು ಇಲ್ಲಿ ನೆನಪಿಗೆ ತಂದುಕೊಡುವದು ಒಳ್ಳೆಯದು. ಅದೇನೆಂದರೆ ಸಾಮಾನ್ಯವಾಗಿ ಜನರು ಭಾವಿಸಿರುವಂತೆ ಒಬ್ಬೊಬ್ಬರಿಗೆ ಒಬ್ಬೊಬ್ಬ ಬೇರೆಬೇರೆಯ ಆತ್ಮನಿರುವದಿಲ್ಲ; ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಗಳವರೆಗೂ ಎಲ್ಲರಿಗೂ ಒಬ್ಬನೇ ಆತ್ಮನು ಎಂಬುದೇ ವೇದಾಂತದ ಸಿದ್ಧಾಂತವು. ಆದ್ದರಿಂದ ಆತ್ಮಸ್ವರೂಪವನ್ನು ಕುರಿತು ಯಾರು ಮಾತನಾಡಿದರೂ ಅದೇ ಒಬ್ಬ ಆತ್ಮನ ವಿಷಯವೇ ಆಗಿರುತ್ತದೆ. ಎಲ್ಲಾ ದೇಶಗಳಿಗೂ ಒಬ್ಬನೇ ಸೂರ್ಯನಿರುವದರಿಂದ ಜ್ಯೋತಿಃಶಾಸ್ತ್ರಜ್ಞರು ಸೂರ್ಯನ ವಿಷಯದಲ್ಲಿ ಏನೇನು ಉಪದೇಶಿಸಿದರೂ ನಮಗೆಲ್ಲರಿಗೂ ಅದರ ತಿಳಿವಳಿಕೆಯಾಗಬಹುದಲ್ಲವೆ? ಹಾಗೆಯೇ ಈ ಆತ್ಮಜ್ಯೋತಿ ಎಂಬ ಸೂರ್ಯ ವಿಷಯಕ್ಕೆ ಆತ್ಮಜ್ಞಾನಿಗಳಾದ ಆಚಾರ್ಯರು ಏನು ಉಪದೇಶಮಾಡಿದರೂ ನಮಗೆ ಅದರ ಅರಿವು ಆಗುವದರಲ್ಲಿ ಏನೂ ಆಶ್ಚರ್ಯವಿಲ್ಲ.

ಇನ್ನೊಂದು ವಿಷಯ. ನಾವು ನಮ್ಮ ಸ್ವರೂಪದಲ್ಲಿಯೇ ಇರುತ್ತಿದ್ದರೂ ಸ್ವಾಭಾವಿಕವಾದ ಪ್ರವೃತ್ತಿಯಿಂದ ಇಂದ್ರಿಯಗಳಿಗೆ ವಶರಾಗಿ ಹೊರಮುಖವಾಗಿಯೇ ನೋಡುತ್ತಿರುತ್ತೇವೆ, ವಿಷಯಗಳನ್ನು ಕುರಿತ ವ್ಯವಹಾರದಲ್ಲಿಯೇ ನಿರತರಾಗಿರುತ್ತೇವೆ. ಆದ್ದರಿಂದ ನಮ್ಮನ್ನು ಇಂದ್ರಿಯಗಳೆಂಬ ಕಳ್ಳರು ಹಿಂಗಟ್ಟುಮುರಿಯಾಗಿ ಕಟ್ಟಿ ವಿಷಯಗಳಿಗೆ ಸಂಬಂಧಪಟ್ಟ ದೇಹಾರಣ್ಯಕ್ಕೆ ತಂದುಬಿಟ್ಟಿರುವರೆಂದು ಭಾವಿಸಬಹುದಾಗಿದೆ.

ದೃಷ್ಟಾಂತದಲ್ಲಿ ದಾರಿಹೋಕನು ಗಂಧಾರದೇಶದ ದಾರಿಯನ್ನು ಸಾಹುಕಾರನಿಗೆ ತಿಳಿಸಿಕೊಟ್ಟಂತೆ ಬ್ರಹ್ಮನಿಷ್ಠನಾದ ಆಚಾರ್ಯನು ಮುಮುಕ್ಷುಗಳಿಗೆ ನಿವೃತ್ತಿಮಾರ್ಗವನ್ನು ಉಪದೇಶಿಸುತ್ತಾನೆ. ಅವನ ಉಪದೇಶವು ಎರಡು ಬಗೆಯಾಗಿರುತ್ತದೆ: ಮೊದಲನೆಯದಾಗಿ ಅವನು ಆತ್ಮನ ಧರ್ಮವಲ್ಲದ ದೇಹಪ್ರಾಣೇಂದ್ರಿಯಾದಿಗಳ ಸ್ವಭಾವವನ್ನು ತಿಳಿಸಿ "ಇವುಗಳು ಯಾವವೂ ನೀನಲ್ಲ, ಇವುಗಳು ಯಾವವೂ ನಿನ್ನ ಸ್ವರೂಪಕ್ಕೆ ಸೇರಿಲ್ಲ" ಎಂದು ಉಪದೇಶಿಸುವನು. ಇದರಿಂದ ಪರಮಾರ್ಥವನ್ನು ನಮ್ಮ ಹೊರಗೆ ಹುಡುಕಬಾರದೆಂಬುದಿಷ್ಟೇ ಅಲ್ಲದೆ, ನಮ್ಮೊಳಗೆ ಇರುವ ಇಂದ್ರಿಯಮನ ಆದಿಗಳೂ ನಮ್ಮ ಸ್ವರೂಪಕ್ಕೆ

ಸೇರಿಲ್ಲವೆಂಬುದು ನಮಗೆ ಮನವರಿಕೆಯಾಗುತ್ತದೆ. ಗಂಧಾರದೇಶದ ಸಾಹುಕಾರನು ಊರಿಂದೂರಿಗೆ ದಾರಿಯನ್ನು ಕೇಳುತ್ತಾ ನಡೆದಂತೆ ಮುಮುಕ್ಷುವಾದ ಸಾಧಕನೂ ತನ್ನೊಳಗೇ ಇರುವ ಅನಾತ್ಮಗಳನ್ನು ಒಂದೊಂದಾಗಿ ಬಿಡುತ್ತಾ ತನ್ನೊಳಕ್ಕೇ ಸರಿಯುವ ಅಭ್ಯಾಸಮಾಡುವದಕ್ಕೆ ಆತನ ಉಪದೇಶವು ಸಹಕಾರಿಯಾಗುತ್ತದೆ. ಎರಡನೆಯದಾಗಿ ಬ್ರಹ್ಮನಿಷ್ಠನಾದವನು ಬರಿಯ ಶಾಸ್ತ್ರೋಪದೇಶಕನಾಗಿರುವದಿಲ್ಲ; ತನ್ನ ಉದಾಹರಣೆ ಯಿಂದಲೂ ಶಿಷ್ಯನಿಗೆ ನಿವೃತ್ತಿಮಾರ್ಗದ ಉಪದೇಶಕನಾಗುತ್ತಾನೆ. ಅಳುವವರನ್ನು ಕಂಡರೆ ಅಳುವ ಪ್ರವೃತ್ತಿಯೂ ನಗುವವರನ್ನು ಕಂಡರೆ ನಗುವ ಪ್ರವೃತ್ತಿಯೂ ಆಗುವಂತೆ ನಿವೃತ್ತಿಧರ್ಮದಲ್ಲಿ ನಿಷ್ಠರಾದ ಮಹಾತ್ಮರ ದರ್ಶನವುಕೂಡ ನಿವೃತ್ತಿಧರ್ಮವನ್ನು ಅನುಸರಿಸುವದಕ್ಕೆ ಮಾರ್ಗದರ್ಶಿಯಾಗುತ್ತದೆ. ಶಾಸ್ತ್ರಗಳನ್ನು ವಿವರಿಸಿ ಹೇಳುವದು (ಆಚಿನೋತಿ), ಮತ್ತೊಬ್ಬರನ್ನು ಶಾಸ್ತ್ರೋಪದಿಷ್ಟಮಾರ್ಗಕ್ಕೆ ಬಿಡುವದು, (ಆಚಾರೇ ಸ್ಥಾಪಯತಿ), ತಾನೂ ಅದರಂತೆ ನಡೆಯುವದು (ಸ್ವಯಮಾಚರತೇ)– ಈ ಮೂರು ಕಾರಣಗಳಿಂದ ಆಚಾರ್ಯನೆಂಬ ಹೆಸರು ತತ್ತ್ವೋಪದೇಶಕನಿಗೆ ಅನ್ವರ್ಥವಾಗಿರುತ್ತದೆ.

ಲೌಕಿಕವ್ಯವಹಾರ, ಶಾಸ್ತ್ರೋಕ್ತಕರ್ಮ–ಇವುಗಳಲ್ಲಿಕೂಡ ನಮಗೆ ಮಾರ್ಗದರ್ಶಿಗಳಾದ ಉಪದೇಶಕರು ಅವಶ್ಯವಾಗಿ ಬೇಕಾಗುತ್ತಾರೆಂಬುದು ಅನುಭವದಿಂದ ಕಂಡಿದೆ. ಅಧ್ಯಾತ್ಮಮಾರ್ಗದಲ್ಲಂತೂ ಆಚಾರ್ಯನ ನೆರವು ಅತ್ಯಂತ ಅವಶ್ಯವಾಗಿರುತ್ತದೆ. ಏಕೆಂದರೆ ಹಿಂದಿನ ಸಂದೇಶದಲ್ಲಿ ತಿಳಿಸಿರುವಂತೆ ಪ್ರಾಣಿಗಳಿಗೆಲ್ಲ ಇಂದ್ರಿಯಗಳ ಮೂಲಕವಾಗಿ ಹೊರಗಡೆಗೇ ನೋಡುತ್ತಿರುವದೂ ಹೊರಗಿನ ಪ್ರಪಂಚದಲ್ಲಿಯೇ ವ್ಯವಹರಿಸುತ್ತಿರುವದೂ ಹೊರಗಿನ ಪ್ರಪಂಚವನ್ನು ಕುರಿತ ವಿಚಾರದಲ್ಲಿಯೇ ಮಗ್ನರಾಗಿರುವದೂ ಸ್ವಭಾವಪ್ರಾಪ್ತವಾಗಿರುತ್ತದೆ. ಆದ್ದರಿಂದ ಅವರು ಒಂದು ವೇಳೆ ಅಧ್ಯಾತ್ಮಶಾಸ್ತ್ರಗಳನ್ನು ತಾವುತಾವೇ ಓದಿದರೂ ಅವುಗಳಿಗೆ ಬಾಹ್ಯದೃಷ್ಟಿಗೆ ಒಪ್ಪುವಂತೆಯೇ ಅರ್ಥವನ್ನು ಮಾಡಿಕೊಂಡಾರೇ ಹೊರತು ಆತ್ಮಸ್ವರೂಪವನ್ನು ತಮ್ಮೊಳಗೇ ಕಂಡುಕೊಳ್ಳಬೇಕೆಂಬ ಗುಟ್ಟನ್ನು ತಿಳಿದುಕೊಳ್ಳಲಾರದೆ ಇರುವರು. ಶಾಸ್ತ್ರಗಳಲ್ಲಿರುವ ಶಬ್ದಗಳೆಲ್ಲ ದ್ವೈತಪ್ರಪಂಚಕ್ಕೆ ಅನ್ವಯಿಸುವ ಶಬ್ದಗಳೇ ಆಗಿರುವದರಿಂದ ಶಾಸ್ತ್ರವಾಕ್ಯಗಳಿಗೆ ಸಾಮಾನ್ಯರು ಮಾಡಿಕೊಳ್ಳುವ ಅರ್ಥವೂ ಬಾಹ್ಯವ್ಯವಹಾರಕ್ಕೆ ಹೊಂದುವಂತೆಯೇ ಇರುವದೆಂದು ಭಾಸವಾಗುವ ಸಂಭವವೇ ಹೆಚ್ಚಾಗಿದೆ. ಆದರೆ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ–ಶ್ರುತಿಯ ಅರ್ಥವನ್ನು ಮನಗಂಡು ಸರ್ವರಿಗೂ ಆತ್ಮನಾಗಿರುವ ಪರಮಾತ್ಮನನ್ನು ತನ್ನಲ್ಲಿಯೇ ಕಂಡುಕೊಂಡು ಅವನಲ್ಲಿಯೇ ನೆಲೆನಿಂತಿರುವ–ಮಹಾತ್ಮನು ಸಿಕ್ಕಿದರೆ ಮಾತ್ರ ಇಂದ್ರಿಯಗಳನ್ನು ಹಿಂಜಗ್ಗಿ ತನ್ನ ಒಳಕ್ಕೆ ಪ್ರವೇಶಿಸಿ ಅಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕೆಂಬ ಬುದ್ಧಿಯು ಅಂಕುರಿಸೀತು.

ಇನ್ನೊಂದು ವಿಷಯ : ಸಾಮಾನ್ಯಶಾಸ್ತ್ರಗಳು ವಿಷಯಪರಿಶೀಲನ, ಪ್ರಯೋಗ, ಸಂವಾದೀಕರಣ-ಮುಂತಾದ ರೀತಿಗಳಿಂದ ಕಂಡುಹಿಡಿದ ತತ್ತ್ವಗಳನ್ನು ತರ್ಕಬದ್ಧವಾಗಿ ಮಾಡಿಟ್ಟ ಗ್ರಂಥಗಳಾಗಿರುತ್ತವೆ. ಆದ್ದರಿಂದ ಅಧ್ಯಾತ್ಮಶಾಸ್ತ್ರವೂ ಹೀಗೆಯೇ ತರ್ಕಬದ್ಧವಾಗಿರಬೇಕೆಂಬ ತಪ್ಪುಕಲ್ಪನೆಯು ಮನುಷ್ಯನಿಗೆ ಉಂಟಾಗುವದು ಸ್ವಾಭಾವಿಕವಾಗಿರುತ್ತದೆ. ಆದ್ದರಿಂದ ಪರಮಾರ್ಥವನ್ನು ಬುದ್ಧಿಯಿಂದ ತರ್ಕಿಸಿ ಹೇಗೋ ತಾನೇ ತಿಳಿದುಕೊಳ್ಳಬಹುದೆಂಬ ಬುದ್ಧಿಯು ಜಿಜ್ಞಾಸುವಿಗೆ ಆಗುವದು ನಿರೀಕ್ಷಣೀಯವಾಗಿಯೇ ಇದೆ. ಆದ್ದರಿಂದಲೇ ಉಪನಿಷತ್ತು "ಪ್ರಾಕೃತ ಬುದ್ಧಿಯವನು ಹೇಳಿಕೊಟ್ಟರೆ ಈ ಆತ್ಮನನ್ನು ಅರಿತುಕೊಳ್ಳುವದು ಆಗಲಾರದು, ಇದನ್ನು ತರ್ಕದಿಂದಲೂ ಅರಿತುಕೊಳ್ಳುವದು ಆಗಲಾರದು. ಪರಮಾತ್ಮನಲ್ಲಿ ನಾನು ಅವನೇ ಎಂದು ಅನನ್ಯವಾಗಿ ನೆಲೆನಿಂತಿರುವ ಆಚಾರ್ಯನು ಹೇಳಿಕೊಟ್ಟರೆ ಮಾತ್ರ ಅರಿತುಕೊಳ್ಳಬಹುದು" ಎಂದು ಸುಸ್ಪಷ್ಟವಾಗಿ ಸಾರಿರುತ್ತದೆ.

ಅಧ್ಯಾತ್ಮವಿದ್ಯೆ ಎಂಬುದು ಕೇವಲ ಬುದ್ಧಿಯಿಂದ ಊಹಿಸಿ ತಿಳಿದುಕೊಳ್ಳುವ ತಿಳಿವಳಿಕೆಯಲ್ಲ; ಇಂದ್ರಿಯಗಳ ಕೌಶಲದಿಂದ ಸಂಪಾದಿಸಿಕೊಳ್ಳಬೇಕಾದ ಕಲಾವಿಶೇಷವೂ ಅಲ್ಲ. ಸ್ವಭಾವದಿಂದ ಹೊರಮುಖವಾಗಿರುವ ನಮ್ಮ ಅಂತಃಕರಣವನ್ನು ಪ್ರಯತ್ನ ವಿಶೇಷದಿಂದ ಆತ್ಮನ ಕಡೆಗೇ ಹಿಂತಿರುಗಿಸುವ ಒಂದಾನೊಂದು ಅದ್ಭುತ ಪ್ರಯತ್ನವದು. ವಸ್ತುಸ್ಥಿತಿಯನ್ನು ನೋಡಿದರೆ ನಮ್ಮಲ್ಲಿ ನಾವು ಎಂದೆಂದಿಗೂ ನಿಂತೇ ಇರುವೆವು; ನಮ್ಮನ್ನು ಬಿಟ್ಟು ನಾವು ಎಂದಿಗೂ ಮತ್ತೊಂದುಕಡೆಗೆ ಬರುವ ಸಂಭವವೇ ಇರುವದಿಲ್ಲ. ಆದರೂ ಸದ್ಯದ ನಮ್ಮ ಅಂತಃಕರಣದ ಸ್ಥಿತಿಯಲ್ಲಿ ನಾವು ಕಲ್ಪಿತವಾದ ಇಂದ್ರಿಯಗಳಿಗೆ ವಶರಾಗಿಬಿಟ್ಟಿರುತ್ತೇವೆ. ಕನಸಿನಲ್ಲಿ ನಿಜವಾಗಿ ತಾನೊಬ್ಬನೇ ಇರುತ್ತಿದ್ದರೂ ತಾನೊಂದು ಪ್ರಪಂಚದೊಳಗೆ ಇದ್ದುಕೊಂಡಿರುವಂತೆಯೂ ತನ್ನೊಳಗಿನ ರಾಗದ್ವೇಷಾದಿಭಾವಗಳಿಗೂ ಹೊರಗಿನ ವಿಷಯಗಳಿಗೂ ಸಂಬಂಧಪಟ್ಟಿರುವಂತೆಯೂ ತನ್ನಂತೆಯೇ ವ್ಯವಹರಿಸುತ್ತಿರುವ ಅನೇಕ ಜೀವರುಗಳ ಜೊತೆಗೆ ತಾನೂ ಒಬ್ಬನಿರುವಂತೆಯೂ ಹೇಗೆ ನಿದ್ರಾಮೋಹದಿಂದ ಮಿಥ್ಯಾಭಾವನೆಯುಂಟಾಗಿಬಿಟ್ಟಿರುವದೋ ಹಾಗೆಯೇ ಈಗಲೂ ಅನಾದಿಕಾಲದಿಂದ ಅನುಭವಿಸುತ್ತಿರುವ ಮಾಯಾಸ್ವಪ್ನದಿಂದ ನಾವು ನಮ್ಮ ಸ್ವರೂಪವಾದ ಅಜಾದ್ವಿತೀಯಾತ್ಮ ರೂಪವನ್ನು ಬಿಟ್ಟು ಬಲುದೂರಕ್ಕೆ ಬಂದು ಬಳಲುತ್ತಿರುವೆವು. ಕನಸಿನಲ್ಲಿ ಕಾಣುತ್ತಿರುವ ಅನರ್ಥಗಳು ನಿಜವಾಗಿಲ್ಲದಿದ್ದರೂ ನಮ್ಮನ್ನು ಆ ಕಾಲಕ್ಕೆ ನಿಜವಾಗಿಯೇ ವ್ಯಥೆಗೊಳಿಸುತ್ತಲೇ ಇರುವಂತೆ, ಈಗಲೂ ನಮಗೆ ಆತ್ಮಜ್ಞಾನವಿಲ್ಲದೆ ಆತ್ಮಪ್ರಾಪ್ತಿಗಾಗಿ ಶ್ರವಣಮನನನಿದಿಧ್ಯಾಸನಗಳನ್ನು ಮಾಡುವ ಅವಶ್ಯಕತೆಯು ಎದ್ದುಕೊಂಡಿರುತ್ತದೆ. ದುಷ್ಟಸ್ವಪ್ನವನ್ನು ಕಾಣುತ್ತಾ ಕನವರಿಸುತ್ತಿರುವವರನ್ನು ಎಚ್ಚತ್ತಿರುವನೊಬ್ಬನು ತಟ್ಟಿ ಎಬ್ಬಿಸಿದರೆ ಹೇಗೆ ಮಹೋಪಕಾರ ವಾಗುವದೋ ಹಾಗೆಯೇ ಆತ್ಮನಿಷ್ಠನಾದ ಆಚಾರ್ಯನು ನಮ್ಮನ್ನು ಎಚ್ಚರಗೊಳಿಸಿದರೆ ಆತನಿಂದ ಆಗುವ ಉಪಕಾರವನ್ನು ಅಷ್ಟಿಷ್ಟೆಂದು ಅಳೆಯುವದಕ್ಕೆ ಆಗದೆ ಇರುತ್ತದೆ.

ಪರಮಾತ್ಮಜ್ಞಾನವು ನಮಗೆ ಆಗಬೇಕಾದರೆ ತತ್ತ್ವದರ್ಶಿಗಳಾದ ಜ್ಞಾನಿಗಳ ಬಳಿಗೆ ಹೋಗಬೇಕೆಂದು ಗೀತೆಯಲ್ಲಿ ಭಗವಂತನು ನುಡಿದಿರುತ್ತಾನೆ :

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥** – ಗೀ. 4–34

ಆಚಾರ್ಯರಾದವರನ್ನು ವಿನಯದಿಂದ ಬಳಿಸಾರಿ ಪ್ರಣಿಪಾತಮಾಡುವದು, ಪರಿಪ್ರಶ್ನೆಮಾಡುವದು, ಸೇವೆಯನ್ನು ಮಾಡುವದು– ಇವುಗಳಿಂದ ತತ್ತ್ವವನ್ನು ಅರಿತುಕೊಳ್ಳಬೇಕು. ತತ್ತ್ವದರ್ಶಿಗಳಾದ ಜ್ಞಾನಿಗಳು ಜ್ಞಾನವನ್ನು ತಿಳಿಸಿಕೊಡುವರು– ಎಂಬುದು ಶ್ಲೋಕದ ಅಕ್ಷರಾರ್ಥ. ಪ್ರಣಿಪಾತವೆಂದರೆ ಭಕ್ತಿಪೂರ್ವಕವಾಗಿ ದೀರ್ಘದಂಡನಮಸ್ಕಾರವನ್ನು ಮಾಡುವದು. ಇದರಿಂದ ಜಿಜ್ಞಾಸುವಿನ ಅಹಂಕಾರವು ತೊಲಗಿ ಉಪದೇಶಕ್ಕೆ ಯೋಗ್ಯವಾದ ಅಂತಃಕರಣ ಸಂಸ್ಕಾರವು ಉಂಟಾಗುವದು. ಪರಿಪ್ರಶ್ನೆ ಎಂದರೆ ತತ್ತ್ವವನ್ನು ತಿಳಿದುಕೊಳ್ಳಬೇಕೆಂದು ಅಭಿಲಾಷೆಯಿಂದ ಸಮಯವರಿತು ವಿನಯದಿಂದ ಮಾಡುವ ಪ್ರಶ್ನೆ. ಈ ವಿಧವಾದ ಪ್ರಶ್ನೆಯು ಜಿಜ್ಞಾಸುವು ಅರಿತುಕೊಂಡಿರುವದನ್ನು ಸೂಚಿಸುವದಲ್ಲದೆ ಈಗ ಉಂಟಾಗಿರುವ ಸಂಶಯವೇನೆಂಬುದನ್ನೂ ಪ್ರಕಟಿಸುವದು. ಸೇವೆ ಎಂದರೆ ಗುರುಶುಶ್ರೂಷೆ; ಅದರಿಂದ ಅಂತಃಕರಣದ ಕಾಲುಷ್ಯಗಳು ಹೋಗಿ ಸದ್ಗುರುವಿನ ಅನುಗ್ರಹಕ್ಕೆ ಪಾತ್ರತೆಯುಂಟಾಗುವದು. ಹಾಗಾದರೆ ಪ್ರಸನ್ನರಾದ ಗುರುಗಳು ತತ್ತ್ವವನ್ನು ಉಪದೇಶಿಸುತ್ತಾರೆ.

ತತ್ತ್ವದರ್ಶಿಗಳಾದ ಆಚಾರ್ಯರು ಉಪದೇಶಿಸಿದ ತತ್ತ್ವವೇ ಅನುಭವಾನುರೂಢವಾದೀತೇ ಹೊರತು ಸುಮ್ಮನೆ ಶಾಸ್ತ್ರಾರ್ಥವನ್ನು ತಿಳಿಸುವ ವಚನಚಾತುರಿಯವರ ಉಪದೇಶದಿಂದ ಆ ಕಾರ್ಯವು ಆಗಲಾರದು. ಆದ್ದರಿಂದಲೇ ಮುಂದೆ ಭಗವಂತನು "ಅದನ್ನು ಅರಿತುಕೊಂಡರೆ ಈಗಿನಂತೆ ನಿನಗೆ ಮೋಹವುಂಟಾಗುವದಿಲ್ಲ. ಸಕಲಭೂತಗಳನ್ನೂ ನಿನ್ನ ಸ್ವರೂಪದಲ್ಲಿಯೂ ಮತ್ತು ವಾಸುದೇವ ಪರಮೇಶ್ವರನಾದ ನನ್ನಲ್ಲಿಯೂ ಕಾಣುವೆ" ಎಂದು ನುಡಿದಿರುತ್ತಾನೆ. ಅನುಭವಿಗಳಾದ ಆಚಾರ್ಯರು ಮಾಡಿದ ಉಪದೇಶವು ಕೂಡಲೆ ಕಾರ್ಯಕಾರಿಯಾಗಿಬಿಡುತ್ತದೆ. ಅದರಿಂದ "ಪರಮಾರ್ಥತತ್ತ್ವವು ನನ್ನ ಆತ್ಮನೇ ಆಗಿದ್ದು ಸಕಲ ಜೀವರ ಆತ್ಮನೂ ಆಗಿರುತ್ತದೆ; ಅದೇ ಸರ್ವವೇದಾಂತಪ್ರತಿಪಾದ್ಯವಾಗಿರುವ ಪರಮಾತ್ಮತತ್ತ್ವವು" ಎಂಬ ಅರಿವು ನಿಃಸಂಶಯವಾಗಿ ಉಂಟಾಗಿಬಿಡುತ್ತದೆ. ಇದಕ್ಕೆ ಕಾರಣವೇನೆಂದರೆ ಆಚಾರ್ಯನೆಂದರೆ ಕೇವಲ ಶರೀರೇಂದ್ರಿಯಸಂಘಾತದಲ್ಲಿ ಆತ್ಮಭಾವವನ್ನಿಟ್ಟುಕೊಂಡಿರುವ ಒಬ್ಬ ವ್ಯಕ್ತಿಯಲ್ಲ; ಆ ರೂಪದಿಂದ ಪ್ರಸನ್ನನಾಗಿರುವ ಪರಮೇಶ್ವರನೇ ಆಗಿರುತ್ತಾನೆ. ಆದ್ದರಿಂದ ಈಶ್ವರ, ಗುರು, ತಾನು–ಎಂಬ ಮೂರ್ತಿಭೇದಗಳಿಂದ

ಭಿನ್ನವಾಗಿ ಕಾಣುವ ಸರ್ವವ್ಯಾಪಿಯಾದ ಅಖಂಡಚೈತನ್ಯಸ್ವರೂಪವೇ ಆಚಾರ್ಯನು ಎಂದು ಮುಮುಕ್ಷುಗಳು ಭಾವಿಸಬೇಕು.

ಆಚಾರ್ಯೋಪದೇಶವನ್ನು ಕರ್ಮಾಚರಣೆಗೆ ಬೇಕಾದ ಸಹಾಯವನ್ನು ಮಾಡುವ ಆಚಾರ್ಯನ ನೆರವಿಗೆ ಹೋಲಿಸಬಾರದು; ಅಥವಾ ಮಂತ್ರೋಪದೇಶವೇ ಮುಂತಾದವುಗಳನ್ನು ಮಾಡುವ ಗುರುಗಳ ಸಹಾಯಕ್ಕೆ ಸಮಾನವೆಂದೂ ಭಾವಿಸಬಾರದು. ಅಲ್ಲಿ ಮತ್ತೊಬ್ಬರು ಮಾಡುವ ಸಹಾಯವೂ ತನ್ನ ಪ್ರಯತ್ನವೂ ಸೇರಿ ಒಂದಾನೊಂದು ಫಲವನ್ನು ಉಂಟುಮಾಡಬೇಕಾಗಿರುತ್ತದೆ. ಆದರೆ ತತ್ತ್ವಾನುಭವದ ವಿಷಯಕ್ಕೆ ಹಾಗಿಲ್ಲ. ನಮ್ಮಲ್ಲಿ ಆಗಲೆ ನಿತ್ಯಸಿದ್ಧವಾಗಿ ಇದ್ದುಕೊಂಡಿರುವ ಆತ್ಮತತ್ತ್ವದ ಕಡೆಗೆ ತಿರುಗಿಸುವದೇ ಶಾಸ್ತ್ರಾಚಾರ್ಯೋಪದೇಶಗಳ ಮುಖ್ಯಕಾರ್ಯವಾಗಿರುತ್ತದೆ. ಶರೀರ, ಇಂದ್ರಿಯ, ಮನಸ್ಸು- ಇವುಗಳಲ್ಲಿ ಗಟ್ಟಿಯಾದ ವಾಸನೆಯಿಂದ ನಮಗೆ ಉಂಟಾಗಿರುವ ತಾದಾತ್ಮ್ಯಭಾವನೆಯನ್ನು ಸಡಿಲಿಸುವದೇ ಉಪದೇಶದ ಗುರಿಯಾಗಿರುತ್ತದೆ. ಶಾಸ್ತ್ರಾಚಾರ್ಯರಿಂದ ದೊರಕುವ ಉಪದೇಶವೇ ನಮಗೆ ಪ್ರತ್ಯಗ್ದೃಷ್ಟಿಯನ್ನುಂಟುಮಾಡುವ ಮುಖ್ಯ ಸಾಧನವು. ಆ ದೃಷ್ಟಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವದೇ ನಾವು ಕೃತಾರ್ಥರಾಗುವದಕ್ಕೆ ಮಾಡಬೇಕಾಗಿರುವ ಪ್ರಯತ್ನವು.

## 4.8. ವೇದಾಂತೋಪದಿಷ್ಟತತ್ತ್ವಜ್ಞಾನ

**ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ**
**ಬ್ರಹ್ಮಾಽಭಯಂ ವೈ ಬ್ರಹ್ಮಾಭಯಂ ಹಿ ವೈ ಬ್ರಹ್ಮ ಭವತಿ ಯ ಏವಂ ವೇದ॥**
**– ಬೃ. 4–4–25**

ಜಗತ್ತಿನ ಧಾರ್ಮಿಕವಾಙ್ಮಯದಲ್ಲಿ ಉಪನಿಷತ್ತುಗಳಿಗೆ ಒಂದು ಹೆಚ್ಚಿನ ಸ್ಥಾನವಿದೆ. ಉಪನಿಷತ್ತುಗಳಿಗೆ ವೇದಾಂತಗಳೆಂದೂ ಹೆಸರು; ಅವುಗಳಲ್ಲಿರುವ ದರ್ಶನಕ್ಕೂ ವೇದಾಂತವೆಂದೇ ಹೆಸರು ಬಂದಿದೆ. ವೇದಾಂತದಲ್ಲಿ ಮಾನವನ ಅನುಭವಗಳನ್ನೆಲ್ಲ ಗರಬಾಡಿ ಯುಕ್ತಿಗೆ ಹೊಂದಿಸಿ ತತ್ತ್ವವನ್ನು ನಿರ್ಧಾರಮಾಡಿರುತ್ತದೆ. ಶಂಕರಾಚಾರ್ಯರ ಅಭಿಪ್ರಾಯದಲ್ಲಿ ವೇದಾಂತದಲ್ಲಿ ಹೇಳಿರುವ ಬ್ರಹ್ಮವಿದ್ಯೆಯು ಅನುಭವಾವಸಾನವಾದದ್ದು; ಎಂದರೆ ದೇಶಕಾಲಾದಿಗಳೆಲ್ಲವನ್ನೂ ಮೀರಿರುವ ಸಾರ್ವತ್ರಿಕಾನುಭವದಲ್ಲಿ ಕೊನೆಗಾಣತಕ್ಕದ್ದು.

ವೇದಾಂತಕ್ಕೆ ವೇದವೇ ತಳಹದಿ. ವೇದದಲ್ಲಿ ವರ್ಣಾಶ್ರಮಧರ್ಮಗಳ ಪರಾಮರ್ಶವಿರುತ್ತದೆ; ಅಂಥ ವೇದದ ತಳಹದಿಯ ಮೇಲೆ ನಿಂತಿರುವ ವೇದಾಂತವು

ಸರ್ವಾನುಭವಕ್ಕೆ ಹೊಂದುಗೆಯಾಗಿರುವದೆಂಬುದು ಒಂದು ವಿರೋಧಾಭಾಸವೇ ಸರಿ. ಆದರೂ ಈ ವಿಲಕ್ಷಣವಾದ ದೃಶ್ಯವು-ವರ್ಣಾಶ್ರಮಧರ್ಮಗಳನ್ನು ವಿಧಿಸುವ ವೇದದೊಳಗಿಂದ ದೇಶಕಾಲಾದಿಗಳ ಎಲ್ಲೆಕಟ್ಟನ್ನು ಮೀರಿರುವ ಸಾರ್ವಜನೀನಾನುಭವಕ್ಕೆ ಹೊಂದಿಕೊಂಡಿರುವ ವೇದಾಂತವು ಹುಟ್ಟಿ ಬೆಳೆದುಬಂದಿರುವದು- ಈಗ ನಮ್ಮ ಕಣ್ಣ ಮುಂದೆ ಇರುತ್ತದೆಯಾದ್ದರಿಂದ ಅದನ್ನು ಅಲ್ಲಗಳೆಯುವಂತಿಲ್ಲ. ಒಂದು ತಿಪ್ಪೆಯಲ್ಲಿ ಬೆಳೆದಿರುವ ಗಿಡದ ಹೂವು ಸುಂದರವಾಗಿಯೂ ಸುವಾಸನಾಯುಕ್ತವಾಗಿಯೂ ಇರಬಹುದಷ್ಟೆ, ಇದರಂತೆ ಕೆಲವು ಕಟ್ಟುಪಾಡುಗಳುಳ್ಳ ವೇದದಿಂದ ಎಲ್ಲಾ ಕಟ್ಟನ್ನೂ ಮೀರಿರುವ ವೇದಾಂತದರ್ಶನವೂ ಹುಟ್ಟಬಹುದು ಎಂದು ಸಮಾಧಾನಪಟ್ಟುಕೊಳ್ಳ ಬೇಕಾಗಿದೆ. ಭಗವದ್ಗೀತೆಯಲ್ಲಿ ಉಪನಿಷತ್ತುಗಳ ಸಾರವನ್ನು ಏಳುನೂರು ಶ್ಲೋಕಗಳಲ್ಲಿ ಹಿಂಡಿಟ್ಟಿರುತ್ತದೆ. ಅದರಲ್ಲಿ ವರ್ಣಾಶ್ರಮಧರ್ಮಗಳ ಪರಾಮರ್ಶವೂ ಇದೆ, ಸಾರ್ವತ್ರಿಕಾನುಭವಕ್ಕೆ ಹೊಂದುವ ತತ್ತ್ವದರ್ಶನವೂ ಇದೆ. ಇದೇ ವೇದಾಂತದಲ್ಲಿರುವ ಅದ್ಭುತಮಹಿಮೆ. ವೈವಿಧ್ಯದಲ್ಲಿ ಏಕತ್ವವೂ ಇದೆ. "ಏಕೋ ದೇವಃ ಸರ್ವಭೂತೇಷು ಗೂಢಃ" ಒಬ್ಬ ದೇವನೇ ಸಮಸ್ತಪ್ರಾಣಿಗಳಲ್ಲಿಯೂ ಅಡಗಿರುತ್ತಾನೆ, ಹಿರಣ್ಯಗರ್ಭ ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನ ಎಲ್ಲಾ ಪ್ರಾಣಿಗಳಲ್ಲಿಯೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಪರಮಾತ್ಮನೊಬ್ಬನೇ ಒಂದೊಂದರಲ್ಲಿಯೂ ಪರಿಪೂರ್ಣನಾಗಿರುತ್ತಾನೆ- ಎಂಬುದು ವೇದಾಂತದ ಸಂದೇಶವು. "ಸಮಂ ಸರ್ವೇಷು ಭೂತೇಷು ತಿಷ್ಠನ್ತಂ ಪರಮೇಶ್ವರಮ್" ಎಂಬ ಗೀತೋಕ್ತಿಯಲ್ಲಿ ಈ ಅರ್ಥವನ್ನೇ ಸಂಗ್ರಹಿಸಿಟ್ಟಿರುತ್ತಾರೆ. ಪ್ರಾಣಿಗಳು ಹೊರಗಿನ ಆಕಾರದಲ್ಲಿ ಹೆಚ್ಚುಕಡಿಮೆಯಾಗಿ ತೋರುತ್ತಿದ್ದರೂ ಅವುಗಳಲ್ಲಿರುವ ಪರಮಾತ್ಮತತ್ತ್ವದಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದೇ ಇಲ್ಲ. ಭೌತಿಕವಿಜ್ಞಾನಶಾಸ್ತ್ರಜ್ಞರು ಇದ್ದಲು, ವಜ್ರ- ಎರಡರಲ್ಲಿಯೂ ಇಂಗಾಲವೆಂಬ ಒಂದೇ ತತ್ತ್ವವಿದೆ ಎಂದು ಹೇಳುತ್ತಾರಲ್ಲವೆ? ಅದರಂತೆಯೇ ಇದನ್ನು ಮನಸ್ಸಿಗೆ ತಂದುಕೊಳ್ಳಬೇಕಾಗಿದೆ.

ಉಪನಿಷತ್ತಿನಲ್ಲಿ ಈ ವಿಷಯಕ್ಕೆ ಹೇಳಿರುವ ವಾಕ್ಯವನ್ನು ಈ ಸಂದೇಶದ ಮೇಲುಗಡೆಯಲ್ಲಿ ದೇವನಾಗರಿಯಲ್ಲಿ ಕೊಟ್ಟಿದೆ. ಅದರ ಅರ್ಥವೇನೆಂದರೆ, ಈ ನಮ್ಮ ಆತ್ಮನು ಮಹಾಂತನು, ಅಜನು, ಅಜರನು, ಅಮರನು, ಸಾವಿಲ್ಲದ ಸ್ವಭಾವದವನು, ಅಭಯವಾದ ಬ್ರಹ್ಮವು. ಯಾವನು ಹೀಗೆಂದು ತಿಳಿದುಕೊಳ್ಳುತ್ತಾನೋ ಅವನೂ ಇಂಥ ಅಭಯವಾದ ಬ್ರಹ್ಮವೇ ಆಗುವನು. ಈ ಅಭಿಪ್ರಾಯವನ್ನು ಗೀತೆಯಲ್ಲಿ ಹೇಳಿದೆಯೆ? ಇದು ಅನುಭವಕ್ಕೆ ಹೊಂದುತ್ತದೆಯೇ?-ಎಂಬುದನ್ನು ವಿಚಾರಿಸಿನೋಡೋಣ. ಗೀತೆಯಲ್ಲಿ ಮೊಟ್ಟಮೊದಲು ಭಗವಂತನು ಹೇಳಿರುವದಿದು: "ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ" ನೀನು ಜ್ಞಾನಿಗಳಂತೆ ಮಾತನಾಡುತ್ತಿರುವೆ; ಆದರೆ ಯಾರಿಗಾಗಿ ಶೋಕಮಾಡಬೇಕಾದದ್ದಿಲ್ಲವೋ

ಅವರಿಗಾಗಿ ಶೋಕಮಾಡುತ್ತಿರುವೆ!- ಎಂದು ಆ ಶ್ಲೋಕಾರ್ಧಕ್ಕೆ ಅರ್ಥ. ವೇದಾಂತದ ಜ್ಞಾನದಿಂದ ಶೋಕಮೋಹಗಳು ತೊಲುಗುತ್ತವೆ ಎಂದು ಶ್ರುತಿಯಲ್ಲಿದೆ. ಇಲ್ಲಿ ಅರ್ಜುನನು ತನ್ನ ಬಂಧುಬಾಂಧವರ ಮೇಲಿನ ಅಭಿಮಾನದಿಂದ ಅವರಿಗಾಗಿ ಶೋಕಿಸುತ್ತಿದ್ದನು; ಅವರು ಸಾಯುವರಲ್ಲ ಎಂದು ಕಳವಳಗೊಂಡಿದ್ದನು. ನಿಜವನ್ನು ತಿಳಿದರೆ ನೀನು ಶೋಕಿಸುವದಿಲ್ಲ ಎಂದಂತೆ ಆಯಿತು. ನಿಜವಾದ ತತ್ತ್ವವು ಯಾವದು? "ನ ಜಾಯತೇ ಮ್ರಿಯತೇ ವಾ ಕದಾಚಿನ್ನಾಯಂ ಭೂತ್ವಾಽಭವಿತಾ ವಾ ನ ಭೂಯಃ । ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ ॥" ಈ ನಮ್ಮಗಳ ಆತ್ಮನು ಹುಟ್ಟುವದಿಲ್ಲ. ಸಾಯುವದೂ ಇಲ್ಲ; ಇವನು ಅಜನು, ನಿತ್ಯನು, ಶಾಶ್ವತನು, ಪುರಾಣನು. ಶರೀರವು ಹತವಾದರೂ ಇವನು ಸಾಯುವದಿಲ್ಲ. ಉಪನಿಷತ್ತಿನ ಅರ್ಥವೇ ಗೀತೆಯ ಉಪದೇಶ. ಆತ್ಮನು ಜನ್ಮಾದಿವಿಕಾರಗಳಿಲ್ಲದವನು; ಈ ನಿಜವನ್ನು ಅರಿತುಕೊಂಡರೆ ಶೋಕಮೋಹಗಳು ತೊಲುಗುತ್ತವೆ. ನಾವು ಅಸಂಸಾರಿಯಾದ ಬ್ರಹ್ಮವೇ ಆಗಿಬಿಡುತ್ತೇವೆ. ಈ ಸಂಸಾರವು ಜನ್ಮಮೃತ್ಯುಜರಾವ್ಯಾಧಿದುಃಖಗಳೆಂಬ ದೋಷಗಳಿಂದ ಪರಿಪೂರ್ಣವಾಗಿದೆ ಎಂಬುದು ನಮ್ಮ ಈಗಿನ ಭಾವನೆ. ಆದರೆ ಆತನ ಯಾಥಾತ್ಮ್ಯವನ್ನು ಅರಿತುಕೊಂಡರೆ, ಈ ಜನ್ಮಾದಿಗಳೆಲ್ಲವೂ ನಮಗೆ ನೀಗಿಹೋಗುವವು.

ಭಗವದ್ಗೀತೆಯಲ್ಲಿ ಉಪಕ್ರಮದಲ್ಲಿ ಹೇಳಿರುವ ಈ ವಿಷಯವನ್ನೇ ಉಪಸಂಹಾರದಲ್ಲಿಯೂ ಹೇಳಿದೆ. ಅಲ್ಲಿಯೂ "ಶೋಕಿಸದಿರು" ಎಂದು ಕೃಷ್ಣನು ಉಪದೇಶಿಸಿರುತ್ತಾನೆ; "ಮೋಹವು ಕಳೆದುಹೋಯಿತು" ಎಂದು ಅರ್ಜುನನು ಒಪ್ಪಿಕೊಂಡಿರುತ್ತಾನೆ. ಆದ್ದರಿಂದ ಆತ್ಮನು ಅಜನು ಎಂದು ಮುಂತಾದ ತತ್ತ್ವಜ್ಞಾನದಿಂದ ಶೋಕಮೋಹಾದಿಗಳು ತೊಲಗುವವು ಎಂಬುದರಲ್ಲಿ ಉಪನಿಷತ್ತಿಗೆ ಹೇಗೋ ಹಾಗೆಯೇ ಗೀತೆಗೆ ಮಹಾತಾತ್ಪರ್ಯವೆಂದಾಯಿತು. ವ್ಯಾಸಮಹರ್ಷಿಗಳು ಕರುಣಾಶಾಲಿಗಳಾದ್ದರಿಂದ ಮಹಾಭಾರತದ ಮಧ್ಯದಲ್ಲಿ ಸರ್ವೋಪನಿಷತ್ಸಾರವಾದ ಈ ಗೀತೆಯನ್ನು ಇಟ್ಟಿರುತ್ತಾರೆ. ವೇದಕ್ಕೆ ಅಧಿಕಾರವಿಲ್ಲದವರಿಗೆಕೂಡ ಯಾವ ಕಷ್ಟವೂ ಇಲ್ಲದೆ ಪರಮಾರ್ಥವು ತಿಳಿಯಬೇಕು, ಸಂಸಾರದುಃಖವು ತೊಲಗಬೇಕು, ನಿತ್ಯಾನಂದವು ದೊರಕಬೇಕು-ಎಂಬುದೇ ಅವರ ಉದ್ದೇಶ. ಮನುಷ್ಯನು ಸಾಮಾನ್ಯವಾಗಿ ತಾನು ಸಂಸಾರಿಯೆಂದೇ ತಿಳಿದುಕೊಂಡಿರುತ್ತಾನೆ. ಸಂಸಾರದುಃಖವನ್ನೇ ಸ್ಮರಿಸಿಕೊಳ್ಳುತ್ತಾ ದುಃಖದಾಯಕವಾದ ವ್ಯಾಪಾರಗಳನ್ನೇ ಮಾಡುತ್ತಾ ದುಃಖ ಫಲವನ್ನೇ ಹೊಂದುತ್ತಾ ಈ ಕೀಳುಸ್ಥಿತಿಗೆ ಇಳಿದಿರುತ್ತಾನೆ. ಇದಕ್ಕೆ ಬದಲಾಗಿ ತನ್ನ ನಿತ್ಯಾನಂದಸ್ವರೂಪವನ್ನೇ ಸ್ಮರಣೆಮಾಡಿಕೊಂಡು ಪರಮಾತ್ಮಚಿಂತೆಯಲ್ಲಿಯೇ ಇದ್ದುಕೊಂಡಿದ್ದರೆ ಅವನಿಗೆ ಉತ್ಕೃಷ್ಟಫಲವೇ ಲಭಿಸುವದು. ಆದ್ದರಿಂದ ನಾವು ಪರಮಾತ್ಮತತ್ತ್ವವನ್ನು ಅವಶ್ಯವಾಗಿ ನೆನಪಿಗೆ ತಂದುಕೊಳ್ಳಬೇಕು.

ಭಗವದ್ಗೀತೆಯಲ್ಲಿ ಗುರುವೆನಿಸಿರುವವನು ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನು. ಆತನು ಪರಮೇಶ್ವರನು, ಜ್ಞಾನಿಗಳಲ್ಲಿ ಅಗ್ರೇಸರನು; ಅಂಥವನು ಹೇಳಿದರೆ ಅಜ್ಞಾನವು ತೊಲಗದೆ ಇದ್ದೀತೆ? ಅರ್ಜುನನು ಅದಕ್ಕೆ ತಕ್ಕ ಶಿಷ್ಯನು. ಕ್ಷತ್ರಿಯಧರ್ಮವನ್ನೆಲ್ಲ ಮಾಡಿ ಬುದ್ಧಿಶುದ್ಧಿಯನ್ನು ಪಡೆದುಕೊಂಡಿರುವಾತನು. ಅವನಿಗಲ್ಲದೆ ಇದ್ದರೆ ಮತ್ತೆ ಯಾರಿಗೆ ತತ್ತ್ವವು ತಿಳಿಯಬೇಕು? ಆದ್ದರಿಂದ ಗೀತೆಯಲ್ಲಿ ಉಪನಿಷತ್ತುಗಳ ಸಾರವನ್ನೇ ಭಗವಂತನು ಉಪದೇಶಿಸಿರುತ್ತಾನೆ. ತಾವುಗಳೆಲ್ಲರೂ ಗೀತೆಯನ್ನು ಪಾರಾಯಣ ಮಾಡುತ್ತೀರೆಂದು ಕೇಳಿದೇನೆ; ವಿಷ್ಣುಸಹಸ್ರನಾಮವನ್ನೂ ಪಾರಾಯಣಮಾಡಿದರೆ ಮತ್ತೂ ಒಳ್ಳೆಯದೆಂದು ನನ್ನ ಅಭಿಪ್ರಾಯ. ಅದರಲ್ಲಿ ಭಗವಂತನ ಸ್ವರೂಪವನ್ನೂ ಗುಣಗಳನ್ನೂ ಕೊಂಡಾಡುವ ನಾಮಗಳನ್ನು ಹೇಳಿರುತ್ತದೆ. ಭಗವಂತನ ಸ್ವರೂಪವನ್ನು ಚಿಂತಿಸುವದರಿಂದ ಭಗವಂತನೇ ಆಗುತ್ತಾನೆ. ವಿಷ್ಣುಸಹಸ್ರನಾಮಪಠನಕ್ಕೆ ಫಲವನ್ನು ಹೇಳಿರುವದನ್ನು ನೋಡಿರಿ. "ಬ್ರಾಹ್ಮಣನು ವೇದಾಂತಜ್ಞಾನಿಯಾಗುವನು, ಕ್ಷತ್ರಿಯನು ವಿಜಯಿಯಾಗುವನು, ವೈಶ್ಯನು ಧನಸಮೃದ್ಧನಾಗುವನು, ಶೂದ್ರನು ಸುಖವನ್ನು ಪಡೆಯುವನು"–ಎಂದು ಅಲ್ಲಿ ಹೇಳಿರುತ್ತದೆ. ಶೂದ್ರನೆಂದರೆ ಯಾರು? ಬರಿಯ ಹೊಟ್ಟೆಬಟ್ಟೆಗೆ ನೆಮ್ಮದಿಯಾಗಿರುವ ಸುಖವಿದ್ದರೆ ಸಾಕು–ಎಂಬ ಬುದ್ಧಿಯವನು. ನಮಗೆ ಅಷ್ಟೇ ಪುರುಷಾರ್ಥವೆಂದಾದರೆ ನಾವು ಶೂದ್ರಬುದ್ಧಿಯವರೇ ಸರಿ. ನಾವು ಪರಮಾತ್ಮನನ್ನು ಯಾವ ಬುದ್ಧಿಯಿಂದ ಚಿಂತಿಸಿದರೆ ಅಂಥ ಫಲವು ನಮಗೆ ದೊರಕುವದು. ಸಹಸ್ರನಾಮದಲ್ಲಿ ಹೇಳಿರುವ ಪರಮಾತ್ಮನ ನಾಮಗಳಲ್ಲಿ ಮೊದಲನೆಯದು ಯಾವದು? "ವಿಶ್ವಮ್". ಇಡಿಯ ಜಗತ್ತೇ ಬ್ರಹ್ಮವು ಎಂಬುದನ್ನು ಅರಿತವನಿಗೆ ಬ್ರಹ್ಮಪ್ರಾಪ್ತಿಯಲ್ಲದೆ ಮತ್ತೇನಾದೀತು? "ಯೋ ಯಚ್ಛ್ರದ್ಧಃ ಸ ಏವ ಸಃ" ಯಾವನು ಹೇಗೆ ಪರಮಾತ್ಮನನ್ನು ಉಪಾಸನೆಮಾಡುವನೋ ಅವನಿಗೆ ಅದಕ್ಕೆ ತಕ್ಕಂತೆಯೇ ಫಲವಾಗುವದು–ಎಂಬುದೊಂದು ನಿಯಮವಿದೆ. ಆದ್ದರಿಂದಲೇ ಭಾಗವತದಲ್ಲಿ ಪರೀಕ್ಷಿತನಿಗೆ ಶುಕರು "ಎಲೈ ರಾಜನೆ, ನಾನು ಸಾಯುವೆನು ಎಂಬೀ ಪಶುಬುದ್ಧಿಯನ್ನು ಬಿಟ್ಟುಬಿಡು; ನಾನೇ ಪರಮಾತ್ಮನು ಎಂಬ ತಿಳಿವಳಿಕೆಯನ್ನು ತಂದುಕೊಂಡು ಅದನ್ನೇ ಚಿಂತಿಸುತ್ತಿರು, ಹಾಗಾದರೆ ನೀನು ಮೃತ್ಯುವಿಗೂ ಮೃತ್ಯುವಾಗುವೆ" ಎಂದು ತಿಳಿಯಹೇಳಿದಾರೆ.

ವೇದಾಂತವೆಂಬುದು ಕೇವಲ ತರ್ಕಪ್ರಧಾನವಾದ ಬುದ್ಧಿಯ ಕೆಲಸದಿಂದ ತಿಳಿಯಬರತಕ್ಕದ್ದಲ್ಲ. ಅದನ್ನು ಹೃದಯದಿಂದಲೇ ಅರಿತುಕೊಳ್ಳಬೇಕಾಗಿರುತ್ತದೆ. ಈಗ ನಮಗೆ ಅದು ತಿಳಿಯದೆ ಇದೆ, ಅಜ್ಞಾನವು ಆ ತಿಳಿವಳಿಕೆಗೆ ಅಡ್ಡಿಯಾಗಿದೆ.

ಅಜ್ಞಾನವೆಂದರೇನು? ನಮ್ಮ ಆತ್ಮಸ್ವರೂಪವನ್ನು ನಾವು ತಿಳಿದುಕೊಂಡಿಲ್ಲವೆಂಬುದಿಷ್ಟೇ ಅಲ್ಲ; ತಪ್ಪಾಗಿಯೂ ತಿಳಿದುಕೊಂಡಿದೇವೆ. ಹುಚ್ಚರಿಗೆ ತಾವು ಹುಚ್ಚರೆಂದು ತಿಳಿದಿರುವದಿಲ್ಲ; ಅಷ್ಟೇ ಅಲ್ಲ, ಅವರು ಮಿಕ್ಕವರೇ ಹುಚ್ಚರು ಎಂದೂ ಭಾವಿಸಿಕೊಂಡಿರುತ್ತಾರೆ. ಒಂದು

ಹುಚ್ಚರ ಆಸ್ಪತ್ರೆಯಲ್ಲಿದ್ದವನನ್ನು ನೋಡುವದಕ್ಕೆ ಯಾರೋ ಬಂದಿದ್ದರಂತೆ. ಅವರನ್ನು ಆ ಹುಚ್ಚನು "ನೀವು ಯಾವ ಹುಚ್ಚರ ಆಸ್ಪತ್ರೆಯಿಂದ ಬಂದಿದ್ದೀರಿ?" ಎಂದು ಕೇಳಿದನಂತೆ! ನಮಗೆ ಜನ್ಮಜರಾಮೃತ್ಯುಭಯಾದಿಗಳಿಂದ ರಹಿತನಾದ ಪರಮಾತ್ಮನೇ ನಮ್ಮೆಲ್ಲರ ಆತ್ಮನು ಎಂಬುದು ತಿಳಿದಿಲ್ಲ. ಇಷ್ಟೇ ಅಲ್ಲ; ನಾನು ಸಂಸಾರಿಯೇ; ಹುಟ್ಟು, ಮುಪ್ಪು, ಸಾವು-ಮುಂತಾದವುಗಳಿಂದ ಕೂಡಿರುವವನೇ-ಎಂಬ ಖಂಡಿತವಾದ ಗಟ್ಟಿಯಾದ ನಿಶ್ಚಯದಿಂದ ಕೂಡಿರುತ್ತೇವೆ; ಇದಕ್ಕೇ ಅಜ್ಞಾನವೆಂದು ಹೆಸರು. ನಾವು ವೇದಾಂತಪುಸ್ತಕಗಳಿಂದ ಏನೇನೋ ಓದಿ ತಿಳಿದುಕೊಂಡಿರಬಹುದು. ಆದರೆ ಆ ಜ್ಞಾನವು ನಮಗೆ ಯಾವ ಉಪಯೋಗಕ್ಕೂ ಬರುವಂತೆ ಇಲ್ಲ; ಏಕೆಂದರೆ ಅದರಿಂದ ನಮ್ಮ ಅಜ್ಞಾನವು ಹೋಗಿಲ್ಲ. ನಾವು ಸಂಸಾರಿಗಳು, ಮರ್ತ್ಯರು-ಎಂದು ನಮ್ಮ ಹೃದಯದಲ್ಲಿ ನಿಶ್ಚಯಮಾಡಿಕೊಂಡು ಬಿಟ್ಟಿರುತ್ತೇವೆ. ತರ್ಕಬದ್ಧವಾದ ವೇದಾಂತದಿಂದ ಇದು ಹೋಗುವ ಬಗೆ ಹೇಗೆ? ಈಗ ನಾವು ನಿಜವಾಗಿಯೂ ಅರ್ಜುನನ ಸ್ಥಾನದಲ್ಲಿರುತ್ತೇವೆ; ಅಥವಾ ಅದಕ್ಕಿಂತಲೂ ಕೆಳಗಿನ ಅಂತಸ್ತಿನಲ್ಲಿದ್ದೇವೆ. ನಮಗೆ ಶೋಕಮೋಹಗಳು ತಪ್ಪಿರುವದಿಲ್ಲ; ಆದರೆ ಪ್ರಾಜ್ಞರಂತೆ ವೇದಾಂತದ ವಾಕ್ಯಗಳನ್ನು ಒಪ್ಪಿಸುತ್ತಿದೇವೆ! ತಪ್ಪುತಿಳಿವಳಿಕೆಯ ಸ್ವಭಾವವೇನು? ಅದು ಇರುವವರೆಗೆ "ಇದು ತಪ್ಪುತಿಳಿವಳಿಕೆ" ಎಂದು ಗೊತ್ತಾಗುವದಿಲ್ಲ; ಇಷ್ಟೇ ಅಲ್ಲ, ಇದೇ ಸರಿಯಾದ ತಿಳಿವಳಿಕೆ ಎಂಬ ಅಭಿಮಾನವೂ ಇರುತ್ತದೆ. ಸರಿಯಾದ ಜ್ಞಾನವು ಹುಟ್ಟಿದಕೂಡಲೆ ಕನಸಿನಿಂದ ಎಚ್ಚತ್ತಂತೆ "ಆಹಾ! ಈವರೆಗೂ ತಪ್ಪಾಗಿ ತಿಳಿದುಕೊಂಡಿದ್ದೆನು" ಎಂದು ತಟ್ಟನೆ ಗೊತ್ತಾಗಿಬಿಡುತ್ತದೆ.

ಪ್ರತಿಯೊಬ್ಬನೂ ತನ್ನತನ್ನ ವ್ಯವಹಾರದ ವಿಷಯಕ್ಕೆ ತಾನು ಬುದ್ಧಿವಂತನೆಂದೇ ಭಾವಿಸಿಕೊಂಡಿರುತ್ತಾನೆ. ತಿರುಕರುಕೂಡ ತಾವು ಸುಖವಾಗಿಯೇ ಇರುತ್ತೇವೆಂದು ಭಾವಿಸಿಕೊಂಡಿರುತ್ತಾರೆ. ಹಾಗಿಲ್ಲದಿದ್ದರೆ ಅವರು ತಮ್ಮ ಸ್ಥಿತಿಯಲ್ಲಿ ಹೇಗೆ ನೆಮ್ಮದಿಯಿಂದ ಬಾಳಿಕೊಂಡಿದ್ದಾರು? ಇದರಂತೆ ನಾವುಗಳೂ ಈ ಸಂಸಾರವು ಸುಖಮಯವಾಗಿದೆ ಯೆಂದೇ ನೆರೆನಂಬಿರುತ್ತೇವೆ. ಇದು ದಟ್ಟವಾದ ಅಜ್ಞಾನದ ಫಲವು. "ಅಜ್ಞಾನತಿಮಿರಾನ್ಧಸ್ಯ ಜ್ಞಾನಾಞ್ಜನಶಲಾಕಯಾ । ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ॥" ಎಂದಂತೆ ನಮ್ಮ ಅಂತಃಕರಣವೆಂಬ ಚಕ್ಷುಸ್ಸಿಗೆ ಅಜ್ಞಾನದ ಪರೆ ಬಂದಿರುತ್ತದೆ. ಈ ತಿಮಿರರೋಗವು ಹೋಗುವದಕ್ಕೆ ಅನುಭವಿಯಾದ ಸದ್ಗುರುವಿನ ಅನುಗ್ರಹದಿಂದ ನಮಗೆ ಜ್ಞಾನಾಂಜನವು ಬೀಳಬೇಕಾಗಿದೆ. ಆಗ ನಾವು ಈ ನಮ್ಮ ತಿಳಿವಳಿಕೆಯು ತಪ್ಪೇ ಎಂದು ಸ್ಫುಟವಾಗಿ ಅರಿತುಕೊಳ್ಳುವೆವು. ನಮ್ಮೆಲ್ಲರಿಗೂ ಆತ್ಮನು ಒಬ್ಬ ಪರಮಾತ್ಮನೇ ಎಂಬುದನ್ನು ಕಂಡುಕೊಳ್ಳುವೆವು. ಅವನಲ್ಲಿ ಹುಟ್ಟು, ಮುಪ್ಪು, ಸಾವು-ಮುಂತಾದ ಯಾವ ವಿಕಾರಗಳೂ ಇಲ್ಲ ಎಂಬುದನ್ನು ಅರಿತುಕೊಳ್ಳುವೆವು. ನಮಗೆ ಅಂಜಿಕೆಯನ್ನುಂಟುಮಾಡಬಲ್ಲ ದ್ವಿತೀಯವಸ್ತುವೇ ಇಲ್ಲ ಎಂಬುದನ್ನು ನಿಶ್ಚಯವಾಗಿ

ತಿಳಿದುಕೊಳ್ಳುವೆವು. ಆ ಬ್ರಹ್ಮಜ್ಞಾನವು ಬಂದರೆ ನಾವು ಎಂದೆಂದಿಗೂ ಅಭಯವಾದ ಬ್ರಹ್ಮವೇ ಆಗಿದ್ದೆವು; ಈಗಲೂ ಆಗಿದ್ದೇವೆ, ಮುಂದೆಯೂ ಆಗಿರುವೆವು–ಎಂಬ ನಿಶ್ಚಯವು ಹೃದಯದಲ್ಲಿ ಉಂಟಾಗುವದು.

## 4.9. ಏಕಮೇವಾದ್ವಿತೀಯಮ್

**ಸದೇವ ಸೋಮ್ಯೇದಮಗ್ರ ಆಸೀದೇಕಮೇವಾಽದ್ವಿತೀಯಂ । –ಛಾಂ. 6.2.1**
**ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ॥ –ಛಾಂ. 6. 8. 7**

ವೇದಾಂತಗಳಲ್ಲಿ, ಎಂದರೆ ಉಪನಿಷತ್ತುಗಳಲ್ಲಿ, ಪೂರ್ಣಾನುಭವಕ್ಕೆ ಹೊಂದುವಂತೆ ತತ್ತ್ವವನ್ನು ನಿರ್ಧರಿಸಿರುತ್ತದೆ; ಅದರ ಅಭಿಪ್ರಾಯವನ್ನೇ ಭಗವದ್ಗೀತೆಯಲ್ಲಿಯೂ ಹೇಳಿರುತ್ತದೆ. ಉಪನಿಷತ್ತುಗಳಲ್ಲಿ "ಸ ವಾ ಏಷ ಮಹಾನಜ ಆತ್ಮಾ..." ಆ ಈ ಆತ್ಮನು ಜನ್ಮರಹಿತನಾದ ಮುಪ್ಪಿಲ್ಲದ ಸಾವಿಲ್ಲದ ಅಭಯವಾದ ಬ್ರಹ್ಮವೇ–ಎಂದು ಹೇಳಿರುತ್ತದೆ. ಅದನ್ನೇ "ನ ಜಾಯತೇ ಮ್ರಿಯತೇ ವಾ......" ಈ ಆತ್ಮನು ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ–ಎಂದುಮುಂತಾಗಿ ಗೀತೆಯಲ್ಲಿ ತಿಳಿಸಿಕೊಟ್ಟಿರುತ್ತದೆ. ನಮ್ಮ ಆತ್ಮನು ಜನ್ಮಾದಿವಿಕಾರಗಳಿಲ್ಲದವನು ಎಂದು ತಿಳಿಸುವದರಲ್ಲಿ ಶ್ರುತಿಸ್ಮೃತಿಗಳೆರಡಕ್ಕೂ ತಾತ್ಪರ್ಯವಿದೆ. ಈ ಅರ್ಥವು ಪೂರ್ಣಾನುಭವಕ್ಕೆ ಹೊಂದುಗೆಯಾಗಿದೆ ಎಂದು ಅರಿತುಕೊಂಡರೆ, ನಾವು ಸಂಸಾರಭಯರಹಿತವಾದ ಬ್ರಹ್ಮವೇ ಆಗಿಬಿಡುವೆವು; ನಾವು ಸಂಸಾರಿಗಳು, ಜನನ ಮರಣಾದಿಯುಕ್ತರು–ಎಂಬ ಅಜ್ಞಾನವು ತೊಲಗಿಬಿಡುವದು.

ಶ್ರುತಿಸ್ಮೃತಿಗಳಲ್ಲಿ ಹೇಳಿರುವ ಈ ಅರ್ಥವು ಅನುಭವಸಂಮತವೆ?– ಎಂಬುದನ್ನು ಈಗ ವಿಚಾರಿಸಬೇಕು. ಉಪನಿಷತ್ತಿನಲ್ಲಿ ಈ ಅಭಿಪ್ರಾಯವನ್ನು ತಿಳಿಯಹೇಳಿರುವದು ಹೇಗೆ? ಛಾಂದೋಗ್ಯದಲ್ಲಿ ಈ ವಾಕ್ಯವಿದೆ: "ಅಪ್ಪ, ಇದು ಮೊದಲು ಸತ್ತೇ ಆಗಿತ್ತು, ಎರಡನೆಯದಿಲ್ಲದ ಒಂದೇ ಒಂದಾದ ಸತ್ತೇ ಆಗಿತ್ತು.... ಅದು ತೇಜಸ್ಸನ್ನು ಸೃಷ್ಟಿಮಾಡಿತು.." ಉದ್ದಾಲಕನು ತನ್ನ ಮಗನಾದ ಶ್ವೇತಕೇತುವಿಗೆ ಹೇಳಿದ್ದಿದು. ಒಂದನ್ನರಿತರೆ ಎಲ್ಲವನ್ನೂ ಅರಿತಂತೆ ಆಗುವದೆಂಬುದು ಹೇಗೆಂದರೆ, ಎಲ್ಲಕ್ಕೂ ಮೊದಲು ಒಂದು ಸತ್ತೇ ಇತ್ತು; ಈ ಜಗತ್ತೆಲ್ಲವೂ ಆ ಸತ್ತೇ ಆಗಿತ್ತು; ಆ ಸತ್ತು ತೇಜಸ್ಸು ಮುಂತಾದ ಭೂತಗಳನ್ನು ಸೃಷ್ಟಿಮಾಡಿ ಆ ಮೂಲಕ ಈ ಜಗತ್ತನ್ನುಂಟುಮಾಡಿತು. ಆ ಈ ಸೂಕ್ಷ್ಮವಾದ ಸತ್ತಿದೆಯಲ್ಲ, ಅದೇ ಈ ಜಗತ್ತಿಗೆಲ್ಲ ಆತ್ಮವು, ಅದೇ ಇದೆಲ್ಲಕ್ಕೂ ಸಾರವು. ಅದೇ ಸತ್ಯವು. ಅದೇ ನೀನು. ಹೀಗೆಂದು ಉದ್ದಾಲಕನು ಉಪದೇಶಮಾಡಿರುತ್ತಾನೆ. ನಮ್ಮ ಸ್ವರೂಪದ ಪರಮಾರ್ಥವನ್ನು ಸತ್ತೆಂದು ಶಾಸ್ತ್ರದಲ್ಲಿ ಕರೆದಿರುತ್ತದೆ. ನಾವು ಪರಮಾರ್ಥವನ್ನು ತಪ್ಪಾಗಿ ತಿಳಿದುಕೊಂಡಿರುತ್ತೇವೆ;

ಆದರೆ ಹಾಗೆ ಅದನ್ನು ತಪ್ಪಾಗಿ ತಿಳಿದುಕೊಳ್ಳುವದಕ್ಕಿಂತ ಮೊದಲೂ, ತಪ್ಪಾಗಿ ತಿಳಿದುಕೊಂಡಿರುವಾಗಲೂ, ಸರಿಯಾಗಿ ತಿಳಿದುಕೊಂಡಮೇಲೂ ಅದು ಸತ್ತೇ ಆಗಿರುತ್ತದೆ. ನಮ್ಮ ಆತ್ಮನೇ ಸತ್ತು, ನಿಜವಾದ ಇರವು. ನಾವು ಅದನ್ನು ಅಚೇತನವಾದ ಪಂಚಭೂತಗಳ ರೂಪವಾಗಿ ಭ್ರಾಂತಿಯಿಂದ ಅರಿತುಕೊಳ್ಳುತ್ತಿದೇವೆ; ಈ ಪಂಚಭೂತಗಳ ರೂಪವೇ ಅಸತ್ತು, ಇಲ್ಲದ್ದು. ಸತ್ತು ತಾನೊಂದೇ ಇದೆ. ಅದೇ ಈ ಅಸತ್ತಾದ ಜಗತ್ತಿನ ರೂಪದಿಂದಲೂ ಕಾಣುತ್ತಿರುತ್ತದೆ. ಮಣ್ಣು ಮಡಕೆಯಾಗುವದಕ್ಕೆ ಕುಂಬಾರನು ಬೇಕು; ಆದರೆ ಸತ್ತು ಜಗತ್ತಾಗುವದಕ್ಕೆ ಮತ್ತೆ ಯಾವ ಎರಡನೆಯದೂ ಬೇಕಿಲ್ಲ. "ಏಕಮೇವಾದ್ವಿತೀಯಮ್" ಎರಡನೆಯದನ್ನು ಬಯಸದೆ ತಾನೊಂದೇ ಇದ್ದುಕೊಂಡಿರುವ ಸತ್ತೇ ಈ ಜಗತ್ತಾಗಿರುತ್ತದೆ; ಎಂದರೆ ಅಜ್ಞಾನದಿಂದ ಈ ಜಗತ್ತಾಗಿ ತೋರುತ್ತಿರುವದು ಎಂಬುದು ಶ್ರುತಿವಾಕ್ಯದ ಅರ್ಥ.

ಸತ್ತಾಗಿರುವ ಆತ್ಮನು, ಅಸತ್ತಾಗಿರುವ ಜಗತ್ತು-ಎಂದು ಎರಡು ಪದಾರ್ಥಗಳಿಲ್ಲ. ಸತ್ತೊಂದೇ ತನಗೆರಡನೆಯದಿಲ್ಲದ ಆತ್ಮನೊಬ್ಬನೇ ಪರಮಾರ್ಥವು. ಅದರಲ್ಲಿ ಅನಾತ್ಮದ ಕಲ್ಪನೆ ಆಗಿರುತ್ತದೆ. ಅದೇ ಪಂಚಭೂತಾತ್ಮಕವಾದ ಜಗತ್ತಿನ ಸೃಷ್ಟಿ ಎಂಬುದು. ನಿಜವಾಗಿ ಇರುವದು ಆತ್ಮವಸ್ತುವೊಂದೇ. ಅದನ್ನೇ ನಾವು ಅಜ್ಞಾನದಿಂದ ಅನಾತ್ಮವೆಂದು ವಿಕಲ್ಪಿಸುತ್ತಿರುವೆವು. ಅನಾತ್ಮವೆಲ್ಲವೂ ಅಸತ್ತು, ನಿಜವಾಗಿಲ್ಲದ್ದು; ಅದು ಅನೃತ, ಹುಸಿ. ಅನೃತವಾದ ಈ ಜಗತ್ತಿನಲ್ಲಿಯೇ ಮನಸ್ಸಿಟ್ಟುಕೊಂಡು ಅದರ ವಾಸನೆಯಿಂದಲೇ ಕೂಡಿದವರಾಗಿ, ಅದರಲ್ಲಿಯೇ ಮನಸ್ಸನ್ನು ಹೊರಳಾಡಿಸುತ್ತಾ ಇರುವದು ನಮ್ಮಗಳ ಸ್ವಭಾವವು. ನಿಜವಾಗಿ ಆತ್ಮಸ್ವರೂಪವನ್ನು ಬಿಟ್ಟು ಜನರು ಏತಕ್ಕೆ ಅಸತ್ತಾದ ಅನಾತ್ಮದ ಕಡೆಗೆ ತಿರುಗುತ್ತಿದಾರೆ? "ಅನೃತೇನ ಹಿ ಪ್ರತ್ಯೂಢಾಃ" ಇವಳು ನನ್ನ ಹೆಂಡತಿ, ಇವನು ನನ್ನ ಮಗನು, ಇದು ಭಕ್ಷ್ಯವು, ಇದು ಭೋಜ್ಯವು, ಇದು ಬಟ್ಟೆಯು, ಇದು ಹಣವು, ಇದು ಹೊಲವು, ಇದು ಮನೆ-ಎಂದು ವಿಕಲ್ಪಿಸಿಕೊಳ್ಳುತ್ತಾ ಅವುಗಳ ಆಶೆಯಿಂದ ಬಿಗಿವಡೆದು, ಅವುಗಳ ಪ್ರಾಪ್ತಿಗೆಂದೇ ಸ್ವೇಚ್ಛಾಚಾರರತರಾಗಿರುತ್ತಾರೆ; ಆತ್ಮಸ್ವರೂಪವನ್ನು ತಿಳಿಯದೆ, ನಿಜವಾಗಿಲ್ಲದ ಅನಾತ್ಮವನ್ನು ನಿಜವೆಂದು ಗಟ್ಟಿಯಾಗಿ ನಂಬಿ ಹೀಗೆ ಆಶೆಯಿಂದ ತೊಳಲುತ್ತಿರುವದೇ ಅನೃತವು. ಈ ಅನೃತವೇ, ಮಾಯಿಕವಾದ ಬಾಹ್ಯವಸ್ತುಗಳ ಆಶೆಯೇ, ಪ್ರಾಣಿಗಳನ್ನು ತಮ್ಮ ಆತ್ಮಸ್ವರೂಪದಿಂದ ಹೊರಕ್ಕೆ ಸೆಳೆದು ತಂದಿರುವದು. ನಿಜವಾಗಿ ನೋಡಿದರೆ ಆತ್ಮನನ್ನು ಬಿಟ್ಟರೆ ಮತ್ತೆ ಯಾವ ಅನಾತ್ಮವಸ್ತುವೂ ಇರುವದೇ ಇಲ್ಲ. ಹಾಗೆ ಅದು ಇರುವದೆಂದು ತಿಳಿಯುವದು ಬರಿಯ ವಿಕಲ್ಪವೇ. ಯಾರು ಅನೃತವನ್ನು, ಬಾಹ್ಯವಿಷಯಗಳಲ್ಲಿರುವ ತಹತಹವನ್ನು, ಗೆದ್ದುಕೊಳ್ಳುವರೋ, ಅವರಿಗೆ ಇದೆಲ್ಲವೂ ನಿಜವಾಗಿ ಆತ್ಮನೇ ಎಂಬುದು ಗೊತ್ತಾಗುವದು. ಅನಾತ್ಮವು ಸ್ಥೂಲವಾಗಿದೆ, ಅದು ಇಂದ್ರಿಯಗಳಿಗೆ ಗೋಚರವಾಗಿರುತ್ತದೆ. ಆದರೆ ಆತ್ಮನು ಅಣು, ಸೂಕ್ಷ್ಮನಾಗಿರುತ್ತಾನೆ. ಇಂದ್ರಿಯಗಳಿಗೆ

ಅಗೋಚರನಾಗಿರುತ್ತಾನೆ. ಈ ಅಣುಭಾವವಿದೆಯಲ್ಲ, ಈ ಆತ್ಮನೆಂಬ ಸೂಕ್ಷ್ಮತತ್ತ್ವವಿದೆಯಲ್ಲ, ಅದೇ ಈ ಜಗತ್ತಿಗೆಲ್ಲ ಆತ್ಮವು. ಅದೇ ಇದರ ಸಾರವು. ಹಗ್ಗವನ್ನು ನಸುಗತ್ತಲೆಯಲ್ಲಿ ಹಾವೆಂದು ಭ್ರಾಂತಿಯಿಂದ ಕಲ್ಪಿಸಿಕೊಂಡಮಾತ್ರದಿಂದ ಅದು ನಿಜವಾಗಿಯೂ ಹಾವಾಗುವದೇನು? ಇಲ್ಲ. ಅದು ಆಗಲೂ ಹಗ್ಗವೇ. ಹೇಗೆ ಹಗ್ಗವೇ ಕಲ್ಪಿತವಾದ ಹಾವಿಗೆ ಆತ್ಮವೋ, ಹೇಗೆ ಹಾವೆಂದು ತೋರುತ್ತಿರುವ ಹೆಡೆ, ಮೈ, ಬಾಲ– ಎಲ್ಲವೂ ಹಗ್ಗವೇ ಆಗಿರುವದೋ, ಹಾಗೆ ಜಗತ್ತೆಂದು ತೋರುತ್ತಿರುವದೆಲ್ಲವೂ ನಿಜವಾಗಿ ಆ ಸತ್ತೇ ಆಗಿರುತ್ತದೆ. ಹೇಗೆ ದೃಷ್ಟಾಂತದಲ್ಲಿ ಹಾವೆಂದು ತೋರುತ್ತಿರುವದು ನಿಜವಾಗಿ ಹಾವಿನ ರೂಪದಿಂದ ಅಸತ್ತೇ ಆಗಿರುವದೋ, ಹೇಗೆ ಹಗ್ಗವೇ ಅದರ ಆತ್ಮವಾಗಿ, ಅದರ ತಿರುಳಾಗಿ, ಇರುವದೋ, ಅದರಂತೆ ಹೊರಗಿನ ವಿಷಯಗಳು, ಶರೀರ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ–ಎಂದು ಮುಂತಾಗಿ ತೋರುತ್ತಿರುವ ಅನಾತ್ಮವೆಲ್ಲವೂ ಆ ತೋರಿಕೆಯ ಅನಾತ್ಮರೂಪದಿಂದ ಅಸತ್ತೇ ಆಗಿರುತ್ತದೆ; ಸದ್ರೂಪನಾದ ಆತ್ಮನೇ ಅನಾತ್ಮಕ್ಕೂ ತಿರುಳಾಗಿರುತ್ತದೆ. ಎಲೈ ಶ್ವೇತಕೇತುವೆ, ನೀನು ಈ ದೇಹೇಂದ್ರಿಯಾದಿರೂಪ ದವನಲ್ಲ, ನಿಜವಾಗಿ ಆ ಸದ್ರೂಪವಾದ ತತ್ತ್ವವೇ ಆಗಿರುತ್ತೀಯೆ ಎಂದು ಉದ್ದಾಲಕನು "ಐತದಾತ್ಮ್ಯಮಿದಂ ಸರ್ವಮ್" ಎಂದು ಮುಂತಾಗಿ ಎರಡನೆಯ ವಾಕ್ಯದಿಂದ ತಿಳಿಸಿಕೊಟ್ಟಿರುತ್ತಾನೆ.

ವೇದಾಂತಿಗಳು ಬ್ರಹ್ಮವೇ ಸತ್ಯವು ಎನ್ನುತ್ತಾರಷ್ಟೆ? ಆ ವಾಕ್ಯಕ್ಕೆ ಹೀಗೆಯೇ ಅರ್ಥವನ್ನು ಮಾಡಿಕೊಳ್ಳಬೇಕು. ಬ್ರಹ್ಮವೊಂದು, ಜಗತ್ತೊಂದು–ಹೀಗೆ ಎರಡು ಪದಾರ್ಥಗಳಿವೆ; ಅವುಗಳಲ್ಲಿ ಬ್ರಹ್ಮವು ಸತ್ಯ, ಜಗತ್ತು ಮಿಥ್ಯೆ–ಎಂದೇನೂ ಅರ್ಥವಲ್ಲ. ಬ್ರಹ್ಮವೊಂದೇ ನಿಜವಾಗಿ ಇರತಕ್ಕದ್ದು, ಜಗತ್ತೆಂಬುದು ಅದರಲ್ಲಿ ಕಲ್ಪಿತವಾಗಿರುವ ಹುಸಿತೋರಿಕೆ. ಬ್ರಹ್ಮಕ್ಕಿಂತ ಬೇರೆಯಾಗಿ ಜಗತ್ತೆಂಬುದು ಇಲ್ಲವೇ ಇಲ್ಲ. ಆ ಬ್ರಹ್ಮವೇ ಎಲ್ಲಾ ಜಗತ್ತಿಗೂ ಆತ್ಮವು, ಎಲ್ಲಾ ಜಗತ್ತಿನ ತಿರುಳು. ತೋರುವ ಎಲ್ಲಾ ಪ್ರಾಣಿಗಳೂ ನಿಜವಾಗಿ ಆ ಬ್ರಹ್ಮವೇ; ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೊಂದೂ ಇಲ್ಲವೇ ಇಲ್ಲ ಎಂದು ಅರಿಯಬೇಕು.

ಈಗ ಗೀತೆಯಲ್ಲಿ ಇದೇ ಅಭಿಪ್ರಾಯವನ್ನು ಹೇಗೆ ತಿಳಿಸಿದೆ ಎಂಬುದನ್ನು ನೋಡೋಣ. "ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ । ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥" (2–16) ಅಸತ್ತಿಗೆ ಇರವು ಇಲ್ಲ, ಸತ್ತಿಗೆ ಅಭಾವವಿಲ್ಲ; ಇವೆರಡರ ನಿರ್ಣಯವನ್ನು ತತ್ತ್ವದರ್ಶಿಗಳು ಕಂಡುಕೊಂಡಿರುತ್ತಾರೆ. ಇದ್ದದ್ದು ಹೋಗುವದಿಲ್ಲ, ಇಲ್ಲದ್ದು ಬರುವದಿಲ್ಲ–ಎಂದು ಲೋಕದ ಜನರು ಸಾಮಾನ್ಯವಾಗಿ ಆಡಿಕೊಳ್ಳುತ್ತಿರುತ್ತಾರಲ್ಲವೆ? ಆ ನಾಣ್ಣುಡಿಯಲ್ಲಿಯೂ ಈ ಗಂಭೀರಾರ್ಥವೇ ಅಡಗಿರುತ್ತದೆ. ಸತ್ತು, ಅಸತ್ತು–ಎಂದು ಎರಡು ಪದಾರ್ಥಗಳನ್ನು ವಿಂಗಡಿಸಿ ಹೇಳಿರುತ್ತದೆ ಎಂದು ತಿಳಿಯಬಾರದು. ಅಸತ್ತು ಎಂಬುದು ಬರಿಯ ವಿಕಲ್ಪವೇ, ಅದು ಬರಿಯ ತೋರಿಕೆಯೇ–ಎಂಬುದೇ ಇಲ್ಲಿ ತಿಳಿಯಬೇಕಾದದ್ದು.

ಸತ್ಯವೆಂದರೆ ಯಾವದು? ಯಾವದು ಸ್ವರೂಪದಿಂದ ಬದಲಾಯಿಸದೆ ಇರುವದೋ, ಒಂದಾನೊಂದು ರೂಪದಿಂದ ನಿಶ್ಚಿತವಾದಮೇಲೆ ಆ ರೂಪವನ್ನು ಎಂದಿಗೂ ಮಾರ್ಪಡಿಸಿಕೊಳ್ಳದೆ ಇರುವದೋ, ಅದೇ ಸತ್ತು. ಅಸತ್ತೆಂಬುದು ಹಾಗಿಲ್ಲ, ಅದು ಕಾಲನೇಮಿಯಂತೆ ಮತ್ತೆಮತ್ತೆ ತನ್ನ ರೂಪವನ್ನು ಬದಲಾಯಿಸಿಕೊಳ್ಳುತ್ತಲೇ ಇರುತ್ತದೆ. ಮಡಕೆಯೆಂಬುದು ಒಂದು ವಸ್ತುವೆಂದು ಮೊದಲು ತೋರಿದರೂ ಅದು ಮಣ್ಣಿಗಿಂತ ಬೇರೆಯಾಗಿಲ್ಲ; ಆದ್ದರಿಂದ ಕುಡಿಕೆ, ಮಡಕೆ-ಮುಂತಾದ ಕಾರ್ಯವಸ್ತುಗಳೆಲ್ಲವೂ ಕಾರಣವಾದ ಮಣ್ಣೇ ಎಂದು ನಿರ್ಧರಿಸಬೇಕಾಗುತ್ತದೆ. ಆ ಮಣ್ಣು ತನ್ನ ಅವಯವಗಳಿಗಿಂತ ಬೇರೆಯಾಗಿರುವದಿಲ್ಲ. ಹೀಗೆ ಕಾರ್ಯರೂಪವಾದ ವಸ್ತುಗಳೆಲ್ಲವೂ ತಮ್ಮ ರೂಪವನ್ನು ಮಾರ್ಪಡಿಸಿಕೊಳ್ಳುತ್ತಲೇ ಇರುತ್ತವೆ. ಅಂತೂ ಆತ್ಮ, ಅನಾತ್ಮ-ಈ ಎರಡರೊಳಗೆ ಆತ್ಮನು ತನ್ನ ಸ್ವರೂಪವನ್ನು ಎಂದಿಗೂ ಮಾರ್ಪಡಿಸಿಕೊಳ್ಳುವದಿಲ್ಲ ವಾದ್ದರಿಂದ ಅವನೇ ಸತ್ತು (ಇರವು) ಎನಿಸಿಕೊಳ್ಳು ವದಕ್ಕೆ ಅರ್ಹನು; ಇನ್ನು ಅನಾತ್ಮನು ಮತ್ತೆ ಮತ್ತೆ ಸ್ವರೂಪವನ್ನು ಮಾರ್ಪಡಿಸಿಕೊಳ್ಳುತ್ತಲೇ ಇರುವದರಿಂದ, ಯಾವದೊಂದು ನಿಶ್ಚಿತವಾದ ರೂಪವನ್ನೂ ಗೊತ್ತಾಗಿ ಇಟ್ಟುಕೊಂಡಿರುವದಿಲ್ಲವಾದ್ದರಿಂದ, ಅದು ಅಸತ್ತು, ಹುಸಿ ಎನ್ನಿಸಿಕೊಳ್ಳುವದಕ್ಕೆ ತಕ್ಕದ್ದು.

ಭಗವದ್ಗೀತೆಯಲ್ಲಿ ಆತ್ಮನನ್ನು ಸತ್, ಅವಿನಾಶಿ, ನಿತ್ಯ-ಎಂಬ ಮಾತುಗಳಿಂದ ಕರೆದಿರುತ್ತದೆ; ಅನಾತ್ಮವನ್ನು ಅಸತ್, ಅನ್ತವತ್, ಅನಿತ್ಯ-ಎಂಬ ಮಾತುಗಳಿಂದ ಕರೆದಿರುತ್ತದೆ. ಇವೆಲ್ಲ ಪರ್ಯಾಯಶಬ್ದಗಳು, ಎಂದರೆ ಒಂದೇ ಅರ್ಥವುಳ್ಳ ಶಬ್ದಗಳು. ಇದನ್ನು ನಾವು ನೆನಪಿನಲ್ಲಿಟ್ಟಿರಬೇಕು.

ಆತ್ಮನು ಸದ್ರೂಪನು, ಅವಿನಾಶಿ, ನಿತ್ಯ ಎಂಬುದನ್ನೂ ಅನಾತ್ಮವು ಅಸತ್ತು, ಅಂತವುಳ್ಳದ್ದು, ಅನಿತ್ಯ ಎಂಬುದನ್ನೂ ಹೇಗೆ ತಿಳಿದುಕೊಳ್ಳಬೇಕು? ಈ ತಿಳಿವಳಿಕೆಯನ್ನು ಯಾವ ಸಾಧನದಿಂದ ಸಂಪಾದಿಸಿಕೊಳ್ಳಬೇಕು? ಇದನ್ನು ವಿಚಾರ ಮಾಡುವದು ಅವಶ್ಯ. ಏಕೆಂದರೆ ಬಾವಿಯಲ್ಲಿ ಮುಳುಗಿ ಕೊಡವನ್ನು ಹುಡುಕುತ್ತಿರುವವನಿಗೆ ಅದನ್ನು ಕಾಣುವದಕ್ಕೆ ಕಣ್ಣು ಉಪಯೋಗಕ್ಕೆ ಬರುವದಿಲ್ಲ; ಅದಕ್ಕೆ ಕೈ ಬೇಕಾಗುತ್ತದೆ. ನೀರಿನಲ್ಲಿ ಕರಗಿದ ಉಪ್ಪನ್ನು ಕಾಣುವದಕ್ಕೆ ಕೈ ಬೇಕಾಗುವದಿಲ್ಲ, ಅದಕ್ಕೆ ನಾಲಗೆ ಬೇಕಾಗುತ್ತದೆ. ತಲೆನೋವನ್ನು ಅರಿತುಕೊಳ್ಳುವದಕ್ಕೆ ಕಣ್ಣು, ಕಿವಿ-ಮುಂತಾದ ಯಾವ ಇಂದ್ರಿಯವೂ ಉಪಯೋಗಕ್ಕೆ ಬರುವದಿಲ್ಲ; ಏಕೆಂದರೆ ನೋವೆಂಬುದು ಅತೀಂದ್ರಿಯವಾಗಿರುತ್ತದೆ; ಅದಕ್ಕೆ ಮನಸ್ಸೇ ಬೇಕಾಗುತ್ತದೆ. ಇದರಂತೆ ಆತ್ಮನ ಸ್ವರೂಪವನ್ನು ನಿರ್ಣಯಿಸಿಕೊಳ್ಳುವದಕ್ಕೆ ಯಾವ ಸಾಧನವು ಬೇಕು? "ವಾಕ್ಕಿನಿಂದಲಾಗಲಿ, ಮನಸ್ಸಿನಿಂದಲಾಗಲಿ, ಚಕ್ಷುಸ್ಸಿನಿಂದಲಾಗಲಿ ಇವನನ್ನು ಪಡೆಯುವದಕ್ಕೆ ಆಗುವದಿಲ್ಲ; ಆತ್ಮನು ಇದಾನೆ ಎಂದು ಆಗಮಾನುಸಾರವಾಗಿ ನಂಬಿ ವಿಚಾರಮಾಡುವವನ ಅನುಭವದಿಂದಲೇ ಅದು ತಿಳಿಯಬರುತ್ತದೆ" ಎಂದು ಕಠೋಪನಿಷತ್ತಿನಲ್ಲಿ (2-3-12) ಹೇಳಿರುತ್ತದೆ. ಆತ್ಮಸ್ವರೂಪವು ಎಲ್ಲಕ್ಕೂ ಒಳಗೆ ಇರುತ್ತದೆ;

ಇದನ್ನು ಬಲ್ಲವರ ಉಪದೇಶದಿಂದ ತನ್ನೊಳಗೇ ಹುಡುಕಿ ಅರಿತುಕೊಳ್ಳಬೇಕಾಗಿದೆ. ಇಂದ್ರಿಯಗಳಿಗಾಗಲಿ ಮನಸ್ಸಿಗಾಗಲಿ ಸಿಕ್ಕದೆ ಇರುವವನು ಆತ್ಮನು; ಆದ್ದರಿಂದ ಅವನನ್ನು ಜ್ಞಾನೇಂದ್ರಿಯಗಳಿಂದ ಅರಿತುಕೊಳ್ಳುವದಕ್ಕಾಗಲಿ ಕರ್ಮೇಂದ್ರಿಯಗಳಿಂದ ಪಡೆದುಕೊಳ್ಳುವದಕ್ಕಾಗಲಿ ಪ್ರಯತ್ನಿಸುವದು ತಪ್ಪಾಗಿರುತ್ತದೆ. ಅವನನ್ನು ಅರಿಯುವದಕ್ಕೆ ಆಗಮವೇ, ಬಲ್ಲವರು ತಿಳಿಸಿದ ಪ್ರಕಾರದಿಂದ ಅನುಭವದಲ್ಲಿ ಕಂಡುಕೊಳ್ಳುವದೇ, ಉಪಾಯವು.

ಇದನ್ನೇ ಭಗವದ್ಗೀತೆಯಲ್ಲಿಯೂ ಹೇಳಿರುತ್ತದೆ. "ಅವ್ಯಕ್ತೋಽಯಮಚಿನ್ತ್ಯೋಽಯಮ-ವಿಕಾರ್ಯೋಽಯಮುಚ್ಯತೇ । ತಸ್ಮಾದೇವಂ ವಿದಿತ್ವೈವಂ ನಾನು ಶೋಚಿತುಮರ್ಹಸಿ॥" ಇವನು ಅವ್ಯಕ್ತನು, ಇವನು ಅಚಿಂತ್ಯನು, ಇವನು ಅವಿಕಾರ್ಯನೆನಿಸುವನು; ಆದ್ದರಿಂದ ಇವನನ್ನು ಹೀಗೆಂದು ಅರಿತುಕೊಂಡು ಶೋಕಿಸದೆ ಇರು-ಎಂದು ಭಗವಂತನು ಹೇಳಿರುತ್ತಾನೆ. ಇಂದ್ರಿಯಗಳಿಗೆ ಗೋಚರವಾಗುವದು ಯಾವದೋ ಅದು ವ್ಯಕ್ತವೆನಿಸುವದು; ಕನ್ನಡಿಯಲ್ಲಿ ಮಾರುಹೊಳೆಯುವ ಮುಖದಂತೆ ವಿಷಯಗಳ ರೂಪವು ಇಂದ್ರಿಯಗಳಲ್ಲಿ ಹೊಳೆಯುತ್ತದೆ. ಆದ್ದರಿಂದ ಇಂದ್ರಿಯಗಳು ವ್ಯಂಜಕ, ವಿಷಯವು ವ್ಯಕ್ತ ಎನ್ನಿಸುತ್ತವೆ. ಆದರೆ ಆತ್ಮನು ಹಾಗೆ ಇಂದ್ರಿಯಗಳಿಂದ ತೋರಿಸಿಕೊಡುವದಕ್ಕೆ ಆಗುವ ಸ್ವರೂಪದವನಲ್ಲ, **ಅವ್ಯಕ್ತನು**. ಯಾವದನ್ನು ಇಂದ್ರಿಯಗಳು ವಿಷಯೀಕರಿಸಿ ಬೆಳಗಿ ತೋರಬಲ್ಲವೋ ಅದನ್ನು ಮನಸ್ಸೂ ಚಿಂತಿಸಬಲ್ಲದ್ದಾಗಿರುವದು; ಆದರೆ ಆತ್ಮನು ಇಂದ್ರಿಯಗಳಿಂದ ವ್ಯಕ್ತನಾಗುವವನಲ್ಲ; ಆದ್ದರಿಂದ ಅವನು **ಅಚಿಂತ್ಯನು**, ಮನಸ್ಸಿಗೆ ಚಿಂತ್ಯನೂ ಅಲ್ಲ. ಅನಾತ್ಮವಾದದ್ದು ಅವಯವಗಳುಳ್ಳದ್ದಾದ್ದರಿಂದ ಅದನ್ನು ಏತರಿಂದಲಾದರೂ ಮಾರ್ಪಡಿಸುವದಕ್ಕೆ ಆಗುತ್ತದೆ; ಆದ್ದರಿಂದ ಅದರ ಮಾರ್ಪಾಡುಗಳನ್ನು ನೋಡಿ ಅವುಗಳಿಂದ ಇಂಥಿಂಥ ಮಾರ್ಪಾಡುಗಳಾಗುವ ಸ್ವಭಾವದ ವಸ್ತುವಿದು ಎಂದು ಅರಿತುಕೊಳ್ಳಬಹುದು. ಭೌತಿಕವಿಜ್ಞಾನದಲ್ಲಿ ಪ್ರಯೋಗಗಳಿಂದ (Experiments) ವಸ್ತುವಿನ ಸ್ವಭಾವವನ್ನು ನಿರ್ಣಯಿಸುವದು, ಅದರ ಮಾರ್ಪಾಡುಗಳಿಂದಲೇ; ಆದರೆ ಆತ್ಮನು ಮಾರ್ಪಡುವವನೇ ಅಲ್ಲ; ಅವನು **ಅವಿಕಾರ್ಯನು**. ಹೀಗೆ ಪ್ರಮೇಯವಿಷಯಗಳ ಸ್ವಭಾವವು ಯಾವದೂ ಇಲ್ಲದ್ದರಿಂದ ಅವನನ್ನು ಅರಿತುಕೊಳ್ಳುವದಕ್ಕೆ ಇಂದ್ರಿಯಗಳನ್ನಾಗಲಿ ಮನಸ್ಸನ್ನಾಗಲಿ ಉಪಯೋಗಿಸಬಾರದು. ಆದರೂ ಅವನನ್ನು ಹೀಗೆಂದು ಅರಿತುಕೊಂಡರೆ ಶೋಕವಾಗುವದಿಲ್ಲ- ಎಂದಿರುವದರಿಂದ ಇಂದ್ರಿಯಮನಸ್ಸುಗಳಿಗಿಂತಲೂ ಬೇರೊಂದು ಸಾಧನದಿಂದ ಅವನನ್ನು ಅರಿತುಕೊಳ್ಳಬೇಕೆಂದಾಗುತ್ತದೆ. ಅದೇ ಶಾಸ್ತ್ರದ ಅಥವಾ ಬಲ್ಲವರ ಉಪದೇಶದಿಂದ ಉಂಟಾಗುವ ಅನುಭವವು. ಆ ಅನುಭವದಿಂದಲೇ ಆತ್ಮನನ್ನು ಅರಿತುಕೊಳ್ಳಬೇಕು.

ಶ್ರುತಿಯಲ್ಲಿ ಆತ್ಮನನ್ನು ಎಂಥವನೆಂದು ಕಂಡುಕೊಳ್ಳಬೇಕೆಂಬುದನ್ನು ಹೀಗೆಂದು ವರ್ಣಿಸಿದೆ: "ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ

ವಿಜಿಘತ್ಸೋऽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋऽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ" (ಛಾಂ. 8-7-1) ಧರ್ಮಾಧರ್ಮಗಳನ್ನು ಮೀರಿರುವ, ಮುಪ್ಪಿಲ್ಲದ, ಶೋಕರಹಿತನಾದ, ಹಸಿವುಬಾಯಾರಿಕೆಗಳಿಲ್ಲದವನಾದ, ಸತ್ಯಕಾಮನಾದ, ಸತ್ಯಸಂಕಲ್ಪನಾದ ಆತ್ಮನುಂಟಷ್ಟೆ, ಅವನನ್ನು ಹುಡುಕಬೇಕು, ಅವನನ್ನು ಅರಿತುಕೊಳ್ಳಬೇಕು. ಈಗ ನಮ್ಮ ಆತ್ಮನು ಪಾಪಪುಣ್ಯಕರ್ಮಗಳನ್ನು ಮಾಡುವನೆಂತಲೂ ಅವುಗಳ ಫಲವನ್ನು ಅನುಭವಿಸುವದಕ್ಕೆ ಶರೀರಧಾರಣೆಮಾಡುವವನೆಂತಲೂ ನಮಗೆ ತೋರುತ್ತಿದೆ. ಇವನಿಗೆ ಮುಪ್ಪುಸಾವುಗಳುಂಟು, ಹಸಿವು ನೀರಡಿಕೆಗಳೂ ಉಂಟು, ಇವನು ಯಾವದನ್ನು ಬಯಸಿದರೆ ಅದು ಸಿಕ್ಕುವದೆಂಬ ಭರವಸೆಯಿಲ್ಲ. ಏನು ಸಂಕಲ್ಪಮಾಡಿದರೆ ಅದು ಸಿದ್ಧಿಸುವದೆಂಬ ನಂಬಿಕೆಯೂ ಇಲ್ಲ. ಹೀಗಿದ್ದರೂ ಒಳಹೊಕ್ಕು ನೋಡಿದರೆ ಇವನೊಳಗೆ ಸರ್ವಾಂತರ್ಯಾಮಿಯಾದ ಆತ್ಮನೊಬ್ಬನಿರುವನು, ಅವನ ರೂಪವು ಈಗ ನಮಗೆ ತಿಳಿದುಬರುವ ರೂಪಕ್ಕಿಂತ ಅತ್ಯಂತವಿಲಕ್ಷಣವಾಗಿರುತ್ತದೆ. ಅವನನ್ನು ಕಂಡುಕೊಳ್ಳಬೇಕು, ಅವನನ್ನು ಇವನೇ ಆತ್ಮನು ಎಂದು ಅರಿತುಕೊಳ್ಳಬೇಕು.

ಈ ಆತ್ಮನನ್ನು ಹುಡುಕುವದೆಂದರೇನು? ಆತ್ಮನಿಂದಲೇ ಎಲ್ಲವೂ ವ್ಯಾಪ್ತವಾಗಿದೆ ಎಂದರೇನು? ಶಾಸ್ತ್ರಾಚಾರ್ಯರ ಉಪದೇಶದಿಂದ ಅವನನ್ನು ಅರಿತುಕೊಳ್ಳುವದೆಂದರೆ ಹೇಗೆ? ಇದನ್ನು ಇನ್ನುಮುಂದೆ ವಿಮರ್ಶಿಸಿ ತಿಳಿದುಕೊಳ್ಳಬೇಕಾಗಿದೆ.

## 4.10. ಆತ್ಮನು ಆಗಮಗಮ್ಯನು

**ಹಂತಾ ಚೇನ್ಮನ್ಯತೇ ಹಂತುಂ ಹತಶ್ಚೇನ್ಮನ್ಯತೇ ಹತಮ್ ।**
**ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥ ಕಾ. 1.2.19**

ಪರಮಾರ್ಥತತ್ತ್ವವು ನಮ್ಮ ಆತ್ಮನೇ ಆಗಿರುತ್ತದೆ. ಅದು ಅಜಾದ್ವೈತವು, ಎಂದರೆ ಜನ್ಮಾದಿವಿಕಾರಗಳಿಲ್ಲದ್ದು, ತನಗೆ ಎರಡನೆಯದಿಲ್ಲದ್ದು. ಹೀಗೆ ಇದ್ದರೂ ನಮಗೇಕೆ ಅದು ತಿಳಿಯುವದಿಲ್ಲ? ನಮ್ಮ ಆತ್ಮನನ್ನು ನಾವು ತಿಳಿಯದಿರುವದಕ್ಕೆ ಕಾರಣವೇನು? ಎಂದರೆ ಅಜ್ಞಾನವೇ ಇದಕ್ಕೆ ಕಾರಣ. ಆತ್ಮಸ್ವರೂಪವನ್ನು ನಾವು ಸರಿಯಾಗಿ ತಿಳಿದುಕೊಂಡಿಲ್ಲವೆಂಬುದಿಷ್ಟೇ ಅಲ್ಲ. ಅದನ್ನು ನಾವು ಸರಿಯಾಗಿ ತಿಳಿದುಕೊಂಡಿದ್ದೇವೆಂದೇ ಹೆಮ್ಮೆಪಡುತ್ತಿರುತ್ತೇವೆ. ತಿಳಿಯದಿರುವದು ಅನರ್ಥಕ್ಕೆ ಮೂಲ, ತಪ್ಪಾಗಿ ತಿಳಿದುಕೊಂಡು ಅದೇ ಸರಿಯಾದ ತಿಳಿವಳಿಕೆ ಎಂದುಕೊಂಡಿರುವದು ಇನ್ನೂ ಹೆಚ್ಚಿನ ಅನರ್ಥಕ್ಕೆ ಕಾರಣವಾಗಿರುತ್ತದೆ.

ಅಜ್ಞಾನವೆಂದರೇನು? ಅದು ಆತ್ಮನ ಮರಹಲ್ಲ, ನಾವು ಒಂದಾನೊಂದು ದಿನ

ಆತ್ಮನನ್ನು ಮರೆತೆವೆಂಬ ಅಭಿಪ್ರಾಯವೇನೂ ಇಲ್ಲಿಲ್ಲ. ಈ ಅಜ್ಞಾನವೆಂಬುದೊಂದು ಸಾರ್ವತ್ರಿಕಭ್ರಾಂತಿ. ಮನುಷ್ಯನು ಸ್ವಭಾವದಿಂದಲೇ ಇಂದ್ರಿಯಗಳನ್ನು ಉಪಯೋಗಿಸಿಕೊಂಡು ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಿದ್ದಾನೆ. ಇಂದ್ರಿಯಗಳು ಸ್ವಭಾವದಿಂದಲೇ ಹೊರಮುಖವಾಗಿವೆ. ಅವುಗಳಿಂದ ಆತ್ಮನನ್ನು ವಿಷಯೀಕರಿಸಿಕೊಂಡು ಅರಿಯುವದು ಎಂದಿಗೂ ಆಗುವಂತಿಲ್ಲ. ಇಂದ್ರಿಯ ಜ್ಞಾನವು ಆತ್ಮಜ್ಞಾನಕ್ಕೆ ಅಡ್ಡಿಯೇ ಆಗಿರುತ್ತದೆ. ಆದ್ದರಿಂದ ಅದೇ ಅಜ್ಞಾನವು. "ಪರಾಞ್ಚಿಖಾನಿ ವ್ಯತೃಣತ್ಸ್ವಯಮ್ಭೂಸ್ತ-ಸ್ಮಾತ್ಪರಾಙ್ಪಶ್ಯತಿ ನಾನ್ತರಾತ್ಮನ್" ಎಂಬ ಶ್ರುತಿಯಲ್ಲಿ ಇಂದ್ರಿಯಜ್ಞಾನವನ್ನು ಪಯೋಗಿಸುತ್ತಿರುವವರು ಒಳಗಿನ ಆತ್ಮನನ್ನು ಏಕೆ ಕಾಣಲಾರರೆಂಬುದನ್ನು ತಿಳಿಸಿದೆ. "ಅವ್ಯಕ್ತೋಽಯಮಚಿನ್ತ್ಯೋಽಯಮ್" ಎಂಬ ಗೀತೆಯಲ್ಲಿ ಆತ್ಮನು ಇಂದ್ರಿಯಗಳಿಗೂ ಮನಸ್ಸಿಗೂ ಅವಿಷಯನೆಂದೂ ಹೇಳಿರುತ್ತದೆ.

ಇಂದ್ರಿಯಜ್ಞಾನವನ್ನು ಅಜ್ಞಾನವೆಂದು ಕರೆದಿರುವದು ಸಾಮಾನ್ಯವಾಗಿ ವ್ಯಾವಹಾರಿಕರಿಗೆ ವಿರುದ್ಧವಾಗಿಯೇ ತೋರುತ್ತದೆ. ಯಾರೊಬ್ಬರೂ ಇಂದ್ರಿಯಗಳಿಲ್ಲದೆ ಇರುವ ಸಂಭವವಿಲ್ಲ. ಇಂದ್ರಿಯಗಳಿಂದ ಪರೀಕ್ಷೆಮಾಡಿ ತಿಳಿದುಕೊಂಡದ್ದೇ ಅಜ್ಞಾನವಾದರೆ, ಇನ್ನು ಸುಜ್ಞಾನವು ಯಾವದು?-ಎಂಬ ಶಂಕೆಯುಂಟಾಗುತ್ತದೆ. ಕುರುಡರ ಕಣಿವೆಯೊಂದು ಇತ್ತಂತೆ; ಅಲ್ಲಿದ್ದವರೆಲ್ಲ ಸ್ವಭಾವದಿಂದಲೇ ಕುರುಡರಾಗಿದ್ದರು. ಅವರೊಳಗೆ ಒಬ್ಬನು ಕಣ್ಣುಳ್ಳವನು ಬಂದನು. ಅವನು ಅರುಣೋದಯವನ್ನು ಕಂಡು "ಹೇಗೆ ಕೆಂಪಗಿದೆ!" ಎಂದು ಬಣ್ಣಿಸಿದನು. ಆದರೆ ಕೆಂಪಗೆ ಎಂದರೇನು? ಈ ಮಾತಿಗೆ ಆ ಕುರುಡರಿಗೆ ಅರ್ಥವಾಗಲಿಲ್ಲ, ಅವರು "ಇವನಿಗೆ ಯಾವದೋ ರೋಗವಿದೆ, "ಕೆಂಪಗೆ" ಎಂಬ ಪದಾರ್ಥವೇ ಇಲ್ಲದಿದ್ದರೂ ಇದೆಯೆನ್ನುತ್ತಾನೆ"- ಎಂದುಕೊಂಡರಂತೆ. ಸಾಮಾನ್ಯ ಜನರೆಲ್ಲರೂ ಇಂದ್ರಿಯವನ್ನೇ ಉಪಯೋಗಿಸಿಕೊಂಡು, ಅದರಿಂದಾದ ತಿಳಿವಳಿಕೆಯೇ ನಿಜವಾದ ತಿಳಿವಳಿಕೆ ಎಂದುಕೊಂಡಿರುತ್ತಾರೆ. ಅವರು ಆತ್ಮತತ್ತ್ವದ ವಿಷಯಕ್ಕೆ ಕುರುಡರೇ ಆಗಿರುತ್ತಾರೆ. ಇಂದ್ರಿಯಗಳಿಗೆ ಗೋಚರವಾಗುವದಲ್ಲ, ಮನಸ್ಸಿಗೆ ತಿಳಿಯಬರುವದೂ ಅಲ್ಲ-ಎಂದರೆ "ಅಂಥ ವಸ್ತುವೆಲ್ಲಿದ್ದೀತು?" ಎಂದು ಕೇಳುತ್ತಾರೆ. ಕುರುಡರೇ ದಾರಿತೋರಿಸುವವರಾಗಿ ಅವರು ಹೇಳಿದ ದಾರಿಯಲ್ಲಿ ನಡೆಯುವವರೂ ಕುರುಡರೇ ಆಗಿದ್ದರೆ ಕಣ್ಣಿರುವವರನ್ನು ಕೇಳುವವರು ಯಾರು? ಹೀಗೆಯೇ ವ್ಯವಹಾರದಲ್ಲಿರುವವರಿಗೆಲ್ಲ ಜ್ಞಾನಿಗಳು ಹೇಳುವದು ಅವಿಶ್ವಸನೀಯವಾಗಿ ಕಾಣುತ್ತಿರುತ್ತದೆ.

ಆದರೂ ಸ್ವಲ್ಪ ವಿಮರ್ಶೆಮಾಡಿದರೆ ಜ್ಞಾನಿಗಳು ಹೇಳುವದು ಅಂಥ ಅಸಂಭಾವಿತವೇನೂ ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಹೇಗೆಂದರೆ ನಾನು ನೋಡುವವನು, ನಾನು ಕೇಳುವವನು, ನಾನು ಚಿಂತಿಸುವವನು-ಎಂದು ದರ್ಶನ, ಶ್ರವಣ, ಮನನ-

ಮುಂತಾದ ವ್ಯವಹಾರದಲ್ಲಿ ನಾನು ಎಂಬುದನ್ನು ಮೊದಲೇ ಸಿದ್ಧವಾಗಿಟ್ಟುಕೊಂಡೇ ನಾವೆಲ್ಲರೂ ವ್ಯವಹರಿಸುತ್ತಿದೇವೆ. ನಾನು ಎಂಬುದೇ ಇಲ್ಲವಾದರೆ ನೋಡುತ್ತೇನೆ ಎಂಬುದೆಲ್ಲಿ ಬಂತು? ಕೇಳುತ್ತೇನೆ, ಚಿಂತಿಸುತ್ತೇನೆ ಎಂಬುದೆಲ್ಲಿ ಬಂತು? ನಾನು ಎಂಬುದು ಮೊದಲು ಇದ್ದರೇ ಮನಸ್ಸು ನನ್ನದು, ಇಂದ್ರಿಯಗಳು ನನ್ನವು, ಶರೀರವು ನನ್ನದು- ಎಂಬ ವ್ಯವಹಾರವು ಏರ್ಪಡುತ್ತದೆ. ಶರೀರ, ಇಂದ್ರಿಯಗಳು, ಮನಸ್ಸು-ಇವು ನನಗೆ ಸಂಬಂಧಪಟ್ಟಿವೆಯೊ, ಇಲ್ಲವೊ-ಅದನ್ನೀಗ ಒಳಹೊಕ್ಕು ವಿಚಾರಮಾಡಬೇಕಾಗಿಲ್ಲ. ಅವುಗಳು ಇವೆ ಎನ್ನುವದಕ್ಕೆ ಮೊದಲೆ ನಾನು ಎಂಬುದು ಇರಬೇಕು. ನಾನು ನನ್ನ ಮನಸ್ಸನ್ನು ಉಪಯೋಗಿಸಿಕೊಂಡು ಚಿಂತಿಸುತ್ತೇನೆ, ಚಕ್ಷುರಿಂದ್ರಿಯವನ್ನುಪ ಯೋಗಿಸಿಕೊಂಡು ನೋಡುತ್ತೇನೆ, ಶ್ರೋತ್ರೇಂದ್ರಿಯವನ್ನುಪಯೋಗಿಸಿಕೊಂಡು ಕೇಳುತ್ತೇನೆ- ಇತ್ಯಾದಿ. ಹೀಗಿರುವದರಿಂದ ಇಂದ್ರಿಯಗಳಿಂದಲೂ ಮನಸ್ಸಿನಿಂದಲೂ ನನ್ನ ಹೊರಗಿರುವ ಪ್ರಮೇಯವಸ್ತುಗಳನ್ನು ಅರಿತುಕೊಳ್ಳುವದು ಸ್ವಾಭಾವಿಕ; ಆದರೆ ಅವುಗಳನ್ನು ಉಪಯೋಗಿಸುವದಕ್ಕೂ ಮೊದಲೇ ಇದ್ದುಕೊಂಡಿರಬೇಕಾದ "ನಾನು" ಎಂಬ ವಸ್ತುವನ್ನು ಇಂದ್ರಿಯಗಳಿಂದಲಾಗಲಿ ಮನಸ್ಸಿನಿಂದಲಾಗಲಿ ವಿಷಯೀಕರಿಸಿಕೊಂಡು ಅರಿಯುತ್ತೇನೆ ಎಂಬುದು ಎಂಥ ಅಪಹಾಸ್ಯವಾದ ಮಾತಾಯಿತು! ನೋವಿಗೆ ತೂಕವಿಲ್ಲ ಎಂಬುದು ಗೊತ್ತಿರುವವರು "ನಿಮಗೆ ಎಷ್ಟು ತೂಕ ನೋವು ಆಗಿದೆ?" ಎಂದು ಯಾರಾದರೂ ಕೇಳುವರೆ? ಇಲ್ಲ. ಇದರಂತೆ ನಾನು ಎಂಬ ವಸ್ತು ಮೊದಲೇ ಸಿದ್ಧವಾಗಿದ್ದು ಅದನ್ನು ಕರಣಗಳಿಂದ ನೋಡುವದಕ್ಕೆ ಪ್ರಯತ್ನಿಸುವದು ಸರಿಯಾದ ತಿಳಿವಳಿಕೆಯಾದೀತೆ? ಕರಣಗಳಿಂದ ತಿಳಿಯುವದು ಹೊಸದಾಗಿ ಅರಿತುಕೊಳ್ಳಬೇಕಾಗಿರುವ ಪ್ರಮೇಯವಸ್ತುಗಳನ್ನ. ಸ್ವತಃಸಿದ್ಧವಾಗಿರುವ ಆತ್ಮನನ್ನು ಅರಿತುಕೊಳ್ಳುವದಕ್ಕೆ ಕರಣಗಳೇಕೆ ಬೇಕು? ಹೀಗಿದ್ದರೂ ಇಂದ್ರಿಯಗಳಿಂದಲೇ ವಸ್ತುಗಳನ್ನು ತಿಳಿದುಕೊಳ್ಳುವ ಸ್ವಭಾವವಿರುವದರಿಂದ ಇಂದ್ರಿಯಗೋಚರವಲ್ಲದಿದ್ದರೆ ವಸ್ತು ಇರುವದೇ ಇಲ್ಲ ಎಂಬ ತಪ್ಪುತೀರ್ಮಾನವಾಗುವದಕ್ಕೆ ಕಾರಣವಾಗಿರುತ್ತದೆ.

ಇನ್ನೊಂದು ವಿಚಾರ. ಆತ್ಮನನ್ನು "ನಾನು" ಎಂದು ಜನರು ಸ್ವಭಾವದಿಂದಲೇ ತಿಳಿದುಕೊಂಡಿದ್ದರೂ ಅವನನ್ನು ಸ್ವತಃಸಿದ್ಧನೆಂದೂ ಅಜನೆಂದೂ ತಿಳಿದುಕೊಂಡಿರುವದಿಲ್ಲ. ಶರೀರಾದಿಗಳಿಗಿಂತ ಬೇರೆಯಾಗಿ ನಾನು ಎಂಬ ವಸ್ತುವಿರಬಹುದೆಂಬುದು ಸ್ವಲ್ಪಮಟ್ಟಿಗೆ ನಮಗೆ ಒಪ್ಪಾಗಬಹುದು. ಆದರೆ ಆತ್ಮನಿಗೆ ಜನ್ಮಾದಿವಿಕಾರಗಳಿಲ್ಲವೆಂಬುದು ಮಾತ್ರ ನಮಗೆ ಒಗ್ಗುವದಿಲ್ಲ. ನಾನು ಹುಟ್ಟುತ್ತೇನೆ, ಬೆಳೆಯುತ್ತೇನೆ, ಮಾರ್ಪಡುತ್ತೇನೆ, ಸೊರಗುತ್ತೇನೆ, ಸಾಯುತ್ತೇನೆ-ಎಂದೇ ಎಲ್ಲರೂ ಭಾವಿಸಿಕೊಂಡಿರುತ್ತಾರೆ. ಶರೀರಕ್ಕೆ ಸೇರಿದ ಹುಟ್ಟು, ಬೆಳೆವಣಿಗೆ ಮುಂತಾದವು "ನಾನು" ಎಂಬ ಆತ್ಮನಿಗೆ ಹೇಗೆ ಆಗುತ್ತದೆ ಎಂಬುದು

ಅವರ ಮನಸ್ಸಿಗೆ ವಿಚಾರ್ಯವಾಗಿರುವದಿಲ್ಲ, ಹೇಗೂ ತಾವು ನಿತ್ಯವಾಗಿ ವಿಕಾರಗಳನ್ನು ಹೊಂದುತ್ತಿರುವವರೇ ಎಂದು ಅವರ ದೃಢವಾದ ವಿಶ್ವಾಸವಾಗಿಬಿಟ್ಟಿರುತ್ತದೆ. ಇದು ಅವಿದ್ಯೆಯಲ್ಲದೆ ಮತ್ತೇನು? "ಯಾವನು ನಾನು ಕೊಲ್ಲುತ್ತೇನೆ ಎಂದುಕೊಂಡಿರುವನೋ, ಯಾವನು ಕೊಲ್ಲಲ್ಪಡುತ್ತೇನೆ ಎಂದು ಮಾಡಿಕೊಂಡಿರುವನೋ-ಅವರಿಬ್ಬರು ಅರಿಯರು; ನಿಜವಾಗಿ ಈ ಆತ್ಮನು ಕೊಲ್ಲುವದೂ ಇಲ್ಲ, ಕೊಲ್ಲಲ್ಪಡುವದೂ ಇಲ್ಲ" ಎಂದು ಗೀತೆಯಲ್ಲಿ ಭಗವಂತನು ಹೇಳಿರುತ್ತಾನೆ. ಇದೇ ಮಾತನ್ನು ಯಮನು ನಚಿಕೇತನಿಗೆ ಹೇಳಿದಂತೆ ಕಠೋಪನಿಷತ್ತಿನಲ್ಲಿ ತಿಳಿಸಿದೆ. ಈ ಎರಡು ಕಡೆಯಲ್ಲಿಯೂ ಸಾವಿನ ವಿಚಾರವು ಬಂದಿತ್ತು. ಅರ್ಜುನನು ನಾನು ಇವರೆಲ್ಲರನ್ನೂ ಕೊಂದುಹಾಕುವೆನು-ಎಂದು ತಿಳಿದುಕೊಂಡು ಶೋಕಿಸುತ್ತಿದ್ದನು; ನಚಿಕೇತನು ಶರೀರವು ಸತ್ತ ಬಳಿಕ "ಜೀವನು ಸಾಯುವನೇನು?" ಎಂಬುದನ್ನು ತಿಳಿಯಲೆಳಸಿದ್ದನು. ಎರಡು ಸಂದರ್ಭಗಳಲ್ಲಿಯೂ ದೊರೆತ ಉತ್ತರವೂ ಒಂದೇ; ಆತ್ಮನಿಗೆ ಸಾವೇ ಇಲ್ಲ-ಎಂಬುದೇ ಆ ಉತ್ತರ. ಆತ್ಮನು ನಿಜವಾಗಿ ಅಹಂಪ್ರತ್ಯಯಗಮ್ಯನಲ್ಲ; ನಾನು ಎಂಬ ಪ್ರತ್ಯಯಕ್ಕೆ ಆಶ್ರಯನೂ ಅಲ್ಲ, ವಿಷಯನೂ ಅಲ್ಲ. ಜಾಗ್ರತ್ಸ್ವಪ್ನಗಳಲ್ಲಿ ನಾನು ಎಂದು ತೋರಿಕೊಂಡರೂ ಸುಷುಪ್ತಿಯಲ್ಲಿ ಆ ರೂಪವೇನೂ ಆತ್ಮನಿಗೆ ಇರುವದಿಲ್ಲ, ಆತ್ಮನಿಗೆ ಜನ್ಮ, ವೃದ್ಧಿ ಮುಂತಾದ ಯಾವ ವಿಕಾರಗಳೂ ಇಲ್ಲ; ಅವನು ಅಜನು ಎಂಬುದೇ ಶಾಸ್ತ್ರ ಸಿದ್ಧಾಂತ.

ಆತ್ಮನನ್ನು ಹೇಗೆ ತಿಳಿದುಕೊಳ್ಳಬೇಕು?-ಎಂಬ ಪ್ರಶ್ನೆಗೆ ಈಗ ಸ್ವಲ್ಪಮಟ್ಟಿಗೆ ಉತ್ತರವು ಹೊಳೆದಿರಬೇಕು. ಆತ್ಮನು ಇಂದ್ರಿಯಗಮ್ಯನಲ್ಲ, ಮನಸ್ಸಿಗೂ ವಿಷಯನಲ್ಲ; ಅವನು ಅಹಂಪ್ರತ್ಯಯಕ್ಕೆ ವಿಷಯನೂ ಅಲ್ಲ. ಆದರೂ ಅವನು ನಮ್ಮ ಸ್ವರೂಪವೇ ಆಗಿರುತ್ತಾನಾದ್ದರಿಂದ ಅವನು ಆಗಮಗಮ್ಯನು ಎಂದರೆ ಗುರುಶಿಷ್ಯಪರಂಪರೆಯಿಂದ ಅನುಭವಾನುಸಾರವಾಗಿ ಕ್ರಮವರಿತು ಮಾಡಿದ ಉಪದೇಶದಿಂದಲೇ ತಿಳಿಯಬರುವವನಾಗಿರುತ್ತಾನೆ.

ಆತ್ಮನು ಇಂದ್ರಿಯಗಳನ್ನು ಉಪಯೋಗಿಸುವ ಕರ್ತೃವಲ್ಲವೆ? ಕ್ರಿಯೆಯನ್ನು ಮಾಡಿ ಫಲವನ್ನು ಪಡೆಯುವ ಸ್ವರೂಪದವನಲ್ಲವೆ? ಇಂಥ ಕರ್ಮವನ್ನು ಮಾಡಿದರೆ ಇಂಥ ಫಲವು ಸಿಕ್ಕುವದೆಂದು ವೇದದ ಕರ್ಮಕಾಂಡದಲ್ಲಿಯೂ ಹೇಳಿದೆಯಲ್ಲ! ಆತ್ಮನು ನಿಜವಾಗಿ ಕರ್ತೃವಲ್ಲವಾದರೆ ಕರ್ಮಕಾಂಡಕ್ಕೆ ಪ್ರಾಮಾಣ್ಯವಿಲ್ಲದಂತಾಗುವದಿಲ್ಲವೆ?- ಎಂದು ಕೇಳಬಹುದು. ಆದರೆ ಕ್ರಿಯಾಕಾರಕಫಲ ವ್ಯವಹಾರವು ಸತ್ಯವೆಂದು ತಿಳಿದು ಕೊಂಡಿರುವವರಿಗೆ ಕಾರಕಗಳನ್ನು ಇದ್ದಂತೆ ಇಟ್ಟುಕೊಂಡು ಮುಮುಕ್ಷುಗಳಿಗೆ ಪಾಪಕ್ಷಯಾರ್ಥವಾಗಿಯೂ, ಕಾಮಿಗಳಿಗೆ ಫಲಪ್ರಾಪ್ತಿಗಾಗಿಯೂ ಸಾಧನವನ್ನು ಕರ್ಮಕಾಂಡವು ತಿಳಿಸುತ್ತದೆಯೇ ಹೊರತು, ಕಾರಕವು ಸತ್ಯವಾಗಿದೆಯೆಂದು

ತಾತ್ಪರ್ಯದಿಂದಲೇನೂ ಹೇಳುವದಿಲ್ಲ. ಜೀವನು ತಾನು ಮಾಡಿದ ಕರ್ಮಫಲವನ್ನು ಪಡೆಯುವದಕ್ಕೆ ಜನ್ಮಾಂತರದಲ್ಲಿಯೂ ಇರುತ್ತಾನೆ ಎಂದು ಅದರಿಂದ ಸಿದ್ಧವಾಗಬಹುದು; ಆದರೆ ಕರ್ಮಾದಿಗಳು ಪರಮಾರ್ಥವು ಎಂದು ಅದರಿಂದ ಏರ್ಪಡಲಾರದು. "ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ । ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥" ಎಂದು ಗೀತೆಯಲ್ಲಿಯೂ ಈ ಆತ್ಮನಿತ್ಯತ್ವವನ್ನು ಹೇಳಿರುತ್ತದೆ. ಆದ್ದರಿಂದ ಕ್ರಿಯಾಕಾರಕಗಳನ್ನು ಸತ್ಯವೆಂದು ತಿಳಿದುಕೊಂಡಿರುವದು ಅವಿದ್ಯೆಯಿಂದ ಎಂಬ ಉಪದೇಶಕ್ಕೆ ಇದೇನೂ ವಿರುದ್ಧವಲ್ಲ.

ಪರಮಾರ್ಥವಾದ ಅಜಾತ್ಮನನ್ನು ಅರಿತುಕೊಳ್ಳುವದು ಹೇಗೆ?- ಎಂದು ಕೆಲವರು ಕೇಳುತ್ತಾರೆ. ಇದಕ್ಕೆ ಗೀತೆಯಲ್ಲಿ ಹೇಳಿರುವ ಉತ್ತರವಿದು: "ಅವಿನಾಶಿತು ತದ್ವಿದ್ಧಿ ಯೇನ ಸರ್ವಮಿದಂ ತತಮ್ । ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥" ಯಾವದರಿಂದ ಇದೆಲ್ಲವೂ ವ್ಯಾಪ್ತವಾಗಿರುತ್ತದೆಯೋ ಅದನ್ನು ಅವಿನಾಶಿ ಎಂದು ತಿಳಿ; ಅವ್ಯಯವಾಗಿರುವ ಅದನ್ನು ವಿನಾಶಗೊಳಿಸುವದಕ್ಕೆ ಯಾರೂ ಸಮರ್ಥರಲ್ಲ. "ಆತ್ಮನು ನಿತ್ಯನು" ಎಂದರೆ ಸರ್ವಕಾಲದಲ್ಲಿಯೂ ಇರುವವನು ಎಂದೇನೂ ಅಭಿಪ್ರಾಯವಲ್ಲ; ಏಕೆಂದರೆ ಆತ್ಮನು ಕಾಲಾತೀತನಾಗಿರುತ್ತಾನೆ. ಪರಮಾರ್ಥವಾದ ಆತ್ಮಸ್ವರೂಪವನ್ನು ಸತ್, ಅವಿನಾಶಿ, ನಿತ್ಯ- ಎಂದು ಆಗಲೆ ತಿಳಿಸಿರುತ್ತೇನೆ. ತನ್ನ ಸ್ವರೂಪವನ್ನು ಎಂದೆಂದಿಗೂ ಮಾರ್ಪಡಿಸಿಕೊಳ್ಳದೆ ಇರುವದರಿಂದ ಆತ್ಮಸ್ವರೂಪವು ನಿತ್ಯವಾಗಿರುತ್ತದೆ. ಇದನ್ನು ಬಲ್ಲವರ ಉಪದೇಶದಿಂದ ತಿಳಿದುಕೊಳ್ಳಬೇಕು. ಹೇಗೆಂದರೆ ಯಾವದು ಇದೆಲ್ಲವನ್ನೂ-ಎಂದರೆ ಈ ಕಾಲಾಕಾಶಸಹಿತವಾಗಿರುವ ಜಗತ್ತೆಲ್ಲವನ್ನೂ-ವ್ಯಾಪಿಸಿಕೊಂಡಿರುವದೋ, ಆಕಾಶವು ಘಟಾದಿಗಳನ್ನು ವ್ಯಾಪಿಸಿಕೊಂಡಿರುವಂತೆ ಎಲ್ಲದರೊಳಗೂ ಹೊರಗೂ ನಡುವೆಯೂ ಎಲ್ಲವನ್ನೂ ವ್ಯಾಪಿಸಿಕೊಂಡಿರುವದೋ, ಅದೇ ಅವಿನಾಶಿಯಾದ ಆತ್ಮವಸ್ತು. ಪೃಥ್ವಿಯನ್ನು ಅಪ್ಪು, ಅಪ್ಪನ್ನು ತೇಜಸ್ಸು, ತೇಜಸ್ಸನ್ನು ವಾಯು, ವಾಯುವನ್ನು ಆಕಾಶ-ಹೀಗೆ ಒಂದನ್ನೊಂದು ವ್ಯಾಪಿಸಿಕೊಂಡಿರುತ್ತಾನೆ. ಹೇಗೆ ಗಡಿಗೆಯೆಂಬುದೆಲ್ಲವೂ ಮಣ್ಣಿನಿಂದಲೇ ವ್ಯಾಪ್ತವಾಗಿರುವದೋ, ಹೇಗೆ ಅದು ನಿಜವಾಗಿ ಮಣ್ಣೇ ಆಗಿರುವದೋ ಅದರಂತೆ ಈ ಜಗತ್ತೆಲ್ಲವೂ ಈ ಆತ್ಮನಿಂದಲೇ ವ್ಯಾಪ್ತವಾಗಿರುತ್ತದೆ. "ಆಪ್ನೋತೀತ್ಯಾತ್ಮ" ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದಲೇ ಇದನ್ನು ಆತ್ಮನೆಂದು ಕರೆಯುತ್ತಾರೆ; "ಆತ್ಮೈವೇದಂ ಸರ್ವಮ್" ಮುಂದೆ, ಹಿಂದೆ, ಎಡಕ್ಕೆ, ಬಲಕ್ಕೆ, ಕೆಳಗೆ, ಮೇಲುಗಡೆ-ಎಲ್ಲೆಲ್ಲಿಯೂ ಆತ್ಮನೇ ಇರುತ್ತಾನೆ ಎಂದು ಶ್ರುತಿ ಹೇಳುತ್ತದೆ. ಈ ಲೋಕದಲ್ಲಿ ಯಾವದೊಂದನ್ನು ನೋಡಿದರೂ ಬೆಳಕಿನ ಸಹಾಯದಿಂದಲೇ ಕಾಣುತ್ತಿರುವೆವು, ಎಲ್ಲವನ್ನೂ ಬೆಳಕು ವ್ಯಾಪಿಸಿಕೊಂಡಿರುತ್ತದೆ; ಹೀಗಿರುವಲ್ಲಿ ಬೆಳಕು ಯಾವದು? ಅದನ್ನು ಕಾಣುವದು

ಹೇಗೆ?–ಎಂಬ ಪ್ರಶ್ನೆಯು ಎಂಥ ಅವಿವೇಕದ್ದೆಂದಾಯಿತು! ಹಾಗೆಯೇ ಸರ್ವವ್ಯಾಪಕನಾದ ಆತ್ಮನ ಚೈತನ್ಯದ ಬೆಳಕಿನಿಂದಲೇ ಎಲ್ಲವನ್ನೂ ನಾವು ಅರಿತುಕೊಳ್ಳುತ್ತಿರುವೆವು. ಹೀಗಿದ್ದೂ ಆತ್ಮನನ್ನು ಕಂಡುಕೊಳ್ಳುವದು ಹೇಗೆ ಎಂದು ಪ್ರಶ್ನಿಸುತ್ತಿರುವೆವು! ಇದೇ ಅಜ್ಞಾನ. ನಿತ್ಯವೂ ಸಂಸಾರದ ವಿಷಯಗಳ ಚಿಂತೆಯಿಂದ ಮನಸ್ಸನ್ನು ಊಡಿಸಿಕೊಂಡುಬಿಟ್ಟಿರುವ ನಮಗೆ ವಿಷಯಗಳೇ ಕಾಣುತ್ತಿರುತ್ತವೆ; ಆತ್ಮನು ಕಾಣಿಸುತ್ತಿಲ್ಲ.

ಒಬ್ಬ ರಾಜನಿಗೆ "ನಿನ್ನ ಮಗನನ್ನು ಇಂಥ ದಿನ ಒಬ್ಬನು ಕೊಲ್ಲುತ್ತಾನೆ" ಎಂದು ಕನಸಿನಲ್ಲಿ ಯಾರೋ ಹೇಳಿದಂತೆ ಆಯಿತಂತೆ. ಅವನಿಗೆ ಅಂದಿನಿಂದ ಅದೇ ಚಿಂತೆ ಹತ್ತಿಕೊಂಡಿತು. ಮಗನನ್ನು ಒಂದು ಕೋಣೆಯಲ್ಲಿ ಸುರಕ್ಷಿತವಾಗಿ ಇರಿಸಿ, ಅವನನ್ನು ನೋಡಿಕೊಳ್ಳುವದಕ್ಕೆ ಒಬ್ಬ ನೆಚ್ಚಿನ ಕಾವಲುಗಾರನನ್ನು ಗೊತ್ತುಮಾಡಿದ್ದನಂತೆ. ಆದರೂ ಆ ಗೊತ್ತಾದ ದಿವಸ ಅಂಗರಕ್ಷಕನೇ ಆ ಹುಡುಗನನ್ನು ಕೊಂದುಹಾಕಿದನಂತೆ. ಹೀಗಾಗಿದೆ, ನಮ್ಮಗಳ ಪಾಡು! ನಮ್ಮ ಸ್ವರೂಪವಾದ ಆತ್ಮನು ಅವ್ಯಯನು, ನಾಶರಹಿತನು. ಅವನಲ್ಲಿ ಯಾವ ಹೆಚ್ಚು ಕಡಿಮೆಗಳೂ ಆಗುವಂತೆ ಇಲ್ಲ. ಅವನು ಸದ್ರೂಪನೇ, ತನ್ನ ರೂಪದಿಂದ ಎಂದಿಗೂ ಮಾರ್ಪಡುವವನಲ್ಲ; ಅಥವಾ ಧನಹಾನಿಯಿಂದ ಒಬ್ಬನು ವ್ಯಯವಾಗುವಂತೆ ತನ್ನದು ಯಾವದಾದರೊಂದರ ಹಾನಿಯಿಂದಲೂ ವ್ಯಯವಾಗುವಂತಿಲ್ಲ; ಏಕೆಂದರೆ ಅವನಿಗಿಂತ ವ್ಯತಿರಿಕ್ತವಾದ ತನ್ನದೆಂಬುದೇ ಇರುವದಿಲ್ಲ. ಹೀಗೆ ಅವ್ಯಯನಾಗಿರುವದರಿಂದ ಅವನನ್ನು ನಾಶಪಡಿಸುವದಕ್ಕೆ ಯಾರಿಂದಲೂ ಆಗಲಾರದು. ಆದರೂ ನಾವು ಈ ಆತ್ಮನು ನಾಶವಾಗುವವನು, ನಾವೆಲ್ಲರೂ ಒಂದು ದಿನ ನಾಶವಾಗುವೆವು–ಎಂದು ತಿಳಿದುಕೊಂಡಿರುವೆವು. ನಿಜವಾಗಿ ಇದ್ದದ್ದು ಹೋಗುವದು ಹೇಗೆ? ಸದ್ರೂಪನಾದ ಆತ್ಮನಿಗೆ ನಾಶವೆಂದರೇನು? ಆದರೂ ಅಜ್ಞಾನದಿಂದ ನಮ್ಮ ಆತ್ಮನಿಗೆ ನಾಶವುಂಟೆಂದು ಕಲ್ಪಿಸಿಕೊಂಡಿರುವೆವು; ರಾಜನಿಗೆ ಕನಸಿನಲ್ಲಿ ಉಂಟಾದ ಪುತ್ರಮರಣದ ಜ್ಞಾನದಂತೆ ನಮಗೆ ಅವಿದ್ಯಾ ಸ್ವಪ್ನದಲ್ಲಿ ನಮ್ಮ ಆತ್ಮನಿಗೆ ನಾಶವುಂಟೆಂಬ ಅಂಜಿಕೆಯ ಅರಿವು ಹೇಗೋ ಆಗಿಬಿಟ್ಟಿದೆ. ಅದರಿಂದಲೇ ನಾವು ಮಿಥ್ಯಾಮರಣಗಳನ್ನು ಅನುಭವಿಸುತ್ತಾ ಸಂಸಾರದಲ್ಲಿ ತೊಳಲುತ್ತಿರುವೆವು!

ಆದರೆ ನಿಜವೇನು? "ಅನ್ತವನ್ತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ । ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥" ಈ ನಿತ್ಯನಾದ ಆತ್ಮನಿಗೆ ದೇಹಗಳು ಅಂತವಂತಗಳಾಗಿರುತ್ತವೆ; ಅವನು ಅನಾಶಿ, ಅಪ್ರಮೇಯನು. ನಮ್ಮ ತಿಳಿವಳಿಕೆಯು ಇದಕ್ಕೆ ಅತ್ಯಂತವಿಪರೀತವಾಗಿರುತ್ತದೆ. ನಮ್ಮ ಶರೀರವು ನಿತ್ಯವೆಂದೇ ನಾವು ಭಾವಿಸಿರುತ್ತೇವೆ. ನಿಜವಾಗಿ ಅವು ಅಂತವಂತಗಳು, ಅನಿತ್ಯಗಳು; ಕನಸ್ಸಿನಲ್ಲಿ ಕಾಣುವ ದೇಹಗಳಿಗೆ ಹೇಗೆ ತತ್ಕಾಲದಲ್ಲಿ ಅವು ಇವೆಯೆಂದೇ ತೋರುತ್ತಿದ್ದರೂ ಎಚ್ಚರವಾಗುತ್ತಲೂ ಅಂತವಾಗುವದೋ, ಮಾಯಾನಿರ್ಮಿತವಾದ ದೇಹಗಳು ಮಾಯಾಕಾಲಕ್ಕೆ ನಿಜವಾಗಿಯೂ ಇವೆಯೆಂದೇ

ತೋರುತ್ತಿದ್ದರೂ ಮಾಯಾವಿಯು ಮಾಯೆಯನ್ನು ಉಪಸಂಹಾರಮಾಡಿದ ಕೂಡಲೆ ಅವಕ್ಕೆ ಹೇಗೆ ಅಂತವಾಗುವದೋ, ಹಾಗೆಯೇ ವಿವೇಕಜ್ಞಾನವುಂಟಾದರೆ ಆ ದೃಷ್ಟಿಯಿಂದ ನೋಡಿದಾಗ ಈ ಎಲ್ಲಾ ದೇಹಗಳೂ ಅಂತವಂತಗಳೇ, ಬಾಧ್ಯವಾದವುಗಳೇ, ಅನೃತವಾದವುಗಳೇ; ನಿಜವಾಗಿ ಆತ್ಮನೊಬ್ಬನೇ ನಿತ್ಯನು, ಸತ್ಯಸ್ವರೂಪನು, ಯಾವ ವಿಕಾರವೂ ಇಲ್ಲದವನು, ಅವ್ಯಭಿಚರಿತಸ್ವರೂಪನು-ಎಂಬುದು ಗೊತ್ತಾಗುವದು. ಆತ್ಮನು ನಿತ್ಯನೆಂದರೆ ಕಾಲದಲ್ಲಿ ಯಾವಾಗಲೂ ಇರುವವನೆಂದಲ್ಲ; ಏಕೆಂದರೆ ಕಾಲವು ನಿತ್ಯವೊ, ಅನಿತ್ಯವೊ- ಎಂದು ವಿಚಾರಿಸುವಾಗ ಅದಕ್ಕೆ ಆಧಾರವಾಗಿರುವ ಮತ್ತೊಂದು ಕಾಲವಿರುವದಿಲ್ಲ. ನಿತ್ಯವೆಂದರೆ ಸದ್ರೂಪವಾಗಿರತಕ್ಕದ್ದು, ಸ್ವರೂಪದಲ್ಲಿ ಬೇರೊಂದು ಬುದ್ಧಿಯುಂಟಾಗದೆ ಇರತಕ್ಕದ್ದು- ಎಂದೇ ಅರ್ಥ.

ಆತ್ಮನನ್ನು ಏತರಿಂದ ತಿಳಿದುಕೊಳ್ಳಬೇಕು? ಅವನು ಅಪ್ರಮೇಯನು; ಯಾವ ಪ್ರಮಾಣದಿಂದಲೂ ಅವನನ್ನು ಅರಿಯುವದಕ್ಕೆ ಆಗಲಾರದು. ಇಂದ್ರಿಯ ಪ್ರಮಾಣದಿಂದ ಅವನನ್ನು ಕಂಡುಕೊಳ್ಳುವದಕ್ಕೆ ಆಗುವದಿಲ್ಲ. ಅನುಮಾನದಿಂದ ಊಹಿಸುವದಕ್ಕೂ ಆಗುವದಿಲ್ಲ. ಅವನು ಎಲ್ಲಾ ಪ್ರಮಾಣಪ್ರಮೇಯಗಳನ್ನೂ ತನ್ನ ಚೈತನ್ಯದಿಂದಲೇ ಬೆಳಗುತ್ತಿರುತ್ತಾನೆ. ಹಾಗಾದರೆ ಅವನನ್ನು ಹೇಗೆ ಅರಿತುಕೊಳ್ಳಬೇಕು? ಎಂದರೆ ಯಾವನು ಎಲ್ಲವನ್ನೂ ಅರಿಯುತ್ತಾನೋ ಅವನೇ ಆತ್ಮನು ಎಂದು ಅರಿತುಕೊಳ್ಳಬೇಕು. ಆತ್ಮನೆಂದರೆ ನಮ್ಮ ಸ್ವರೂಪವೇ, ಅತ್ಯಂತ ಪ್ರಾಪ್ತವಾಗಿರುವ ಸ್ವರೂಪವದು. ಬೆಳಕಿನಿಂದ ಎಲ್ಲವನ್ನೂ ನೋಡುವವರು ಬೆಳಕನ್ನು ಕಾಣುವದಕ್ಕೆ ಮತ್ತೊಂದು ಸಾಧನವನ್ನು ಹೇಗೆ ಕೋರುವದಿಲ್ಲವೋ ಹಾಗೆ ಆತ್ಮನನ್ನು ಕಾಣುವದಕ್ಕೆ ಮತ್ತೊಂದು ಸಾಧನವನ್ನು ಬಯಸಬೇಕಾದದ್ದಿಲ್ಲ. ಆತ್ಮನ ಬೆಳಕಿನಿಂದಲೇ ಎಲ್ಲವೂ ವ್ಯಾಪ್ತವಾಗಿರುತ್ತದೆ; ಆ ಬೆಳಕಿಗಿಂತ ಬೇರೆಯಾಗಿ ಯಾವದೊಂದೂ ಸ್ವತಂತ್ರವಾಗಿಲ್ಲ, ಅದು ಅದ್ವಿತೀಯವು. ಎರಡನೆಯದರಿಂದಲ್ಲವೆ, ಭಯ? ಅದ್ವಿತೀಯನಾದ ಆತ್ಮನಿಗೆ ಎಲ್ಲಿಯ ಭಯ? ಆತ್ಮನು ಎಲ್ಲಾ ಶರೀರಗಳಿಗೂ ಒಬ್ಬನೇ; ಅವು ಮಿಥ್ಯಾ ಆದರೂ ಅವುಗಳಲ್ಲೆಲ್ಲ "ಸಮಂ ಸರ್ವೇಷು ಭೂತೇಷು" ಎಲ್ಲರಲ್ಲಿಯೂ ಅವನು ಸಮವಾಗಿಯೇ ಇರುವನು. ಹೀಗೆಂದು ಯಾರು ತಿಳಿದುಕೊಳ್ಳುವರೋ ಅವರೇ ಧೀರರು, ಅವರಿಗೆ ನಾಶವಿಲ್ಲ, ಅಮೃತರು. ಅವರೇ ಸ್ಥಿತಪ್ರಜ್ಞರು, ಅವರ ಜ್ಞಾನಕ್ಕೆ ಚ್ಯುತಿಯಿರುವದಿಲ್ಲ.

## 4.11. ಸ್ಥಿತಪ್ರಜ್ಞ

**ಸರ್ವಂ ತತ್ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ ॥ – ಐ. 2-3**

ಪರಮಾರ್ಥತತ್ತ್ವವು ಸ್ವತಃಸಿದ್ಧವಾಗಿರುತ್ತದೆ; ಅದನ್ನು ತಿಳಿಸುವದಕ್ಕೆ ಮತ್ತೊಂದು ಪ್ರಮಾಣವೇನೂ ಬೇಕಿರುವದಿಲ್ಲ. ಹೀಗಿದ್ದರೂ ಅನೇಕರು ಅದನ್ನು ಅರಿಯರು. ಇದಕ್ಕೆ ಕಾರಣವೇನೆಂದರೆ ಅಜ್ಞಾನವೇ. ಅಜ್ಞಾನವೆಂದರೆ ಆತ್ಮನನ್ನು ಮರೆಯುವದಲ್ಲ; ಇಂದ್ರಿಯಪ್ರಧಾನವಾಗಿ ಹೊರಕ್ಕೆ ನೋಡುತ್ತಿರುವ ಜ್ಞಾನವೇ ಅಜ್ಞಾನ. ಈ ಅಜ್ಞಾನವು ಸ್ವಭಾವದಿಂದಲೇ ಎಲ್ಲರಿಗೂ ಇದ್ದುಕೊಂಡಿರುತ್ತದೆ. ಇದು ಅನಾದಿ.

ಇಂದ್ರಿಯಗಳನ್ನೂ ಅದಕ್ಕೆ ನೆರವಾಗಿರುವ ಮನಸ್ಸನ್ನೂ ಬಿಟ್ಟರೆ ನಮಗೆ ತತ್ತ್ವವನ್ನು ಅರಿತುಕೊಳ್ಳುವದಕ್ಕೆ ಮತ್ತೆ ಯಾವ ಸಾಧನವಿದೆ?–ಎಂದು ಯಾರಾದರೂ ಕೇಳಬಹುದು. ಈ ಪ್ರಶ್ನೆಯನ್ನು ಕೇಳುವವನು, ಈ ಎರಡಕ್ಕಿಂತಲೂ ಬೇರೆ ಯಾವದಾದರೂ ಇದ್ದರೆ ನಾನು ತಿಳಿದುಕೊಳ್ಳಲಾಪೆನು–ಎಂಬ ಭಾವವನ್ನು ತನ್ನ ಪ್ರಶ್ನೆಯಿಂದಲೇ ಹೊರ ಪಡಿಸಿರುತ್ತಾನೆ. ಇಂದ್ರಿಯ, ಮನಸ್ಸು–ಇವುಗಳಿಗಿಂತ ಬೇರೆಯಾದ ಆತ್ಮನೊಬ್ಬನು ಇದಾನೆಂದು ಈ ಪ್ರಶ್ನೆಯಿಂದಲೇ ಹೊರಡುತ್ತದೆ. ಆ ಆತ್ಮನನ್ನು ಇದಾನೆಂದು ಹೇಗೆ ತಿಳಿಯುತ್ತೇವೆ? ಇದನ್ನು ಸಾವಧಾನವಾಗಿ ವಿಚಾರಿಸಬೇಕು.

ನಾನು ಇಂಥ ಇಂದ್ರಿಯದಿಂದ ಇಂಥದ್ದೊಂದು ವಿಷಯವನ್ನು ಅರಿಯುತ್ತೇನೆ– ಉದಾಹರಣೆಗೆ ಕಣ್ಣಿನಿಂದ ರೂಪವನ್ನು ನೋಡುತ್ತೇನೆ, ಕಿವಿಯಿಂದ ಶಬ್ದವನ್ನು ಕೇಳುತ್ತೇನೆ– ಎಂಬ ಭಾವನೆಯಲ್ಲಿ "ನಾನು" ಎಂಬುದೂ ಸೇರಿದೆ ಎಂಬುದನ್ನು ಲಕ್ಷಿಸಬೇಕು. ಈ ಇಂದ್ರಿಯಮೂಲಕವಾದ ತಿಳಿವಳಿಕೆಯು ಅಜ್ಞಾನವೆಂದದ್ದರಿಂದ ಇದರೊಳಗೆ ಅಡಕವಾಗಿರುವ "ನಾನು" ಎಂಬುದೂ ಅಜ್ಞಾನದ ವಿಷಯವೆಂದೇ ಆಯಿತು. "ನಾನು" ಎಂಬ ಅರಿವು ನನಗೇ ಆಗುತ್ತದೆ; ಆದ್ದರಿಂದ ನಾನು **ಅಹಂಪ್ರತ್ಯಯಕ್ಕೆ ಆಶ್ರಯನು.** ನಾನು ಯಾರೆಂಬುದನ್ನು ಅರಿಯೆನು ಎಂಬಲ್ಲಿ ನಾನು ಎಂಬ ಅರಿವಿಗೆ ನಾನೇ ಗೋಚರನಾಗಿರುತ್ತೇನೆ; ಆದ್ದರಿಂದ ನಾನು **ಅಹಂಪ್ರತ್ಯಯಕ್ಕೆ ವಿಷಯನು**– ಎಂದಾಯಿತು. ಅಲ್ಲವೆ? ಹೀಗೆ **ಆತ್ಮನು ಅಹಂಪ್ರತ್ಯಯಕ್ಕೆ ಆಶ್ರಯನೂ ವಿಷಯನೂ ಆಗಿರುತ್ತಾನೆಂದು ಅರಿಯುವದೂ ಅಜ್ಞಾನವೇ ಆಗಿರುತ್ತದೆ.**

ಇದೆಲ್ಲವೂ ಅಜ್ಞಾನವೆಂದಾದರೆ ಇನ್ನು ಸುಜ್ಞಾನವು ಯಾವದು?– ಎಂದು ನೀವು ಕೇಳಬಹುದು. ನಾನು ಎಂಬ ಪ್ರಮಾತೃವನ್ನೂ–ಅರಿಯುವಾತನನ್ನೂ–ಸೇರಿಸಿಕೊಂಡು ಏನೇನನ್ನು ಅರಿಯುತ್ತೇವೆಯೋ ಅದೆಲ್ಲವೂ ಜ್ಞೇಯವು. ಇದೆಲ್ಲವನ್ನೂ ಯಾವ ಸ್ವರೂಪದ ಅನುಭವಕ್ಕೆ ವಿಷಯವಾಗಿಸಿಕೊಂಡಿರುವೆವೋ ಅದೇ ಆತ್ಮನು. ಆತ್ಮನು ಏತಕ್ಕೂ ವಿಷಯನಲ್ಲ, ಯಾವ ಪ್ರತ್ಯಯಕ್ಕೂ ಆಶ್ರಯನಲ್ಲ–ಎಂದು ಆತ್ಮನನ್ನು ಎಲ್ಲಕ್ಕೂ ಸಾಕ್ಷಿಯಾಗಿ ಅನುಭವದಿಂದ ಕಂಡುಕೊಳ್ಳುವದೇ ಜ್ಞಾನವು. ಇದ್ದದ್ದು ಇದ್ದಂತೆ ತಿಳಿಯುವದು ಜ್ಞಾನ, ಅದು ತೋರುವಂತೆಯೇ ಇದೆ ಎಂದು ಭಾವಿಸುವದು ಅಜ್ಞಾನ. ಉದಾಹರಣೆಗೆ

ಒಂದು ಕೋಲನ್ನು ನೀರಿನಲ್ಲಿಟ್ಟರೆ ಅದು ಡೊಂಕಾಗಿ ಕಾಣುತ್ತಿರುತ್ತದೆ; ಮುಖವು ಕನ್ನಡಿಯಲ್ಲಿ ಪ್ರತಿಬಿಂಬಿಸಿದಾಗ ಅದರ ಎಡಗಡೆಯ ಭಾಗವು ಬಲಗಡೆಯದಾಗಿಯೂ ಬಲಗಡೆಯ ಭಾಗವು ಎಡಗಡೆಯದಾಗಿಯೂ ಕಾಣಿಸುತ್ತಿರುತ್ತದೆ. ಆದರೇನು? ಕೋಲು ನಿಜವಾಗಿ ಡೊಂಕಾಗಿರುವದೇ ಇಲ್ಲ; ಮುಖದ ಪಾರ್ಶ್ವಗಳು ಅದಲುಬದಲಾಗಿರುವದೂ ಇಲ್ಲ. ಅಲ್ಲವೆ? ಹೀಗೆ ವಸ್ತುವನ್ನು ಇದ್ದದ್ದು ಇದ್ದಂತೆ ನಿಶ್ಚಯಿಸಿ ತಿಳಿದುಕೊಳ್ಳುವದೇ ಜ್ಞಾನ. ಇದರಂತೆ ಆತ್ಮನು ಅಹಂಪ್ರತ್ಯಯಕ್ಕೆ ಆಶ್ರಯನು, ವಿಷಯನು-ಎಂದು ತೋರುವಾಗಲೂ ಅವನು ಹಾಗಿರುವದಿಲ್ಲ. ಅವನು ಯಾವಾಗಲೂ ಯಾವ ಪ್ರತ್ಯಯದ ಹಂಗೂ ಇಲ್ಲದೆ ಅಸಂಗನಾಗಿ ಎಲ್ಲಕ್ಕೂ ಸಾಕ್ಷಿಯಾಗಿಯೂ ಇರುತ್ತಾನೆ ಎಂದು ತಿಳಿಯುವದೇ ಆತ್ಮವಿಷಯದ ಸರಿಯಾದ ಜ್ಞಾನವು.

ಅಜ್ಞಾನವು ತಪ್ಪುತಿಳಿವಳಿಕೆಯಾದ್ದರಿಂದ ಅದು ಸರಿಯಾದ ತಿಳಿವಳಿಕೆಯಿಂದ ಬಾಧಿತವಾಗುತ್ತದೆ. ಆತ್ಮನು ಸಪ್ರಪಂಚನು, ಸಂಸಾರಿಯು-ಎಂದು ತಿಳಿದಿರುವದು ಅಜ್ಞಾನವಾದ್ದರಿಂದ ಅದೂ ಆತ್ಮನ ಸರಿಯಾದ ಜ್ಞಾನದಿಂದ ಬಾಧಿತವಾಗುತ್ತದೆ. ಸರಿಯಾಗಿ ಮನಮುಟ್ಟಿ ವಿಚಾರಮಾಡಿದಾಗ ಕೋಲು ನೀರಿನಲ್ಲಿರುವಾಗಲೂ ಡೊಂಕಾಗಿಲ್ಲ ಎಂದು ತಿಳಿಯುವಂತೆ ನಮ್ಮ ಆತ್ಮನು ಈಗಲೂ ಪ್ರಮಾತೃವಲ್ಲ-ಅವನು ನೋಡುವವನೂ ಕೇಳುವವನೂ ಮೂಸುವವನೂ ಮುಟ್ಟುವವನೂ ಅಲ್ಲ; ಅವನಿಗೆ ಸಂಸಾರದ ಯಾವ ಫಲವೂ ಸೋಂಕಿರುವದಿಲ್ಲ-ಎಂಬ ಜ್ಞಾನವುಂಟಾಗುತ್ತದೆ. ಆತ್ಮನು ಎಂದೆಂದಿಗೂ ನಿಷ್ಪ್ರಪಂಚನು, ಅಸಂಸಾರಿಯು-ಎಂಬ ಜ್ಞಾನವು ಆಗಿಬಿಡುತ್ತದೆ. "ಸ ವಾ ಏಷ ಮಹಾನಜ ಆತ್ಮಾಽಮರೋಽಮೃತೋಽಭಯೋ ಬ್ರಹ್ಮ"- ಈ ನಮ್ಮ ಆತ್ಮನೇ ಜನ್ಮವಿಲ್ಲದ, ಮರಣವಿಲ್ಲದ, ಸಾಯುವ ಸ್ವಭಾವದವನಲ್ಲದ, ಯಾವ ಅಂಜಿಕೆಯೂ ಇಲ್ಲದ ಪರಮಾತ್ಮನು, ಬ್ರಹ್ಮವು-ಎಂದು ಶ್ರುತಿ ಸಾರುತ್ತಿರುವದು, ಇದು ಆತ್ಮನ ಇರುವ ಸ್ಥಿತಿ; ಆತ್ಮನು ಎಂದಾದರೊಂದು ದಿನ ಬ್ರಹ್ಮವಾಗುವನೆಂದಲ್ಲ, ಶ್ರುತಿ ಹೇಳುತ್ತಿರುವದು. **ಈಗ ನಾವು ಅಜ್ಞಾನದಿಂದ ಸಂಸಾರಿಗಳೆಂದು ಭಾವಿಸಿಕೊಂಡಿರುವಾಗಲೇ ನಾವು ಜನ್ಮಾದಿರಹಿತವಾದ ಪರಬ್ರಹ್ಮಸ್ವರೂಪರಾಗಿರುತ್ತೇವೆ.** ಹೀಗೆಂಬ ತಿಳಿವಳಿಕೆಯೇ ಸುಜ್ಞಾನವು.

ತತ್ತ್ವಜ್ಞಾನವು ಉಂಟಾದಾಗ ಎಲ್ಲವೂ ಅದ್ವೈತನಾದ ಆತ್ಮನೇ ಆಗಿಬಿಡುವದರಿಂದ ಗುರುವಿಗೆ ಶಿಷ್ಯನಿರುವಂತಿಲ್ಲ, ಶಿಷ್ಯನಿಗೆ ಗುರು ಇರುವಂತಿಲ್ಲ. ಹೀಗಾದರೆ ತತ್ತ್ವೋಪದೇಶವು ನಡೆಯುವದು ಹೇಗೆ? ಎಂದು ಮುಂತಾಗಿ ಕೆಲವರು ಆಕ್ಷೇಪಿಸುವದುಂಟು. ಅದ್ವೈತವೇದಾಂತಿಗಳು ಪ್ರಪಂಚವನ್ನೆಲ್ಲ ಕರಗಿಸಿ ಏನೋ ಒಂದು ರೀತಿಯಲ್ಲಿ ಸಮರಸಮಾಡಿಬಿಡುತ್ತಾರೆ-ಎಂದು ಭಾವಿಸಿದಂತೆ ಇದೆ, ಅವರ ಆಕ್ಷೇಪ! ನಿಜವು ಹೀಗಿಲ್ಲ. ನಾವು ಸಂಸಾರಿಗಳಾಗಿರುವದು ಅಧ್ಯಾಸದಿಂದ, ಅವಿದ್ಯೆಯಿಂದ. ಈ ಅವಿದ್ಯೆಯು

ಆಕಸ್ಮಿಕವಾಗಿ ಆದದ್ದಲ್ಲ. ಸ್ವಾಭಾವಿಕವಾಗಿ ಜನರಿಗೆಲ್ಲರಿಗೂ ತೋರುವದು, ಅದು. ಸರಿಯಾಗಿ ನೋಡಿದಾಗ ಯಾವ ಪ್ರಪಂಚವೂ ಇಲ್ಲ. ಸಂಸಾರಿತ್ವವು ಬಂದೂ ಇಲ್ಲ, ಹೋಗಬೇಕಾದದ್ದೂ ಇಲ್ಲ–ಎಂದು ಗೊತ್ತಾಗಿಬಿಡುತ್ತದೆ. ಅಷ್ಟೆ.

ಹಾಗಾದರೆ ಜ್ಞಾನಿಗಳಿಗೂ ನಮಗೂ ತಾರತಮ್ಯವೇನು? ಯಾರಿಗೂ ಹೋಗಬೇಕಾಗದ ಬಂಧವಿಲ್ಲ. ಬರಬೇಕಾದ ಮುಕ್ತಿಯಿಲ್ಲ–ಎಂದಾಯಿತಲ್ಲ!–ಎಂದು ಕೆಲವರು ಶಂಕಿಸುವರು. ಹಾಗಲ್ಲ. ತತ್ತ್ವವನ್ನು ತಿಳಿದವರು ಸ್ಥಿತಪ್ರಜ್ಞರಾಗಿರುತ್ತಾರೆ, ಉಳಿದವರು ಅನವಸ್ಥಿತಪ್ರಜ್ಞ ರಾಗಿರುತ್ತಾರೆ. ಎಲ್ಲರ ಆತ್ಮನೂ ಜನ್ಮಾದಿ ವಿಕಾರಗಳಿಲ್ಲದ ಪರಮಾತ್ಮನೇ ಆಗಿರುತ್ತಾನಾದರೂ ತಿಳಿವಳಿಕೆಯಲ್ಲಿ ಒಬ್ಬರಿಗೊಬ್ಬರಿಗೆ ಹೆಚ್ಚುಕಡಿಮೆಯಿರುತ್ತದೆ. ಜ್ಞಾನಿಗಳನ್ನು ಕಂಡು ಹಿಡಿಯುವದಕ್ಕೆ ಅವರ ಊಟ, ಆಟ, ವೇಷ, ಭಾಷೆ–ಇವುಗಳನ್ನು ವಿಚಾರಿಸುವದಕ್ಕೆ ಹೋಗಬಾರದು. ಅವರ ತಿಳಿವಳಿಕೆ ಹೇಗಿರುತ್ತದೆಯೋ ಅದನ್ನು ಗೊತ್ತುಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ತಿಳಿವಳಿಕೆಯ ದೃಷ್ಟಿಯಿಂದ ನೋಡಿದಾಗ ಅವರು ಸ್ಥಿತಪ್ರಜ್ಞರಾಗಿರುತ್ತಾರೆ.

ವೇದಾಂತದಲ್ಲಿ "ಪ್ರಜ್ಞಾ" ಎಂಬುದು ಆತ್ಮನ ಹೆಸರು. ಮನಸ್ಸಿನಲ್ಲಿ ಆಗುವ ವೃತ್ತಿಗಳೆಲ್ಲದರಲ್ಲಿಯೂ ಆತ್ಮನ ಸ್ವರೂಪಜ್ಞಾನವು ಪ್ರತಿಫಲಿಸುತ್ತಿರುತ್ತದೆ. ಸೂರ್ಯನ ಪ್ರತಿಬಿಂಬಗಳು ಒಂದು ಕೆರೆಯಲ್ಲಿರುವ ಅನೇಕ ಅಲೆಗಳಲ್ಲಿ ತೋರಿಕೊಳ್ಳಬಹುದಷ್ಟೆ? ಅವೆಲ್ಲಕ್ಕೂ ಹೇಗೆ ಒಬ್ಬನೇ ಸೂರ್ಯನು ಆಧಾರವಾಗಿರುವನೋ ಹಾಗೆಯೇ ಇಲ್ಲಿಯೂ ಬೇರೆಬೇರೆ ವೃತ್ತಿಗಳಲ್ಲಿ ಪ್ರತಿಫಲಿಸುವ ಪ್ರಜ್ಞೆಯು ಒಂದೇ ಆಗಿರುತ್ತದೆ. ಪ್ರತ್ಯಯಗಳಲ್ಲಿ ತೋರುವ ಚಿದಾಭಾಸಗಳಿಗೆ ಬೇರೆಬೇರೆಯ ಹೆಸರುಗಳು ಬರುತ್ತವೆ. ಈ ವಿಷಯದಲ್ಲಿ ಶ್ರುತಿ ಹೇಳುವದೇನೆಂದರೆ : ಸಂಜ್ಞಾನ (ಅರಿಕೆ), ಆಜ್ಞಾನ (ಆಳುವನೆಂದು ಭಾವಿಸುವದು), ವಿಜ್ಞಾನ (ಕಲೆಗಳೇ ಮುಂತಾದವುಗಳ ತಿಳಿವಳಿಕೆ), ಪ್ರಜ್ಞಾನ (ಚೆನ್ನಾಗಿ ತಿಳಿದು ನಿಶ್ಚಯಿಸುವದು), ಮೇಧಾ (ಮರೆಯದಿರುವದು), ದೃಷ್ಟಿ (ಇಂದ್ರಿಯಗಳಿಂದ ನೋಡುವದು), ಧೃತಿ (ಶರೀರೇಂದ್ರಿಯಗಳನ್ನು ಕುಸಿಯದಂತೆ ಎತ್ತಿಹಿಡಿಯುವ ವೃತ್ತಿ), ಮತಿ (ಯೋಚಿಸುವದು), ಮನೀಷಾ (ಸ್ವತಂತ್ರವಿಚಾರ), ಜೂತಿ (ಮರಳುವದು), ಸ್ಮೃತಿ (ನೆನಪಿಗೆ ತಂದುಕೊಳ್ಳುವದು), ಸಂಕಲ್ಪ (ವಿಷಯವನ್ನು ವಿಕಲ್ಪಿಸುವದು), ಕ್ರತು (ನಿಶ್ಚಯಿಸುವದು), ಅಸು (ಬದುಕಿರುವದಕ್ಕೆ ಬೇಕಾದ ವೃತ್ತಿ), ಕಾಮ (ಆಶೆ), ವಶ (ಬೆದೆ)– **"ಸರ್ವಾಣ್ಯೇವೈತಾನಿ ಪ್ರಜ್ಞಾನಸ್ಯ ನಾಮಧೇಯಾನಿ ಭವನ್ತಿ"** ಇವೆಲ್ಲ ಈ ಪ್ರಜ್ಞಾನವೆಂಬ ಆತ್ಮನಿಗೆ ವೃತ್ತಿಭೇದದಿಂದ ಆಗುವ ಬೇರೆಬೇರೆಯ ಹೆಸರುಗಳು. ಇವುಗಳೆಲ್ಲ ವೃತ್ತಿಗಳಲ್ಲಿ ಹೊಳೆಯುವ ಆತ್ಮನ ಪ್ರತಿಬಿಂಬಗಳು; ಆತ್ಮನು ಮಾತ್ರ ಒಬ್ಬನೇ ಇದಕ್ಕೆಲ್ಲ ಆಧಾರ.

ಇಷ್ಟೇ ಅಲ್ಲ. ಜೀವರುಗಳ ಅಂತಃಕರಣವು ಸತ್ತ್ವರಜಸ್ತಮೋಗುಣಗಳ ತಾರತಮ್ಯದಿಂದ ಹೆಚ್ಚು ಕಡಿಮೆಯಾಗಿ ಸ್ವಚ್ಛವಾಗಿರುತ್ತದೆಯಷ್ಟೆ? ಎಲ್ಲರ ಅಂತಃಕರಣದಲ್ಲಿ ಪ್ರತಿಫಲಿಸಿರುವದೂ ಒಂದೇ ಪ್ರಜ್ಞೆ. ಎಲ್ಲರಿಗಿಂತಲೂ ಅತ್ಯಂತಸ್ವಚ್ಛವಾಗಿರುವ ಹಿರಣ್ಯಗರ್ಭಬ್ರಹ್ಮನಲ್ಲಿ ಜ್ಞಾನವೈರಾಗ್ಯಾದಿಗಳು ಅತ್ಯಂತ ಉತ್ಕೃಷ್ಟವಾಗಿರುತ್ತವೆ; ಎಲ್ಲರಿಗಿಂತಲೂ ತೀರಕಡಿಮೆಯ ಸ್ಥಿತಿಯಲ್ಲಿರುವ ಸ್ಥಾವರಪ್ರಾಣಿಗಳಲ್ಲಿ ಜ್ಞಾನವೈರಾಗ್ಯಸುಖಾದಿಗಳು ಅತ್ಯಂತಕಡಿಮೆಯಾಗಿ ಅವ್ಯಕ್ತವಾಗಿರುತ್ತವೆ. ಅವುಗಳ ಅಂತಃಕರಣದ ವಿಕಾಸವು ತಾರತಮ್ಯದಿಂದ ಕಂಡುಬಂದರೂ, ಅವುಗಳೆಲ್ಲಕ್ಕೂ ಆಧಾರವಾಗಿರುವ "ಪ್ರಜ್ಞೆ" ಎಂಬ ಆತ್ಮನು ಒಬ್ಬನೇ; ಪ್ರಜ್ಞಾರೂಪನಾದ ಆತ್ಮನೇ ಎಲ್ಲರನ್ನೂ ವ್ಯವಹಾರದಲ್ಲಿ ನಡೆಯಿಸುವ ಮುಂದಾಳು, ಈ ಜಗತ್ತೆಲ್ಲವೂ ಪ್ರಜ್ಞಾರೂಪವಾದ ಬ್ರಹ್ಮದಲ್ಲಿಯೇ ನಿಲುಗಡೆಯನ್ನು ಹೊಂದಿರುತ್ತದೆ; ಇದೆಲ್ಲವೂ ಪ್ರಜ್ಞೆಯಿಂದಲೇ ಹುಟ್ಟಿ ಅದರಲ್ಲಿಯೇ ಇದ್ದು ಅದರಲ್ಲಿಯೇ ಲಯವಾಗುತ್ತಿರುವದು. ಜನರಿಗೆಲ್ಲ ಪ್ರಜ್ಞೆಯೇ ಕಣ್ಣು, ಪ್ರಜ್ಞೆಯೇ ನಿಲುಗಡೆ; ಆದ್ದರಿಂದ ಪ್ರಜ್ಞಾನವೇ ಬ್ರಹ್ಮವು–ಎಂದು ಶ್ರುತಿಯು ಸಾರುತ್ತಿದೆ.

ಈವರೆಗೆ ಪ್ರಜ್ಞೆ ಎಂದರೇನೆಂಬುದನ್ನು ವಿವರಿಸಿದ್ದಾಯಿತು. ಈ ಪ್ರಜ್ಞೆಯೇ ಎಲ್ಲಕ್ಕೂ ಆಧಾರವಾಗಿರುತ್ತದೆ; ಇದರಲ್ಲಿ ಯಾವ ವಿಕಾರವಾಗಲಿ, ಚಲನೆಯಾಗಲಿ ಇರುವದಿಲ್ಲ. ಹೀಗಿರುವಲ್ಲಿ ಇದಕ್ಕೆ ಸ್ಥಿತಿ (ನಿಲುಗಡೆ) ಎಂದರೇನು? ಜ್ಞಾನಿಗಳು "ಸ್ಥಿತಪ್ರಜ್ಞರು" ಎಂದರೆ ಮಿಕ್ಕವರ ಪ್ರಜ್ಞೆಯು ಚಲಿತವಾಗುತ್ತಿರುತ್ತದೆಯೆ?–ಎಂಬ ಶಂಕೆ ಏಳುತ್ತದೆಯಷ್ಟೆ? ಇದಕ್ಕೆ ಪರಿಹಾರವೇನೆಂದರೆ, ಸಾಮಾನ್ಯಜನರಿಗೆ ನಿಜವಾದ ಪ್ರಜ್ಞೆ ಯಾವದೆಂಬುದು ತಿಳಿದಿರುವದಿಲ್ಲ. ಪ್ರಜ್ಞೆ ಎಂಬುದು ಚೈತನ್ಯರೂಪನಾದ ಆತ್ಮನನ್ನು ಹೇಳುವ ಮಾತು ಎಂಬುದಾಗಲಿ, ಆ ಪ್ರಜ್ಞೆಯು ಯಾವ ಮಾರ್ಪಾಡುಗಳನ್ನೂ ಕಾಣದೆ ತಾನು ಇದ್ದಂತೆಯೇ ಇರುತ್ತದೆ ಎಂಬುದಾಗಲಿ ಅವರಿಗೆ ತಿಳಿಯದು. ಸಾಮಾನ್ಯಜನರು ಹೇಗೆ ವ್ಯವಹಾರಮಾಡುತ್ತಿರುತ್ತಾರೆ, ನೋಡಿರಿ. "ನನ್ನ ಪ್ರಜ್ಞೆ ತಪ್ಪಿಹೋಗಿತ್ತು, ಸ್ವಲ್ಪಹೊತ್ತಿನಮೇಲೆ ಪ್ರಜ್ಞೆ ಬಂತು" ಎನ್ನುತ್ತಾರಷ್ಟೆ? ಇಲ್ಲಿ ಪ್ರಜ್ಞೆಯೆಂದರೆ ಎಚ್ಚರದರಿವು ಇರುವ ಬುದ್ಧಿ. "ನಿಮ್ಮ ಪ್ರಜ್ಞೆ ಎಲ್ಲಿಟ್ಟಿದ್ದೀರಿ?" ಎಂದು ಕೇಳುವದುಂಟು; ಅಲ್ಲಿಯೂ ಪ್ರಜ್ಞೆ ಎಂದರೆ ಬುದ್ಧಿಯೆಂದೇ ಅರ್ಥ. ಜನರ ಬುದ್ಧಿಯು ಬಹಳ ಚಂಚಲವಾಗಿರುತ್ತದೆ, ಅತ್ತಿತ್ತ ಹೊಯ್ದಾಡುತ್ತಲೇ ಇರುತ್ತದೆ. ಆದ್ದರಿಂದ ಅವರು "ಅವ್ಯವಸ್ಥಿತಪ್ರಜ್ಞರು"–ಎಂದು ಹೇಳಬಹುದು. ವ್ಯವಹಾರದಲ್ಲಿ ಯಾರಿಗಾದರೂ ಪ್ರಜ್ಞೆಯು–ಎಂದರೆ ಬುದ್ಧಿಯು–ಸ್ಥಿರವಾಗಿರುತ್ತದೆ ಎಂದು ನಾವು ಹೇಳಿದರೆ ನಮ್ಮ ಅಭಿಪ್ರಾಯವೇನೆಂದರೆ, ಅದು ಮಿಕ್ಕವರ ಬುದ್ಧಿಯಂತೆ ಅತಿಚಂಚಲವಾಗಿ ಹರಿದಾಡುವದಿಲ್ಲ ಎಂದು. ವಿಷಯದಲ್ಲಿಯೇ ನೆಟ್ಟ ಬುದ್ಧಿಯುಳ್ಳವರ ಬುದ್ಧಿಯು ಹೇಗೆತಾನೆ ನೆಲೆನಿಂತೀತು? ಜಾತಿಯ ಕುದುರೆಯನ್ನು ಕಟ್ಟಿಹಾಕಿರುವಾಗ "ಅದು ನಿಂತಿದೆ" ಎನ್ನುವೆವಷ್ಟೆ? ಆಗಲೂ ಅದು ತನ್ನ ಕಾಲುಗಳನ್ನು

ಹಾಗೂಹೀಗೂ ಅಲುಗಾಡಿಸುತ್ತಲೇ ಇರುತ್ತದೆ; ಚಡಪಡಿಸುತ್ತಲೇ ಇರುತ್ತದೆ. ಆದರೆ ಸವಾರಿಗೆ ಬಿಟ್ಟರೇ ಅದಕ್ಕೆ ಸಂತೋಷ. ಅಲ್ಲವೆ? ಇದರಂತೆ ಸಾಮಾನ್ಯರ ಬುದ್ಧಿಯು ಒಂದಿಷ್ಟು ನಿಂತಿದ್ದರೂ ಅದಕ್ಕೆ ಚಾಂಚಲ್ಯವೇ ಇಷ್ಟ. ಆದ್ದರಿಂದ ಅವರು ಸ್ಥಿತಪ್ರಜ್ಞರಲ್ಲ.

ಆದರೆ ಜ್ಞಾನಿಗಳ ಪ್ರಜ್ಞೆಯು ಯಾವಾಗಲೂ ಸ್ಥಿತವಾಗಿಯೇ ಇರುತ್ತದೆ. ಇದಕ್ಕೆ ಕಾರಣವೇನೆಂದರೆ ಅವರ ಬುದ್ಧಿಯು ನಾವು ಮೇಲೆ ಶ್ರುತಿಯ ಪ್ರಮಾಣದಿಂದ ವರ್ಣಿಸಿರುವ "ಪ್ರಜ್ಞೆ" ಎಂಬ ಹೆಸರಿನ ಆತ್ಮನಲ್ಲಿ ನಿಂತುಬಿಟ್ಟಿರುತ್ತದೆ. ಆತ್ಮನೇ ನಿಜವಾದ ಅರ್ಥದಲ್ಲಿ ಪ್ರಜ್ಞೆಯು; ಬುದ್ಧಿಯು ಆತ್ಮನ ಪ್ರತಿಚ್ಛಾಯೆಯುಳ್ಳದ್ದಾಗಿರು ವದರಿಂದ ಅದೂ ಗೌಣಾರ್ಥದಿಂದ ಪ್ರಜ್ಞೆ ಎನಿಸಿರುತ್ತದೆ. ಮುಖ್ಯಪ್ರಜ್ಞೆಯಾದ ಆತ್ಮನು ಯಾವಾಗಲೂ ಸ್ಥಿತನೇ. "ಕಲ್ಲುಕುದುರೆಯು ನಿಂತಿದೆ" ಎಂದರೆ ಅದು ಓಡಾಡುವ ಸಂಭವವಿದೆ ಎಂದು ಯಾರೂ ತಿಳಿಯುವದಿಲ್ಲವಲ್ಲವೆ? ಹೀಗೆಯೇ ಎಲ್ಲರ ಆತ್ಮರೂಪನಾದ ಪ್ರಜ್ಞೆಯು ಎಂದೆಂದಿಗೂ ಸ್ಥಿತವಾಗಿಯೇ ಇರುತ್ತದೆ. ಆದರೆ ಒಂದು ವಿಶೇಷ. ಬುದ್ಧಿರೂಪವಾದ ಪ್ರಜ್ಞೆಯು ಮಾತ್ರ ಎಲ್ಲರಿಗೂ ಶಾಂತವಾಗಿ ನಿಲುಗಡೆಗೆ ಬಂದಿರುವದಿಲ್ಲ. ಯಾರ ಬುದ್ಧಿಯು ಹೊರಮುಖವಾಗಿ ವಿಷಯಗಳಕಡೆಗೇ ಹರಿಯುತ್ತಿರುವದೋ, ಅವರಿಗೆ ವಿಷಯೇಂದ್ರಿಯಗಳ ಚಾಂಚಲ್ಯಕ್ಕೆ ಅನುಗುಣವಾಗಿ ಬುದ್ಧಿಯೂ ಹಾರಾಡುತ್ತಲೇ ಇರುತ್ತದೆ. ಅವರು ಸ್ಥಿತಪ್ರಜ್ಞರಲ್ಲ. ಆದರೆ ಯಾರ ಬುದ್ಧಿಯು ನಿರ್ವಿಕಾರನಾದ ಪ್ರಜ್ಞಾತ್ಮನಲ್ಲಿಯೇ ನಿಂತಿರುವದೋ ಅವರ ಬುದ್ಧಿಯು ಚಂಚಲವಾಗಿರುವದಿಲ್ಲ. ಆದ್ದರಿಂದ ಅವರನ್ನು "ಸ್ಥಿತಪ್ರಜ್ಞರು" ಎಂದು ಅಧ್ಯಾತ್ಮಶಾಸ್ತ್ರದಲ್ಲಿ ಕರೆಯುತ್ತಾರೆ. **ಸಿದ್ಧರಾದ ಜ್ಞಾನಿಗಳು ಆತ್ಮನಲ್ಲಿಯೇ ಮನಸ್ಸಿಟ್ಟುಕೊಂಡು ಶಾಂತಿಯನ್ನು ಹೊಂದಿ ಸ್ಥಿತಪ್ರಜ್ಞರಾಗಿರುತ್ತಾರೆ. ಸಾಧಕರಾದ ಮುಮುಕ್ಷುಗಳು ಅಂಥವರನ್ನು ಅನುಕರಣೆಮಾಡಿ ಅಧ್ಯಾತ್ಮಸಾಧನಗಳನ್ನು ಮಾಡಿ ಅವರಂತೆಯೇ ಸ್ಥಿತಪ್ರಜ್ಞರಾಗಬೇಕು.** ಇದಕ್ಕಾಗಿಯೇ ಭಗವದ್ಗೀತೆಯೇ ಮುಂತಾದ ಶಾಸ್ತ್ರಗಳಲ್ಲಿ ಸ್ಥಿತಪ್ರಜ್ಞರ ಲಕ್ಷಣಗಳನ್ನು ವರ್ಣಿಸಿರುತ್ತದೆ.

ಸಾಮಾನ್ಯಜನರ ದೃಷ್ಟಿಯಿಂದ ನೋಡಿದಾಗ ಜ್ಞಾನಿಗಳು "ಸ್ಥಿತಪ್ರಜ್ಞರು" ಎನಿಸುತ್ತಾರೆಂದು ತಿಳಿದುಕೊಂಡದ್ದಾಯಿತಷ್ಟೆ. ನಾವೆಲ್ಲರೂ ನಿಜವಾಗಿ ಪ್ರಜ್ಞಾತ್ಮನಾದ ಪರಮಾತ್ಮಸ್ವರೂಪರೇ ಆಗಿರುತ್ತೇವೆ; ಆದರೂ ಅಜ್ಞಾನದಿಂದ ಆತನನ್ನು ಬಿಟ್ಟು ಬಲುದೂರಕ್ಕೆ ಬಂದಿರುತ್ತೇವೆ. ಹೊರಗಿನ ವಿಷಯಗಳಲ್ಲಿಯೇ ನೆಟ್ಟ ಇಂದ್ರಿಯಗಳುಳ್ಳವರಾಗಿ ಅಜ್ಞಾನವನ್ನು ಅವಲಂಬಿಸಿರುವದೇ ಹೀಗೆ ಆತ್ಮನನ್ನಗಲುವದಕ್ಕೆ ಕಾರಣವಾಗಿರುತ್ತದೆ. ಈಗ ನಾವು ಮತ್ತೆ ಹಿಂತಿರುಗಿ ನಮ್ಮ ಆತ್ಮನಲ್ಲಿ ನಾವು ನಿಲುಗಡೆಯನ್ನು ಹೊಂದಬೇಕಾಗಿದೆ. ನಮ್ಮ ಮನಸ್ಸು ಒಳಕ್ಕೆ ಸರಿದು ನಮ್ಮ ಆತ್ಮನಲ್ಲಿಯೇ ನಿಲುಗಡೆಹೊಂದಬೇಕಾಗಿದೆ; ನಾವು ಸ್ಥಿತಪ್ರಜ್ಞರಾಗಬೇಕಾಗಿದೆ. ಆದ್ದರಿಂದ ನಮಗೆ ದಾರಿಯನ್ನು ತೋರಿಸುವದಕ್ಕೆ

ಸ್ಥಿತಪ್ರಜ್ಞರಾಗಬೇಕು. ಸ್ಥಿತಪ್ರಜ್ಞರು ಪ್ರಜ್ಞಾತ್ಮನಲ್ಲಿಯೇ ನಿಂತಿರುವದು ಏತರ ಬಲದಿಂದ? ಅವರ ಬುದ್ಧಿಯು ಆತ್ಮನಲ್ಲಿಯೇ ನಿಂತಿರುವದರಿಂದ. ಅವರ ವ್ಯವಹಾರಕ್ಕೂ ನಮ್ಮ ವ್ಯವಹಾರಕ್ಕೂ ಯಾವ ಹೆಚ್ಚುಕಡಿಮೆಯಾಗಿರುತ್ತದೆ? ಇದನ್ನು ನಾವು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. ಅವರನ್ನು ಅನುಕರಿಸಿ ನಾವೂ ಕೃತಾರ್ಥರಾಗಬೇಕು.

ಸ್ಥಿತಪ್ರಜ್ಞನ ಲಕ್ಷಣಗಳು ಯಾವವು? ಇವನ್ನು ಶಾಸ್ತ್ರದಲ್ಲಿ ವರ್ಣಿಸಿರುವ ವಾಕ್ಯಗಳನ್ನು ಗಟ್ಟಿಮಾಡಿಕೊಳ್ಳುವದಾಗಲಿ, ತರ್ಕದಿಂದ ನಿಶ್ಚಯಿಸಿಕೊಳ್ಳುವದಾಗಲಿ ಇಲ್ಲಿ ಯಾವ ಕೆಲಸಕ್ಕೂ ಬರುವದಿಲ್ಲ. ನಮ್ಮನಮ್ಮ ಹೃದಯದಲ್ಲಿ ಅವುಗಳನ್ನು ಹೊರಳಿಸಬೇಕು, ಇವುಗಳ ಧ್ಯಾನದಿಂದ ನಮ್ಮ ಮನಸ್ಸಿನ ಸ್ವಭಾವವೇ ಬದಲಾಯಿಸಬೇಕು; ಅದರ ಪರಿಣಾಮವಾಗಿ ನಮ್ಮ ನಡೆನುಡಿಗಳಲ್ಲಿ ತಿದ್ದುಪಡಿಯಾಗಬೇಕು. ಈ ದೃಷ್ಟಿಯಿಂದ ಗೀತೆಯಲ್ಲಿ ಹೇಳಿರುವ ಬಹುಮುಖ್ಯವಾದ ಸ್ಥಿತಪ್ರಜ್ಞಲಕ್ಷಣಗಳನ್ನು ನಮ್ಮೊಳಗೆ ನಾವೇ ಮೆಲುಕುಹಾಕುವದಕ್ಕೆ ಪ್ರಯತ್ನಿಸೋಣ.

(1) ಮೊಟ್ಟಮೊದಲನೆಯ ಶ್ಲೋಕದ ಅರ್ಥವನ್ನು ಭಾವನೆಮಾಡಿಕೊಳ್ಳೋಣ: **"ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ । ಆತ್ಮನ್ಯೇವಾऽऽತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥"** ಕಾಮಗಳನ್ನೆಲ್ಲ ಸಂಪೂರ್ಣವಾಗಿ (ಪ್ರ=ತೀರ) ಬಿಟ್ಟು ಬಿಟ್ಟವನು ಸ್ಥಿತಪ್ರಜ್ಞನು. ಈ ಕಾಮಗಳು ಮನಸ್ಸಿನಲ್ಲಿಯೇ ಇರುತ್ತವೆ. ಆತ್ಮನಿಗೆ ಸಂಬಂಧ ಪಟ್ಟಿರುವದಿಲ್ಲ. ಯಾರು ಮನಸ್ಸನ್ನೇ ಅಪ್ಪಿಕೊಂಡು, ಅದೇ ತಾವೆಂದುಕೊಂಡಿರುವರೋ, ಅವರಿಗೆ ಕಾಮಗಳು ತಪ್ಪವು. ಆದರೆ ಯಾರು ಮನಸ್ಸಿನಿಂದ ಬಿಡುಗಡೆಯನ್ನು ಹೊಂದಿರುವರೋ, ಅವರು ಕಾಮಗಳ ಹಿಡಿತದಿಂದ ಬಿಡುಗಡೆಯಾದಂತೆ. ಮನಸ್ಸನ್ನು ಬಿಡುವದು ಹೇಗೆ? ಎಂದರೆ ಆ ಮನಸ್ಸು ನಿಜವಾಗಿ ಆತ್ಮನಿಗಿಂತ ಬೇರೆಯಾಗಿರುವದೇ ಇಲ್ಲ; ಮನಸ್ಸಿನ ತಿರುಳು ಆತ್ಮನೇ. ಆತ್ಮನಲ್ಲಿಯೇ ಮನಸ್ಸು ಕರಗಿಹೋದರೆ, ಆತ್ಮನೇ ಆಗಿಬಿಟ್ಟರೆ, ಆಗ ಕಾಮಗಳೆಲ್ಲವೂ ಆತ್ಮನೇ ಆಗಿಬಿಡುತ್ತದೆ. "ಆಪ್ತಕಾಮ ಆತ್ಮಕಾಮಃ" (ಬೃ. 4-4-6) ಎಂಬ ಶ್ರುತಿಯಲ್ಲಿ ಹೀಗೆಂದು ಹೇಳಿದೆ; ಯಾವನಿಗೆ ಕಾಮಗಳೆಲ್ಲವೂ ಆತ್ಮನೇ ಆಗಿಬಿಡುವವೋ ಅವನು ಆಪ್ತಕಾಮನು; ಎಲ್ಲಾ ಕಾಮಗಳನ್ನೂ ಒಟ್ಟಿಗೇ ಪಡೆದುಕೊಂಡವನು. ಆಗ ಅವನು "ಆತ್ಮನ್ಯೇವಾऽऽತ್ಮನಾ ತುಷ್ಟಃ" ಆತ್ಮನಲ್ಲಿಯೇ ಆತ್ಮರೂಪದಿಂದಲೇ ಸಂತುಷ್ಟನಾಗಿರುತ್ತಾನೆ. ಅವನನ್ನು "ಆತ್ಮರತಿ, ಆತ್ಮಕ್ರೀಡ, ಆತ್ಮಾರಾಮ" ಎಂದು ಶ್ರುತಿ ಹೊಗಳುತ್ತದೆ. ಈಗ ನಾವು ನಿಂತಿರುವದು ಮನಸ್ಸಿನಲ್ಲಿಯೊ, ಇಂದ್ರಿಯಗಳಲ್ಲಿಯೊ, ವಿಷಯಗಳಲ್ಲಿಯೊ ನೋಡಿಕೊಂಡರೆ ಆಗ ಈ ವರ್ಣನೆಯ ಬೆಲೆ ತಿಳಿದೀತು.

ಇನ್ನೊಂದು ಲಕ್ಷಣವಾಕ್ಯವನ್ನು ನೋಡಿ: "ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ । ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥" ಈ ಶ್ಲೋಕದಲ್ಲಿ

ವೇದನೆಗಳ ಜಯವನ್ನು ಹೇಳಿದೆ. ದುಃಖಗಳುಂಟಾದರೆ ತಳಮಳವಿಲ್ಲದೆ, ಸುಖಗಳಿಗಾಗಿ ತಹತಹವನ್ನು ತೋರಿಸದೆ, ರಾಗ, ಭಯ, ಕ್ರೋಧ–ಇವುಗಳು ಯಾವವೂ ಇಲ್ಲದವನು ಸ್ಥಿತಪ್ರಜ್ಞನು–ಎಂಬುದು ಶ್ಲೋಕಾರ್ಥ. ಸಾಧುಗಳ ವೇಷವನ್ನು ಹಾಕಿಕೊಂಡು ಮತ್ತೊಬ್ಬರನ್ನು ಮೋಸಪಡಿಸಬಹುದು; ಆದರೆ ಒಳಗೆ ಆಗುತ್ತಿರುವ ರಾಗ, ಭಯ, ಕ್ರೋಧ–ಇವುಗಳಿಂದಾಗುವ ಬೇಗೆಗೆ ಸಿಕ್ಕಿಕೊಂಡಿರುತ್ತೇವೆಂಬುದು ನಮಗಂತೂ ನಿಶ್ಚಯವಾಗಿಬಿಟ್ಟಿರುತ್ತದೆಯಲ್ಲವೆ?

(2) ಇದುವರೆಗೆ ಹೇಳಿದ್ದು ಮನಸ್ಸಿಗೆ ಸಂಬಂಧಪಟ್ಟ ವಿಷಯ. ಇನ್ನು ಹೊರಗಿನ ಇಂದ್ರಿಯಗಳ ಕಡೆಗೆ ತಿರುಗೋಣ. "ಯಃ ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಮ್। ನಾಭಿನನ್ದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥" ಈ ಶ್ಲೋಕದಲ್ಲಿ ಹೊರಗಿರುವ ವಸ್ತುಗಳೊಳಗೆ ಕೆಲವನ್ನು ಒಳ್ಳೆಯವೆಂದೂ ಮತ್ತೆ ಕೆಲವನ್ನು ಕೆಟ್ಟವೆಂದೂ ನಾವು ಭಾವಿಸಿಕೊಂಡಿರುವ ವಿಷಯವನ್ನು ಪ್ರಸ್ತಾಪಿಸಿದೆ. ಒಳ್ಳೆಯದು ನಮಗೆ ಬಂದೊದಗಿದರೆ ಹಿಗ್ಗುವೆವು; ಕೆಟ್ಟದ್ದು ಬಂದೊದಗಿದರೆ ಅವುಗಳ ಮೇಲಿನ ದ್ವೇಷದಿಂದ ಕುಸಿಯುವೆವು. ಅಲ್ಲವೆ? ಈ ಏರುಪೇರುಗಳು ಸ್ಥಿತಪ್ರಜ್ಞರಿಗೆ ಇರುವದಿಲ್ಲ.

ಇಷ್ಟೇ ಅಲ್ಲ. ನಮಗೆ ಬೇಕಾದ ಒಳ್ಳೆಯ ವಿಷಯಗಳು ನಮ್ಮ ಮುಂದೆ ಬಂದುನಿಂತರೆ ನಮ್ಮ ಇಂದ್ರಿಯಗಳು ನಮ್ಮ ಮಾತನ್ನು ಕೇಳುವದೇ ಇಲ್ಲ; ಹುಡುಗರು ಬೀದಿಯಲ್ಲಿ ಕೇಳಬರುವ ಬ್ಯಾಂಡುಧ್ವನಿಯು ಕಿವಿಗೆ ಬಿದ್ದೊಡನೆ ಹೊರಕ್ಕೆ ಓಡುವಂತೆ, ಅವು ವಿಷಯಗಳ ಕಡೆಗೆ ಹೇಳದೆಕೇಳದೆ ಧಾವಿಸಿಬಿಡುವವು; ಆದರೆ ಸ್ಥಿತಪ್ರಜ್ಞನಾದವನು ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾನೆಂದರೆ "ಯದಾ ಸಂಹರತೇ ಚಾಯಂ ಕೂರ್ಮೋಽಙ್ಗಾನೀವ ಸರ್ವಶಃ । ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ॥" ಆಮೆಗೆ ಏನಾದರೂ ಅಂಜಿಕೆಯಾಯಿತೆಂದರೆ ಸರಕ್ಕನೆ ಅದು ತನ್ನ ಕಾಲುಗಳನ್ನೆಲ್ಲ ಒಳಕ್ಕೆ ಎಳೆದುಕೊಂಡು ಬಿಡುತ್ತದೆ; ಅದರಂತೆ ಸ್ಥಿತಪ್ರಜ್ಞನೂ ಇಂದ್ರಿಯಗಳನ್ನು ತನ್ನ ಸ್ವತಂತ್ರವಾದ ಸಂಕಲ್ಪದಂತೆ ವಿಷಯದಲ್ಲಿಟ್ಟುಕೊಂಡಿರುತ್ತಾನೆ; ಇಂದ್ರಿಯಗಳು ಹೊರಕ್ಕೆ ಹೋಗಬಾರದೆಂದು ಇಚ್ಛೆಯುಂಟಾದಾಗ ಅವುಗಳನ್ನು ಆಮೆಯು ಕಾಲುಗಳನ್ನೆಳೆದುಕೊಳ್ಳುವಂತೆ ಎಳೆದುಕೊಂಡುಬಿಡುತ್ತಾನೆ.

ಸಾಧಾರಣವಾಗಿ ಎಷ್ಟೋ ಜನರಿಗೆ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂಬ ಯೋಚನೆಯೇ ಮನಸ್ಸಿಗೆ ಬಂದಿರುವದಿಲ್ಲ; ಆದ್ದರಿಂದ ಅವರು ಇಂದ್ರಿಯಗಳು ಹೊರಕ್ಕೆ ನುಗ್ಗುತ್ತಿರುವದೇನೂ ಆಶ್ಚರ್ಯವಲ್ಲ, ಆದರೆ ಇಂದ್ರಿಯಗಳನ್ನು ಹಿಂಜಗ್ಗಬೇಕೆಂದು ಪ್ರಯತ್ನಿಸುವ ಸಾಧಕರ ಮಾತನ್ನು ಕೇಳದೆ ಇಂದ್ರಿಯಗಳು ಅವರನ್ನೂ ಹೊರಕ್ಕೆ ಎಳೆದುಕೊಂಡು ಹೋಗುತ್ತಿರುವವು! "ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ

ಮತ್ಪರಃ" ಸ್ಥಿತಪ್ರಜ್ಞನಾದವನು ಅಂಥ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಪರಮಾತ್ಮಚಿಂತನೆಯಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡಿರುತ್ತಾನೆ. ಇಂದ್ರಿಯಗಳನ್ನು ಹೀಗೆ ಹಿಂದಕ್ಕೆ ಎಳೆದುಕೊಂಡಿರುವ ವ್ಯಾಪಾರವೇ ಪ್ರತ್ಯಾಹಾರವೆನಿಸುವದು.

(3) ಮನಸ್ಸಿನಲ್ಲಿ ಕಾಮವು ಇಲ್ಲದಂತೆ ಆಗುವ ಮೊದಲೇ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರಬೇಕಾಯಿತಷ್ಟೆ. ಆದರೆ ಈ ಎರಡು ಸಾಧನಗಳೂ ಜನರಿಗೆ ಸಾಮಾನ್ಯವಾಗಿ ಅಳವಡದೆ ಇರುತ್ತವೆ. ಇದಕ್ಕೆ ಕಾರಣವೇನು? ಎಂದರೆ ಗೀತೆಯಲ್ಲಿ ಅದಕ್ಕೆ ಈ ಉತ್ತರವನ್ನು ಕೊಟ್ಟಿದೆ. ಜನರು ಸಾಮಾನ್ಯವಾಗಿ ವಿಷಯಗಳ ಚಿಂತನೆಯನ್ನು ಮಾಡುತ್ತಲೇ ಇರುತ್ತಾರೆ. ವಿಷಯಗಳ ಧ್ಯಾನದಿಂದ ಅವುಗಳಲ್ಲಿ ಮನಸ್ಸು ಅಂಟಿಕೊಳ್ಳುತ್ತದೆ. ಸಂಗದಿಂದ ಕಾಮ, ಕಾಮದಿಂದ ಕ್ರೋಧ, ಕ್ರೋಧದಿಂದ ಸಂಮೋಹ, ಸಂಮೋಹದಿಂದ ಸ್ಮೃತಿಭ್ರಂಶ, ಅದರಿಂದ ಬುದ್ಧಿನಾಶ-ಇವುಗಳು ಎಡೆಬಿಡದೆ ಆಗುತ್ತಿರುವವು. ಸ್ಥಿತಪ್ರಜ್ಞಾದವರು ವಿಷಯಧ್ಯಾನವನ್ನು ಬಿಟ್ಟುಬಿಡುವರು, ರಾಗದ್ವೇಷಗಳಿಲ್ಲದೆ ಅತ್ಯವಶ್ಯವಾದ ಇಂದ್ರಿಯಾರ್ಥಗಳ ಸೇವೆಯನ್ನು ಮಾಡುವರು. ಇದರಿಂದ ಅವರ ಮನಸ್ಸು ಕಾಮಾದಿಗಳ ಕಾಲುಷ್ಯವಿಲ್ಲದೆ ಪ್ರಸನ್ನವಾಗಿರುತ್ತದೆ. ಆದ್ದರಿಂದ ಅವರ ಬುದ್ಧಿಯು ನಿಲುಗಡೆಗೆ ಬಂದಿರುತ್ತದೆ. ಅವರ ಮನಸ್ಸಿನಲ್ಲಿ ಯಾವ ಇಚ್ಛೆಗಳೂ ನುಗ್ಗಿ ಅವರನ್ನು ವಿಕಾರಗೊಳಿಸಲಾರದೆ ಇರುತ್ತವೆ. ಏಕೆಂದರೆ ಅವರು ನಿತ್ಯನಿರ್ವಿಕಾರನಾದ ಪರಮಾತ್ಮನಲ್ಲಿ ನೆಲೆನಿಂತಿರುತ್ತಾರೆ.

ಆದ್ದರಿಂದ ಪರಮಾರ್ಥತತ್ತ್ವದ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆನ್ನುವವರು ಸ್ಥಿತಪ್ರಜ್ಞರನ್ನು ಮೇಲುಪಙ್ಕ್ತಿಯಾಗಿಟ್ಟುಕೊಂಡು ಇಂದ್ರಿಯಗಳನ್ನೂ ಮನಸ್ಸನ್ನೂ ದಾಟುವದಕ್ಕೆ ಪ್ರಯತ್ನಿಸಬೇಕು.

## 4.12. ಪರಮಾತ್ಮನೊಬ್ಬನೇ ಪರಮಾರ್ಥವು

**ಆತ್ಮಯಾಜೀ ಶ್ರೇಯಾನ್ ದೇವಯಾಜೀನ ಇತಿ ॥ -ಶ-ಬ್ರಾ-11-2-2-13**

ಪರಮಾರ್ಥವನ್ನು ಬಲ್ಲವರು "ಸ್ಥಿತಪ್ರಜ್ಞ"ರಾಗಿರುತ್ತಾರೆ. ಅವರು ಕಾಮಗಳನ್ನೆಲ್ಲ ಬಿಟ್ಟುಬಿಟ್ಟಿರುತ್ತಾರೆ; ದುಃಖದಿಂದ ತಳಮಳಗೊಳ್ಳದೆ ಸುಖಕ್ಕಾಗಿ ತಹತಹಪಡದೆ ಇರುತ್ತಾರೆ; ವಿಷಯಗಳು ಒಳ್ಳೆಯವು ಕೆಟ್ಟವು ಎಂದು ಬಗೆಯುವ ಇಂದ್ರಿಯ ಗಳಿಂದ ಏರುಪೇರನ್ನು ಪಡೆಯದೆ ಇರುತ್ತಾರೆ, ಇಂದ್ರಿಯಗಳನ್ನು ತಮ್ಮ ಅಳವಿನಲ್ಲಿಟ್ಟು ಕೊಂಡಿರುತ್ತಾರೆ; ಮನಸ್ಸಿನಲ್ಲಿ ವಿಷಯಧ್ಯಾನವಿಲ್ಲದೆ, ಯಾವ ಕಾಮಗಳಿಂದಲೂ ಮನಸ್ಸು ಚಲಿಸದಂತೆ ಇಟ್ಟುಕೊಂಡಿರುತ್ತಾರೆ-ಎಂದು ತಿಳಿದುಕೊಂಡದ್ದಾಯಿತು.

ಜ್ಞಾನಿಗಳ ಈ ಲಕ್ಷಣವನ್ನು ಗುರುತಿಸಿದ ಮೇಲೂ ನಮಗೆ ಅವರನ್ನು ಅನುಸರಿಸುವದಕ್ಕೆ

ಬಾರದೆಇರಬಹುದು. ಚೆನ್ನಾಗಿ ಪಿಟೀಲನ್ನು ಬಾರಿಸುವವರನ್ನು ನೋಡಿದವರಿಗೆ ತಾವೂ ಹಾಗೆಯೇ ಬಾರಿಸಬಹುದು ಎನ್ನಿಸುತ್ತದೆ. ಆದರೆ ಹಾಗೆ ಬಾರಿಸಲು ಪ್ರಯತ್ನಮಾಡಿದಾಗ ಮಾತ್ರ ಪಿಟೀಲಿನಿಂದ ಅಪಸ್ವರವೇ ಹೊರಡುತ್ತದೆ. ಇದರಂತೆ ದೊಡ್ಡವರನ್ನು ನೋಡಿದಮೇಲೂ ಅವರ ಲಕ್ಷಣವನ್ನು ಅನುಸರಿಸುವದಕ್ಕೆ ಆಗದೆ ಇರುವವರು ಏನುಮಾಡಬೇಕು?-ಎಂಬ ಪ್ರಶ್ನೆಯು ಹುಟ್ಟುವದು ಸಹಜವಾಗಿದೆ. ಏಕೆಂದರೆ ಎಲ್ಲಾ ಸಾಧಕರೂ ಒಂದೇ ಅಂತಸ್ತಿನ ಮನಸ್ಸಿನವರಾಗಿರುವದಿಲ್ಲ.

ಈ ಪ್ರಶ್ನೆಗೆ ಶಾಸ್ತ್ರದಲ್ಲಿ ಹೇಳಿರುವ ಉತ್ತರವೇನೆಂದರೆ, ಇದಕ್ಕೆ ಯೋಗವನ್ನು ಆರಂಭಿಸುವದೇ ಉಪಾಯ. ಭಗವಂತನು ಅರ್ಜುನನಿಗೆ ಮೊಟ್ಟಮೊದಲು ಜ್ಞಾನವನ್ನೇ ಉಪದೇಶಿಸಿರುತ್ತಾನೆ; ಆದರೆ ಅದಕ್ಕೆ ತಕ್ಕ ಯೋಗ್ಯತೆಯಿಲ್ಲದಿದ್ದರೆ ಏನು ಮಾಡಬೇಕೆಂದು ಅರ್ಜುನನು ಕೇಳಬಹುದೆಂದು ಆಮೇಲೆ ಯೋಗವನ್ನೂ ಉಪದೇಶಿಸಿರುತ್ತಾನೆ: "**ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು । ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬನ್ಧಂ ಪ್ರಹಾಸ್ಯಸಿ ॥**" ಇದು ಸಾಂಖ್ಯದ ವಿಷಯದ ಬುದ್ಧಿಯು, ಇನ್ನು ಯೋಗ ವಿಷಯದ ಬುದ್ಧಿಯನ್ನು ಕೇಳು; ಅದರಿಂದ ನೀನು ಕರ್ಮಬಂಧವನ್ನು ತೊಲಗಿಸಿಕೊಳ್ಳಬಹುದು-ಎಂದು ಹೇಳಿರುವ ವಾಕ್ಯಕ್ಕೆ ಮೇಲೆಮೇಲೆ ನೋಡಿದರೆ "ಸಾಂಖ್ಯಬುದ್ಧಿಯಾದರೂ ಆಗುತ್ತದೆ, ಯೋಗಬುದ್ಧಿಯಾದರೂ ಆಗುತ್ತದೆ; ನಿನಗೆ ಬೇಕಾದದ್ದನ್ನು ಆರಿಸಿಕೊ" ಎಂದು ಭಗವಂತನು ಉಪದೇಶಿಸಿರುವಂತೆ ತೋರುತ್ತದೆ. ಆದರೆ ನಿಜವು ಹೀಗಿಲ್ಲ. ಸಾಂಖ್ಯವೆಂದರೆ ಪರಮಾರ್ಥವಸ್ತುವನ್ನು ವಿವೇಚನೆಮಾಡಿ ಅರಿತುಕೊಳ್ಳುವ ಜ್ಞಾನ; ಆ ಜ್ಞಾನದಲ್ಲಿ ನೆಲೆನಿಂತವರನ್ನೇ ನಾವು ಸ್ಥಿತಪ್ರಜ್ಞರು ಎಂದು ಹೇಳಿರುವದು. ಆದರೆ ಯಾರು ಆ ಜ್ಞಾನವನ್ನು ಸಂಪಾದಿಸುವ ಶಕ್ತಿಯಿಲ್ಲದವರೋ ಅವರಿಗೆ ಆ ಜ್ಞಾನದ ಸಂಪಾದನೆಗೆ ಸಾಧನವಾಗಿ "**ಯೋಗ**"ವನ್ನು ಉಪದೇಶಿಸಿರುತ್ತದೆ. ಇದು ಭಗವಂತನ ಮುಂದಿನ ಉಪದೇಶದಿಂದ ವ್ಯಕ್ತವಾಗುವದು.

ಸದ್ಯಕ್ಕೆ ನಮ್ಮಲ್ಲನೇಕರು ಗೀತೋಕ್ತವಾದ ಸಾಂಖ್ಯಬುದ್ಧಿಯವರೂ ಅಲ್ಲ, ಯೋಗಬುದ್ಧಿಯವರೂ ಅಲ್ಲ; ಆದರೂ ಗೀತೆಯ ಅಭಿಪ್ರಾಯವು ನಮಗೇ ತಿಳಿದೇ ಇದೆಯೆಂದೋ ಗೀತೆಯಲ್ಲಿ ಪರಾಮರ್ಶಿಸಿರುವ ಅಧಿಕಾರಿಗಳು ನಾವೇ ಎಂದೋ ಭಾವಿಸಿಕೊಂಡಿರುತ್ತೇವೆ! ಲೋಕದಲ್ಲಿ ಅಂಗಡಿಗೆ ಹೋದವರು ಅಲ್ಲಿರುವ ಸಾಮಾನು ಗಳೆಲ್ಲವನ್ನೂ ಕೊಳ್ಳುವದಿಲ್ಲ; ತಮಗೆ ಬೇಕಾದ ಪದಾರ್ಥಗಳಲ್ಲಿ ಅತ್ಯಂತ ಉತ್ತಮವಾದದ್ದೇ ಬೇಕೆಂದು ಆಗ್ರಹವನ್ನು ತೊಡುವದಿಲ್ಲ. ತಮ್ಮ ತಮ್ಮ ಯೋಗ್ಯತೆ, ಶಕ್ತಿ-ಇವುಗಳನ್ನು ಅನುಸರಿಸಿ ವ್ಯಾಪಾರಮಾಡುತ್ತಾರೆ. ಅದರಂತೆ ಇಲ್ಲಿಯೂ ಮಾಡಬೇಕಲ್ಲವೆ? ಶಾಸ್ತ್ರದಲ್ಲಿ ಉತ್ತಮ, ಮಧ್ಯಮ, ಅಧಮ-ಎಂದು ಅಧಿಕಾರಿಗಳನ್ನು ಮೂರು ತರಗತಿಗಳಾಗಿ ವಿಂಗಡಿಸಿರುತ್ತದೆ. ಉತ್ತಮಾಧಿಕಾರಿಗಳಿಗೆ ಜ್ಞಾನ, ಮಧ್ಯಮಾಧಿಕಾರಿಗಳಿಗೆ ಉಪಾಸನೆ,

ಅಧಮಾಧಿಕಾರಿಗಳಿಗೆ ಕರ್ಮ-ಹೀಗೆ ಸಾಧನವನ್ನು ಹೇಳಿರುತ್ತದೆ. ನಾವು ಈ ಯಾವ ತರಗತಿಗೂ ಸೇರದೆ ಇದ್ದರೂ ನಮಗೆ ಉತ್ತಮಾಧಿಕಾರಿಗಳಿಗೆ ತಕ್ಕ ಜ್ಞಾನವೇ ಬೇಕು ಎಂದು ಹಠಹಿಡಿಯುವದು ಯಾವ ನ್ಯಾಯ?

ಭಗವದ್ಗೀತೆಯಲ್ಲಿ ಜ್ಞಾನಕ್ಕೆ ಸಾಧನವಾಗಿ ಹೇಳಿರುವ ಯೋಗವೆಂಬುದಕ್ಕೆ ಕರ್ಮವೇ ತಳಹದಿ. ಅದನ್ನು ಸಾಮಾನ್ಯರಾದ ಅಧಿಕಾರಿಗಳು ತಮತಮಗೆ ವಿಧಿಸಿರುವ ಕರ್ಮವನ್ನು ದೇವತೆಗಳ ಪ್ರೀತ್ಯರ್ಥವಾಗಿ ಮಾಡಬೇಕು. ಆದರೆ ಮುಮುಕ್ಷುಗಳು ಅದೇ ಕರ್ಮಗಳನ್ನು ಕರ್ಮಯೋಗವಾಗಿ ಮಾರ್ಪಡಿಸಿಕೊಂಡು ಅನುಷ್ಠಾನ ಮಾಡಬೇಕು. ಗೀತೆಯಲ್ಲಿ ಹೇಳಿರುವ ಕರ್ಮಯೋಗಕ್ಕೆ ವೇದದ ಆಧಾರವೂ ಇರುತ್ತದೆ. ಶತಪಥಬ್ರಾಹ್ಮಣದಲ್ಲಿ ಒಂದು ವಾಕ್ಯವಿದೆ: "ಆತ್ಮಯಾಜಿಯು ಹೆಚ್ಚಿನವನೊ, ದೇವಯಾಜಿಯು ಹೆಚ್ಚಿನವನೊ? ಎಂದರೆ ಆತ್ಮಯಾಜಿಯೇ ಹೆಚ್ಚಿನವನು ಎನ್ನಬೇಕು". ಕರ್ಮವನ್ನು ಮಾಡುವಾಗ ದೇವತೆಗಳಿಗೆ ತೃಪ್ತಿಯಾಗಲಿ, ಅವರು ಇದರಿಂದ ತೃಪ್ತರಾಗಿ ನನಗೆ ಪರಲೋಕದ ಸುಖವನ್ನು ಕೊಡಲಿ!- ಎಂದು ಹಾರೈಸುತ್ತಾನಲ್ಲ, ಅವನು **ದೇವಯಾಜಿಯು**. ಆದರೆ ಯಾವನು ಆತ್ಮಸಂಸ್ಕಾರಕ್ಕಾಗಿ ಕರ್ಮವನ್ನು ಮಾಡುವನೋ ಅವನು **ಆತ್ಮಯಾಜಿಯು**- ಎಂಬುದು ಆ ವಾಕ್ಯದ ಅಭಿಪ್ರಾಯ. ಆತ್ಮಯಾಜಿಯ ಕರ್ಮವನ್ನೇ ಗೀತೆಯಲ್ಲಿ ಕರ್ಮಯೋಗ ಎಂದು ಕರೆದಿರುತ್ತದೆ.

ಭಗವದ್ಗೀತೆಯಲ್ಲಿಯೂ ಬ್ರಾಹ್ಮಣಗಳಲ್ಲಿಯೂ ಕಾಮ್ಯಕರ್ಮವನ್ನು ನಿಂದೆ ಮಾಡಿರುವದು ಕಂಡುಬರುತ್ತದೆ. ಸಾಮಂತರಾಜನು ತನ್ನ ಅಧಿಪತಿಯಾದ ರಾಜನಿಗೆ ಪೊಗದಿಯನ್ನು ಒಪ್ಪಿಸುವಂತೆಯೂ ವೈಶ್ಯನು ರಾಜನಿಗೆ ಕಂದಾಯವನ್ನು ಕೊಡುವಂತೆಯೂ ದೇವಯಾಜಿಯು ದೇವತೆಗಳಿಗೆ ಕರ್ಮವನ್ನು ಅರ್ಪಿಸುತ್ತಾನೆ-ಎಂದು ಶತಪಥಬ್ರಾಹ್ಮಣದಲ್ಲಿ ಕರ್ಮವನ್ನು ಹಳಿದಿರುತ್ತದೆ. "ವೇದವಾದರತರಾದವರಿಗೆ ವ್ಯವಸಾಯಾತ್ಮಿಕಬುದ್ಧಿಯು ದಕ್ಕಲಾರದು; ಕಾಮಕಾಮರಾಗಿ ವೈದಿಕಧರ್ಮವನ್ನು ಅನುಸರಿಸಿದವರಿಗೆ ಸ್ವರ್ಗಲೋಕಕ್ಕೆ ಹೋಗುವದೂ ಬರುವದೂ-ಇಂಥ ಅಲ್ಪಫಲವು ದೊರಕುವದು (2-42, 43; 9-21) ಎಂದು ಗೀತೆಯಲ್ಲಿಯೂ ನಿಂದಿಸಿದೆ. ಹೀಗೆ ಕರ್ಮವನ್ನು ನಿಂದಿಸಿರುವದು ಏತಕ್ಕೆ?- ಎಂಬ ಗುಟ್ಟನ್ನು ಅರಿಯದೆ, "ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ಕರ್ಮವನ್ನು ನಿಂದಿಸಿರುತ್ತದೆ, ಗೌತಮಬುದ್ಧನೂ ನಿಂದಿಸಿರುತ್ತಾನೆ; ಆದ್ದರಿಂದ ಈ ಎರಡು ಮತಗಳೂ ಒಂದೇ" ಎಂದು ಕೆಲವರು ವಾದಿಸುತ್ತಿರುತ್ತಾರೆ. ಆದರೆ ಮೋಕ್ಷಶಾಸ್ತ್ರದಲ್ಲಿ ಕರ್ಮವನ್ನು ನಿಂದಿಸಿರುವದು ಕರ್ಮವನ್ನು ನಿಂದಿಸುವದಕ್ಕಲ್ಲ; ಮತ್ತೇನೆಂದರೆ ಕರ್ಮಯೋಗವನ್ನು ಹೊಗಳುವದಕ್ಕೆ ಬಂದದ್ದು. ಕರ್ಮವನ್ನು ಮಾಡುವದರಿಂದ ಸ್ವರ್ಗಾದಿಫಲಗಳು ಸಿಕ್ಕುವದು ನಿಜವಾದರೂ ಮೋಕ್ಷಫಲದಂಥ ನಿತ್ಯಫಲವನ್ನು ಕೊಡುವಯೋಗ್ಯತೆ ಅದಕ್ಕಿಲ್ಲ; ಅದೇ ಕರ್ಮವನ್ನು ಕರ್ಮಯೋಗವಾಗಿ ಮಾಡಿಕೊಂಡರೆ

ಆಗ ಅದು ಇನ್ನೂ ಉತ್ತಮಫಲವನ್ನು ಕೊಡುತ್ತದೆ ಎಂಬುದು ನಿಂದೆಯ ತಾತ್ಪರ್ಯ. "ಇವರೆಲ್ಲ ಎಂಥ ವಿದ್ಯಾರ್ಥಿಗಳು? ಯಾವನು ವಿದ್ಯೆಗಾಗಿ ಸುಖವನ್ನೂ ನಿದ್ರೆಯನ್ನೂ ಬಿಟ್ಟು ಇರಬಲ್ಲನೋ ಅವನೇ ವಿದ್ಯಾರ್ಥಿ-ಎಂದರೆ ನಿಜವಾದ ವಿದ್ಯಾರ್ಥಿ ಹೀಗಿರಬೇಕು ಎಂದು ಹೊಗಳುವದೇ ಉದ್ದೇಶ್ಯವಲ್ಲವೆ? ಅದರಂತೆಯೇ ಇಲ್ಲಿಯೂ ತಿಳಿಯಬೇಕು.

ಈ ಕರ್ಮಯೋಗದ ಸ್ವರೂಪವು ಯಾವದು? ಕೆಲವರು ಯಾವಾಗಲೂ ಕರ್ಮವನ್ನು ಮಾಡುತ್ತಿರುವವರನ್ನು "ಕರ್ಮಯೋಗಿಗಳು" ಎಂದು ಹೊಗಳುವದುಂಟು. ಗೀತೆಯಲ್ಲಿ ಹೇಳಿರುವ ಕರ್ಮಯೋಗವಂತೂ ಅದಲ್ಲ. "ದ್ವಂದ್ವಪ್ರಹಾಣಪೂರ್ವಕಮೀ-ಶ್ವರಾರಾಧನಾರ್ಥೇ ಕರ್ಮಯೋಗೇ" (ಗೀ. ಭಾ. 2-39) ಎಂದು ಆಚಾರ್ಯರು ಅದನ್ನು ವರ್ಣಿಸಿರುತ್ತಾರೆ. ಕರ್ಮವನ್ನು ಮಾಡುವಾಗ ಅದರಿಂದಾಗುವ ಆಯಾಸದಿಂದಲೂ, ಫಲವು ಉಂಟಾಗುವದೋ ಇಲ್ಲವೋ ಎಂಬ ಯೋಚನೆ ಯಿಂದಲೂ ಮನಸ್ಸಿಗೆ ದುಃಖವಾಗಬಹುದು; ಉತ್ತಮರೀತಿಯಿಂದ ಮಾಡುತ್ತಿರುವೆ ನಾದ್ದರಿಂದ ಅವಶ್ಯವಾಗಿ ಈ ಕರ್ಮದಿಂದ ನನಗೆ ಉತ್ತಮಫಲವೇ ಆಗುವದೆಂಬ ಹಿಗ್ಗೂ ಆಗಬಹುದು. ಈ ಎರಡೂ ಇಲ್ಲದೆ ಕರ್ಮದಲ್ಲಿ ನನ್ನದೆಂಬ ಸಂಗವಾಗಲಿ ಅದರಿಂದಾಗುವ ಫಲದಲ್ಲಿ ಆಸಕ್ತಿಯಾಗಲಿ ಇಲ್ಲದೆ ಇರಬೇಕು. ಈ ಕರ್ಮದಿಂದ ಪರಮೇಶ್ವರನಿಗೆ ಪ್ರೀತಿಯಾದರೆ ಸಾಕು ಎಂಬ ಭಾವವು ಹೃದಯದಲ್ಲಿ ಮೂಡಿ ಕೊಂಡಿರಬೇಕು. ಫಲದಲ್ಲಿ ಆಸಕ್ತಿಯಿದ್ದರೆ ಆಗುವ ವಿಕ್ಷೇಪವು ಇದರಿಂದ ತಪ್ಪಿಹೋಗುತ್ತದೆ; ಈಶ್ವರನಿಗೆ ಅರ್ಪಿಸುವದರಿಂದ ಅದರ ಸಂಗವೂ ತಪ್ಪಿ, ಉತ್ಕೃಷ್ಟವಾದ ಚಿತ್ತಶುದ್ಧಿರೂಪವಾದ ಫಲವೇ ಲಭಿಸುತ್ತದೆ. ಇದೇ ಮುಮುಕ್ಷುಗಳು ಮಾಡಬೇಕಾದ ಕರ್ಮಯೋಗ.

"**ಯೋಗ**"ವೆಂಬ ಶಬ್ದವನ್ನು ಗೀತೆಯಲ್ಲಿ ಎಷ್ಟರ್ಥಗಳಲ್ಲಿ ಪ್ರಯೋಗಿಸಿದೆ ಎಂಬುದನ್ನು ಲಕ್ಷಿಸಬೇಕು. "ಇಮಂ ವಿವಸ್ವತೇ ಯೋಗಮ್" ಈ ಅವ್ಯಯವಾದ ಯೋಗವನ್ನು ನಾನು ವಿವಸ್ವಂತನಿಗೆ ಹಿಂದೆ ಹೇಳಿದ್ದೆನು- ಎಂದು ಭಗವಂತನು ಹೇಳಿರುವದು ಯಾವ ಯೋಗ? ಇದೇ ಜ್ಞಾನನಿಷ್ಠಾರೂಪವಾದ ಯೋಗವು. ಅದನ್ನು ತಿಳಿಸುವದಕ್ಕೇ ವೇದವೆಲ್ಲವೂ ಹೊರಟಿರುತ್ತದೆ. ಆ ಯೋಗವನ್ನು ಪಡೆಯುವದಕ್ಕೆ ಉಪಾಯ ವಾಗಿರುವದರಿಂದ ಕರ್ಮಯೋಗವೂ ಯೋಗವೆನಿಸುವದು; "ನೇಗಿಲೇ ನನ್ನ ಜೀವನವು" ಎನ್ನುವಾಗ ಅದು ನನ್ನ ಜೀವನಕ್ಕೆ ಸಾಧನವು ಎಂದರ್ಥವಷ್ಟೆ? ಹಾಗೆಯೇ ಕರ್ಮಯೋಗವು ಮುಖ್ಯಯೋಗಕ್ಕೆ ಉಪಾಯವಾಗಿರುವದರಿಂದ ಯೋಗವೆನಿಸುತ್ತದೆ. "ಯೋಗೇ ತ್ವಿಮಾಂ ಶೃಣು" ಯೋಗ ಬುದ್ಧಿಯನ್ನು ಹೇಳುತ್ತೇನೆ, ಕೇಳು-ಎಂದು ಭಗವಂತನು ಹೇಳಿರುವದು ಮುಖ್ಯಯೋಗಕ್ಕೆ ಉಪಾಯವಾದ ಯೋಗವನ್ನು. ಈ ಉಪಾಯವಾದ ಯೋಗವು ಎರಡು ಬಗೆಯಾಗಿರುತ್ತದೆ. ಮೊದಲನೆಯದು ಈಗ ವರ್ಣಿಸಿ ಆಗಿರುವ ಕರ್ಮಯೋಗವು. ಈ ಕರ್ಮಯೋಗವು ಜ್ಞಾನನಿಷ್ಠೆಗೆ

ಬಹಿರಂಗಸಾಧನವು. ಇದಕ್ಕಿಂತಲೂ ಇನ್ನೂ ಒಳಗಿನ ಸಾಧನವೊಂದುಂಟು. ಕರ್ಮಯೋಗವು ಅಳವಟ್ಟಮೇಲೆ ಮಾಡತಕ್ಕ ಯೋಗವದು. ಆ ಯೋಗವನ್ನು **ಧ್ಯಾನಯೋಗ** ಎಂದು ಗೀತೆಯಲ್ಲಿ ಕರೆದಿದೆ. ಧ್ಯಾನಯೋಗ ಎಂದರೆ ಪಾತಂಜಲಯೋಗವಲ್ಲ. ಈಗಿನ ಕಾಲಕ್ಕೆ ಅನೇಕರಿಗೆ ಯೋಗವೆಂದರೆ ಪ್ರಾಣಾಯಾಮವನ್ನು ಮಾಡಿ ಕೆಲವು ಆಸನಗಳನ್ನು ಹಾಕುವ ಕರ್ಮವೆಂಬ ಭಾವನೆ ಬಂದಿದೆ. ಇನ್ನು ಕೆಲವರಿಗೆ ಹಠಯೋಗವೇ- ಬಂಧ, ಲಕ್ಷ್ಯ, ಮುದ್ರೆ- ಮುಂತಾದವುಗಳನ್ನು ಅಭ್ಯಾಸಮಾಡುವದೇ- ಯೋಗವು. ಮತ್ತೆ ಕೆಲವರು ಪಾತಂಜಲಯೋಗವನ್ನು- ಚಿತ್ತವೃತ್ತಿಗಳನ್ನೆಲ್ಲ ತಡೆಗಟ್ಟಿ ಸಮಾಧಿಯನ್ನು ಪಡೆದುಕೊಳ್ಳುವದನ್ನು- ಯೋಗವೆಂದು ಭಾವಿಸಿರುತ್ತಾರೆ. ಆದರೆ ಗೀತೋಕ್ತವಾದ ಧ್ಯಾನಯೋಗವು ಯಾವದಕ್ಕೂ ಸಂಬಂಧಪಟ್ಟದ್ದಲ್ಲ. ಅದರಲ್ಲಿ ಆಸನ, ಪ್ರಾಣಾಯಾಮ-ಮುಂತಾದ ಕೆಲವು ಅಭ್ಯಾಸಗಳೂ ಇರಬಹುದು; ಆದರೆ ಅಷ್ಟು ಮಾತ್ರದಿಂದ ಅದಕ್ಕೂ ಪಾತಂಜಲಾದಿಯೋಗಗಳಿಗೂ ಗಂಟುಹಾಕುವದು ಸರ್ವಥಾ ಸರಿಯಲ್ಲ. ಗೀತೆಯಲ್ಲಿ ಹೇಳಿರುವ ಧ್ಯಾನಯೋಗವು "ನಿದಿಧ್ಯಾಸನ" ಎಂದು ಪ್ರಸಿದ್ಧವಾಗಿರುವ ವೇದಾಂತೋಕ್ತ ಸಾಧನವು. ಅದು ಕರ್ಮಯೋಗಕ್ಕಿಂತಲೂ ಮುಖ್ಯಾರ್ಥದಲ್ಲಿ ಯೋಗವು. ಏಕೆಂದರೆ ಅದರಿಂದ ಮುಖ್ಯಯೋಗಕ್ಕಿಂತಲೂ ಸಮ್ಯಗ್ದರ್ಶನವು ದೊರಕಿಬಿಡುತ್ತದೆ. ಗೀತೆಯಲ್ಲಿ ಇನ್ನೊಂದು ಯೋಗವನ್ನೂ ಹೇಳಿರುತ್ತದೆ. ಎಂಟನೆಯ ಅಧ್ಯಾಯದಲ್ಲಿ ಹೇಳಿರುವ ಯೋಗವದು. **"ಅಭ್ಯಾಸ ಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ । ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿನ್ತಯನ್॥"** (8-8) ಎಂಬ ಶ್ಲೋಕದಲ್ಲಿ ಅದನ್ನು ವರ್ಣಿಸಿದೆ. ಪರಮಾತ್ಮನನ್ನು ಶಾಸ್ತ್ರದಲ್ಲಿ ವರ್ಣಿಸಿರುವಂತೆ ಚಿಂತಿಸುತ್ತಾ ಅವನಲ್ಲಿಯೇ ಮತ್ತೊಂದರ ಭಾವನೆಯು ನಡುವೆ ಬಾರದಂತೆ ಧ್ಯಾನಿಸುತ್ತಿದ್ದರೆ ಎಡೆಬಿಡದೆ ಭಾವನೆಮಾಡುತ್ತಿದ್ದರೆ, ಆ ಪರಮಪುರುಷನನ್ನೇ ಮರಣಾನಂತರದಲ್ಲಿ ಹೋಗಿ ಸೇರುವನು- ಎಂದು ಅಲ್ಲಿ ಹೇಳಿರುತ್ತದೆ. ಆ ಯೋಗಕ್ಕೆ **ಉಪಾಸನೆ** ಎಂದು ಹೆಸರು. ಈಗ ನಾವು ವಿಚಾರಮಾಡುತ್ತಿರುವ ಆರನೆಯ ಅಧ್ಯಾಯದಲ್ಲಿ ವರ್ಣಿತವಾಗಿರುವ **ಧ್ಯಾನಯೋಗವು** ಅದಲ್ಲ. ಉಪಾಸನೆಯು ಕರ್ತೃತಂತ್ರ, ಎಂದರೆ ಭಾವನೆಮಾಡುವವನ ಪ್ರಯತ್ನಕ್ಕೆ ಅನುಗುಣವಾಗಿರುತ್ತದೆ; ಈ ಧ್ಯಾನವು ವಸ್ತುತಂತ್ರ, ಆತ್ಮನು ಇದ್ದಂತೆಯೇ ಅವನನ್ನು ಅರಿತುಕೊಳ್ಳುವದಕ್ಕೆ ಮಾಡುವ ಪ್ರಯತ್ನ, ನಾವೇ ಕಲ್ಪಿಸಿಕೊಳ್ಳುವದಲ್ಲ. ಭೌತಿಕವಿಜ್ಞಾನಿಗಳು ವಸ್ತುಪರೀಕ್ಷೆಯನ್ನು ಮಾಡುವಾಗ ಅದರಲ್ಲಿಯೇ ನೆಟ್ಟಮನಸ್ಸಿನಿಂದ ನೋಡುತ್ತಿರುವಂತೆ, ಇಂದ್ರಿಯಗಳನ್ನೆಲ್ಲ ಹಿಂಜಗ್ಗಿ ಒಳಗೇ ಮನಸ್ಸನ್ನು ಆತ್ಮನ ಕಡೆಗೆ ತಿರುಗಿಸಿಕೊಂಡು ಆತ್ಮನನ್ನು ಕಾಣುವದಕ್ಕೆ ಮಾಡುವ ಪ್ರಯತ್ನವೇ ಈ ಧ್ಯಾನಯೋಗವು. ಶ್ರುತಿಯಲ್ಲಿ "ಯಾವದನ್ನು ಮನಸ್ಸಿನಿಂದ ಚಿಂತಿಸುವದಕ್ಕೆ ಆಗಲಾರದೋ, ಯಾವದು ಮನಸ್ಸನ್ನೂ ವಿಷಯೀಕರಿಸುವದೋ ಅದೇ ಬ್ರಹ್ಮವು" ಎಂದು ವರ್ಣಿಸಿದೆ. ಯಾವದರ ಪ್ರಕಾಶದಿಂದ

ಮನಸ್ಸೂ ಬೆಳಗುತ್ತದೆ ಎಂಬುದನ್ನು ಪ್ರಯತ್ನಪೂರ್ವಕವಾಗಿ ಅರಿಯುವದಕ್ಕೆ ಮಾಡುವದೇ ಇಲ್ಲಿ ಅಭ್ಯಾಸಯೋಗ. ಗುರೂಪದೇಶ, ಶಾಸ್ತ್ರೋಪದೇಶ–ಇವುಗಳನ್ನು ಅನುಸರಿಸಿ ಮಾಡುವ ಈ ಅಭ್ಯಾಸದಿಂದ ಮನಸ್ಸು ಆತ್ಮನಲ್ಲಿಯೇ ನಿಂತು ಮತ್ತೆಲ್ಲದರ ಚಿಂತೆಯನ್ನು ಬಿಟ್ಟುಬಿಡುತ್ತದೆ.

ಈ ಧ್ಯಾನಯೋಗದಿಂದ ಯಾವ ಫಲವಾಗುತ್ತದೆ? ಎಂದರೆ "ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ" (6–29). ಈ ನನ್ನ ಆತ್ಮನೇ ಎಲ್ಲರಿಗೂ ಆತ್ಮನಾಗಿರುತ್ತಾನೆ ಎಂದೂ ಈ ಆತ್ಮನನ್ನು ಬಿಟ್ಟರೆ ಬ್ರಹ್ಮಾದಿಸ್ಥಾವರಾಂತವಾದ ಯಾವ ಪ್ರಾಣಿಗಳ ಶರೀರೇಂದ್ರಿಯಸಂಘಾತಗಳೂ ಸ್ವತಂತ್ರವಾಗಿಲ್ಲವೆಂದೂ ಈ ಯೋಗದಿಂದ ಅರಿವಾಗಿಬಿಡುತ್ತದೆ. ಇಷ್ಟೇ ಅಲ್ಲ, ಸಾತ್ತ್ವಿಕರಾಜಸತಾಮಸಭೇದದಿಂದ ಬಗೆಬಗೆಯಾಗಿ ತೋರುತ್ತಿರುವ ಜೀವರುಗಳೊಳಗೆಲ್ಲ ಒಬ್ಬ ಪರಮಾತ್ಮನೇ, ಒಂದಿಷ್ಟೂ ತಾರತಮ್ಯವಿಲ್ಲದೆ ಸಮರೂಪದಿಂದ ಇದ್ದುಕೊಂಡಿರುತ್ತಾನೆ ಎಂಬಿದೂ ಈ ಯೋಗದಿಂದ ಕಂಡುಬರುವದು.

ಈವರೆಗೆ ನಾವು ಮಾಡಿರುವ ವಿಚಾರದಿಂದ ಏನು ಏರ್ಪಟ್ಟಿತೆಂದರೆ, ಉತ್ತಮಾಧಿಕಾರಿಗಳಾದವರು ಸಾಂಖ್ಯಬುದ್ಧಿಯಿಂದ ನೇರಾಗಿಯೇ ತಮ್ಮ ಆತ್ಮನನ್ನು ಕಂಡುಕೊಂಡುಬಿಡುತ್ತಾರೆ. ಆ ಆತ್ಮನು ಜನ್ಮಮರಣಾದಿಗಳಿಲ್ಲದೆ ಕೂಟಸ್ಥನಾಗಿರುವ ಸರ್ವವ್ಯಾಪಕನಾಗಿರುವ ಸರ್ವಾತ್ಮರೂಪನೆಂಬುದನ್ನೂ ಕಂಡುಕೊಂಡುಬಿಡುತ್ತಾರೆ. ಅವರ ದೃಷ್ಟಿಯಲ್ಲಿ ಅನಾತ್ಮವೆಂಬುದೊಂದೂ ಪರಮಾರ್ಥವಲ್ಲವೇ ಅಲ್ಲ. ಆದರೆ ಯಾರಿಗೆ ಇದು ಒಮ್ಮೆಗೇ ಹೊಳೆಯುವದಿಲ್ಲವೋ ಅವರು ಯೋಗದಿಂದ ಎಂದರೆ ಪರಮೇಶ್ವರನಿಗೆ ಅರ್ಪಣೆಮಾಡುವ ಕರ್ಮಾಚರಣೆಯಿಂದಲೂ ಅದರಿಂದುಂಟಾದ ಚಿತ್ತಶುದ್ಧಿಯಿಂದಲೂ ಆತ್ಮಸ್ವರೂಪವನ್ನೇ ಏಕಾಗ್ರತೆಯಿಂದ ಚಿಂತಿಸಿ ನೋಡಿಕೊಳ್ಳುವ ಧ್ಯಾನಯೋಗದಿಂದಲೂ ಅದೇ ಪರಮಾತ್ಮನನ್ನೇ ಕಂಡುಕೊಳ್ಳುತ್ತಾರೆ. ಹೇಗೇ ಮಾಡಲಿ, ಪರಮಾತ್ಮನೊಬ್ಬನೇ ಪರಮಾರ್ಥವು, ಅವನೇ ನಮ್ಮಗಳಿಗೆಲ್ಲ ಆತ್ಮನು–ಎಂಬುದೇ ಶಾಸ್ತ್ರೋಪದೇಶ.

****

# 5. ಸಾಧನಕ್ರಮ

## 5.1. ಧ್ಯಾನಯೋಗ

**ಅಧ್ಯಾತ್ಮ ಯೋಗಾಧಿಗಮೇನ ಧೀರೋ ಹರ್ಷ ಶೋಕೌ ಜಹಾತಿ । ಕಠ. 2-12**

ನಮ್ಮಗಳೆಲ್ಲರ ಆತ್ಮನಾಗಿರುವ ಬ್ರಹ್ಮಸ್ವರೂಪವು ಸ್ವತಃಸಿದ್ಧವಾಗಿರುತ್ತದೆ. ಅದನ್ನು ತಿಳಿಸಿಕೊಡುವದಕ್ಕೆ ಯಾವ ಪ್ರಮಾಣದ ಆವಶ್ಯಕತೆಯೂ ಇರುವದಿಲ್ಲ. ಜಗತ್ತೆಲ್ಲವೂ ಅದರ ಬೆಳಕಿನಿಂದಲೇ ನಮಗೆ ತೋರುತ್ತಿರುವದು. ಹೀಗೆಂಬುದು ಜ್ಞಾನಿಗಳ ದೃಷ್ಟಿಯು. ಹೀಗಿದ್ದರೂ ಲೋಕದ ಜನರು ಅದನ್ನು ಎಂದೆಂದಿಗೂ ಅರಿಯದೆ ಇರುವರು. ಪರಮಾತ್ಮನನ್ನು ಕಂಡುಕೊಳ್ಳುವದಕ್ಕೆ ಯಾವದಾದರೊಂದು ಉಪಾಯವಿದೆಯೆ?- ಎಂದು ಅವರು ಕೇಳುತ್ತಿರುವರು. ಅವರಿಗೆ ಶರೀರೇಂದ್ರಿಯಗಳಲ್ಲಿ ನಾನು ನನ್ನದು ಎಂಬ ಬುದ್ಧಿಯು ಗಟ್ಟಿಯಾಗಿಬಿಟ್ಟಿರುತ್ತದೆ. ಇಂದ್ರಿಯಗಳ ಮೂಲಕವಾಗಿ ಕಾಣುವ ವಸ್ತುವೇ ಅವರಿಗೆ ನಿಜವಾಗಿ ಇರತಕ್ಕದ್ದು; ಇಂದ್ರಿಯಗಳಿಗೆ ಗೋಚರವಾಗುವ ಹೆಗ್ಗುರುತುಗಳ ಬಲದಿಂದ ಊಹಿಸುವ ವಸ್ತುವನ್ನೂ ಅವರು ಇರುವದೆಂದು ನಂಬುತ್ತಾರೆ. ಇಂದ್ರಿಯಗೋಚರವೂ ಅಲ್ಲದೆ, ಅನುಮಾನಾದಿ ಪ್ರಮಾಣಗಳಿಂದ ಊಹಿಸಿ ಅರಿಯುವದಕ್ಕೂ ಆಗದ ಪರಮಾರ್ಥತತ್ತ್ವವೊಂದು ಇದೆ ಎಂಬುದನ್ನು ಹೇಗೆ ನಿಶ್ಚಯಿಸಬೇಕು?- ಎಂದು ಅವರಿಗೆ ಶಂಕೆಯುಂಟಾಗುತ್ತಿರುವದು.

ಆದ್ದರಿಂದ ಶಾಸ್ತ್ರದಲ್ಲಿ ಆತ್ಮವಸ್ತುವನ್ನು ನೇರಾಗಿ ಕಂಡುಕೊಳ್ಳುವ **ಸಾಂಖ್ಯಬುದ್ಧಿ**ಯನ್ನೇ ಅಲ್ಲದೆ, ಶರೀರೇಂದ್ರಿಯಗಳನ್ನು ಸತ್ಯವೆಂದಿಟ್ಟುಕೊಂಡಿರುವವರಿಗಾಗಿ ಆತ್ಮವನ್ನು ಕ್ರಮಕ್ರಮವಾಗಿ ಕಂಡುಕೊಳ್ಳುವದಕ್ಕೆ **ಯೋಗಬುದ್ಧಿ**ಯನ್ನೂ ಹೇಳಿರುತ್ತದೆ.

ಭಗವದ್ಗೀತೆಯನ್ನು ಯೋಗಶಾಸ್ತ್ರವೆಂದು ಕರೆಯುವರಷ್ಟೆ; ಅಲ್ಲಿ ಭಗವಂತನಿಗೆ ಒಪ್ಪಾಗಿರುವ ಮುಖ್ಯಾರ್ಥದ ಯೋಗವೆಂದರೆ ಜ್ಞಾನನಿಷ್ಠೆಯೇ. ಯಾವದು ಪರಮಪುರುಷಾರ್ಥಕ್ಕೆ ಕಾರಣವಾಗಿರುತ್ತದೆಯೋ ಅದನ್ನೇ **ಯೋಗ**ವೆಂದು ಕರೆಯುವದು ಯುಕ್ತವೂ ಆಗಿರುತ್ತದೆ. ಆದರೂ ಕರ್ಮಯೋಗ, ಧ್ಯಾನಯೋಗ- ಇವುಗಳನ್ನೂ ಯೋಗವೆಂದೇ ಗೀತೆಯಲ್ಲಿ ವ್ಯವಹರಿಸಿರುವದು ಕಂಡುಬರುತ್ತದೆ. ಇದಕ್ಕೆ ಕಾರಣವೇನೆಂದರೆ, ಅವು ಮುಖ್ಯಾರ್ಥದ ಯೋಗವಾದ ಜ್ಞಾನಕ್ಕೆ ಉಪಾಯವಾಗಿರುತ್ತದೆ. "ನೇಗಿಲೇ ನನ್ನ ಜೀವನವು" ಎಂಬಲ್ಲಿ ಜೀವನಸಾಧನವು ಎಂದು ಹೇಗೆ ಜೀವನಶಬ್ದಕ್ಕೆ ಅರ್ಥವನ್ನು ಹೇಳಬೇಕೋ ಹಾಗೆಯೇ ಯೋಗಸಾಧನವಾಗಿರುವ ಕರ್ಮಯೋಗಧ್ಯಾನ ಯೋಗಗಳನ್ನೂ ಯೋಗವೆಂದು ಕರೆಯಬಹುದಾಗಿರುತ್ತದೆ. ಅದ್ವಿತೀಯಾತ್ಮದರ್ಶನವು ಮತ್ತೆ ಯಾವದೊಂದು

ವಸ್ತುವಿನ ಸಂಬಂಧವೂ ಇಲ್ಲದ್ದು; ಅದು ನಿಜವಾಗಿ ಆತ್ಮಸ್ವರೂಪವೇ ಆಗಿರುತ್ತದೆ. ಆದ್ದರಿಂದ ಅದನ್ನು "ಅಸ್ಪರ್ಶಯೋಗ" ಎಂಬ ಹೆಸರಿನಿಂದ ಗೌಡಪಾದರು ಕರೆದಿರುತ್ತಾರೆ. ಅವರು ಬರೆದಿರುವದೇನೆಂದರೆ: "ಅಸ್ಪರ್ಶ ಯೋಗೋ ವೈ ನಾಮ ದುರ್ದರ್ಶಃ ಸರ್ವಯೋಗಿಭಿಃ। ಯೋಗಿನೋ ಬಿಭ್ಯತಿ ಹ್ಯಸ್ಮಾದಭಯೇ ಭಯದರ್ಶಿನಃ" (ಗೌ. ಕಾ. 3–39)– ಈ ಅಸ್ಪರ್ಶಯೋಗವು ಯಾವ ಯೋಗಿಗಳಿಗೂ ಸಿಕ್ಕತಕ್ಕದ್ದಲ್ಲ; ಏಕೆಂದರೆ ಅವರು ಈ ಅಭಯದರ್ಶನಕ್ಕೆ ಹೆದರುತ್ತಾರೆ– ಎಂಬುದು ಶ್ಲೋಕದ ಅರ್ಥ. ಎರಡನೆಯದಿದ್ದರೆ ಅದರಿಂದ ಭಯವಾದರೂ ಆಗಬಹುದು; ಆದರೆ ತನಗೆರಡನೆಯದೇ ಇಲ್ಲದಿರುವ ಅದ್ವೈತದರ್ಶನಕ್ಕೆ ಏಕೆ ಹೆದರಬೇಕು? ಈ ಜ್ಞಾನಕ್ಕೆ ಅಂಜುವ ಕಾರಣವು ಯಾವದೂ ನಿಜವಾಗಿರುವದೇ ಇಲ್ಲ. ಹೀಗಿದ್ದರೂ "ಅದ್ವೈತಜ್ಞಾನವು ಬಂದರೆ ನಾವೇ ಇಲ್ಲದಂತೆ ಆಗಿಬಿಡಬಹುದು; ಏಕೆಂದರೆ ಅದ್ವೈತವೆಂದರೆ ಪ್ರಪಂಚವೇ ಇಲ್ಲದ ಸ್ಥಿತಿಯು. ನಾನು, ಪ್ರಪಂಚ– ಇವೆರಡೂ ಒಟ್ಟಿಗೆ ಇರತಕ್ಕವು; ಆದ್ದರಿಂದ ಪ್ರಪಂಚವು ಮಿಥ್ಯೆಯಾದರೆ ನಾನೂ ಮಿಥ್ಯೆಯಾಗುವೆನು, ಇಲ್ಲವಾಗುವೆನು" ಎಂದು ಯೋಗಿಗಳು ಈ ಜ್ಞಾನಕ್ಕೆ ನಿಷ್ಕಾರಣವಾಗಿ ಹೆದರಿ ನಡುಗುತ್ತಾರೆ ಎಂಬುದು ಗೌಡಪಾದರ ಅಭಿಪ್ರಾಯ.

ಇಲ್ಲಿ ಒಂದು ಪ್ರಶ್ನೆ ಎದ್ದುಕೊಳ್ಳುತ್ತದೆ. ಕರ್ಮಯೋಗ, ಧ್ಯಾನಯೋಗ– ಇವೆರಡೂ ಜ್ಞಾನಕ್ಕೆ ಉಪಾಯವೆಂದು ಹೇಳುವವರ ಮತದಲ್ಲಿ ಉಪಾಯಗಳು ಸತ್ಯವಾಗಿರಬೇಕಲ್ಲವೆ? ಸತ್ಯವಾಗಿದ್ದರೆ ಇವುಗಳಿಂದ ಅದ್ವೈತದರ್ಶನಕ್ಕೆ ಯಾವ ಸಹಾಯವು ಆದೀತು? ಸತ್ಯವಾಗಿರುವ ಪ್ರಪಂಚವಿರುವವರೆಗೂ ಅದ್ವೈತಜ್ಞಾನವು ಉಂಟಾಗಲಾರದಲ್ಲವೆ? ಇನ್ನು ಅವು ಅಸತ್ಯವೇ ಎನ್ನುವದಾದರೆ, ಆಗಲೂ ಇವುಗಳಿಂದ ಅದ್ವೈತದರ್ಶನಕ್ಕೆ ಯಾವ ಸಹಾಯವು ತಾನೆ ಆದೀತು? ಬಂಜೆಯ ಮಕ್ಕಳು ಎಂದಿಗಾದರೂ ಶಿಪಾಯಿಗಳಾಗಿ ಯುದ್ಧವನ್ನು ಮಾಡಿದ್ದುಂಟೇನು? ಹೀಗೆ ಅದ್ವೈತಜ್ಞಾನವನ್ನು ಒಪ್ಪಿರುವವರು ಕರ್ಮಯೋಗವೇ ಮುಂತಾದ ಸಾಧನಗಳನ್ನು ಹೇಳುವದು ಹೇಗೂ ಹೊಂದಿಕೆಯಾಗಿ ತೋರುವದಿಲ್ಲವಲ್ಲ!

ಇದಕ್ಕೆ ಉತ್ತರವೇನೆಂದರೆ, ಅದ್ವೈತಿಗಳು ಇದನ್ನು ಪರಮಾರ್ಥಸತ್ಯವೆಂದೇನೂ ಒಪ್ಪಿ ಇವುಗಳನ್ನು ಉಪಾಯವಾಗಿ ಹೇಳಿರುವದಿಲ್ಲ. ಸಾಮಾನ್ಯ ಜನರು ತಮಗೆ ಶರೀರೇಂದ್ರಿಯಗಳು ನಿಜವಾಗಿದ್ದುಕೊಂಡಿರುವವೆಂದೂ ಅವುಗಳನ್ನುಪಯೋಗಿಸಿಕೊಂಡು ತಾವು ಧರ್ಮಾಧರ್ಮಗಳನ್ನು ಮಾಡಿ ಒಳ್ಳೆಯ ಅಥವಾ ಕೆಟ್ಟ ಫಲವನ್ನು ಪಡೆದುಕೊಂಡು ಅನುಭವಿಸುತ್ತಿರುವೆವೆಂದೂ ನಂಬಿಕೊಂಡಿರುತ್ತಾರೆ. ಆದ್ದರಿಂದ ಅವರ ದೃಷ್ಟಿಯನ್ನು ಅನುಸರಿಸಿಯೇ ಈ ಸಾಧನಗಳನ್ನು ಹೇಳಿರುತ್ತದೆ. ಸಾಧನಗಳನ್ನು ಮಾಡುವವರ ದೃಷ್ಟಿಯಿಂದ ಇವು ಸತ್ಯವೇ ಸರಿ. ಕನಸುಕಾಣುತ್ತಿರುವವನು ಹುಲಿಯ

ಬೇಟೆಗೆ ಹೋಗಿದ್ದು ತನ್ನಮೇಲೆ ಹುಲಿ ಬಿದ್ದಿತೆಂದು ಕೂಗಿಕೊಂಡು ಎಚ್ಚತ್ತರೆ, ಆಗ ಬೇಟೆ, ಹುಲಿ, ಅದು ತನ್ನಮೇಲೆ ಬಿದ್ದದ್ದು, ತಾನು ಕಿರಿಚಿಕೊಂಡದ್ದು- ಎಲ್ಲವೂ ಕನಸಿಗೇ ಸೇರಿದ್ದಾದ್ದರಿಂದ ಹುಸಿಯೇ ಎಂದು ಎಚ್ಚರದಲ್ಲಿ ನಿಶ್ಚಯಿಸಿಕೊಳ್ಳುವನಲ್ಲವೆ? ಹಾಗೆಯೇ ಈ ಸಾಧನಗಳನ್ನು ಮಾಡಿ ಅವುಗಳ ಫಲವಾಗಿ ತತ್ತ್ವಜ್ಞಾನವನ್ನು ಪಡೆದುಕೊಂಡರೆ ಆ ತತ್ತ್ವಜ್ಞಾನವೆಂಬ ಎಚ್ಚರದಲ್ಲಿ ಕ್ರಿಯಾಕಾರಕಫಲಗಳೂ ಧ್ಯಾತೃ, ಧ್ಯಾನ, ಧ್ಯೇಯ- ಎಂಬ ಭೇದಗಳೂ ಎಲ್ಲವೂ ಅಜ್ಞಾನದ ಕನಸಿಗೇ ಸೇರಿತ್ತೆಂಬುದು ನಿಶ್ಚಯವಾಗಿಬಿಡುತ್ತದೆ. ಆದ್ದರಿಂದ ಸಾಧಕನ ದೃಷ್ಟಿಯಿಂದ ಸತ್ಯವಾಗಿರುವ ಸಾಧನವು ತತ್ತ್ವದೃಷ್ಟಿಯಿಂದ ಹುಸಿಯಾದಮಾತ್ರದಿಂದ ಅದಕ್ಕೆ ಫಲವುಂಟಾಗಲಾರದೆಂದು ಶಂಕಿಸುವದಕ್ಕೆ ಯಾವ ಕಾರಣವೂ ಇರುವದಿಲ್ಲ. ಶ್ರೀರಾಮಕೃಷ್ಣಪರಮಹಂಸರು ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ: ಒಬ್ಬನು ಅಟ್ಟದ ಮೆಟ್ಟಿಲುಗಳನ್ನು ಹತ್ತುವಾಗ ಇವು ಅಟ್ಟವಲ್ಲ ಎನ್ನುತ್ತಾ ಮೇಲಕ್ಕೆ ಏರುತ್ತಾನೆ; ಅಟ್ಟವನ್ನು ಮುಟ್ಟಿದ ಬಳಿಕ ನೋಡುವಲ್ಲಿ ಅಟ್ಟವೂ ಮೆಟ್ಟಿಲುಗಳೂ ಎಲ್ಲವೂ ಇಟ್ಟಿಗೆಗಾರೆಗಳಿಂದಲೇ ಆಗಿವೆ, ಆದ್ದರಿಂದ ಎಲ್ಲವೂ ಒಂದೇ ವಸ್ತು ಎಂದು ಕಂಡುಕೊಳ್ಳುತ್ತಾನೆ. ಇದರಂತೆ ಸಾಧನೆಯ ಅವಸ್ಥೆಯಲ್ಲಿ ಸಾಧಕ, ಸಾಧನ, ಸಾಧ್ಯ- ಎಂಬ ವಿಂಗಡಗಳಿರಬಹುದು; ಆದರೆ ಸಿದ್ಧಿಯಾದ ಬಳಿಕ ನೋಡಿದರೆ ಮನಸ್ಸು, ತತ್ತ್ವಜ್ಞಾನಕ್ಕೆ ಅಡ್ಡಿಯಾಗಿರುವ ಮಲವಿಕ್ಷೇಪಗಳು, ಮನಶ್ಶುದ್ಧಿ, ಫಲ- ಎಲ್ಲವೂ ಒಂದೇ ಪರಮಾತ್ಮವಸ್ತು; ಅದರಲ್ಲಿ ಸಾಧಕಸಾಧ್ಯಾದಿಯಾದ ಯಾವದೊಂದು ವಿಭಾಗವೂ ಇಲ್ಲವೇ ಇಲ್ಲ ಎಂದು ತಿಳಿದುಬರುತ್ತದೆ. ಆದ್ದರಿಂದ ಇಲ್ಲಿ ಯಾವ ಕುತರ್ಕವನ್ನೂ ಮಾಡುತ್ತಾ ಕೂರಬಾರದು. ಮುಮುಕ್ಷುಗಳಾದವರು ಶಾಸ್ತ್ರಾಚಾರ್ಯವಾಕ್ಯದಲ್ಲಿ ಶ್ರದ್ಧೆಯನ್ನಿಟ್ಟು ಸಾಧನವನ್ನು ಮಾಡಿ ಕೃತಾರ್ಥರಾಗಬೇಕು.

ಭಗವದ್ಗೀತೆಯಲ್ಲಿ ಜ್ಞಾನಕ್ಕೆ ಕರ್ಮಯೋಗವನ್ನು ಬಹಿರಂಗವಾಗಿಯೂ ಧ್ಯಾನ ಯೋಗವನ್ನು ಅಂತರಂಗವಾಗಿಯೂ ಸಾಧನವೆಂದು ತಿಳಿಸಿಕೊಟ್ಟಿರುತ್ತದೆ. ಆದರೆ ಕರ್ಮಯೋಗಕ್ಕೂ ಧ್ಯಾನಯೋಗಕ್ಕೂ ಯಾವ ಸಾಮ್ಯವಿದೆ? ಧ್ಯಾನಯೋಗವು ಕರ್ಮವನ್ನೆಲ್ಲ ಬಿಟ್ಟ ಸಂನ್ಯಾಸಿಗಳು ಮಾಡುವ ಮನಃಪ್ರಧಾನವಾದ ಸಾಧನ; ಕರ್ಮವೆಂಬುದು ಬಹಿರ್ಮುಖರಾಗಿರುವವರು ಮಾಡುವ ಶರೀರಪ್ರಧಾನವಾದ ಸಾಧನ. ಹೀಗಿರುವಲ್ಲಿ ಇವೆರಡೂ ಒಂದೇ ಫಲವನ್ನು ಕೊಡುವ ಸಾಧನಗಳು ಹೇಗಾದಾವು?- ಎಂಬ ಶಂಕೆಯೊಂದು ಎದ್ದುಕೊಳ್ಳುವ ಸಂಭವವಿದೆ. ಇದಕ್ಕೆ ಗೀತೆಯಲ್ಲಿರುವ ಒಂದು ಶ್ಲೋಕವು ಪರಿಹಾರವನ್ನು ತಿಳಿಸಿಕೊಡುತ್ತದೆ: "ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ । ಸ ಸಂನ್ಯಾಸೀ ಚ ಯೋಗೀ ಚ ನಿರಗ್ನಿರ್ನ ಚಾಕ್ರಿಯಃ ॥" ಇದು ಕರ್ಮಯೋಗವನ್ನು ಹೊಗಳಿರುವ ಶ್ಲೋಕ. ಯಾವನು ಕರ್ಮಫಲವನ್ನು ಬಯಸದೆ ಕರ್ಮವನ್ನು ಮಾಡುತ್ತಿರುವನೋ ಅವನೂ ಸಂನ್ಯಾಸಿ, ಅವನೂ ಯೋಗಿ; ಏಕೆಂದರೆ ತ್ಯಾಗಮಾಡಿರುತ್ತಾನಾದ್ದರಿಂದ ಅವನೂ

ಸಂನ್ಯಾಸಿಯಾಗಿರುತ್ತಾನೆ. ತಾನು ಮಾಡುವ ಕರ್ಮವನ್ನು ಈಶ್ವರಾರ್ಪಣ ಮಾಡಿರುವದರಿಂದ ಅವನಿಗೆ ಯಾವ ಚಿತ್ತವಿಕ್ಷೇಪವೂ ಆಗುವಂತಿಲ್ಲವಾಗಿ ಅವನೂ ಯೋಗಿಯಾಗಿರುತ್ತಾನೆ– ಎಂಬುದು ಶ್ಲೋಕದ ಅಭಿಪ್ರಾಯವು.

ಹೀಗಿದ್ದರೂ ಕರ್ಮವನ್ನು ಸಂಪೂರ್ಣವಾಗಿ ತ್ಯಾಗಮಾಡಿರುವ ಯತಿಯೇ ಧ್ಯಾನಯೋಗಕ್ಕೆ ವಿಶೇಷಾಧಿಕಾರಿಯೆಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಯಾವನಿಗೆ ಯಾವದು ಅತ್ಯಂತವಾಗಿ ಬೇಕಾಗಿರುವದೋ ಅವನಿಗೆ ಅದಕ್ಕೆ ಬೇಕಿಲ್ಲದಿರುವದನ್ನೆಲ್ಲ ಬಿಟ್ಟುಬಿಡುವದು ಒಳ್ಳೆಯದೆಂಬುದೇ ನ್ಯಾಯವಾಗಿರುತ್ತದೆ. ಆದ್ದರಿಂದಲೇ ಶ್ರುತಿಯು "ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತಃ ಪ್ರವ್ರಜನ್ತಿ" (ಬೃ. 4–4–22) ಎಂದಿರುತ್ತದೆ. ಮನುಷ್ಯಲೋಕ, ಪಿತೃಲೋಕ, ದೇವಲೋಕ– ಎಂಬ ಮೂರು ಲೋಕಗಳನ್ನು ಬಯಸುವವರು ಕರ್ಮೋಪಾಸನೆಗಳನ್ನು ಮಾಡುತ್ತಾರೆ, ಆದರೆ ಯಾರಿಗೆ ಆತ್ಮನೆಂಬ ಈ ಉತ್ತಮಲೋಕವೇ ಬೇಕಾಗಿರುವದೋ ಅವರು ಕರ್ಮವನ್ನೆಲ್ಲ ಸಂನ್ಯಾಸಮಾಡಿ ಪರಿವ್ರಾಜಕರಾಗುತ್ತಾರೆ– ಎಂಬುದು ಶ್ರುತಿಯ ಅರ್ಥ. ಮತ್ತೊಂದು ಶ್ರುತಿಯಲ್ಲಿ ಹಿಗೆಂದು ಹೇಳಿದೆ : "ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ" (ಬೃಹ. 4–4–21) ವಿವೇಕಿಯಾದವನು ಈ ಆತ್ಮನನ್ನೇ ಅರಿತುಕೊಳ್ಳುವದಕ್ಕಾಗಿ ಪ್ರಜ್ಞಾಸಾಧನಗಳಾದ ಸಂನ್ಯಾಸ, ಶಮ, ದಮ, ಉಪರತಿ, ತಿತಿಕ್ಷಾ, ಸಮಾಧಾನಗಳೆಂಬ ಸಾಧನಗಳನ್ನು ಅನುಷ್ಠಾನಮಾಡಬೇಕು– ಎಂಬುದು ಶ್ರುತಿಯ ಅರ್ಥ. ಈ ಶ್ರುತ್ಯಭಿಪ್ರಾಯವನ್ನೇ ಅನುಸರಿಸಿ ಗೀತೆಯಲ್ಲಿಯೂ "ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ । ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ॥" ಯೋಗವನ್ನು ಪಡೆಯಬೇಕೆಂದಿರುವವನಿಗೆ ಕರ್ಮವು ಸಾಧನವೆನಿಸುವದು, ಆದರೆ ಧ್ಯಾನಯೋಗವನ್ನೇರಿರುವವನಿಗೆ ಶಮವೇ ಸಾಧನವೆನಿಸುವದು– ಎಂದಿದೆ. ಇಲ್ಲಿಯೂ ಶಮವೆಂದರೆ ಮೇಲೆ ಹೇಳಿದ ಸಂನ್ಯಾಸಾದಿ ಸಾಧನಗಳನ್ನು ಗ್ರಹಿಸಬೇಕು.

ಈ ಯೋಗವನ್ನು ಗೀತೆಯಲ್ಲಿ ಆಸನಾದಿಬಹಿರಂಗಗಳೊಡನೆ ಉಪದೇಶಿಸಿರುವ ಶ್ಲೋಕವೊಂದನ್ನು ಇಲ್ಲಿ ಉದಾಹರಿಸಬಹುದು : "ಶನೈಃ ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ । ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್ ॥" (ಗೀ. 6–25) ಇಂದ್ರಿಯಗಳನ್ನು ಮೆಲ್ಲಮೆಲ್ಲಗೆ ಇಂದ್ರಿಯ ವ್ಯಾಪಾರಗಳನ್ನು ಬಿಡಿಸಿ ಹಿಂಜಗ್ಗಿ ಮನಸ್ಸನ್ನು ಆತ್ಮನಲ್ಲಿಯೇ ಚೆನ್ನಾಗಿ ನಿಲ್ಲಿಸಿಕೊಂಡು ಮತ್ತೇನನ್ನೂ ಚಿಂತಿಸದೆ ಇದ್ದುಬಿಡಬೇಕು– ಎಂಬುದು ಶ್ಲೋಕಾರ್ಥವು. ಇಲ್ಲಿ ಹೇಳಿರುವ ಕ್ರಮವು ಆತ್ಮಸ್ವರೂಪವನ್ನು ಕಂಡುಕೊಳ್ಳುವದಕ್ಕೆ ಮಾಡಬೇಕಾಗಿರುವ ಮಾನಸಪ್ರಯತ್ನವಿಶೇಷಕ್ಕೆ ಸೇರಿದ್ದು. ಈ ಧ್ಯಾನಯೋಗದಿಂದ ನಾವು ಆತ್ಮಸ್ವರೂಪವನ್ನು ಸುಮ್ಮನೆ ಭಾವನೆಮಾಡತಕ್ಕದ್ದಲ್ಲ; ಆತ್ಮನು

ಹೇಗೆ ಇರುತ್ತಾನೋ ಹಾಗೆಯೇ ಅವನನ್ನು ಮನವರಿಕೆಮಾಡಿಕೊಳ್ಳುವ ಪ್ರಯತ್ನವಿದು.

ಇದೇ ಕ್ರಮವನ್ನು **ಕಠೋಪನಿಷತ್ತಿನಲ್ಲಿ** ಹೀಗೆಂದು ವಿವರಿಸಿ ಹೇಳಿರುತ್ತದೆ: "ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾನ ಆತ್ಮನಿ । ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇಚ್ಛಾನ್ತ ಆತ್ಮನಿ ॥" (ಕ. 3-13) ಈ ಉಪನಿಷದ್ವಾಕ್ಯದ ಅಭಿಪ್ರಾಯವಿಷ್ಟು: (1) ಮೊಟ್ಟಮೊದಲು ವಿವೇಕಿಯಾದ ಸಾಧಕನು ವಾಗಾದಿ ಬಾಹ್ಯೇನ್ದ್ರಿಯ ವ್ಯಾಪಾರಗಳನ್ನು ಬಿಟ್ಟು ಮನೋಮಾತ್ರರೂಪನಾಗಿ ನಿಲ್ಲಬೇಕು. ಸರಿಯಾಗಿ ನೋಡಿದರೆ ಇಂದ್ರಿಯಗಳೆಂಬಿವುಗಳು ನಿಜವಾಗಿ ಮನಸ್ಸೇ ಆಗಿರುತ್ತದೆ. ಕನಸಿನಲ್ಲಿ ಯಾವ ಇಂದ್ರಿಯಗಳೂ ನಿಜವಾಗಿಲ್ಲದಿದ್ದರೂ ಮನಸ್ಸೇ ಇಂದ್ರಿಯಗಳ ರೂಪದಿಂದಲೂ ವಿಷಯಗಳ ರೂಪದಿಂದಲೂ ಕಾಣಿಸಿಕೊಳ್ಳುತ್ತಿರುವದಿಲ್ಲವೆ? ಮನಸ್ಸಿಗೆ ಕೇಳುವ ವ್ಯಾಪಾರವುಂಟಾದಾಗ ಅದು ಶ್ರೋತ್ರೇಂದ್ರಿಯವಾಗುತ್ತದೆ; ಹೀಗೆಯೇ ನೋಡುವ ವ್ಯಾಪಾರವುಂಟಾದಾಗ ಅದೇ ನೇತ್ರೇಂದ್ರಿಯವಾಗುತ್ತದೆ. ಮಿಕ್ಕ ಇಂದ್ರಿಯಗಳನ್ನೂ ಹೀಗೆಯೇ ಅರಿಯಬೇಕು. ಈ ದೃಷ್ಟಿಯಿಂದ ನೋಡಿದಾಗ ಮನಸ್ಸಲ್ಲದೆ ಬೇರೆ ಇಂದ್ರಿಯಗಳೇ ಇರುವದಿಲ್ಲ. ಆದ್ದರಿಂದ **ಇಂದ್ರಿಯಗಳೆಲ್ಲದರ ತತ್ತ್ವವು ಮನಸ್ಸೇ** ಎಂದು ನಿಶ್ಚಯಿಸಿಕೊಳ್ಳಬೇಕು. (2) ಆ ಬಳಿಕ ಈ ಮನಸ್ಸನ್ನು ಜ್ಞಾನಾತ್ಮನಲ್ಲಿ ಹಿಡಿದು ನಿಲ್ಲಿಸಿಕೊಳ್ಳಬೇಕು; ಎಂದರೆ ಮನಸ್ಸಿನಲ್ಲಿ ವಿವಿಧವಿಕಲ್ಪಗಳನ್ನು ಮಾಡುವದರಲ್ಲಿರುವ ದೋಷವನ್ನು ಮನದಂದು ನಿಶ್ಚಯರೂಪವಾದ ಬುದ್ಧಿರೂಪನಾಗಿ ನಿಲ್ಲಬೇಕು. ಮನಸ್ಸು ಬಗೆಬಗೆಯ ವಿಕಲ್ಪಗಳನ್ನು ಮಾಡುವದರಿಂದಲೇ ಅಲ್ಲವೆ, ಮೇಲೆ ವರ್ಣಿಸಿರುವಂತೆ ಬೇರೆಬೇರೆಯ ಇಂದ್ರಿಯಗಳ ರೂಪವನ್ನು ಧರಿಸುತ್ತದೆ? ಧೃತಿಯಿಂದ ಈ ವಿಕಲ್ಪಗಳನ್ನು ತಡೆಗಟ್ಟಿಕೊಂಡರೆ ಆಗ ಮನಸ್ಸು ಬುದ್ಧಿರೂಪಕ್ಕೆ ಬಂದುನಿಲ್ಲುತ್ತದೆ. (3) ಇದಾದಮೇಲೆ ಈ ನಿಶ್ಚಯಾತ್ಮಕವಾದ ಬುದ್ಧಿಯನ್ನು ಮಹಾ ಆತ್ಮನಲ್ಲಿ ನಿಲ್ಲಿಸಿಕೊಳ್ಳಬೇಕು. ಇಲ್ಲಿ ಮಹಾಆತ್ಮನೆಂದರೆ ಜೀವ ಎಂದಾಗಲಿ ಹಿರಣ್ಯಗರ್ಭನ ಬುದ್ಧಿಯೆಂದಾಗಲಿ ಅರ್ಥವನ್ನು ಮಾಡಿಕೊಳ್ಳುವದಕ್ಕೆ ಬರುತ್ತದೆ. ಜೀವ ಎಂಬರ್ಥವನ್ನು ಮಾಡಿಕೊಂಡರೆ, ಬುದ್ಧಿವೃತ್ತಿ ಎಂಬುದು ಜೀವನಿಗಿಂತ ವ್ಯತಿರಿಕ್ತವಲ್ಲವೆಂದು ತಿಳಿದುಕೊಳ್ಳಬೇಕು; ಸೂರ್ಯನಿಗಿಂತ ಅವನ ಕಿರಣಗಳು ಬೇರೆಯಾಗಿರುವದಿಲ್ಲವಷ್ಟೆ? ಹೀಗೆಯೇ ನನ್ನ ಬುದ್ಧಿ ಎಂಬುದು ನನಗಿಂತ ವ್ಯತಿರಿಕ್ತವಾಗಿ ಹೇಗೂ ಇರಲಾರದು ಎಂಬುದನ್ನು ಮನಗಾಣಬೇಕು. ಹಿರಣ್ಯಗರ್ಭನ ಬುದ್ಧಿ ಎಂಬರ್ಥವನ್ನು ತೆಗೆದುಕೊಂಡಾಗ ಅದರಂತೆ ಸ್ವಚ್ಛವಾಗಿ ಮಾಡಿಕೊಳ್ಳಬೇಕು ಎಂದರ್ಥ. ಹಿರಣ್ಯಗರ್ಭನೆಂದರೆ ಒಂದೊಂದು ಕಲ್ಪದ ಒಡೆಯನು. ಆತನ ಅಂತಃಕರಣದಲ್ಲಿ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ- ಇವುಗಳು ಮಿಗಿಲಿಲ್ಲದಷ್ಟು ಪರಿಮಾಣದಲ್ಲಿ ಇರುತ್ತವೆ; ಏಕೆಂದರೆ ಅದರಲ್ಲಿ ಯಾವ ರಜಸ್ಸಿನ ಅಥವಾ ಯಾವ ತಮಸ್ಸಿನ ಕಲಂಕವೂ

ಇರುವದಿಲ್ಲ. ಹೀಗೆಯೇ ಸಾಧಕನು ತನ್ನ ಬುದ್ಧಿಯನ್ನು ಆದಷ್ಟು ಸಾತ್ತ್ವಿಕವಾಗಿ ಮಾರ್ಪಡಿಸಿಕೊಂಡರೆ ಅದನ್ನು ಮಹಾಆತ್ಮನಲ್ಲಿ ನೆಲೆನಿಲ್ಲಿಸಿಕೊಂಡಂತೆ ಆಯಿತು. (4) ಇದೂ ಆದ ಬಳಿಕ ಈ ಜೀವಾತ್ಮನನ್ನು ಶಾಂತಾತ್ಮನ ರೂಪಕ್ಕೆ ತಂದುಕೊಳ್ಳಬೇಕು. ಜೀವಾತ್ಮನು ದ್ರಷ್ಟೃ, ಶ್ರೋತೃ, ಮಂತೃ- ಮುಂತಾದ ವಿಶೇಷಕ್ರಿಯೆಗಳಿಗೆ ಕರ್ತೃವಾಗಿಯೇ ಇರುತ್ತಾನೆ. ಸಾಧಕನ ಚಿತ್ತವು ಅತ್ಯಂತವಾಗಿ ಸ್ವಚ್ಛವಾದಾಗ ಅದಕ್ಕೆ ಆತ್ಮನ ಸ್ವರೂಪವು ತಾನು ಇದ್ದದ್ದು ಇದ್ದಂತೆಯೇ, ಎಂದರೆ ದ್ರಷ್ಟೃತ್ವವೇ ಮುಂತಾದ ಯಾವ ವಿಶೇಷರೂಪವೂ ಇಲ್ಲದೆ ಇರುವ, ಶ್ರುತಿಯಲ್ಲಿ "ನೇತಿ ನೇತಿ" ಎಂದು ವರ್ಣಿಸಿರುವ ನಿಷ್ಪ್ರಪಂಚರೂಪದಲ್ಲಿ ಹೊಳೆಯುವದು. ಇದೇ ಕೊನೆಯ ಮೆಟ್ಟಿಲು, ಈ ಸಾಧನಕ್ರಮವನ್ನೇ ಗೀತೆಯಲ್ಲಿ ಧ್ಯಾನಯೋಗವೆಂದು ಕರೆದಿರುತ್ತದೆ. ಯಾವನಿಗೆ ಈ ಯೋಗವು ದಕ್ಕುವದೋ ಅವನಿಗೆ ಈ ನಮ್ಮ ದ್ರಷ್ಟೃ ಶ್ರೋತ್ರಾದಿರೂಪದ ಜೀವನ ಸ್ವರೂಪವು ನಿಜವಾಗಿ ಪ್ರಪಂಚೋಪಶಮನೂ ಶಿವನೂ ಶಾಂತನೂ ಆದ ಪರಮಾತ್ಮನಿಗಿಂತ ಎಳ್ಳಷ್ಟೂ ಭಿನ್ನವಾಗಿರುವದಿಲ್ಲವೆಂಬುದು ಮನದಟ್ಟಾಗುವದು. ಆಗ್ಗೆ ಸಾಂಖ್ಯವೂ ಯೋಗವೂ ಒಂದಾದಂತೆ ಆಗುವದು.

## 5.2. ವಿಭೂತಿ ಯೋಗ

**ತತ್ಕಾರಣಂ ಸಾಂಖ್ಯಯೋಗಾಭಿಪನ್ನಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ॥ —ಶ್ವೇ. 6–16**

ಪುರುಷಾರ್ಥಕ್ಕೆ ಕಾರಣವಾಗಿರುವ ಬುದ್ಧಿಯನ್ನು ಸಾಂಖ್ಯಬುದ್ಧಿ, ಯೋಗಬುದ್ಧಿ- ಎಂದು ಎರಡು ಬಗೆಯಾಗಿ ವಿಂಗಡಿಸಿರುತ್ತದೆ. ಸಾಂಖ್ಯವೆಂದರೆ ತತ್ತ್ವವಿಚಾರಕ್ಕೆ ಸಂಬಂಧಪಟ್ಟದ್ದು. ಈ ವಿಚಾರವು ಯಾವಾಗಲೂ ಅನುಭವಪ್ರಧಾನವಾಗಿರುತ್ತದೆ. ವಿಚಾರವು ಯುಕ್ತಿರೂಪವಾಗಿರುವಾಗಲೂ ಅದು ಅನುಭವಕ್ಕೆ ಹೊಂದಿಕೊಂಡೇ ಇರುವದು. ಗ್ರಂಥಗಳ ವಾಕ್ಯಗಳೂ ದೊಡ್ಡವರ ಉಕ್ತಿಗಳೂ ಅನುಭವದಲ್ಲಿ ಪರ್ಯವಸಾನವಾದ ಮೇಲೆಯೇ ಸಾಂಖ್ಯಬುದ್ಧಿಯನ್ನುಂಟುಮಾಡುತ್ತವೆ. ಶ್ರುತಿಯಲ್ಲಿ "ವೇದಾಹಮೇತಂ ಪುರುಷಂ ಮಹಾನ್ತಮ್"- ನಾನು ಈ ಮಹಾಪುರುಷನನ್ನು ಬಲ್ಲೆನು- ಎಂದು ಹೇಳಿರುವ ಋಷಿವಾಕ್ಯವು ಅನುಭವವನ್ನೇ ಪರಾಮರ್ಶಿಸುತ್ತದೆ. ಭಗವದ್ಗೀತೆಯಲ್ಲಿ "ಅವ್ಯಕ್ತೋಽ- ಯಮಚಿನ್ತ್ಯೋಽಯಮವಿಕಾರ್ಯೋಽಯಮುಚ್ಯತೇ" ಎಂಬ ಶ್ಲೋಕಕ್ಕೂ ಇದರಲ್ಲಿಯೇ ತಾತ್ಪರ್ಯವಿದೆ. ಆತ್ಮನು ಅವ್ಯಕ್ತನು ಎಂದರೆ ವಾಗಾದೀಂದ್ರಿಯಗಳಿಗೆ ವಿಷಯನಲ್ಲ ಎಂದರ್ಥ; ಅಚಿಂತ್ಯನು ಎಂದರೆ ಮನಸ್ಸಿಗೆ ಗೋಚರನಲ್ಲ ಎಂದು ಅರ್ಥ. ಆದ್ದರಿಂದ ಅನುಭವದಿಂದಲೇ ಆತ್ಮನನ್ನು ಕಂಡುಕೊಳ್ಳಬೇಕು ಎಂದಾಯಿತು. ಇದೇ ಸಾಂಖ್ಯಯೋಗ, ಇದೇ ಗೀತೆಯಲ್ಲಿ ಹೇಳಿರುವ ಮುಖ್ಯಯೋಗ.

ಸಾಂಖ್ಯಯೋಗಕ್ಕೆ ಹೇಳಿರುವ ಉಪಾಯಗಳನ್ನೂ ಯೋಗವೆಂದು ಗೌಣಾರ್ಥದಲ್ಲಿ ಕರೆದಿರುತ್ತದೆ. ಜ್ಞಾನಕ್ಕೆ ಉಪಾಯಗಳಾಗಿ ಕರ್ಮಯೋಗ, ಧ್ಯಾನಯೋಗ- ಈ ಎರಡನ್ನೂ ಗೀತೆಯಲ್ಲಿ ಉಪದೇಶಿಸಿರುತ್ತದೆ. ಕರ್ಮಯೋಗವು ನಿಯಮಪ್ರಧಾನವಾಗಿದೆ. ಆದ್ದರಿಂದ ಅದು ಜ್ಞಾನಕ್ಕೆ ಬಹಿರಂಗ; ಧ್ಯಾನಯೋಗವು ಯಮಪ್ರಧಾನವಾಗಿರುವದರಿಂದ ಅಂತರಂಗವೆನಿಸಿರುತ್ತದೆ.

ಕರ್ಮಯೋಗವು ಮಂದಾಧಿಕಾರಿಗಳಿಗೆ ಹೇಳಿದ್ದು ಎಂದು ಅದನ್ನು ಅಸಡ್ಡೆ ಮಾಡುವದಕ್ಕೆ ಬರುವದಿಲ್ಲ. ಏಕೆಂದರೆ ಶಾಸ್ತ್ರೋಕ್ತವಾದ ಕರ್ಮವನ್ನು ಪರಮೇಶ್ವರನ ಆರಾಧನೆಯೆಂದು ಮಾಡುವದೇ ನಿಜವಾದ ಕರ್ಮಯೋಗವು. ಈಗಿನ ಕಾಲಕ್ಕೆ ಶಾಸ್ತ್ರಾಭ್ಯಾಸವೂ ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡುವದೂ ಕಡಿಮೆಯಾಗಿಬಿಟ್ಟಿರುತ್ತದೆ. ಆದ್ದರಿಂದ ಮುಖ್ಯವಾದ ಅರ್ಥದಲ್ಲಿ ಕರ್ಮಯೋಗವನ್ನು ಅನುಷ್ಠಾನಮಾಡುವದು ಕಷ್ಟ. ಆದರೂ ನಮನಮಗೆ ಬಂದೊದಗಿರುವ ಲೌಕಿಕಕರ್ಮವನ್ನು ಪರಮೇಶ್ವರನ ಪ್ರೀತ್ಯರ್ಥವಾಗಿ ಉತ್ತಮರೀತಿಯಲ್ಲಿ ಮಾಡಿದರೆ ಅದೂ ಗೌಣಾರ್ಥದಲ್ಲಿ ಕರ್ಮಯೋಗವೆನಿಸುತ್ತದೆ. ಅದುಕೂಡ ಎಲ್ಲರಿಗೂ ದಕ್ಕುವ ಹಾಗಿಲ್ಲ. ಮೈಗಳ್ಳರಾಗಿ ಯಾವ ಕೆಲಸವನ್ನೂ ಮಾಡದೆ ಕಾಲಹಾಕುವವರು ಅನೇಕರಿರುತ್ತಾರೆ. ಅಂಥವರಿಗೆ ಕರ್ಮವನ್ನು ಸಂಗತ್ಯಾಗಫಲ ತ್ಯಾಗಪೂರ್ವಕವಾಗಿ ಮಾಡಿ ಈಶ್ವರಾರ್ಪಣೆ ಮಾಡುವದೆಂಬುದು ಬಹಳ ಕಷ್ಟಸಾಧ್ಯವಾಗಿರುತ್ತದೆ. ಮುಮುಕ್ಷುಗಳಾದವರು ಕರ್ಮಯೋಗವನ್ನು ಅವಶ್ಯವಾಗಿ ಮಾಡಬೇಕು. ಇದರಿಂದ ಚಿತ್ತಶುದ್ಧಿಯಾದ ಬಳಿಕ ಅವರು ಧ್ಯಾನಯೋಗಕ್ಕೆ ಅರ್ಹರಾಗುತ್ತಾರೆ. ಆ ಧ್ಯಾನದ ಮೂಲಕವಾಗಿ ಪರಮಾತ್ಮಜ್ಞಾನವು ಉಂಟಾಗಬೇಕಾಗಿದೆ.

ಉಪನಿಷತ್ತುಗಳಲ್ಲಿಯೂ ಭಗವದ್ಗೀತೆಯಲ್ಲಿಯೂ ಇನ್ನೊಂದು ಯೋಗವನ್ನು ಹೇಳಿರುತ್ತದೆ. ಅದಕ್ಕೆ **ಉಪಾಸನೆ** ಎಂಬ ಮತ್ತೊಂದು ಹೆಸರು ಇರುತ್ತದೆ; ಅದನ್ನೂ ಧ್ಯಾನವೆಂದು ಕರೆಯುವದೂ ಉಂಟು. ಈ ಜನ್ಮದಲ್ಲಿಯೇ ಉಂಟಾಗಬೇಕಾದ ಜ್ಞಾನಕ್ಕೆಂದು ಮಾಡುವ ಧ್ಯಾನಯೋಗಕ್ಕೂ ಇದಕ್ಕೂ ಇರುವ ಮುಖ್ಯವಾದ ತಾರತಮ್ಯವೇನೆಂದರೆ ಧ್ಯಾನಯೋಗವು ವಸ್ತುತಂತ್ರವಾಗಿರುತ್ತದೆ, ಆದರೆ ಉಪಾಸನೆಯು ಪುರುಷತಂತ್ರ ವಾಗಿರುತ್ತದೆ. ಸೂಕ್ಷ್ಮವಾಗಿರುವ ವಸ್ತುಗಳನ್ನು ನೋಡುವಾಗ ಇಂದ್ರಿಯಗಳನ್ನು ಅವುಗಳಲ್ಲಿಯೇ ನೆಡಿಸಿಕೊಳ್ಳಬೇಕು; ಇಂದ್ರಿಯಗಳಿಗೆ ಸಹಾಯವಾಗಿ ಸೂಕ್ಷ್ಮದರ್ಶಕ ಯಂತ್ರಗಳೇ ಮುಂತಾದವನ್ನು ಉಪಯೋಗಿಸುವ ಕ್ರಮವೂ ಇದ್ದ ವಸ್ತುವನ್ನು ಇದ್ದಂತೆ ಕಾಣುವದಕ್ಕೇ ಆಗಿರುತ್ತದೆ. ಆದರೆ ಆತ್ಮನು ಇಂದ್ರಿಯಗಳಿಗೆ ಗೋಚರನಲ್ಲವಾದ್ದರಿಂದ ಅವುಗಳ ಮೂಲಕವಾಗಿ ಆತ್ಮನನ್ನು ಕಂಡುಕೊಳ್ಳುವದಕ್ಕೆ ಎಂದಿಗೂ ಆಗುವದಿಲ್ಲ.

ಆದಕಾರಣ ಇಂದ್ರಿಯಗಳನ್ನು ಹಿಂಜಗ್ಗಿ ಮನಸ್ಸನ್ನು ಹೊರಗಿನ ವಸ್ತುಗಳ ಚಿಂತನೆಗೆ ಹರಿಯಬಿಡದೆ ಏಕಾಗ್ರತೆಗೊಳಿಸಿಕೊಳ್ಳಬೇಕು. ಹೀಗೆ ಬಹುಕಾಲ ಆತ್ಮನ ಕಡೆಗೇ ಅದನ್ನು ತಿರುಗಿಸುತ್ತಿದ್ದರೆ ಅದು ಹೇಗೋ ಆತ್ಮಸ್ವರೂಪವನ್ನು ಕಂಡುಕೊಂಡುಬಿಡುತ್ತದೆ. ಆತ್ಮನನ್ನು ಕಾಣುವದೆಂದರೆ ಪ್ರತ್ಯಯಗಳಿಂದ ವಿಷಯೀಕರಿಸಿ ಅರಿತುಕೊಳ್ಳುವದಲ್ಲ; ಏಕೆಂದರೆ ಆತ್ಮನು ಪ್ರತ್ಯಯಗಳಿಗೂ ಒಳಗಿನ ಸ್ವರೂಪವೇ ಆಗಿದ್ದುಕೊಂಡು ಅದರ ವ್ಯಾಪಾರಕ್ಕೆಲ್ಲ ಉತ್ತೇಜನವನ್ನು ಕೊಡುತ್ತಿರುವ ಮೂಲರೂಪವಾಗಿರುತ್ತಾನೆ. ಬಹುಕಾಲ ಧ್ಯಾನ ಯೋಗವನ್ನು ಮಾಡುತ್ತಿರುವದರಿಂದ ಮನಸ್ಸಿಗೆ ತನಗೆ ಆಧಾರವಾಗಿರುವ ಆತ್ಮತತ್ತ್ವವನ್ನು ಒಂದು ವಿಲಕ್ಷಣವಾದ ಅನುಭವದಿಂದ ಅರಿತುಕೊಳ್ಳುವ ಶಕ್ತಿಯು ಉಂಟಾಗುತ್ತದೆ. ಧ್ಯಾನಯೋಗಕ್ರಮವನ್ನು ಆಗಲೇ ತಿಳಿಸಿದ್ದಾಗಿದೆ. ಆ ಕ್ರಮವನ್ನು ಸತತವಾಗಿ ಮಾಡುತ್ತಿದ್ದರೆ ಮನಸ್ಸು ಆತ್ಮನಲ್ಲಿಯೇ ಲಯವಾಗಿಬಿಡುತ್ತದೆ. ಆಗ ಸಾಧಕನಿಗೆ ಆಗುವ ಜ್ಞಾನವು ಯಾವ ರೂಪವಾಗಿರುವದೆಂಬುದನ್ನು "ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥" ಎಂಬ ಶ್ಲೋಕದಲ್ಲಿ ತಿಳಿಸಿರುತ್ತದೆ. ನಾನು ಈ ದೇಹೇಂದ್ರಿಯಗಳ ಗುಂಪಿನಲ್ಲಿ ಮಾತ್ರವಿರುತ್ತೇನೆ, ನನ್ನಂತೆಯೇ ಒಂದೊಂದು ದೇಹೇಂದ್ರಿಯಗಳ ಗುಂಪಿಗೂ ಒಬ್ಬೊಬ್ಬ ಬೇರೆಯ ಆತ್ಮನಿರುತ್ತಾನೆ– ಎಂದು ಈಗ ನಮ್ಮಗಳ ಭಾವನೆ ಇರುವದಷ್ಟೆ? ಧ್ಯಾನಯೋಗವು ಪಕ್ವವಾದಾಗ ಈ ತಿಳಿವಳಿಕೆಯು ತಪ್ಪೆಂದು ಗೊತ್ತಾಗಿಬಿಡುತ್ತದೆ. ಬ್ರಹ್ಮನು ಮೊದಲಾಗಿ ಸ್ಥಾವರಾಂತವಾಗಿರುವ ಎಲ್ಲಾ ಪ್ರಾಣಿಗಳಿಗೂ ನನ್ನ ಆತ್ಮನೇ ಆತ್ಮನಾಗಿರುತ್ತಾನೆ–ಎಂದು ನೇರಾಗಿ ಅನುಭವವಾಗಿ ಬಿಡುತ್ತದೆ. ಸಾಂಖ್ಯಯೋಗದಿಂದಲೂ ಇದೇ ತಿಳಿವಳಿಕೆಯೇ ಆಗುತ್ತದೆ; ಆದ್ದರಿಂದ ಈ ಅರ್ಥದಲ್ಲಿ ಸಾಂಖ್ಯವೂ ಧ್ಯಾನಯೋಗವೂ ಒಂದೇ ಆಗಿರುತ್ತವೆ ಎನ್ನಬಹುದು.

ಆದರೆ ಉಪಾಸನೆ ಎಂಬ ಹೆಸರಿನಿಂದ ಕರೆದಿರುವ ಯೋಗವು ಈ ಬಗೆಯದಲ್ಲ. ಅದರಲ್ಲಿ ಭಾವನೆಯೇ ಮುಖ್ಯ. "ಯೋ ಯಚ್ಛ್ರದ್ಧಃ ಸ ಏವ ಸಃ"– ಯಾವನಿಗೆ ಯಾವದರಲ್ಲಿ ಶ್ರದ್ಧೆಯಿರುವದೋ ಅವನು ಅದೇ ಆಗುವನು– ಎಂಬ ತತ್ತ್ವವು ಇಲ್ಲಿ ಲಕ್ಷಿಸತಕ್ಕದ್ದಾಗಿರುತ್ತದೆ. ವ್ಯವಹಾರದಲ್ಲಿಯೂ ನಾವು ಧನ, ಕೀರ್ತಿ, ಅಧಿಕಾರ, ದೇಹಾರೋಗ್ಯ– ಮುಂತಾದ ಧ್ಯೇಯಗಳನ್ನು ಗುರಿಯಾಗಿಟ್ಟುಕೊಂಡು ಅದಕ್ಕಾಗಿಯೇ ಒಬ್ಬೊಬ್ಬರು ಶ್ರಮಪಡುತ್ತಿರುವದೂ, ಶ್ರದ್ಧಾಪ್ರೇರಿತವಾದ ಆ ಪ್ರಯತ್ನವೇ ಅವರನ್ನು ಆಯಾ ಕ್ಷೇತ್ರದಲ್ಲಿ ಮುಂದಕ್ಕೆ ತರುತ್ತಿರುವದೂ ನಮಗೆ ಕಾಣಬರುತ್ತದೆ. ಇದರಂತೆ ಅದೃಷ್ಟಫಲವನ್ನು ಕೊಡುವ ಉಪಾಸನೆಗಳ ವಿಷಯದಲ್ಲಿಯೂ ನಮ್ಮ ಪ್ರಯತ್ನವು ಸಾರ್ಥಕವಾಗುವದೆಂದು ನಾವು ನಂಬಬಹುದಾಗಿದೆ. "ಯಥಾ ಕ್ರತುರಸ್ಮಿಲ್ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ" ಎಂಬ ಶ್ರುತಿಯಲ್ಲಿ ಹಾಗೆಂದು ಹೇಳಿಯೂ

ಇರುತ್ತದೆ. ಉಪನಿಷತ್ತುಗಳಲ್ಲಿ ಹಲವು ಬಗೆಯ ಉಪಾಸನೆಗಳನ್ನು ಹೇಳಿದೆ. ಅವುಗಳಲ್ಲಿ ಕೆಲವು ವೇದೋಕ್ತವಾದ ಕರ್ಮಗಳಿಗೆ ಅಂಗವಾಗಿ ಮಾಡುವ ಉಪಾಸನೆಗಳು; ಅವುಗಳಿಂದ ಆಯಾ ಕರ್ಮಗಳು ವೀರ್ಯವತ್ತರವಾಗುತ್ತವೆ ಎಂಬ ಫಲವನ್ನು ಅಲ್ಲಿ ಹೇಳಿದೆ. ಇನ್ನು ಕೆಲವು ಪ್ರಜೆ, ಪಶು, ಬ್ರಹ್ಮವರ್ಚಸ್ಸು- ಮುಂತಾದ ಫಲಗಳನ್ನೂ ಸ್ವರ್ಗಾದಿಗಳನ್ನೂ ಕೊಡುವ ಉಪಾಸನೆಗಳು. ಮತ್ತೆ ಕೆಲವು ಅಹಂಗ್ರಹೋಪಾಸನೆಗಳು; ಪರಮಾತ್ಮನೇ ತಾನೆಂದು ಮಾಡುವ ಉಪಾಸನೆಗಳು. ಅವುಗಳಿಂದ ಬ್ರಹ್ಮಲೋಕಪ್ರಾಪ್ತಿಯೂ ಕಲ್ಪಾಂತರದಲ್ಲಿ ಕ್ರಮಮುಕ್ತಿಯೂ ಆಗುವವೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಈ ಉಪಾಸನೆಗಳು ವೇದೋಕ್ತಕರ್ಮದಲ್ಲಿ ಅಧಿಕಾರವಿರುವವರಿಗೆ ಮಾತ್ರ ಪ್ರಯೋಜನ ವಾಗಿರುತ್ತವೆ. ಈಗ ಅವನ್ನು ಆಚರಿಸುವವರು ಬಹಳ ಕಡಿಮೆ, ಅಥವಾ ಇಲ್ಲವೇ ಇಲ್ಲವೆಂದರೂ ಆಗುತ್ತದೆ.

ಗೀತೆಯ ಎಂಟನೆಯ ಅಧ್ಯಾಯದಲ್ಲಿ ಹೇಳಿರುವ ಅಕ್ಷರಬ್ರಹ್ಮೋಪಾಸನೆಯೂ ಈ ಬಗೆಯದೇ. ಯಾರು ಸರ್ವಕರ್ಮಸಂನ್ಯಾಸವನ್ನು ಮಾಡಿ, ವೇದಗಳನ್ನೆಲ್ಲ ಪ್ರಣವದಲ್ಲಿ ಪ್ರವೇಶಮಾಡಿಸಿಕೊಂಡು ಇರುವರೋ ಅಂಥವರು ಓಂಕಾರವನ್ನು ಎಡೆಬಿಡದೆ ಜಪಿಸುತ್ತಾ ಅದರ ಅರ್ಥವನ್ನು ಬಿಡದೆ ಸ್ಮರಿಸಿಕೊಳ್ಳುತ್ತಾ ಓಂಕಾರವನ್ನೇ ಪ್ರತೀಕವಾಗಿ- ಸಾಲಗ್ರಾಮವನ್ನು ವಿಷ್ಣುವೆಂದು ಭಾವಿಸುತ್ತಿರುವಂತೆ- ಭಾವನೆಮಾಡುತ್ತಿದ್ದರೆ ಅದರ ಫಲವಾಗಿ ಸುಷುಮ್ನಾನಾಡೀ ದ್ವಾರದಿಂದ ಉತ್ಕ್ರಾಂತಿಯಾಗಿ ಅವರಿಗೆ ಬ್ರಹ್ಮಲೋಕವೇ ಪ್ರಾಪ್ತವಾಗುವದು; ಕೊನೆಗೆ ಬ್ರಹ್ಮಸಾಯುಜ್ಯವೂ ದೊರೆಯುವದು- ಎಂದು ಗೀತೆಯಲ್ಲಿ ಹೇಳಿದೆ. ಸತ್ಸಂಕಲ್ಪವು ಹೊರಗಿನ ವ್ಯವಹಾರದಲ್ಲಿ ರೂಪಗೊಳ್ಳುವದು ಸಾಧಕರ ಅನುಭವದಲ್ಲಿರುತ್ತದೆ; ತ್ರಿಕಾಲಜ್ಞರಾದ ಮಹರ್ಷಿಗಳು ಹೇಳುವದರಲ್ಲಿ ಶ್ರದ್ಧೆಯನ್ನಿಟ್ಟು ಈ ಧಾರಣಾಯೋಗವನ್ನು ಮಾಡುವದರಿಂದ ಉತ್ತಮಫಲವು ದೊರಕುವದೆಂಬುದಕ್ಕೆ ಇದೂ ಒಂದು ಸಾಕ್ಷಿಯಾಗಿರುತ್ತದೆ. ಸಾಯುವ ಕಾಲದಲ್ಲಿ ಎಂಥ ಭಾವನೆಯಿರುತ್ತದೆಯೋ, ಅದಕ್ಕನುಗುಣವಾಗಿ ಮುಂದಿನ ಜನ್ಮದಲ್ಲಿಯೂ ಲೋಕಾಂತರದಲ್ಲಿಯೂ ಫಲವಾಗುವದೆಂಬ ತತ್ತ್ವವೊಂದನ್ನು ಎಂಟನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.

ಈ ಉಪಾಸನೆಗಳೆಲ್ಲ ಕಷ್ಟಸಾಧ್ಯವೂ ಕೆಲವರು ಅಧಿಕಾರಿಗಳಿಗೆ ಮಾತ್ರ ದೊರಕುವಂಥವೂ ಆಗಿರುತ್ತವೆ. ಆದರೆ ಭಗವದ್ಗೀತೆಯ ಹತ್ತನೆಯ ಅಧ್ಯಾಯದಲ್ಲಿ ಇವುಗಳ ಜೊತೆಗೆ ಸುಲಭವಾದ, ಪ್ರಯತ್ನಪಟ್ಟರೆ ಸರ್ವರಿಗೂ ಅಳವಡಬಹುದಾದ, ಮತ್ತೊಂದು ಯೋಗವನ್ನು ಹೇಳಿರುತ್ತದೆ. ಅದಕ್ಕೆ **ವಿಭೂತಿಯೋಗ** ಎಂದು ಹೆಸರು. ಆಧ್ಯಾತ್ಮಿಕ ಆಧಿಭೌತಿಕ, ಆಧಿದೈವಿಕ- ಎಂದು ವಿಂಗಡವಾಗಿರುವ ಪ್ರಪಂಚದಲ್ಲಿ ಯಾವಯಾವದು ಮೆಚ್ಚತಕ್ಕದ್ದೆಂದು ನಮಗೆ ಕಾಣುವದೋ ಅದೆಲ್ಲವೂ ಭಗವಂತನ ತೇಜಸ್ಸಿನ ಅಂಶದಿಂದ ಹುಟ್ಟಿದ್ದೆಂದು ಭಾವಿಸುವದೇ

ಆ ಯೋಗವು. "ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್॥" ಯಾವದು ಎಲ್ಲಕ್ಕೂ ಹೆಚ್ಚಿನದೆಂಬ ಕಾರಣದಿಂದ, ಎಲ್ಲಕ್ಕೂ ಹೆಚ್ಚಿನ ಕಾಂತಿಯುಕ್ತವಾಗಿ ಸುಂದರವಾಗಿ ಕಲ್ಯಾಣತರವಾಗಿ ಕಾಣುವದರಿಂದ, ಅಥವಾ ಎಲ್ಲಕ್ಕೂ ಉತ್ಸಾಹಶಕ್ತಿಯಿಂದ ಕೂಡಿದ್ದೆಂಬ ಕಾರಣದಿಂದ, ನಮ್ಮ ಮೆಚ್ಚುಗೆಗೆ ಕಾರಣವಾಗಿರುವದೋ ಅದೆಲ್ಲವೂ ಭಗವಂತನ ಅಂಶವೇ ಆಗಿರುತ್ತದೆ ಎಂದು ತಿಳಿಯಬೇಕು.

ಅಚೇತನಪದಾರ್ಥಗಳಲ್ಲಾಗಲಿ, ಸ್ಥಾವರಪ್ರಾಣಿಗಳಲ್ಲಾಗಲಿ, ಜಂಗಮಪ್ರಾಣಿಗಳಲ್ಲಾಗಲಿ, ಮನುಷ್ಯರು ದೇವತೆಗಳು ಮುಂತಾದ ಉಚ್ಚವರ್ಗದ ಜೀವರುಗಳಲ್ಲಾಗಲಿ–ಎಲ್ಲಿ ನೋಡಿದರೂ ಸಾತ್ತ್ವಿಕ, ರಾಜಸ, ತಾಮಸ–ಎಂಬ ಮೂರು ಬಗೆಯಲ್ಲಿ ವಿಂಗಡವಾಗಿರುವ ಪದಾರ್ಥಗಳು ನಮಗೆ ಗೋಚರವಾಗುತ್ತಿರುತ್ತವೆ. ಈ ಸಾತ್ತ್ವಿಕಾದಿಭಾವಗಳನ್ನು ಕಂಡರೆ ನಮಗೆ ಕೆಲವು ಭಾವಗಳಲ್ಲಿ ಮೆಚ್ಚುಗೆಯೂ, ಕೆಲವು ಭಾವಗಳಲ್ಲಿ ದ್ವೇಷವೂ, ಮತ್ತೆ ಕೆಲವು ಭಾವಗಳಲ್ಲಿ ಔದಾಸೀನ್ಯವೂ ಉಂಟಾಗುತ್ತಿರುವದು. ಸಾಮಾನ್ಯಸ್ಥಿತಿಯಲ್ಲಿ ನಾವೆಲ್ಲರೂ ರಾಗದ್ವೇಷಾದಿರೂಪವಾದ ಮೋಹಕ್ಕೆ ವಶರಾಗಿಯೇ ಹುಟ್ಟಿರುತ್ತೇವೆ; ಈ ದ್ವಂದ್ವಮೋಹಗಳು ನಮ್ಮನ್ನು ಆವರಿಸಿಕೊಂಡೇ ಪದಾರ್ಥಗಳನ್ನು ತೋರಿಸುತ್ತಿರುವದ ರಿಂದ ಅವು ಇದ್ದಂತೆ ನಮಗೆ ತೋರುವದಕ್ಕೆ ಬದಲಾಗಿ ಅವುಗಳಲ್ಲಿ ಕೆಲವು ಒಳ್ಳೆಯವು, ಮತ್ತೆ ಕೆಲವು ಕೆಟ್ಟವು, ಇನ್ನೂ ಕೆಲವು ಸಾಮಾನ್ಯವಾದವು– ಎಂಬ ಬಯಲುಭ್ರಾಂತಿ ಯನ್ನುಂಟು ಮಾಡುತ್ತಿರುವವು. ಕೇವಲ ಹೊರಗೆ ಇರುವ ದೃಶ್ಯಗಳು ಮಾತ್ರವೇ ಅಲ್ಲ, ನಮ್ಮೊಳಗೆ ಇರುವ ಬುದ್ಧಿ, ಜ್ಞಾನ, ಕ್ಷಮೆ, ಸತ್ಯ, ದಮ, ಶಮ, ಸುಖ, ಅಹಿಂಸೆ, ಸಮತೆ, ತುಷ್ಟಿ, ತಪಸ್ಸು, ಔದಾರ್ಯ, ಮೌಢ್ಯ, ಅಜ್ಞಾನ, ಅಸಹಿಷ್ಣುತೆ, ಅನೃತ, ಇಂದ್ರಿಯಲೋಲುಪತೆ, ಅಶಾಂತಿ, ದುಃಖ, ಹಿಂಸೆ, ತರತಮಬುದ್ಧಿ, ಅತೃಪ್ತಿ, ಜಿಪುಣತನ, ಮಂಕು, ನಿದ್ರೆ, ಆಲಸ್ಯ– ಮುಂತಾದ ಭಾವಗಳುಕೂಡ ನಮಗೆ ತ್ರಿಗುಣಾತ್ಮಕವಾಗಿಯೇ ಇರುವದರಿಂದ ಶುಭಾಶುಭೋದಾಸೀನರೂಪವಾಗಿಯೇ ತೋರುವವು. ಇವಲ್ಲಿ ಕೆಲವು ನಮಗೆ ಬೇಕಾಗಿರುವವು, ಮತ್ತೆ ಕೆಲವು ಬೇಡವಾಗಿರುವವು; ಇನ್ನೂ ಕೆಲವು ಭಾವಗಳ ವಿಷಯಕ್ಕೆ ನಮಗೆ ಅನಾದರವಿರುವದು. ಇಷ್ಟೇ ಅಲ್ಲ, ಈ ಹೊರಗೂ ಒಳಗೂ ಇರುವ ಭಾವಗಳು ನಮ್ಮಲ್ಲಿ ಒಬ್ಬೊಬ್ಬರಿಗೂ ಒಂದೊಂದು ವೇಳೆಯಲ್ಲಿ ಒಳ್ಳೆಯದಾಗಿ ಕಂಡರೂ ಮತ್ತೆ ಕೆಲವು ವೇಳೆಗಳಲ್ಲಿ ಅದೇ ನಮಗೆ ಕೆಟ್ಟವೆಂದು ತೋರುತ್ತಿರುವದು. ಹೀಗೆ ನಮ್ಮನ್ನು ಮರುಳುಮಾಡುತ್ತಿರುವ ಈ ಭಾವಗಳ ತೋರಿಕೆಗೆ **ಮಾಯೆ** ಎಂದು ಹೆಸರು. ಈ ಗುಣಮಯವಾದ ಮಾಯೆಯಿಂದ ಮೋಹಿತರಾಗಿ ವ್ಯವಹರಿಸುತ್ತಿರುವದೇ ಸಂಸಾರಕ್ಕೆ ಕಾರಣವಾಗಿರುತ್ತದೆ. ಸಾಧಕರಾದವರು ಇದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಈ ಹೊರಗಿನ ಒಳಗಿನ ದೃಶ್ಯಗಳೆಲ್ಲವೂ ಭಗವಂತನಿಂದಲೇ ಬಂದವುಗಳು ಎಂಬ

ಉತ್ತಮಭಾವನೆಯನ್ನು ಅಳವಡಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಹಾಗಾದರೆ, ನಾವು ಈ ಮಾಯೆಯನ್ನು ಗೆದ್ದು ಭಗವಂತನ ದರ್ಶನವನ್ನು ಪಡೆದುಕೊಳ್ಳುವದಕ್ಕೆ ಅರ್ಹರಾಗುವೆವು.

ಈ ಸಾಧನಕ್ಕೆ ಮೊಟ್ಟಮೊದಲು ವಿಭೂತ್ಯುಪಾಸನೆಯು ಬಹಳ ಸಹಾಯಕವಾಗಿರುತ್ತದೆ. ಏಕೆಂದರೆ ಎಲ್ಲೆಲ್ಲಿ ಅನಿಮಿತ್ತವಾಗಿಯೇ ನಮ್ಮೆಲ್ಲರ ಮನಸ್ಸನ್ನು ಸೆಳೆಯುವ ಉತ್ತಮೋತ್ತಮವಾದ ದೃಶ್ಯಗಳಿರುವವೋ ಅಲ್ಲಲ್ಲಿ ಭಗವಂತನ ಅಂಶವು ಹೆಚ್ಚು ಹೆಚ್ಚು ಪ್ರಕಟವಾಗಿರುತ್ತದೆ. ಸುಂದರವಾದ ಚಿತ್ರ, ಇಂಪಾದ ಗಾನ, ಮುದ್ದಾದ ಪ್ರಾಣಿಗಳು, ಚಿತ್ತಾಕರ್ಷಕವಾದ ಗಿಡಮರಗಳು, ವಿಶಾಲವಾದ ನಿರ್ಮಲಾಕಾಶ, ಧರ್ಮಿಷ್ಠರು, ವೀರಪುರುಷರು, ನೀತಿವಂತರಾದ ಮಹಾತ್ಮರು– ಇವರುಗಳು ಸಹಜವಾಗಿಯೇ ನಮ್ಮ ಮನಸ್ಸನ್ನು ಸೆಳೆಯುತ್ತಾರೆ. ಇಂಥ ಹಲವು ದೃಶ್ಯಗಳನ್ನು ಭಗವದ್ಗೀತೆಯ ಏಳು, ಒಂಬತ್ತು ಮತ್ತು ಹತ್ತು– ಈ ಅಧ್ಯಾಯಗಳಲ್ಲಿ ವರ್ಣಿಸಿರುತ್ತದೆ. ಉದಾಹರಣೆಗೆ ಹತ್ತನೆಯ ಅಧ್ಯಾಯದಲ್ಲಿ ಹೀಗೆಂದು ಉಪದೇಶಿಸಿರುತ್ತದೆ; ಭಗವಂತನು ಸರ್ವಪ್ರಾಣಿಗಳ ಅಂತಃಕರಣದಲ್ಲಿಯೂ ಸಾಕ್ಷಿಯಾಗಿರುವ ಪರಮಾತ್ಮನು ಎಂದು ಉಪಾಸನೆಮಾಡಬೇಕು. ಭಗವಂತನೇ ಭೂತಗಳಿಗೆ ಆದಿಯು, ಮಧ್ಯ, ಅಂತ– ಎಂದು ಭಾವಿಸಬೇಕು. ಬೆಳಕುಗಳಲ್ಲಿ ಸೂರ್ಯನು, ದೇವತೆಗಳಲ್ಲಿ ಇಂದ್ರನು, ಮಹರ್ಷಿಗಳಲ್ಲಿ ಭೃಗು, ಇಂದ್ರಿಯಗಳಲ್ಲಿ ಮನಸ್ಸು ಎಂದು ತಿಳಿಯಬೇಕು. ಇತ್ಯಾದಿ, ಇತ್ಯಾದಿ. ಇವನ್ನೆಲ್ಲ ಮನಸ್ಸಿಗೆ ತಂದುಕೊಂಡು ಆಯಾ ವಿಭೂತಿಗಳ ಹೆಚ್ಚುಗಾರಿಕೆಯನ್ನು ಮನಸ್ಸಿನಲ್ಲಿ ಹೊರಳಾಡಿಸಬೇಕು. ಆ ಉಪಾಸನೆಯಿಂದ ನಮ್ಮ ಮನಸ್ಸು ನಿರ್ಮಲವಾಗುತ್ತದೆ. ಬಾಹ್ಯಾಧ್ಯಾತ್ಮಿಕರೂಪವಾದ ಇಡಿಯ ಜಗತ್ತೇ ಭಗವಂತನ ಒಂದಂಶವೆಂಬುದು ಮನಸ್ಸಿನಲ್ಲಿ ಮಿಂಚುತ್ತದೆ. ಮಾಯೆಯನ್ನು ಗೆಲ್ಲುವದಕ್ಕೆ ಇದೇ ಪರಮೋಪಾಯವು.

## 5.3. ಭಗವಂತನ ಕರುಣೆ

**ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ । ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪೃಥಿವೀ ಹ್ಯೇಷ ಸರ್ವಭೂತಾಂತರಾತ್ಮಾ ॥** ಮುಂ. 2-1-4

ವಿಭೂತಿಯೋಗದ ಪ್ರಕಾರವನ್ನು ತಿಳಿದದ್ದಾಗಿದೆ. ಆ ಯೋಗದಿಂದ ಒಂದು ಮುಖ್ಯಪ್ರಯೋಜನವನ್ನು ನಾವು ಮನಸ್ಸಿಗೆ ತಂದುಕೊಳ್ಳುವದು ಅವಶ್ಯವಾಗಿರುತ್ತದೆ. ಕಲಿಯುಗದಲ್ಲಿ ಎಲ್ಲರೂ ಮಾಡಬಹುದಾದ, ಅವಶ್ಯವಾಗಿ ಎಲ್ಲರೂ ಮಾಡಬೇಕಾಗಿರುವ, ಒಂದು ಭಾವನೆಯಿದೆ. ಅದನ್ನು ಸ್ಮೃತಿಕಾರರು ಹೀಗೆಂದು ಸಂಗ್ರಹವಾಗಿ ತಿಳಿಸಿರುತ್ತಾರೆ: "ಮಮೇತಿ ಬಧ್ಯತೇ ಜನ್ತುರ್ನ ಮಮೇತಿ ವಿಮುಚ್ಯತೇ"– ನನ್ನದು ಎಂಬ ಭಾವನೆಯಿಂದಲೇ

ಜೀವನಿಗೆ ಬಂಧ; ನನ್ನದಲ್ಲ ಎಂಬುದರಿಂದಲೇ ಮುಕ್ತಿ. ಗೀತೆಯ ಉಪದೇಶದಂತೆ ವಿಭೂತಿಗಳಲ್ಲಿ ಭಗವಂತನ ತೇಜೋಂಶವೆಂಬ ಭಾವನೆಯನ್ನು ಅಳವಡಿಸಿಕೊಂಡರೆ ಮಮತ್ವವು– ನನ್ನದೆಂಬ ಭಾವನೆಯು–ನಾಶವಾಗಿಹೋಗುವದು. ಪರಮಾತ್ಮನ ತೇಜಸ್ಸಿನ ಅಂಶವನ್ನೇ ವಿಭೂತಿಯಲ್ಲಿ ಕಾಣಬೇಕು. ಹೇಗೆಂದರೆ ಅಶ್ವತ್ಥದಲ್ಲಿ ಅಶ್ವತ್ಥಬುದ್ಧಿ ಹೋಗಬೇಕು, ಅಶ್ವತ್ಥನಾರಾಯಣನೆಂಬ ಬುದ್ಧಿಯುಂಟಾಗಬೇಕು; ಹೀಗೆಯೇ ಸೂರ್ಯನಲ್ಲಿ ಸೂರ್ಯಬುದ್ಧಿ ಹೋಗಬೇಕು, ಸೂರ್ಯನಾರಾಯಣಬುದ್ಧಿ ಉಂಟಾಗಬೇಕು, ಇತ್ಯಾದಿ. ಹೀಗೆ ಈಶ್ವರೀಕರಣವನ್ನು ಅಭ್ಯಾಸಮಾಡುವವರಿಗೆ ಹೇಗೆತಾನೆ ಮಮತಾಬುದ್ಧಿ ಉಳಿದುಕೊಂಡೀತು? ಜ್ಞಾನವು ವಸ್ತುತಂತ್ರ, ಅದನ್ನು ವಸ್ತುವಿನ ತತ್ತ್ವವನ್ನು ಅನುಭವಕ್ಕೆ ತಂದುಕೊಂಡೇ ಪಡೆದುಕೊಳ್ಳಬೇಕು. ಅದಕ್ಕೆ ತಕ್ಕಷ್ಟು ಸಾಮರ್ಥ್ಯವಿಲ್ಲದವರು ಭಾವನೆಯನ್ನಾದರೂ ಮಾಡಬೇಕು. ಅದರಿಂದ ಕಾಲಾನುಕಾಲಕ್ಕೆ ಜ್ಞಾನವೇ ಆಗುವದು. ಕಲಿಯುಗದಲ್ಲಿ ಭಾವನೆಯೇ ಬಹುಜನರಿಗೆ ಸುಲಭ, ಅದೇ ಈಗ್ಗೆ ಅವಶ್ಯವಾಗಿರುತ್ತದೆ. ಮನಸ್ಸು ತಾನು ಎಲ್ಲಿಂದ ಬಂದಿದೆಯೋ, ಭಾವನೆಯಿಂದ ಅದೇ ತಾನಾಗಿಬಿಡುತ್ತದೆ. ವಿಭೂತಿಯೋಗವನ್ನು ಅಭ್ಯಾಸಮಾಡಿದಂತೆಲ್ಲ ಎಲ್ಲಿ ತಿರುಗಿದರೆ ಅಲ್ಲಿ ಭಗವಂತನ ತೇಜೋಂಶಗಳು ಕಾಣಿಸುವವು. ಆಮೇಲೆ ಭಗವಂತನು ಅರ್ಜುನನಿಗೆ ಮಾಡಿದ ಈ ಪರಮೋಪದೇಶವು ಮನದಟ್ಟಾಗುವದು. "ಅಥವಾ ಬಹುನೈತೇನ ಕಿಂ ಜ್ಞಾನೇನ ತವಾರ್ಜುನ। ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥"– "ಅರ್ಜುನನೆ, ಇಷ್ಟೆಲ್ಲ ತಿಳಿದುಕೊಂಡಾದರೂ ನಿನಗೆ ಆಗಬೇಕಾದದ್ದೇನು? ಈ ಜಗತ್ತೆಲ್ಲವನ್ನೂ ನಾನೇ ಹಿಡಿದು ನಿಲ್ಲಿಸಿರುವೆನು, ನನ್ನ ಒಂದಂಶದಿಂದ ಈ ಇಡಿಯ ಜಗತ್ತೇ ಆಗಿರುವೆನು".

ಅರ್ಜುನನಿಗೆ ಈ ಉಪದೇಶವನ್ನು ಕೇಳಿದಾಗ ಒಂದು ಕುತೂಹಲವುಂಟಾಯಿತು. ಭಕ್ತವರ್ಯನಾದ ಅವನು ಈ ಜಗತ್ತೆಲ್ಲವೂ ಪರಮಾತ್ಮನೇ ಎಂಬುದನ್ನು ಕಾಣುವದೇ ನನ್ನ ಜನ್ಮದ ಸಾರ್ಥಕ್ಯ ಎಂದುಕೊಂಡನು. "ಭಗವಂತನೆ, ಈ ನಿನ್ನ ವಿಶ್ವರೂಪವನ್ನು ನಾನು ನೋಡಬೇಕು. ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು– ಇವುಗಳಿಂದ ನೀನು ನಿತ್ಯವೂ ಕೂಡಿಕೊಂಡಿರುವೆಯೆಂಬುದನ್ನು ಸೂಚಿಸುವ ಆ ರೂಪವನ್ನು ನೋಡುವದು ನನಗೆ ಶಕ್ಯವೆಂದು ನಿನಗೆ ತೋರಿದರೆ ದಯವಿಟ್ಟು ಆ ರೂಪವನ್ನು ನನಗೆ ತೋರಿಸು" ಎಂದು ಬೇಡಿಕೊಂಡನು. ಹನ್ನೊಂದನೆಯ ಅಧ್ಯಾಯದಲ್ಲಿ ಭಗವಂತನು ಆ ರೂಪವನ್ನು ತೋರಿಸಿದ್ದು, ಅದರಿಂದ ಅರ್ಜುನನಮೇಲೆ ಆದ ಪರಿಣಾಮ, ಅವನು ಮಾಡಿದ ಸ್ತೋತ್ರ, ಭಗವಂತನ ಸಮಾಧಾನೋಕ್ತಿ– ಇವೆಲ್ಲವನ್ನೂ ವಿಸ್ತಾರವಾಗಿ ಹೇಳಿದೆ. ಆದರೆ ಅಲ್ಲಿ ತಿಳಿಯಬೇಕಾದ ಮಹತ್ತ್ವದ ಅಂಶವೊಂದಿದೆ. ಅರ್ಜುನನು ಭಗವಂತನ ವಿಶ್ವರೂಪವನ್ನು ನೋಡಬೇಕೆಂದು ಕೇಳಿದ್ದೇ ತಡ, "ಪಶ್ಯ ಮೇ ಪಾರ್ಥ ರೂಪಾಣಿ"– ಪಾರ್ಥನೆ, ನನ್ನ ನೂರಾರು ಸಾವಿರಾರು ರೂಪಗಳನ್ನು ನೋಡು ಎಂದು ಕೂಡಲೆ ತೋರಿಸಿಬಿಟ್ಟನು.

ಭಗವಂತನು ಮೊದಲು ಸಂಕಲ್ಪಮಾಡಿ ಆ ಬಳಿಕ ಜಗದ್ರೂಪನಾಗಲಿಲ್ಲ, ಸಂಕಲ್ಪ ಸಮಕಾಲದಲ್ಲಿಯೇ ಜಗದ್ರೂಪನಾದನು! ಅಂಥ ಸರ್ವಶಕ್ತನಾತನು. ಭಗವಂತನಿಗೆ ಜಗದ್ರೂಪವಾಗುವದು ಲೀಲಾಮಾತ್ರವಾಯಿತು. ಅಲ್ಲಿ ಯಾವ ಪ್ರಯತ್ನವೂ ಬೇಕಾಗಲಿಲ್ಲ. ಈ ಜಗತ್ತೆಲ್ಲ "ಅವಿದ್ಯಾಕಲ್ಪಿತ" ಎಂದು ವೇದಾಂತಿಗಳು ಹೇಳುವದುಂಟು. ಆ ಮಾತಿಗೆ ಅರ್ಥವೇನು? ಇಂದ್ರಿಯಗಳಿಂದ ನೋಡಿದಾಗ ಪರಮಾತ್ಮನೇ ಹಾಗೆ ತೋರಿಕೊಳ್ಳುತ್ತಾನೆ; ಪರಮಾತ್ಮನಿಗೆ ಹಾಗೆ ಮಾಯೆಯಿಂದ ತೋರಿಕೊಳ್ಳುವ ಶಕ್ತಿಯಿದೆ ಎಂದರ್ಥ.

ಅರ್ಜುನನು ವಿಶ್ವರೂಪವನ್ನು ನೋಡಬೇಕೆಂದು ಇಚ್ಛಿಸಿದ್ದೇ ತಡ, ಭಗವಂತನು "ಪಶ್ಯ ಮೇ ಪಾರ್ಥ ರೂಪಾಣಿ" ಎಂದು ತನ್ನ ಆ ಮಹಾರೂಪವನ್ನು ತೋರಿಸಿಬಿಟ್ಟ ನೆಂಬುದಕ್ಕಿಂತ ಅರ್ಜುನನಿಗೆ ಆ ರೂಪವನ್ನು ನೋಡುವಂಥ ದಿವ್ಯದೃಷ್ಟಿಯನ್ನು ಕೊಟ್ಟನೆಂಬುದೇ ಹೆಚ್ಚಿನ ಅದ್ಭುತವೆನ್ನಬೇಕು. ಏಕೆಂದರೆ ಭಗವಂತನು ಈಗಲೂ ತನ್ನ ವಿಶ್ವರೂಪದಿಂದ ಕಾಣಿಸುವದಕ್ಕೆ ಸಿದ್ಧನಾಗಿರುತ್ತಾನೆ; ಆದರೆ ಆ ರೂಪವನ್ನು ನೋಡುವ ಯೋಗ್ಯತೆ ನಮ್ಮಂಥವರಿಗೆ ಎಲ್ಲಿಂದ ಬರಬೇಕು? ಅದಕ್ಕೆ ಆತನ ಅನುಗ್ರಹವೇ ಬೇಕು. ಅರ್ಜುನನಂಥ ಭಕ್ತನಿಗೆ ಮಾತ್ರ ಆ ಅನುಗ್ರಹವನ್ನು ಸಂಪಾದಿಸಿಕೊಳ್ಳುವದು ಸಾಧ್ಯ. ಭಗವಂತನ ಆ ದಿವ್ಯರೂಪವು ಸಾವಿರ ಸೂರ್ಯರ ಪ್ರಕಾಶವುಳ್ಳದ್ದಾಗಿರುತ್ತಂತೆ! ಅದರಲ್ಲಿ ಈ ನಾನಾವಿಧವಾಗಿ ವಿಂಗಡವಾಗಿರುವ ಜಗತ್ತೆಲ್ಲವೂ ಒಂದುಕಡೆಯಲ್ಲಿ ಇದ್ದುಕೊಂಡಿತ್ತಂತೆ! ಅರ್ಜುನನು ಅದನ್ನು ನೋಡಿ ಬೆರಗಾಗಿ ಬಗೆಬಗೆಯಾಗಿ ಸ್ತುತಿಸಿ ಅದನ್ನು ಕೊನೆಗೆ ನೋಡಲಾರದೆ ಅಂಜಿಕೆಯಿಂದ ಮತ್ತೊಮ್ಮೆ ಮೊದಲಿನ ಮಾನುಷರೂಪವನ್ನೇ ಧರಿಸಿ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಭಗವಂತನು "ಅರ್ಜುನ, ಈ ನನ್ನ ಘೋರರೂಪವನ್ನು ನೋಡಿ ಅಂಜದಿರು, ಇಗೊ ಮತ್ತೆ ಆ ಮುನ್ನಿನ ರೂಪವನ್ನೇ ತೋರಿಸುತ್ತೇನೆ, ನೋಡು. ಈ ವಿಶ್ವರೂಪವನ್ನು ನಿನ್ನ ಭಕ್ತಿಗೆ ಮೆಚ್ಚಿ ತೋರಿಸಿದ್ದೇನೆ. ಅನನ್ಯಭಕ್ತಿಯಿಂದಲ್ಲದೆ ಮತ್ತೆ ಹೇಗೂ ಇದನ್ನು ಯಾರಿಂದಲೂ ನೋಡಲಾಗದು. ಇಗೊ, ಅತ್ಯಂತಸಾರಭೂತವಾದ ಸಾಧನವನ್ನು ನಿನಗೆ ಹೇಳುತ್ತೇನೆ, ಕೇಳು. ನನ್ನ ಕರ್ಮವನ್ನೇ ಮಾಡುತ್ತಾ ನಾನೇ ಪರಮಗತಿಯೆಂದು ತಿಳಿದು, ನನ್ನ ಭಕ್ತನಾಗಿ, ಧನಪುತ್ರಮಿತ್ರಕಲತ್ರ ಬಂಧುವರ್ಗಗಳಲ್ಲಿ ಯಾವ ಸಂಗವೂ, ಇಲ್ಲದವನಾಗಿ, ಸರ್ವಭೂತಗಳಲ್ಲಿ ಪ್ರೇಮವುಳ್ಳ ಭಕ್ತನೇ ನನ್ನನ್ನು ಸೇರುತ್ತಾನೆ" ಎಂದು ಉಪದೇಶಿಸಿದನು.

ಈಗ ಅರ್ಜುನನು ಕೃಷ್ಣಭಗವಂತನನ್ನು ಕುರಿತು ಒಂದು ಪ್ರಶ್ನೆಯನ್ನು ಮಾಡಿದನು. ಭಗವಂತನೆ, ಈಗ ನೀನು ತೋರಿಸಿದ ಸರ್ವಜ್ಞನೂ ಸರ್ವಶಕ್ತನೂ ಆದ ಈ ನಿನ್ನ ವಿಶ್ವರೂಪದ ಉಪಾಸನೆಯನ್ನು ಮಾಡುವ ಭಕ್ತರು, ಮತ್ತು ನಿನ್ನ ನಿರ್ವಿಶೇಷವಾದ ನಿರುಪಾಧಿಕರೂಪವಾದ ಅಕ್ಷರವನ್ನು ಉಪಾಸನೆಮಾಡುವವರು– ಈ ಇಬ್ಬರಲ್ಲಿ ಯಾರು

ಹೆಚ್ಚಿನ ಯೋಗಿಗಳು? ಇದಕ್ಕೆ ಭಗವಂತನು ಕೊಟ್ಟಿರುವ ಉತ್ತರದ ಆಧಾರದಿಂದಲೂ ಭಗವದ್ಗೀತೆಯಲ್ಲಿ ಹೀಗೆ ಎರಡೆರಡು ವಿಕಲ್ಪಗಳನ್ನು ಮಾಡಿ "ಯಾವದು ಹೆಚ್ಚಿನದು?" ಎಂಬುದನ್ನು ನಿರ್ಣಯಿಸಿರುವ ಸಂದರ್ಭಗಳನ್ನು ಹೋಲಿಸುವದರಿಂದಲೂ ಪ್ರಕೃತವಿಚಾರವನ್ನು ನಿರ್ಣಯಿಸುವದಕ್ಕೆ ಸಹಾಯವಾಗುತ್ತದೆ. ಉದಾಹರಣೆಗೆ "ಕರ್ಮಯೋಗವು ಹೆಚ್ಚೋ, ಕರ್ಮಸಂನ್ಯಾಸವು ಹೆಚ್ಚೋ?" ಎಂಬ ಪ್ರಶ್ನೆಯನ್ನು ಐದನೆಯ ಅಧ್ಯಾಯದಲ್ಲಿ ನಿರ್ಣಯಿಸಿದೆ. ಅಲ್ಲಿ ಭಗವಂತನು ಹೇಳಿರುವದೇನೆಂದರೆ, "ಕರ್ಮಯೋಗವೇ ಹೆಚ್ಚು; ಏಕೆಂದರೆ ಯೋಗವಿಲ್ಲದೆ ಸಂನ್ಯಾಸವನ್ನು ಪಡೆದುಕೊಳ್ಳುವದು ಕಷ್ಟ"– ಈ ಮಾತಿನಿಂದ ಕರ್ಮಯೋಗವು ಉಪಾಯವಾಗಿರುವದರಿಂದಲೂ ಅದನ್ನು ಮಾಡುವದು ಸುಕರವಾಗಿರುವದರಿಂದಲೂ ಕರ್ಮಯೋಗವು ಹೆಚ್ಚೆಂದು ಭಗವಂತನು ಹೇಳಿರುತ್ತಾನೆಂಬುದು ಸ್ಪಷ್ಟವಾಗಿರುತ್ತದೆ. ಹಾಗೆಯೇ ಪ್ರಕೃತದಲ್ಲಿಯೂ ಭಗವಂತನ ಉತ್ತರವನ್ನು ಮನದಂದುಕೊಂಡರೆ ಅವನ ನಿಶ್ಚಿತವಾದ ಅಭಿಪ್ರಾಯವೇನೆಂಬುದು ಸ್ಪಷ್ಟವಾಗುವಂತಿದೆ. ಭಗವಂತನು ಇಲ್ಲಿ ಹೇಳಿರುವದೇನು? "ಯಾರು ನನ್ನಲ್ಲಿಯೇ ಮನಸ್ಸನ್ನು ನೆಟ್ಟು, ನಿತ್ಯಯುಕ್ತರಾಗಿ ಉಪಾಸನೆ ಮಾಡುತ್ತಿರುವವರೋ ಅವರೇ ಹೆಚ್ಚಿನ ಯೋಗಿಗಳು. ಏಕೆಂದರೆ ಹೀಗೆಂದು ನಿರ್ದೇಶಿಸಿ ತಿಳಿಸಲಾಗದ, ಅವ್ಯಕ್ತವಾಗಿರುವ ಸರ್ವಗತವಾದ ಅಚಿಂತ್ಯವಾದ, ನಿರ್ವಿಕಾರವಾದ, ನಿಷ್ಕ್ರಿಯವಾದ, ಅಕ್ಷರಸ್ವರೂಪವನ್ನೇ ಯಾರು ಉಪಾಸನಮಾಡುತ್ತಿರುವರೋ ಅವರು ನನ್ನನ್ನೇ ಸೇರುವರೆಂಬುದು ನಿಜ; ಆದರೆ ಅವರ ಕ್ರಮವು ಬಹಳಕಷ್ಟವಾದದ್ದು. ಯಾರು ದೇಹಿಗಳೋ ಅವರಿಗೆ ಆ ಕ್ರಮವು ಬಹಳ ಕ್ಲೇಶದಿಂದ ಮಾತ್ರವೇ ದಕ್ಕುತ್ತದೆ. ಆದರೆ ಯಾರು ಸರ್ವಕರ್ಮಗಳನ್ನೂ ನನಗೆ ಅರ್ಪಿಸಿ ಅನನ್ಯಯೋಗ ದಿಂದಲೇ ನನ್ನನ್ನು ಧ್ಯಾನಿಸುತ್ತಿರುವರೋ ಅವರನ್ನು ನಾನೇ ಈ ಮೃತ್ಯುಯುಕ್ತವಾದ ಸಂಸಾರಸಾಗರದಿಂದ ಉದ್ಧಾರಮಾಡುವೆನು."

ಇಲ್ಲಿ ಅಕ್ಷರೋಪಾಸನೆಯು ದೇಹವಂತನಿಗೆ ಕಷ್ಟತಮವಾಗಿರುತ್ತದೆ ಎಂದಿರುವದನ್ನು ನಾವು ಲಕ್ಷಿಸಬೇಕು. ಏಕೆಂದರೆ ಸರಿಯಾಗಿ ವಿಚಾರಮಾಡದೆ ಇರುವವರಿಗೆ "ಎಲ್ಲರೂ ದೇಹವಂತರೇ ಅಲ್ಲವೆ? ಹೀಗಿರುವಲ್ಲಿ ಅಕ್ಷರೋಪಾಸನೆಯು ದೇಹವಂತರಿಗೆ ಕಷ್ಟ ಎಂದಿರುವದರ ಭಾವವೇನು?"– ಎಂಬ ಶಂಕೆ ಹುಟ್ಟಬಹುದು. ಆದರೆ ಶಾಸ್ತ್ರದೃಷ್ಟಿಯಿಂದ ನೋಡಿದರೆ ಎಲ್ಲರೂ ಶರೀರಿಗಳೇ ಆಗಿರುತ್ತಾರೆ ಎನ್ನುವದಕ್ಕಿಂತ ಎಲ್ಲರೂ ಅಶರೀರರೇ ಆಗಿರುತ್ತಾರೆ ಎಂಬುದೇ ಪರಮಾರ್ಥವಾಗಿರುತ್ತದೆ. ಏಕೆಂದರೆ ಶರೀರವೆಂಬುದು ನಮಗೆ ಇದೆ ಎಂಬ ಭಾವನೆಯು ಮಿಥ್ಯಾಭಿಮಾನದಿಂದಲೇ ಉಂಟಾಗಿರುತ್ತದೆ. ಕನಸಿನಲ್ಲಿ ನಮಗೆ ಯಾವ ದೇಹವೂ ಇಲ್ಲದಿದ್ದರೂ ಅಲ್ಲಿಯೂ ಯಾವದೋ ಒಂದು ದೇಹವು ನಮಗೆ ಗಂಟುಬಿದ್ದಿದೆಯೆಂಬ ಭಾವನೆಯಿಂದ ನಾವು ಅದರ ಯೋಗಕ್ಷೇಮಕ್ಕಾಗಿ

ಹೊಡೆದಾಡುತ್ತಿರುವೆವಲ್ಲವೆ? ಅದರಂತೆಯೇ ಇಲ್ಲಿಯೂ ನಮಗೆ ಶರೀರವಿದೆಯೆಂಬುದು ಬರಿಯ ಮಿಥ್ಯಾಭಿಮಾನವೇ ಎಂದು ಜ್ಞಾನಿಗಳು ಹೇಳುತ್ತಾರೆ. ಆದರೆ ಸಾಮಾನ್ಯರ ದೃಷ್ಟಿಯಿಂದ ನೋಡಿದರೆ ನಮಗೆ ಶರೀರವಿಲ್ಲವೆಂಬ ಮಾತೇ ಹಾಸ್ಯಾಸ್ಪದವಾಗಿ ಕಾಣುತ್ತದೆ. ಅಷ್ಟು ಗಟ್ಟಿಯಾಗಿದೆ, ನಮ್ಮ ಶರೀರಾಭಿಮಾನ! ಹೀಗಿರುವಲ್ಲಿ ಎಲ್ಲಾ ಜೀವರಿಗೂ ಒಬ್ಬನೇ ಆತ್ಮನೇ ಇರುತ್ತಾನೆ, ಅವನಿಗೆ ಯಾವ ಗುಣಗಳೂ ಇರುವದಿಲ್ಲ; ಅವನ ಸ್ವರೂಪವು ಮನಸ್ಸಿಗೂ ವಾಕ್ಕುಗಳಿಗೂ ಅಗೋಚರವಾದದ್ದು; ಅವನು ಸರ್ವಗತನು, ಯಾವ ವಿಕಾರವೂ ಇಲ್ಲದವನು, ಯಾವ ಕ್ರಿಯೆಯೂ ಇಲ್ಲದವನು- ಎಂದು ತಿಳಿಯುವ ನಾವು ಶರೀರಿಗಳು ಎಂದುಕೊಂಡಿರುವ ಸಾಮಾನ್ಯರಿಗೆ ಹೇಗೆತಾನೆ ಸಾಧ್ಯವಾದೀತು? ಇಂದ್ರಿಯಗಳಿಂದ ನಾವು ಹೊರಗಿನ ವಿಷಯಗಳನ್ನು ಕೇಳಿ, ನೋಡಿ, ಮುಟ್ಟಿ, ಮೂಸಿ, ಸವಿಯುತ್ತಾ "ಇದು ನಮಗೆ ಬೇಕು, ಇದು ಬೇಡ" ಎಂಬ ರಾಗದ್ವೇಷಗಳಿಂದ ಕೂಡಿ, ನಮ್ಮಂತೆ ಅನೇಕ ಜೀವರನ್ನು ಕಾಣುತ್ತಾ ಶತ್ರು, ಮಿತ್ರ, ಉದಾಸೀನ, ನೆಂಟ, ಇಷ್ಟ- ಎಂದು ಮುಂತಾದ ಭಿನ್ನಭಾವನೆಗಳಿಂದ ತೊಳಲುತ್ತಿರುವ ದೇಹಾಭಿಮಾನಿಗಳಿಗೆ ಸರ್ವೇಂದ್ರಿಯರಹಿತವಾಗಿರುವ ಅಚಿಂತ್ಯಾನಿರ್ದೇಶ್ಯವಾದ ಅಕ್ಷರವೇ ನಾನು- ಎಂಬ ಭಾವನೆ ಹೇಗೆತಾನೆ ಅಳವಟ್ಟೀತು? ಆದ್ದರಿಂದ ಇದು ದೇಹಿಗಳಿಗೆ ಬಹಳ ಕ್ಲೇಶಕರ ಎಂದು ಭಗವಂತನು ಹೇಳಿರುತ್ತಾನೆ.

ಹೀಗೆಂದಮಾತ್ರದಿಂದ ವಿಶ್ವರೂಪೋಪಾಸನೆಯು ಎಲ್ಲರಿಗೂ ಸುಲಭವಾಗಿ ದೊರಕುವ, ಬೀದಿಯಲ್ಲಿ ಬಿದ್ದಿರುವ, ಗಂಟು ಎಂದು ಮಾತ್ರ ಯಾರೂ ತಿಳಿಯಬಾರದು. ಅಕ್ಷರೋಪಾಸನೆಗಿಂತ ಆ ಉಪಾಸನೆಯು ಸುಲಭವೆಂಬುದೇನೋ ನಿಜ; ಆದರೂ ಶರೀರದಲ್ಲಿಯೇ ನಾನು, ನನ್ನದು- ಎಂಬ ಅಭಿಮಾನವು ಬಲವಾಗಿರುವವರಿಗೆ ಇಡಿಯ ಜಗತ್ತೇ ಭಗವಂತನ ಒಂದಂಶವಾದ ವಿಭೂತಿಯು ಎಂಬ ಭಾವನೆಯು ಸುಲಭವಾಗಿ ನಿಲ್ಲಲಾರದು. ಆದ್ದರಿಂದಲೇ ಭಗವಂತನು "ನನ್ನಲ್ಲಿಯೇ ಸ್ಥಿರವಾಗಿ ಚಿತ್ತವನ್ನು ನಿಲ್ಲಿಸಿಕೊಳ್ಳುವದು ನಿನ್ನ ಕೈಯಲ್ಲಾಗದಿದ್ದರೆ ಅಭ್ಯಾಸಯೋಗದಿಂದ ನನ್ನನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸು" ಎಂದು ಹೇಳಿರುತ್ತಾನೆ. ಚಿತ್ತವು ಚಂಚಲವಾದ್ದರಿಂದ ಧ್ಯೇಯವಾದ ಭಗವನ್ಮೂರ್ತಿಯಲ್ಲಿಯೇ ನಿಲ್ಲುವದು ಅದಕ್ಕೆ ಕಷ್ಟವೆನಿಸುತ್ತದೆ. ಪರಿಚ್ಛಿನ್ನವಾದ ವ್ಯಷ್ಟಿಶರೀರದಲ್ಲಿ ನಿಂತುನಿಂತು ಅದಕ್ಕೆ ಅಭ್ಯಾಸವಾಗಿರುತ್ತದೆ. ಆದ್ದರಿಂದ ಉಪಾಸಕನಾದವನು ಅದನ್ನು ಮತ್ತೆಮತ್ತೆ ಭಗವಂತನಲ್ಲಿಯೇ ನಿಲ್ಲಿಸಿಕೊಳ್ಳುವ ಸ್ಥಿರಪ್ರಯತ್ನವನ್ನು ಮಾಡಬೇಕು.

ಈ ಅಭ್ಯಾಸವೆಂಬುದಾದರೂ ಎಲ್ಲರಿಗೂ ಸುಲಭಸಾಧ್ಯವಲ್ಲ. ಏಕೆಂದರೆ ಚಿತ್ತಕ್ಕೆ ಇಂದ್ರಿಯಗಳ ಮೂಲಕ ಹೊರಗೆ ಹರಿಯುವದೇ ಬಹುಕಾಲದಿಂದ ಅಭ್ಯಾಸದಲ್ಲಿ ಇದ್ದುಬಿಟ್ಟಿರುತ್ತದೆ. ಆದ್ದರಿಂದ ಯಾರಿಗೆ ತಟ್ಟನೆ ಅದು ಒಳಕ್ಕೆ ಹರಿಯುವದಕ್ಕೆ

ತಂಟೆಮಾಡುವದೋ ಅಂಥವರು ಭಗವಂತನಿಗಾಗಿ ಕರ್ಮವನ್ನು ಮಾಡುವದಕ್ಕೆ ಪ್ರಯತ್ನಿಸಬೇಕು. ಕಾಯದಿಂದಲಾಗಲಿ, ಇಂದ್ರಿಯಗಳಿಂದಲಾಗಲಿ ಮನೋವಾಕ್ಕುಗಳಿಂದಲಾಗಲಿ ಮಾಡುವ ಕರ್ಮವನ್ನು ಭಗವದರ್ಥವಾಗಿಯೇ ಮಾಡುವೆನೆಂಬ ಸಂಕಲ್ಪವನ್ನು ಮಾಡಿಕೊಳ್ಳಬೆಕು. ಕರ್ಮವನ್ನು ಮಾಡುವದು ಬಹಿರ್ಮುಖರಾದ ಎಲ್ಲರಿಗೂ ಅಭ್ಯಾಸದಲ್ಲಿದ್ದೇಬಿಟ್ಟಿದೆಯಷ್ಟೆ? "ಇನ್ನುಮೇಲೆ ನನಗಾಗಿ ಕರ್ಮವನ್ನು ಮಾಡಿಕೊಳ್ಳದೆ ಭಗವಂತನಿಗಾಗಿಯೇ ಮಾಡುವೆನು" ಎಂಬ ಸಂಕಲ್ಪವನ್ನು ಮಾಡಿಕೊಳ್ಳಬೇಕು. ಹೀಗೆ ಕರ್ಮಗಳನ್ನು ಭಗವಂತನಿಗೆ ಸಂಬಂಧಿಸಿಕೊಂಡರೂ ಕ್ರಮಕ್ರಮವಾಗಿ ಸಿದ್ಧಿಯನ್ನು ಪಡೆಯಬಹುದು.

ಭಗವಂತನು ಕರುಣಾಳು. ಸಾಮಾನ್ಯಜೀವರುಗಳಿಗೆ ಈ ಭಗವದರ್ಥ ಕರ್ಮವು ಕೂಡ ಬೇಗನೆ ಸ್ವಾಧೀನವಾಗಲಾರದೆಂದು ಬಲ್ಲವನಾದ್ದರಿಂದಲೇ ಅರ್ಜುನನನ್ನು ನಿಮಿತ್ತಮಾಡಿಕೊಂಡು ಹೀಗೆಂದು ಉಪದೇಶಿಸಿರುತ್ತಾನೆ: "ಅರ್ಜುನ, ಈ ಭಗವದರ್ಥಕರ್ಮವನ್ನುಕೂಡ ನೀನು ಮಾಡಲಾರೆಯಾದರೆ, ಇದಕ್ಕಿಂತಲೂ ಒಂದು ಸುಲಭಸಾಧನವನ್ನು ಹೇಳುವೆನು, ಕೇಳು, ನೀನು ಯಾವ ಕರ್ಮವನ್ನೇ ಮಾಡಲಿ, ಅದರ ಫಲವನ್ನು ಕೋರುವದನ್ನು ಬಿಟ್ಟುಬಿಡು. ಅದರಿಂದಲೇ ನಿನಗೆ ಕ್ರಮಕ್ರಮವಾಗಿ ನನ್ನನ್ನು ಉಪಾಸನೆಮಾಡುವ ಮಾರ್ಗವು ದಕ್ಕುವದು".

ಭಗವಂತನು ಅರ್ಜುನನ ದ್ವಾರದಿಂದ ಉಪದೇಶಿಸಿರುವ ಈ ಸಾಧನಸೋಪಾನವನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ವಿಶ್ವರೂಪದ ಉಪಾಸನೆಯನ್ನು ಮಾಡು ಎಂದು ಹೇಳಿದ ಭಗವಂತನು "ನನ್ನಲ್ಲಿಯೇ ಮನಸ್ಸಿಡು, ನನ್ನಲ್ಲಿಯೇ ಬುದ್ಧಿಯನ್ನು ಹೊಗಿಸಿಕೊ, ಆ ಬಳಿಕ ನನ್ನಲ್ಲಿಯೇ ನಿಂತುಬಿಡುವೆ" ಎಂದು ಹೇಳಿರುವದರ ಮರ್ಮವನ್ನು ಮನದಂದರೆ ಒಂದು ತತ್ತ್ವವು ಹೊರಡುತ್ತದೆ. ನಿಜವಾಗಿ ನೋಡಿದರೆ ನಾವು ಯಾವಾಗಲೂ ಭಗವಂತನಲ್ಲಿಯೇ ವಾಸಮಾಡಿಕೊಂಡಿರುತ್ತೇವೆ. ಯಾರಿಗೇ ಆಗಲಿ, ಆತನನ್ನು ಬಿಟ್ಟು ಹೊರಗೆ ಇರುವದಾದರೂ ಹೇಗೆ ಆದೀತು? ಆದರೂ ವಿಷಯಭಾವನೆಯಿಂದ ನಮ್ಮ ಮನೋಭಾವನೆಗಳು ಭಗವಂತನನ್ನು ಬಿಟ್ಟು ಹೊರಕ್ಕೆ ಬಂದುಬಿಟ್ಟಿರುತ್ತದೆ. ಆದ್ದರಿಂದ ಈ ಉಪಾಸನೆಯಿಂದ ಮತ್ತೆ ಆತನಕಡೆಗೆ ತಿರುಗಬೇಕು ಎಂಬುದು ಉಪದೇಶದ ತಿರುಳು.

ಇನ್ನು ಬಹಿರ್ಮುಖವಾಗಿರುವ ಮನೋಬುದ್ಧಿಗಳು ಮತ್ತೆಮತ್ತೆ ಹಿಂದಿನ ವಾಸನೆಯಿಂದ ವಿಷಯದಕಡೆಗೇ ಎಳೆಯುತ್ತಿರುತ್ತವೆ. ಆದ್ದರಿಂದ ಭಗವಂತನಲ್ಲಿ ಒಮ್ಮೆಗೇ ಮನಸ್ಸನ್ನು ನಿಲ್ಲಿಸಿಕೊಳ್ಳುವದು ಶಕ್ಯವಾಗಲಾರದು. ವಿಷಯಗಳಲ್ಲಿ ಮತ್ತೆ ಮತ್ತೆ ಮನಸ್ಸನ್ನು ಇಟ್ಟು ಅಭ್ಯಾಸಮಾಡಿಕೊಂಡಿರುವ ನಾವು ಅದೇ ಅಭ್ಯಾಸವನ್ನಾದರೂ ಭಗವಂತನ ವಿಷಯದಲ್ಲಿ ಏತಕ್ಕೆ ಮಾಡಬಾರದು? ಆದ್ದರಿಂದ ಅಭ್ಯಾಸಯೋಗವನ್ನಾದರೂ ಮಾಡು

ಎಂದು ಭಗವಂತನು ಎರಡನೆಯದಾಗಿ ಹೇಳಿರುತ್ತಾನೆ. ಭಗವಂತನ ವಿಗ್ರಹವೊಂದನ್ನು ಪೂಜಿಸುತ್ತಿರುವಾಗ ಮಂತ್ರಪುಷ್ಪಸಮರ್ಪಣೆಯ ಕಾಲಕ್ಕೆ ಮೂರ್ತಿಯ ತಲೆಯಮೇಲಿರುವ ಕಿರೀಟವನ್ನು ಕಂಡು ಒಬ್ಬರು "ಇದು ನಿಜವಾದ ಬೆಳ್ಳಿಯದೊ?" ಎಂದು ಕೇಳಿದರು! ಆಗ್ಗೆ ಅವರಿಗೆ ಭಗವಂತನಿಗೆ ಮಂತ್ರಪುಷ್ಪವನ್ನು ಸಮರ್ಪಿಸುತ್ತಿದೇನೆ ಎಂಬ ಭಾವನೆ ಹಾರಿಹೋಗಿ ಬೆಳ್ಳಿಯ ಭಾವನೆ ತಟ್ಟನೆ ಬಂದುಬಿಟ್ಟಿತು! ಹೀಗಿರುತ್ತದೆ, ವಿಷಯವಾಸನೆಯ ಪ್ರಭಾವ! "ಅದೂ ಆಗದಿದ್ದರೊ?" ಎಂದು ನಮ್ಮ ಮನಸ್ಸು ಕೇಳುತ್ತಲೇ ಇರುವದು. ಹೀಗೆ ಚೌಕಶಿಯನ್ನು ಮಾಡುವದನ್ನು ಬಿಟ್ಟುಬಿಡಬೇಕು. ಯಾವದಾದರೊಂದು ಬಗೆಯಿಂದ ಭಗವಂತನನ್ನು ಮನಸ್ಸಿಗೆ ಹತ್ತಿಸಿಕೊಳ್ಳಬೇಕು. "ಭಗವಂತನ ಭೃತ್ಯನು ನಾನು" ಎಂದುಕೊಂಡು ಕರ್ಮಯೋಗದಲ್ಲಿ ತೊಡಗಬೇಕು. ಅದೂ ಆಗದಿದ್ದರೆ, ಮಾಡುವ ಕರ್ಮವೆಲ್ಲವನ್ನೂ ಮಾಡಿ "ಇದರ ಫಲವು ನನಗೆ ಬೇಡ! ಭಗವಂತನೆ, ಇದನ್ನು ನಿನಗೇ ಅರ್ಪಿಸಿದೇನೆ!" ಎನ್ನುವ ಭಾವನೆಯನ್ನಾದರೂ ಮಾಡಬೇಕು. ಕರ್ಮಫಲತ್ಯಾಗವನ್ನು ಮಾಡುವದಕ್ಕೆ ಹವಣಿಸಿದರೂ ಭಗವಂತನು ನಮ್ಮನ್ನು ಹಿಡಿದೆತ್ತಿ ಮೆಲ್ಲಮೆಲ್ಲಗೆ ಮೇಲಿನ ಸಾಧನೆಗೆ ಯೋಗ್ಯರನ್ನಾಗಿ ಮಾಡುತ್ತಾನೆ. ಭಗವಂತನ ದಯೆ ಅಪರಿಮಿತವಾಗಿದೆ. ನಾವುಮಾತ್ರ ಆತನ ಕಡೆಗೆ ತಿರುಗುವದಕ್ಕೆ ಹೇಗಾದರೂ ಮಾಡಿ ಪ್ರಯತ್ನಿಸಬೇಕು. ಅಷ್ಟೆ.

## 5.4. ಆತ್ಮನಿಗೂ ಜಗತ್ತಿಗೂ ಸಂಬಂಧ

**ನ ದೃಷ್ಟೇರ್ದ್ರಷ್ಟಾರಂ ಪಶ್ಯೇರ್ನ ಶ್ರುತೇಃ ಶ್ರೋತಾರಂ ಶೃಣುಯಾ**
**ನಮತೇರ್ಮಂತಾರಂ ಮನ್ವೀಥಾ ನ ವಿಜ್ಞಾತ್ತೇರ್ವಿಜ್ಞಾತಾರಂ ವಿಜಾನೀಯಾಃ ।**
**ಏಷ ತ ಆತ್ಮಾ ಸರ್ವಾಂತರೋಽತೋಽನ್ಯದಾರ್ತಮ್ ॥** ಬೃ. 3-4-2

ಸಾಂಖ್ಯಯೋಗ, ಧ್ಯಾನಯೋಗ, ಉಪಾಸನಾಯೋಗ- ಎಂಬ ಹೆಸರಿನಿಂದ ಈವರೆಗೆ ಮೂರು ಯೋಗಗಳನ್ನು ಹೇಳಿದ್ದಾಗಿದೆ. ಇವುಗಳೊಳಗೆ ಸಾಂಖ್ಯಯೋಗ ಅಥವಾ ಜ್ಞಾನಯೋಗವೇ ಮುಖ್ಯಾರ್ಥದಲ್ಲಿ ಯೋಗ ಎಂಬುದನ್ನು ತಿಳಿಸಿದ್ದಾಗಿದೆ. ಈ ಜ್ಞಾನಯೋಗವು ಅಳವಡುವದು ಒಂದು ದೃಷ್ಟಿಯಿಂದ ಬಹಳ ಕಷ್ಟ; ಇನ್ನೊಂದು ದೃಷ್ಟಿಯಿಂದ ಇದು ಅತ್ಯಂತಸುಲಭವಾಗಿರುತ್ತದೆ. ಅದನ್ನು ಮನಸ್ಸಿಗೆ ತಂದುಕೊಂಡರೆ ಸಾಕು, ಕೂಡಲೆ ಪರಮಪುರುಷಾರ್ಥವು ದೊರಕಿಬಿಡುತ್ತದೆ. ಈ ವಿಷಯದಲ್ಲಿ ಶ್ರೀಶಂಕರಭಗವತ್ಪಾದರವರು ಒಂದು ಕಡೆ ಹೇಳಿರುವದೇನೆಂದರೆ: "ಅವಿದ್ಯಾಕಲ್ಪಿತ ನಾಮರೂಪ ವಿಶೇಷಾಕಾರಾಪಹೃತ ಬುದ್ಧೀನಾಮ್ ಅತ್ಯನ್ತಪ್ರಸಿದ್ಧಂ ಸುವಿಜ್ಞೇಯಂ ಆಸನ್ನತರಮ್ ಆತ್ಮಭೂತಮಪಿ, ಅಪ್ರಸಿದ್ಧಂ ದುರ್ವಿಜ್ಞೇಯಮ್, ಅತಿದೂರಮ್, ಅನ್ಯದಿವ ಚ ಪ್ರತಿಭಾತ್ಯವಿವೇಕಿನಾಮ್ ॥" ಈ ಪರಮಾರ್ಥತತ್ತ್ವವೆಂಬುದು ಸರಿಯಾಗಿ

ನೋಡುವವರಿಗೆ ಅತ್ಯಂತಪ್ರಸಿದ್ಧವಾದದ್ದಾಗಿರುತ್ತದೆ; ಅದನ್ನು ತಿಳಿಯುವದು ಬಹಳ ಸುಲಭವಾಗಿರುತ್ತದೆ; ಅದು ಎಲ್ಲಕ್ಕಿಂತಲೂ ಹತ್ತಿರವಿರುತ್ತದೆ; ಅದು ನಮ್ಮೆಲ್ಲರಿಗೂ ಆತ್ಮನೇ ಆಗಿರುತ್ತದೆ. ಹೀಗಿದ್ದರೂ ವಿವೇಕವಿಲ್ಲದೆ ಅವಿದ್ಯಾಕಲ್ಪಿತವಾದ ನಾಮರೂಪ ವಿಶೇಷಗಳಾದ ವಿಷಯಗಳಿಂದ ಬುದ್ಧಿಯನ್ನು ಕಳೆದುಕೊಂಡಿರುವವರಿಗೆ ಅದು ಅಪ್ರಸಿದ್ಧವಾಗಿಯೇ ತೋರುತ್ತದೆ; ಅದನ್ನು ಅರಿತುಕೊಳ್ಳುವದು ಬಲುಕಷ್ಟವೆಂದೇ ಅವರಿಗೆ ತೋರುತ್ತದೆ; ಅದು ಎಲ್ಲಿಯೋ ಬಲುದೂರದಲ್ಲಿರುವಂತೆ ತೋರುತ್ತದೆ; ಅದು ತಮಗಿಂತ ಬೇರೆಯಾಗಿದ್ದು ಕಷ್ಟಪಟ್ಟುಹುಡುಕಿ ದೊರಕಿಸಿಕೊಳ್ಳಬೇಕಾದದ್ದೆಂದೂ ತೋರುತ್ತದೆ.

ಈ ಪರಮಾರ್ಥವನ್ನು ತಿಳಿಸಿಕೊಡುವದು ಹೇಗೆ? ಅದು ಅತ್ಯಂತಪ್ರಸಿದ್ಧ ವಾಗಿರುವದರಿಂದ ಅದನ್ನು ಇಂಥದ್ದೆಂದು ಹೊಸದಾಗಿ ತಿಳಿಸಿಕೊಡಬೇಕಾದದ್ದೇನೂ ಇಲ್ಲ. ನಾವುಗಳೆಲ್ಲ ನಮಗೆ ಸ್ವಾಭಾವಿಕವಾಗಿರುವ ತಪ್ಪುತಿಳಿವಳಿಕೆಯಿಂದ ಅದರಲ್ಲಿ ಹುಟ್ಟುಗಟ್ಟಿಕೊಂಡಿರುವ ಹುಸಿತೋರಿಕೆಗಳನ್ನು ಆಚೆಗೆ ತಳ್ಳಿ ತೋರಿಸಿದರೆ ಆಯಿತು. ಅಷ್ಟೆ. ಈ ಉಪಾಯವು ಶಾಸ್ತ್ರದಲ್ಲಿಯೇ ಇದೆ; ಬ್ರಹ್ಮನಿಷ್ಠರಾದ ಗುರುಗಳೂ ಅದನ್ನು ಸುಲಭವಾಗಿ ತಿಳಿಸಿಕೊಡುತ್ತಾರೆ. ಆ ಉಪದೇಶದ ಕ್ರಮವನ್ನರಿತುಕೊಂಡು ಅಧಿಕಾರಿಗಳೆಲ್ಲರೂ ತಿಳಿದುಕೊಳ್ಳಬಹುದು. ಶಾಸ್ತ್ರವೇ ಹೇಳಲಿ, ಗುರುಗಳೇ ಹೇಳಲಿ, ಕೊನೆಗೆ ನಾವುನಾವೇ ನಮ್ಮ ಆತ್ಮರೂಪದಿಂದ ಆ ಪರಮಾರ್ಥವನ್ನು ಕಂಡುಕೊಳ್ಳ ಬೇಕಾಗಿರುತ್ತದೆ. ಒಳಹೊಕ್ಕು ನೋಡಿದರೆ ಪರಮಾತ್ಮನೊಬ್ಬನೇ ಪರಮಾರ್ಥವು, ಆತನನ್ನು ಬಿಟ್ಟರೆ ಮತ್ತೆ ಯಾವದೊಂದೂ ನಿಜವಾಗಿರುವದಿಲ್ಲ. ಆದ್ದರಿಂದ ಶಾಸ್ತ್ರ, ಗುರು- ಎಂಬ ವೇಷದಿಂದ ಆ ಪರಮಾತ್ಮನೇ ನಮಗೆ ಉಪದೇಶಮಾಡುತ್ತಾನೆ. ಆ ಉಪದೇಶವನ್ನು ಮನಗಂಡಾಗ ಎಲ್ಲರೂ ಪರಮಾತ್ಮನೇ, ಪರಮಾತ್ಮನಿಗಿಂತ ಬೇರೆಯಾಗಿ ಏನೂ ಯಾವಾಗಲೂ ಇರಲೇ ಇಲ್ಲ ಎಂಬ ತತ್ತ್ವವು ಮನಸ್ಸಿನಲ್ಲಿ ಮಿಂಚುವದು.

ಶಾಸ್ತ್ರವೂ ಗುರುಗಳೂ ಮಾಡುವ ಉಪದೇಶವು ಒಂದು ವಿಲಕ್ಷಣದ ಜಾತಿಯ ದಾಗಿರುತ್ತದೆ. ಲೋಕದ ಜನರು ಸಾಮಾನ್ಯವಾಗಿ ಬುದ್ಧಿಯನ್ನು ಹೊರಮುಖವಾಗಿ ನೋಡುತ್ತಾ ಇಂದ್ರಿಯಗಳಿಂದ ವಿಷಯಗಳನ್ನು ಪರೀಕ್ಷಿಸುತ್ತಾ, ಆ ಇಂದ್ರಿಯಾನುಭವಕ್ಕೆ ಅನುಸಾರವಾಗಿರುವ ತರ್ಕವನ್ನು ಮಾಡುತ್ತಾ ವಸ್ತುತತ್ತ್ವ ನಿರ್ಧಾರಣೆಯನ್ನು ಮಾಡುತ್ತಿರುವರಷ್ಟೆ? ಇದು ಪ್ರಮಾಣಬುದ್ಧಿ, ಪ್ರಮಾಣಾನುಸಾರಿಯಾದ ತರ್ಕಬುದ್ಧಿ; ಆದರೆ ಶಾಸ್ತ್ರವು ಹೇಳುವ ಮಾರ್ಗದಲ್ಲಿ ಪ್ರಮಾಣಗಳನ್ನು ಅನಾದರಮಾಡಿ ನಮ್ಮನಮ್ಮೊಳಗೇ ನೋಡಿಕೊಳ್ಳಬೇಕಾಗುತ್ತದೆ. "ಪ್ರಮಾಣಬುದ್ಧಿಯೇ ನಿಮ್ಮನ್ನು ತಪ್ಪುಹಾದಿಗೆ ಎಳೆದಿರುತ್ತದೆ. ನೀವು ಪ್ರಮಾತೃಗಳಲ್ಲದಿದ್ದರೂ "ನಾವು ಪ್ರಮಾತೃರೂಪರು, ಪ್ರಮಾಣಗಳ ನೆರವಿನಿಂದ ಪ್ರಮೇಯವನ್ನು ತಿಳಿದುಕೊಂಡು ಜ್ಞಾನವನ್ನು ಸಂಪಾದಿಸಿಕೊಳ್ಳುವ ಸ್ವಭಾವದವರು"

ಎಂದು ತಪ್ಪಾಗಿ ಭಾವಿಸಿಕೊಂಡಿರುತ್ತೀರಿ. ಆದ್ದರಿಂದ ಮೊದಲು ಈ ಬುದ್ಧಿಯನ್ನು ಬಿಟ್ಟುಬಿಡಿರಿ. ಒಳಕ್ಕೆ ಸರಿದು ಇರುವ ನಿಮ್ಮ ಸ್ವರೂಪವನ್ನು ಇದ್ದಂತೆ ಅನುಭವದಿಂದಲೇ ಕಂಡುಕೊಳ್ಳಿರಿ" ಎಂದು ಶಾಸ್ತ್ರವು ಬೋಧಿಸುತ್ತದೆ. ಆದ್ದರಿಂದ ಶಾಸ್ತ್ರಕ್ಕೆ **ಅಂತ್ಯಪ್ರಮಾಣ**, ಪ್ರಮಾಣಬುದ್ಧಿಯನ್ನು ಕೊನೆಗೊಳಿಸುವ ಸಾಧನ, ಎಂಬ ಹೆಸರನ್ನು ಆಚಾರ್ಯರು ಕೊಟ್ಟಿರುತ್ತಾರೆ.

ಶಾಸ್ತ್ರವಾಕ್ಯವನ್ನು ಹೇಗೆ ತಿಳಿದುಕೊಳ್ಳಬೇಕು, ಅದರ ಅರ್ಥವನ್ನು ನಿಶ್ಚಯಿಸುವದು ಹೇಗೆ?- ಎಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಶಬ್ದಪ್ರಮಾಣದ ವಿಷಯವನ್ನು ಚೆನ್ನಾಗಿ ವಿಚಾರಮಾಡಿರುವವರು ಮೀಮಾಂಸಕರು. ಅವರು ವೇದವಾಕ್ಯದ ಅರ್ಥವನ್ನು ನಿರ್ಣಯಿಸುವದಕ್ಕಾಗಿ ವಾಕ್ಯಧರ್ಮವನ್ನೆಲ್ಲ ಚೆನ್ನಾಗಿ ಪರೀಕ್ಷೆಮಾಡಿರುತ್ತಾರೆ; ವಾಕ್ಯವು ಪುರುಷಮತಿಯನ್ನು ಅನುಸರಿಸಿ ಬೇರೆಬೇರೆಯ ಅರ್ಥಗಳನ್ನು ಕೊಡುವದಿಲ್ಲ; ಅದಕ್ಕೆ ಸ್ವಭಾವದಿಂದಲೇ ಇಂಥ ಅರ್ಥವೆಂಬುದು ಗೊತ್ತಾಗಿರುತ್ತದೆ. ಯಾವದಾದರೊಂದು ವಿಷಯದಲ್ಲಿ ವೇದವಾಕ್ಯವು ಏನು ಹೇಳುತ್ತದೆ?- ಎಂಬುದನ್ನು ಹೇಗೆ ಗೊತ್ತುಮಾಡಬೇಕು? (1) ಉಪಕ್ರಮ (ಮೊದಲು ಹೇಳಿರುವ ವಿಷಯ), ಉಪಸಂಹಾರ (ಕೊನೆಗೆ ಹೇಳಿರುವ ವಿಷಯ)- ಇವೆರಡೂ ಹೊಂದುಗಡೆಯಾಗಿರಬೇಕು. (2) ಹೇಳುವ ವಿಷಯವನ್ನು ಮತ್ತೆಮತ್ತೆ ಹೇಳಿರಬೇಕು. (3) ಪ್ರಮಾಣಾಂತರದಿಂದ ತಿಳಿಯದ **ಅಪೂರ್ವ**ವಿಷಯವನ್ನು ಅದು ಹೇಳಬೇಕು. (4) ಇದಕ್ಕೆ ಇಂಥ **ಫಲ**ವೆಂಬುದನ್ನು ತಿಳಿಸಿರಬೇಕು. (5) ಹೇಳಿದ ವಿಷಯಕ್ಕೆ ಉಪಪತ್ತಿಯನ್ನು, **ಯುಕ್ತಿ**ಯನ್ನು, ಹೇಳಿರಬೇಕು. (6) ವಿಧಿಸಿರುವ ವಿಷಯವನ್ನು ಹೊಗಳುವ, ಅಥವಾ ಅದಕ್ಕೆ ವಿರುದ್ಧವಾದದ್ದನ್ನು ನಿಂದಿಸುವ, **ಅರ್ಥವಾದ**ವಿರಬೇಕು. ಹೀಗೆ ಆರು **ತಾತ್ಪರ್ಯಲಿಂಗ**ಗಳಿಂದ ವಾಕ್ಯಕ್ಕೆ ಇದೇ ಅರ್ಥವೆಂಬುದನ್ನು ನಿಶ್ಚಯಿಸಬೇಕು ಎಂಬ ನಿಯಮವನ್ನು ಮೀಮಾಂಸಕರು ಗೊತ್ತುಮಾಡಿಕೊಂಡಿರುತ್ತಾರೆ. ಆದರೆ ಬ್ರಹ್ಮಸ್ವರೂಪವನ್ನು ನಿಶ್ಚಯಿಸುವದಕ್ಕೆ ಬರಿಯ ಶ್ರುತ್ಯಾದಿಗಳ ಅರ್ಥವನ್ನು ಹೀಗೆ ನಿಶ್ಚಯಿಸಿದಮಾತ್ರದಿಂದ ಅದೇ ವಾಕ್ಯಕ್ಕೆ ಗುರಿಯಾಗಿರುವ ಅರ್ಥವೆಂದು ನಿಶ್ಚಯ ವಾಗುವದಿಲ್ಲ. ಏಕೆಂದರೆ ಬ್ರಹ್ಮಜ್ಞಾನವೆಂಬುದು ಈಗಲೇ ಇಲ್ಲಿಯೇ ಅನುಭವಕ್ಕೆ ಬರುವ ವಸ್ತುವನ್ನು ತಿಳಿಸತಕ್ಕದ್ದಾಗಿರುತ್ತದೆ. ಆದ್ದರಿಂದ ಆಚಾರ್ಯರು ಹೀಗೆಂದಿರುತ್ತಾರೆ: "ಶ್ರುತ್ಯಾದಯೋಽನುಭವಾದಯಶ್ಚ ಯಥಾ ಸಂಭವಮಿಹ ಪ್ರಮಾಣಮ್, ಅನುಭವಾವಸಾನತ್ವಾತ್, ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ" ಈಗಲೇ ಇದ್ದುಕೊಂಡೇ ಇರುವ ವಸ್ತುವನ್ನು ತಿಳಿಸುವದರಿಂದಲೂ ಅನುಭವದಲ್ಲಿಯೇ ಅದು ಕೊನೆಗಾಣಬೇಕಾಗಿರುವದರಿಂದಲೂ ಶ್ರುತ್ಯಾದಿಗಳೂ ಅನುಭವ, ತರ್ಕ- ಮುಂತಾದವುಗಳೂ ಇಲ್ಲಿ ಅಲ್ಲಲ್ಲಿಗೆ ಹೊಂದುವಂತೆ ಪ್ರಮಾಣವಾಗಿರುತ್ತದೆ- ಎಂದು ಆಚಾರ್ಯರ ವಾಕ್ಯಕ್ಕೆ ಅರ್ಥ.

ಆದ್ದರಿಂದ ನಾವು ಶಾಸ್ತ್ರವನ್ನು ಪ್ರಮಾಣವಾಗಿ ಉಪಯೋಗಿಸುವಾಗ ಎಚ್ಚರಿಕೆಯಿಂದ ಅದನ್ನು ಬಳಸಬೇಕು. ಶಾಸ್ತ್ರವಾಕ್ಯವು ಇದೆಯೆಂದು ಎತ್ತೆತ್ತಲಾದರೂ ತಿರಿಚಿ ಅದಕ್ಕೆ ಅರ್ಥವನ್ನು ಮಾಡುವದಕ್ಕೆ ಹೋಗಬಾರದು. ಊಟಮಾಡುವವನಿಗೆ ಅನ್ನವು ಅವಶ್ಯವಾದರೂ ಅದರಲ್ಲಿ ಮುಳ್ಳು ಇರುವದು ಹೇಗೆ ಅನಿಷ್ಟವೋ ಹಾಗೆ ಶಾಸ್ತ್ರವಾಕ್ಯವನ್ನು ಕಂಡಕಂಡ ಹಾಗೆ ಉಪಯೋಗಿಸುವದೂ ಅನಿಷ್ಟವಾಗಿರುತ್ತದೆ.

ಶಾಸ್ತ್ರವು ಅನುಭವದಲ್ಲಿ ಕೊನೆಗಾಣಬೇಕಾಗಿರುವದರಿಂದ ತರ್ಕವೂ ಇಲ್ಲಿ ಉಪಯುಕ್ತವಾಗಿದೆಯಷ್ಟೆ? ತರ್ಕವಿಷಯದಲ್ಲಿಯೂ ಶಾಸ್ತ್ರವಿಷಯದಲ್ಲಿ ಹೇಗೋ ಹಾಗೆಯೇ ಎಚ್ಚರಿಕೆಯನ್ನು ತೆಗೆದುಕೊಳ್ಳುವದು ಅವಶ್ಯ. ಹಾಗಿಲ್ಲದಿದ್ದರೆ ದುಸ್ತರ್ಕವು ನಮ್ಮನ್ನು ಮರುಳುಮಾಡಿಬಿಡುತ್ತದೆ; ತತ್ತ್ವವು ನಮಗೆ ಸಿಕ್ಕದಂತೆ ಮೋಸಮಾಡಿಬಿಡುತ್ತದೆ. ಮುಖ್ಯವಾಗಿ ತರ್ಕವು ಅನುಭವಕ್ಕೆ ಹೊಂದಿಕೊಂಡು ಇರಬೇಕೆಂಬುದನ್ನು ನಾವು ಮರೆಯದೆ ಇರಬೇಕು. ಅನುಭವಾನುಸಾರಿಯಾದ ತರ್ಕವನ್ನು ಶ್ರುತಿಯಲ್ಲಿಯೇ ತಿಳಿಸಿಕೊಟ್ಟಿರುತ್ತದೆ. ಬ್ರಹ್ಮನಿಷ್ಠರಾದ ಗುರುಗಳು ಆ ತರ್ಕದ ಜಾಡನ್ನು ಬಲ್ಲವರಾದ್ದರಿಂದ ಅದಕ್ಕೆ ಅನುಗುಣವಾದ ತರ್ಕವನ್ನು ಲೋಕದೃಷ್ಟಾಂತಗಳಿಗೂ ಹೊಂದಿಸಿ ಹೇಳುತ್ತಾರೆ. ಹೇಗೇ ಆಗಲಿ, ತರ್ಕವು ಕೊನೆಗೂ ಶಾಸ್ತ್ರದ ಅರ್ಥವನ್ನೇ ಹೇಳಬೇಕು; ಶಾಸ್ತ್ರವು ವಿಷಯವನ್ನು ಅನುಭವಕ್ಕೆ ಹೊಂದಿಸಿಯೇ ತೋರಿಸಬೇಕು– ಎಂಬುದನ್ನು ನಾವು ಮರೆಯದೆ ಇರಬೇಕು. ಇದೇ ಜ್ಞಾನಯೋಗದಲ್ಲಿ ಅನುಸರಿಸುವ ಸದ್ವಿಚಾರಕ್ಕೆ ಒರೆಗಲ್ಲಾಗಿರುತ್ತದೆ.

ಶ್ರೀಶಂಕರಾಚಾರ್ಯರು ಶ್ರುತ್ಯನುಗ್ರಹೀತವಾದ ತರ್ಕಕ್ಕೆ ಎರಡು ಉದಾಹರಣೆಗಳನ್ನು ತಮ್ಮ ಸೂತ್ರಭಾಷ್ಯದಲ್ಲಿ ಕೊಟ್ಟಿರುತ್ತಾರೆ. ಕಾರ್ಯಕಾರಣಭಾವದ ತರ್ಕ, ಅವಸ್ಥಾತ್ರಯ ವಿಚಾರದ ತರ್ಕ–ಇವೇ ಆ ಎರಡು ಉದಾಹರಣೆಗಳು. ಈಗ ನಾನು ಭಗವದ್ಗೀತೆಯಲ್ಲಿ ಕಾರ್ಯಕಾರಣಭಾವದ ವಿಚಾರವನ್ನು ಎಲ್ಲಿ ಹೇಳಿದೆ ಎಂಬುದನ್ನು ನಿಮ್ಮ ಮುಂದೆ ಇಡುವೆನು. ಇನ್ನೊಂದು ತರ್ಕವನ್ನು ಹಿಂದಿನಿಂದ ವಿಮರ್ಶೆಗೆ ತೆಗೆದುಕೊಳ್ಳೋಣ.

ಭಗವದ್ಗೀತೆಯ ಒಂಬತ್ತನೆಯ ಅಧ್ಯಾಯದ ಮೊದಲನೆಯ ಎರಡು ಶ್ಲೋಕಗಳು ಹೀಗಿವೆ: "ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ । ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್। ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್॥" ಹಿಂದಿನ ಅಧ್ಯಾಯದಲ್ಲಿ ಉಪಾಸನೆಯ ರೂಪವಾದ ಯೋಗವನ್ನು ಹೇಳಿದ್ದಾಗಿದೆ. ಅಲ್ಲಿ ನಾಡಿಯ ಮೂಲಕವಾಗಿ ಧಾರಣಾಯೋಗದಿಂದ ಲೋಕಾಂತರಕ್ಕೆ ಹೋಗಿ ಪಡೆಯಬೇಕಾದ ಫಲವನ್ನು ಹೇಳಿದೆ; ಆದರೆ ಇಲ್ಲಿ ಹೇಳಿರುವದು ಅದಕ್ಕೆ ವಿರುದ್ಧವಾಗಿ ಈಗಲೆ ಪ್ರತ್ಯಕ್ಷವಾಗಿ ತಿಳಿಯಬರತಕ್ಕದ್ದನ್ನು ಹೇಳುತ್ತದೆ. ಇದನ್ನು ಮಾಡುವದು ಸುಲಭ, ಫಲವು ಅವ್ಯಯ. ಇದನ್ನು

ಅರಿತುಕೊಂಡಮಾತ್ರದಿಂದ ಸಂಸಾರದಿಂದ ಬಿಡುಗಡೆಯಾಗಿಬಿಡುತ್ತದೆ ಎಂದು ಭಗವಂತನು ನುಡಿದಿರುತ್ತಾನೆ. ಆದ್ದರಿಂದ ಇಲ್ಲಿ ಹೇಳಿರುವ ವಿಷಯವನ್ನು ನಾವು ಅನುಭವಕ್ಕೆ ಹೊಂದಿಸಿನೋಡಬೇಕು ಎಂದಾಯಿತು. ಹಾಗಾದರೆ ಇಲ್ಲಿ ಹೇಳಿರುವ ಅಂಥ ನೇರಾಗಿ ಇಲ್ಲಿಯೇ ಅನುಭವಕ್ಕೆ ಬರಬಹುದಾದ ತತ್ತ್ವವು ಯಾವದು? ಭಗವಂತನು ಹೀಗೆನ್ನುತ್ತಿದ್ದಾನೆ: "ಮಯಾ ತತಮಿದಂ ಸರ್ವಂ ಜಗದವ್ಯಕ್ತ ಮೂರ್ತಿನಾ। ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥" ಪರಮಾತ್ಮನು ಅವ್ಯಕ್ತವಾದ- ಇಂದ್ರಿಯಗಳಿಗೆ ಗೋಚರವಾಗದ-ರೂಪದಿಂದ ಈ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ. ಎಲ್ಲಾ ಭೂತಗಳೂ, ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಗಳವರೆಗಿನ ಎಲ್ಲಾ ಪ್ರಾಣಿಗಳೂ, ಆ ಆತ್ಮನಲ್ಲಿಯೇ ಇರುತ್ತವೆ; ಆ ಆತ್ಮನು ಅವುಗಳಲ್ಲಿರುವದಿಲ್ಲ-ಎಂಬುದು ಈ ವಾಕ್ಯದ ಅರ್ಥ. ಇದರ ಅಭಿಪ್ರಾಯವನ್ನು ನಾವು ಚೆನ್ನಾಗಿ ಮನವರಿಕೆಮಾಡಿಕೊಳ್ಳಬೇಕು. ನಮ್ಮ ಆತ್ಮನು ನಮ್ಮನಮ್ಮ ಶರೀರದ ಒಳಗೆ ಇರುತ್ತಾನೆ ಎಂದಲ್ಲವೆ, ಸಾಮಾನ್ಯವಾಗಿ ನಾವು ತಿಳಿದುಕೊಂಡಿರುವದು? ಆದರೆ ನಿಜವೇನೆಂದರೆ, ಆತ್ಮನೆಂಬುದು ನಮ್ಮಗಳ ನಿಜವಾದ ಸ್ವರೂಪವು. ಆ ಆತ್ಮನ ಚೈತನ್ಯದ ಆಧಾರದಿಂದಲೇ ಈ ಶರೀರವೂ ಮತ್ತು ಎಲ್ಲಾ ಜಗತ್ತೂ ತೋರಿಕೊಂಡು ಇರುತ್ತದೆ. ಇಷ್ಟೇ ಅಲ್ಲ. ಆ ಆತ್ಮಚೈತನ್ಯವು ಇಲ್ಲಿಗೆ ಮುಗಿಯಿತು, ಇಲ್ಲಿಂದ ಅನಾತ್ಮವಾದ ಈ ಜಗತ್ತು ಮೊದಲಾಯಿತು ಎಂದು ಹೇಳುವದಕ್ಕೇ ಬರುವಂತಿಲ್ಲ. ಏಕೆಂದರೆ ಆತ್ಮಚೈತನ್ಯದ ಬೆಳಕು ಎಲ್ಲವನ್ನೂ-ಜಗತ್ತಿನಲ್ಲಿ ಕಾಣುವ ಪ್ರತಿಯೊಂದು ಪದಾರ್ಥದ ಒಳಗೆ, ಹೊರಗೆ, ನಡುವೆ, ಎಲ್ಲೆಲ್ಲಿಯೂ-ವ್ಯಾಪಿಸಿಕೊಂಡುಬಿಟ್ಟಿರುತ್ತದೆ. ನಾವು ಸ್ವಾಭಾವಿಕವಾಗಿ ತಿಳಿದುಕೊಂಡಿರುವ ತಿಳಿವಳಿಕೆಯು ನಿಜಸ್ಥಿತಿಗೆ ಎಷ್ಟು ವಿರುದ್ಧವಾಗಿದೆ ಎಂಬುದು ಈ ಉಪದೇಶದಿಂದ ತಿಳಿಯಬರುತ್ತಿದೆ. ನಾವು ಶರೀರವುಳ್ಳವ ರೆಂಬ ಭಾವನೆಯನ್ನೇ ಮೊದಲು ಇಟ್ಟುಕೊಂಡುಬಿಟ್ಟಿದ್ದೇವೆ. ಆದರೆ ಶರೀರ, ಇಂದ್ರಿಯ, ಮನಸ್ಸು-ಈ ಎಲ್ಲವನ್ನೂ ಬೆಳಗುವ ಚೈತನ್ಯದ ಅರಿವಿನ ಸ್ವರೂಪವೇ ನಮ್ಮದು ಎಂಬುದನ್ನು ಒಳಗಣ್ಣಿನಿಂದ ನೋಡಿದರೆ ಸಾಕು, ಕೂಡಲೆ ಅದು ನಿಶ್ಚಿತವಾಗಿ ಕಂಡುಬರುತ್ತದೆ.

ಭೂತಗಳೆಲ್ಲವೂ, ಪ್ರಪಂಚವೆಲ್ಲವೂ, ನನ್ನಲ್ಲಿದೆ; ನನ್ನ ಸ್ವರೂಪವಾದ, ಎಲ್ಲರಿಗೂ ಆತ್ಮನಾದ, ಚೈತನ್ಯದ ಆಧಾರದಲ್ಲಿದೆ ಎಂದು ಹೇಳುವದರಿಂದಲೇ ಭಗವಂತನು ತೃಪ್ತನಾಗಿರುವದಿಲ್ಲ. ಇನ್ನೂ ಮುಂದಕ್ಕೆ ಹೋಗಿ ನೋಡಿದರೆ "ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್" ಈ ಪ್ರಾಣಿಗಳು ನನ್ನಲ್ಲಿಲ್ಲವೂ ಇಲ್ಲ; ಏಕೆಂದರೆ ಅವುಗಳೆಲ್ಲವನ್ನೂ ನಾನೇ ಹೊರಗೂ ಒಳಗೂ ವ್ಯಾಪಿಸಿಕೊಂಡುಬಿಟ್ಟಿರುತ್ತೇನೆ ಎಂದು ಭಗವಂತನು ಹೇಳಿರುತ್ತಾನೆ. ಇನ್ನೊಂದು ಮಾತು. ಆತ್ಮನ ಸ್ವರೂಪವನ್ನು ಆಧಾರಮಾಡಿಕೊಂಡೇ ಎಲ್ಲಾ ಭೂತಗಳೂ-ಎಲ್ಲಾ ಪ್ರಾಣಿಗಳ ಶರೀರಗಳೂ-ಇದ್ದುಕೊಂಡಿವೆ ಎಂದು ತೋರುವಾಗಲೂ ಅವು ಆತ್ಮನಲ್ಲಿ ಹೇಗೆ ನಿಂತಿವೆ?

"ಯಥಾऽऽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್"-ವಾಯುವು ಎಲ್ಲೆಲ್ಲಿಯೂ ತುಂಬಿಕೊಂಡಿದೆಯಷ್ಟೆ? ಅದು ಆಕಾಶದಲ್ಲಿಯೇ ಇದೆ ಎಂದರೆ ಆಕಾಶವು ಅದನ್ನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದೆ. ಆದರೆ ಮೇಜಿನ ಮೇಲೆ ಪುಸ್ತಕಗಳು ಇರುವಂತೆ, ವಾಯುವು ಆಕಾಶಕ್ಕೆ ಮುಟ್ಟಿಕೊಂಡು ಅದರಮೇಲೆ ನಿಂತಿರುವದಿಲ್ಲ. ಏಕೆಂದರೆ ಆಕಾಶವು ಅಸಂಸರ್ಗಿ-ಯಾವದಕ್ಕೂ ಎಲ್ಲಿಯೂ ಅಂಟಿಕೊಳ್ಳದೆ ಇರುವ-ತತ್ತ್ವವಾಗಿದೆ. ಆಕಾಶದಲ್ಲಿ ಮೋಡಗಳಿರುವದರಿಂದ ಆಕಾಶವು ಒದ್ದೆಯಾಗಿರುವದಿಲ್ಲ; ಆಕಾಶದಲ್ಲಿ ಧೂಳು ತುಂಬಿದ್ದರೂ ಅದಕ್ಕೆ ಧೂಳು ಹತ್ತಿಕೊಂಡು ಕಶ್ಮಲವನ್ನುಂಟು ಮಾಡುವದಿಲ್ಲ. ಅಲ್ಲವೆ? ಇದರಂತೆ ಆತ್ಮನಲ್ಲಿ ಈ ಎಲ್ಲಾ ಭೂತಗಳೂ ಇವೆ. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಗಳವರೆಗಿನ-ಅತ್ಯಂತ ಉತ್ತಮತರದ ಪ್ರಾಣಿಗಳಿಂದ ಅತ್ಯಂತ ಕೀಳುಪ್ರಾಣಿಗಳವರೆಗಿನ- ಎಲ್ಲವೂ ಇದ್ದರೂ ಆ ಪ್ರಾಣಿಗಳ ಗುಣದೋಷಗಳ ಅಂಟು ಆತ್ಮನಿಗೆ ಒಂದಿಷ್ಟೂ ಇರುವದಿಲ್ಲ. ಹೀಗಿದೆ, ಆತ್ಮನ ಅದ್ಭುತಯೋಗಸಾಮರ್ಥ್ಯ! ನಮ್ಮಗಳೆಲ್ಲರ ಆತ್ಮನು ಪರಮಾತ್ಮನೇ ಎಂದೂ ಅವನಿಗೆ ಧರ್ಮಾಧರ್ಮಗಳ ಸಂಬಂಧವು ಎಳ್ಳಷ್ಟೂ ಇಲ್ಲವೆಂದೂ, ಆಕಾಶಕ್ಕೆ ವಾಯುವಿನ ಗುಣದೋಷಗಳು ಅಂಟದೆ ಇರುವಂತೆ-ಆ ಆತ್ಮನಿಗೆ ಪುಣ್ಯಪಾಪಗಳು ಸ್ವಲ್ಪವೂ ಅಂಟದೆ ಇದು ಎಂದೆಂದಿಗೂ ನಿತ್ಯಶುದ್ಧನೇ ಆಗಿರುವನೆಂದೂ ಮನದಟ್ಟುಮಾಡಿಕೊಂಡವರಿಗೆ ಕೂಡಲೆ ಅಶುಭವಾದ ಸಂಸಾರದಿಂದ ಬಿಡುಗಡೆಯಾದಂತೆಯೇ ಅಲ್ಲವೆ? ಆದ್ದರಿಂದಲೇ ಭಗವಂತನು "ಯಜ್ಜ್ಞಾತ್ವಾ ಮೋಕ್ಷ್ಯಸೇऽಶುಭಾತ್" ಇದನ್ನು ಅರಿತುಕೊಂಡಮಾತ್ರದಿಂದ ಅಶುಭದಿಂದ ಮುಕ್ತನಾಗುವೆ ಎಂದಿರುತ್ತಾನೆ.

ಈಗ ಗೀತೆಯ ಹದಿನೈದನೆಯ ಅಧ್ಯಾಯದಕಡೆಗೆ ಮನಸ್ಸನ್ನು ಹೊರಳಿಸೋಣ. ಅದರಲ್ಲಿ, ನಮ್ಮ ಮುಂದೆ ಹರಡಿಕೊಂಡಿರುವ ಪ್ರಪಂಚದ ವರ್ಣನೆಯಿದೆ. ಈ ಸಂಸಾರಪ್ರಪಂಚವು ಒಂದು ಅಶ್ವತ್ಥವೃಕ್ಷವು. ಇದರ ಬೇರು ಮೇಲುಗಡೆ ಇದೆ; ಎಂದರೆ ಪರಮಾತ್ಮನೇ ಇದಕ್ಕೆ ಮೂಲವು. ಮಾಯಾಶಕ್ತಿಯಿಂದೊಡಗೂಡಿದ ಆ ಪರಮಾತ್ಮನಿಂದಲೇ ಕೆಳಕ್ಕಿಳಿದುಬಂದಿದೆ. ಇದರ ಕೊಂಬೆರೆಂಬೆಗಳು ಎಲ್ಲೆಲ್ಲಿಯೂ ಹರಡಿಕೊಂಡಿವೆ. ಇದರಲ್ಲಿರುವ ಶರೀರಿಗಳ ದೇಹಾದಿಗಳ ಸಂತತಿಯು ಅವ್ಯಯ ವಾಗಿರುತ್ತದೆ. ವೇದಗಳೇ ಇದರ ಎಲೆಗಳು; ವೇದವಿಹಿತನಿಷಿದ್ಧಕರ್ಮಗಳು ಈ ಸಂಸಾರವೃಕ್ಷವನ್ನು ಕಾಪಾಡಿಕೊಂಡುಬಂದಿರುತ್ತವೆ. ಅದರ ಕೊಂಬೆರೆಂಬೆಗಳೂ ಟಿಸಿಲುಗಳೂ ಸತ್ತ್ವರಜಸ್ತಮೋಗುಣಗಳಿಂದ ಬೆಳೆದುಕೊಂಡು ಬಂದಿವೆ. ಈ ಮನುಷ್ಯಲೋಕದಲ್ಲಿ ಅವಕ್ಕೆ ಕರ್ಮಗಳು ಗಂಟುಬಿದ್ದಿರುತ್ತವೆ. ಈ ಸಂಸಾರವೃಕ್ಷದ ರೂಪವು ಯಾವದು? ಇದರ ಆದಿ ಯಾವದು? ಕೊನೆ ಯಾವದು? ನಡುವೆ ಯಾವದು?-ಎಂಬಿದು ಯಾರಿಗೂ ತಿಳಿಯುವಂತಿರುವದಿಲ್ಲ. ಇಂಥ ಈ ಸಂಸಾರವೃಕ್ಷವನ್ನು "ಅಸಂಗ" ಎಂಬ ಶಸ್ತ್ರದಿಂದ

ಕತ್ತರಿಸಿಹಾಕಿ ಇದು ಎಲ್ಲಿಂದ ಹರಡಿ ಕೊಂಡುಬಂದಿದೆಯೋ ಆ ಸ್ಥಾನವನ್ನು ಹುಡುಕಬೇಕು- ಎಂದು ಅಲ್ಲಿ ಉಪದೇಶಿಸಿರುತ್ತದೆ.

ಇಲ್ಲಿಯೂ ಪ್ರಪಂಚವೆಲ್ಲವೂ ಪರಮಾತ್ಮನ ಆಧಾರದಿಂದ ಇದ್ದುಕೊಂಡಿದೆ ಎಂದು ಹೇಳಿರುವದನ್ನು ನಾವು ಲಕ್ಷಿಸಬೇಕು. ಎಲ್ಲಿಯವರೆಗೆ ನಾವು ಕರ್ಮವನ್ನು ಮಾಡಿ ಫಲವನ್ನನುಭವಿಸುವವರು ಎಂದು ತಿಳಿದುಕೊಂಡಿರುವೆವೋ ಅಲ್ಲಿಯವರೆಗೆ ಈ ಸಂಸಾರಕ್ಕೆ ಆದಿಮಧ್ಯಾಂತಗಳು ಯಾವವೂ ಕಾಣುವದಿಲ್ಲ ಎಂದು ವರ್ಣಿಸಿರುವದನ್ನು ನಾವು ಮನದಂದುಕೊಳ್ಳಬೇಕು. ಹೀಗೆ ಇದು ಎಲ್ಲೆಲ್ಲಿಯೂ ಹಬ್ಬಿಕೊಂಡಿದ್ದರೂ ಇದು ಮಾಯಾಮಯವೇ; ಏಕೆಂದರೆ ಇದನ್ನು ಅಸಂಗಶಸ್ತ್ರದಿಂದ ಕತ್ತರಿಸಿಹಾಕಬಹುದು ಎಂದು ಹೇಳಿರುವದನ್ನೂ ನಾವು ಮನಸ್ಸಿಗೆ ಹತ್ತಿಸಿಕೊಳ್ಳಬೇಕು. ಒಂಬತ್ತನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಇಲ್ಲಿಯೂ ಆತ್ಮನಿಂದ ವ್ಯಾಪ್ತವಾಗಿಯೇ ಈ ಮಾಯಾಮಯಪ್ರಪಂಚವು ತೋರಿಕೊಂಡಿದೆಯೆಂದೂ ಅಸಂಗದಿಂದ ಇದನ್ನು ಕತ್ತರಿಸಿಹಾಕಿದರೆ ಆ ಪರಮಾತ್ಮನನ್ನೇ ಕಾಣಬಹುದೆಂದೂ ವರ್ಣಿಸಿರುವದನ್ನು ನೋಡಿದರೆ ಆತ್ಮಸ್ವರೂಪದ ಕಣ್ಣಿನಿಂದ ನೋಡಿದಮಾತ್ರದಿಂದ ನಮಗೆ ಪರಮಪುರುಷಾರ್ಥವು ದೊರಕುವದೆಂಬ ಸೂಚನೆ ಇಲ್ಲಿಯೂ ದೊರಕುತ್ತದೆ. ಎಲ್ಲವೂ ಬ್ರಹ್ಮಸ್ವರೂಪವೇ ಆಗಿ ಬ್ರಹ್ಮದಲ್ಲಿಯೇ ಇದ್ದರೂ ಅಜ್ಞರಾದ ಜನರು ಮಾತ್ರ ತಾವು ಅನಾತ್ಮಪ್ರಪಂಚದಲ್ಲಿಯೇ ನಿಂತಿದ್ದೇವೆಂದು ಮಾಡಿಕೊಂಡುಬಿಟ್ಟಿದ್ದಾರೆ. ಯಾರಿಗೆ ಅಭಿಮಾನ, ಮೋಹ, ಸಂಗ, ಕಾಮ- ಮುಂತಾದ ದೋಷಗಳಿಲ್ಲವೋ, "ಯಾರಿಗೆ ಸುಖದುಃಖರೂಪವಾದ ದ್ವಂದ್ವಗಳ ಕಾಟವು ಇಲ್ಲವೋ, ಅಂಥ ವಿವೇಕಿಗಳು ಆ ಅವ್ಯಯವಾದ ಪರಮಾತ್ಮಸ್ಥಾನವನ್ನೇ ಪಡೆಯುತ್ತಾರೆ" ಎಂದು ಇಲ್ಲಿ ಹೇಳಿರುವದನ್ನು ಮನದಂದರೆ ಜ್ಞಾನಮಾತ್ರದಿಂದಲೇ ಪರಮಪುರುಷಾರ್ಥವು ಪ್ರಾಪ್ತವಾಗುತ್ತದೆ- ಎಂಬುದು ಮನದಟ್ಟಾಗುತ್ತದೆ.

ಇದುವರೆಗೆ ಆತ್ಮನಿಗೂ ಜಗತ್ತಿಗೂ ಕಾರ್ಯಕಾರಣಸಂಬಂಧವನ್ನಿಟ್ಟುಕೊಂಡು ಮಾತನಾಡಿದ್ದಾಗಿದೆ. ಇನ್ನು ಅವಸ್ಥಾತ್ರಯತರ್ಕವನ್ನು ಅವಲಂಬಿಸಿ ವಿಚಾರಮಾಡುವದು ನಿಂತಿದೆ. ಮತ್ತೊಮ್ಮೆ ಈ ಕೆಲಸಕ್ಕೆ ಮನಸ್ಸನ್ನು ಹಾಕೋಣ.

## 5.5. ಆತ್ಮದರ್ಶನ ಉಪಾಯಗಳು

**ತಸ್ಯೋಪನಿಷತ್ಸತ್ಯಸ್ಯ ಸತ್ಯಮಿತಿ ಪ್ರಾಣಾ ವೈ ಸತ್ಯಂ ತೇಷಾಮೇಷಾ ಸತ್ಯಂ**

ಬೃ. 2-1-20

ಅಧ್ಯಾತ್ಮವಿದ್ಯೆಗೆಲ್ಲ ಆತ್ಮನೇ ಕೇಂದ್ರವು. ಆತ್ಮನನ್ನು ತಿಳಿಸುವದಕ್ಕೆಂದೇ ಶಾಸ್ತ್ರದಲ್ಲಿ

ಬಗೆಬಗೆಯ ಉಪಾಯಗಳನ್ನು ಹೇಳಿರುತ್ತದೆ. ಆದರೆ ಉಪೇಯವಾದ ಆತ್ಮನನ್ನು ತಿಳಿದುಕೊಳ್ಳುವದಕ್ಕೆ ಮಾತ್ರ ಆ ಉಪಾಯಗಳನ್ನು ಹೇಳಿದೆ ಎಂಬುದನ್ನು ಜನರು ಮರೆತುಬಿಡುತ್ತಾರೆ. ಉಪಾಯಗಳನ್ನೇ ಸತ್ಯವೆಂದು ನಂಬಿಬಿಟ್ಟಿರುತ್ತಾರೆ. ಜನರೆಲ್ಲರೂ ಆತ್ಮನನ್ನು ಬಿಟ್ಟು ಬಲುದೂರಕ್ಕೆ ಬಂದುಬಿಟ್ಟಿರುತ್ತಾರೆ. ಅವರನ್ನು ಹಿಂದಕ್ಕೆ ಕಳುಹಿಸಿ ಅವರ ಆತ್ಮನನ್ನು ಮುಟ್ಟಿಸುವದೇ ಶಾಸ್ತ್ರಾಚಾರ್ಯರ ಗುರಿಯಾಗಿರುತ್ತದೆ. ಇಂದ್ರಿಯಗಳನ್ನೂ ಮನಸ್ಸನ್ನೂ ಅವಲಂಬಿಸದೆ ಹಿಂದಕ್ಕೆ ಸರಿದು ನಮ್ಮಲ್ಲಿ ನಾವು ನೆಲೆನಿಂತರೆ ಆಯಿತು, ಎಲ್ಲೆಲ್ಲಿಯೂ ಆತ್ಮನನ್ನೇ ಕಾಣುತ್ತೇವೆ. ಶಾಸ್ತ್ರದಲ್ಲಿ ಹೇಳಿರುವ ಸಾಧನಗಳು, ತರ್ಕ- ಎಲ್ಲವೂ ಆತ್ಮಪ್ರಾಪ್ತಿಗಾಗಿ. ಈ ಗುಟ್ಟನ್ನು ಮೊದಲು ಮನದಂದುಕೊಳ್ಳಬೇಕು. ಇಂದ್ರಿಯಗಳನ್ನೇ ಪಟ್ಟನಿಂದ ಹಿಡಿದುಕೊಂಡು ಬಹಿರ್ಮುಖರಾಗಿ ನರಳಬಾರದು.

"ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ । ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥" (ಗೀ. 9-4) ಎಂಬ ಶ್ಲೋಕದ ಅಭಿಪ್ರಾಯವನ್ನು ನಾವು ನೆನಪಿನಲ್ಲಿಟ್ಟುಕೊಂಡಿರಬೇಕು. ಜಗತ್ತಿನಲ್ಲಿ ಎಲ್ಲೆಲ್ಲಿಯೂ ಭಗವಂತನೇ ತುಂಬಿ ಕೊಂಡಿರುತ್ತಾನೆ; ಅವನಲ್ಲಿ ಎಲ್ಲಾ ಭೂತಗಳೂ ಆಶ್ರಯಿಸಿಕೊಂಡಿರುವಂತೆ ತೋರುತ್ತದೆ. ಆತ್ಮನಲ್ಲಿರುವಂತೆ ತೋರುವ ಜಗತ್ತನ್ನು ಉಪಾಯವಾಗಿಟ್ಟುಕೊಂಡು ಉಪೇಯವಾಗಿರುವ ಆತ್ಮನನ್ನು ಕಂಡುಕೊಳ್ಳಬೇಕು. ಆಗ "ನ ಚ ಮತ್ಸ್ಥಾನಿ ಭೂತಾನಿ" (ಗೀ. 9-5) ಭಗವಂತನೊಬ್ಬನೇ ನಿಜವಾಗಿರುವವನು, ಆತನಲ್ಲಿ ಯಾವ ಜಗತ್ತೂ ಇರುವದೇ ಇಲ್ಲ ಎಂಬ ತತ್ತ್ವವನ್ನು ಕಂಡುಕೊಂಡಂತೆ ಆಗುವದು. ಇದು ಪರಮಾತ್ಮನಿಗೂ ಜಗತ್ತಿಗೂ ಕಾರ್ಯಕಾರಣಭಾವವನ್ನು ಕಲ್ಪಿಸಿಕೊಂಡು ಪರಮಾತ್ಮನನ್ನು ಮುಟ್ಟಿಸುವ ತರ್ಕ.

ಜಗತ್ತೆಲ್ಲವನ್ನೂ ಪರಮಾತ್ಮನೇ ವ್ಯಾಪಿಸಿಕೊಂಡಿರುತ್ತಾನೆ. ನಗಾರಿಯ ಶಬ್ದಗಳು ಬಗೆಬಗೆಯ ರೂಪದಲ್ಲಿ ಕೇಳಬರಬಹುದು; ಆದರೆ ಆ ಶಬ್ದವಿಶೇಷಗಳೆಲ್ಲವೂ ನಗಾರಿಯ ಶಬ್ದ ಎಂಬ ಸಾಮಾನ್ಯದಲ್ಲಿ ಅಡಕವಾಗಿರುತ್ತವೆ. ಹೀಗೆಯೇ ನಗಾರಿಯ ಶಬ್ದ, ವೀಣೆಯ ಶಬ್ದ, ಶಂಖದ ಶಬ್ದ- ಮುಂತಾದ ವಿಶೇಷಗಳಲ್ಲೆಲ್ಲ "ಶಬ್ದ" ಎಂಬ ಸಾಮಾನ್ಯವು ಹೊಂದಿಕೊಂಡುಬಂದಿರುತ್ತದೆ. ಯಾವದು ಅನುಸರಿಸಿಕೊಂಡು ಬಂದಿರುವದೋ ಅದು ಸಾಮಾನ್ಯವು; ಯಾವ ಬೇರೆಬೇರೆಯ ತತ್ತ್ವಗಳಲ್ಲಿ ಅದು ಅನುಸರಿಸಿ ಕೊಂಡಿರುವದೋ, ಯಾವವು ಒಂದಕ್ಕಿಂತ ಒಂದು ಬೇರೆಬೇರೆಯಾಗಿ ಕಾಣುವವೋ ಅವು ವಿಶೇಷಗಳು. ವಿಶೇಷಗಳಲ್ಲೆಲ್ಲ ಸಾಮಾನ್ಯವು ಅನುಸರಿಸಿಕೊಂಡೇ ಇರುತ್ತದೆ. ಇದರಂತೆ ಜಗತ್ತಿನಲ್ಲಿ ಬಗೆಬಗೆಯ ದೃಶ್ಯಗಳು ಕಾಣುತ್ತಿರುವವು; ಅವುಗಳಲ್ಲೆಲ್ಲ ಸತ್ತೆ (ಇರವು), ಸ್ಫುರತ್ತೆ (ಬೆಳಗಿತೋರುವಿಕೆ)- ಮುಂತಾದ ರೂಪದಿಂದ ಪರಮಾತ್ಮನ ಇರವೂ ಅರಿವೂ ಅನುವರ್ತಿಸಿಕೊಂಡುಬಂದಿರುವಂತೆ ಕಾಣಿಸುತ್ತಿರುತ್ತದೆ. ಜಾಗ್ರದವಸ್ಥೆಯಲ್ಲಾಗಲಿ,

ಸ್ವಪ್ನಾವಸ್ಥೆಯಲ್ಲಾಗಲಿ, ನಮಗೆ ಕಾಣಿಸುತ್ತಿರುವ ವಿಶೇಷ ದೃಶ್ಯಗಳಲ್ಲೆಲ್ಲ ಪರಮಾತ್ಮನ ಈ ಸಚ್ಚಿದ್ರೂಪಗಳು ಅನುಸರಿಸಿಕೊಂಡಿರುವಂತೆ ಕಾಣುವವು- ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಇದೂ ಉಪೇಯನಾದ ಪರಮಾತ್ಮನನ್ನು ಗುರುತಿಸುವದಕ್ಕೆ ಉಪಾಯವೇ ಹೊರತು ಪರಮಾತ್ಮನಂತೆ ಜಗತ್ತಿನ ವಿಶೇಷಗಳೂ ಸತ್ಯವಾಗಿ ಸ್ವತಂತ್ರವಾಗಿ ಇದ್ದುಕೊಂಡಿರುವವೆಂದೇನೂ ಇಲ್ಲಿ ಅಭಿಪ್ರಾಯವಿಲ್ಲ. ಪರಮಾತ್ಮನು ನಿಜವಾಗಿ ಸಾಮಾನ್ಯನೂ ಅಲ್ಲ, ವಿಶೇಷವೂ ಅಲ್ಲ; ಆತ್ಮನಲ್ಲಿ ಯಾವ ವಿಶೇಷಗಳೂ ಅವನಿಗಿಂತ ವ್ಯತಿರಿಕ್ತವಾಗಿ ಇರುವದೇ ಇಲ್ಲ, ಇದು ಸಾಮಾನ್ಯವಿಶೇಷಭಾವವನ್ನು ಕಲ್ಪಿಸಿಕೊಂಡು ಆತ್ಮನನ್ನು ಮುಟ್ಟಿಸುವ ತರ್ಕ.

ಪರಮಾತ್ಮನು ಒಬ್ಬನೇ ಮೊದಲಿದ್ದನು; ಅವನು ನಾನು ಬಹುವಾಗುವೆನು, ಹುಟ್ಟುವೆನು- ಎಂದು ಯೋಚಿಸಿಕೊಂಡು ಹುಟ್ಟಿದನು ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಇಲ್ಲಿಯೂ ಉಪಾಯವು ಮುಖ್ಯವಲ್ಲ, ಉಪೇಯನಾದ ಪರಮಾತ್ಮನ ಜ್ಞಾನವೇ ಮುಖ್ಯ ಈ ಜಗತ್ತು ಬಗೆಬಗೆಯಾಗಿರುತ್ತದೆ, ಇದೆಲ್ಲವೂ ಪರಮಾತ್ಮನೇ. ಇಲ್ಲಿ ಕಾಣುವ ವಿಶೇಷಗಳನ್ನು "ಪರಮಾತ್ಮನ ವಿಭೂತಿ" ಎಂದು ವರ್ಣಿಸುವದು ಪರಮಾತ್ಮನೇ ಎಲ್ಲವೂ ಆಗಿರುತ್ತಾನೆಂಬ ನಿಜವನ್ನು ತೋರಿಸುವದಕ್ಕೇ ಆಗಿದೆ. ತೋರುವ ಬಹುತ್ವವು ನಿಜವಾದ ಬಹುತ್ವವಲ್ಲ, ಆತ್ಮನ ಏಕತ್ವವು ಸಂಖ್ಯೆಯ ಏಕತ್ವವಲ್ಲ; ಆತ್ಮನು ಮೊದಲು ಒಬ್ಬನೇ ಇದ್ದನು ಎಂದರೆ ಮೊದಲು ಒಬ್ಬನು, ಆಮೇಲೆ ಅನೇಕ- ಎಂಬ ಭೂತಭವಿಷ್ಯತ್ಕಾಲಗಳ ವಿವಕ್ಷೆಯೇನೂ ಇಲ್ಲ. ಒಬ್ಬ ಆತ್ಮನೇ ಬಹುವಾಗಿ ತೋರುತ್ತಿದ್ದಾನೆ ಎಂಬುದನ್ನು ಉಪದೇಶಿಸುವದೇ ಇಲ್ಲಿ ಗುರಿ. ಕಾಲ, ದೇಶ, ಕಾರ್ಯ, ಕಾರಣ ಎಲ್ಲವೂ ನಿಜವಾಗಿ ಪರಮಾತ್ಮನೇ.

ಸೃಷ್ಟಿ, ಸ್ಥಿತಿ, ಪ್ರಲಯ- ಎಂಬ ಮೂರು ತುಂಡಿನಿಂದ ಜಗತ್ತನ್ನು ಪರಮಾತ್ಮನಿಗೆ ಸಂಬಂಧಿಸಿಕೊಂಡು ಜನರು ಭ್ರಾಂತರಾಗುತ್ತಾರೆ. "ಭೂತ್ವಾ ಭೂತ್ವಾ ಪ್ರಲೀಯತೇ" ಈ ಪ್ರಾಣಿಗಳು ಮತ್ತೆಮತ್ತೆ ತಲೆದೋರಿಕೊಂಡು ಅವ್ಯಾಕೃತಾತ್ಮನಲ್ಲಿ ಪ್ರಲಯವಾಗುತ್ತವೆ ಎಂದು ಗೀತೆಯಲ್ಲಿ ಹೇಳಿದೆ; "ಸತಿ ಸಂಪದ್ಯ ನ ವಿದುಃ ಸತಿ ಸಂಪದ್ಯಾಮಹ ಇತಿ" ಸದ್ರೂಪನಾದ ಪರಮಾತ್ಮನಲ್ಲಿ ಒಂದಾಗಿಯೂ ಅವನಲ್ಲಿ ಸೇರಿದೇವೆಂದು ಅರಿಯದೆ ಇರುವರು; "ಸತ ಆಗಮ್ಯ ನ ವಿದುಃ ಸತ ಆಗಚ್ಛಾಮಹ ಇತಿ । ತ ಇಹ ವ್ಯಾಘ್ರೋ ವಾ ಸಿಂಹೋ ವಾ ವೃಕೋ ವಾ . . . ಯದ್ಯದ್ಭವನ್ತಿ ತದಾ ಭವನ್ತಿ" ಸದ್ರೂಪ ಪರಮಾತ್ಮನಿಂದ ಹೊರಕ್ಕೆ ಬಂದ ಮೇಲೆಯೂ ಅಲ್ಲಿಂದ ಬಂದಿರುವೆವೆಂದು ತಿಳಿದುಕೊಳ್ಳದೆ ಇರುವವು. ಹುಲಿ, ಸಿಂಹ, ತೋಳ, ಹಂದಿ, ಹುಳು, ಜಿಟ್ಟೆ, ಕಣಜ, ಸೊಳ್ಳೆ- ಹೀಗೆ ಮೊದಲು ಯಾವ ಪ್ರಾಣಿಗಳಾಗಿದ್ದವೋ ಅವೇ ಆಗುವವು ಎಂದು ಛಾಂದೋಗ್ಯದಲ್ಲಿ ಹೇಳಿದೆ. ಇಲ್ಲಿ ಸುಷುಪ್ತಿಯಲ್ಲಿಯೂ ಪ್ರಲಯದಲ್ಲಿಯೂ ಪರಮಾತ್ಮನಲ್ಲಿ

ಜೀವರು ಒಂದಾಗುವರು ಎಂದು ಹೇಳುವದರಲ್ಲೇನೂ ಶ್ರುತಿಗೆ ಮುಖ್ಯತಾತ್ಪರ್ಯವಿಲ್ಲ; ನಿಜವಾಗಿ ಯಾವಾಗಲೂ ಪರಮಾತ್ಮನಲ್ಲಿ ಎಲ್ಲ ಜೀವರುಗಳೂ ಒಂದಾಗಿಯೇ ಇರುತ್ತಾರೆ ಎಂಬುದನ್ನು ತಿಳಿಸುವದಕ್ಕೇ ಹೀಗೆ ಸುಷುಪ್ತಿಪ್ರಲಯಗಳನ್ನು ಉದಾಹರಿಸುತ್ತದೆ. ಹಸುವಿಗೆ ಹಸಿರು ಹುಲ್ಲನ್ನು ತೋರಿಸಿ, ಮೆಲ್ಲ ಮೆಲ್ಲಗೆ ಕರೆದುಕೊಂಡು ಹೋಗಿ ಅದರ ಗೊಂತಿಗೆ ಕಟ್ಟಿಹಾಕುವ ಜಾಣರಂತೆ, ಶ್ರುತಿಯೂ ಸ್ಮೃತಿಯೂ "ಎಲ್ಲರೂ ಪರಮಾತ್ಮನಿಂದ ಹುಟ್ಟಿರುತ್ತಾರೆ, ಎಲ್ಲರೂ ಪರಮಾತ್ಮನಲ್ಲಿರುತ್ತಾರೆ, ಪರಮಾತ್ಮನಲ್ಲಿ ಲಯವಾಗುತ್ತಾರೆ" ಎಂದು ಹೇಳಿ ಕೊನೆಗೂ ಪರಮಾತ್ಮನೇ ಅವರ ಸ್ವರೂಪವು ಎಂದು ತಿಳಿಸುತ್ತವೆ. ಇದೇ ಅವಕ್ಕೆ ಮುಖ್ಯಗುರಿ. ಹೀಗಿದ್ದರೂ ಪರಮಾತ್ಮನಲ್ಲಿಯೇ ಪರಮಾತ್ಮನ ರೂಪದಿಂದಲೇ ಯಾವಾಗಲೂ ಇದ್ದುಕೊಂಡಿರುವ ಈ ಜನರಿಗೆ ಈ ತತ್ತ್ವವು ಮನದಟ್ಟಾಗದೆ ಇರುತ್ತದೆ. ಇದಕ್ಕೆ ಕಾರಣವೇನು? "ಅನೃತೇನ ಹಿ ಪ್ರತ್ಯೂಢಾಃ" ಹೆಂಡತಿ ಮಕ್ಕಳು, ಊಟ ತಿಂಡಿ, ಬಟ್ಟೆಬರೆ, ಮನೆಮಠ-ಮುಂತಾದ ಹೊರಗಿನ ವಿಷಯಗಳ ತೃಷ್ಣೆಯೇ ಅವರನ್ನು ಆತ್ಮಸ್ವರೂಪದಿಂದ ಹೊರಕ್ಕೆಳೆದು ತಂದಿರುತ್ತದೆ. ಇದು ಸೃಷ್ಟಿಸ್ಥಿತಿಲಯಗಳನ್ನು ಉಪಾಯವಾಗಿ ಇಟ್ಟುಕೊಂಡು ಪರಮಾತ್ಮನನ್ನು ಮುಟ್ಟಿಸುವ ತರ್ಕ.

ನಮ್ಮ ಜಾಗ್ರತ್ಸ್ವಪ್ನಸುಷುಪ್ತಿಗಳೇ ದೃಷ್ಟಿವಿಶೇಷದಿಂದ ಸೃಷ್ಟಿಸ್ಥಿತಿಲಯಗಳಾಗಿ ತೋರುತ್ತಿರುವವು. ನಿಜವಾಗಿ ನಾವು ಸುಷುಪ್ತಿಯಲ್ಲಿ ಪರಮಾತ್ಮನಲ್ಲಿ ಒಂದಾಗಿರುವಾಗ ಹೊರಗಿನ ಜಾಗ್ರತ್ಪ್ರಪಂಚವು ಎಲ್ಲಿಯೂ ಇರುವದಕ್ಕೆ ಕಾರಣವೇ ಇಲ್ಲ. ಆದರೂ ಎಚ್ಚರದ ವಿಷಯಗಳ ಭೋಗದ ವಾಸನೆಯೂ ನಮ್ಮಲ್ಲಿ ಬಲವಾಗಿದ್ದುಕೊಂಡಿರುವದರಿಂದ ಅದು ಯಾವಾಗಲೂ ಹೀಗೆಯೇ ಇದ್ದುಕೊಂಡಿರುತ್ತದೆ ಎಂದು ನಾವೆಲ್ಲರೂ ಬಲವಾಗಿ ನಂಬಿಕೊಂಡು ಬಿಟ್ಟಿರುತ್ತೇವೆ. ವಿಷಯಗಳನ್ನು ಮತ್ತೆಮತ್ತೆ ಮುಟ್ಟಿ, ಇವು ನಿಜವಾಗಿಯೂ ಯಾವಾಗಲೂ ಇರುತ್ತವೆ ಎಂದು ಧೈರ್ಯವನ್ನು ತಂದುಕೊಳ್ಳುತ್ತಿರುತ್ತೇವೆ. ಶಂಕರಾಚಾರ್ಯರ ಪರಮಗುರುಗಳಾದ ಶ್ರೀಗೌಡಪಾದರು ಒಂದು ಕಾರಿಕೆಯನ್ನು ಬರೆದಿರುತ್ತಾರೆ: "ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ । ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ ॥" ಸೃಷ್ಟಿಸ್ಥಿತಿಲಯಗಳನ್ನಾಗಲಿ ಎಚ್ಚರಕನಸುನಿದ್ರೆಗಳನ್ನಾಗಲಿ ತಿಳಿಸಬೇಕೆಂಬುದು ಶಾಸ್ತ್ರಕ್ಕೆ ಅಷ್ಟು ಬೇಕಾದದ್ದಲ್ಲ. ಅದು ಒಂದು ಉಪಾಯವು ಮಾತ್ರ. ನಾವು ದಿನ ದಿನವೂ ಎಚ್ಚರಕನಸುನಿದ್ರೆಗಳನ್ನು ಅನುಭವಿಸುತ್ತಿರುತ್ತೇವೆ; ಎಚ್ಚರದಿಂದ ತನಿನಿದ್ರೆಗೂ ಆ ನಿದ್ರೆಯಿಂದ ಕನಸಿಗೂ ಸಂಚರಿಸುತ್ತಲೇ ಇರುತ್ತೇವೆ- ಎಂದು ಜನರು ನಂಬಿರುತ್ತಾರೆ. ಈ ಜಗತ್ತು ಸೃಷ್ಟಿಯಾಗಿ ಬಹುಕಾಲದಿಂದ ಹೀಗೆ ಇದ್ದುಕೊಂಡಿದೆ; ಬಹಳಕಾಲವಾದಮೇಲೆ ಪ್ರಲಯ ವಾಗಿಬಿಡುತ್ತದೆ- ಎಂದು ನಂಬಿರುತ್ತಾರೆ. ಶ್ರುತಿಯೂ ಗುರುಗಳೂ ಈ ನಂಬಿಕೆಯನ್ನೇ

ಉಪಾಯವಾಗಿ ಮಾಡಿಕೊಂಡು, "ಸೃಷ್ಟ್ಯಾದಿಗಳಾಗಲಿ ಜಾಗ್ರತ್ಸ್ವಪ್ನಾದಿಗಳಾಗಲಿ ನಿಜವಾಗಿ ನಿನ್ನ ಪರಮಾರ್ಥಸ್ವರೂಪಕ್ಕಿಂತ ಬೇರೆಯಾಗಿ, ಸ್ವತಂತ್ರವಾಗಿ, ಎಂದಿಗೂ ಇರುವದೇ ಇಲ್ಲ; ನೀನು ಒಂದವಸ್ಥೆಯಿಂದ ಇನ್ನೊಂದವಸ್ಥೆಗೆ ಹೋಗುವದೂ ಇಲ್ಲ, ಒಂದವಸ್ಥೆಯಿಂದ ಇನ್ನೊಂದವಸ್ಥೆಗೆ ಬರುವದೂ ಇಲ್ಲ; ಈ ಅವಸ್ಥೆಗಳು ನಿನ್ನಲ್ಲಿ ಸುಮ್ಮನೆ ತೋರುತ್ತಿರುತ್ತವೆ; ನಿನ್ನ ಸ್ವರೂಪವೇ ಅವುಗಳನ್ನೆಲ್ಲ ವ್ಯಾಪಿಸಿಕೊಂಡುಬಿಟ್ಟಿದೆ. ನೀನು ಒಂದು ಕಾಲದಲ್ಲಿ ಏನನ್ನೂ ಕಾಣದೆ ಇದ್ದು ಇನ್ನೊಂದು ಕಾಲದಲ್ಲಿ ನಿನಗೆ ದ್ವಿತೀಯವಾಗಿರುವ ಜಗತ್ತನ್ನು ಕಾಣುತ್ತಿರುವದಿಲ್ಲ. ಒಮ್ಮೆ ಏನೂ ಅರಿಯೆನೆಂಬುದೊಂದು ತಪ್ಪುತಿಳಿವಳಿಕೆ, ಇನ್ನೊಂದು ಕಾಲದಲ್ಲಿ ದೃಶ್ಯಪ್ರಪಂಚವನ್ನು ಕಾಣುವೆನೆಂಬುದು ಮತ್ತೊಂದು ತಪ್ಪುತಿಳಿವಳಿಕೆ"- ಎಂದು ಮಹಾಕರುಣೆಯಿಂದ ಉಪದೇಶಿಸಿದರೆ ಅಧಿಕಾರಿಯಾದ ಶಿಷ್ಯನಿಗೆ ನಾನು ಯಾವಾಗಲೂ ಇದ್ದಂತೆಯೇ ಇರುವ, ಜನ್ಮಾದಿವಿಕಾರಗಳಿಲ್ಲದ ಶುದ್ಧಚೈತನ್ಯಸ್ವರೂಪನು. ನನ್ನಲ್ಲಿ ಅಗ್ರಹಣ (ಅರಿಯದಿರುವ ನಿದ್ರೆ) ಇಲ್ಲ, ಅನ್ಯಥಾಗ್ರಹಣ (ಎರಡನೆಯ ವಸ್ತುವನ್ನು ಅರಿಯುವ ಕನಸು)-ಎರಡೂ ಇಲ್ಲ, ನಾನು ಎಂದೆಂದಿಗೂ ಶುದ್ಧಬುದ್ಧಮುಕ್ತಸ್ವಭಾವದವನು- ಎಂಬ ಮಹಾಜ್ಞಾನದ ಎಚ್ಚರವಾಗುವದು, ಸಂಸಾರಬಂಧದ ಕನಸು ಹೋಗಿಯೇ ಬಿಡುವದು.

ನಾನು ಎಚ್ಚರವಾಗಿದ್ದೇನೆ, ಪ್ರಪಂಚವನ್ನು ಅರಿಯುತ್ತಿದ್ದೇನೆ, ಪ್ರಪಂಚದಲ್ಲಿದ್ದುಕೊಂಡು ಕರ್ಮಗಳನ್ನು ಮಾಡಿ ಅವುಗಳ ಫಲಗಳನ್ನು ಅನುಭವಿಸುತ್ತಿರುತ್ತೇನೆ- ಎಂಬಿದೊಂದು ಕನಸು. ನಾನು ಒಮ್ಮೊಮ್ಮೆ ಏನನ್ನೂ ನೋಡುವದಿಲ್ಲ, ಏನನ್ನೂ ಮಾಡುವದಿಲ್ಲ, ಯಾವ ಕರ್ಮಫಲವನ್ನೂ ಅನುಭವಿಸುವದಿಲ್ಲ ಎಂಬಿದು ಮತ್ತೊಂದು ಕನಸು. ನಿದ್ರೆಯಲ್ಲಿದ್ದು ಕೆಲವುಕಾಲ ಹುಸಿತೋರಿಕೆಗಳ ಸ್ವಪ್ನವನ್ನು ಕಾಣುವೆನು ಎಂಬಿದು ಮತ್ತೊಂದು ಕನಸು. ಅವಸ್ಥಾತ್ರಯವು ಸತ್ಯ ಎಂಬ ದೊಡ್ಡ ಕನಸಿನಲ್ಲಿ ಈ ಕನಸುಗಳು ಆಗುತ್ತಿರುವವು, "ತಸ್ಯ ತ್ರಯ ಆವಸಥಾಸ್ತ್ರಯಃ ಸ್ವಪ್ನಾಃ" ಆ ಆತ್ಮನಿಗೆ ಈ ಮೂರು ಸ್ಥಾನಗಳುಕೂಡ ಕನಸುಗಳು- ಎಂದು ಶ್ರುತಿಯಲ್ಲಿ ಹೇಳಿರುವದಕ್ಕೆ ಇದೇ ಅಭಿಪ್ರಾಯ.

ಎಚ್ಚರಕ್ಕೂ ಕನಸಿಗೂ ಯಾವ ಭೇದವೂ ಇಲ್ಲವೆಂಬುದನ್ನು ದೊಡ್ಡವರು ಬಹಳ ಪ್ರಕಾರಗಳಿಂದ ತೋರಿಸಿಕೊಟ್ಟಿರುತ್ತಾರೆ.ಯಾವ ಕನಸಿನಲ್ಲಿಯೂ' ಇದು ಕನಸು' ಎಂದು ತೋರುವುದಿಲ್ಲ. ಇದು ಎಚ್ಚರ, ಇದು ಸತ್ಯ, ಇದರಲ್ಲಿರುವ ದೃಶ್ಯಗಳು ಸತ್ಯ. ಇಲ್ಲಿ ನಾನು ಮಾಡುತ್ತಿರುವ ಕರ್ಮಗಳೂ ಅನುಭವಿಸುತ್ತಿರುವ ಫಲಗಳೂ ಸತ್ಯ-ಎಂಬ ತಿಳುವಳಿಕೆಯೇ ಅಲ್ಲೆಲ್ಲ ಗಟ್ಟಿಯಾಗಿದ್ದುಕೊಂಡಿರುತ್ತದೆ. ಅಲ್ಲವೆ? ಒಬ್ಬ ಚೀಣದ ತತ್ತ್ವವಿಚಾರಕನಿಗೆ ಒಮ್ಮೆ ತಾನು ಚಿಟ್ಟೆಯಾಗಿ ಆಕಾಶದಲ್ಲಿ ಹಾರಾಡುತ್ತಿರುವಂತೆ

ಕನಸಾಯಿತಂತೆ. ಅವನು ಎಚ್ಚತ್ತಾಗ "ನಾನು ಚಿಟ್ಟೆಯಾಗಿದ್ದು ಈಗ ತತ್ತ್ವವಿಚಾರಕನಾಗಿ ತೋರುತ್ತಿರುವೆನೊ, ಅಥವಾ ಯಾವಾಗಲೂ ತತ್ತ್ವವಿಚಾರಕನಾಗಿದ್ದು ಆ ಕನಸಿನಲ್ಲಿ ಚಿಟ್ಟೆಯಾಗಿ ಹಾರಾಡುತ್ತಿರುವಂತೆ ತೋರಿಕೊಂಡೆನೊ?"– ಎಂಬ ಸಂಶಯವು ಬಂದಿತಂತೆ. ಈ ಸಂಶಯದ ಪರಿಹಾರವು ಹೇಗೆ ಆಗಬೇಕು? ನಿಜವಾಗಿ ತತ್ತ್ವವಿಚಾರಕನಾಗಿ ತೋರಿದ್ದೂ ಕನಸೇ, ಚಿಟ್ಟೆಯಾಗಿ ತೋರಿದ್ದೂ ಕನಸೇ; ತೋರುವದೆಲ್ಲವೂ ಕನಸೇ ಅಲ್ಲದೆ ಮತ್ತೇನು? ಎಚ್ಚರವು ಕನಸೆಂದಾಗಲಿ, ಕನಸು ಎಚ್ಚರವೆಂದಾಗಲಿ ಇಲ್ಲಿ ಹೇಳುವದಕ್ಕೆ ಹೊರಟಿಲ್ಲ. ಎಚ್ಚರ, ಕನಸು– ಎರಡೂ ತೋರಿಕೆಗಳೇ; ಅವು ನಿಜವಾಗಿಲ್ಲವೇ ಇಲ್ಲ. ಅವುಗಳನ್ನು ಬೆಳಗುತ್ತಿರುವ ಆತ್ಮನೊಬ್ಬನೇ ನಿಜವಾಗಿ ಯಾವಾಗಲೂ ತಾನಿದ್ದಂತೆ ಇದ್ದುಕೊಂಡಿರುವವನು ಎಂಬುದೇ ಇಲ್ಲಿ ತಿಳಿಯಬೇಕಾದದ್ದು. ಇದು ಅವಸ್ಥಾತ್ರಯವನ್ನು ಉಪಾಯವಾಗಿ ಇಟ್ಟುಕೊಂಡು ಪರಮಾತ್ಮನನ್ನು ಮುಟ್ಟಿಸುವ ತರ್ಕ.

ಸಾಮಾನ್ಯವಿಶೇಷಪ್ರಕ್ರಿಯೆ, ಕಾರ್ಯಕಾರಣಪ್ರಕ್ರಿಯೆ, ಸೃಷ್ಟಿಸ್ಥಿತಿಪ್ರಲಯಗಳ ವಿವರ, ಜಾಗ್ರತ್ಸ್ವಪ್ನಸುಷುಪ್ತಿಗಳು– ಇವೆಲ್ಲ ಶಾಸ್ತ್ರದಲ್ಲಿ ಆತ್ಮಜ್ಞಾನಕ್ಕೆ ಉಪಾಯವಾಗಿ ಹೇಳಿದೆ ಎಂಬುದನ್ನು ನಾವು ಮರೆಯದೆ ಇದ್ದರೆ ನಮಗೆ ಅವುಗಳ ವಿಚಾರದಿಂದ ಲಾಭವಾಗುವದು; ಇಲ್ಲದಿದ್ದರೆ ಆ ಪ್ರಕ್ರಿಯೆಗಳೇ ಸತ್ಯವೆಂಬ ತಪ್ಪುತಿಳಿವು ಬಲವಾಗಿ ನಾವು ತತ್ತ್ವದಿಂದ ವಂಚಿತರಾಗುವೆವು. ಲೋಕದಲ್ಲಿ ಸಾಮಾನ್ಯವಿಶೇಷಭಾವವು ಪದಾರ್ಥಗಳಲ್ಲಿದೆ ಎಂಬ ನಂಬಿಕೆಯು ಜನರಿಗೆ ಇರುತ್ತದೆ. ಆದ್ದರಿಂದ ನಮಗೆ ಕಾಣುತ್ತಿರುವ ದೃಶ್ಯಗಳೆಲ್ಲವನ್ನೂ ವಿಶೇಷಗಳೆಂದು ತೋರಿಸಿ ಅವುಗಳಲ್ಲಿ ಆತ್ಮನು ಸಾಮಾನ್ಯದಂತೆ ಅನುಗತನಾಗಿ ಎಲ್ಲವುಗಳಲ್ಲಿಯೂ ಹೊಂದಿಕೊಂಡು ಇರುತ್ತಾನೆಂದು ಜ್ಞಾನಿಗಳು ಬೋಧಿಸುತ್ತಾರೆ. ಆದರೆ ಆತ್ಮನಲ್ಲಿ ನಿಜವಾಗಿ ಯಾವ ಸಾಮಾನ್ಯವಿಶೇಷಭಾವವೂ ಎಂದಿಗೂ ಇರುವದೇ ಇಲ್ಲ; ಸಾಮಾನ್ಯ, ವಿಶೇಷ– ಎರಡೂ ಆತ್ಮನಲ್ಲಿ ಹುಟ್ಟುಗಟ್ಟಿಕೊಂಡಿರುವ ವಿಕಲ್ಪಗಳೇ ಎಂಬುದು ಅವರ ಹೃದಯ.

ಹೀಗೆಯೇ ಪರಮಾತ್ಮನು ಕಾರಣವೆಂದೂ ಜಗತ್ತು ಕಾರ್ಯವೆಂದೂ ಉಪದೇಶಿಸುವದೂ ಆತ್ಮದರ್ಶನಕ್ಕೆ ಉಪಾಯವಾಗಿಯೇ. ಜಗತ್ತು ಕಾರ್ಯವೂ ಅಲ್ಲ, ಆತ್ಮನು ಕಾರಣವೂ ಅಲ್ಲ. ಕಾರ್ಯವು ಕಾರಣಕ್ಕಿಂತ ಬೇರೆಯಾಗಿಲ್ಲದಿರುವಂತೆ ಜಗತ್ತು ಆತ್ಮನಿಗಿಂತ ಬೇರೆಯಾಗಿರುವದಿಲ್ಲ; ಜಗತ್ತೆಂಬುದು ನಿಜವಾಗಿ ಆತ್ಮನೇ ಎಂದು ತಿಳಿಸುವದೇ ಅವರ ಹೃದಯ.

ಇದರಂತೆ ಸೃಷ್ಟಿಸ್ಥಿತಿಪ್ರಲಯಗಳಾಗಲಿ, ಜಾಗ್ರತ್ಸ್ವಪ್ನಸುಷುಪ್ತಿಗಳಾಗಲಿ ನಿಜವಾಗಿ ಇರುವವೆಂದೇನೂ ಶ್ರುತಿಗಳು ಅಥವಾ ಆಚಾರ್ಯರುಗಳು ಬೋಧಿಸುವದಿಲ್ಲ. ಇವುಗಳನ್ನು

ನೆಪಮಾಡಿಕೊಂಡು ಇವುಗಳಿಗೆ ಆಧಾರನಾಗಿರುವ ಆತ್ಮನು ನಿರ್ವಿಕಾರನು, ಅವಸ್ಥಾರಹಿತನು, ನಿತ್ಯಶುದ್ಧಬುದ್ಧಮುಕ್ತಸ್ವಭಾವನು ಎಂದು ತಿಳಿಸುವದೇ ಅವರ ಹೃದಯ. ಸೃಷ್ಟಿಸ್ಥಿತ್ಯಾದಿಗಳೆಲ್ಲವೂ ನಿಜವಾಗಿ ಆತ್ಮನೇ; ಜಾಗ್ರತ್ಸ್ವಪ್ನಾದಿಗಳೂ ಆತ್ಮನೇ.

ಹೆಚ್ಚೇನು? ಯಾವ ಯಾವ ಉಪಾಯದಿಂದ ಜ್ಞಾನಿಗಳು ಆತ್ಮತತ್ತ್ವವನ್ನು ಬೋಧಿಸುವರೋ ಅದೆಲ್ಲವೂ ಉಪಾಯಮಾತ್ರವೇ ಹೊರತು ಸತ್ಯವಲ್ಲ. ಅದರ ಹುರುಳು ಪರಮಾತ್ಮನೇ. ಆ ಪರಮಾತ್ಮನ ತತ್ತ್ವವು "ಅಥಾತ ಆದೇಶೋ ನೇತಿ ನೇತಿ" ಇದಲ್ಲ, ಇದಲ್ಲ- ಎಂದು ಉಪಾಯಗಳನ್ನೆಲ್ಲ ಅಲ್ಲಗಳೆದು ಅರಿತುಕೊಳ್ಳಬೇಕಾದದ್ದು, ಆತ್ಮನೊಬ್ಬನೇ ನಿಜವಾಗಿರುವವನು, ಆತ್ಮನು ಅದ್ವಿತೀಯನು, ಅವನಿಗಿಂತ ಬೇರೆಯಾಗಿ ಯಾವದೊಂದೂ ಇರುವದೇ ಇಲ್ಲ.

## 5.6. ಭಗವಚ್ಚಿಂತನೆ

> **ಸರ್ವೇ ವೇದಾಯತ್ಪದಮಾಮನನ್ತಿ ತಪಾಂಸಿ ಸರ್ವಾಣಿ ಚ ಯದ್ವದನ್ತಿ ।**
> **ಯದಿಚ್ಛಂತೋ ಬ್ರಹ್ಮಚರ್ಯಂ ಚರನ್ತಿ ತತ್ತೇ ಪದಂ ಸಂಗ್ರಹೇಣ**
> **ಬ್ರವೀಮ್ಯೋಮಿತ್ಯೇತತ್ ॥** ಕಾ. 2-15

ಸಾಮಾನ್ಯವಾಗಿ ಮನುಷ್ಯನ ನಡೆನುಡಿಬಗೆಗಳಿಗೆ ಹೊಂದಿಕೆಯಿರುವದಿಲ್ಲ. ಇದನ್ನು ಹೊಂದಿಸಿ ಜೀವನವನ್ನು ನೇರ್ಪಡಿಸುವದೇ ಶಾಸ್ತ್ರದ ಕೆಲಸ. ಭಗವಂತನು ಅರ್ಜುನನನ್ನು ಕುರಿತು ಹೀಗೆಂದಿರುತ್ತಾನೆ : "ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ। ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥" (16-24)- ಅರ್ಜುನನೆ, ಮಾಡತಕ್ಕದ್ದು ಬಿಡತಕ್ಕದ್ದು- ಇವುಗಳನ್ನು ಗೊತ್ತುಮಾಡುವದಕ್ಕೆ ನಿನಗೆ ಶಾಸ್ತ್ರವೇ ಪ್ರಮಾಣವು. ಆದ್ದರಿಂದ ಶಾಸ್ತ್ರವಿಧಿಯಲ್ಲಿ ಏನು ಹೇಳಿದೆಯೋ ಅದನ್ನರಿತುಕೊಂಡು ನೀನು ಕರ್ಮವನ್ನು ಮಾಡುತ್ತಿರಬೇಕು- ಎಂದು ಶ್ಲೋಕಕ್ಕೆ ಅರ್ಥ. ಯಾರು ಶಾಸ್ತ್ರಕ್ಕಾಗಿಯೇ ತಮ್ಮ ಪ್ರಾಣವನ್ನು ಬಿಡುವದಕ್ಕೂ ಸಿದ್ಧರಾಗಿರುವರೋ ಅವರೇ ಬ್ರಾಹ್ಮಣರು. ಯಾರು ತಪೋಬಲದಿಂದ ಪರಮೇಶ್ವರನನ್ನು ಒಲಿಸಿಕೊಂಡು ಶಾಸ್ತ್ರಗಳನ್ನು ಕಂಡುಹಿಡಿದುಕೊಂಡರೋ ಅವರೇ ಋಷಿಗಳು.

ನಿಜವಾದ ಬ್ರಾಹ್ಮಣನು ಯಾವ ಆಶ್ರಮದಲ್ಲಿಯೇ ಇರಲಿ, ಶಾಸ್ತ್ರಕ್ಕೆ ಕಟ್ಟುಬಿದ್ದೇ ಇರುತ್ತಾನೆ. ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಗುರುವನ್ನು ಸೇವಿಸುತ್ತಾ ಶಾಸ್ತ್ರವನ್ನು ಸಂಪಾದಿಸಿಕೊಳ್ಳುತ್ತಿರುವವರೆಗೆ ಅವನಿಗೆ ಬ್ರಹ್ಮಚಾರಿ ಎಂದು ಹೆಸರು. ಯಾವನು ತನ್ನ ಜೀವನವನ್ನೆಲ್ಲ ಹೀಗೆ ಗುರುಸೇವೆಗೇ ಮೀಸಲಾಗಿಟ್ಟುಕೊಂಡಿರುವನೋ ಅವನು

ನೈಷ್ಠಿಕಬ್ರಹ್ಮಚಾರಿ. ಅಷ್ಟಕ್ಕೆ ಯೋಗ್ಯತೆಯಿಲ್ಲದವನು ಗುರುಗಳಿಗೆ ಯಥಾಶಕ್ತಿಯಾಗಿ ದಕ್ಷಿಣೆಯನ್ನು ಕೊಟ್ಟು ಅವರ ಅಪ್ಪಣೆಯನ್ನು ಪಡೆದುಕೊಂಡು ಗೃಹಸ್ಥನಾಗುವದಕ್ಕೆ ಹಿಂತಿರುಗುತ್ತಾನೆ. ಇದನ್ನು "ಸಮಾವರ್ತನ" ಎಂದು ಶಾಸ್ತ್ರದಲ್ಲಿ ಕರೆದಿರುತ್ತದೆ. ಶಿಷ್ಯನು ಗೃಹಸ್ಥನಾಗಿರುವದಕ್ಕೆಂದು ಮನೆಗೆ ಹಿಂತಿರುಗುವ ಈ ಸಮಯದಲ್ಲಿ ಗುರುವು ಮಾಡುವ ಉಪದೇಶವನ್ನು ತೈತ್ತಿರೀಯೋಪನಿಷತ್ತಿನಲ್ಲಿ ಸಂಗ್ರಹಿಸಿದೆ. ಅದರ ಸಾರವೇನೆಂದರೆ: "ಸತ್ಯವನ್ನು ಆಡುತ್ತಿರು, ಧರ್ಮವನ್ನು ಆಚರಿಸುತ್ತಿರು, ಅಧ್ಯಯನವನ್ನು ಎಂದಿಗೂ ಬಿಡದಿರು, ಮತ್ತೊಬ್ಬರಿಗೆ ಅಧ್ಯಯನವನ್ನು ಮಾಡಿಸುವದನ್ನು ಮರೆಯದಿರು. ದೇವಪಿತೃಕಾರ್ಯಗಳನ್ನು ಬಿಡಬೇಡ; ತಾಯಿಯನ್ನೂ ತಂದೆಯನ್ನೂ ಆಚಾರ್ಯನನ್ನೂ ಅತಿಥಿಗಳನ್ನೂ ದೇವರೆಂದು ಭಾವಿಸು; ನಮಗಿಂತ ದೊಡ್ಡವರಾದ ಬ್ರಾಹ್ಮಣರನ್ನು ಗೌರವಿಸುತ್ತಿರು; ದಾನಧರ್ಮವನ್ನು ಮಾಡುತ್ತಿರು. ನಿನಗೆ ನಡೆನುಡಿಗಳಲ್ಲಿ ಏನಾದರೂ ಸಂಶಯವುಂಟಾದರೆ ನಿಮ್ಮ ನೆರೆಯಲ್ಲಿದ್ದು ಧರ್ಮದಲ್ಲಿಯೇ ನಿರತವಾಗಿ ಕಾಮಕ್ರೋಧಾದಿಗಳಿಂದ ಪ್ರೇರಿತರಾಗದೆ ಇರುವ ಬ್ರಾಹ್ಮಣರನ್ನು ಆ ವಿಷಯದಲ್ಲಿ ಅನುಸರಿಸು." ಈ ಉಪದೇಶ ವಾಕ್ಯಗಳನ್ನು ನೆನಪಿನಲ್ಲಿಟ್ಟುಕೊಂಡು ಗೃಹಸ್ಥನಾಗುವವನೇ ನಿಜವಾದ ಬ್ರಾಹ್ಮಣನು.

ಗೃಹಸ್ಥನಾದವನು ಹೇಗೆ ನಡೆಯಬೇಕೆಂಬುದನ್ನು ಮನ್ವಾದಿಸ್ಮೃತಿಗಳಲ್ಲಿ ತಿಳಿಸಿ ಕೊಟ್ಟಿರುತ್ತದೆ. ಮುಖ್ಯವಾಗಿ ಬ್ರಾಹ್ಮಣನಿಗೆ ಯಜನ (ದೇವತೆಗಳ ಪೂಜೆ), ಯಾಜನ (ಮತ್ತೊಬ್ಬರಿಂದ ಪೂಜೆಮಾಡಿಸುವದು), ಅಧ್ಯಯನ (ವೇದವನ್ನೂ ಶಾಸ್ತ್ರವನ್ನೂ ಪಠನಮಾಡುತ್ತಿರುವದು), ಅಧ್ಯಾಪನ (ಮತ್ತೊಬ್ಬರಿಂದಲೂ ಪಠನ ಮಾಡಿಸುತ್ತಿರುವದು), ದಾನ (ಧರ್ಮದಿಂದ ಸಂಪಾದಿಸಿದ ಧನವನ್ನು ಆಗಾಗ್ಗೆ ಸತ್ಪಾತ್ರರಿಗೆ ಹಂಚುತ್ತಿರುವದು), ಪ್ರತಿಗ್ರಹ (ಧರ್ಮಕ್ಕಾಗಿ ಮತ್ತೊಬ್ಬರಿಂದ ಧನವನ್ನು ಸ್ವೀಕರಿಸುವದು)–ಈ ಆರೇ ಕರ್ಮಗಳು. ಬ್ರಾಹ್ಮಣನಾದವನ ದೇಹವು ಬರಿಯ ಇಂದ್ರಿಯಗಳ ಭೋಗಕ್ಕಾಗಿ ಹುಟ್ಟಿದ್ದಲ್ಲ. ಸಚ್ಛಾಸ್ತ್ರವನ್ನು ಅಧ್ಯಯನಮಾಡುವದು, ಸತ್ಕರ್ಮವನ್ನು ಮಾಡುವದು, ಪರಲೋಕದ ಸುಖಕ್ಕೆ ಯೋಗ್ಯತೆಯನ್ನು ಸಂಪಾದಿಸಿ ಕೊಳ್ಳುವದು–ಇವೇ ಬ್ರಾಹ್ಮಣನ ಗುರಿಯಾಗಿರಬೇಕು. ಗೃಹಸ್ಥನಾಗಿರುವಾಗಲೂ ಆದಷ್ಟು ಮಿತವಾಗಿ ತನ್ನ ಜೀವನಕ್ಕೆ ಇಟ್ಟುಕೊಂಡಷ್ಟೂ ಬ್ರಾಹ್ಮಣನ ಯೋಗ್ಯತೆಯು ಹೆಚ್ಚಾಗುವದು. ಒಂದು ವರ್ಷ, ಆರು ತಿಂಗಳು, ಮೂರು ತಿಂಗಳು, ತಿಂಗಳು, ಪಕ್ಷ– ಹೀಗೆ ಕಡಿಮೆಯಾದ ಅವಧಿಗೆ ಆಗುವಷ್ಟನ್ನು ಮಾತ್ರ ಜೀವನಯಾತ್ರೆಗೆಂದು ಸಂಗ್ರಹಿಸಿಟ್ಟುಕೊಳ್ಳುವವನು ಮಿಕ್ಕವರಿಗಿಂತಲೂ ಹೆಚ್ಚಿನ ಶ್ರೇಯಸ್ಸಿಗೆ ಪಾತ್ರನಾಗಿರುತ್ತಾನೆಂದು ಶಾಸ್ತ್ರಕಾರರು ಹೇಳುತ್ತಾರೆ.

ಜೀವಮಾನದ ಮೂರನೆಯ ಭಾಗವನ್ನು ವಾನಪ್ರಸ್ಥಾಶ್ರಮದಲ್ಲಿ ಕಳೆಯಬೇಕೆಂದು

ಧರ್ಮಶಾಸ್ತ್ರಗಳಲ್ಲಿ ಹೇಳಿರುವದು ಕಂಡುಬರುತ್ತದೆ. ಆಗ ಶರೀರವನ್ನು ಪೋಷಿಸುವಕಡೆಗೆ ಲಕ್ಷ್ಯವನ್ನು ಇಡತಕ್ಕದ್ದೇ ಅಲ್ಲ; ತಪಸ್ಸಿನಿಂದಲೇ ದೇಹವನ್ನು ಸವೆಯಿಸಬೇಕು.

ಈ ಮೂರು ಆಶ್ರಮಗಳಿಗಿಂತಲೂ ಸಂನ್ಯಾಸಾಶ್ರಮವೆಂಬುದು ಅತ್ಯಂತ ಶ್ರೇಷ್ಠವಾದದ್ದು. ಯಾವಾಗ ಮನುಷ್ಯನಿಗೆ ವೈರಾಗ್ಯವು ತಲೆದೋರುವದೋ ಆಗಲೇ ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಪರಮಾತ್ಮನ ಚಿಂತನೆಗೇ ಜೀವನವನ್ನೆಲ್ಲ ಧಾರೆಯೆರೆಯಬೇಕು. ಶ್ರವಣಮನನನಿದಿಧ್ಯಾಸನಗಳಿಂದ ಆತ್ಮಸ್ವರೂಪವನ್ನು ಅರಿತುಕೊಂಡು ಬ್ರಹ್ಮನಿಷ್ಠನಾಗಿರುವದೇ ಸಂನ್ಯಾಸಿಗೆ ಧ್ಯೇಯವಾಗಿರತಕ್ಕದ್ದು. ಸರ್ವಭೂತಗಳಲ್ಲಿಯೂ ಪ್ರೇಮವನ್ನಿಟ್ಟು ಶರೀರದ ಭಾನವೇ ಇಲ್ಲದೆ ಪರಮಾತ್ಮ ಚಿಂತನೆಯನ್ನು ಮಾಡುವ ಸಂನ್ಯಾಸಿಗಳು ಈಗಲೂ ಅಲ್ಲಲ್ಲಿ ಇರುತ್ತಾರೆ. ಹರಿಹರದ "ನದಿ (ಅಥವಾ ಗುಂಡಿ) ಸ್ವಾಮಿಗಳ"ನ್ನು ಕಂಡವರು ಈ ಮಾತು ಕಲಿಯುಗಕ್ಕೂ ಅನ್ವಯಿಸುತ್ತದೆ ಎಂಬುದಕ್ಕೆ ಸಾಕ್ಷಿಗಳಾಗಿರುತ್ತಾರೆ.

ಭಗವದ್ಗೀತೆಯಲ್ಲಿ ಇಂಥ ಆತ್ಮನಿಷ್ಠರನ್ನು "ಸ್ಥಿತಪ್ರಜ್ಞರು" ಎಂದು ಕರೆದಿರುತ್ತದೆ. ಅಂಥವರು ಸಾಂಖ್ಯಮಾರ್ಗದ ಕೊನೆಯ ಅಂತಸ್ತನ್ನು ಏರಿದವರಾಗಿರುತ್ತಾರೆ. "ಯಾವನು ಆತ್ಮರತಿಯೂ ಆತ್ಮತೃಪ್ತನೂ ಆಗಿರುವನೋ, ಆತ್ಮನಿಂದಲೇ ಸಂತುಷ್ಟನಾಗಿರುವನೋ, ಅವನಿಗೆ ಮಾಡತಕ್ಕ ಕಾರ್ಯವು ಯಾವದೂ ಇರುವದಿಲ್ಲ" (ಗೀ. 3-17) ಎಂದು ಹೇಳಿರುವದು ಇಂಥ ಮಹಾತ್ಮರಿಗೇ ಅನ್ವಯಿಸತಕ್ಕದ್ದಾಗಿರುತ್ತದೆ. "ಆತ್ಮನೇ ಕೆಳಗಡೆ, ಆತ್ಮನೇ ಮೇಲುಗಡೆ, ಆತ್ಮನೇ ಹಿಂಗಡೆ, ಆತ್ಮನೇ ಮುಂಗಡೆ, ಆತ್ಮನೇ ಬಲಕ್ಕೆ, ಆತ್ಮನೇ ಎಡಕ್ಕೆ, ಇದೆಲ್ಲವೂ ಆತ್ಮನೇ. ಯಾವನು ಹೀಗೆಂದರಿತು, ಹೀಗೆಂದೇ ಚಿಂತಿಸುತ್ತಾ, ಹೀಗೆಂದೇ ಮನದಟ್ಟುಮಾಡಿಕೊಂಡು ಆತ್ಮರತಿಯಾಗಿ ಆತ್ಮಕ್ರೀಡನಾಗಿ ಆತ್ಮಮಿಥುನನಾಗಿ ಆತ್ಮಾನಂದನಾಗಿ ಇರುವನೋ ಅವನೇ ಸ್ವರಾಜನಾಗಿರುವನು" ಎಂದು ಶ್ರುತಿಯಲ್ಲಿ ವರ್ಣಿಸಿರುವದೂ ಇಂಥ ಪರಮಾತ್ಮನಿಷ್ಠರನ್ನೇ.

ಈ ಸಾಂಖ್ಯಮಾರ್ಗಕ್ಕೆ ಹೋಗುವ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವವರಿಗೆಂದು ಧ್ಯಾನಯೋಗವನ್ನು ಅಂತರಂಗಸಾಧನವನ್ನಾಗಿ ಗೀತೆಯಲ್ಲಿ ಉಪದೇಶಿಸಿರುತ್ತದೆ. ಧ್ಯಾನಯೋಗವೆಂದರೆ ಏನು? ಮನಸ್ಸಿನಲ್ಲಿ ಹಗಲುಗನವರಿಕೆಯನ್ನು ಮಾಡಿಕೊಂಡು ಕೂರುವದಲ್ಲ. ಸಾಮಾನ್ಯಲೌಕಿಕರು ಇಂದ್ರಿಯಗಳಲ್ಲಿಯೇ ತಾದಾತ್ಮ್ಯವನ್ನು ಹೊಂದಿ ಅವುಗಳಲ್ಲಿಯೇ ನಿಂತುಬಿಟ್ಟಿರುತ್ತಾರೆ; ಅವರಿಗೆ ಯಾವಯಾವದು ಇಂದ್ರಿಯ ಗೋಚರವಾಗುವದೋ ಅವುಗಳಲ್ಲೆಲ್ಲ ಮಮತೆ- ನನಗೆ ಸೇರಿದ್ದು ಎಂಬ ಬುದ್ಧಿ- ಇದ್ದೇಇರುತ್ತದೆ. ಧ್ಯಾನಯೋಗಿಯಾದವನು ಈ ಇಂದ್ರಿಯಗಳ ಪರಿಚ್ಛಿನ್ನಬುದ್ಧಿಯನ್ನು ಮೊದಲು ಮೀರುತ್ತಾನೆ. "ಶನೈಃಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ" (ಗೀ. 6-25) ಎಂಬ ಗೀತೋಕ್ತಿಯನ್ನು ಅರ್ಥಮಾಡಿಕೊಳ್ಳುವದಕ್ಕೆ ಮೊದಲು ಯತ್ನಿಸುತ್ತಾರೆ.

ಇಂದ್ರಿಯಗಳಿಂದ ಉಪರತರಾಗಬೇಕು ಎಂದರೆ ಇಂದ್ರಿಯಗಳ ವ್ಯಾಪಾರವನ್ನು ನಿಲ್ಲಿಸಿಬಿಡಬೇಕು– ಎಂದಿಷ್ಟೇ ಅರ್ಥವಲ್ಲ. ಏಕೆಂದರೆ ಇಂದ್ರಿಯವ್ಯಾಪಾರವನ್ನು ನಿಲ್ಲಿಸಿದರೆ ಮನಸ್ಸು ಇಂದ್ರಿಯಗಳ ವ್ಯಾಪಾರಗಳನ್ನೆಲ್ಲ ತಾನೇ ವಹಿಸಿಕೊಂಡುಬಿಡುತ್ತದೆ. ಕೆಲವುಜನ ಮೂಢರು ಏಕಾಂತದಲ್ಲಿ ಕುಳಿತು ಬಗೆಬಗೆಯ ಇಂದ್ರಿಯಾರ್ಥಗಳನ್ನು ಚಿಂತಿಸುತ್ತಾ ವ್ಯರ್ಥವಾಗಿ ಕಾಲಹರಣ ಮಾಡುತ್ತಿರುತ್ತಾರೆ. ಅಂಥವರನ್ನು ಮಿಥ್ಯಾಚಾರರತರು ಎಂದು ಗೀತೆಯಲ್ಲಿ ನಿಂದಿಸಿರುತ್ತದೆ. ಇಂದ್ರಿಯಗಳು ಮನಸ್ಸೆಂಬ ಬಳ್ಳಿಯ ದಾಂಗುಡಿಗಳು, ಅತ್ತಿತ್ತ ಹರಿದಾಡುವ ಕುಡಿಗಳು. ಅವುಗಳನ್ನೆಲ್ಲ ಮನಸ್ಸಿನಲ್ಲಿಯೇ ಕರಗಿಸಿ ಮುಂದೆ ಆ ಮನಸ್ಸನ್ನು ಆತ್ಮನಲ್ಲಿಟ್ಟುಕೊಳ್ಳಬೇಕು. ಆತ್ಮನು ಮನಸ್ಸನ್ನು ಉಪಯೋಗಿಸುತ್ತಾನೆ– ಎಂದು ನಮ್ಮಂಥವರಿಗೆ ಈಗ ಭಾವನೆಯಷ್ಟೆ? ಆದರೆ ಉತ್ತಮಶ್ರೇಣಿಯ ಧ್ಯಾನಯೋಗಿಯ ದೃಷ್ಟಿಯಲ್ಲಿ ಮನಸ್ಸೆಂಬುದು ಆತ್ಮಜ್ಯೋತಿಯ ಕಿರಣಗಳೇ ಆಗಿರುತ್ತದೆ. ಸೂರ್ಯನಿಗಿಂತ ಸೂರ್ಯನ ಕಿರಣಗಳು ಹೇಗೆ ಬೇರೆಯಲ್ಲವೋ ಹಾಗೆಯೇ ಆತ್ಮನೇ ಮನಸ್ಸೆಂಬ ಹೆಸರಿನಿಂದ ವ್ಯವಹಾರದಲ್ಲಿ ಬಗೆಬಗೆಯ ವೃತ್ತಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುತ್ತಾನೆ. ಶುದ್ಧಸತ್ತ್ವನಾದ ಧ್ಯಾನಯೋಗಿಯು ಈ ವೃತ್ತಿರೂಪವಾದ ಕಿರಣಗಳನ್ನೆಲ್ಲ ಒಂದುಗೂಡಿಸಿಕೊಂಡು ಆತ್ಮನಲ್ಲಿಯೇ ಇಟ್ಟುಕೊಂಡುಬಿಡುತ್ತಾನೆ, ಅವನಿಗೆ ಆತ್ಮನಿಗಿಂತ ಬೇರೆಯಾಗಿ ಮನಸ್ಸೆಂಬುದೇ ಕಾಣಿಸುವದಿಲ್ಲ. "ಆತ್ಮನ್ಯೇವ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್" ಎಂಬ ಗೀತಾವಾಕ್ಯದ ನಿಜವಾದ ಅರ್ಥವು ಆ ಮಹಾತ್ಮನಿಗೊಬ್ಬನಿಗೇ ಅನುಭವದಲ್ಲಿರುತ್ತದೆ. ಸಾಮಾನ್ಯವಾಗಿ ಜನರಿಗೆ ನಾನು, ನನ್ನದು ಎಂಬ ರೂಪದಲ್ಲಿ ಚದರಿಕೊಂಡು ಕಾಣಿಸುತ್ತಿರುವ ಅಂತಃಕರಣವು ಅವನಿಗೆ ಎಲ್ಲವೂ ಆತ್ಮನೇ ಆಗಿಬಿಟ್ಟಿರುತ್ತದೆ. ಅವನಿಗೆ ನಾನೂ ಇಲ್ಲ, ನನ್ನದೂ ಇಲ್ಲ.

ಧ್ಯಾನಯೋಗವನ್ನು ಯಾವನು ಏರಿರುತ್ತಾನೋ ಅವನಿಗೆ ಶಮದಮಾದಿರೂಪವಾದ ನಿವೃತ್ತಿಧರ್ಮವೇ ಸಾಧನವಾಗಿರುತ್ತದೆ. ಆದರೆ ಯಾರಿಗೆ ಈ ನಿವೃತ್ತಿಧರ್ಮವು ಇನ್ನೂ ಅಳವಟ್ಟಿರುವದಿಲ್ಲವೋ, ಯಾರಿಗೆ ಎಲ್ಲಾ ಬಗೆಯ ಸಂಕಲ್ಪಗಳನ್ನೂ ಬಿಟ್ಟುಬಿಡುವ ಶಕ್ತಿಯು ಇನ್ನೂ ಸ್ವಾಧೀನಕ್ಕೆ ಬಂದಿರುವದಿಲ್ಲವೋ ಅವರಿಗೆ ಆ ಅಂತರಂಗಯೋಗಕ್ಕೆ ಸಾಧನವಾಗಿ ಅದರ ಹೊರಮೈಯನ್ನು ಗೀತೆಯಲ್ಲಿ ಬೋಧಿಸಿರುತ್ತದೆ. ಅದನ್ನೇ **ಕರ್ಮಯೋಗ**ವೆಂದು ಗೀತೆಯಲ್ಲಿ ಕರೆದಿರುವದು. ಧ್ಯಾನಯೋಗಿಯು ಸಂನ್ಯಾಸ ಯೋಗಗಳ ತೀರ ಮೇಲಿನ ಮೆಟ್ಟಿಲನ್ನು ಏರಿರುತ್ತಾನೆ; ಕರ್ಮಯೋಗಿಯು ಅದೇ ಸೋಪಾನದ ಮೊದಲನೆಯ ಮೆಟ್ಟಿಲನ್ನು ಹತ್ತಿರುತ್ತಾನೆ. ಕರ್ಮಯೋಗಿಯೂ ಸಂನ್ಯಾಸಿಯೇ, ಅವನೂ ಯೋಗಿಯೇ; ಆದರೆ ಅವನು ಇನ್ನೂ ಸಂನ್ಯಾಸಯೋಗಗಳ ಹಾದಿಯ ಪರಿಚಯುವನ್ನು ಮಾಡಿಕೊಳ್ಳುವ ಸಾಧಕನಾಗಿರುತ್ತಾನೆ, ಅಷ್ಟೆ. ಧ್ಯಾನಯೋಗಿಯಂತೆ ಅವನು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರುವದಿಲ್ಲ, ಮನಸ್ಸನ್ನೆಲ್ಲ

ಪರಮಾತ್ಮನಲ್ಲಿಯೇ ಯೋಜಿಸಿರುವದೂ ಇಲ್ಲ. ಹಾಗಾದರೆ ಕರ್ಮಯೋಗಿಯನ್ನು ಸಂನ್ಯಾಸಿ, ಯೋಗಿ- ಎಂದು ಕರೆಯುವದು ಹೇಗೆ?- ಎಂದು ನೀವು ಕೇಳಬಹುದು. ಭಗವಂತನು ಇದಕ್ಕೆ ಉತ್ತರವನ್ನು ಹೀಗೆ ಹೇಳಿರುತ್ತಾನೆ : ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ । ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥" (ಗೀ. 6-1) ಅವನು ಕರ್ಮಫಲವನ್ನು ಆಶ್ರಯಿಸಿರುವದಿಲ್ಲ, ಯಾವ ಫಲವೂ ತನಗೆ ಬೇಡ ಎಂದು ಅದನ್ನು ಅವನು ತ್ಯಾಗಮಾಡಿರುತ್ತಾನೆ; ಆದ್ದರಿಂದ ಅವನು ಸಂನ್ಯಾಸಿಯು. ಸಂನ್ಯಾಸಿಗಳು ಕಾಮತ್ಯಾಗವನ್ನು ಮಾಡಿರುವದರಿಂದಲ್ಲವೆ, ಕರ್ಮಸಂನ್ಯಾಸವನ್ನು ಅಳವಡಿಸಿಕೊಂಡಿರುತ್ತಾರೆ? ಇದರಂತೆ ಕರ್ಮಯೋಗಿಯು ನಾನು ಇಂಥ ಕರ್ಮವನ್ನು ಇಂಥ ಇಂದ್ರಿಯಾರ್ಥಕ್ಕಾಗಿ ಮಾಡುವೆನು ಎಂಬ ಸಂಕಲ್ಪವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿರುತ್ತಾನೆ. ಸರ್ವಸಂಕಲ್ಪಗಳನ್ನೂ ಬಿಟ್ಟುಬಿಟ್ಟಮೇಲಲ್ಲವೆ, ಇಂದ್ರಿಯಗಳ ಹಿಡಿತದಿಂದ ಬಿಡಿಸಿಕೊಂಡು ಧ್ಯಾನಯೋಗಿಯಾಗುತ್ತಾನೆ? ಹೀಗೆಯೇ ಇಂದ್ರಿಯಾರ್ಥಸಂಕಲ್ಪಗಳನ್ನು ಬಿಟ್ಟಿರುವದರಿಂದ ಈ ಕರ್ಮಯೋಗಿಯೂ ಯೋಗಿಯೆನಿಸಿರುತ್ತಾನೆ.

ಕರ್ಮಯೋಗಿಯಾದವನು ಸಂಕಲ್ಪಸಂನ್ಯಾಸವನ್ನೂ ಕರ್ಮಫಲಸಂನ್ಯಾಸವನ್ನೂ ಏತರ ಬಲದಿಂದ ಮಾಡಿರುತ್ತಾನೆ? ಅವಿವೇಕಿಗಳಾದ ಸಾಮಾನ್ಯರು ಅಗ್ನಿಯಲ್ಲಿ ಹೋಮಾದಿಗಳನ್ನು ಮಾಡುವದನ್ನು ಬಿಟ್ಟಮಾತ್ರದಿಂದ ತಾವು ಗಾರ್ಹಸ್ಥ್ಯಕರ್ಮವನ್ನು ಬಿಟ್ಟ ಸಂನ್ಯಾಸಿಗಳಾದೆವು ಎಂದು ಭಾವಿಸಿಕೊಳ್ಳಬಹುದು. ಇದರಂತೆ ಗೃಹಸ್ಥಾಶ್ರಮಕ್ಕೆ ಸೇರಿದ ವ್ಯವಹಾರಗಳ ಸಂಕಲ್ಪಗಳನ್ನು ಕೈಬಿಟ್ಟಮಾತ್ರದಿಂದ ನಾವು ಯೋಗಸಾಧನಕ್ಕೆ ಅರ್ಹರಾದೆವು ಎಂದೂ ಅವರು ಭಾವಿಸಿಕೊಳ್ಳಬಹುದು. ಆದರೆ ಹಾಗೆ ನಿರಗ್ನಿಗಳಾದ ಮಾತ್ರದಿಂದ ಅಥವಾ ಲೌಕಿಕಕ್ರಿಯಾರಹಿತರಾದ ಮಾತ್ರದಿಂದ ಅವರು ಎಂದಿಗೂ ಸಂನ್ಯಾಸಿಗಳಾಗಲಾರರು, ಯೋಗಿಗಳೂ ಆಗಲಾರರು. ಜಾಣನಾದ ಸಾಧಕನು ತಾನು ಇನ್ನೂ ಗೃಹಸ್ಥನಾಗಿರುವಾಗಲೇ ಈ ಗೌಣಸಂನ್ಯಾಸವನ್ನೂ ಈ ಗೌಣಯೋಗವನ್ನೂ ದಕ್ಕಿಸಿಕೊಳ್ಳುವದಕ್ಕೆ ಪ್ರಯತ್ನಿಸುವದು ಸಾಧ್ಯ. "ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ" (ಗೀ. 18-46) ಎಂಬ ಗೀತಾವಚನದಲ್ಲಿ ಈ ಕರ್ಮಯೋಗದ ಮರ್ಮವನ್ನು ಅಡಗಿಸಿ ಭಗವಂತನು ಉಪದೇಶಿಸಿರುತ್ತಾನೆ. ನಾವು ಏನು ಮಾಡುತ್ತೇವೆ, ಯಾವ ಆಶ್ರಮದಲ್ಲಿರುತ್ತೇವೆ- ಎಂಬುದರಮೇಲಲ್ಲ, ಈ ಸಂನ್ಯಾಸಯೋಗಗಳ ಗುಟ್ಟು ಇರುವದು, ನಮ್ಮನಮ್ಮ ಕರ್ಮವನ್ನು ನಾವು ಹೇಗೆ ಮಾಡುತ್ತಿದ್ದೇವೆ? ಎಂಬುದನ್ನವಲಂಬಿಸುತ್ತದೆ, ಅದು. ಶಾಸ್ತ್ರದಲ್ಲಿ ಮುಖ್ಯವಾಗಿ ಯಜ್ಞ, ದಾನ, ತಪಸ್ಸು- ಎಂಬ ಮೂರು ಬಗೆಯ ಕರ್ಮಗಳನ್ನು ಹೇಳಿರುತ್ತದೆ. ಅದನ್ನು ಮಾಡಬೇಕೆ, ಬಿಡಬೇಕೆ?- ಎಂದು ದರ್ಶನಕಾರರು

ವಿಚಾರಮಾಡಿರುತ್ತಾರೆ. ಕರ್ಮವೆಲ್ಲ ದೋಷಯುಕ್ತವೇ; ಆದ್ದರಿಂದ ಅದನ್ನು ಬಿಟ್ಟುಬಿಡಬೇಕು ಎಂಬುದು ಕೆಲವರ ಮತ. ಯಜ್ಞಾದಿನಿತ್ಯಕರ್ಮಗಳನ್ನು ಮಾಡಲೇಬೇಕು ಎಂಬುದು ಮತ್ತೆ ಕೆಲವರ ಮತ– ಭಗವಂತನು ಈ ವಿಷಯದಲ್ಲಿ ಕೊಟ್ಟಿರುವ ಕಟ್ಟಕಡೆಯ ತೀರ್ಪು ಏನೆಂದರೆ, "ನ ತ್ಯಾಜ್ಯಂ ಕಾರ್ಯಮೇವ ತತ್" (ಅದನ್ನು ಬಿಡತಕ್ಕದ್ದಲ್ಲ ಮಾಡಲೇಬೇಕು). ಆದರೆ ಈ ಕರ್ಮಗಳನ್ನೇ ಮಾಡಬೇಕಾದ ರೀತಿಯಲ್ಲಿ ಮಾಡಿದವನು ಆತ್ಮಜ್ಞಾನಕ್ಕೆ ಯೋಗ್ಯನಾಗುತ್ತಾನೆ– ಎಂಬುದು ಭಗವಂತನ ಮತ. "ವಿವಿದಿಷನ್ತಿ ಯಜ್ಞೇನ ದಾನೇನ ತಪಸಾ" (ಬೃ. 4–4–22)– ಎಂದು ಶ್ರುತಿಯಲ್ಲಿ ಹೇಳಿರುವದನ್ನೇ ಇಲ್ಲಿ ಅವನು ಸ್ಪಷ್ಟಪಡಿಸಿರುತ್ತಾನೆ. ಈ ಕರ್ಮಗಳನ್ನೇ ಸಂಗವನ್ನೂ ಫಲವನ್ನೂ ಬಿಟ್ಟು ಮಾಡಬೇಕು– ಎಂಬುದು ನನ್ನ ನಿಶ್ಚಿತಮತವು ಎಂದು ಅಪ್ಪಣೆಕೊಡಿಸಿರುತ್ತಾನೆ.

ಭಗವಂತನ ಈ ಹಿತೋಕ್ತಿಯನ್ನು ನಾವು ಲಕ್ಷ್ಯದಲ್ಲಿಡಬೇಕು. ಸಾಂಖ್ಯಮಾರ್ಗಕ್ಕೆ ತಕ್ಕ ಉತ್ತಮಾಧಿಕಾರಿಗಳು ನಾವು ಎಂಬ ಹಮ್ಮನ್ನು ಬಿಟ್ಟುಬಿಡಬೇಕು. ಈಗ ಯಾರೊಬ್ಬರೂ ಸಾಂಖ್ಯಮಾರ್ಗಕ್ಕೆ ತಕ್ಕವರು ಇಲ್ಲವೇ ಇಲ್ಲವೆಂದೇನೂ ಅಭಿಪ್ರಾಯವಲ್ಲ. ಆದರೆ ಆ ಮಾರ್ಗಕ್ಕೆ ತಕ್ಕವರು ಯಾರೆಂದರೆ "ಪ್ರಜಹಾತಿ ಯದಾ ಕಾಮಾನ್ ಸರ್ವಾನ್" ಸರ್ವಕಾಮಗಳನ್ನೂ ಸಂಪೂರ್ಣವಾಗಿ ಬಿಟ್ಟುಬಿಟ್ಟು ಮನಸ್ಸಿನ ಏರುಪೇರುಗಳನ್ನು ಇಲ್ಲವಾಗಿಸಿಕೊಂಡು ಆತ್ಮನಲ್ಲಿಯೇ ತಮ್ಮ ಅಂತಃಕರಣವನ್ನು ನೆಲೆನಿಲ್ಲಿಸಿಕೊಂಡಿರುವ ಸ್ಥಿತಪ್ರಜ್ಞರು. ಆತ್ಮಸ್ಥಾನದಿಂದಲೇ ಎಲ್ಲವನ್ನೂ ನೋಡಬಲ್ಲಿರಾದರೆ, ನಿಮಗೆ ಎಲ್ಲವೂ ಆತ್ಮನೇ ಆಗಿಕಾಣುವದು; ಆಗ ನಿಮಗೆ ಕಾಮಗಳೆಂಬಿವು ಮತ್ತೆ ಬೇರೆ ಎಲ್ಲಿದ್ದಾವು? ಹಾಗಿದ್ದರೆ ನೀವು ಅವಶ್ಯವಾಗಿ **ಸಾಂಖ್ಯಮಾರ್ಗದವರು**. "ಇನ್ನೂ ನಾವು ಆ ಮಜಲನ್ನು ಮುಟ್ಟಿಲ್ಲ; ಇಂದ್ರಿಯಗಳೂ ಮನಸ್ಸೂ ನಮ್ಮನ್ನು ಹೊಯ್ದಾಡಿಸುತ್ತಿವೆ. ಚದರುತ್ತಿರುವ ಮನೋವೃತ್ತಿಗಳೂ ವಿಷಯಗಳ ಸೆಳೆತಕ್ಕೆ ಸಿಕ್ಕಿರುವ ಇಂದ್ರಿಯಗಳೂ ನಮ್ಮನ್ನು ಗೋಳುಗುಟ್ಟಿಸುತ್ತಿವೆ. ಆದರೂ ನಾವು ಮಿಕ್ಕದ್ದೆಲ್ಲವನ್ನೂ ಬಿಟ್ಟು ಪರಮಾತ್ಮಧ್ಯಾನವನ್ನೇ ಮಾಡುತ್ತಿರುವೆವು, ಪರಮಾತ್ಮಪ್ರಾಪ್ತಿಗಾಗಿಯೇ ಕಷ್ಟಪಡುವೆವು– ಎಂಬ ಅಂತರ್ಮುಖತ್ವದ ಒಲವು ನಿಮಗೆ ಇದ್ದರೆ ಅವಶ್ಯವಾಗಿ ನೀವು **ಧ್ಯಾನಯೋಗಕ್ಕೆ ಅರ್ಹರು**. ಆದರೆ ಹಾಗಿಲ್ಲದೆ ಇದ್ದರೆ ನೀವು ಕರ್ಮತ್ಯಾಗವನ್ನು ಮಾಡಬಾರದು. ಇನ್ನು ಕಾಮ್ಯಕರ್ಮಗಳು ನಮಗೆ ಬೇಡ. ಅವುಗಳಿಂದಾಗುವ ಫಲಗಳು ಅಲ್ಪಕಾಲವಿದ್ದು ಕ್ಷಯವಾಗತಕ್ಕವು; ನಮಗೆ ಭಗವಂತನೇ ಬೇಕು– ಎಂಬ ಮನಸ್ಸಿನ ಒಲವು ನಿಮಗೆ ಇದ್ದರೆ ನೀವು **ಕರ್ಮಯೋಗಕ್ಕೆ ಅರ್ಹರು**. ಆಗ ನೀವು ಏನುಮಾಡಬೇಕು? ಎಂದರೆ, ಪರಮಾತ್ಮನಿಂದಲೇ ನಮ್ಮ ಪ್ರವೃತ್ತಿಗಳೆಲ್ಲವೂ ಆಗುತ್ತಿವೆ; ಈ ಕ್ರಿಯೆಗಳು ಯಾವವೂ ನಮ್ಮವಲ್ಲ– ಎಂಬಿದನ್ನು ತಿಳಿದುಕೊಂಡು ನೀವು ಮಾಡುತ್ತಿರುವ ಕರ್ಮಗಳನ್ನೆಲ್ಲ ಆ ಭಗವಂತನಿಗೇ ಅರ್ಪಿಸಿಬಿಡಿರಿ.

4. ವೇದಾಂತ ಸಂದೇಶಗಳು : ಸಂಪುಟ 3 (ಅಧ್ಯಾತ್ಮ ಬೆಳಕು)

ಅ.ಪ್ರ. ಪತ್ರಿಕೆಯಲ್ಲಿ 1923ರಲ್ಲಿ ಪ್ರಾರಂಭವಾಗಿ 1974ರವರೆಗೂ ಕೆಲವೊಮ್ಮೆ ಪ್ರತಿ ತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲೂ ಶ್ರೀ ಶ್ರೀಗಳವರು ಬರೆದು ಪ್ರಕಟಿಸಿದ್ದ ಸುಮಾರು 210 ಲೇಖನಗಳ ಸಂಗ್ರಹ. ಅರ್ಧ ಪುಟದಿಂದ ಹಿಡಿದು ಮೂರು ನಾಲ್ಕು ಪುಟಗಳ ಲೇಖನಗಳನ್ನೊಳಗೊಂಡಿವೆ. ಸ್ಥೂಲವಾಗಿ (1) ಅಧ್ಯಾತ್ಮ ವಿದ್ಯೆ (2) ಅಧ್ಯಾತ್ಮದ ಮೊದಲ ಸೋಪಾನ (3) ಅಧ್ಯಾತ್ಮಸಾಧನಗಳು (4) ಅಧ್ಯಾತ್ಮ ಪ್ರಕಾಶ (5) ಅಧ್ಯಾತ್ಮ ಚಿಂತನೆ (6) ಅಧ್ಯಾತ್ಮಜ್ಞಾನ ಎಂಬ ಆರು ಅಧ್ಯಾಯಗಳಾಗಿ ವರ್ಗೀಕರಿಸಿ ಎಲ್ಲಾ ಲೇಖನಗಳನ್ನೂ ಅಳವಡಿಸಿದೆ.

ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯಗಳೇನು, ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ಮನಃಶಾಂತಿಗೆ ಸುಲಭೋಪಾಯ, ನಮ್ಮ ಜೀವನದ ಸ್ವರೂಪ ಮತ್ತು ಹೆಗ್ಗುರಿ ಇತ್ಯಾದಿ ಸಾಮಾನ್ಯ ಜನರ ಪ್ರಶ್ನೆಗಳಿಗೆಲ್ಲಾ ಸರಳವಾಗಿಯೂ, ಶಾಸ್ತ್ರಯುಕ್ತಿಗಳಿಗೆ ಒಪ್ಪಾಗಿಯೂ ಇರುವ ಉತ್ತರಗಳಿವೆ. ದಿನಕ್ಕೊಂದು ಲೇಖನದಂತೆ ಪಠಿಸಿದರೂ ವರ್ಷವಿಡೀ ಓದಬಹುದಾದ ಉತ್ತಮ ಗ್ರಂಥ. ವೇದಾಂತದ ಆರಂಭದಲ್ಲಿರುವ ಮನುಷ್ಯರಿಂದ ಹಿಡಿದು ಜಿಜ್ಞಾಸುಗಳಿಗೂ ಅನ್ವಯಿಸುವ ಅತ್ಯುಪಯುಕ್ತವಾದ ವಿಷಯಗಳಿವೆ.

(ಎರಡನೆಯ ಮುದ್ರಣ, 2012, ಪು. 356, ಬೆಲೆ. 70 ರೂ.)

5. ವೇದಾಂತ ಸಂದೇಶಗಳು : ಸಂಪುಟ 4 (ಅಧ್ಯಾತ್ಮದ ಔನ್ನತ್ಯದೆಡೆಗೆ)

ಅ.ಪ್ರ. ಪತ್ರಿಕೆಯ 19, 20, 22, 23 ಸಂಪುಟಗಳಲ್ಲಿ "ಈ ತಿಂಗಳ ಸಂದೇಶಗಳು" ಎಂಬ ಶೀರ್ಷಿಕೆಯಲಿ ಕ್ರಮ ಕ್ರಮವಾಗಿ ಪ್ರಕಟಿಸಿದ್ದ 48 ಲೇಖನಗಳ ಸಂಗ್ರಹ. (1) ಮಾಯೆಯಿಂದ ಮಾಯಾತೀತನೆಡೆಗೆ (2) ಸತ್ಯಜ್ಞಾನಾನಂದರ ದರ್ಶನದ ದಾರಿ (3) ಅದ್ಯಾತ್ಮ ಪ್ರಗತಿಯ ಮಾರ್ಗಗಳು (4) ಸಾಧನಗಳಿಂದ ಪರಮಾತ್ಮನ ಆನಂದ ಎಂಬ ಆಲ್ಕು ಅಧ್ಯಾಯಗಳಲ್ಲಿ ಅಳವಡಿಸಿದೆ. (ಎರಡನೆಯ ಮುದ್ರಣ, 2012, ಪು. 334, ಬೆಲೆ. 60 ರೂ.)

6. ವೇದಾಂತ ಸಂದೇಶಗಳು : ಸಂಪುಟ 5 (ಶ್ರೀ ಶ್ರೀಗಳವರ ಹಿತವಚನಗಳು)

ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 14ರಿಂದ ಸಂ. 44ರವರೆಗೆ (ಜನವರಿ 1943–ಫೆಬ್ರವರಿ 1975) **ಶಂಕರರ ಪತ್ರಗಳು** ಎಂಬ ಶೀರ್ಷಿಕೆಯಲ್ಲಿ ಕೆಲವೊಮ್ಮೆ ಒಂದು ಮತ್ತು 2–3 ಪುಟಗಳಂತೆ ಪ್ರಶ್ನೋತ್ತರ ರೂಪದಲ್ಲಿ ಶ್ರೀಶ್ರೀಗಳವರೇ ಬರೆದು ಪ್ರಕಟಿಸಿದ್ದ 337 ಲೇಖನಗಳ (583 ಪು.) ಸಂಗ್ರಹ. ಲೇಖನಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು : 1) ಕುಟುಂಬ ಭಾವನೆ, ಹರಿಜನ ಪ್ರೇಮ , ಧನದ ಉಪಯೋಗ ಇತ್ಯಾದಿ ಸಾಮಾನ್ಯ ವಿಷಯಗಳನ್ನೂ 2) ಪಾರಿವ್ರಾಜ್ಯ, ವೇದಾಂತದ ವಿಚಾರವನ್ನು ಚರ್ಚಿಸುವ ಕ್ರಮ, ಸಂನ್ಯಾಸಧರ್ಮ, ಆಧ್ಯಾತ್ಮಿಕ ಸಾಧನಗಳು, ನಿಜವಾದ ವಿದ್ಯೆ ಇತ್ಯಾದಿ ಶಾಸ್ತ್ರೀಯವಾದ ಲೇಖನಗಳನ್ನೂ ಒಳಗೊಂಡಿದೆ. ಪರಮಪುರುಷಾರ್ಥಕ್ಕೆ ಸಾಧನವಾದ ವಿಚಾರವನ್ನು ತಿಳಿಸುವ ಲೇಖನಗಳಾದ್ದರಿಂದ ಎಲ್ಲರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2012, ಪು. 583, ಬೆಲೆ. 120 ರೂ.)

**ಇತರ ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.**

# ಸಂಸ್ಥಾಪಕರ ಸ್ಮರಣೆ

ಕರ್ನಾಟಕ ರಾಜ್ಯದ ಅಭಿನವ ಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳು ಶಾಂಕರವೇದಾಂತ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯ ಶ್ರೀ ಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5-1-1880ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ.ಸುಬ್ಬರಾವ್ ಎಂದಿತ್ತು. 1948ರವರೆಗೆ (68ನೆಯ ವಯಸ್ಸಿನವರೆಗೆ) ಅವರು ಸುಬ್ರಾಯರೆಂದೇ ಪ್ರಖ್ಯಾತರಾಗಿದ್ದರು. 10-6-1948ರಂದು ಸಂನ್ಯಾಸವನ್ನು ಸ್ವೀಕರಿಸಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಎಂಬ ಅಭಿದಾನದಿಂದ ವಿರಾಜಮಾನರಾದರು.

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತ ಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು ''ಪುರುಷಸರಸ್ವತಿ'' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲೀಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮ ಪ್ರಕಾಶ ಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880 -1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.